
ಸಮಗ್ರ ದಾಸ ಸಾಹಿತ್ಯ

ಸಂಪುಟ : ೮



ಶ್ರೀ ಪ್ರಸನ್ನ ವೆಂಕಟದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ

ಸಂಪುಟ : ೮

ಶ್ರೀ ಪ್ರಸನ್ನ ವೆಂಕಟದಾಸರ ಕೀರ್ತನೆಗಳು

ಸಂಪಾದಕರು

ಟಿ.ಕೆ. ಇಂದುಬಾಯಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA SAMPUTA - 8 :
Sri Prasanna Venkatadasara Keerthanegalu, Edited by T.K. Indubai and Published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560002.

ಪುಟಗಳು : 77 + ೬೦೨

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಪಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮಾವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ.ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ–ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೬೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ 'ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು–ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀ ಪ್ರಸನ್ನವೆಂಕಟದಾಸರ ಜೀವನ ವಿಚಾರ

ಕರ್ನಾಟಕದ ದಾಸ ಪರಂಪರೆಯಲ್ಲಿ "ದಾಸ ಚತುಷ್ಟಯರ ನಂತರ ಸಮಾಜದಲ್ಲಿ ಸತ್ಪುರುಷರೆಂಬ ಖ್ಯಾತಿ ಪಡೆದವರೂ ಕನ್ನಡ ವಾಙ್ಮಯ ಸೇವೆ ಮಾಡಿದವರೂ ಯಾರಾದರಿದ್ದರೆ ಆ ಪಂಕ್ತಿಯಲ್ಲಿ ಅಗ್ರಪೂಜೆಗೆ ಅರ್ಹರು ಪ್ರಸನ್ನವೆಂಕಟದಾಸರು"[೧] ಎಂದು ಕೀರ್ತಿತರಾದ ಪ್ರಸನ್ನವೆಂಕಟದಾಸರು ವಿಜಯದಾಸರ ಸಮಕಾಲೀನರು. ಗೋಪಾಲದಾಸರು ಹಾಗೂ ಹೆಳವನಕಟ್ಟೆ ಗಿರಿಯಮ್ಮ ಕೂಡ ಇವರ ಸಮಕಾಲೀನರಾಗಿದ್ದರೆಂದು ತಿಳಿದುಬರುತ್ತದೆ. ಪ್ರಸ್ತುತ ಸಿಕ್ಕಿರುವ ದಾಸರ ಕೃತಿಗಳಿಂದ ಇವರ ಜೀವನವಿಚಾರಗಳೇನೂ ತಿಳಿದುಬರುವುದಿಲ್ಲ. ಮೊದಲಬಾರಿಗೆ ಇವರ ಜೀವನ, ಕೃತಿಗಳ ಬಗ್ಗೆ ಸಂಶೋಧನೆ ನಡೆಸಿದ ಡಾ.ಎ.ಟಿ.ಪಾಟೀಲರು ೧೯೫೬ರಲ್ಲಿ ಪ್ರಕಟಿಸಿರುವ "ಶ್ರೀ ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು" ಎಂಬ ಗ್ರಂಥ, ದಾಸರ ಜೀವನ ಹಾಗೂ ಕೃತಿಗಳನ್ನು ಕುರಿತು ಮಾಹಿತಿ ಕೊಡುವ ಪ್ರಮುಖ ಕೃತಿಯಾಗಿದೆ. ಬೇಲೂರು ಕೇಶವದಾಸರು ಇವರ ಬಗ್ಗೆ, 'ಪ್ರಸನ್ನವೆಂಕಟದಾಸರು ಬಿಡಿಹಾಡುಗಳನ್ನೂ ಭಾಗವತವನ್ನೂ ಬರೆದಂತೆ ಸುವ್ವಾಲೆ ಜೋಗುಳಗಳನ್ನೂ ಬರೆದಿದ್ದಾರೆ. ಅದರಲ್ಲಿ ಹಳ್ಳಿಗರ ಜೀವನವನ್ನು ತಿಳಿಸಿದ್ದಾರೆ. ತಮ್ಮ ಬಾಲ್ಯದ ಅನುಭವ, ಅತ್ತಿಗೆಯ ಅಧಿಕಾರ, ತಾವು ತಿರುಪತಿಗೆ ಹೋದ ಕಥೆ ಇವೆಲ್ಲವನ್ನು ಮನ ಮರುಗುವ ರೀತಿಯಲ್ಲಿ ಹಾಡಿದ್ದಾರೆ'[೨].–ಎಂದು ಹೇಳಿದ್ದಾರೆ. ಆದರೆ ಇದುವರೆಗೂ ಪಾಟೀಲರ ಕೃತಿಯನ್ನು ಬಿಟ್ಟರೆ ದಾಸರ ವ್ಯಕ್ತಿಗತ

---

೧. ಬೇಲೂರು ಕೇಶವದಾಸರು, ಕರ್ನಾಟಕ ಭಕ್ತವಿಜಯ, ಭಾಗ–೨, ಪು. ೨೬೫

೨. ಅದೇ, ಪು. ೨೮೪

ಬದುಕಿನ ವಿವರಗಳನ್ನು ತಿಳಿಸಬಲ್ಲ ಯಾವ ಕೃತಿಯೂ ನಮಗೆ ಸಿಕ್ಕಿಲ್ಲ. ಪಾಟೀಲರ ಕೃತಿ ಹಾಗೂ ದಾಸರನ್ನು ಕುರಿತು ಪ್ರಕಟವಾಗಿರುವ ಹಲವಾರು ಲೇಖನಗಳು ಹಾಗೂ ಬಾಗಲಕೋಟೆಯ ಭಾಗದಲ್ಲಿ ಪ್ರಚಲಿತವಿರುವ ಕೆಲವು ಸಂಗತಿಗಳ ಆಧಾರದಿಂದ ಪ್ರಸನ್ನವೆಂಕಟದಾಸರ ಜೀವನದ ಕೆಲವು ವಿವರಗಳನ್ನು ತಿಳಿಯಬಹುದಾಗಿದೆ.

ಸುಮಾರು ೧೭ನೆಯ ಶತಮಾನದ ಮಧ್ಯಭಾಗದಲ್ಲಿ ಬಾಗಲಕೋಟೆಯಲ್ಲಿ ನೆಲೆಸಿ, ವೈದಿಕ ವೃತ್ತಿಯಿಂದ ಜೀವನ ನಡೆಸುತ್ತಿದ್ದ ಕಾಶ್ಯಪ ಗೋತ್ರಜರಾಗಿದ್ದ ಕಾಖಂಡಕಿ ನರಸಪ್ಪಯ್ಯನವರು ಇವರ ತಂದೆ, ತಾಯಿ ಲಕ್ಷ್ಮಿಬಾಯಿ. ದಾಸರ ಪೂರ್ವಜರು ಕಾಖಂಡಕಿಯವರಿದ್ದಿರಬೇಕೆಂದು ಅವರ ಮನೆತನದ ಹೆಸರಿನಿಂದ ಊಹಿಸಬಹುದಾಗಿದೆ. ನರಸಪ್ಪಯ್ಯನವರಿಗೆ ಇಬ್ಬರು ಗಂಡುಮಕ್ಕಳಿದ್ದರು. ಅವರಲ್ಲಿ ಕಿರಿಯವನೇ ವೆಂಕಟೇಶ. ಈತನೇ ಮುಂದೆ ಪ್ರಸನ್ನವೆಂಕಟದಾಸನೆಂದು ಪ್ರಸಿದ್ಧನಾದವನು. ಈತನ ಜನನ ಕಾಲ ಖಚಿತವಾಗಿ ತಿಳಿದು ಬಂದಿಲ್ಲ. ಮುಂದೆ ಪ್ರಸನ್ನವೆಂಕಟದಾಸರೆಂದು ಪ್ರಸಿದ್ಧರಾದ ಮೇಲೆ ದೊರೆತ ಕೆಲವು ದಾನಪತ್ರ, ವರ್ಷಾಶನಗಳ ಆಧಾರದಿಂದ ಡಾ. ಎ.ಟಿ.ಪಾಟೀಲರು, ದಾಸರ ಜನನ ಕಾಲ ಕ್ರಿ.ಶ.ಸು. ೧೬೮೦ ಇರಬಹುದೆಂದು ಊಹಿಸಿದ್ದಾರೆ. ಪ್ರಸ್ತುತ ಈ ಅಭಿಪ್ರಾಯವನ್ನೇ ಉಳಿಸಿಕೊಳ್ಳಬಹುದಾಗಿದೆ.

ಹೆತ್ತವರನ್ನು ಚಿಕ್ಕಂದಿನಲ್ಲೇ ಕಳೆದುಕೊಂಡ ಬಾಲಕ ವೆಂಕಪ್ಪಯ್ಯ ಅಣ್ಣನ ಆಶ್ರಯದಲ್ಲಿ ಬೆಳೆಯುವಂತಾಯಿತು. ಅಣ್ಣನಿಗೆ ವಿವಾಹವಾಗಿತ್ತು. ಅಣ್ಣ ಪುರಾಣ ವಾಚನ ಮಾಡುತ್ತ ಸುತ್ತಿನ ಹಳ್ಳಿಗಳಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದ. ಅತ್ತಿಗೆಗೆ ಈ ಮೈದುನನ ಬಗ್ಗೆ ಅಂಥ ಪ್ರೀತ್ಯಾದರಗಳೇನೂ ಇರಲಿಲ್ಲ. ಹೆತ್ತವರಿಲ್ಲದೆ ತಮ್ಮ ಆಶ್ರಯದಲ್ಲಿದ್ದ ವೆಂಕಪ್ಪಯ್ಯನನ್ನು ಅತ್ತಿಗೆ ಜೀತದಾಳಿನಂತೆ ಕಾಣುತ್ತಿದ್ದಳು. ಈ ಸ್ಥಿತಿಯಲ್ಲಿ ಆತನಿಗೆ ವಿದ್ಯಾಭ್ಯಾಸಕ್ಕೂ ಅವಕಾಶವಿರಲಿಲ್ಲ. ಮನೆಗೆಲಸಗಳನ್ನು ಮಾಡುವುದರಲ್ಲಿ ದನಕರುಗಳನ್ನು ನೋಡಿಕೊಳ್ಳುವುದರಲ್ಲಿ ಕಾಲ ಉರುಳುತ್ತಿತ್ತು. ಆದರೆ ಸದ್ವಂಶಜನೂ ಸಾತ್ವಿಕನೂ ಆಗಿದ್ದ ವೆಂಕಪ್ಪಯ್ಯ ಅವಕಾಶ ಸಿಕ್ಕಾಗಲೆಲ್ಲ

ಅಣ್ಣ ಓದುತ್ತಿದ್ದ ಪುರಾಣಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದ. ವೆಂಕಟೇಶ ಮಹಾತ್ಮ್ಯವನ್ನು ಮೇಲಿಂದ ಮೇಲೆ ಕೇಳುತ್ತಿದ್ದ ಆತನಿಗೆ ಮನೆದೇವರಾದ ಶ್ರೀನಿವಾಸ ದೇವರಲ್ಲಿ ಭಕ್ತಿ ಅಂಕುರಿಸಿ ಬೆಳೆಯಲಾರಂಭಿಸಿತು. ಅತ್ತಿಗೆಯ ಅನಾದರಣೆ ಹೆಚ್ಚಾದಾಗ ಅವನಿಗೆ ಅದೇ ಊರುಗೋಲಾಗಿ ಮುನ್ನಡೆಸಿತು.

ಬವಣೆಯ ಬದುಕಿನಲ್ಲೇ ಸಾಗಿದ್ದ ವೆಂಕಪ್ಪಯ್ಯನಿಗೆ, ಬೇಸಿಗೆಯ ಒಂದು ದಿನ ಬಾಯಾರಿ ಕುಡಿಯಲು ಮಜ್ಜಿಗೆಯನ್ನು ಕೇಳಿದಾಗ, ಅತ್ತಿಗೆ ಆಡಿದ ಕಠೋರ ನುಡಿಗಳು ಅಪಾರವಾದ ಆಘಾತವನ್ನೇ ಉಂಟುಮಾಡಿದವು. ಮತ್ತೆ ಅವರ ಆಶ್ರಯದಲ್ಲಿ ಮುಂದುವರೆಯುವುದು ಬೇಡವೆನ್ನಿಸಿ ತಿರುಪತಿಯತ್ತ ಪ್ರಯಾಣಿಸುತ್ತಾನೆ. ನಡೆದುಕೊಂಡೇ ತಿರುಪತಿಯನ್ನು ತಲುಪಿ ತನ್ನ ಮನೆದೇವರೂ ಮೆಚ್ಚಿನ ದೇವರೂ ಆದ ಶ್ರೀನಿವಾಸನನ್ನು ದರ್ಶಿಸುತ್ತಾನೆ. ಅದೇ ಸಮಯದಲ್ಲಿ ತಿರುಪತಿಗೆ ಬಂದಿದ್ದ ಹರಿದಾಸರ ಒಂದು ತಂಡ ಅವನನ್ನು ಆಕರ್ಷಿಸುತ್ತದೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೈಯಲ್ಲಿ ತಂಬೂರಿ ಚಿಟಿಕೆಗಳನ್ನು ಹಿಡಿದು ಹರಿಸಂಕೀರ್ತನೆಗಳನ್ನು ಹಾಡುತ್ತ , ಕುಣಿಯುತ್ತಿದ್ದ ದಾಸರನ್ನು ಕಂಡು ಅವರ ಬದುಕೇ ಸಾರ್ಥಕ ಬದುಕು, ತಾನೂ ಅವರಂತೆಯೇ ಹರಿ ಸಂಕೀರ್ತನೆಯಲ್ಲಿಯೇ ಬದುಕು ಸವೆಸಬೇಕು ಎನ್ನಿಸಿತು.

ಅಂತೆಯೇ ಚಿಂತಿಸುತ್ತ ಶ್ರೀನಿವಾಸನನ್ನು ಧ್ಯಾನಿಸುತ್ತ ಕುಳಿತಿದ್ದಾಗ, ವೆಂಕಪ್ಪಯ್ಯನವರಿಗೆ ಆ ದೇವರೇ ಬಂದು ತಮ್ಮ ನಾಲಗೆಯ ಮೇಲೆ "ಶ್ರೀನಿವಾಸ" ಎಂದು ಬರೆದಂತೆ ಭಾಸವಾಯಿತು. ಇದು ತಮ್ಮ ನೆಚ್ಚಿನ ದೈವದ ಅನುಗ್ರಹ ಎಂದು ಭಾವಿಸಿದ ವೆಂಕಪ್ಪಯ್ಯ ಅಂದಿನಿಂದ ಹರಿದಾಸರಾದರು. ಇದುವರೆಗೆ ಸುಪ್ತವಾಗಿದ್ದ ಅವರ ಭಕ್ತ, ಕವಿಚೇತನ ಒಟ್ಟಾಗಿ ಕೀರ್ತನೆಗಳಲ್ಲಿ ಅಭಿವ್ಯಕ್ತವಾದವು. ಸಾಕ್ಷಾತ್ ಶ್ರೀನಿವಾಸ ದೇವರೇ ಬಂದು ಅನುಗ್ರಹಿಸಿದಂತೆ ಭಾವಿಸಿ ವೆಂಕಪ್ಪಯ್ಯ ತಮ್ಮ ಕೀರ್ತನೆಗಳಿಗೆ "ಪ್ರಸನ್ನವೆಂಕಟ" ಎಂಬ ಅಂಕಿತವನ್ನೇ ಇಟ್ಟುಕೊಂಡು ರಚಿಸಲಾರಂಭಿಸಿದರು.

ಹೀಗೆ ತಿರುಪತಿಯಲ್ಲೇ ಕೆಲವು ಕಾಲ ಇದ್ದ ದಾಸರಿಗೆ ವಿದ್ಯಾಭ್ಯಾಸ ಮಾಡಬೇಕೆನ್ನಿಸಿತು. ಯೋಗ್ಯ ಗುರುಗಳನ್ನು ಹುಡುಕುತ್ತ ಹೊರಟ ಇವರಿಗೆ ಅವರ ಪ್ರಾಂತ್ಯದಲ್ಲೇ ಪ್ರಸಿದ್ಧ ವಿದ್ವಾಂಸರಾಗಿದ್ದ ಮುದ್ಗಲ ಜನಾರ್ದನಾಚಾರ್ಯರು ಗುರುಗಳಾಗಿ ದೊರಕುತ್ತಾರೆ. ಐದಾರು ವರ್ಷಗಳ ಕಾಲ ಅವರ ಶಿಷ್ಯರಾಗಿದ್ದುಕೊಂಡು ದಾಸರು ಸಂಸ್ಕೃತವನ್ನು ಕಲಿಯುತ್ತಾರೆ. ಭಾರತ, ರಾಮಾಯಣ, ಭಾಗವತ, ದ್ವೈತ ಸಿದ್ಧಾಂತಗಳಲ್ಲಿ ಪಂಡಿತರಾಗಿ ಮರಳಿ ಬಾಗಲಕೋಟೆಗೆ ಬರುತ್ತಾರೆ. ಗುರುಗಳಾದ ಜನಾರ್ದನಾಚಾರ್ಯರ ಬಗ್ಗೆ ದಾಸರಿಗೆ ಅಪಾರವಾದ ಭಕ್ತಿ, ಗೌರವವಿದ್ದುದಕ್ಕೆ ಅವರನ್ನು ಕುರಿತ ಕೀರ್ತನೆಗಳೇ ಸಾಕ್ಷಿಯಾಗಿವೆ.

ಆಚಾರ್ಯರ ಬಳಿ ಪಡೆದ ಶಿಕ್ಷಣ, ಸತತಾಭ್ಯಾಸಗಳಿಂದಾಗಿ ದಾಸರ ಪ್ರತಿಭೆ ಪುಟಕ್ಕಿಟ್ಟ ಚಿನ್ನದಂತಾಯ್ತು. ಇಷ್ಟದೈವದ ಅನುಗ್ರಹದೊಡನೆ ಪಾಂಡಿತ್ಯವನ್ನು ಗಳಿಸಿ ತಮ್ಮೂರಿಗೆ ಮರಳಿ ವಾಸಿಸಲಾರಂಭಿಸಿದ ದಾಸರು ದ್ವೈತಮತದ ನಿಷ್ಠಾವಂತ ಅನುಯಾಯಿಯಾಗಿ ಹರಿಭಕ್ತಿ ಪ್ರಸಾರ ಕಾರ್ಯವನ್ನು ಕೈಗೊಂಡರು. ಅನೇಕ ಕೀರ್ತನೆ, ಸುಳಾದಿ, ಉಗಾಭೋಗಗಳನ್ನೂ, ಕೆಲವು ದೀರ್ಘಕೃತಿಗಳನ್ನೂ ರಚಿಸಿ, ತಮ್ಮ ಹಿಂದಿನ ದಾಸರು ಹಾಕಿಕೊಟ್ಟಿದ್ದ ಮೇಲ್ಪಂಕ್ತಿಯನ್ನೇ ಅನುಸರಿಸಿ ಬಾಳಿ ಪ್ರಸಿದ್ಧರಾದರು. ಅವರ ಪೀಳಿಗೆಯ ಮೇಲಿಂದ ಅವರಿಗೆ ವೆಂಕಟಕೃಷ್ಣಾಚಾರ್ಯ ಎಂಬ ಮಗ ಇದ್ದುದಾಗಿ ತಿಳಿಯುತ್ತದಾದರೂ, ಅವರು ಯಾವಾಗ ವಿವಾಹ ವಾದರು? ಅವರ ಪತ್ನಿ ಯಾರು ? ಇತ್ಯಾದಿ ವಿವರಗಳೇನೂ ತಿಳಿಯುವುದಿಲ್ಲ.

ಅವರು ಮರಳಿ ಬಂದು ಬಾಗಲಕೋಟೆಯಲ್ಲಿರಲು ಆರಂಭಿಸಿದ ನಂತರದ ಅಲ್ಪ ಅವಧಿಯಲ್ಲಿಯೇ ಅನೇಕರು ದಾಸರ ಪ್ರಭಾವೀ ವ್ಯಕ್ತಿತ್ವದ ಸೆಳೆತಕ್ಕೆ ಸಿಕ್ಕು ಅವರ ಶಿಷ್ಯರಾದರು. ಬಾಗಲಕೋಟೆಯ ಸುತ್ತುಮುತ್ತೆಲ್ಲ ಅವರ ಪ್ರಸಿದ್ಧಿ ಹಬ್ಬಿ ಅನೇಕ ಸರದಾರರು, ಸಾಮಂತರು, ಸುಬೇದಾರರು ದಾಸರಿಗೆ ಹೊಲ ಮನೆಗಳನ್ನೂ, ವರ್ಷಾಶನಗಳನ್ನೂ ನೀಡಿ ಗೌರವಿಸಿದರು. ಇವುಗಳ ವಿವರಗಳನ್ನು ಡಾ.ಎ.ಟಿ. ಪಾಟೀಲರು ತಮ್ಮ ಕೃತಿಯಲ್ಲಿ ನೀಡಿದ್ದಾರೆ (ಪು. ೪೨-೪೫).

ಇಮ್ಮಡಿ ಹಣಿಮಿನಾಯಕ ಎನ್ನುವವನು ಕ್ರಿ.ಶ.೧೭೨೩ ರಲ್ಲಿ ತುರ್ಚಿಗೇರಿಯಲ್ಲಿ ಪ್ರಸನ್ನವೆಂಕಟದಾಸರಿಗೆ ಎರಡು ಮಾರು ಹೊಲವನ್ನು ದತ್ತಿ ಕೊಟ್ಟಿದ್ದನು. ಇದೇ ಕಾಲದಲ್ಲಿ ನಾನಾಮೇಲಗಿರಿದೇಸಾಯಿ ಮತ್ತು ಸರದೇಸಾಯಿ ಬಾಗಲಕೋಟೆ ಎನ್ನುವವರು ಮುಚಗಂಡಿ ಎಂಬ ಊರಿನ ಮುಂದಿನ ನಾಲ್ಕು ಗಿದ್ನ ಭೂಮಿ ಕೊಟ್ಟು ಅದಕ್ಕೆ ಸರಕಾರಿ ಜೂಡಿಪಟ್ಟಿ ತೆಗೆದುಕೊಳ್ಳಬಾರದೆಂದು ಆಜ್ಞೆ ಮಾಡಿದ್ದರು. ಬಾದಾಮಿಯ ಕಿಲ್ಲೇದಾರನಾಗಿದ್ದ ಖಂಡೋಪಂತ ಖೋಪರ್ಡೆ ಎನ್ನುವಾತ ದಾಸರಿಗೆ ಬಾದಾಮಿಯಲ್ಲಿ ಎರಡು ಮನೆಗಳನ್ನು ದಾನವಾಗಿ ಕೊಟ್ಟಿದ್ದನು. ದಾಸರಿಗೆ ಈ ಮನೆಗಳು ಕ್ರಿ.ಶ. ೧೭೩೦–೧೭೪೦ರ ನಡುವೆ ದೊರತಿವೆ ಎಂದು ಗುರುತಿಸಲಾಗಿದೆ. ಇವುಗಳಲ್ಲದೆ ಅವರಿಗೆ ಬಾಗಲಕೋಟೆ, ಹುಬ್ಬಳ್ಳಿ, ತಡಸ, ಮಿಶ್ರೀಕೋಟೆ, ಕಲಘಟಕಿ ಮೊದಲಾದ ಊರುಗಳಿಂದ ದೊರೆತ ವರ್ಷಾಶನಗಳ ಪಟ್ಟಿಯನ್ನೂ ಪಾಟೀಲರು ಕೊಟ್ಟಿದ್ದಾರೆ. ಇವುಗಳ ಜೊತೆಗೆ ಕೆಲವು ಗ್ರಾಮ ಸಾದಿಲವಾರ ಮತ್ತು ಕಿರುಕುಳಗಳೂ (ಚಿಲ್ಲರೆ ತೆರಿಗೆ) ದಾಸರಿಗೆ ಸಿಕ್ಕಿದ್ದವು . ಇವುಗಳಿಂದ ಅವರ ದೈನಂದಿನ ಜೀವನ ನಿರಾತಂಕದಿಂದ ಸಾಗುವಂತಾಯಿತು.

ಪ್ರಸನ್ನವೆಂಕಟದಾಸರು ಪುರಂದರ ದಾಸರಂತೆ ಹೆಚ್ಚಿನ ದೇಶಸಂಚಾರ ಮಾಡಲಿಲ್ಲವೆಂಬ ಅಭಿಪ್ರಾಯವಿದೆ. ಅವರಿಗೆ ದೊರೆತ ದಾನ, ವರ್ಷಾಶನಗಳಿಂದ ಅವರು ಶಿರೂರು, ತಡಸ, ವಿಜಾಪುರ, ಕಲಘಟಕಿ, ಹುಬ್ಬಳ್ಳಿ, ಮೊದಲಾದ ಸ್ಥಳಗಳಿಗೆ ಹೋಗಿದ್ದರೆಂದು ತಿಳಿಯುತ್ತದೆ. ಜೊತೆಗೆ ಅವರ ಕೆಲವು ಕೀರ್ತನೆಗಳ ಆಧಾರದಿಂದ ಸೋದೆ, ಹಂಪೆ, ಮಂತ್ರಾಲಯ, ಉಡುಪಿ ಮೊದಲಾದ ಕ್ಷೇತ್ರಗಳಿಗೂ ಹೋಗಿದ್ದರೆಂದು ಊಹಿಸಬಹುದಾಗಿದೆ. ತಿರುಪತಿಗೆ ಮಾತ್ರ ಪ್ರತಿವರ್ಷವೂ ಹೋಗುತ್ತಿದ್ದರಂತೆ. ಹೀಗಾಗಿ ಇವರ ಕೃತಿಗಳು ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾದಷ್ಟು ಉಳಿದೆಡೆಗಳಲ್ಲಿ ಆಗಲಿಲ್ಲವೆನ್ನಿಸುತ್ತದೆ. ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಸಂಪ್ರದಾಯಸ್ಥ ವೈದಿಕ ಕುಟುಂಬಗಳ ಸ್ತ್ರೀಯರು ಇವರ ಕೃತಿಗಳನ್ನು ಇಂದಿಗೂ ಶ್ರದ್ಧಾಭಕ್ತಿಗಳಿಂದ ಹಾಡುತ್ತಾರೆ.

ಸಾಮಾನ್ಯವಾಗಿ ಪ್ರಸಿದ್ಧ ಪುರುಷರೆಲ್ಲರ ಬಗ್ಗೆ ಕೇಳಿಬರುವ ಪವಾಡ ಸದೃಶ ಘಟನೆಗಳು, ಇವರ ಬಗೆಗೂ ಕೇಳಿ ಬರುತ್ತವೆ. ಅಂಥ ಕೆಲವು ಘಟನೆಗಳು ಹೀಗಿವೆ:

ಪ್ರಸನ್ನವೆಂಕಟರು ಬಾಗಲಕೋಟೆಯ ತಮ್ಮ ಮನೆಯಲ್ಲಿದ್ದಾಗ ಒಂದು ದಿನ ಒಬ್ಬ ಭಕ್ತರು ಬಂದು ದಾಸರನ್ನು ಅವರ ಮನೆಗೆ ಊಟಕ್ಕೆ ಆಮಂತ್ರಿಸಿದರು. ದಾಸರು ಒಪ್ಪಿಕೊಂಡರು. ಸ್ವಲ್ಪ ಹೊತ್ತಿನ ನಂತರ ಮತ್ತೊಬ್ಬರು ಬಂದು ಅವರ ಮನೆಗೆ ಊಟಕ್ಕೆ ಬರುವಂತೆ ಕೇಳಿಕೊಂಡರು. ದೇವರ ಧ್ಯಾನದಲ್ಲೇ ಇದ್ದ ದಾಸರು ಮೊದಲೇ ಒಪ್ಪಿಕೊಂಡದ್ದನ್ನು ಮರೆತು ಇವರ ಕೇಳಿಕೆಗೂ ಒಪ್ಪಿಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಎಚ್ಚರಗೊಂಡಾಗ ತಾವು ಮಾಡಿದ್ದರ ಅರಿವಾಯಿತು. ಆದರೆ ಕೊಟ್ಟ ಮಾತಿಗೆ ಇಲ್ಲವೆನ್ನಲಾಗದೆ ಮರುದಿನ ಇಬ್ಬರ ಮನೆಗೂ ಬೇರೆ ಬೇರೆ ರೂಪಗಳಲ್ಲಿ ಹೋಗಿ ಪ್ರಸಾದ ಸ್ವೀಕರಿಸಿದರು. ಅದೇ ದಿನ ಸಂಜೆ ಆ ಇಬ್ಬರು ಬ್ರಾಹ್ಮಣರ ಮಾತುಕತೆಯಲ್ಲಿ ದಾಸರು ಇಬ್ಬರ ಮನೆಗೂ ಬಂದು ಹೋದ ವಿಚಾರ ಸತ್ಯವೆಂದು ಅರಿತರು. ಆ ಬಳಿಕ ದಾಸರು ಜನರಿಗೆ ತಮ್ಮ ಸ್ವರೂಪ ತಿಳಿಯಿತು. ಇನ್ನು ಇಲ್ಲಿರುವುದು ಸರಿಯಲ್ಲ ಎಂದು ಬಾದಾಮಿಗೆ ಹೋಗಿ ನೆಲೆಸಿದರು.

ಇನ್ನೊಂದು ಘಟನೆ ಹೀಗಿದೆ – ಪ್ರಸನ್ನವೆಂಕಟರು ಊರಿಂದೂರಿಗೆ ಹೋಗುವಾಗ ಕಾಡಿನ ಮಧ್ಯದಲ್ಲಿ ಹುಲಿ ಎದುರಾದರೆ ಅದರ ಮೈ ಚಪ್ಪರಿಸಿ ಅದರ ಮೇಲೆ ದೇವರ ಕಂಟಲಿಯನ್ನು ಹೇರಿ ತಮ್ಮೊಡನೆ ಊರು ಸಿಕ್ಕುವವರೆಗೂ ಕರೆದೊಯ್ಯುತ್ತಿದ್ದರಂತೆ. ಊರು ಸಿಕ್ಕಿದ ಕೂಡಲೆ ಗೋವುಗಳನ್ನು ಬಾಧಿಸಬೇಡ ವೆಂದು ಹೇಳಿ ಅದರ ಹಣೆಗೆ ಅಂಗಾರ ಹಚ್ಚಿ ಹಿಂದಕ್ಕೆ ಕಳಿಸುತ್ತಿದ್ದರಂತೆ. ದಾಸರು ಅಂಗಾರ ಹಚ್ಚಿದ ಹುಲಿಗಳು ಹಸುಗಳ ತಂಟೆಗೆ ಹೋಗುತ್ತಿರಲಿಲ್ಲವಂತೆ, ಈ ಕಾರಣದಿಂದ ಹತ್ತಿರದ ಗ್ರಾಮಗಳ ಜನರು ಅವರನ್ನು ತಮ್ಮ ತಮ್ಮ ಗ್ರಾಮಗಳಿಗೆ ಕರೆದುಕೊಂಡು ಹೋಗುತ್ತಿದ್ದರಂತೆ. ಹೀಗೆ ಹುಲಿಗಳಿಗೆ ಅಂಗಾರ ಹಚ್ಚುತ್ತಿದ್ದ ದಾಸರಿಗೆ ಜನ, 'ಅಂಗಾರದ ಆಚಾರ್ಯರು', ಎಂದು ಹೆಸರಿಟ್ಟಿದ್ದರು.

ದಾಸರ ನುಡಿಗೆ ಪ್ರಕೃತಿ ಕೂಡ ಬಾಗುತ್ತಿತ್ತು ಎಂಬುದಕ್ಕೆ ಈ ಘಟನೆ ನಿದರ್ಶನವಾಗಿದೆ– ಇಮ್ಮಡಿ ಹಣಿಮಿನಾಯಕ ದಾಸರಿಗೆ ಕೊಟ್ಟಿದ್ದ ಹೊಲವನ್ನು ಒಬ್ಬ ರೈತ ಸಾಗುಮಾಡುತ್ತಿದ್ದ. ಒಮ್ಮೆ ಆ ರೈತ ಬೆಳೆಯನ್ನು ಪೂರ್ಣವಾಗಿ ತಾನೇ ಇಟ್ಟುಕೊಳ್ಳಲು ಬಯಸಿ, ಈ ಬಾರಿ ಹೊಲದಲ್ಲಿ ಬೆಳೆಯೇ ಆಗಲಿಲ್ಲ ಎಂದು

ಸುಳ್ಳು ಹೇಳಿದನು. ಅದಕ್ಕೆ ದಾಸರು 'ಬೆಳೆ ಆಗಲಿಲ್ಲವೆ ? ಹಾಗಿದ್ದರೆ ಹಾಗೇ ಆಗಲಿ ಹೋಗು' ಎಂದರು. ಮುಂದೆ ಮೂರು ನಾಲ್ಕು ವರ್ಷ ಅದರ ಅಕ್ಕಪಕ್ಕದ ಹೊಲಗಳಲ್ಲಿ ಬೆಳೆ ಚೆನ್ನಾಗಿ ಬಂದರೂ ದಾಸರ ಹೊಲದಲ್ಲಿ ಏನೂ ಬೆಳೆಯಲಿಲ್ಲವಂತೆ. ಸಾಕಷ್ಟು ಕಷ್ಟ ನಷ್ಟ ಅನುಭವಿಸಿದ ರೈತ ದಾಸರಿಗೆ ಶರಣಾಗಿ ಶುಭನುಡಿಯಬೇಕೆಂದು ಬೇಡಿದಾಗ, ದಾಸರು ಆತನ ತಪ್ಪನ್ನು ಕ್ಷಮಿಸಿ ಹರಸಿದರು. ಅನಂತರ ಹೊಲದಲ್ಲಿ ಬೆಳೆ ಚೆನ್ನಾಗಿ ಬರಲಾರಂಭಿಸಿತು.

ದಾಸರ ಪಾಂಡಿತ್ಯಕ್ಕೆ ನಿದರ್ಶನವಾದ ಮತ್ತೊಂದು ಘಟನೆ ಹೀಗಿದೆ : ಒಮ್ಮೆ ಹಿರಿಯ ಬಾಜೀರಾಯನು ಬಾಗಲಕೋಟೆಗೆ ಬಂದಾಗ, ಪ್ರಸನ್ನವೆಂಕಟರನ್ನು ನೋಡಲು ಅಪೇಕ್ಷಿಸಿ ಅವರನ್ನು ಗೌರವಪೂರ್ವಕವಾಗಿ ಕರೆತರಲು ತನ್ನ ಕರಣಿಕನನ್ನು ಕಳುಹಿಸಿದನು. ತಮ್ಮನ್ನು ಕರೆಯಲು ಬಂದ ಕರಣಿಕನ ಕಿವಿಯಲ್ಲಿ ಲೆಕ್ಕಣಿಕೆ ಇದ್ದುದನ್ನು ಕಂಡ ದಾಸರು, ಇದೇನು ? ಕರ್ಣಭೂಷಣವೆ ? ಎಂದು ಕೇಳಿದರೆ, ಆತ 'ನನ್ನ ತೀವ್ರ ಬರಹದ ಕುರುಹಾಗಿ ಇದನ್ನು ಪೇಶ್ವೆಯವರು ನನಗೆ ಬಹುಮಾನವಾಗಿ ಕೊಟ್ಟಿದ್ದಾರೆ' ಎಂದನು. ಅದಕ್ಕೆ ದಾಸರು ಆತನ ಬರಹದ ವೇಗವನ್ನು ನೋಡಲುಬಯಸಿ ಒಂದು ಕೀರ್ತನೆಯನ್ನು ಹೇಳಲಾರಂಭಿಸಿದರು. ಆದರೆ ಕರಣಿಕ ಕೀರ್ತನೆಯ ಕಾಲು ಭಾಗವನ್ನೂ ಬರೆಯಲಾಗದೆ ಕುಳಿತುಬಿಟ್ಟ. ಆಗ ದಾಸರು ಅವನಿಗೆ ಗರ್ವಸಲ್ಲದು ಎಂದು ಬುದ್ಧಿ ಹೇಳಿದರು.

ಮೇಲಿನ ಕೆಲವು ಘಟನೆಗಳ ಮೂಲಕ ದಾಸರು ತಮ್ಮ ಸುತ್ತಣ ಪರಿಸರದಲ್ಲಿ ಪ್ರಭಾವ ಬೀರಿದ ಬಗೆಯನ್ನೂ ಜನಮನದಲ್ಲಿ ನೆಲೆ ನಿಂತ ಪರಿಯನ್ನೂ ಗುರುತಿಸಬಹುದಾಗಿದೆ. ಅವರು ತಮ್ಮ ಬದುಕಿನ ಕೊನೆಯ ದಿನಗಳನ್ನು ಬಾದಾಮಿಯಲ್ಲಿ ಕಳೆದುದಾಗಿ ತಿಳಿದು ಬರುತ್ತದೆ. ಪ್ರಸನ್ನವೆಂಕಟದಾಸರು ಸದ್ವಂಶಜರೂ, ಸಾತ್ವಿಕರೂ, ಸದಾಚಾರ ಸಂಪನ್ನರೂ, ಶ್ರೀನಿವಾಸನ ಪರಮಭಕ್ತರೂ ಆಗಿದ್ದು ಸುಮಾರು ೭೨ ವರ್ಷಗಳ ಸಾರ್ಥಕ ಬಾಳನ್ನು ನಡೆಸಿ, ಶಕ ೧೬೭೪ ನೆಯ ಆಂಗಿರಸ ಸಂವತ್ಸರದ ಭಾದ್ರಪದ ಶುದ್ಧ ಏಕಾದಶಿ ಮಧ್ಯರಾತ್ರಿಯಲ್ಲಿ ವೈಕುಂಠವಾಸಿ ಗಳಾದರು. ಬಾದಾಮಿಯ ಪೂರ್ವಕ್ಕೆ ಇರುವ ಗುಡ್ಡದ ಕೆಳಗೆ ಒಂದು ಹೊಂಡವಿದ್ದು ಅದರ

ಉತ್ತರ ದಡದ ಮೇಲೆ ಒಂದು ಕಟ್ಟೆ ಇದೆ. ಅದನ್ನು ಶ್ರೀ ಪ್ರಸನ್ನವೆಂಕಟರ ಕಟ್ಟೆ ಎಂದು ಹೇಳುತ್ತಾರೆ. ಈ ಕಟ್ಟೆ ಇರುವ ಜಾಗ ದಾಸರ ಅಂತಿಮ ಸಂಸ್ಕಾರ ನಡೆದ ಸ್ಥಳವೆಂದು ಹೇಳುತ್ತಾರೆ. ಅವರ ಸ್ಮರಣಾರ್ಥವಾಗಿ ಈ ಕಟ್ಟೆಯನ್ನು ಮೊದಲಿಗೆ ದಾಸರ ಮರಿಮಕ್ಕಳಾದ ಅಣ್ಣಯ್ಯಾಚಾರ್ಯರು ಕಟ್ಟಿಸಿದರೆಂದು ಪ್ರತೀತಿ ಇದೆ.

ಕೀರ್ತನೆಗಳ ಸಮೀಕ್ಷೆ

ಪ್ರಸನ್ನವೆಂಕಟರ ಸಾಹಿತ್ಯ ಸೃಷ್ಟಿ ವಿಪುಲವಾಗಿದ್ದು, ಇದುವರೆಗೆ ಅವರ ಅಂಕಿತದಲ್ಲಿ (ಪ್ರಸನ್ವೆಂಕಟ, ಪ್ರಸನ್ವೆಂಕಟ ಕೃಷ್ಣ) ೪೪೯ ಕೃತಿಗಳು ಸಿಕ್ಕಿವೆ. ಪುಟ ಮಿತಿಯನ್ನು ಮೀರಬಹುದೆಂಬ ಕಾರಣದಿಂದ ಪ್ರಸನ್ನವೆಂಕಟರ ಭಾಗವತವನ್ನು ಈ ಸಂಪುಟದಲ್ಲಿ ಸೇರಿಸಿಲ್ಲ. ಉಳಿದ ೪೪೮ ಕೃತಿಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.[೧]

ಪ್ರಸನ್ನವೆಂಕಟರ ಒಟ್ಟು ಕೃತಿಗಳನ್ನು ಗಮನಿಸಿದರೆ ಅವುಗಳಲ್ಲಿ ೬ ದೀರ್ಘವೆನ್ನಬಹುದಾದ ಕೃತಿಗಳು, ೪೨೬ ಸಣ್ಣ ಕೀರ್ತನೆಗಳು, ೧೦ ಸುಳಾದಿಗಳು ಮತ್ತು ೭ ಉಗಾಭೋಗಗಳಿವೆ.

(ಅ) ದೀರ್ಘಕೃತಿಗಳು

ಪ್ರಸನ್ನ ವೆಂಕಟರ ಅಂಕಿತದಲ್ಲಿರುವ ೬ ದೀರ್ಘಕೃತಿಗಳು ಈ ಕೆಳಗಿನಂತಿವೆ.

೧ ಸತ್ಯಭಾಮಾವಿಲಾಸ (ಕೀ. ೨೭)
೨ ನಾರಾಯಣ ಪಂಜರ (ಕೀ. ೯೭)
೩ ಸಮಸ್ತನಾಮ ಮಣಿಗಣ ಪಟ್ಟರಣ ಪದ್ಯಮಾಲಾ (ಕೀ. ೧೩೮)
೪ ಭೇದ ಮುಕ್ತಾವಲಿ (ಕೀ. ೩೮೨)

---

೧ ಪ್ರಸನ್ನ ವೆಂಕಟದಾಸರು ಇಲ್ಲಿ ಸಂಪಾದಿಸಿ ಕೊಟ್ಟಿರುವ ಕೃತಿಗಳಲ್ಲದೆ ಇನ್ನೂ ಅನೇಕ ಕೃತಿಗಳನ್ನು ಬರೆದಿದ್ದರೆಂಬುದಕ್ಕೆ ದಾಖಲೆಗಳು ಸಿಕ್ಕುತ್ತವಾದರೂ ಅವು ಸಧ್ಯಕ್ಕೆ ನಮಗೆ ಸಿಕ್ಕಿಲ್ಲ. ವಿವರಗಳಿಗೆ ನೋಡಿ : ೧) ಕರ್ನಾಟಕ ಭಕ್ತವಿಜಯ ಭಾಗ – ೨ , ಪು. ೨೭೫, ೨೮೪, ಬೇಲೂರು ಕೇಶವದಾಸರು ೨) ಶ್ರೀ ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು ಪು. ೫೩. ಪು. ix, ಡಾ. ಎ.ಟಿ. ಪಾಟೀಲ.

೫ ನಾರದ ಕೊರವಂಜಿ (ಕೀ. ೪೪೭)

೬ ಶ್ರೀ ಪ್ರಸನ್ನ ವೆಂಕಟದಾಸರ ಭಾಗವತ (ಈ ಸಂಪುಟದಲ್ಲಿ ಸೇರಿಲ್ಲ)

೧. ಸತ್ಯಭಾಮಾ ವಿಲಾಸ (ಕೀ. ೨೭)

ಈ ಕೃತಿ ಹರಿಯನ್ನು ಕುರಿತ ಮಧುರ ಭಾವದ ಕೀರ್ತನೆಗಳಲ್ಲಿ ಸೇರಿದೆ. ಇದಕ್ಕೆ "ಶ್ರೀಕೃಷ್ಣ ಪಾರಿಜಾತ" ಎಂಬ ಹೆಸರೂ ಇದೆ. (ಶ್ರೀ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು, ಡಾ. ಎ.ಟಿ.ಪಾಟೀಲ, ಪು.೭೦) ಕೃತಿಯಲ್ಲಿಯೇ ಎರಡೂ ಹೆಸರುಗಳನ್ನು ಹೇಳಿದೆ. ನುಡಿ ೨ ರಲ್ಲಿ "ಈ ಪದ್ಯಂಗಳ ಪೇಳಿಸಿದನು ದಯಾಬ್ಧಿ ಪಾರಿಜಾತಾಖ್ಯವ" ಎಂದೂ, ನು. ೫೧ ರಲ್ಲಿ "ಈ ಸತ್ಯಭಾಮಾ ವಿಲಾಸದ ಪದ್ಯಪದ ಲೇಸಾಗಿ" ಎಂದೂ ಬಂದಿದೆ. ಈ ಕೃತಿಯಲ್ಲಿ ೨೪ ಶ್ಲೋಕ ಮತ್ತು ೨೭ ಪದಗಳಿದ್ದು ಒಟ್ಟು ೫೧ ನುಡಿಗಳಿವೆ. ೨ ಶ್ಲೋಕಗಳ ನಂತರ ೨ ಪದ-ಈ ಕ್ರಮದಲ್ಲಿ ಇಡೀ ಕೃತಿ ರಚಿತವಾಗಿದ್ದು ಅಂತ್ಯದಲ್ಲಿ ೩ ಪದಗಳು ಹೆಚ್ಚಾಗಿ ಸೇರಿವೆ.

ಕೃತಿಯ ವಸ್ತು ಕೃಷ್ಣನ ಬದುಕಿನ ಕೆಲವು ಘಟನೆಗಳಿಗೆ ಸಂಬಂಧಿಸಿದ್ದು ಕೃಷ್ಣನಿಂದ ನಡೆಯುವ ಪಾರಿಜಾತಾಪಹರಣಕ್ಕೆ (ಭಾ. ಸ್ಕಂ. ೧೦, ಅ.೫೯) ಹಿನ್ನೆಲೆಯಾಗಿ ಒಂದು ಘಟನೆ ನಡೆಯುತ್ತದೆ. ಒಂದು ದಿನ ನಾರದ ದೇವಲೋಕದಿಂದ ತಂದ ಒಂದು ಪಾರಿಜಾತದ ಹೂವನ್ನು ಕೃಷ್ಣನಿಗೆ ಕೊಡುತ್ತಾನೆ. ಕೃಷ್ಣ ಅದನ್ನು ರುಕ್ಮಿಣಿಗೆ ಕೊಡುತ್ತಾನೆ. ಈ ಸುದ್ದಿ ಕೇಳಿದ ಸತ್ಯಭಾಮೆ, ಕೃಷ್ಣ ತನ್ನನ್ನು ಅವಮಾನಿಸಿದನೆಂದು ತಿಳಿದು ಕೋಪಗೊಳ್ಳುತ್ತಾಳೆ. ಕೃಷ್ಣ "ಪಾರಿಜಾತದ ವೃಕ್ಷವನ್ನೇ ತಂದು ನಿನ್ನ ಮನೆಯಂಗಳದಲ್ಲಿ ನೆಡುತ್ತೇನೆ" ಎಂದು ಆಕೆಯನ್ನು ಸಮಾಧಾನ ಪಡಿಸುತ್ತಾನೆ. ಆಕೆಗೆ ಹೇಳಿದಂತೆಯೆ ಪಾರಿಜಾತ ವೃಕ್ಷವನ್ನು ತಂದು ಆಕೆಯ ಮನೆಯೆದುರು ನೆಡುತ್ತಾನೆ. ಕೊನೆಗೆ ಸತ್ಯಭಾಮೆಯ ಅಪೇಕ್ಷೆಯಂತೆ ಆ ಮರದ ಬುಡದಲ್ಲಿ ಆಕೆಯೊಡನೆ ಲೆತ್ತದಾಟವನ್ನಾಡುತ್ತಾನೆ. ಕೃಷ್ಣನ ಈ ಲೀಲೆಯನ್ನು ಹಾಡಿದವರಿಗೆ ಕೃಷ್ಣ ಸುಖವೀವ ಎಂಬ ಆಶಯದೊಡನೆ ಕೃತಿ ಕೊನೆಗೊಳ್ಳುತ್ತದೆ. ಭಾಗವತದಲ್ಲಿ ಕೃಷ್ಣನ ಬಾಲಲೀಲೆಗಳನ್ನು ಮನದುಂಬಿ ಹಾಡಿರುವ ದಾಸರು ಇಲ್ಲಿ ಆತನ ವಿವಾಹಿತ ಬದುಕಿನ ಒಂದು ಭಾಗವನ್ನು ಸೆರೆ ಹಿಡಿಯಲೆತ್ನಿಸಿದ್ದಾರೆ. ದಾಸರ ಉಳಿದ

ಕೃತಿಗಳೊಡನೆ ಈ ಕೃತಿಯನ್ನು ಹೋಲಿಸಿದರೆ ಇದು ಬಹುಶಃ ದಾಸರ ಬರವಣಿಗೆಯ ಆರಂಭಕಾಲದ ಒಂದು ಕೃತಿ ಇರಬಹುದೆನ್ನಿಸುತ್ತದೆ.

೨. ನಾರಾಯಣ ಪಂಜರ (ಕೀ. ೯೭)

ಈ ಕೃತಿಯಲ್ಲಿ ಹರಿಸ್ತುತಿಯೇ ಪ್ರಧಾನವಾಗಿರುವುದರಿಂದ ಶಾಂತಭಾವದ ಕೃತಿಗಳಲ್ಲಿ ಇದನ್ನು ಸೇರಿಸಿದೆ. ಇಲ್ಲಿ ೪೧ ನುಡಿಗಳಲ್ಲಿ ನಾರಾಯಣನ ಸ್ತುತಿ, ಸ್ಮರಣೆಗಳಿವೆ. ಕೃತಿಯ ಆರಂಭದ ನುಡಿಗಳಲ್ಲಿ (೧–೨೮) ನಾರಾಯಣನ ಅನೇಕ ಮಹಿಮೆಗಳ, ಭಕ್ತೋದ್ಧಾರ ಕಾರ್ಯಗಳ ಸ್ಮರಣೆಯಿದ್ದರೆ, ಕೊನೆಯ ನುಡಿಗಳಲ್ಲಿ (೨೯–೪೧) ಅಂತರಂಗ ನಿವೇದನೆ, ಪ್ರಾರ್ಥನೆಗಳಿವೆ. ನಿದರ್ಶನವಾಗಿ ಈ ಎರಡು ನುಡಿಗಳನ್ನು ಗಮನಿಸಬಹುದು –

ಭವಭಯದಿ ತೊಳತೊಳಲಿ ಬಳಬಳಲಿ ಬಲುದಣಿದೆ
ಭವ ವಿರಿಂಚ್ಯಾದಿ ಕರಿಗಭಯದನೆ ನೀ ಸಲಹೊ ೩೧

ಏನರಿಯದವ ನಾನು ನೀನೆ ಪರಗತಿ ಎನಗೆ
ಪ್ರಾಣ ನಿನಗರ್ಪಿಸಿದೆ ಪ್ರಸನ್ನವೆಂಕಟಕೃಷ್ಣ ೪೧

"ನಾರಾಯಣಾಯ ನಮೋ ನಾರಾಯಣ" ಎಂಬ ಸಾಲು ಪ್ರತಿ ನುಡಿಯ ಎರಡನೇ ಹಾಗೂ ನಾಲ್ಕನೇ ಸಾಲಾಗಿ ಪುನರುಕ್ತಗೊಂಡು ಕೃತಿಗೆ ವಿಶಿಷ್ಟ ಲಯವನ್ನು ಸಾಧಿಸಿ ಕೊಟ್ಟಿದೆ. ನಿರರ್ಗಳವಾಗಿ ಸಾಗುವ ಶೈಲಿ ಇದರ ಮತ್ತೊಂದು ಗಮನಾರ್ಹ ಅಂಶವಾಗಿದೆ.

೩. ಸಮಸ್ತನಾಮ ಮಣಿಗಣ ಷಟ್ಚರಣ ಪದ್ಯಮಾಲಾ (ಕೀ.೧೩೮)

ಪೂರ್ಣವಾಗಿ ಹರಿಸ್ತುತಿಯಿರುವ ಈ ಕೃತಿ ಭಾಮಿನಿ ಷಟ್ಪದಿಯಲ್ಲಿದ್ದು ಶಾಂತ ಭಾವಕ್ಕೆ ಸೇರಿದೆ. ಇದರಲ್ಲಿ ೭೧ ನುಡಿಗಳಿದ್ದು ಏನು ಕಾರಣವೋ ೫೩ನೆಯ ನುಡಿ ಬಿಟ್ಟು ಹೋಗಿದೆ. ಮೊದಲ ೧೩ ನುಡಿಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಹರಿಸ್ತುತಿ ಬಂದಿದೆ. ೧೪ನೆಯ ನುಡಿಯಲ್ಲಿ 'ಅ' ದಿಂದ 'ಔ' ವರೆಗಿನ ಸ್ವರಗಳನ್ನು ಬಳಸಿ ಸ್ತುತಿ ಬಂದಿದೆ. ೧೫, ೧೬ನೆಯ ನುಡಿಗಳಲ್ಲಿ ವರ್ಗೀಯ ಮತ್ತು ಅವರ್ಗೀಯ

ವ್ಯಂಜನಗಳು ಬಳಕೆಯಾಗಿವೆ. ನು. ೧೭ – ೪೬ ರಲ್ಲಿ 'ಕ' ದಿಂದ 'ಕ್ಷ' ದವರೆಗಿನ ವ್ಯಂಜನಗಳ ಕಾಗುಣಿತ ಬಂದಿದ್ದರೆ, ನು. ೪೭–೫೬ ರಲ್ಲಿ ೧ ರಿಂದ ೧೦ ರವರೆಗಿನ ಸಂಖ್ಯೆಗಳನ್ನು ಬಳಸಿಕೊಂಡ ಹರಿಸ್ತುತಿಯಿದೆ. ನು. ೫೭ ರಲ್ಲಿ 'ಶತ' ಸಂಖ್ಯೆ ಬಳಕೆಯಾಗಿದೆ. ನು. ೫೮ ರಿಂದ ೬೨ ರಲ್ಲಿ ಪಂಚಮಹಾಭೂತಗಳಾದ ಕ್ಷಿತಿ, ಅಂಬು, ಅಗ್ನಿ, ವಾತ, ಅಂಬರ – ಇವುಗಳ ಮೂಲಕ ಹರಿಸ್ಮರಣೆ ಬಂದಿದೆ. ನುಡಿ ೬೩ ರಲ್ಲಿ 'ಶಬ್ದ' ಎಂಬ ಪದ ಬಳಕೆಯಾಗಿದೆ. ನುಡಿ ೬೪ ರಲ್ಲಿ ೧೨ ರಾಶಿಗಳೂ ನುಡಿ ೬೫, ೬೬ ರಲ್ಲಿ ೨೭ ನಕ್ಷತ್ರಗಳೂ ಬಂದಿವೆ. ನುಡಿ ೬೭–೬೯ ರಲ್ಲಿ ಹರಿಯ ಮತ್ಸ್ಯ, ಕೂರ್ಮ, ವರಾಹಾವತಾರಗಳ ಸ್ಮರಣೆಯಿದೆ. ನು. ೭೦ರಲ್ಲಿ ಮಧ್ವಾಚಾರ್ಯರಿಗೆ ಪ್ರಿಯನಾದ ಹರಿಯ ಸ್ತುತಿಯಿದೆ. ನುಡಿ ೭೧ರಲ್ಲಿ ಅವರಿಗೆ ಪ್ರಸನ್ನನಾದ ಪ್ರಸನ್ನವೆಂಕಟನ ಸ್ಮರಣೆಯೊಂದಿಗೆ ಕೃತಿ ಕೊನೆಯಾಗುತ್ತದೆ.

(ಪ್ರತಿನುಡಿಯ ಅಂತ್ಯದಲ್ಲೂ 'ನಮೋ' ಎಂಬ ಪದ ಪುನರುಕ್ತಿಗೊಳ್ಳುವ ಈ ಕೃತಿ ಸಂಸ್ಕೃತ ಭೂಯಿಷ್ಠವಾಗಿದ್ದು, ದಾಸರ ಸಂಸ್ಕೃತ ಭಾಷಾ ಪಾಂಡಿತ್ಯಕ್ಕೂ ನಿದರ್ಶನವಾಗಿದೆ.) ಈ ಕೃತಿಯ ಹೆಣಿಗೆ ಹೇಗಿದೆಯೆನ್ನುವುದಕ್ಕೆ ಕೆಳಗಿನ ನುಡಿಯನ್ನು ಗಮನಿಸಬಹುದು. "ಪಂಚ" ಸಂಖ್ಯೆಯನ್ನು ಬಳಸಿರುವ ನುಡಿಯಿದು:

ಪಂಚಮುಖಿಮುಖ ಪಂಚಮುಖನುತ
ಪಂಚಜನರಿಪು ಪಂಚಮೋಕ್ಷದ
ಪಂಚಪಾಂಡವ ಪ್ರಾಣ ವರ ಪಂಚಾಕೃತಾವ್ರಾತ
ಪಂಚಶರಪಿತ ಪಂಚವ್ಯೂಹ ಸು
ಪಂಚಭಿದಮತ ಪಂಚಪರ್ವಹ
ಪಂಚಕಾಲಜ್ಞ್ಯಜ್ಞ ಸಂಭೃತ ಪಂಚಬಾಣ ನಮೊ ೫೧

೪. ಭೇದ ಮುಕ್ತಾವಲಿ (ಕೀ. ೩೮೨)

(ಈ ಕೃತಿ ೧೦೫ ನುಡಿಗಳಿಂದ ಕೂಡಿದ್ದು ಕೋಲುಪದದ ಧಾಟಿಯಲ್ಲಿದೆ. ಮೊದಲಿಗೆ ದೇವದೇವತೆಯರನ್ನು ಮತ್ತು ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರನ್ನು ತಾರತಮ್ಯಾನುಸಾರ ಸ್ಮರಿಸಲಾಗಿದೆ.)

ವಿಶಿಷ್ಠ ಸ್ವರೂಪಾನಂದಭ್ಞಾವ ಮೋಕ್ಷ ಸು
ವಾಸಿನೇರೆಲ್ಲರೊಂದಾಗಿ ಕೋಲೆ [ಸು]
ವಾಸಿನೇರೆಲ್ಲರೊಂದಾಗಿ ಹೋಗುವ
ಹೇಸಿ ನಾರೇರ ಗೆಲ್ಲುವ ಕೋಲೆ ೧೨

ಎಂದು ಮುಂದುವರೆಯುವ ಈ ಕೃತಿಯಲ್ಲಿ ಜನಪದ ಹಾಡುಗಳಲ್ಲಿ ಬರುವ ಮುಯ್ಯದ ಹಾಡನ್ನು ಮತಪರವಾಗಿ ವರ್ಣಿಸಿರುವ ವಿಶಿಷ್ಠ ತಂತ್ರವಿದೆ. ದಾಸರು ಈ ಕೃತಿಯನ್ನು ''ಮುಯ್ಯದ ಹಾಡು'' ಎಂದೇ ಕರೆದಿದ್ದಾರೆ (ನುಡಿ. ೧೭). ಒಂದೆಡೆ, "ನಮ್ಮ ಮುತ್ತಯ್ಯ ಮರುತರಾಯ, ಹೆತ್ತಯ್ಯ ಜಯರಾಯ, ಜಯರಾಯ ಸಂತತಿಯ ಮಕ್ಕಳು ನಾವೀಗ ಜಯನವಭೇರಿ ಹೊಯಿಸುತ ರವದ ಜಾಗಟೆಯ ಬಿರುದಲಿ ಬರುತೇವೆ ಕೋಲೆ" (ನುಡಿ. ೧೫) ಎಂದು ಸಾರುತ್ತಾರೆ. "ಜ್ಞಾನ ದೀವಟಿಗೆ ಬೆಳಗಲೆ ಬರುತೇವೆ ಜ್ಞಾನ ಕತ್ತಲೆಯ ಬೆದರಿಸಿ ಕೋಲೆ" ಎನ್ನುವಲ್ಲಿ ಅವರ ಆಶಯ ಸ್ಪಷ್ಟವಾಗಿಯೇ ವ್ಯಕ್ತವಾಗಿದೆ.

ಇಪ್ಪತೊಂದು ಮಂದಿ ಹೆಸರಾದವರ ಕೂಡ
ಬಹುಕಾಲ ಕಜ್ಜವು ನಮಗುಂಟು ಕೋಲೆ ೪೭

ಎನ್ನುವಲ್ಲಿ ಇಪ್ಪತ್ತೊಂದು ಮಾಯಿಮತಗಳನ್ನು ವಿರೋಧಿಸಿ ಮಧ್ವಮತ ನಿಂತದ್ದನ್ನು ಸೂಚಿಸಲಾಗಿದೆ. ಮಧ್ವಮತೀಯರು ಉಳಿದ ಮತದವರೊಡನೆ ನಂಟು ಬೆಳೆಸಿ, ಆ ಬೀಗರಲ್ಲಿ ಅತ್ತಿಗೆ, ನಾದಿನಿ, ಬಾವ, ಮೈದುನ ಎಲ್ಲರಿಗೂ "ಹಿರಿಯ ಕಿರಿಯರ ನೋಡಿ ಮಾನ್ಯಾಮಾನ್ಯನ ನೋಡಿ" ತರತಮ ಭಾವದುಪಚಾರ ಮಾಡುತ್ತಾರೆ – "ಹರಿಗುರು ಮೆಚ್ಚಿ ನಲಿವಂತೆ", ಪರಸು ಮುಟ್ಟಿದ ಲೋಹ ಚಿನ್ನವಾದಂತೆ, ಸುರನದಿ ಮುಟ್ಟಿ ಸಗರರು ಉದ್ಧಾರವಾದಂತೆ ಇವರ ಸಂಬಂಧದಿಂದ ಆ ಬೀಗರ ಮನಸ್ಸಿನ ಮೈಲಿಗೆ ಕರಗುತ್ತದೆ. ಬೀಗರು ಈ ಸುವಾಸಿನಿಯರಿಗೆ ಕೈ ಮುಗಿದು ನಾಳೆ ನಿಮ್ಮಾಜ್ಞ ಬರೆ ಮುಯ್ಯ ತರುವೆ............ ಆಳವಾಡದಿರಮ್ಮ ನಮ್ಮನು ನೀವೀಗ ಏಳಿಲ ಮಾಡದಿರಿ" ಎಂದು ಕೇಳಿಕೊಳ್ಳುತ್ತಾರೆ. ಆ ಮಾತಿಗೆ ಇವರು "ಅಪ್ಪ ಜಯತೀರ್ಥಗೆ ಹೆತ್ತವ್ವ

ಶುದ್ಧಮತಿಗೆ ಒಪ್ಪುವ ಬಂಧು ಬಳಗಕ್ಕೆ ನಿಮ್ಮ ಗುಣ ಒಪ್ಪಣೆ ಹೇಳೇವು" ಎಂದು ಭರವಸೆಯಿತ್ತು ಹಿಂದಿರುಗುತ್ತಾರೆ. ದಾಸರ ಮತಶ್ರದ್ಧೆಗೆ ಪ್ರತೀಕವಾಗಿರುವ ಈ ಕೃತಿ ಅವರ ತಂತ್ರಕೌಶಲಕ್ಕೂ ನಿದರ್ಶನವಾಗಿದೆ. "ಮುಯ್ಯದ ಹಾಡಿ"ನ ರೂಪದಲ್ಲಿ ಸ್ವಮತ ಸಮರ್ಥನೆಯ ಈ ರೀತಿ ಹೊಸದಾಗಿದೆ. ಜೊತೆಗೆ ದಾಸರ ನಿರರ್ಗಳ ಶೈಲಿ ಇಲ್ಲಿಯೂ ನಮ್ಮ ಮನಸ್ಸನ್ನು ಸೆಳೆಯುತ್ತದೆ.

೫. ನಾರದ ಕೊರವಂಜಿ (ಕೀ.೪೪೭)

ಪ್ರಸನ್ನವೆಂಕಟರ ಮತ್ತೊಂದು ದೀರ್ಘಕೃತಿ ನಾರದ ಕೊರವಂಜಿ . ಇದರಲ್ಲಿ ವಚನಗಳೂ ಸೇರಿದಂತೆ ವಿವಿಧ ರಾಗತಾಳಗಳಲ್ಲಿರುವ ಪ್ರತ್ಯೇಕ ಪಲ್ಲವಿ, ನುಡಿಗಳಿರುವ ೩೪ ಹಾಡುಗಳಿವೆ. ಇಲ್ಲಿ ಬರುವ ಕೊರವಂಜಿಯ ಕಲ್ಪನೆ ಜಾನಪದದ್ದಾದರೂ, ಉಳಿದಂತೆ ಕೃಷ್ಣರುಕ್ಮಿಣಿಯರ ಪರಿಣಯದ ಕಥೆ ಭಾಗವತ ದಲ್ಲಿ ಬರುವಂಥದು. ಕೃಷ್ಣರುಕ್ಮಿಣಿಯರು ಪರಸ್ಪರ ಮೆಚ್ಚಿಕೊಂಡಿರುತ್ತಾರೆ. ಆದರೆ ರುಕ್ಮಿಣಿಯ ಅಣ್ಣ ರುಕ್ಮಿ ತನ್ನ ತಂಗಿಯನ್ನು ಶಿಶುಪಾಲನಿಗೆ ಮದುವೆ ಮಾಡಿಕೊಡಲು ನಿಶ್ಚಯಿಸಿರುತ್ತಾನೆ. ವಿವಾಹದ ದಿನ ಹತ್ತಿರ ಬರುತ್ತಿರುವಂತೆ ರುಕ್ಮಿಣಿ ಕಾತರದಿಂದ ಏನಾಗುವುದೋ ಎಂದು ತಲ್ಲಣಿಸುತ್ತಿದ್ದಾಗ ನಾರದ ಕೊರವಂಜಿಯ ವೇಷದಿಂದ ಬಂದು ಕಣಿ ಹೇಳುವ ನೆಪದಲ್ಲಿ "ಕೃಷ್ಣನೇ ಬಂದು ಅವಳನ್ನು ವಿವಾಹವಾಗುವುದಾಗಿ" ಹೇಳಿ ಅವಳನ್ನು ಸಮಾಧಾನಪಡಿಸುತ್ತಾನೆ. ಇದು ಈ ಕೃತಿಯ ವಸ್ತು.

ಮೊದಲ ಹಾಡಿನಲ್ಲಿ ಹರಿಸ್ತುತಿ ಇದೆ. ೨ನೆಯ ಹಾಡಿನಲ್ಲಿ ಕೃಷ್ಣನ ಜನನದ ಕಾರಣವನ್ನು ಹೇಳಿದೆ. ಮೂರನೆಯ ಹಾಡಿನಲ್ಲಿ ರುಕ್ಮಿಣಿಯ ಜನನ, ಆಕೆ ಬೆಳೆದದ್ದು, ಅವಳ ವಿವಾಹದ ಪ್ರಸ್ತಾಪ, ಅವಳ ಅಪೇಕ್ಷೆ ಎಲ್ಲವನ್ನು ಸಂಕ್ಷಿಪ್ತ ವಾಗಿ ಹೇಳಲಾಗಿದೆ. ಆ ಸಂದರ್ಭದಲ್ಲಿ ನಾರದ ಧರಿಸುವ ಕೊರವಂಜಿಯ ವೇಷದ ವರ್ಣನೆ ಚಿತ್ರವತ್ತಾಗಿ ಮೂಡಿ ಬಂದಿದೆ.

ಮಂಜುಗಾವಿಯ ಸೀರೆ ನಿರಿದೆಗೆದುಟ್ಟು
ಕೆಂಜೆಡೆ ಬಿಟ್ಟೋರೆದುರುಬಿನ ಕಟ್ಟು

ಪಂಜಿನೋಲೆಯ ಮೂಗುತಿಯ ಬಲಿದಿಟ್ಟು ಗುಲ
ಗಂಜಿ ಹೊಂದಾಳೆ ಸರಗಳಳವಟ್ಟು
ಕಂಚುಕಪುಟ ಬಿಗುಪೇರಿದ ಕಟ್ಟು
ಚಂಚಲ ನೇತ್ರಕಂಜನ ಕಾವಲಿಟ್ಟು
ಮಿಂಚುವಾಭರಣಿಟ್ಟು....................
ಬೆಡಗಿನ ಗಮನದಿ ಎಡಬಲಕೊಲಿದು
ಕಡಗ ಶಂಖದ ಬಳೆ ನುಡಿಸುತ ನಡೆದು

ಕೇರಿಗಳನ್ನೆಲ್ಲ ಸುತ್ತುತ್ತ ಅರಮನೆಯ ಬಳಿ ಬಂದ ಕೊರವಂಜಿಯನ್ನು ರುಕ್ಮಿಣಿಯ ಸಖಿಯರು ರುಕ್ಮಿಣಿಯ ಬಳಿಗೆ ಕರೆದೊಯ್ಯುತ್ತಾರೆ. "ಎಲೆಲೆ ಎಳೆವೆಂಗಳೆ ಎಲೆ ಹುಲ್ಲೆಗಂಗಳೆ" ಎಂದು ಮೊದಲಾಗುವ, ಕೊರವಂಜಿ ಮಾಡುವ ರುಕ್ಮಿಣಿಯ ವರ್ಣನೆ ದಾಸರ ವರ್ಣನಾವೈಖರಿಗೆ ನಿದರ್ಶನವಾಗಿದೆ. ಈ ಕೊರವಿ ಸಾಮಾನ್ಯಳಲ್ಲ, ತಾನು ಸುತ್ತಿ ಬಂದ ಛಪ್ಪನ್ನಾರು ದೇಶಗಳ ಹೆಸರು ಹೇಳುತ್ತಾಳೆ. ಅಧ್ಯಾತ್ಮದ ಮಾತುಗಳನ್ನೂ ಆಡುತ್ತಾಳೆ. ಅವಳಿಗೆ ತಮಿಳು ಭಾಷೆಯೂ ಗೊತ್ತು. ಕೃಷ್ಣ ಬಂದು ರುಕ್ಮಣಿಯನ್ನು ಹೇಗೆ ಕರೆದುಕೊಂಡು ಹೋಗಿ ವಿವಾಹವಾಗುತ್ತಾನೆ ಎನ್ನುವುದನ್ನು ಹೇಳುತ್ತಾಳೆ. ಕೊರವಿಯ ಮಾತಿನಿಂದ ಸಂತೋಷಗೊಂಡ ರುಕ್ಮಿಣಿ ಕೊರವಂಜಿಗೆ ಕೃಷ್ಣ ಬರುವವರೆಗೆ ನನ್ನ ಜೊತೆಯಲ್ಲೇ ಇರು ಎಂದರೆ ಒಪ್ಪದೆ, ನೀನು ನೆನೆದಾಗ ಬರುವೆನೆಂದು ಹೇಳಿ ಹೊರಟು ಹೋಗುತ್ತಾಳೆ.

ಸುರಖುಷಿ ಪೇಳ್ದ ಒಕ್ಕಣೆಯ
ಹರುಷದಿ ಕೇಳ್ದ ರುಕ್ಮಿಣಿಯ
ಅರಸ ಪ್ರಸನ್ನವೆಂಕಟ ಕೃಷ್ಣ
ನಿರುತದಿ ಜಯ ನಮಗೀವ

ಎಂಬ ನಂಬಿಕೆಯೊಂದಿಗೆ ಕೃತಿ ಮುಗಿಯುತ್ತದೆ. ಈ ಕೃತಿಯನ್ನು ಹರಿಯ ಕಥೆಯೆಂಬ ಭಕ್ತಿ ಭಾವದಿಂದಲೇ ದಾಸರು ರಚಿಸಿರುವರಾದರೂ ಕೃತಿ ತನ್ನ

ಸಹಜಗತಿಯಿಂದ ಕೊರವಂಜಿಯ ವೇಷ ಭೂಷಣ, ಮಾತು ಇತ್ಯಾದಿಗಳ ರಂಜಕ ಚಿತ್ರಣದಿಂದ ಓದುಗರ ಮನಸೆಳೆಯುತ್ತದೆ. ಮಧ್ಯೆ ಮಧ್ಯೆ ಬರುವ ವಚನ ಭಾಗಗಳೂ ಕಾವ್ಯಮಯವಾಗಿಯೇ ಇವೆ. "ಸತ್ಯಭಾಮಾವಿಲಾಸ"ಕ್ಕಿಂತ ಈ ಕೃತಿಯಲ್ಲಿ ದಾಸರ ಕಾವ್ಯಶಕ್ತಿ ಉತ್ತಮ ಅಭಿವ್ಯಕ್ತಿಯನ್ನು ಸಾಧಿಸಿದೆ ಎನ್ನಿಸುತ್ತದೆ. ಇದೇ ವಸ್ತುವನ್ನು ಕುರಿತ ಒಂದು ಕೃತಿ ಶ್ರೀ ವಾದಿರಾಜರ ಅಂಕಿತದಲ್ಲಿಯೂ ಸಿಕ್ಕಿ ಪ್ರಕಟವಾಗಿದೆ. (ಶ್ರೀ ವಾದಿರಾಜರ ಕೃತಿಗಳು, ಸಂ.ಟಿ.ಎನ್. ನಾಗರತ್ನ, ಪು. ೪೬೨) ಅದರಲ್ಲಿ ಇಲ್ಲಿಯ ಹಾಗೆ ಪ್ರತ್ಯೇಕ ರಾಗ ತಾಳಗಳಿಂದ ಕೂಡಿದ ಹಾಡುಗಳಿಲ್ಲ. ಕೆಲವೆಡೆ ದೀರ್ಘವಾದ ಗದ್ಯಭಾಗಗಳಿವೆ. ಮಧ್ಯೆ ಮಧ್ಯೆ ಅನೇಕ ಕಡೆ ತೆಲುಗು ಭಾಷೆ ಬಳಕೆಯಾಗಿದೆ. ಉಳಿದಂತೆ ಕಥಾ ನಿರೂಪಣೆಯಲ್ಲಿ ಕೆಲಮಟ್ಟಿನ ಹೋಲಿಕೆ ಇದ್ದರೂ ಕಾವ್ಯಾಭಿವ್ಯಕ್ತಿಯ ದೃಷ್ಟಿಯಿಂದ ಪ್ರಸನ್ನವೆಂಕಟರ ಕೃತಿಯೇ ಮೇಲ್ಮಟ್ಟದಲ್ಲಿದೆ ಎನ್ನಬಹುದು.

೬. ಶ್ರೀ ಪ್ರಸನ್ನವೆಂಕಟದಾಸರ ಭಾಗವತ :

ಈ ಕೃತಿ ಸಾಕಷ್ಟು ದೀರ್ಘವಾಗಿರುವುದರಿಂದ ಈ ಸಂಪುಟದಲ್ಲಿ ಸೇರಿಸಿಲ್ಲ. ಇದು ಸಂಸ್ಕೃತದಲ್ಲಿರುವ ಭಾಗವತ ದಶಮಸ್ಕಂಧ ಪೂರ್ವಾರ್ಧವನ್ನು ಕುರಿತ ೬೭ ಕೀರ್ತನೆಗಳ ಗುಚ್ಛವಾಗಿದೆ. ಕೃಷ್ಣನ ಜನನ ಕಾರಣ, ಜನನದಿಂದ ಮೊದಲಾಗಿ ಕಂಸವಧೆಯವರೆಗಿನ ಕಥೆಯನ್ನು ಕುರಿತ ಈ ಕೀರ್ತನೆಗಳು ಸಂಸ್ಕೃತ ಭಾಗವತದ ರೂಪಾಂತರವಾಗಿವೆ. ಕೃಷ್ಣನ ಬಾಲಲೀಲೆಗಳನ್ನು ಕುರಿತ ಇಲ್ಲಿಯ ಹಾಡುಗಳು ಹಾಗೂ ಕೃಷ್ಣನ ಲೀಲೆಗಳನ್ನು ಕುರಿತ ಉಳಿದ ಬಿಡಿ ಕೀರ್ತನೆಗಳನ್ನು ಒಟ್ಟಾಗಿ ಇವರ ಸೃಷ್ಟಿಯ ರಸಘಟ್ಟಿಗಳೆನ್ನಬಹುದು. ಒಟ್ಟಿನಲ್ಲಿ ದಾಸರ ಪಾಂಡಿತ್ಯ ಪ್ರತಿಭೆಗಳು ಒಂದು ವಿಶಿಷ್ಟ ಹದದಲ್ಲಿ ಬೆರೆತ ಕೀರ್ತನೆಗಳ ಕೃತಿ ಇದಾಗಿದೆ. ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸ ಸಾಹಿತ್ಯಮಾಲೆಯಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ. (ಹೆಚ್ಚಿನ ವಿವರಗಳಿಗೆ ನೋಡಿ: ಶ್ರೀ ಪ್ರಸನ್ನ ವೆಂಕಟದಾಸರ ಭಾಗವತ, ಸಂ. ಟಿ.ಕೆ. ಇಂದುಬಾಯಿ)

(ಆ) ಕೀರ್ತನೆಗಳು

ಮೇಲೆ ಪ್ರಸ್ತಾಪಿಸಿದ ೬ ದೀರ್ಘಕೃತಿಗಳನ್ನು ಬಿಟ್ಟು ಉಳಿದವುಗಳಲ್ಲಿ ಕೀರ್ತನೆಗಳೇ ಅಧಿಕ ಸಂಖ್ಯೆಯಲ್ಲಿವೆ. ಎಲ್ಲ ಹರಿದಾಸರ ಕೀರ್ತನೆಗಳಲ್ಲೂ ಸಾಮಾನ್ಯವಾಗಿ ಕಾಣುವ ವಸ್ತುವನ್ನೇ ಇವರ ಕೀರ್ತನೆಗಳಲ್ಲೂ ಕಾಣುತ್ತೇವೆ. ಹರಿಸರ್ವೋತ್ತಮತ್ವ, ಹರಿನಾಮಮಹಿಮೆ, ಹರಿದಾಸರ ಹಿರಿಮೆ, ದ್ವೈತಮತ ತತ್ವ ಪ್ರತಿಪಾದನೆ, ಆತ್ಮಶೋಧನೆ, ಲೋಕನೀತಿ –ಇವೇ ಮೊದಲಾದುವು ಇವರ ಕೀರ್ತನೆಗಳಲ್ಲೂ ಅಭಿವ್ಯಕ್ತಿ ಪಡೆದಿವೆ.

ಪ್ರಸನ್ನವೆಂಕಟರು ಚಿಕ್ಕಂದಿನಲ್ಲೇ ಬದುಕಿನಲ್ಲಿ ನೊಂದು "ಅನ್ಯಥಾ ಶರಣಂ ನಾಸ್ತಿ" ಎಂದು ತಿರುಪತಿಯ ವೆಂಕಟೇಶನಿಗೆ ಶರಣಾದವರು.

ಎಂದು ಕಾಂಬುವೆ ಎನ್ನ ಸಲಹುವ
ತಂದೆ ಉಡುಪಿಯ ಜಾಣನ
ಮಂದಹಾಸ ಪ್ರವೀಣನ
ಇಂದಿರಾ ಭೂರಮಣನ (ಕೀ.೮೩)

ಎಂದು ತಮ್ಮ ಮೆಚ್ಚಿನ ದೈವವನ್ನು ಕಾಣುವ ಹಂಬಲಿಕೆಯನ್ನು ಅನೇಕ ಕೀರ್ತನೆಗಳಲ್ಲಿ ತೋಡಿಕೊಂಡಿದ್ದಾರೆ. ಹಾಗೆಯೇ ದ್ವೈತಮತದ ನಿಷ್ಠಾವಂತ ಅನುಯಾಯಿಯಲ್ಲಿ ಕಾಣುವ "ಹರಿಯೇ ಸರ್ವೋತ್ತಮನಾದ ದೈವ. ಅವನು ಮಾತ್ರವೇ ತನ್ನನ್ನು ಸಾಂಸಾರಿಕವಾದ ಎಲ್ಲ ಕೋಟಲೆಗಳಿಂದ ಸಲಹಬಲ್ಲ" ಎಂಬ ನಂಬಿಕೆ ಅವರ ಎಲ್ಲ ಕೀರ್ತನೆಗಳ ಹಿನ್ನೆಲೆಯಲ್ಲಿದೆ.

ತಂದೆ ತಾಯಿ ಮಿತ್ರ ನೀನೆ ಬಾಂಧವ ನೀನೆ ನಿ
ನ್ನಿಂದ ಬಳಗಿಲ್ಲೆನಗೆ ಇಂದಿರಾಧವನೆ ಕಾಯೊ (ಕೀ.೨೨೭)

ಎಂಬ ಪ್ರಾರ್ಥನೆ ಅವರ ಬದುಕಿನ ಹಿನ್ನೆಲೆಯಲ್ಲಿ ತುಂಬ ಅರ್ಥ ಪೂರ್ಣವಾಗಿ ಬಂದಿದೆ. "ನೀನೇ ಗತಿ ಕೃಷ್ಣಾ ಎನಗೆ ನೀನೆ ಗತಿ ಕೃಷ್ಣಾ" ಎನ್ನುವ ದಾಸರಿಗೆ ಹರಿಯಲ್ಲಿರುವ ಅನನ್ಯವಾದ ಶ್ರದ್ಧಾ ಭಕ್ತಿಗಳು ಅನೇಕ ಕಡೆಗಳಲ್ಲಿ

ಕಂಡುಬರುತ್ತವೆ. ಒಂದೆಡೆ, "ಕಲ್ಲುಬೀಳಲಿ ಮ್ಯಾಲ್ಮುಗಿಲ್ಲು ಬೀಳಲಿ, ಫುಲ್ಲನಾಭ ನಿನ್ನ ಪಾದಪಲ್ಲವ ಛಾಯೆಯ ಬಿಡೆ" (ಕೀ.೨೧೪) ಎನ್ನುತ್ತಾರೆ. ಇನ್ನೊಂದೆಡೆ,

ನಿನ್ನಾ ಮೂರುತಿ ನಿನ್ನಾ ಕೀರುತಿ ನಿನ್ನಾ ಕಥಾಮೃತವೆನ್ನ
ಕಣ್ಣು ಕಿವಿ ನಾಲಿಗೆಯಲ್ಲಿ ಪೂರ್ಣಿಸು ಪ್ರಸನ್ವೆಂಕಟೇಶ (ಕೀ.೩೮೫)

ಎಂದು ಪ್ರಾರ್ಥಿಸುತ್ತಾರೆ. ಹೀಗೆ ತಮ್ಮ ಸರ್ವಸ್ವವನ್ನು ಹರಿಗೇ ಅರ್ಪಿಸಿ ಬದುಕ ಬಯಸುವ ದಾಸರಿಗೆ ಚಂಚಲವಾದ ಮನಸ್ಸು ಅಡ್ಡಿಯಾಗಿ ನಿಲ್ಲುತ್ತದೆ. ಮನುಷ್ಯನ ಮನಸ್ಸು ಬಹಳ ಚಂಚಲವಾದುದು, ಅದರ ಆಸೆಗಳಿಗೆ ಮಿತಿಯೇ ಇಲ್ಲ ಎನ್ನುವುದನ್ನು ಒಂದೆಡೆ ಹೀಗೆ ಹೇಳುತ್ತಾರೆ – "ಒಂದು ದೊರೆತರೆ ಇನ್ನೊಂದಾಗಲು ಬೇಕು, ಮಂದಿರವಿರಲು ಮೇಲಟ್ಟ ಬೇಕು, ಮಂದಮತಿ ಸತಿ ಇನ್ನೊಬ್ಬ ಸುಗುಣಿ ಬೇಕು, ಎಂದೆಂದು ಬೇಕೆಂಬ ನುಡಿಗುಂದದು ರಂಗ" (ಕೀ. ೨೨೫ ನು. ೧) ಇಂಥ ಮನಸ್ಸನ್ನು ಹರಿಯತ್ತ ಸ್ಥಿರೀಕರಿಸಲು ಹೆಣಗುವ ಸಾಧಕನ ಚಿತ್ರ ಕೆಲವು ಕೀರ್ತನೆಗಳಲ್ಲಿ ಸಮರ್ಥವಾಗಿಯೇ ಬಂದಿದೆ.

ಕಾಡದಿರೆನ್ನ ಕಿಡಿಗೇಡಿ ಮನವೆ
ಓಡದಿರು ಅಚ್ಯುತಾಂಘ್ರಿ ನೋಡು ಮನವೆ (ಕೀ. ೨೧೫)
ಚಂಚಲಿಸದಿರು ನೀನು ಚತುರನಾಗು
ವಂಚಿಸದೆ ಸಕಲವೊಪ್ಪಿಸು ಹರಿಗೆ ಮನವೆ (ಕೀ. ೨೨೪)

ತುಂಬ ಸರಳವಾದ ಮತ್ತು ಪರಿಣಾಮಕಾರಿಯಾದ ಮಾತುಗಳಲ್ಲಿ ಮನಸ್ಸು ನೆಲೆಗೊಳ್ಳಬೇಕಾದ ಸ್ಥಳ ಯಾವುದೆನ್ನುವುದನ್ನು ನಿರ್ದೇಶಿಸಿ, "ಇನ್ನೆನ್ನ ದಣಿಸದಿರು ಇದರಿಂದ ಮೀರಿದರೆ, ಘನ್ನಗುರು ಮಧ್ವೇಶನಾಣೆ ನಿನಗೆ" (ಕಿ. ೨೨೪) ಎಂದು ಆಣೆಯಿಟ್ಟು ಮನಸ್ಸನ್ನು ನಿಯಂತ್ರಿಸಲೆತ್ನಿಸುತ್ತಾರೆ. ಅಜಾಮಿಳ, ದ್ರೌಪದಿ, ಗಜೇಂದ್ರರನ್ನು ಕಾಯ್ದ ಹರಿನಾಮದಲ್ಲಿ ದಾಸರಿಗೆ ಅಚಲವಾದ ಶ್ರದ್ಧೆ. ಅವರೇ ಹೇಳುವಂತೆ "ಮಹತಿಗೆ ಮಹತು ಹರಿನಾಮ". "ಪರಗತಿ ಮಾರ್ಗವು ದುರಿತ ವನಾಗ್ನಿಯು, ಪರಿಪರಿ ಭವರೋಗಕೌಷಧ" ವಾದ ಹರಿನಾಮವನ್ನು ಮನುಷ್ಯ ಸದಾ ಸ್ಮರಿಸುತ್ತಿರಬೇಕು ಎಂದು ನವವಿಧಭಕ್ತಿಯನ್ನು ಪ್ರತಿಪಾದಿಸುತ್ತಾರೆ.

ದಾಸರಿಗೆ ತಮ್ಮ ಮೆಚ್ಚಿನ ದೈವವನ್ನು ಎಷ್ಟು ಬಗೆಯಲ್ಲಿ ಬಣ್ಣಿಸಿದರೂ ತೃಪ್ತಿಯಿಲ್ಲ. ಹರಿಯ ಭಕ್ತವಾತ್ಸಲ್ಯ, ದೀನೋದ್ಧಾರ, ಅತ್ಯದ್ಭುತವೆನ್ನಿಸುವ ಕಾರ್ಯ ಗಳನ್ನು ಅನೇಕ ಕೀರ್ತನೆಗಳಲ್ಲಿ ಸ್ಮರಿಸುತ್ತಾರೆ, ಸ್ತುತಿಸುತ್ತಾರೆ. ಇದಕ್ಕಾಗಿ ರಾಮಾಯಣ, ಭಾರತ, ಭಾಗವತ ಪುರಾಣಗಳಲ್ಲಿನ ಘಟನೆಗಳನ್ನು ಎತ್ತಿಕೊಳ್ಳುತ್ತಾರೆ. ಹರಿಯ ದಶಾವತಾರಗಳ ಸ್ಮರಣೆ ಅನೇಕ ಕೀರ್ತನೆಗಳಲ್ಲಿ ವೈವಿಧ್ಯ ಪೂರ್ಣವಾಗಿ ಬರುತ್ತದೆ. ಕೀ. ೪೨೪ರ ೧-೩ನುಡಿಗಳಲ್ಲಿ ಬಂದಿರುವ ದಶಾವತಾರದ ವರ್ಣನೆ ಒಂದು ರೀತಿಯಲ್ಲಿದ್ದರೆ, ಕೀ. ೪೩೧ ರ ರೀತಿಯೇ ಬೇರೆ. ಇಲ್ಲಿ ೩ ನುಡಿಗಳಲ್ಲೂ ದಶಾವತಾರದ ಸ್ಮರಣೆ ಪ್ರತ್ಯೇಕವಾಗಿ ಬಂದಿದೆ. ಒಂದೊಂದು ಸಾಲಿನಲ್ಲಿ ಕೆಲವೆಡೆ ಒಂದೊಂದೇ ಪದದಲ್ಲಿ ಒಂದೊಂದು ಅವತಾರವನ್ನು ವರ್ಣಿಸುವ ಪರಿ ಅಚ್ಚರಿ ತರಿಸುತ್ತದೆ. ಇನ್ನು ಕೆಲವು ಕೀರ್ತನೆಗಳು ಒಂದೊಂದೇ ಅವತಾರವನ್ನು ವರ್ಣಿಸುತ್ತವೆ. ಆದರೆ ಯಾವುದೂ ಒಂದರ ಪಡಿಯಚ್ಚು ಮತ್ತೊಂದಾಗಿಲ್ಲ. ಒಂದು ಉದಾ-

ಶ್ರುತಿ ಹೃತ ವಿಹೃತನಾದಗೆ
ಕ್ಷಿತಿ ಭೃತ ವಿಭೃತನಾದಗೆ
ಧೃತಿ ಜಿತ ವಿಜಿತ ಕುಪಿತಗೆ ವಿತರಣಾಂತಗೆ
ಪತಿತತನು ಕ್ಷತಕೃತಗೆ
ಕೃತಪೂತಹಿಸತಿನುತಗೆ
ಪತಿವ್ರತ ಮೋಹಿತ ತುರಗಯುತವ್ಯಾಕೃತಗೆ (ಕೀ. ೪೩೧, ನು.೧)

ಮೇಲಿನ ಉದಾಹರಣೆಯಲ್ಲಿ ಸಂಸ್ಕೃತ ಪದಗಳ ಆಧಿಪತ್ಯ ಹೆಚ್ಚಾಗಿದ್ದು ಒಂದೇ ನುಡಿಯಲ್ಲಿ ದಶಾವತಾರಗಳ ವರ್ಣನೆ ಬಂದಿದ್ದರೆ, ಕೀ. ೨೦೯ರಲ್ಲಿ ಇದೇ ವರ್ಣನೆ ೧೧ ನುಡಿಗಳಲ್ಲಿ ಪ್ರಶ್ನೋತ್ತರದ ರೂಪದಲ್ಲಿ, ತಿಳಿಯಾದ ಕನ್ನಡದಲ್ಲಿ ಬಂದಿದೆ. ಒಂದು ನುಡಿಯನ್ನು ಗಮನಿಸಬಹುದು-

ಕಣ್ಣೆವೆ ಇಕ್ಕದೆ ಮಾತಿಗೆ ಮನವಿಟ್ಟ
ಸಣ್ಣದೊಡ್ಡನಾಹನಾರೆಲಮ್ಮ

ಉನ್ಮತ್ತ ಖಳ ಸೋಮಕನ ವೈರಿ ಹೊಸ ಹೊನ್ನ
ಬಣ್ಣದ ಮಚ್ಚವತಾರಿ ಅಲ್ಲೇನಮ್ಮ ೧

ಇದೇ ಧಾಟಿಯಲ್ಲಿ ಈ ಕೀರ್ತನೆಯ ಉಳಿದ ಹತ್ತು ನುಡಿಗಳೂ ಬರುತ್ತವೆ.

ದಾಸ್ಯಭಾವ ಇವರ ಬಹುಪಾಲು ಕೀರ್ತನೆಗಳ ಹಿನ್ನೆಲೆಯಲ್ಲಿದ್ದರೂ ಉಳಿದ ನಾಲ್ಕು ಭಾವಗಳಲ್ಲಿಯೂ ದಾಸರು ಭಗವಂತನನ್ನು ಕಂಡು ಬಣ್ಣಿಸಿದ್ದಾರೆ. ಈ ಭಾವ ಕೆಲವೆಡೆ ಸುಂದರವಾದ ಅಭಿವ್ಯಕ್ತಿ ಪಡೆದಿರುವುದನ್ನು ಕಾಣಬಹುದಾಗಿದೆ[೧] ಉದಾಹರಣೆಗೆ, ತುಂಬ ಜನಪ್ರಿಯವಾದ ಒಂದು ಕೀರ್ತನೆಯನ್ನೇ ನೋಡಬಹುದು.

ಮತ್ತವನಲ್ಲೋ ಮುರಾರಿ ನಿನಗೆ ನಾ
ಮತ್ತವನಲ್ಲೋ ಮುರಾರಿ ನಿನ್ನ
ಭೃತ್ಯರ ಭೃತ್ಯರ ಭೃತ್ಯರ ಭೃತ್ಯನಿ
ಗೆತ್ತಣ ಸ್ವಾತಂತ್ರ್ಯ ಸಲಹಯ್ಯ ಶೌರಿ ಪ.

ರಂಗಾ ನೀ ಕೊಳ್ಳದ ಬಂಗಾರ ತಳಿಗ್ಯೂಟ
ನುಂಗುವ ಮತ್ತವನಲ್ಲೊ
ರಂಗಾ ನಿನ್ನ ಮರೆದಂಗನೆಯರನಾ
ಲಂಗಿಸಿ ಮತ್ತವನಲ್ಲೊ
ರಂಗಾ ನಿನ್ನೊಲುಮೆಯ ಡಿಂಗರರಂಘ್ರಿಗೆ
ರಂಗದೆ ಮತ್ತವನಲ್ಲೊ
ರಂಗಾ ನಿನ್ನೆಂಜಲೆನ್ನಂಗೈಯೊಳುಂಡು ರಾ
ಜಂಗಳನುಡುಗುವ ಬಡವ ನಾನಲ್ಲದೆ ೧ (ಕೀ. ೨೬೬)

ಹೀಗೆಯೇ ಮುಂದುವರಿದು ಕೊನೆಯಲ್ಲಿ, "ತಂದೆ ನೀ ಮಾರಿದರೊಂದೊಪ್ಪು ಕೊಂದರೊಪ್ಪೆಂದಿಗೆ ಮತ್ತವನಲ್ಲೊ. . . . .

---

೧. ನೇರವಾಗಿ ದಾಸ್ಯಭಾವವನ್ನು ವ್ಯಕ್ತಗೊಳಿಸುವ ಕೀರ್ತನೆಗಳು ಹೆಚ್ಚಿಲ್ಲದ್ದರಿಂದ ದೊರೆತ ಕೆಲವೇ ಕೀರ್ತನೆಗಳನ್ನು 'ಆತ್ಮನಿವೇದನೆ' ಎಂಬ ಭಾಗದಲ್ಲಿ ಸೇರಿಸಿದೆ – ಸಂ.

ತಂದೆ ಪ್ರಸನ್ವೆಂಕಟೆಂದಿರೇಶನೊಬ್ಬ ಅಹುದೆಂದ ಸೊಕ್ಕೊಂದುಳ್ಳವನಲ್ಲದೆ" ಎನ್ನುವಲ್ಲಿ ಕಾಣುವ ಹರಿಯ ಬಗೆಗಿನ ಅವರ ವೀರನಿಷ್ಠೆ ಮೆಚ್ಚುಗೆ ಗಳಿಸುತ್ತದೆ.

ಸಖ್ಯಭಾವದಲ್ಲಿ , ಹರಿಯನ್ನು ಕಂಡು ಮಾತನಾಡಿದಂತಿರುವ "ಬಲ್ಲಿದರು ಮೊರೆ ಹೋಗ್ವರೆ ನೀನಾವ ಬಲ್ಲಿದನೆಂದೆನ್ನನುಪೇಕ್ಷಿಪೆ ರಂಗ" ಎಂಬ ಕೀರ್ತನೆಯನ್ನು ಸಖ್ಯಭಾವದ ಚಿತ್ರಣಕ್ಕೆ ನಿದರ್ಶನವಾಗಿ ನೋಡಬಹುದು. "ಯಾತರ ಬಲ್ಲತನವೊ ಕೃಷ್ಣಯ್ಯ ನಿನಗ್ಯಾತರ ಬಲ್ಲತನವೊ" (ಕೀ.೬) ಎಂಬ ಕೀರ್ತನೆ ಹಾಗೂ ಕೀ. ೧ನ್ನೂ ಇದೇ ದೃಷ್ಟಿಯಿಂದ ಗಮನಿಸಬಹುದಾಗಿದೆ.

ದಾಸರು, ಹರಿಗೆ ಮನಸೋತ ಹೆಣ್ಣಾಗಿ, ಪ್ರಿಯತಮನ ವಿರಹದಿಂದ ತಪ್ತಳಾಗಿ ಆತನ ಬರವಿಗಾಗಿ ಕಾತರಿಸುವ ಪ್ರಿಯತಮೆಯಾಗಿ ಅನೇಕ ಕೀರ್ತನೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಒಂದು ಉದಾ. –

ಹಕ್ಕಿಯ ಹೆಗಲೇರಿ ಬಂದವಗೆ ನೋ
ಡಕ್ಕ ಮನಸೋತೆ ನಾನವಗೆ (ಕೀ.೩೧)

ಇನ್ನೊಂದೆಡೆ–

ಸುಳಿದನ್ಯಾರೆ ಈಗ ಸುಳಿದನ್ಯಾರೆ
ಕೆಳದಿ ಎನ್ನುಪ್ಪರಿಗೆಯ ಮುಂದೆ
ಹೊಳೆವ ಹೊಂಬಕ್ಕಿಯ ಮೇಲೆ
ಥಳಥಳಿಪ ಮಿಂಚಿನಂತೆ (ಕೀ.೨೯)

ಎಂದು ಅವನ ಮೋಹಕ ರೂಪವನ್ನು ವರ್ಣಿಸಿ, "ಎನ್ನ ಮನದಿ ನೇಹವ ಬೀರಿ ಇನ್ನ್ಯಾಕೆ ದೂರ ನೋಡಿದನೆ, ಮನ್ನಿಸ್ಯವನ ತಾರೆ ಶ್ರೀ ಪ್ರಸನ್ನವೆಂಕಟ ವರದನ ಬೇಗ" ಎಂದು ಸಖಿಗೆ ಕೇಳಿಕೊಳ್ಳುವಲ್ಲಿಗೆ ಕೀರ್ತನೆ ಮುಗಿಯುತ್ತದೆ. ಕೀ. ೨೧ ಕೂಡ ಇದೇ ಭಾವದ ಕೀರ್ತನೆಯಾಗಿದೆ.

ಭಗವಂತನನ್ನು ಮಗುವಾಗಿ ಬಾಲಕೃಷ್ಣನ ರೂಪದಲ್ಲಿ ಕಂಡು ವರ್ಣಿಸಿದ ವಾತ್ಸಲ್ಯಭಾವದ ರಚನೆಗಳು ಇವರಲ್ಲಿ ಸಾಕಷ್ಟಿವೆ. ಇದಕ್ಕೆ ಭಾಗವತ ದಶಮಸ್ಕಂಧ

ಪೂರ್ವಾರ್ಧದಲ್ಲಿ ಬರುವ ಬಾಲಕೃಷ್ಣನ ಲೀಲೆಗಳು ಪ್ರೇರಣೆ ಒದಗಿಸಿವೆ. ಈ ಪ್ರೇರಣೆಯೊಂದಿಗೆ ದಾಸರ ಕಲ್ಪನೆಯ ಕುಂಚ ಅನೇಕ ಮನಮೋಹಕ ಚಿತ್ರಗಳನ್ನು ಬಿಡಿಸಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಸ್ಥೂಲವಾಗಿ ಇಲ್ಲಿ ಗಮನಿಸಬಹುದು.

ರಂಗ ಕುಣಿದ ಮುದ್ದು ರಂಗ ಕುಣಿದ ಪ.

ರಂಗ ಕುಣಿದ ಗೋಪಿ ಕಂಗಳ ಮುಂದೆ
ಪೊಂಗೆಜ್ಜೆ ರವದೊಳು ಅಂಗಳದೊಳು ೧

ಮೊಳೆವಲ್ಲು ಬಾಯಿಜೊಲ್ಲು ಗಿಳಿಸೊಲ್ಲಿನಿಂದಲಿ
ಕಳಕಳಿಸಿ ನಕ್ಕುನಗಿಸಿ ಬಿದ್ದೆದ್ದು ೩ (ಕೀ.೭೬)

ಹೀಗೆ ಪುಟ್ಟ ಕೃಷ್ಣ ಕುಣಿಯುವ ಸುಂದರ ಚಿತ್ರ ಒಂದೆಡೆ ಕಂಡರೆ, ಕೀ. ೬೯ ರಲ್ಲಿ ಆಡಿ ಬಳಲಿದ ಮಗನನ್ನು ಕರೆಯುತ್ತಿರುವ ಯಶೋದೆಯ ಮಾತೃವಾತ್ಸಲ್ಯ ತುಂಬಿನಿಂತಿದೆ.

ಬಾರೋ ಮಗನೆ ಬಳಲಿದೆ ಆಡಿ
ಬಾರೋ ಮಗನೆ ಪ.

ಎಲ್ಲಿಗೆ ಹೋಗಿದ್ದೊ ಎನ್ನದೆ
ಝಲ್ಲು ಝಲ್ಲು ಎನ್ನುತಲಿದೆ
ಮೆಲ್ಲೆದೆಗಾರ್ತಿ ಗೊಲ್ಲತೇರು ನಿನ್ನ
ಗಲ್ಲ ಕಚ್ಚಿಹರಲ್ಲೋ ಹಸುಳೆ ೧ (ಕೀ. ೬೯)

ಕೃಷ್ಣನ ಚೇಷ್ಟೆಗಳಿಂದ ನೊಂದ ಗೋಪಿಯರು ಯಶೋದೆಯ ಬಳಿ ಬಂದು ಕೃಷ್ಣನ ಬಗ್ಗೆ ದೂರು ಹೇಳುತ್ತಾರೆ. ಅವರ ದೂರುಗಳನ್ನು ಕೃಷ್ಣ ಅಲ್ಲಗಳೆಯುವ ಚಿತ್ರ ಕೀ.೩೩ರಲ್ಲಿ ಹೃದ್ಯವಾಗಿ ಬಂದಿದೆ. "ಅಮ್ಮ ಕೇಳೆ ಯಶೋದಮ್ಮ ಗೋಪಿಯರೆನ್ನ ಸುಮ್ಮನೆ ದೂರುತಿದ್ದಾರೆ ಬುದ್ಧಿ ಹೇಳೆ ಇವರಿಗೆ"– ಎಂದು ಒಂದೊಂದಾಗಿ ಗೋಪಿಯರ ಎಲ್ಲ ದೂರುಗಳು ಸುಳ್ಳು ಎಂದು ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ.

ಸಾಸಿರ ಬಿಸಳಿಗೆ ಬೆಣ್ಣೆ ಕೂಸುಗಳು ಮೆಲ್ಲೋದುಂಟೆ
ಹೇಸಿಗೆ ಬರುತಿದೆ ಅವರ ಮೊಸರು ಕಂಡು. . . .

ತಮ್ಮ ಮಕ್ಕಳುಪಟಳ ನಮ್ಮ ಮೇಲಿಕ್ಕುತಿಹರು
ತಮ್ಮ ನಲ್ಲರ ಕಾಟವು ನಮ್ಮದೆಂಬರು
ನಿಮ್ಮ ಮಕ್ಕಳ ಗುಣವ ನೀ ಬಲ್ಲೆ ನಂದನರಾಣಿ
ಗುಮ್ಮನಂಜಿಕೆಗೆ ಮನೆಯೊಳಿಹೆ ಪ್ರಸನ್ವೆಂಕಟ ೩

ವಾತ್ಸಲ್ಯ ಭಾವದ ಕೀರ್ತನೆಗಳನ್ನೆಲ್ಲ ಒಂದೆಡೆ ಕೂಡಿಸಿದರೆ ಇಂಥ ಮೋಹಕ ಚಿತ್ರಗಳ ಸರಮಾಲೆಯೇ ಆಗುತ್ತದೆ. ಕೀ.೩೪ರಲ್ಲಿ ಕೃಷ್ಣನನ್ನು ಕರೆಯುತ್ತಿರುವ ಚಿತ್ರವಿದ್ದರೆ, ಕೀ. ೩೫ರಲ್ಲಿ ಯಶೋದೆ ಮಗುವಾದ ಕೃಷ್ಣನನ್ನು ಸಮಾಧಾನಪಡಿಸುತ್ತ ಮಲಗಿಸುತ್ತಿರುವ ಚಿತ್ರವಿದೆ. ಕೀ.೩೭ ಬಾಲಕೃಷ್ಣನನ್ನು ಆನೆಯ ಉಪಮೆಯೊಂದಿಗೆ ವರ್ಣಿಸುವ ಒಂದು ಸುಂದರ ಕೀರ್ತನೆ. ಕೀ. ೪೭ ಕಾಣದ ಕೃಷ್ಣನನ್ನು ಯಶೋದೆ ಹುಡುಕುವ ಚಿತ್ರವನ್ನುಳ್ಳದ್ದು.

ದಾಸರ ಅಂತ್ಯಕಾಲದಲ್ಲಿ ಹರಿ ಬಾಲಕೃಷ್ಣನಾಗಿ ಕಾಣಿಸಿಕೊಂಡ ಸಂದರ್ಭದಲ್ಲಿ ರಚಿತವಾದ, ಕೊನೆಯ ಕೀರ್ತನೆಯೆಂದು ಹೇಳಲಾಗುವ "ದಾರೊ ನೀ ಚಿನ್ನ ದಾರೊ" (ಕೀ.೫೫) ಕೂಡ ವಾತ್ಸಲ್ಯಭಾವದಲ್ಲೇ ರಚಿತವಾಗಿದೆ. ಇದೇ ಸಾಲಿನಲ್ಲಿ ಬರುವ ಕೀ. ೪೪ ಪೂರ್ಣವಾಗಿ ಬಾಲಭಾಷೆಯಲ್ಲೇ ರಚಿತವಾಗಿದ್ದು ಶಿಶುಸಹಜ ಭಾಷೆ ಭಾವಗಳ ಮಿಲನದಿಂದ ವಾತ್ಸಲ್ಯಭಾವದ ಕೀರ್ತನೆಗಳಲ್ಲೇ ವಿಶಿಷ್ಟ ಸ್ಥಾನವನ್ನು ಪಡೆದಿದೆ.

ಎತ್ಕೋದೆಯಮ್ಮ ನಂಗನ್ನೆತ್ತಿಕೊ ಅಮ್ಮ ಬಲು
ಹೊತ್ತು ಹತ್ತು ಬಂದೇನೆ ಇತ್ತೆ ಅಮ್ಮಿ ತಿಂದೇನೆ ಪ.

ತುತಿಬಾಯಿ ವಂಗ್ಯಾವೆ ಬಿತಿ ಆವು ವಾಕಿಕ್ಕಿ ಬತ್ತಾವೆ
ಅತಿ ಆವು ಉಪ್ಪು ಕಾಯಿ ಅಮ್ಮ ಮಮ್ಮೊಲ್ಲೆ
ಉತ್ತತ್ತಿ ಹನ್ನು ಬೆನ್ನೆ ತಿಂದೇನೆ ೧

ಬಾಲಭಾಷೆಯಲ್ಲಿರುವ ಕೀರ್ತನೆ ಇದೊಂದೇ ಆದರೂ ವಾತ್ಸಲ್ಯಭಾವದ ಸುಂದರ ಚಿತ್ರಣವಿರುವ ಕೀರ್ತನೆಗಳಲ್ಲಿ ಪ್ರಸನ್ನವೆಂಕಟರು ಕಂಡರಿಸಿರುವ ವಾತ್ಸಲ್ಯ ಪ್ರಪಂಚ ಸಾಕಷ್ಟು ವಿಸ್ತೃತವೂ, ವೈವಿಧ್ಯಪೂರ್ಣವೂ, ಹೃದಯಸ್ಪರ್ಶಿಯೂ ಆದುದಾಗಿದೆ.[೧]

ಭಗವಂತನನ್ನು ಶಾಂತಭಾವದಲ್ಲಿ ಕಂಡು ವರ್ಣಿಸಿದ ಕೀರ್ತನೆಗಳೂ ಇವೆ. ಕೀ. ೮೨, ೮೪, ೯೧ ಇತ್ಯಾದಿಗಳನ್ನು ಗಮನಿಸಬಹುದು. ಪ್ರಸನ್ನವೆಂಕಟರು ತಮ್ಮ ಮೆಚ್ಚಿನ ದೈವವಾದ ತಿರುಪತಿ ವೆಂಕಟೇಶನನ್ನು ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಉದಾ : ಕೀ. ೯೧,೯೮,೧೦೯,೩೧೭, ಇತ್ಯಾದಿ. ಕೀ. ೯೧ರಲ್ಲಿ ಶ್ರೀನಿವಾಸನನ್ನು ದರ್ಶಿಸಿದ ಧನ್ಯತೆ ವ್ಯಕ್ತವಾಗಿದೆ. "ಕೋಮಲಾಮಲ ಗಾತ್ರನ ತಾಮರಸದಳ ನೇತ್ರನ, ಸ್ವಾಮಿ ಸಿರಿನಿವಾಸನ ಕಂಡೆ, ಹೇಮಗಿರಿ ವರದೀಶನ" ಎಂದು ವರ್ಣಿಸುತ್ತಾರೆ. ಕೀ. ೧೦೯ ರಲ್ಲಿ ತಿರುಪತಿ ಕ್ಷೇತ್ರ, ಅಲ್ಲಿ ನಡೆಯುವ ಪೂಜೆ ಇತ್ಯಾದಿಗಳನ್ನು ೭ ನುಡಿಗಳಲ್ಲಿ ದೀರ್ಘವಾಗಿ ಬಣ್ಣಿಸಿದ್ದಾರೆ. ಹರಿಯ ಬೇರೆ ಬೇರೆ ಅವತಾರಗಳಾದ ರಾಮ, ಕೃಷ್ಣ, ನರಸಿಂಹ, ವರಾಹ ಮೊದಲಾದವರನ್ನು ಹಾಗೂ ಇತರ ದೇವಾನುದೇವತೆಗಳನ್ನು ಸ್ತುತಿಸುವ ಕೀರ್ತನೆಗಳೂ ಸಾಕಷ್ಟಿವೆ. ಉದಾ: ಕೀ.೯೪,ಕೀ.೧೦೯,ಕೀ.೧೩೩,ಕೀ.೧೫೧, ಇತ್ಯಾದಿ.

ಪ್ರಾಣದೇವರ ಅವತಾರತ್ರಯರೆಂದು ಪ್ರಸಿದ್ಧರಾದ ಹನುಮ ಭೀಮ ಮಧ್ವರನ್ನು ಒಟ್ಟಾಗಿಯೂ ಬಿಡಿಬಿಡಿಯಾಗಿಯೂ ಸ್ತುತಿಸುವ ಅನೇಕ ಕೀರ್ತನೆಗಳಿವೆ. ಉದಾ.ಗೆ, ಕೀ.೪೧೬ರಲ್ಲಿ "ಹನುಮ ನಮ್ಮ ತಾಯಿತಂದೆ, ಭೀಮ ನಮ್ಮ ಬಂಧು ಬಳಗ, ಆನಂದತೀರ್ಥರೆ ನಮ್ಮ ಗತಿಗೋತ್ರರು" ಎಂದು ಮೂವರನ್ನೂ ಒಟ್ಟಾಗಿ ಸ್ತುತಿಸಿದರೆ, ಕೀ.೧೫೩ ಕೀ.೧೫೪, ಕೀ.೧೫೫ ಇತ್ಯಾದಿಗಳಲ್ಲಿ ಹನುಮನೊಬ್ಬನನ್ನೆ ಸ್ತುತಿಸಲಾಗಿದೆ. ಕೀ.೧೭೬ರಲ್ಲಿ ಭೀಮನನ್ನು ಕೀರ್ತಿಸಲಾಗಿದೆ.

---

೧. ಮೇಲ್ನೋಟಕ್ಕೆ ಬಾಲಕೃಷ್ಣನನ್ನೇ ಕುರಿತ ಕೀರ್ತನೆಗಳಂತೆ ಕಾಣುವ ಕೀ. ೧೦, ೧೧, ೨೪– ರಲ್ಲಿ ಗೋಪೀ ಹೃದಯ ಚೋರ ಕೃಷ್ಣನ ಯೌವನಾವಸ್ಥೆಯ ಚೇಷ್ಟೆಗಳೇ ಹೆಚ್ಚಾಗಿರುವುದರಿಂದ ಇಂಥ ಕೃತಿಗಳನ್ನು ಮಧುರಭಾವದ ಕೃತಿಗಳೊಡನೆ ಸೇರಿಸಿದೆ.

ಕೀ.೧೮೦ರಲ್ಲಿ ಮಧ್ವರ ಹಿರಿಮೆಯನ್ನು ಬಣ್ಣಿಸಲಾಗಿದೆ. ಶಿವನನ್ನು ಸ್ಮರಿಸುವ, ಸ್ತುತಿಸುವ ಕೀರ್ತನೆಗಳು ಸಾಕಷ್ಟಿವೆ. ಕೀ. ೧೫೮, ೧೫೯, ೧೬೧, ಇತ್ಯಾದಿಗಳನ್ನು ನೋಡಬಹುದು. ಕೀ. ೧೬೪ರಲ್ಲಿ ಕೃಷ್ಣಾನದಿಯ ಸ್ತುತಿ ಇದ್ದರೆ, ಕೀ.೧೬೨ರಲ್ಲಿ ತುಳಸಿಮಹಿಮೆಯನ್ನು ಬಣ್ಣಿಸಲಾಗಿದೆ. ಈ ಬಗೆಯ ಸ್ತುತಿಗೀತೆಗಳಲ್ಲಿ ಸಾಹಿತ್ಯಿಕ ದೃಷ್ಟಿಗಿಂತ ಅವರ ಧಾರ್ಮಿಕ ನಿಷ್ಠೆಯೇ ಪ್ರಮುಖವಾಗಿ ಕಾಣಿಸುತ್ತದೆ.

ಇವುಗಳ ಜೊತೆಗೆ ಗಮನಿಸಬಹುದಾದವುಗಳೆಂದರೆ ದಾಸರು ತಮ್ಮ ಶಿಕ್ಷಾ ಗುರುಗಳಾದ ಜನಾರ್ದನಾಚಾರ್ಯರನ್ನು ಕುರಿತು ರಚಿಸಿರುವ ಕೀರ್ತನೆಗಳು ಹಾಗೂ ಮಾಧ್ವ ಗುರುಪರಂಪರೆಯನ್ನು ಸ್ತುತಿಸಿರುವ ಕೀರ್ತನೆಗಳು. ಇವುಗಳಲ್ಲೂ ಗುರುಪರಂಪರೆಯನ್ನು ಒಟ್ಟಾಗಿ ಸ್ಮರಿಸಿರುವ ಕೀರ್ತನೆಗಳೂ ಇವೆ. ಬಿಡಿ ಬಿಡಿಯಾಗಿ ಸ್ತುತಿಸಿರುವ ಕೀರ್ತನೆಗಳೂ ಇವೆ. ಮಂತ್ರಾಲಯದ ಗುರು ರಾಘವೇಂದ್ರರು (ಕೀ. ೧೬೯),ಗುರು ಸತ್ಯನಾಥರು,(ಕೀ.೧೭೦ , ೧೭೪, ೧೭೬), ಸತ್ಯಾಧಿರಾಜರು (ಕೀ.೧೮೮, ಜಯತೀರ್ಥರು (ಕೀ.೧೮೧) ಸತ್ಯಾಭಿನವರು (ಕೀ.೧೧೮, ಕೀ. ೧೭೩) ಗುರುಸತ್ಯಪೂರ್ಣರು (ಕೀ. ೧೬೮),ಗುರು ಸತ್ಯಾಧಿರಾಜರು (ಕೀ. ೧೭೨), ಸುಮತೀಂದ್ರರು (ಕೀ.೧೮೦), ವಾದಿರಾಜರು (ಕೀ. ೧೮೨) – ಇವರನ್ನು ಪ್ರತ್ಯೇಕವಾಗಿ ಸ್ತುತಿಸಿದ್ದರೆ, ಕೀ.೧೭೧ ರಲ್ಲಿ ಅವತಾರತ್ರಯರಿಂದ ಮೊದಲುಗೊಂಡು ಸತ್ಯಾಧೀಶ, ಸತ್ಯಾಧಿರಾಜರವರೆಗಿನ ಗುರುಪರಂಪರೆಯನ್ನು ಸ್ತುತಿಸಿದ್ದಾರೆ. ಈ ಎಲ್ಲ ಹಿರಿಯರ ಬಗೆಗೂ ದಾಸರಿಗಿರುವ ಅಮಿತವಾದ ಭಕ್ತಿ ವಿಶ್ವಾಸಗಳು ಈ ಕೀರ್ತನೆಗಳಲ್ಲಿ ಕಾಣಿಸುತ್ತವೆ. ನಿದರ್ಶನವಾಗಿ ತಮ್ಮ ಶಿಕ್ಷಾಗುರುಗಳಾದ ಜನಾರ್ದನಾಚಾರ್ಯರನ್ನು ಕುರಿತ ಕೀ.೧೬೫ನ್ನೇ ನೋಡಬಹುದು. ಗುರುಗಳು ವೈಕುಂಠವಾಸಿಗಳಾದ ಕಾಲಕ್ಕೆ ಇದನ್ನು ಬರೆದಂತೆ ತೋರುತ್ತದೆ.

ಈ ಕೀರ್ತನೆಯ ಆರಂಭವೇ ಹೃದಯಸ್ಪರ್ಶಿಯಾಗಿದೆ. "ಅಗಲಿ ಜೀವಿಸಬಹುದೆ ಕರುಣಿಯನಗಲಿ ಜೀವಿಸಬಹುದೆ" ಎಂದು ಆರಂಭವಾಗುವ ಈ ಕೀರ್ತನೆಯಲ್ಲಿ ಅವರ ವ್ಯಕ್ತಿತ್ವದ ಔನ್ನತ್ಯವನ್ನೂ ಗುರು ಶಿಷ್ಯರ ನಡುವೆ ಇದ್ದ ಆಪ್ತ ಸಂಬಂಧವನ್ನೂ ವರ್ಣಿಸಲಾಗಿದೆ. ಆಚಾರ್ಯರು ಆಗಮಜ್ಞರು, ಬುಧ

ತಾರಾಗಣಕ್ಕೆ ಚಂದ್ರನಂತಿರುವವರು, ಭೂಮಿಯಲ್ಲಿ ಕಲ್ಪವೃಕ್ಷದಂತೆ ಜನಿಸಿ ದಾಸರನ್ನು ತಾಯಿತಂದೆಯಂತೆ ಸಲಹಿದ ಪರಮ ಧಾರ್ಮಿಕರು. ಇಂಥವರನ್ನು ಅಗಲಿ ಜೀವಿಸಬಹುದೆ ಎನ್ನುವಲ್ಲಿ ಅವರ ಬಗ್ಗೆ ದಾಸರಿಗಿರುವ ಅಪಾರವಾದ ಗೌರವಾದರಗಳನ್ನು ಕಾಣಬಹುದಾಗಿದೆ.

ಹಿರಿಯ ದಾಸರಾದ ಪುರಂದರದಾಸರ ಬಗೆಗೂ ಪ್ರಸನ್ನವೆಂಕಟರಿಗೆ ತುಂಬ ಭಕ್ತಿ, ಗೌರವ. ಅವರನ್ನು ಕುರಿತ ಕೀರ್ತನೆ ೧೮೯ರಲ್ಲಿ, 'ತಂದೆ ಪುರಂದರ ದಾಸರು,' ಎಂದೇ ಕರೆದಿದ್ದಾರೆ.

ತಂದೆ ಪುರಂದರದಾಸರ ಸ್ಮರಿಸುವೆ ಎನ್ನ
ಮಂದಮತಿಗಳೆದು ಹರಿಭಟನೆನಿಸುವೆ ಪ.

ಗೀತ ತಾಯಿ ಸುಳಾದ್ಯುಗಾಭೋಗ ಪದ್ಯಪದ
ವ್ರಾತ ಪ್ರಬಂಧ ರಚಿಸಿ ವಿಠಲನ
ಪ್ರೀತಿಬಡಿಸಿ ಕಂಡು ನಲಿವ ವೈಷ್ಣವಾಗ್ರ
ನಾಥ ಪ್ರಸನ್ವೆಂಕಟಪ್ರಿಯನ ೫

–ಇತ್ಯಾದಿಯಾಗಿ ಅವರ ಭಕ್ತಿಸಾಧನೆಗಳನ್ನು ಕೀರ್ತಿಸಿದ್ದಾರೆ. ಜ್ಞಾನಿಗಳು, ಸಾಧು ಸಂತರು– ಇಂಥವರ ಬಗ್ಗೆಯೂ ದಾಸರಿಗೆ ಇನ್ನಿಲ್ಲದ ಭಕ್ತಿ, ಆದರ. ಸಂತರ ಬಗೆಗಿನ ಈ ದೃಷ್ಟಿ ಕೀ.೩೪೮,೪೮೯ರಲ್ಲಿ ಅಭಿವ್ಯಕ್ತವಾಗಿದೆ. ಅವರ ಪಾಲಿಗೆ –

ಸಂತರೆ ಭವದೂರರು ಹಿತಕಾರ್ಯರು ಪ.

ಸಂತರ ಸೇವೆ ಶ್ರೀಹರಿ ಸೇವೆ
ಸಂತರ ಮತವೆ ಹರಿಸಮ್ಮತವು
ಸಂತರ ಮತಿಯೆ ಮುಕುತಿಯ ಗತಿಯು
ಸಂತರ ಪಾದ ಚಿಂತನೆಗಾಹ್ಲಾದ ೧ (ಕೀ.೩೪೮)

ಇಂಥ ಸಾಧು ಸಂತರ, ಜ್ಞಾನಿಗಳ ಸಂಗವನ್ನು ಕೊಟ್ಟು ತನ್ನನ್ನು ಉದ್ಧರಿಸು ಎಂದು ಪ್ರಸನ್ನವೆಂಕಟೇಶನಲ್ಲಿ ಪ್ರಾರ್ಥಿಸುತ್ತಾರೆ. (ಕೀ.೨೮೧,೪೦೮)

ಇವರ ಸ್ವಮತ ನಿಷ್ಠೆ, ಸ್ವಮತ ಸಮರ್ಥನೆಯನ್ನು ಸಾರುವ ಕೀರ್ತನೆಗಳೂ ಬಹಳಷ್ಟಿವೆ. ಇವುಗಳ ಜೊತೆಗೆ ಮಧ್ವಮತದ ತಾತ್ತ್ವಿಕ ಹಿನ್ನಲೆಯನ್ನು ವಿವರಿಸುವ ಕೀರ್ತನೆಗಳೂ ಅನೇಕ ಇವೆ. ಉದಾ.ಗೆ ಕೀ.೩೭೩,ಕೀ.೩೮೫, ಕೀ.೪೨೨, ಮೊದಲಾದವುಗಳನ್ನು ಗಮನಿಸಬಹುದು. ಕೀರ್ತನೆ ೪೨೨ ರಲ್ಲಿ ೫ ನುಡಿಗಳಲ್ಲಿ ದ್ವೈತ ತಾತ್ತ್ವಿಕ ಹಿನ್ನಲೆಯನ್ನು ಕೆಲಮಟ್ಟಿಗೆ ವಿವರಿಸಲಾಗಿದೆ:

ಹರಿಸರ್ವೋತ್ತಮ ಹರಿಪರಬ್ರಹ್ಮ
ಹರಿಸಮರಾರಿಲ್ಲ ಹಿರಿಯರುಂಟೆಲ್ಲಿ...... ೧

ಅಯ್ಯನ ನಾಮವೆಂದರೆ ಅನಂತನಾಮವು
ಸ್ವನಾಮವಿಲ್ಲ ಹೀಗಲ್ಲ
ಅರೂಪವೆಂದರೆ ಪ್ರಾಕೃತರೂಪ
ಸ್ವರೂಪವಿಲ್ಲ ಹೀಗಲ್ಲ
ಗುಣರಹಿತೆಂಬುದು ತ್ರಿಗುಣಾತೀತಾ
ಗಣಿತ ಗುಣಗಳಿಲ್ಲ ಹೀಗಲ್ಲ
ನಿರ್ಗುಣ ಅರೂಪನಾಮನೆಂಬರು
ಸ್ವರ್ಗಜವರದ ಪ್ರಸನ್ವೆಂಕಟೇಶಗೆ
ನಾಮವೆಂಬುದು ಹಾಗಲ್ಲ ೨

ಕೀರ್ತನೆ ಮುಂದುವರೆದು ಹರಿಯ ನಾಮ, ರೂಪ, ಸ್ವರೂಪಗಳನ್ನು ವರ್ಣಿಸುತ್ತದೆ. ಕೀ.೪೧೯ರಲ್ಲಿ ಹರಿದಿನದ ಮಹಿಮೆಯನ್ನು ಹೇಳಲಾಗಿದೆ. ಕೀ.೪೦೬, ೪೧೭, ಮೊದಲಾದವುಗಳಲ್ಲೂ ಇದೇ ಬಗೆಯ ಸ್ವಮತ ವಿವರಣೆ, ಸ್ತುತಿ, ಸಮರ್ಥನೆಗಳೇ ಕಂಡುಬರುತ್ತವೆ. ದಾಸಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಬಂದ ಇವರಲ್ಲಿ ಮತಪ್ರಚಾರದ ದೃಷ್ಟಿಯಿಂದ ಇಂಥ ಅಂಶಗಳು ಹೆಚ್ಚಾಗಿ ಕಾಣಿಸಿಕೊಂಡದ್ದರಲ್ಲಿ ಅತಿಶಯೋಕ್ತಿಯೇನೂ ಇಲ್ಲ.

ಈ ಲೋಕದಲ್ಲಿ ಮನುಷ್ಯನ ಬದುಕು ಹೇಗಿರಬೇಕು? ಯಾವುದು ಸಾರ್ಥಕವಾದ ಬದುಕು? ಮುಕ್ತಿಯ ದಾರಿ ಯಾವುದು ? ಇತ್ಯಾದಿಗಳ ಬಗ್ಗೆ ದಾಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಕೀರ್ತನೆಗಳಲ್ಲಿ ಲೋಕೋಪದೇಶದ ಧ್ವನಿ ಕೇಳಿ ಬರುತ್ತದೆ. ಒಂದೆಡೆ "ವ್ಯರ್ಥ ಆಯು ಕಳೆಯಬ್ಯಾಡಿರೊ, ಶ್ರೀ ಹರಿಯ ಸಂಕೀರ್ತನೆಯ ಮರೆಯಬ್ಯಾಡಿರೊ" (ಕೀ.೩೪೨) ಎನ್ನುತ್ತಾರೆ. ಇನ್ನೊಂದೆಡೆ, "ಸ್ಥಿರವಲ್ಲೀ ಕಾಯ ಸ್ಥಿರವಲ್ಲ ಹೀಗರಿವಿದ್ದು ಹರಿಪಾದ ಮರೆವರೆ ಪ್ರಾಣಿ" ಎಂದು ಕೇಳುತ್ತಾರೆ. ಮುಂದುವರಿದು ಹೇಳುತ್ತಾರೆ:

ಹರಿ ಕೊಟ್ಟಾಗಲೆ ಧರ್ಮ ದೊರಕಿಸಬೇಕು
ಸರಕಿದ್ದು ತಿರುಕ ಬುದ್ಧಿಯನು ಬಿಡು
ಅರಿವುಳ್ಳವರ ಕೂಡಿ ಕೋಟೆ ಜತನ ಮಾಡು
ಮರುಗಲಿ ಬೇಡ ಮುತ್ತಿಗೆ ಬಂತು ಪ್ರಾಣಿ ೩ (ಕೀ. ೩೫೯)

ಹೆಂಡತಿ, ಮಕ್ಕಳು, ಹಣ ಯಾವುದೂ ಸ್ಥಿರವಲ್ಲ, ಅಂತ್ಯಕಾಲಕ್ಕೆ ಇವು ಯಾವುವೂ ನಿನ್ನ ಜೊತೆಗಿರುವುದಿಲ್ಲ ಎಂಬಂಥ ಮಾತುಗಳನ್ನು ಎಲ್ಲ ದಾಸರೂ ಹೇಳುತ್ತಾರಾದರೂ ಹೇಳುವ ರೀತಿಯಲ್ಲಿಯ ಹೊಸತನ ಗಮನಾರ್ಹವಾದುದು. ಮೇಲಿನ ಮಾತುಗಳಲ್ಲಿ ಯುದ್ಧದ ಪ್ರತಿಮೆಯನ್ನು ಬಳಸಿಕೊಳ್ಳಲಾಗಿದೆ. ಕೀ. ೧೯೪ರಲ್ಲಿ ಇದೇ ಪ್ರತಿಮೆ ಇನ್ನಷ್ಟು ಪರಿಣಾಮಕಾರಿಯಾಗಿ ಬಂದಿರುವುದನ್ನು ಗಮನಿಸಬಹುದು.

ಹರಿಭಕ್ತನಲ್ಲದವನನ್ನು ಕುರಿತು "ಅವನೆ ಜೀವಾಂಕಿತ ಪ್ರೇತ ನೋಡಿ ಭುವಿಗೆ ಭಾರನು ಅವನು ಹರಿಹಗೆಯನು"(ಕೀ.೨೯೫) ಎನ್ನುತ್ತಾರೆ. ಮೂರು ನುಡಿಗಳಲ್ಲಿ ಹರಿಭಕ್ತನಲ್ಲದವನ ಲಕ್ಷಣವನ್ನು ಹೇಳುತ್ತ, ಪರೋಕ್ಷವಾಗಿ ಹರಿಭಕ್ತನಾದವನ ಚಿತ್ರವನ್ನು ಕೊಡುತ್ತಾರೆ. ನಿಜವಾದ ಭಕ್ತಿ ಇಲ್ಲದೆ ಇದ್ದಾಗ ಬಾಹ್ಯಾಚರಣೆಗಳಿಂದ ಏನೂ ಉಪಯೋಗವಿಲ್ಲ ಎನ್ನುವುದನ್ನು –

ಹುಡಿಯ ಹೊರಳ್ಯೇನು ಬಡಕೊಂಡರೇನು

ಕಡಲಶಯನನೊಳು ದೃಢ ಭಕ್ತಿ ಇರದೆ ಪ.(ಕೀ.೩೬೮)

ಎಂಬಲ್ಲಿ ವರ್ಣಿಸಿದ್ದಾರೆ. ಸದ್ಗೃಹಿಣಿಯಾದ ಹೆಣ್ಣು ಹೇಗಿರಬೇಕು ಎನ್ನುವುದರ ಚಿತ್ರ ಕೀ.೩೦೦ರಲ್ಲಿದೆ. ಉಳಿದಂತೆ ಸಮಕಾಲೀನ ಸಮಾಜಜೀವನದ ಹೊಳಹುಗಳು ಅಲ್ಲಲ್ಲಿ ಸಂದರ್ಭೋಚಿತವಾಗಿ ಎಡೆಪಡೆದಿವೆ. ಸಮಾಜದ ಡೊಂಕನ್ನು ತಿದ್ದುವಂಥದು ಅಥವಾ ಸಮಾಜದ ನಡೆನುಡಿಗಳ ವಿಮರ್ಶೆ ಇವರಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲವಾದರೂ, ಅಂಥ ಕೀರ್ತನೆಗಳು ಅಲ್ಲೊಂದು ಇಲ್ಲೊಂದು ಕಾಣಸಿಕ್ಕುತ್ತವೆ. ಉದಾಗೆ. ಕೀ.೩೮೯ನ್ನೇ ಗಮನಿಸಬಹುದು. ಅದರಲ್ಲಿ ಪರಸ್ತ್ರೀ ವ್ಯಾಮೋಹಕ್ಕೆ ದೊರೆಯುವ ಶಿಕ್ಷೆಯನ್ನು ವರ್ಣಿಸುವ ಮೂಲಕ ಅದು ಸಲ್ಲದು ಎಂದು ಉಪದೇಶಿಸಿದ್ದಾರೆ.

ಮೇಲೆ ವಿವರಿಸಿದ ಅಂತರಂಗ ಚಿತ್ರಣ, ದೇವದೇವತೆಗಳ ಸ್ತುತಿ, ಪ್ರಾರ್ಥನೆ, ಮತಪರವಾದ ಕೀರ್ತನೆಗಳನ್ನು ಬಿಟ್ಟರೆ ಕೃಷ್ಣನ ಬದುಕಿಗೆ ಸಂಬಂಧಿಸಿದಂತೆ ಕೆಲವೊಂದು ಸಂದರ್ಭಗಳನ್ನು ಕುರಿತು ಇವರು ರಚಿಸಿರುವ ಕೀರ್ತನೆಗಳು ಸಾಕಷ್ಟಿವೆ. ೧೩ ನುಡಿಗಳಲ್ಲಿರುವ ಕೃಷ್ಣರುಕ್ಮಿಣಿಯರನ್ನು ಹಸೆಗೆ ಕರೆಯುವ ಕೀರ್ತನೆ (ಕೀ. ೪೪೪), ೧೪ ನುಡಿಗಳಲ್ಲಿ ಕೃಷ್ಣನ ತೈಲಾಭ್ಯಂಜನವನ್ನು ವರ್ಣಿಸುವ ಕೀರ್ತನೆ (ಕೀ. ೪೪೫), ಉದಯಗೀತೆಗಳು (ಕೀ.೪೨೬,ಕೀ.೪೨೭, ಕೀ.೪೨೮ ಇತ್ಯಾದಿ), ಕೃಷ್ಣ ಸತ್ಯಭಾಮೆಯರ ಸಂಭಾಷಣೆ (ಕೀ.೨೦)ಕೃಷ್ಣನನ್ನೊಲಿಸಿದ ಬುದ್ಧಿ, ಧೃತಿ ಎಂಬ ನಾರಿಯರ ಸಂಭಾಷಣೆ (ಕೀ.೨೩), ಹೀಗೆಯೇ ಪ್ರಶ್ನೋತ್ತರದ ಧಾಟಿಯಲ್ಲಿ ದಶಾವತಾರಗಳನ್ನು ವರ್ಣಿಸುವ ಕೀ. ೯೬, ಅಧ್ಯಾತ್ಮಪರವಾದ ಹೋಳಿಹಬ್ಬದ ವರ್ಣನೆ (ಕೀ. ೩೯೧) – ಮೊದಲಾದವು ಇವರ ಕೀರ್ತನೆಗಳಿಗೆ ವೈವಿಧ್ಯವನ್ನು ತಂದುಕೊಟ್ಟಿವೆ.

ಕೀ. ೪೨೬, ಕೀ. ೪೨೮–ಈ ಎರಡು ಕೀರ್ತನೆಗಳು ಷಟ್ಪದಿಯಲ್ಲಿದ್ದು ಕೃಷ್ಣನನ್ನು ಕುರಿತ ಉತ್ತಮ ಉದಯಗೀತೆಗಳಾಗಿವೆ. ಕೀ. ೨೦ ಹಾಗೂ ಕೀ.೨೩ ತಮ್ಮೊಳಗಿನ ಚುರುಕಿನ ನಾಟಕೀಯತೆಯಿಂದ ಗಮನ ಸೆಳೆಯುತ್ತವೆ.

ಒಂದು ಉದಾ :

ಸೋಮಕ ಖಳನ ಕೊಂದು ನೇಮದಿ ವೇದವ ತಂದ
ಆ ಮತ್ಸ್ಯಾವತಾರ ಬಂದೆನೆ ಮತ್ಸ್ಯನಾದರೆ
ಆ ಮಹಾಂಬುಧಿಗೆ ಹೋಗಯ್ಯ (ಕೀ.೨೦, ನು.೨)

ಇದೇ ರೀತಿಯಲ್ಲಿ ದಶಾವತಾರಗಳನ್ನೂ ವರ್ಣಿಸಲಾಗಿದೆ. ಕೊನೆಯಲ್ಲಿ ಸತ್ಯಭಾಮೆಯ ಕೋಪ ತಗ್ಗಿ ಕೃಷ್ಣನ ಪಾದಪಲ್ಲವಕ್ಕೆರಗುತ್ತಾಳೆ. ಇದೇ ಬಗೆಯ ಒಂದು ಕೀರ್ತನೆ ವಾದಿರಾಜರಲ್ಲೂ ಇದೆ. (ವಾದಿರಾಜರ ಕೃತಿಗಳು, ಕೀ.೭೯) ಫಾಲ್ಗುಣ ಪೌರ್ಣಿಮೆಯಂದು ಆಚರಿಸುವ ಹೋಳಿ ಹಬ್ಬದ ವಿವರಗಳನ್ನು ಅಧ್ಯಾತ್ಮಪರವಾಗಿ ವರ್ಣಿಸುವ ಕೀ.೨೯೧ (೨೯ ನುಡಿಗಳು) ಕೂಡ ತನ್ನ ಹೊಸತನದಿಂದ ಗಮನ ಸೆಳೆಯುತ್ತದೆ. ದಾಸರು ಇದೇ ಬಗೆಯ ತಂತ್ರವನ್ನು "ಭೇದಮುಕ್ತಾವಲಿ"(ಕೀ.೩೮೨)ಯಲ್ಲಿ ಬಳಸಿಕೊಂಡಿರುವುದನ್ನು ನೆನೆಯಬಹುದು. ಇದರ ವರ್ಣನಾರೀತಿಗೆ ಒಂದು ಉದಾ.ಯನ್ನು ಗಮನಿಸಬಹುದು.

ದ್ವಂದ್ವವೆ ವಸಂತದ ಹಬ್ಬ
ದ್ವಂದ್ವವೆ ಇಹಪರದಲ್ಲಿ ಹಬ್ಬ ಪ.

ಭಕ್ತೆಂಬೊ ಪುರದಲ್ಲಿ ಒಂಬತ್ತು ಬೀದಿ ವಿ
ರಕ್ತಿ ರಂಹಸ ಬ್ರಹ್ಮದಾರಿಯ ಐದಿ
ವ್ಯಕ್ತವಾಗುವ ವಸ್ತು ಓದಿಕೆ ಓದಿ
ರಿಕ್ತದ ನುಡಿಗಳು ತಮಸಿನ ಹಾದಿ ೫ (ಕೀ. ೨೯೧)

ಪ್ರಹೇಳಿಕೆಗಳ ಮೂಲಕ ಹರಿಯನ್ನು ವರ್ಣಿಸುವ ಕೀರ್ತನೆಗಳೂ ಇವೆ. (ಕೀ.೨೧,೨೫). ಜಾನಪದ ಧಾಟಿಗಳನ್ನೂ ಇವರು ತಮ್ಮ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ. ಉದಾಗೆ, ಕೀ.೯೩೯೩,೩೯೦,೪೪೭ ಇತ್ಯಾದಿ. ಒಟ್ಟಿನಲ್ಲಿ ದಾಸರ ಕೀರ್ತನೆಗಳು ವೈವಿಧ್ಯಪೂರ್ಣವಾಗಿದ್ದು ತಮ್ಮ ಸೃಷ್ಟಿಯ ಉದ್ದೇಶವನ್ನು ಈಡೇರಿಸಿವೆ ಎನ್ನಬಹುದು. ಇವರ ಶೈಲಿಯಲ್ಲಿ ಪಾಂಡಿತ್ಯಪೂರ್ಣತೆ, ಸರಳತೆ,

ಎರಡನ್ನೂ ಗಮನಿಸಬಹುದು. ಸಂಸ್ಕೃತ ಭಾಷೆಯಲ್ಲೂ ಇವರಿಗೆ ಪರಿಣತಿ ಇದ್ದು ಆ ಭಾಷೆಯಲ್ಲೂ ಇವರು ಕೃತಿಗಳನ್ನು ರಚಿಸಿರಬಹುದೆನ್ನುವುದಕ್ಕೆ "ಸಮಸ್ತ ನಾಮ ಮಣಿಗಣ ಷಟ್ಚರಣ ಪದ್ಯಮಾಲಾ"ದಂಥ ಸಂಸ್ಕೃತ ಭೂಯಿಷ್ಠ ದೀರ್ಘಕೃತಿಯೂ, ಈ ಬಗೆಯ ಅನೇಕ ಕೀರ್ತನೆಗಳೂ ಸಮರ್ಥನೆ ನೀಡುತ್ತವೆ. ಪ್ರಾಸಾನುಪ್ರಾಸ ಯಮಕಾದಿ ಶಬ್ದಾಲಂಕಾರಗಳನ್ನೂ, ಉಪಮೆ ರೂಪಕಾದಿ ಅರ್ಥಾಲಂಕಾರಗಳನ್ನೂ ಇವರು ಬಳಸುತ್ತಾರೆ. ಇವರ ಕೀರ್ತನೆಗಳಲ್ಲಿ ಬರುವ ಪ್ರಾಸಾನುಪ್ರಾಸಗಳ ವೈಖರಿಗೆ ಒಂದು ಉದಾ:

ವನಜಾಕ್ಷಾವನಿಜಾಂತಕ ವನಜಾಸನ ಜನಕ
ಕನಕಾಕ್ಷಹ ಕನಕಾಲಯ ಕನಕಸ್ತ್ರೀಪ್ರಿಯ
ವನಭ್ರಮಣಾವನಿರಮಣ ವಿನತಾತ್ಮಜ ಗಮನ
ಅನಿಮಿತ್ತಜ ಅನಸೂಯಜ ಅನಿಮಿಷೇಂದ್ರಾನುಜ

(ಕೀ.೮೯, ನು.೨)

ಆದಿಪ್ರಾಸ, ಅನುಪ್ರಾಸಗಳಂತೆ ಅಂತ್ಯಪ್ರಾಸವೂ ಅನೇಕ ಕಡೆಗಳಲ್ಲಿ ಬಳಕೆಯಾಗಿದೆ.

ಉಪಮೆ ರೂಪಕಗಳನ್ನು, ಪರಿಣಾಮಕಾರಿಯಾಗಿ ಬಳಸುವಲ್ಲಿಯೂ ಪ್ರಸನ್ನವೆಂಕಟದಾಸರು ಸಿದ್ಧಹಸ್ತರು.

ಹಸಿದು ಮಳಲ ಮೆದ್ದವನಂತೆ ಕಂಗೆಟ್ಟು
ತೃಷೆಯಾಗಿ ಬಿಸಿಲ್ದೊರೆಗೋಡುವನಂತೆ
ವಿಷಮ ಮಾನಿಸರನುಸರಿಸುವುದುಚಿತಲ್ಲ
ಬಿಸಜದೇವಿಯರಸ ಸುದಾಮಘ ಭಂಗ (ಕೀ.೨೪೯, ನು.೨)

ಇನ್ನೊಂದೆಡೆ "ಮದ್ದುಂಡಿಲಿಯ ಪರಿ ಬಳಲುವೆನೆನ್ನ, ಉದ್ಧರಿಸು ಪ್ರಸನ್ನ ವೆಂಕಟ ರನ್ನ" ಎಂದು ಪ್ರಾರ್ಥಿಸುತ್ತಾರೆ. ಉದಾಹರಿಸಿರುವ ಮೂರೂ ಉಪಮೆಗಳು ಆಯಾ ಕೀರ್ತನೆಯ ಆರ್ತಭಾವವನ್ನು ತುಂಬ ಶಕ್ತವಾಗಿ ವ್ಯಂಜಿಸುತ್ತಿರುವುದನ್ನು ಗುರುತಿಸಬಹುದಾಗಿದೆ.

ಆರ್ತಭಾವವನ್ನೇ ತುಂಬಿಕೊಂಡ ಮತ್ತೊಂದು ಕೃತಿ ಕೀ. ೧೯೫. ಇದರಲ್ಲಿ ಘೋರಾರಣ್ಯದ ರೂಪಕದಲ್ಲಿ ಭವದ ಕಷ್ಟಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸಲಾಗಿದೆ. ಉದಾ.ಗೆ ಕೀ.೧೯೫ರ ಕೆಲವು ಸಾಲುಗಳನ್ನು ಗಮನಿಸಬಹುದು.

ಆರೆನ್ನ ಉಳುಹುವರ್‍ೈ ರಂಗ
ಘೋರಾರಣ್ಯಭವದಿ ಸಿಕ್ಕಿದೆ ರಂಗ ಪ.

ಎಂಟು ಕಾಡಾನೆ ಎಂಟುಕಡೆಯಲಿ ನಿಂತಿವೆ
ಗಂಟನಿಕ್ಕಿವೆ ಮೂರು ದಳ್ಳುರಿಯ
ಸುಂಟರಗಾಳ್ಯೆಬ್ಬರಿಸಲು ಗಿಡ
ಗಂಟಿಲಿ ಬಿದ್ದೆ ನೀನಲ್ಲದೆನ್ನ ೧

ಇದೇ ಧಾಟಿಯಲ್ಲಿ ಮುಂದಿನ ಎರಡು ನುಡಿಗಳೂ ಬರುತ್ತವೆ. ಹೀಗೆಯೇ "ಹರಿಹರಿಯೆ ಕಡೆಗಾಣೆನ್ನೈ ಜನುಮವ ಭವ, ಕಡಲ ತಡಿಯ ಸೇರಿಸು ಮಾಧವ," ಎಂದು ಆರಂಭವಾಗುವ ಕೀ. ೨೮೮ ರಲ್ಲಿ ಸಂಸಾರವನ್ನು ಕಡಲಿಗೆ ಹೋಲಿಸಿರುವ ವರ್ಣನೆ ಕೂಡ ಶಕ್ತವಾಗಿ ಬಂದಿದೆ.

ದಾಸರು ತಮ್ಮ ಕೀರ್ತನೆಗಳಲ್ಲಿ ಬಳಸಿರುವ ಉಪಮೆ ರೂಪಕಗಳನ್ನು ಗಮನಿಸುತ್ತಾ ನಡೆದಂತೆ ಅವರ ಕಲ್ಪನಾಶಕ್ತಿಯ ಎತ್ತರ ಬಿತ್ತರಗಳ ಅರಿವಾಗುತ್ತದೆ. ಅವರ ಅನುಭವ ಸಂಪತ್ತು, ಶಬ್ದಸಂಪತ್ತು ಅಸಾಧಾರಣವಾದವು. ಇವರು ಸಂದರ್ಭಕ್ಕನುಗುಣವಾದ ಭಾಷೆಯನ್ನು ಬಳಸಬಲ್ಲವರಾಗಿದ್ದರು. ಶಿಷ್ಟವಾದ, ಪ್ರೌಢವಾದ ಭಾಷೆಯನ್ನು ಬಳಸುವಷ್ಟೇ ಸಮರ್ಥವಾಗಿ ಆಡುನುಡಿಯ ಸರಳತೆಯನ್ನೂ ತರುತ್ತಿದ್ದರು ಎನ್ನುವುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಈ ಮೊದಲೇ ಉದಾಹರಿಸಿರುವ ವಾತ್ಸಲ್ಯ ಭಾವದ ಕೀರ್ತನೆ ಕೀ.೪೪. ಬಾಲಕೃಷ್ಣ ತನ್ನ ತಾಯಿಯೊಡನೆ ಬಾಲಭಾಷೆಯಲ್ಲೇ ಮಾತನಾಡಿದಂತಿರುವ ಇಲ್ಲಿಯ ಮಾತುಗಳಲ್ಲಿಯ ಸಹಜತೆಯನ್ನೂ ಔಚಿತ್ಯವನ್ನೂ ಮತ್ತೆ ವಿವರಿಸಬೇಕಾಗಿಲ್ಲ. "ನಾರದ ಕೊರವಂಜಿ"ಯಲ್ಲಿ ಕೊರವಂಜಿ ಕನ್ನಡದ

ಜೊತೆಗೆ ತಮಿಳಿನಲ್ಲೂ ಮಾತನಾಡುತ್ತಾಳೆ. ದ್ರಾವಿಡ ಮೂಲದವಳಾದ ಕೊರವಂಜಿ ಈ ಭಾಷೆಗಳನ್ನು ಬಳಸುವುದು ಸಹಜವಾಗಿದೆ. ಇದರಿಂದ ದಾಸರಿಗೆ ಕನ್ನಡ, ಸಂಸ್ಕೃತಗಳ ಜೊತೆಗೆ ತಮಿಳು ಭಾಷೆಯೂ ತಿಳಿದಿತ್ತು ಎಂದು ತಿಳಿಯಲು ಅವಕಾಶವಿದೆ. ಕುನ್ನಿ ಕಚ್ಚಿದರಾನೆ ಅಳುಕುವುದೆ?(ಕೀ.೨೪೯,ನು.೧) ಹಂಚಿನೆದುರಲಿ ಹಲ್ಲು ತೆರೆದರೆ ಮಿಂಚು ಕನ್ನಡಿಯಾಗಬಲ್ಲದೆ (ಕೀ. ೨೭೦)ಮುಂತಾದ ಗಾದೆ ಮಾತುಗಳೂ, "ಕೈಯಕಡ್ಡಿ ಕೊಟ್ಟೆ" (ಕೀ. ೪೧),"ಒಮ್ಯಾರೆ" ಇಂಥ ವಿಶೇಷ ಭಾಷಾ ಪ್ರಯೋಗಗಳೂ ಇಲ್ಲಿ ಕಾಣಿಸಿಕೊಂಡಿವೆ.

ಇವರ ಕೃತಿಗಳ ಮೇಲೆ ಹಿಂದಿನ ದಾಸರ ಪ್ರಭಾವ ಸಾಕಷ್ಟಾಗಿದೆ. ಎಷ್ಟೋ ಕೀರ್ತನೆಗಳ ಆರಂಭದಲ್ಲೇ ಸಾದೃಶ್ಯವಿರುವುದು ಗೋಚರವಾಗುತ್ತದೆ. ಇವರ "ದೇವಿಯನೆತ್ತಿದನಾರೆಲಮ್ಮಾ ನಮ್ಮದೇವ ಸಿರಿಪತಿ ಕಾಣೆಲಮ್ಮಾ, ದೇವಿ ನಮ್ಮ ದೇವರು ಬಂದರು ಕಾಣಮ್ಮ"(ಕೀ. ೯೬) ಎಂಬ ಕೀರ್ತನೆ, "ಕನಕದಾಸರ ದೇವಿ ನಮ್ಮ ದ್ಯಾವರು ಬಂದರು ಬನ್ನಿರೆ ನೋಡ ಬನ್ನಿರೆ" ಎಂಬ ಕೀರ್ತನೆಯನ್ನು ಬಹುಮಟ್ಟಿಗೆ ಹೋಲುತ್ತದೆ. "ಈಗಲೋ ಇನ್ನಾವಾಗಲೋ ಈ ತನುವು ಪೋಗದಿರದು ಭೋಗದಾಸೆಯ ಬಿಡಿಸಯ್ಯ ನಾಗಶಯನ ನಳಿನ ನಯನ" (ಕೀ.೨೧) ಎಂಬ ವಾದಿರಾಜರ ಕೀರ್ತನೆಯ ಪ್ರಾರಂಭಕ್ಕೂ, ಪ್ರಸನ್ನವೆಂಕಟರ "ಈಗಾಗೋ ಇನ್ನಾವಾಗೋ ಈ ಗಾತ್ರ ಅಸ್ಥಿರವಣ್ಣ, ಹೇಗಾದರು ಹೊಗಳಾಡಲಿ ಬೇಕು ನಾಗಾರಿಗಮನನ್ನ" ಎಂಬ ಕೀರ್ತನೆಗೂ ಇರುವ ಸಾಮ್ಯವನ್ನೂ ಗಮನಿಸಬಹುದು. ಹೀಗೆಯೇ ವಾದಿರಾಜರ ಇನ್ನೊಂದು ಕೀರ್ತನೆ "ನಾಗಶಯನನು ನಿನಗಾಗಿಯೆ ಬಂದಿಹೆ ಬಾಗಿಲ ತೆಗೆಯೆ ಭಾಮೆ(ಕೀ.೭೯) ಎಂಬುದಕ್ಕೂ, ಪ್ರಸನ್ನವೆಂಕಟರ "ಬಂದೆನೇಳೆ ಗೋವಿಂದ ನಾ ಇಂದುಮುಖಿ ನಿದ್ರೆ ಬಿಟ್ಟು ಬಂದು ನೀ ಬಾಗಿಲ ತೆಗೆಯೆ" (ಕೀ.೨೦) ಎನ್ನುವುದಕ್ಕೂ ಇರುವ ಹೋಲಿಕೆ ಗಮನಾರ್ಹವಾದುದು.

ಇಂಥ ಹಲವು ಸಾಮ್ಯಗಳನ್ನು ಕೀರ್ತನೆಗಳ ಧಾಟಿ, ಧೋರಣೆ ನಿರೂಪಣೆಗಳಲ್ಲಿ ಹಿಂದಿನ ದಾಸಸಾಹಿತ್ಯದ ಪ್ರಭಾವವನ್ನು ಇವರ ಕೃತಿಗಳಲ್ಲಿ

ಗುರುತಿಸ ಬಹುದಾದರೂ;ಅವರದೇ ಬದುಕಿನ ಹಿನ್ನೆಲೆಯಿಂದ ಪಾಂಡಿತ್ಯ ಪ್ರತಿಭೆಗಳಿಂದ ಸೃಷ್ಟಿಗೊಂಡ, ವ್ಯಕ್ತಿ ವಿಶಿಷ್ಟವಾದ ಛಾಪನ್ನುಳ್ಳ ಕೃತಿಗಳೂ ಸಾಕಷ್ಟಿವೆ. ಇವರ ದೀರ್ಘಕೃತಿಗಳನ್ನು ಗಮನಿಸಿದರೆ "ನಾರದ ಕೊರವಂಜಿ"ಯನ್ನು ಕುರಿತು ವಾದಿರಾಜರು ಬರೆದಿದ್ದಾರೆ. "ಸತ್ಯಭಾಮಾವಿಲಾಸ"ದ ವಸ್ತುವನ್ನು ಆರಿಸಿಕೊಂಡು ಗಿರಿಯಮ್ಮ ಒಂದು ಹಾಡನ್ನು ಬರೆದಿದ್ದಾಳೆ. ಅವರ ಕೃತಿಗಳನ್ನು ಪ್ರಸನ್ನವೆಂಕಟರು ನೋಡಿದ್ದರು ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಅಲ್ಲದೆ ವಸ್ತು ಒಂದೇ ಇದ್ದರೂ ಆ ಕೃತಿಗಳಿಗೂ ಪ್ರಸನ್ನವೆಂಕಟರ ಕೃತಿಗಳಿಗೂ ಭಾಷೆ, ನಿರೂಪಣೆಗಳಲ್ಲಿ ತುಂಬ ವ್ಯತ್ಯಾಸವಿದೆ. ಉಳಿದ ನಾಲ್ಕು ದೀರ್ಘಕೃತಿಗಳ ವಸ್ತುಗಳೂ ಹೊಸದಾಗಿದ್ದು ಇವುಗಳ ಆಯ್ಕೆ, ನಿರ್ವಹಣೆಗಳಲ್ಲಿ ಇವರದೇ ಆದ ಪ್ರತಿಭೆ, ಪಾಂಡಿತ್ಯಗಳ ಮುದ್ರೆಯಿದೆ.

ಇವರ ಸಾಹಿತ್ಯವನ್ನು ಕುರಿತು, "ಇವರು ತಮ್ಮ ಹಾಡುಗಳಲ್ಲಿ ಶ್ರೀ ಪುರಂದರ ದಾಸರಾಯರ ಸರಣಿಯನ್ನು ಅನುಸರಿಸಿದ್ದಾರೆ. ಭಾಷೆ ಹೊಸದಾದರೂ ವಿವಿಧ ವೃತ್ತ, ಬಂಧ, ಅಲಂಕಾರ-ರಸಗಳಿಂದ ಪಂಡಿತರನ್ನೂ ಬೆರಗುಗೊಳಿಸುವಷ್ಟು ಬಂಧುರವೂ ಬಿಗುವುಳ್ಳದ್ದೂ ಆಗಿದೆ."[೧] ಎಂಬ ಅಭಿಪ್ರಾಯವಿದೆ. ಇವರು ಪುರಂದರಮಾರ್ಗವನ್ನೇ ಅನುಸರಿಸಿದ್ದರೂ ಇವರ ಕೃತಿಗಳು ಪುರಂದರರ ಕೃತಿಗಳ ಮಟ್ಟದಲ್ಲಿವೆ ಎಂದು ಹೇಳುವುದು ಕಷ್ಟವಾಗುತ್ತದೆ. ಆದರೆ ಹರಿಭಕ್ತರೂ, ದ್ವೈತಮತದಲ್ಲಿ ಅಪ್ರತಿಮ ನಿಷ್ಠೆಯುಳ್ಳವರೂ, ಪಂಡಿತರೂ, ಜ್ಞಾನಿಗಳೂ ಆಗಿದ್ದ ಪ್ರಸನ್ನವೆಂಕಟರು ಹರಿದಾಸ ಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಬಂದ ಒಬ್ಬ ಪ್ರಮುಖ ದಾಸರು, ತಮ್ಮ ಅಸಾಧಾರಣ ವ್ಯಕ್ತಿತ್ವ ಮತ್ತು ಕೃತಿಗಳಿಂದ ಅವಿಸ್ಮರಣೀಯರು ಎಂದು ಮಾತ್ರ ಹೇಳಬಹುದಾಗಿದೆ.

---

೧. ಆರ್.ಎಸ್.ಪಂಚಮುಖಿ, ಕರ್ನಾಟಕದ ಹರಿದಾಸ ಸಾಹಿತ್ಯ, ೧೯೫೨, ಪು. ೨೦೯.

ಇಲ್ಲಿ ಕೊಟ್ಟಿರುವ ಪ್ರಸನ್ನ ವೆಂಕಟದಾಸರ ಕೀರ್ತನೆಗಳನ್ನು ಸು. ೭೫ ಆಕರಗಳ ಸಹಾಯದಿಂದ ಸಂಪಾದಿಸಲಾಗಿದೆ. ತಮ್ಮಲ್ಲಿದ್ದ ಎಲ್ಲ ಹಸ್ತಪ್ರತಿಗಳನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಿಗೆ, ಕನ್ನಡಿಗರಿಗೆಲ್ಲ ತುಂಬ ಉಪಯುಕ್ತವಾಗಬಲ್ಲ ಈ ಯೋಜನೆಯನ್ನು ಹಮ್ಮಿಕೊಂಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಅವರಿಗೆ, ಹಾಗೂ ನನಗೆ ಈ ಕೆಲಸವನ್ನು ವಹಿಸಿ, ನನ್ನಿಂದ ಈ ಕೆಲಸ ಸಾಧ್ಯವಾಗಿಸಿದ ಯೋಜನೆಯ ನಿರ್ವಾಹಕ ಸಂಪಾದಕರಲ್ಲೊಬ್ಬರಾದ ಡಾ. ಟಿ. ಎನ್. ನಾಗರತ್ನ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಟಿ.ಕೆ. ಇಂದುಬಾಯಿ

ಕೀರ್ತನೆಗಳ ಕ್ರಮಸೂಚಿ

(ಇ) ವಾತ್ಸಲ್ಯಭಾವ

(ಆ) ದಾಸಸ್ತುತಿ

೩. ಆತ್ಮನಿವೇದನೆ

೫. ತತ್ವವಿವೇಚನೆ

೬. (ಅ) ಸಂಪ್ರದಾಯದ ಹಾಡುಗಳು

(ಆ) ಇತರ ಹಾಡುಗಳು

ಅನುಬಂಧ–೧

ಕಠಿಣ ಶಬ್ದಗಳ ಅರ್ಥ

ಅಂಕುರ – ಮೊಳಕೆ
ಅಂಗಾರ – ಮಾಧ್ವರು ಹಣೆಯಲ್ಲಿ ಧರಿಸುವ ಇದ್ದಲಿನ ರೇಖೆ
ಅಂಘ್ರಿ – ಕಾಲು, ಹೆಜ್ಜೆ
ಅಂಜನೆ – ಆಂಜನೇಯನ ತಾಯಿ
ಅಂತಕ – ಯಮ
ಅಂತ್ಯಜ – ಶೂದ್ರ
ಅಂಬಕ – ಕಣ್ಣು, ತಂದೆ
ಅಂಬರ – ಬಟ್ಟೆ, ಆಕಾಶ
ಅಂಬರಾಂಬರ – ದಿಗಂಬರ, ಬೌದ್ಧಾವತಾರ
ಅಂಬು – ನೀರು
ಅಗ – ಬೆಟ್ಟ
ಅಗರು – ಒಂದು ಜಾತಿಯ ಸುಗಂಧದ ಮರ
ಅಘ – ಪಾಪ
ಅಜಾಂಡ – ಬ್ರಹ್ಮಾಂಡ
ಅಣುಗಂಟೆ – ಕಿರುಗಂಟೆ
ಅತೀತ – ಕಳೆದು ಹೋದ
ಅಧರ – ತುಟಿ
ಅಧೋಕ್ಷಜ – ವಿಷ್ಣು
ಅನವದ್ಯ – ನಿಷ್ಕಳಂಕ
ಅನಾಗತ – ಭವಿಷ್ಯ
ಅನಿರುದ್ಧ – ತಡೆಯಿಲ್ಲದ
ಅನುಜ – ತಮ್ಮ
ಅನುಯೋಗ – ಆತ್ಮಧ್ಯಾನ
ಅನ್ವಯ – ವಂಶ
ಅಪ್(ಪು) – ನೀರು
ಅಪತ್ಯ – ಮಗು
ಅಪ್ರಾಕೃತ – ಪ್ರಕೃತಿಯ ಸಂಬಂಧವಿಲ್ಲದ, ದಿವ್ಯ
ಅಬ್ದ – ವರ್ಷ
ಅಭಿಜ್ಞ – ಚೆನ್ನಾಗಿ ತಿಳಿದವನು
ಅಭಿಧಾನ – ಹೆಸರು
ಅಭ್ರ – ಮೋಡ,ಆಕಾಶ
ಅಮ್ಮಿ – ಮೊಲೆ
ಅಯನ – ಚಲಿಸುವುದು
ಅರ – ಚಕ್ರನೇಮಿ
ಅರಳು – ಹೂ
ಅರಿ – ಚಕ್ರ, ಶತ್ರು
ಅರೆ – ಕಲ್ಲು, ಬಂಡೆ
ಅರ್ದನ – ಕೊಲ್ಲು
ಅರ್ದಿಸು – ಅಡಗಿಸು
ಅರ್ಭಕ – ಸಣ್ಣ ಹುಡುಗ
ಅಲಂ – ಯೋಗ್ಯ

ದೇವತಾಸ್ತುತಿ

ಶ್ರೀಹರಿ

(ಅ) ಸಖ್ಯಭಾವ

೧

ಏನು ಕಾರಣ ಮರೆತೆ ಎಲೆ ಉಡುಪಿನಿಲಯ ಪ.

ಆನೊಬ್ಬ ಜಗಕೊಡೆಯನೆಂಬಹಂಕಾರವೊ ಅ.ಪ.

ಶ್ರೀದೇವಿ ಮಡದಿ ಕಮಲೋದ್ಭವನು ಮಗನು ಉ
ಮಾದೇವೀಧವ ಪೌತ್ರ ಸಾಸಿರಫಣ
ಮೋದ ಹಾಸಿಗೆಯೆಂಬಾ ಪೊನ್ನಬಣ್ಣದ ಹಕ್ಕಿ
ಆದಿವಾಹನ ದನವ ಕಾಯ್ದುದನು ಮರೆತು ೧

ಕ್ಷೇಮಾಮೃತಾಭಯದ ಧಾಮತ್ರಯ ಉಂಟೆಂದು
ಹೇಮಗರ್ಭಾಂಡ ಕೋಟಿ ಕೋಟಿಗಳು ಎನ್ನ
ರೋಮಕೂಪಗಳಲ್ಲಿ ವೈಮಾನಿಕ ಭಟರು
ಸ್ವಾಮಿ ನಾನೆಂದೆಶೋದೆಯ ಧಾಮ ಮರೆತು ೨

ದಿನಕೆ ಕೋಟ್ಯಾಭರಣವಿಟ್ಟು ಪೂಜಿಪ ಮೌನಿ
ಗಣದ ಸೊಬಗಿನ ಸಿರಿಯೊ ಮದನನಯ್ಯ
ಇನಶಶಿಗಳನಂತ ಪ್ರಭೆ ಗೆಲುವ ಮೈಬಣ್ಣ
ಘನತೆಯು ಬೆರತ್ಯಜ್ಞ ಬೀಡುಗಳ ಮರೆತು ೩

ಮುದ್ದಿಗೆಣೆಯಿಲ್ಲೆನಗೆ ಶುದ್ಧ ಭಾವೀ ವಿಧಿ
ಮಧ್ವಮುನಿ ಪೂಜಿಸುವ ಉದ್ಧಟದ ಸಿರಿಯೊ
ಹೊದ್ದಿ ಇದಿರಿಲ್ಲೆಂಬ ಬುದ್ಧಿಯಲಿ ಮಾರ್ಮಲೆತು
ಕದ್ದು ಬೆಣ್ಣೆಯ ಮೆದ್ದ ಸುದ್ದಿಯನು ಮರೆತು ೪

ಹೋದ ಶ್ರುತಿತಂದಮೃತ ಉಣಿಸಿ ಸುರರಿಗೆ ಖಳನ
ತೀಡಿ ಶಿಶುವನು ಪೊರೆದೆ ಗರ್ವದಿಂದ
ಭೂದೇವಿಯನ್ನಳೆದೆ ಖಳರೊದ್ದೆ ಅರಸಾದೆ
ನೀ ದೇವಿಯ ಧರಿಸಿ ಶಿರಿ ಪ್ರಸನ್ವೆಂಕಟೆನ್ನ ತುತಿ ಕೇಳದೆ ೫

೨

ತಲ್ಲಿಕಾರರು ನಿನ್ನ ಬಂಟರು ರಂಗ
ನಿಲ್ಲಲೀಸರು ಸಂಸಾರಿಗಳನು ಕೃಷ್ಣ ಪ.

ಮಳ್ಳಿದರಾಗಿ ಮಾತಾಡಿ ಬಲುಂಡುಟ್ಟು
ಇಲ್ಲದ ತಪ್ಪನೆಣಿಸಿ ಹೊರಿಸಿ
ಸುಳ್ಳುಕಳವು ಹಾದರದ ಪಾಪ ಭವ
ಬಳ್ಳಿಯ ಹರಿದು ಮೊಳೆಯನೊತ್ತಗೊಡರು ೧

ಕಾಂಚನವಿಡಿದು ಕಕ್ಕಸಬಟ್ಟು ಪೂರ್ವದ
ಸಂಚಿತದಿ ನರಪಶುಗ್ರಾಸದ
ಮುಂಚುವ ಬಣವೆಗೆ ಕಿಚ್ಚಿಕ್ಕಿ ಹುಡಿದೂರಿ
ಪಂಚಾನನಂತೆ ಖೋ ಇಟ್ಟು ಕೂಗುವರು ೨

ಇದಿರೆದ್ದು ಕರೆದು ಮನ್ನಿಸಿ ಪೂಜಿಸಿ
ಪಾದೋದಕ ಪ್ರೋಕ್ಷಿಸಿಕೊಂಡು ಮರೆಹೊಕ್ಕರೆ
ಬದಿಯ ಸಂಪದ ಬಂದ ಕಬ್ಬು ಬಾಳೆ ನೆಲ್ಲು
ಗದ್ದೆಯ ಸಂಹರಿಸುವರುಪಕಾರಿಗಳು ೩

ಛಲದಿ ಮಂದಿರ ಹೊಕ್ಕು ಹರಿಸೇವೆ ಗೊಂದಣ
ಗಳಲಿ ಬೇಡಿ ಚಾಮುಂಡೆರೋಡಿಸಿ
ಹೊಲ ಮನೆ ಮಧ್ಯದ ಪಾಮರರ ಹಿಡಿ ತಂದು
ಬಲು ಕಾಸಿಸಿ ಮುದ್ರೆಯೊತ್ತದೆ ಬಿಡರು ೪

ಈ ಪರಿ ಭವಸುಖ ಸೂರ್‍ಯಾಡಿ ಎಳೆದೊಯ್ದು
ಶ್ರೀಪದಪುರದಿ ಸೆರೆಯಿಕ್ಕುವರು
ಶ್ರೀಪ್ರಸನ್ವೆಂಕಟಪತಿ ಮುಖ್ಯ ಪ್ರಾಣೇಶ
ಈ ಪುಂಡರಿಗೆ ಹೇಳೊ ಇವರ ಸಾಕೆಂದು ೫

೩

ನಗಲುಬಹುದು ನಗಲುಬಹುದು
ನಗು ನಗು ರಂಗಯ್ಯ
ಜಗದ ಮಾತು ಅಘದ ಧಾತು
ಬಗೆಯನರಿತು ಮುಗಳುನಗೆಯ ಪ.

ಒರೆದು ಒರೆದು ಭಾರತದರ್ಥ
ಅರಿದು ಅರಿದು ವರಭಾಗವತ
ಪರಿಯ ಪರಿಯ ಪುರಾಣಶ್ರುತಿಯ
ಪಾರಾಯಣ ಮಾಡಿ ಕುರುಡ ಬಧಿರ
ನರರ ತೆರದಿ ಅರಹು ಮರಹು
ಬೆರೆತು ಬೆರೆತು ತರತಮಿಲ್ಲದೆ
ಹರಿಹರಜರು ಬೇರೆಬೇರಿಲ್ಲೆಂಬ
ಪರಮಪಾತಕರಿರವ ನೋಡಿ ೧

ಮಕ್ಕಳ ಮಡದೇರಕ್ಕರ ಬಡಿಸಿ
ರೊಕ್ಕದ ಮದದಿ ಸೊಕ್ಕಿ ಸಜ್ಜನರ
ಲೆಕ್ಕಿಸದವಗೆ ರಕ್ಕಸರಂತೆ
ನಿಕ್ಕರ ನುಡಿದು ಕಕ್ಕಸದಿಂದ
ಪುಕ್ಕಟೆ ಪುಣ್ಯದ ಲೆಕ್ಕವ ಕಳೆದು
ಘಕ್ಕನೆ ಜವನೋರಿಕ್ಕಿದ ಬಲೆಗೆ
ಸಿಕ್ಕಿ ಬಳಲುತ ನರ್ಕವನುಂಬ
ಮೂರ್ಖರ ತಾಮಸಮುಖ್ಯರ ನೋಡಿ ೨

ಸುಂದೋಪಸುಂದ ಜಲಂಧರ ಕೀಚಕ
ಕಂದರದಶಕ ಸೈಂಧವ ಜಟಾದ್ಯ
ರಂದು ಪರಸ್ತ್ರೀಯ ಸೌಂದರ್ಯಕ್ಕೆ ಮತಿ
ಗುಂದಿ ಲಯವಾದರೆಂದು ಕೇಳಿ
ಇಂದುಮುಖಿಯರ ಚಂದಕೆ ಹುಚ್ಚೆಟ್ಟು
ಕಂದರ್ಪ ವಿಶಿಖವೃಂದ ವಶಾಗಿ ನೂ
ರೊಂದುಕುಲ ಯಮಮಂದಿರ ಹೊಂದಿಪ
ಮಂದರ ಮದೋನ್ಮತ್ತಾಂಧರ ನೋಡಿ ೩

ಸುರರ ಸಂಪದ ಪರಮಪದಕೆ
ಕಾರಣವಾಗಿರೆ ಸುರೇತರರೆಲ್ಲ
ಇರುಳೆ ಹಗಲೆ ಸೈರಿಸಲಾರದೆ
ಒರಗಿಹೋದ ವಿವರ ಕೇಳಿ
ದುರುಳ ಕೌರವರ್ವರ ಪಾಂಡವರ
ಸಿರಿ ತಮ್ಮದೆಂದ್ದುರಿದು ಹೋಗಿರೆ
ಪರರ ದ್ರವ್ಯಕ್ಕೆ ಮರುಗಿ ಬಯಸಿ
ನರರು ಕೆಡುವ ಪರಿಯ ನೋಡಿ ೪

ಪ್ರತಿದಿನ ನಿನ್ನ ಪ್ರತಿಮ ಪೂಜೆ ಸದ್
ವ್ರತವ ಮಾಡಿ ಸತ್ಕಥೆಯ ಶ್ರೀಮಧ್ವ
ಮತ ಮಹಿಮೆಯನತಿಕ್ರಮಿಸಿ ಕು
ತ್ಸಿತವೆನಿಸುವ ಪಥದಲಿ
ಪತಿತರಾಗಿ ಸದ್ಗತಿಯ ಕಾಣದ
ಚತುರ ಪರಿಯ ಅಮಿತ ಭಕ್ಷಕರ
ಸ್ಥಿತಿಯರಿತು ಮಾನಾಥ ಪ್ರಸನ್ವೆಂಕಟ
ಪತಿಯೆ ನೀ ಮಂದಸ್ಮಿತದಲಿ ೫

೪

ಪುಂಡರೀಕದಳ ನಯನ ನಿಮ್ಮ ಕೊಂಡಾಡಲಳವಲ್ಲ
ಪಾಂಡುರಂಗಯ್ಯ ಕೃಷ್ಣರಾಯ ಪ.

ಭೂಮಿಯ ಈರಡಿ ಮಾಡಿ ವ್ಯೋಮಕೊಂದು ಪಾದವನಿತ್ತೆ
ರೋಮ ರೋಮದಲಿ ಬ್ರಹ್ಮರುದ್ರರಿರಲು
ಸ್ವಾಮಿ ನಿಮ್ಮ ಪ್ರೇಮವ ತಾಳಿದಳೆಂದು ನಿಮ್ಮ
ಕೋಮಲಾಂಗಿ ಬಲ್ಲಿದಳೊ ನೀ ಬಲ್ಲಿದನೊ ೧

ಹದಿನಾಲ್ಕು ಲೋಕವು ತನ್ನ ಉದರದೊಳಿಂಬಿಟ್ಟು
ಕೊಂಡು ಸೃಜಿಸಿ ರುಕ್ಮಿಣಿ ತನ್ನ ಕುಚಗಳಲ್ಲಿ
ಚದುರದಿಂದ ಎತ್ತಿ ಕುಣಿದಾಡುವ
ಪದುಮಾಕ್ಷಿ ಬಲ್ಲಿದಳೊ ನೀ ಬಲ್ಲಿದನೊ ೨

ಶೃಂಗಾರ ತೋರುವ ನಿಮ್ಮ ಮಂಗಳದ ಶ್ರೀಪಾದವ
ಹಿಂಗದೆ ಭಜಿಸಲು ಸಂಗತಿಯನಿತ್ತೆಯೊ
ರಂಗ ಪ್ರಸನ್ನವೆಂಕಟಕೃಷ್ಣ ನಿಮ್ಮ
ಸಂಗಸುಖಿ ಬಲ್ಲಿದಳೊ ನೀ ಬಲ್ಲಿದನೊ ೩

೫

ಬಲ್ಲವರು ಮೊರೆ ಹೋಗುವರೆ ನೀನಾವ
ಬಲ್ಲಿದನೆಂದೆನ್ನನುಪೇಕ್ಷಿಪೆ ರಂಗ ಪ.

ಸಲ್ಲದವನು ಸಾಲಗೂಳಿ ನೀ ಎಂದೆನ್ನ
ಕ್ಷುಲ್ಲನ ಮಾಡಿ ನೀಕರಿಸದಿರೊ
ಒಳ್ಳೆ ಸತ್ಯವ್ರತರ ಋಣ ನುಂಗಿ ಸೆರೆಸಿಕ್ಕಿ
ಕಲ್ಲೊತ್ತು ಮಲ್ಗಚ್ಚಿ ಹಲ್ದೆರೆದೆ ನೀನು ೧

ಬೇಡಿ ತಿರಿದು ಉಂಬ ಬಡವ ಛೀ ಸಾರೆಂದೀ
ಡಾಡುವುದುಚಿತೆ ನೀ ನೃಪನೊಂಚಿಸಿ
ಬೇಡಿ ಮನೆಯ ಕೊಂಡೆ ನೀರಿನರಸನಲ್ಲಿ
ರೂಢಿಯ ಗೂಡ ಬಿಟ್ಟೋಡಿದೆ ತುಡುಗ ೨

ನಾ ದೋಷಪೂರ್ಣನೆನುತ ಮನ ಬಲ್ಲದು
ನೀ ದೋಷದೂರನು ಶ್ರುತಿ ಬಲ್ಲವು
ಭೂದೋಷಹರ ಪ್ರಸನ್ವೆಂಕಟೇಶ ತಿಳಿಯದೆ
ನಾ ದಾಸನಾದೆ ನಾಮಸ್ವಾದಕ್ಹುಚ್ಚಾದೆ ೩

೬

ಯಾತರ ಬಲ್ಲತನವೊ ಕೃಷ್ಣಯ್ಯ ನಿನ
ಗ್ಯಾತರ ಬಲ್ಲತನವೊ ಪ.

ಯಾತರ ಬಲ್ಲತನನಾಥರ ನಮ್ಮ ಸ
ನಾಥರ ಮಾಡಿ ಸಂಪ್ರೀತಿಯ ಬಡಿಸದಿನ್ಯಾತರ ೧

ಬಿರುದಂತೆ ಭಕುತರ ಪೊರೆವುದು ಗಡ ನಿನ್ನ
ಸ್ಮರಣೆಗೆ ಮರೆವಿತ್ತು ದುರಿತಕೊಪ್ಪಿಸುವುದಿನ್ಯಾತರ ೨

ಬಲ್ಲತನದ ಗುರುತೆಲ್ಲ ದೇಶದೊಳು ನ
ನ್ನಲ್ಲಿ ಅಜ್ಞಾನದ ಬಳ್ಳಿಯ ತೊಡಕಿಸೂದ್ಯಾತರ ೩

ನಿಜರವಮಾನದ ಕುಜಕೆ ಪರಶುರಾಮ
ತ್ರಿಜಗವಂದಿತ ನಿನ್ನ ಭಜಕರೊಳಿಡಲೊಲ್ಲದ್ಯಾತರ ೪

ದುರಿತಗಿರಿತ ಅರಿಗಿರಿಗಂಜೆ ನಾಮವಜ್ರರ
ವಿರೆ ಪ್ರಸನ್ವೆಂಕಟರಸ ಮನ್ನಿಸಲೊಲ್ಲದ್ಯಾತರ ೫

೭

ಸುಳಾದಿ

ಧ್ರುವತಾಳ

ಶ್ರೀವಧುವೆ ನಿನ್ನ ಪೊಂದಿರಲೆಲ್ಲೈ ದೇವ
ಆವ ಕಾವುದು ಸಿರಿಯೆ
ಗೋವ್ರಜದಬಲೇರ ಮನೆಯ ಪಾಲಿನ ರುಚಿ
ಆವುದಧಿ ಮಿಗಿಲೆ
ಆವಾಗ ಮುನಿಮನಗೇಹದಿಂದ ರಥವಾಜಿ
ಬೋವತನವು ದೊಡ್ಡಿತೆ
ಭಾವಿಸಲಳವಲ್ಲನಂತ ಮಹಿಮ ನಿನ್ನ
ದೇವ ದಾನವರಿಗೊಲಿದೆ
ಕಾವನಜನಕ ಅಗಣಿತ ಗುಣನೆ ಪ್ರಸನ್ನವೆಂಕಟೇಶ ಹರೆ ೧

ಮಠ್ಯತಾಳ

ಅಂಬುಜಭವ ಮೃಡ ಬಿಡೌಜರಿಗಿ
ನ್ನಿಂಬುಗೊಡುವಾನಿಮಿಷರೊಡೆಯ
ನಂಬಿದರ ಕುಟುಂಬನೆ ಅಂತರ್ಬಹಿರ್ಮಯನೆ
ಕಂಬುಕೊಳಲು ಸಂಭ್ರಮದೂದುವ
ನಂಬಿದರ ಕುಟುಂಬನೆ ಕರು
ಣಾಂಬಕ ಪ್ರಸನ್ವೆಂಕಟ ವಿಭುವೆ ೨

ತ್ರಿಪುಟತಾಳ

ಜಲಜಜಾಂಡವು ರೋಮರೋಮದ
ಕುಳಿಯಲಿಡಿದಿರಲಖಿಳ ಶರಣರ
ಸಲಹುದರಿದೆ ತಂದೆ
ಮಲಿನಯುತ ಜನಮೇಳ ನೆನೆಯಲು
ಸಲಹುದರಿದೆ ತಂದೆ

ಬಲಿಯ ಬಿಂಕವನೊತ್ತಿ ಅಮರರ ಸಲಹಿದ
ಸುಲಭರರಸ ಪ್ರಸನ್ನವೆಂಕಟಾ
ಚಲ ವಿಭುವೆ ಎನ್ನೊಬ್ಬನಿಗೆ ನೀ
ಸಲಹುದರಿದೆ ತಂದೆ ೩

ಅಟ್ಟತಾಳ

ಮುಟ್ಟಿ ನಿನ್ನನು ನುತಿಸಿದೊಡಂ ಕಿವಿ
ಗೊಟ್ಟು ಕಥೆಗೇಳಿ ಬಾಳ್ದಡಂ
ಕಷ್ಟದುಷ್ಟರೊತ್ತಿದಯ್ಯ
ಬೆಟ್ಟಿಲಿ ನಗವನೆತ್ತಿದ ಕೃಷ್ಣನೆಂದರೆ
ದಿಟ್ಟ ಪ್ರಸನ್ನವೆಂಕಟ ಕೃಷ್ಣನೆಂದರೆ ೪

ಆದಿತಾಳ

ಶ್ರೀವರ ಮೂರುತಿ ಭೂವರಾಹನೆ
ಈ ಉರಗಾದ್ರಿಗೆ ವೈಕುಂಠವೆಂಬೆ ಗಡ
ದೇವರ ದೇವ ದೀನನ ನೇವರಿಸಿದವನೆ
ದೇವರ ದೇವ ಧ್ರುವನಿಗೆ ನೇವರಿಸಿದವನೆ
ದೇವರ ದೇವ ಭಕ್ತರ ಕಾವ ಪ್ರಸನ್ವೆಂಕಟಪತಿ
ನಮೋ ನಮೋ ದೇವ ೫

ಜತೆ

ತನ್ನ ವತ್ಸಕೆ ಧೇನು ತೊಳಲುವಂತೆ ಪ್ರ
ಸನ್ನ ವೆಂಕಟರೇಯ ಬುಧಕಾಮಧೇನು

(ಆ) ಮಧುರ ಭಾವ

೮

ಆರೆ ಅವನಾರೆಲೆ ಜಾಣೆ ಆರೆ ಅವನಾರೆ
ವೀರಹಕ್ಕಿಯನೇರಿ ನಿರುತದಿ ಧ್ವನಿಗೈದುವ ಶ್ರೀಪತಿ ಕಾಂಬೆ ಪ.

ಬಾಹ ಭಾವವ ನೋಡೆ ಕರುಣಿಯ ಬಾಹುಬಂದಿಯ ನೋಡೆ
ದೇಹ ಮಾಟವ ನೋಡೆ ಕರುಣಾಬ್ಧಿ ಸ್ನೇಹ ನೋಟವ ನೋಡೆ
ಆ ಹೇಮಾಂಬರ ನೋಡೆ ಮುಕುಟವಿಟ್ಟಿಹ ಕುಂಡಲ ನೋಡೆ
ರೂಹ ನೋಡಿ ಮೈ ಮರೆವ ಮುನಿಸಮೂಹದೆಡ
ಬಲದರ್ಥಿಯ ನೋಡೆ ೧

ಆಭರಣದ ಕಾಂತಿ ಕಂಡ್ಯಾ ಮೃಗನಾಭಿ ತಿಲಕವ ಕಂಡ್ಯಾ
ಶೋಭಿಸುವ ನಾಮ ಕಂಡ್ಯಾ ಕೌಸ್ತುಭ ಶ್ರೀವತ್ಸ ಕಂಡ್ಯಾ
ತ್ರಿಭುವನ ಗರ್ಭ ಕಂಡ್ಯಾ ತ್ರಿವಳಿಯ ನಾಭಿ ಚೆಲ್ವಿಕೆ ಕಂಡ್ಯಾ
ಶ್ರೀ ಭುಜಂಗವೇಣಿ ಲಕುಮಿಯಳ ತಾ ಬಿಗಿದಪ್ಪೊ
ವಕ್ಷವ ಕಂಡ್ಯಾ ೨

ಸ್ವಾಮಿಗೆ ಮನಸೋತೆನೆ ಭಕ್ತಪ್ರೇಮಿಗೆ ಮನಸೋತೆ
ರಾಮನಿಗೆ ಮನಸೋತೆ ನಾ ಘನಶ್ಯಾಮನಿಗೆ ಮನಸೋತೆ
ವಾಮನಗೆ ಮನಸೋತೆನೆ ಪೂರ್ಣಕಾಮನಿಗೆ ಮನಸೋತೆ
ಶ್ರೀ ಮನೋಹರ ಪ್ರಸನ್ವೆಂಕಟೇಶನ ನಾಮಕೆ ಮೆಚ್ಚು ಬಿದ್ದು
ಮನಸೋತೆ ೩

೬

ಎಂತು ಜೀವಿಸಲಮ್ಮ ರಂಗನನ್ನಗಲಿ ಎ
ನ್ನಂತರಪರಾಧವ ನೋಡದೊದಗನ್ಯಾಕೆ ಪ.

ಎಂದೆಂದು ತನ್ನ ಪೊಂದಿದ ಮಂದ ಮುಗ್ಧೆಯನು
ಕಂದರ್ಪಶರಕೆ ಗುರಿ ಮಾಡಬಹುದೆ
ಇಂದುಕಾಂತಿಯು ಅಗ್ನಿಯಂದದಾಯಿತು ಹರಿಯೆ
ಮಂದಸ್ಮಿತ ಸುಧೆ ಎನಗೆ ದೊರೆಯದಿರಲು ೧

ಶೃಂಗಾರ ಸೊಬಗ್ಯಾಕೆ ರಂಗನೀಕ್ಷಿಸದಿರಲು
ಅಂಗದಲಿಲ್ಲದೆ ಪ್ರಾಣ ಸುಖವಾರಿಗೆ

ಕಂಗಳು ದಣಿಯೆ ಅಘಭಂಗನ ದಿಟ್ಟಿಸಿ ನೋಡಿ
ಪೊಂಗೊಳಲ ಸವಿ ರವವ ಕೇಳದಿರೆ ನಾನು ೨

ವಿಪುಲ ತಾಪದಿ ಬಾಲೆ ನೊಂದಳೆಂಬ ಮಾತು
ಅಪಕೀರ್ತಿ ತನಗೆ ಅಲ್ಲವೇನೆ ತಂಗಿ
ಶ್ರೀಪತಿ ಪ್ರಸನ್ವೆಂಕಟೇಶನು ನೆರೆದ ಸಂಭ್ರಮಕೆ
ನಾ ಪಾವನಳಾದೆನೆ ಜಾಣೆ ನಿನ್ನಾಣೆ ೩

೧೦

ಎಂಥ ಗಾಡಿಕಾರನೆ ಯಶೋದೆ ನಿನ್ನ ಮಗ ಏಕಾಂತ
ಕಾಂತೆರೊಳಾಡುವ ಕೊಂಕು ನೋಡುವ ಪ.

ಮುಗುಳುನಗೆಗಳಿಂದ ಮಡದೇರ ಕಂಚುಕದ
ಬಿಗುಹಿನ ಮಲಕ ಬಿಟ್ಟ ಬಹಳ ದಿಟ್ಟ
ಉಗುರೊತ್ತಿ ಗುರುತು ಪೊಂಬುಗುರಿಗಳೆಮ್ಮವೆ
ಮೊಗ್ಗು ಮೊಲೆಗಳ ಪಿಡಿದು ಮೊನೆ ನೋಡಿದ ೧

ತೋಳೆರಡನು ತಳಕಿಕ್ಕಿ ಇವಿಗೋ ದುಂಡು
ಮೊಲೆ ಎನಗಂದವೆಂದು ಮೋಹನಸಿಂಧು
ತಾಳಿದ್ದ ಕೊರಳೊಳು ತನ್ನ ಪದಕದೊಳು
ಮೇಲದೆಯೆಂದಪ್ಪಿದ ಬಿಗಿದಪ್ಪಿದ ೨

ರಾಕೇಂದುಮುಖಿಗೆ ರಾಹು ಬಂದು ತೊಡರಿತು
ಈಕೆಗೆ ಮೋಸವೆಂದು ಎತ್ತಿದ ಬಂದು
ಜೋಕೆ ಮಾಡುವೆನೆಂದು ಜಡಿದು ಮಾರವೇಣಿಯ
ಸಾಕಿ ಉಪಕಾರವೆಂದ ಸಚ್ಚಿದಾನಂದ ೩

ಎಲೆಲೆ ನಾಭಿ ಒಲ್ಪಕಾಯಳೆ ನಾವು ಮುಟ್ಟಿ ಕೆಂಪಿನಾ
ಮೊಲೆ ಮೊಗ್ಗು ಕಪ್ಪಾದವೆಂದು ಮುಟ್ಟಿ ಅಹುದೆಂದು

ಅಲಕದ ಪೆಳಲ ಬಿಟ್ಟು ಅಹಿರಿಪು ನವಿಲುಥರ
ಅಲರ್ಗಳಾರ್ಮುಡಿಗಟ್ಟಿದ ಅಂಜಬ್ಯಾಡೆಂದ ೪

ಚದುರೇರೆನ್ನ ವಂಚಿಸಿ ಚಿನ್ನಿಪಾಲು ತನಿವಣ್ಣು
ಇದೀಗ ಬಚ್ಚಿಟ್ಟರೆಂದು ಯದುಕುಲೇಂದು
ಮುದ್ದು ಬಟುಗಲ್ಲದಿ ಮೊನೆವಲ್ಗಳ ನಾಟಿಸಿ
ಅಧರಾಮೃತ ಪೀರಿದ ಅತಿಕೊಬ್ಬಿದ ೫

ಮುಡಿಯ ತೋರಕ ಕೊಡ ಮಲಿ ಭಾರಕ
ಬಡನಡು ಮುರಿವದೆಂದು ನಗೆಯಲ್ಲವೆಂದು
ಜಡಿತದೊಡ್ಯಾಣವ ಜಾಣೆ ಕಟಿಗೆ ಬಿಗಿ
ದುಡಿಗೆ ಕರವನಿಡಿದ ದುಡುಕು ಮಾಡಿದ ೬

ಮೃಗಮದ ಬಾವನ್ನ ಮಘಮಘಿಪ ಪೂಮಾಲೆ
ಝಗಝಗಿಪ ಭೂಷಣವ ಜಾತಿ ಮೌಕ್ತಿಕವ
ಮುಗುದೇರಿಗಿತ್ತ ಮೋಹಿಪ ಪ್ರಸನ್ನವೆಂಕಟ
ಜಗಕೊಬ್ಬ ಚೆಲುವನಮ್ಮ ಜಯಿಸಿದ ನಮ್ಮ ೭

೧೧

ಎಂಥ ಬಾಲಕೃಷ್ಣ ಗೋಪೇರಂತಃಚೋರಾನಂತನೆ
ಕಂತುಪಿತ ಕೋಟಿ ಕಾಂತಿಯಲ್ಲಿ ಭ್ರಾಂತ ಮಾಡಿದನಿವ ಪ.

ಬಾಲನಾದರೊಳಿತು ಒಳ್ಳೆ ಬಾಲೆಯರ ಮೊಳೆ ಮೊಲೆ
ಗಾಲದ ಹಣ್ಣೆಂದು ನಖದಲಿ ಸೀಳಿ ನೋಡುವರೆ
ಹೇಳಲೇನೆಂತೆನ್ನ ನಳಿತೋಳಲಪ್ಪಿ ತೊಂಡೆಹಣ್ಣಿ
ಗ್ಹೋಲುವದೆಂದಧರನುಂಡ ತಾಳಬಹುದೇನಮ್ಮ ೧

ನಿಚ್ಚಟ ಮೈಯೊಳು ನಾವು ನಿಚ್ಚ ಮೈಯ ತೊಳೆಯುವಾಗ
ಬಚ್ಚಲೊಳು ಬಂದು ಕಣ್ಣಮುಚ್ಚಿ ಅಟ್ಟಹಾಸದಿ

ಸಚ್ಚಿದಾನಂದ ಗೋಪಾಲ ವಚ್ಚೆರೆಗಂಗಳೆಯರ
ಹುಚ್ಚುಮಾಡಿ ಹೋದನಿವನ ನೆಚ್ಚಬಹುದೇನಮ್ಮ ೨

ಹತ್ತಿಲಿದ್ದ ಸುಪ್ತಪುರುಷನ್ನೊತ್ತಿ ರತಿಕಳೆದೋರಿ
ಚಿತ್ತ ಸೂರೆಗೊಂಬುದಾವ ಕೃತ್ಯವಮ್ಮ ರಂಗಗೆ
ಸುತ್ತಿನವರರಿಯರೆಂದು ಚಿತ್ತವಾಯಿತಲ್ಲದೆ
ಅತ್ತೆ ಮಾವ ಕಂಡರೆಮ್ಮ ತೊತ್ತು ಮಾಡಿ ಬಡಿವರೆ ೩

ಹಟನೆಂದು ಬಾಯೊಳು ಬಾಯಿಟ್ಟು ಮುದ್ದನಿಡಲು
ಬಟ್ಟಕುಚವಿಡಿದೆಮ್ಮ ರಟ್ಟು ಮಾಡಬಹುದೆ
ದಿಟ್ಟ ಜಾರನಿಗೆ ಕೈಯ ಕಟ್ಟುವೆವೆಂದರೆ ಚೆಲ್ವ
ಬಟ್ಟಗಲ್ಲ ಕಚ್ಚಿ ಕ್ಷತವಿಟ್ಟೋಡಿದ ನಮ್ಮಯ್ಯ ೪

ಚಿನ್ನನಾದರೇನು ಚೊಕ್ಕ ಚಿನ್ನದಂಥ ಗುಣವುಳ್ಳ
ಚೆನ್ನಿಗನ ರೂಪಕೊಲಿದ ಕನ್ನೆಯರು ಪೂರ್ವದ
ಪುಣ್ಯವಂತರಲ್ಲದುಳಿದಿನ್ನಾರಿಗೆಲ್ಲಿ ಎಂದೂ ಪ್ರ
ಸನ್ವೆಂಕಟೇಶ ಸಿಕ್ಕ ಇನ್ನು ಸುಖ ದಕ್ಕೀತೆ ೫

೧೨

ಎಂದು ಬಹನಮ್ಮ ಯಾದವರರಸನು
ಎಂದು ಬಹನಮ್ಮ ಪ.

ತಂದು ತೋರೆಲೆ ಗಜಗಾಮಿನಿ ಯದುಕುಲ ತಿಲಕನ
ಕಂದುಗೊರಳಗೊಲ್ಲ ಚಂದದಿ
ಎಂದಿಗೆ ಅವ ನಮ್ಮ ಕಾಡುವ
ಇಂದುವದನೆ ಪೋಗೆ ಬ್ಯಾಗೆ ೧

ಯಾಕೆ ಗೋಕುಲ ನಮಗ್ಯಾಕೆ ವೃಂದಾವನ
ಸಾಕುವರ್‍ಯಾರಮ್ಮ ನಮ್ಮನು

ಶ್ರೀಕಾಂತನಿಲ್ಲದೆ ನಿಮಿಷ ಯುಗವಾಯಿತು
ಪೋಕನಲ್ಲವೆ ಕ್ರೂರ ಅಕ್ರೂರ ೨

ಮುಡಿಗೆ ಮಲ್ಲಿಗೆ ಭಾರ ಕಣ್ಣಿಗೆ ಅಂಜನ ಭಾರ
ನಡುಮಧ್ಯಕೆ ನಿರಿಭಾರವೆ
ಅಡಿಗೆ ಅಂದುಗೆ ಭಾರ ನುಡಿವ ಕೀರವ ಉರ
ಜಡಿವ ಸಮೀರ ಸಖಿಯೆ ಸಖಿಯೆ ೩

ಬೆಳದಿಂಗಳೆನಗೆ ಬಿಸಿಲಾಗಿ ತೋರು
ತಲಿದೆ ಬಗೆ ಬಗೆ ಪುಣ್ಯದ ಮಾಲಿಕೆಯು
ಅಲ್ಲೆ ಪಿಕಗಾನವು ಕಿವಿಗತಿಕಠಿಣವು
ಒಲ್ಲೆ ಅಗರು ಚಂದನ ಲೇಪ ತಾಪ ೪

ಯಾಕೆ ಕಸ್ತೂರಿ ಗಂಧ ನಮಗ್ಯಾಕೆ ಚಂಪಕಮಾಲೆ
ಲೋಕನಾಯಕ ತಾನಿಲ್ಲದೆ
ಶ್ರೀಕಾಂತನಿಲ್ಲದೆ ನಿಮಿಷ್ಯುಗವಾಯಿ
ತು ಕಂಡಿದ ಪ್ರಸನ್ವೆಂಕಟ ೫

೧೩

ಏನು ರಂಗ ದೂರ ನೋಡುವೆ
ಪ್ರಾಣನಾಥ ದೂರ ನೋಡುವೆ ಪ.

ಒಳ್ಳೆ ನಾರಿಯರೊಳು ಮನವಿಟ್ಟು ನೀನನ್ನ
ಸಲ್ಲದವಳ ಕೈಯವಿಡಿದ್ಯೇಕೆ ಮೊದಲಿಗೆ ೧

ಏಸು ಮನೆಯ ಹೊಕ್ಕು ದಣಿದೆ ಕಾಣದೆ ಕೃಷ್ಣ
ಆಸು ಮನೆಯೊಳು ನೀನಿದ್ದು ಕಾಣಿಸಿಕೊಳ್ಳೆ ೨

ನಿನ್ನವಳೆನಿಸಿದ ಬಳಿಕ ಮಾತಾಡದೆ
ಅನ್ಯಾಶ್ರಯ ನನಗಿದ್ದರೆ ಹೇಳು ನನ್ನಾಣೆ ೩

ನೀ ಪರಿಹರಿಸಲಾರದ ತಪ್ಪೆನ್ನಲ್ಲುಂಟೇನೊ
ಈ ಪರಿಗಾಳ ಬಳಲಿಸಿ ಸುಮ್ಮನೆ ೪

ದೂರ ನೋಡಿದರೆ ನೀ ನೋಡು ನಾ ಬಿಡೆನೆಂಬೆ
ದೂರ ಸಾರಿ ನಿನ್ನ ಪೋಗಲಾರೆ ಪ್ರಸನ್ವೆಂಕಟೇಶ ೫

೧೪

ಏನೊ ರಂಗ ನಿನ್ನ ವನಿತೆಯೊಳಪರಾಧ
ಧ್ಯಾನಿಸಲು ದೊರಕೊಂಬುದೆ
ನೀನಗಲಬೇಡ ತರಳೆಗಭಯವ ಕೊಟ್ಟು
ಮೌನದಲಿ ನಡೆಯೊ ಮನೆಗೆ ಬೇಗ ಪ.

ಸ್ಮರನ ದಾಳಿಗೆ ಕಂದಿ ಕುಂದಿ ಬಳ್ಕಡಿಯಿಡುತ
ವಿರಹಾಗ್ನಿಗನ್ನತೊರೆದು ಸ್ಮರಿಸುವಳು
ನಿರುತ ನಿನ್ನಯ ಗುಣಾವಳಿಗಳನುಕರಿಸೋ
ತರಳೆಯ ಕೂಡೊ ಕೋಪ ಬೇಡೊ ನೋಡೊ ೧

ಪರಮಪುರುಷ ನೀ ಅವಳ ಜರಿದ ಕಾರಣ ಸೋಮ
ಕಿರಣ ವಿಷಸಮ ಝಳದ ಪರಿ
ತೋರಿ ಬಳಲುವಳು ಸಖಿಭೃಂಗ ಕಳಕಕೆ
ತರಳೆ ಕೂಡೊ ಕೋಪ ಬೇಡೊ ನೋಡೊ ೨

ನಲ್ಲ ನಿನ್ನ ಸಂಗ ಬಯಕೆಗೆ ಕಣ್ಣ ತೇಲಿಸುವ
ಳಲ್ಲೊ ತೊದಲ್ಲು ನುಡಿವಳಲ್ಲೊ
ಮೆಲ್ಲನೆದೆ ನೋಡಿ ಸುಯಿಗರೆವಳು ಖಗಾಂಕಜನ
ಬಿಲ್ಲಿಗೆ ಬಲಿ ಕೊಡಲಿ ಬಾರೊ ತೋರೊ ೩

ಪಯನಿಧಿ ಒಡೆಯನ್ಯಾಕೆ ಬಾರನೆಂದವಳು ತ
ನ್ನಯ ಸುದತಿಯರ ಬೈವಳು

ನಯನಧರವಿರಸಿ ಕಂಬನಿದುಂಬುವಳು ಗಡ
ಪ್ರಿಯಳರಸೆ ಜಾರ ವಿರಸ ಹರಿಸೊ ೪

ನಿನ್ನ ನಂಬಿದಳಿಗಿಂತಾಗುತಿರೆ ಸುಮ್ಮನಿಹೆ
ಎನ್ನ ಹೇಯ ಬಾರದೆನಲು
ಉನ್ನತ ಹಯವನೇರಿ ಬಂದವಳ ನೆರೆದ ಪ್ರ
ಸನ್ನ ವೆಂಕಟ ನಾಯಕ ರಸಿಕ ೫

೧೫

ಕನಕಗಿರಿ ರಂಗನ ಕಾಣದೆ ನಿಲ್ಲಲಾರೆ ನಾ
ಕನಕಾಭರಣನ ತೋರಿಕೊಡೆ ಸೈರಿಸಲಾರೆ ಪ.

ಕನಕದಂತೆ ಮೈಯವನ ಕನಕಾಚಲಧರನ
ಕನಕಾಂಬಕನ ಗೆದ್ದ ಕನಕ ಕಶ್ಯಪನ ಗೆದ್ದ ೧

ಕನಕಾದ್ರಿಕರಕರ ಕನಕಭೂಮಿತಾರ
ಕನಕಮೃಗ ಸಂಹಾರ ಕನಕಪಕ್ಷಿಸಂಚರ ೨

ಕನಕಾಂಬರವ ಬಿಟ್ಟ ಕನಕವರ್ಮವ ತೊಟ್ಟ
ಕನಕಗನ್ನಿಕೆಯ ರಮಣ ಕರ್ತು ಪ್ರಸನ್ನವೆಂಕಟನ ೩

೧೬

ಕರತಾರೆ ಕರತಾರೆ ಶ್ರೀನಿವಾಸನ
ಸುರರರಸ ಸ್ವಾಮಿ ಶ್ರೀ ವೆಂಕಟೇಶನ ಪ.

ಬರಹೇಳೆ ಬರಹೇಳೆ ಬೇಗ ಕರಿಗಮನೆ ರಂಗಗೆ
ಸಿರಿರಾಣಿರಮಣ ಘನಾಂಗಗೆ
ಅರಘಳಿಗೆ ಸರಸವಲ್ಲ ಅರಸನಿಲ್ಲದವಳೆ ಸಲ್ಲ
ಸ್ಮರನೆಂಬೊ ಸಿರಿಕಳ್ಳ ಕರುಣೈಲ್ಲ ೧

ಸುಂದರ ಸುಂದರ ಶುಭಮಂದಿರನ್ನ ದಯಾರಸ
ಸುಂದರನ್ನ ವರಕಂಬುಕಂದರನ್ನ
ಚೆಂದಾವರೆಗಣ್ಣವನ ಸಿಂಧೂರ ವರದನ್ನ ದೇ
ವೇಂದ್ರಜಿತ ಪಾರಿಜಾತ ತಂದನ್ನ ೨

ಹೋಯಿತೆ ಹೋಯಿತೆ ಹೊನ್ನಪ್ರಾಯ ಯದುರಾಯ ಬಾರ
ದಾಯಿತೀ ಅವಸ್ಥೆ ಹುಟ್ಟು ಹೊಂದಿ
ಕಾಯಬೇಕೆಂದೊಮ್ಮಿಗೆ ಉದಯವಾದ ಪ್ರಸನ್ವೆಂಕಟ
ರಾಯ ಬಂದ ಫಲಿಸಿತಾನಂದ ೩

೧೭

ಕರುಣಿಸಿ ಬಾರೆಲೆ ತಾಯೆ ಮಾಧವನಾವ್ಯಾಕೃತನ
ಕರೆತಾರೆ ನೀರೆ ಬೇಕಾದವಳನಿನಿತು
ವಿರಹವಾರಿಧಿಯಲ್ಲಿ ನೂಕಿ ಓಡಿರುವನಲ್ಲೆ ಸಲೆ ಪ.

ಬಿಸಜ ಕುಟ್ಮಳಕುಚವ ಸೋಂಕಿ ಮುದದಿ ಪಿಡಿದು
ಶಶಿಮೊಗದಿ ಮೋಹವನಿಡುವ ನುಡಿವ
ಎಸೆವ ಕೊನೆವಲ್ಲಲಳುಕಿಸಿ ಎನ್ನ ಅಧರ ಪೀ
ಯೂಷವನೊಲಿದೊಲಿದು ಸವಿದ ಕೋವಿದ
ಪೊಸಮದಕರಿಯ ಸೊಂಡಿಲ ತೋಳಲಮರ್ದಪ್ಪಿ
ಮಿಸುನಿ ಪುತ್ಥಳಿಯ ತೆರದಿ ಮೆರೆದ
ಅಸಿಯ ಮಾಣಿಕಳೆ ಕೇಳಸುರಹರನಾಳಿದನೀ
ಅಸು ತೊರೆವೆ ತಾನಪಕಾರೆ ನೀರೆ ೧

ಎಂಟೆರೆಡು ಕಳೆದೋರಿ ಸವಿದೋರಿ ಸುಖಬೀರಿ ಸಲೆ
ಕಂಠಮಾಲೆಯ ಕೊಟ್ಟನೆ ನೆಟ್ಟನೆ
ಎಂಟೆರಡವಸ್ಥೆಗಳ ಮೇಳಿಗೆಯ ಕ್ಷಣಲವಕೆ
ವೆಂಠಣಿಸಿ ಅಮೃತವೆರೆದ ನೆರೆದ

ಕಂಟಕಿಯು ದಾವಳೊ ಹರಿಯನೊಯ್ದಳಕದಿಂ
ಗಂಟಿಕ್ಕಿದಳೊ ಬಿಡದೆ ಮಡದೆ
ಉಂಟು ಮಾಡಿದನಲಾ ಮಂದ ಮುಗ್ಧೆಗೆ ಅಸಿಕ
ಕಂಟಕಬಲೆಯ ಕಾಣೆ ಜಾಣೆ ೨

ಸರಸವಾತಿನ ಜಾಣ್ಮೆಯೆಂತುಸುರುವೆನಬಲೆ
ಹರಣಳಿಯದೆಂದು ಪೇಳೆ ಕೇಳೆ
ನಿರುತವನ ಕಿರುವೆರಳ ಸೌಂದರ್ಯಮಂ ನೆನೆಯು
ತಿರುವೆ ಪುಸಿಯಲ್ಲ ಕಾಣೆ ಪ್ರಾಣೆ
ಕರುಣಿ ಬಲುನೊಂದರೆಂದದು ತನಗೆ ಕುಂದು
ಮರೆಯದಿನಿತೆಲ್ಲ ಒರೆಯೆ ಚತುರೆಯೆ
ಭರದಲೊಮ್ಮೊಮ್ಮೆ ಬಂದು ಪ್ರಸನ್ನವೆಂಕಟ
ಗಿರಿಯರಸನೆಂದನಕ್ಕ ರಸಿಕ ೩

೧೮

ಕಾಂತೆ ಸೈರಿಸಲಾರೆ ಕಂಜಾಕ್ಷನಗಲೀರೆ
ಕಂತುಶರದ ಬಲ ಕಡುವೇಗವಾಯಿತಲೆ
ಕಾಂತ ಮೂರುತಿಯ ಕರೆತಾರೆ ತಾಯೆ ಪ.

ಸೀತಕರನ ಪ್ರಭೆಯು ಶುಕದುಂಬಿಗಳ ರವವು
ಸೋತಬಾಲೆಯ ಮುಂದೆ ಸರಸವೆ ಸೊಗಸೋದೆ
ನೀತವೇನೆಲೆ ತಂಗಿ ನೀರಜನಾಭಗೆ ೧

ನೀರೊಳು ಕರೆದೆನ್ನ ನೀಲ ಜೀಮೂತ ವರ್ಣ
ನೀರಜದ್ವಕ್ತ್ರವ ನಖದಿ ಘಾಸಿ ಮಾಡುವ
ನಾರಾಯಣನೆನ್ನ ಸುಳಿದರಿನ್ನೇನೆ ೨

ಅಧರದೊಳಿಟ್ಟುಕೊಳಲು ಅತಿಮೋಹಿಸುವ ನಲ್ಲ
ಯದುಕುಲದರಸ ಮೆಚ್ಚೆ ಎನ್ನೊಳು ಘನ್ನ
ಮಧುಪಕುಂತಳ್ಯಾವಳೊ ಮನೆಗೊಯ್ದಳೊ ೩

ಆವಗವನ ಕೇಳಿ ಆಡುವವನ ಸಾಲಿ
ದಾವ ಸುಕೃತದಿಂದ ದೊರೆತನೊ ಶ್ರೀಮುಕುಂದ
ಆವ ದುಷ್ಕೃತ ಬಂದು ಅಗಲಿಸಿತಿಂದು ೪

ಚಂಪಕದಲಮಾಲೆ ಚಂದನದ ಲೇಪ ಒಲ್ಲೆ
ಕಂಪಿನೊಳಗೆ ನಿಂದು ತರ್ಕೈಸುವಾನಂದ
ಸಂಪನ್ನ ತಾ ಬಂದು ಸಲಹುವನೆಂದೆ ೫

ಪರಿಯಂಕದಲಿ ಕುಳಿತು ಪರಿಪರಿಯ ಸುಖವಿತ್ತು
ಕರದಿ ಕಂಕಣವಿಟ್ಟು ಕಡೆಯ ಪೆಂಡ್ಯಾ ಕೊಟ್ಟು
ಕರುಣಿ ಜರಿದು ತರವೆ ತನಗಿದು ೬

ಇಂದಿರೆ ರಮಣ ಎನ್ನ ಇಚ್ಛೆಯ ಸುರಧೇನು
ಸುಂದರ ರನ್ನ ಪ್ರಸನ್ನ ವೆಂಕಟೇಶನ
ಸಂದೇಹವಿಲ್ಲದೆ ಶರಣು ಹೊಂದಿದೆನೊ ೭

೧೯

ತಂದು ತೋರೆ ತಡಿಯೆನೆ ತಾಳಲಾರೆನೆ ತಂಗಿ
ಹೆಂದಳ ವೇಲಾಪುರದ ಚೆನ್ನಿಗನ ಭಾವಕಿ ಪ.

ಮಂಗಳ ನೋಟಕೆ ಮೆಚ್ಚಿ ಮರುಳಾದೆನೆಲೆ ತಂಗಿ
ಅಂಗವೆಲ್ಲ ಕಮಠಾದವನಪ್ಪಿಸಮ್ಮ ಭಾವಕಿ ೧

ಕೊನೆವಲ್ಲಿಗೆ ಧರೆ ಸೋಂಕಲು ವಶ್ಯವಾದೆನೆಲೆ ತಂಗಿ
ಘನಕೋಪವ್ಯಕ್ತನ ಕೂಡಿಸಮ್ಮ ಭಾವಕಿ ೨

ಮಾನದಂತಿದ್ದ ಬಲಿಯ ಮೆಚ್ಚಿ ನುಂಗುವರೆ ತಂಗಿ
ಕ್ಷಣಯುಗವಾಗಿದೆ ಸದ್ವೀಕ್ಷಣ ಕಾಣದೆ ಭಾವಕಿ ೩

ಹೆಂಗಳ ಬಿಟ್ಟೊಬ್ಬನೆ ತಾ ಹ್ಯಾಗೆ ಹೋದ ಹೇಳೆ ತಂಗಿ
ಪೊಂಗೊಳಲೂದುತಲೆನ್ನ ಪಾಲಿಸೆನ್ನೆ ಭಾವಕಿ ೪

ಮೋಹನ ಬಾರದೀ ಗಂಧಮಲ್ಲಿಗ್ಹಾರ್‍ಯಾಕೆ ತಂಗಿ ಬ
ರಹೇಳೆ ಪ್ರಸನ್ನವೆಂಕಟನ ವಾಜಿಯಿಂದ ಭಾವಕಿ ೫

೨೦

ಬಂದನೇಳೆ ಗೋವಿಂದ ನಾ ಇಂದುಮುಖಿ ನಿದ್ರೆ ಬಿಟ್ಟು
ಬಂದು ನೀ ಬಾಗಿಲ ತೆಗೆಯೆ ಗೋವಿಂದ ನೀ ಗೋ
ವೃಂದವ ಕಾಯಲು ಹೋಗಯ್ಯ ಪ.

ಸೋಮಕ ಖಳನ ಕೊಂದು ನೇಮದಿ ವೇದವ ತಂದ
ಶ್ರೀ ಮತ್ಸ್ಯಾವತಾರ ಬಂದನೆ ಮತ್ಸ್ಯನಾದರೆ
ಆ ಮಹಾಂಬುಧಿಗೆ ಹೋಗಯ್ಯ ೧

ಸಿಂಧು ಮಥನ ಕಾಲಕೆ ವೃಂದಾರಕರಿಗೊಲಿದ
ಸುಂದರ ಕೂರ್ಮನು ಬಂದನೆ ಕೂರ್ಮನಾದರೆ
ಮಂದರ ಹೊರಲು ಹೋಗಯ್ಯ ೨

ಪ್ರಳಯಾಂಬುಗಿಳಿದೊಬ್ಬನ ಸುಲಭದಿ ಕೋರೇಲಿ ಸೀಳಿದ
ಚೆಲುವ ವರಾಹನು ಬಂದನೆ ವರಾಹನಾದರೆ
ಇಳೆಯ ಕೂಡಾಡ ಹೋಗಯ್ಯ ೩

ಸೊಕ್ಕಿ ಕಂಬವ ಗುದ್ದಿದ ರಕ್ಕಸನಂತರ ಮಾಲೆಯ
ನಿಕ್ಕಿದ ನರಹರಿ ಬಂದನೆ ನರಹರಿಯಾದರೆ
ಚಿಕ್ಕವನೊಳಾಡ ಹೋಗಯ್ಯ ೪

ಹೋಮವ ಮಾಡಿ ಮೀರಿದ ಭೂಮಿಪನುಕ್ಕ ಮುರಿದ
ನೇಮದ ವಾಮನ ಬಂದನೆ ವಾಮನನಾದರೆ
ನೇಮ ನಿಷ್ಠೆಗೆ ನೀ ಹೋಗಯ್ಯ ೫

ಭೂಭಾರವನಿಳುಹಿ ದ್ವಿಜರ್ಗೆ ಭಾಗ್ಯವ ಕೊಟ್ಟ ಶೌರ್ಯ
ಶೋಭಿತ ಭಾರ್ಗವ ಬಂದನೆ ಭಾರ್ಗವನಾದರೆ
ಆ ಬಾಲೇರಂಜಿಸ ಹೋಗಯ್ಯ ೬

ಸೀತೆಗಾಗಿ ರಾವಣನ್ನ ಘಾತಿಸಿದೆ ಕೇಳೆ ವಾತ
ಜಾತ ವಂದ್ಯ ರಾಮ ಬಂದೆನೆ ರಾಮನಾದರೆ ಸರ
ಯೂ ತೀರದಲ್ಲಿರ ಹೋಗಯ್ಯ ೭

ಸೋಳಸಾಸಿರ ಗೋಪೇರನಾಳುವ ಪ್ರೌಢ ಕಾಣೆ ಗೋ
ಪಾಲ ಚೂಡಾಮಣಿ ಬಂದೆನೆ ಗೋಪಾಲನಾದರೆ ಗೋ
ಪಾಲೇರೊಡನಾಡ ಹೋಗಯ್ಯ ೮

ದೃಢದಲ್ಲಿ ತಪವಿದ್ದ ಮಡದೇರ ಮನಗೆದ್ದ
ಕಡುಮುದ್ದು ಬುದ್ಧ ಬಂದೇನೆ ಬುದ್ಧನಾದರೆ ಮಿಥ್ಯದ
ಸಡಗರದಲ್ಲಿರ ಹೋಗಯ್ಯ ೯

ಪದ್ಮಗಂಧಿ ನಿನ್ನ ರತಿಗೊದಗಿದೆ ಬಿಂಕವಿನ್ನ್ಯಾಕೆ
ಕುದುರೆಯೇರಿ ಕಲ್ಕಿ ಬಂದೆನೆ ಕಲ್ಕಿಯಾದರೆ
ಕದನಕೆ ಜಾಣ ಹೋಗಯ್ಯ ೧೦

ವಲ್ಲಭನ ನುಡಿಕೇಳಿ ನಲ್ಲೆ ಸತ್ಯಭಾಮೆ ಪಾದ
ಪಲ್ಲವಕೆರಗಿ ನಿಂತಳು ಪ್ರಸನ್ವೆಂಕಟ
ಚೆಲುವ ನೀನೆಂದರಿಯೆನೆಂದಳು ೧೧

೨೧

ಬಾರನ್ಯಾತಕೆ ವಾರಿಜಾನನೆ ಶ್ರೀ
ಮಾರಜನಕ ಸಕಲ ಸುಖಕೆ ಕಾರಣನು ಕರುಣಿಸಿ ತಾನೆ ಪ.

ಭುವನೇಶನಿನಿಯಳಣುಗ ತಾ ಪಿಡಿದು ಜರಿದ ಬಲಹಗೆ
ಹ್ಯಾವಿಲೆಳೆದವನೊಳು ಕಾದಿ ತಾವೊಲಿದ ದೊರೆಯ ನಮಿಸಿ
ಭಾವ ಕದಿದು ಇಷ್ಟವ ಪಡೆದನ ಜನನಿಸುತರ
ಜೀವಕೆಡರು ಬರಲಿ ಕಳಿದನೆ ರಂಧ್ರ ಪೊಳಲ
ದೇವ ಭಗಿನಿ ತುತಿಯ ಕೇಳ್ದನೆ ಇಂದುವದನೆ ೧

ಹರಿಪದಸ್ಥನೆರೆಯನಿಂದ ಹರುಷದೊರೆದ ಪುರುಷನುಗ್ರ
ಕರಿಯ ಮೈಯು ಬರಲಿ ಕಳೆದ ನರಟುನುಳ್ಳವನು ಭುವಿಲಿ
ಹರಗೊಲಿಸಿ ಎಬಡ ಗಡ ಹೆಣ್ಣಿನ ಒಡಲ ಪೊಡೆಯು
ಉರಿಯಲರಿದ ಸಿರಿಯವರದನೆ ಬಾಳರುಚಿಯು
ಳ್ಡರಿಯನಟ್ಟಿ ಜವದಿ ಕಾಯ್ದನೆ ಕುಂದರದನೆ ೨

ಭಾರಮಣನ ಅಗ್ರಜಳ ಕಿಶೋರಬಾಣಪ್ರಿಯಜನವ
ತಾರನರಮನೆಗೊಲಿದು ವಿಷದ್ವಿಜನ್ನ ಧ್ವಜ ಕರೆದರೆ
ಬಾರದೇನೆ ಮೂಗಮುರಿವನೆ ತನ್ನ ನಂಬಿ
ಸಾರಿದವರ ಮನದೊಳಿರುವನೆ ಪ್ರಸನ್ನವೆಂಕಟ
ಧೀರನೊಬ್ಬ ಜಗಕೆ ಚೆಲುವನೆ ಭಾಮಿನಿ ೩

೨೨

ಬಾರೆ ಸುಬುದ್ಧಿ ನಿನ್ನ ಕಾಣದೆ ಇರ
ಲಾರೆ ಕಾಣೆ ಸಖಿ ಜಾಣೆ ಪ್ರವೀಣೆ ಪ.

ಮಾರನ ಶರಗಣ ದಾರುಣ ನೀಗವ್ವ
ನಾರಿ ನಾರೀಮಣಿ ಕಾಳಾಹಿ ವೇಣಿ
ತೋರೆ ನಿನ್ನಧರದ ಸಾರ ಸುಧೆಯೆನಗೆ
ಚಾರು ಹಿತಾನಂದ ಕಾರಣ ನೀರೆ ೧

ಮಂದಗಮನೆ ಕೇಳೆ ಇಂದಿಗೆ ನಿನ್ನರ
ವಿಂದಶರನಿಟ್ಟಧ್ವರ್ಯ ಕುಚದ್ವಂದ್ವವ
ಹೊಂದಲು ಬಂದಿಹ ಅವನೊಳು
ಹಿಂದುಮುಂದಾಡಲಿ ಬೇಡೆ ನಿಂದು ಮಾತಾಡೆ ೨

ಪಂಕಜಗಂಧಿ ಮುದಾಂಕಿತಳೆ ನಿನ್ನ
ಸೋಂಕಲು ಪ್ರಸನ್ವೆಂಕಟೇಶ
ಭೋಂಕನೆ ಬಂದಿಹ ಚಿಂತಾಯಕ ಹೃದಯ ಪರಿ
ಯಂಕದಿ ಸುಖಿಸೇಳೇಣಾಂಕ ಮುಖಿ ೩

೨೩

ಬುದ್ಧಿ ಧೃತಿಯೆಂಬ ನಾರೇರು ಶ್ರೀ
ಮುದ್ದು ಕೃಷ್ಣನ ಒಲಿಸಿಕೊಂಡರು ಪ.

ಅಕ್ಕ ಬುದ್ಧಿವಂತೆ ತಂಗಿಗೆ ಬಲು
ನಿಕ್ಕರದಲಿ ಹಿತವಾಡಿದಳು
ಚಿಕ್ಕವಳೆಂದಂಜದೆ ಧೃತಿಯು ತ
ಮ್ಮಕ್ಕನೊಳು ಬಡಿದಾಡಿದಳು ೧

ಕಟ್ಟಲೆ ಮೀರಿ ಮಾತಾಡದಿರೆ ತಂಗಿ
ಸಿಟ್ಟು ಬರುತಿದೆ ಕಾಡದಿರೆ
ಕಟ್ಟಲೆ ಮೀರಿ ಮೊದಲೆ ನವೆದೆ ನಿನ್ನ
ಕಟ್ಟಿನೊಳಗೆ ಸಿಕ್ಕಿ ಬಲು ದಣಿದೆ ೨

ಒಗತನ ದಾರದೆ ಸಣ್ಣವಳೆ ನೀ
ಜಗಳಕ್ಕೆ ನಿಂತೆ ದೊಡ್ಡೆದೆಯವಳೆ
ನಗೆಗೇಡು ಮಾಡಿಕೊಂಡೆಲೆಯಕ್ಕ ನಿನ
ಗೊಗತನ ನನ್ನಿಂದ ತಗಲಕ್ಕ ೩

ಹರಿ ನಿನಗೆ ದಕ್ಕಿದನೆಂದು ಉಣ್ಣ
ದುರಿಯಬೇಡೆಲೆ ತಂಗಿ ಹೋಗಿಂದು
ಅರಸ ದಕ್ಕುವನೆ ಇನ್ನಾರಿಗೆ ಅಕ್ಕ
ಕಿರುಕುಳು ಮಾತ್ಯಾಕೆ ಹಿರಿಯಳಿಗೆ ೪

ನನ್ನ ಹಿರಿಯತನ ಕೆಣಕಿದ್ಯಲ್ಲೆ
ನನ್ನ ಕಣ್ಣ ಮುಂದೆ ನಿನ್ನೆ ಬಂದವಳೆ
ಹುಣ್ಣಿಮೆ ಚಂದ್ರ ದಿನಕೆ ಹಿರಿಯ ಜಗ
ಮನ್ನಣೆಗೆ ಬಾಲಚಂದ್ರನಲ್ಲೆ ೫

ಪಟ್ಟ ನನ್ನದು ಮೊನ್ನೆ ಬಂದವಳೆ ನಿನ್ನ
ದಿಟ್ಟತನವನೇನ ಹೇಳಲೆ
ಕೃಷ್ಣ ನಿನಗೆ ದೂರನಲ್ಲೆ ಅಕ್ಕ ಹರಿಯ
ಗುಟ್ಟಿನ ಮೋಹವೆ ನನಗೆ ಅಕ್ಕ ೬

ತಂಗಿ ಮನವ ನೋಯಿಸ್ಯಾಡದಿರೆ ಶ್ರೀ
ರಂಗನೆನಗೆರವು ಮಾಡದಿರೆ
ಮಂಗಳ ಮಹಿಮ ಮುರಾರಿಯ ಅ
ರ್ಧಾಂಗಿಯೆ ನಾ ನಿನಗೆ ಸರಿಯೆ ೭

ಹಿರಿಯ ಕಿರಿಯಳಲ್ಲ ಸರಿ ಹೇಳೆ ಹರಿ
ಗೆರವಿನ ಮಾತಿಲ್ಲ ಖರೆ ಕೇಳೆ
ಪರಮ ಪುರುಷ ವಾಸುದೇವನೆ ಕೊಟ್ಟ
ವರಕೆಂದು ತಪ್ಪದೆ ಕಾವನೆ ೮

ಕನ್ಯೆ ಲಕ್ಷುಮಿಯ ರಮಣನೆ ಸ್ವಾಮಿ
ತನ್ನ ನಂಬಿದವರ ಹೊರೆವನೆ
ಪುಣ್ಯ ಗೋಪೀಜನಜಾರನೆ ಪ್ರ
ಸನ್ನವೆಂಕಟಪತಿ ಧೀರನೆ ೯

೨೪

ಭಂಡು ಮಾಡದಿರು ಬೆಣ್ಣೆಗಳ್ಳ ಈ
ಮುಂಡತನ ನಿನಗೆ ಸಲ್ಲ ಪರ
ಹೆಂಡಿರೆಳೆಯದಿರೊ ಹೀಗೆಲ್ಲ ಅತ್ತೆ
ಕಂಡರೆ ಕೊಲ್ವಳೊ ಗೋಪಿನಲ್ಲ ಪ.

ನೀರೆಯರಾಟವೆ ನಿನಗಲ್ಲ ನಗ
ಬಾರದು ಪರಾಂಗನೆರೊಳು ಚೆಲ್ವ
ವಾರಿಜಾಕ್ಷಿಯರಪ್ಪಿ ಎತ್ತಿಹ್ಯಲ್ಲ ಕೂಗ
ದಿರೊ ಬಾಗಿಲೊಳು ಮಾವ ಹೊಲ್ಲ ೧

ಹೆಜ್ಜೆ ಹೆಜ್ಜೆಗುಚ್ಚ ಮಾಡಿದೆಲ್ಲ ನಿನ್ನ
ಕಜ್ಜದೊಳು ಕರುಣಿನಿತಿಲ್ಲ ಧರ್ಮ
ರಾಜ್ಯದೊಳು ಚಾರವೃತ್ತಿಯಿಲ್ಲ ನಮ್ಮ
ಲಜ್ಜೆ ಸೂರ್‍ಯಾಡಿದೆ ಅಂಜಿಕಿಲ್ಲ ೨

ಬುದ್ಧಿ ಸತ್ಯ ಮಾತು ಮಿಥ್ಯವಲ್ಲ ಪೂರ್ಣ
ಶುದ್ಧ ನಂಬಿದೆವೊ ಮೃದುಸೊಲ್ಲ ಇನ್ನು
ಸದ್ದು ಮಾಡದೆ ಕೂಡೆ ಠಾವಿಲ್ಲ ನಮ್ಮ
ಮುದ್ದಿಸೊ ಪ್ರಸನ್ವೆಂಕಟ ನಲ್ಲ ೩

೨೫

ಭಾವೆ ತೋರೆಲೆ ಶ್ರೀನಿವಾಸನ ಜಗದ
ಜೀವಗಳಿಗೆ ಭಿನ್ನನಾದ ವಾವೆಯಿಲ್ಲದ ಶ್ರೀನಿವಾಸನ ಪ.

ಮಾವನ ಅಣುಗನನುಜೆಯಳಿಗೆ ಮಾವನೆನಿಸಿದ ತನ್ನ ಮಗಳ
ಮಾವನ ಸೊಸೆಯ ಬಸಿರಲುದಿಸಿ ಮರಮೆಳೆಯನು ಸೇರಿ ಮತ್ತೆ
ಮಾವನ ಸುತರಿಗಜ್ಜನೆನಿಸಿದ ಮಗುಳೆ
ಮಾವನ ಮಾವನ ಮಗಳಿಗಣ್ಣನೆನಿಸಿದ ಒಮ್ಮೆ
[ಬಾವನ] ಭವನವೆಣ್ಣಳ ಬಿಡಿಸಿ ರಮಿಸಿದ ೧

ಸತಿಯ ಸುತೆಗೆ ಅರಸನಾದ ಸತಿಯಳಿಗೆ ಸಹೋದರನಾದ
ಸತಿಯಳನುಜ ಕುಲದಿ ಜನಿಸಿ ಸತಿ ಹಲವರ ಕೂಡಿ ಸುಖಿಸಿ
ಸತಿ ಸಖಿಯರ ಬಂಧುವೆನಿಸಿದ ಮತ್ತೆ ಸುತನ
ಸತಿಯ ಮಗನ ಮೊಮ್ಮನೆನಿಸಿದ ಓರ್ವ ಮೊಮ್ಮನ
ಸತಿಗೆ ನೋಡಿದಳಿಯನೆನಿಸಿದ ೨

ಅಣ್ಣಗೆ ಜನಕನಾಗಿ ಮಗನ ಅಣ್ಣನೆನಿಸಿದ ಜಗವರಿಯಲು
ಅಣ್ಣನೆ ತಮ್ಮಗೆ ತಮ್ಮನಾದ ಹುಟ್ಟಿದ ತಾಣವ ಜರಿದು ಬೆಳೆದು

ಅಣ್ಣಗೆ ಭಾವನಾಗಿರುವ ಚೆಲುವನೆ ತನ್ನ ಬಾವನ
ಅಣ್ಣನಯ್ಯಂಗೆ ಪುತ್ರನಾದವನೆ ಪ್ರಸನ್ನವೆಂಕಟ
ತನ್ನವಳಿಗಾಪ್ತನಾಗಿ ಹೊರೆವನೆ ೩

೨೬

ರಂಗನ್ಯಾಕೆ ತಿರುಗಿ ಬಾರನೆ ಅಂತ
ರಂಗಪೀಠದಿ ಮೊಗದೋರನೆ ಪ.

ಮಂಗಳಾಂಗನೊಳು ಮಾತಾಡದೆ ಸತಿ
ಕಂಗಳು ದಣಿಯದೆ ನೋಡಿ
ಅಂಗನೆ ಹ್ಯಾಗೆ ಜೀವಿಸಲಮ್ಮ ಎ
ನ್ನಿಂಗಿತವಾರಿಗುಸುರಲಮ್ಮ ೧

ಕಲ್ಲೆದೆಯಾದೆ ಇನಿತುದಿನ ಜೀವ
ಕೊಲ್ಲದು ಹೋಯೆಂಬ ರೋದನ
ಫುಲ್ಲನಾಭನ ಎಂಜಲುಂಡರೆ ಕಷ್ಟ
ವಿಲ್ಲದ ಸುಖ ಕಣ್ಣು ಕಂಡರೆ ೨

ಕೃಷ್ಣನ ಶುಭಗುಣ ಹೊಗಳುತ ಬಹು
ಕಷ್ಟ ನೀಗಿದೆ ನಕ್ಕು ತತ್ವತ:
ಸೃಷ್ಟೀಶ ಪ್ರಸನ್ವೆಂಕಟೇಶನ ನೆನೆ
ವಷ್ಟರೊಳಗೆ ಮಾಯವಾದನೆ ೩

೨೭

ಸತ್ಯಭಾಮಾವಿಲಾಸ

ಶ್ಲೋಕ

ಶ್ರೀ ಬ್ರಹ್ಮೇಶ ಸುರೇಂದ್ರ ಪೋಷಕ ಹರಿ ದ್ವಾರಾವತೀಲ್ಲಾಳ್ದನು
ಶ್ರೀ ಭೈಷ್ಮೀವರ ಸತ್ಯಭಾಮೆಯ ಬಹು ಸಾಸ್ರಾಂಗನೇರಾಳ್ದನು

ಈ ಭೂಭಾರಹರಾವತಾರ ಯದುಪಂ ನರ್ಲೀಲೆಯಂ ತಾಳ್ದನು
ಸೌಭಾಗ್ಯಾಂಬುಧಿ ಕೃಷ್ಣನಯ್ಯ ಜನಕಾನಂದಾಬ್ಧಿಲಿಟ್ಟಾಳ್ದನು ೧

ಸೌಪರ್ಣಾಂಸದಲಿಟ್ಟು ದೇವ ತರುವ ಸತ್ಯ ಸಹಾ ಒಪ್ಪುವ
ಆಪನ್ನಾನ್ವಯ ಕಾಮಧೇನೆನಿಸುವ ಅಧ್ಯಾತ್ಮ ಶ್ರೀ ಮಾಧವ
ಈ ಪದ್ಯಂಗಳ ಪೇಳಿಸಿದನು ದಯಾಬ್ಧಿ ಪಾರಿಜಾತಾಖ್ಯವ
ಗೋಪಾಲೇಶನ ಪಾದಪದ್ಮ ನೆನೆವೆ ಆನಂದವಂ ಬೇಡುವೆ ೨

ಪದ

ಶ್ರೀಕೃಷ್ಣ ದ್ವಾರಕಾನಗರದಿ ಪ್ರೇಮದಾ
ನೀಕದಿ ರಾಜಿಸಲಾಗ
ನಾಕದಲರು ಒಂದು ನಾರದ ತಂದಿರೆ
ಶ್ರೀಕಾಂತನಿತ್ತ ರುಕ್ಮಿಣಿಗೆ ೩

ಒಂದು ಹೂವಿನ ಪರಿಮಳವು ನಗರ ತುಂಬಿ
ಇಂದುವದನೆ ಸತ್ಯಭಾಮೆ
ಇಂದು ಗೋವಿಂದ ರುಕ್ಮಿಣಿಗೆ ಕುಸುಮವಿತ್ತ
ನೆಂದು ಕೇಳ್ದಳು ಸುಸ್ವಭಾವೆ ೪

ಶ್ಲೋಕ

ಅರ್ಧಾಂಗಿಯಲಿ ಸ್ನೇಹ ವೆಗ್ಗಳ ಕಣಾ ಮುದ್ದಿಸಿ ಹೂವಿತ್ತನು
ಇದ್ದೇನಿನ್ನು ವೃಥಾ ಭುವಿಯಲಿ ಸಖಿ ನಿರ್ದೇಹವಂ ಸಾರ್ವೆನು
ಕದ್ದು ಬೆಣ್ಣೆಯ ಮೆದ್ದು ಪುಂಶ್ಚಲಿಯರೊಳಿದ್ದಾತನ ಬುದ್ಧಿಯ
ತಿದ್ದಿ ನೋಡಿದೆ ಸೋತೆ ಎನ್ನ ನಳಿತೋಳ್ದೊದಿಸಿ ನಾ ಶೌರಿಯ ೫

ಸಾಕಿನ್ನಾತನ ಚಿತ್ತಪಲ್ಲಟ ಸಟೆ ಆ ಕಾಮಿನಿಪ್ರಿಯನ
ನೂಕದಿನ್ನಿರೆ ಎನ್ನ ಮಂಚಕೆ ಬರಲ್ವೋಕ ಸ್ಮರನಯ್ಯನ
ಯಾಕಿನ್ನಾಭರಣಾಂಬರೋತ್ತರಿ ಸಖೀ ಏಕಾಗ್ರನೇಕಾಂಗನ
ನೀಕಂಡ್ಹೇಳವಮಾನ ತಾಳಳು ಸಖಿ ಜೋಕಿನ್ನು ನಿನ್ನಪಮಾನ ೬

ಪದ

ಕ್ರೋಧ ಕಳವಳಿಕೆ ಮುನಿಸಿನಿಂದಲಿ ಸತ್ಯ
ವಾದಿ ಸತ್ರಾಜಿತ ಕನ್ಯೆ
ಮೇದಿನಿ ಮೇಲೆ ಮಲಗಿದಳು ಧೊಪ್ಪನೆ ಮಂಚ
ಕೈದದೆ ನಿತ್ಯಸುಖಿ ಧನ್ಯೆ ೭

ಬಿಸಿ ಬಿಸಿ ನಿಟ್ಟುಸಿರ್ಗರೆದು ಕೋಮಲ ಮುಖ
ಶಶಿಯ ಕಸ್ತೂರಿ ಅಂಗಯ್ಯಲೊರೆಸಿ
ಬಿಸಜಾಕ್ಷಿ ಕಂಬನಿದುಂಬೆ ಒರತೆಯಿಟ್ಟು
ಎಸೆವ ಕಜ್ಜಲ ಜಲ ಸೂಸಿ ೮

ಶ್ಲೋಕ

ವಕ್ಷೋಜಾತದ ಹೊನ್ನ ಕುಪ್ಪಸವನು ಅಕ್ಷೋದದಿಂ ತೋಯಿಸಲ್
ಸಾಕ್ಷಾನ್ಮಂಗಳ ಮುತ್ತಿನ್ಹಾರ ಕಡಿದಳ್ ಲಕ್ಷಾಭರಣ್ಬಿಟ್ಟಳು
ತಾ ಕ್ಷೋಣಿಯನು ಹೊಂದಿ ಬಿದ್ದು ಬೆಮರ್ದಳ್ ಅಕ್ಷಯ ಸೌಗಂಧಿಯಳ್
ಪಕ್ಷಿವಾಹನ ಮಾಡಿದ ಉಪಕಾರ ಲಕ್ಷಿಸಿ ಹಾಯೆಂದಳು ೯

ಹಾ ಹಾ ಕೈತವ ಮೀನ ಜೃಂಭ ಕಮಠ ಹಾ ಹೈಮದೃಘ್ಘಾತಕ
ಹಾ ಹಾ ನಿಷ್ಕರುಣಾಂಗ ಶಿಕ್ಷಕ ಹರೆ ಹಾ ಹಾ ಬಲಿರ್ವಂಚಕ
ಹಾ ಮಾತೃ ಮೃಗಾರ್ದ ಜಾರವ್ರತ ಹಾ ಹಾ ಹಾ ಕಲಿರ್ಮಾರಕ
ಹಾ ಹಾ ಮದ್ಗೃಹ ದೂರಕ ಪರಸುಖ ಆಶಾಬ್ಧಿ ಸಂಶೋಷಕ ೧೦

ಪದ

ತಾಳಿನ್ನು ತಾಳೆಂದು ತವಕದಿ ಸವತಿಯ
ಮೇಲೆ ಕೋಪಿಸಿ ಸತ್ಯಭಾಮೆ
ಜಾಲಕ ಮಾಲೆಯ ಹರಿದು ಚಿಮ್ಮಿದಳತ್ತ
ಮೇಲೆಣ್ಣೆಗಂಟ ಹರಹಿದಳು ೧೧

ಮೂರ್ಛೆಯೊಳ್ಮೈಮರೆದಂತೆ ತೇಲ್ಗಣ್ಣ ಹಾಕಿ
ದುಶ್ಚಿಹ್ನ ಲೀಲೆಯ ತೋರೆ
ನಿಶ್ಚಲ ಭಾವೆಯನರಿತೆತ್ತಿ ಒಯ್ದರು
ಒಚ್ಚೇರೆಗಂಗಳೆಯರು ಬೆದರಿ ೧೨

ಶ್ಲೋಕ

ಧೈರ್ಯಂಗೆಟ್ಟ ಮೃಗೇಂದ್ರ ನಾರಿಯಿವಳೊ ನೈರಾಶ್ಯ ಬಳ್ಳಿಹಳೊ
ವೈಮಾನಿಕರ ದೇವತ್ಯಾಕೆ ಮುನಿದಳಯ್ಯಯ್ಯೊ ಸೌಜನ್ಯಳೊ
ಮಯೂರಭ್ರಮುಡೇಳ್ ಮಹಾಪತಿವ್ರತೇಳ್ಮತ್ತೇಭ ಗಾಮಿನಿಯಳ್
ಕೈವಲ್ಯಜ್ಞರು ಬಲ್ಲರೀಕೆಯ ಬಗೆ ಕಾಯಯ್ಯ ಕೃಷ್ಣಯ್ಯನೆ ೧೩

ಎತ್ತೊಯ್ದು ಮೃದು ತಲ್ಪ ಮಂಚಕವಳ ಮತ್ತಾಲವಟ್ಟೀಸಲು
ಘೂತ್ಕಾರಂ ಕಿವಿಯೊಳ್ಪೂರೈಸಿ ನುಡಿಸಲ್ಸತ್ಯಂಗನೆ ಸುಮ್ಮನೆ
ಪ್ರತ್ಯುತ್ತರಗೊಡದಿರಲು ಬೆದರಿವರ್ಚಿತ್ತಜನೈಗ್ಹೇಳಿದರು
ಮುಕ್ತಕೇಶಿಯ ವಾರ್ತೆ ಕೇಳಿದು ಬಹು ಚಿತ್ರವಿಚಿತ್ರೆಂದನು ೧೪

ಪದ

ದೂತೇರ ನುಡಿಗ್ಯದುನಾಥನು ಮನ್ನಿಸಿ
ಆತುರದಲಿ ನಡೆತಂದು
ಪ್ರೀತಿಗಗ್ಗಳೆ ಸತ್ರಾಜಿತ ಸಂಜಾತಳೆ
ನೀತವೆ ನೀ ಮುನಿದಿಹುದು ೧೫

ಎಂದು ಮಂಚದಲಿ ಕುಳಿತು ಪ್ರಾಣನಾಥೆ ಬಾ
ಇಂದುವದನೆ ಮಾತನಾಡೆ
ಕಂದ ಕಂದರ್ಪನಾಣೆ ಕಪಟವಿಲ್ಲೆನ್ನಲ್ಲಿ
ಕಣ್ಣೆರೆದಿತ್ತಲೊಮ್ಮೆ ನೋಡೆ ೧೬

ಶ್ಲೋಕ

ಕಸ್ತೂರಿ ತಿಲಕಿಲ್ಲ ನಿನ್ನ ಪಣೆಯೊಳ್ಮುತ್ತಿನ ಬೊಟ್ಟಿಲ್ಲವೆ
ಮತ್ತೇನ್ಭೂಷಣವೇಣಿ ನಿನ್ನ ನೊಸಲೊಳ್ಮುತ್ತಿನ ಮಣಿ ಇಲ್ಲವೆ
ರತ್ನಾಂಕಾಭರಣಿಲ್ಲ ನಿನ್ನ ಶ್ರುತಿಯೊಳ್ಮತ್ವಜ್ರದೋಲಿಲ್ಲವೆ
ಹತ್ತೆಗಟ್ಟಿದ ನಿಷ್ಕಕಂಠ ಪದಕಿಲ್ಲ ಒತ್ತಾದ ಹಾರಿಲ್ಲವೆ ೧೭

ವ್ಯತ್ಯಸ್ತ ಸ್ತನಪಟ್ಟಿಕೆ ರುಚಿರ ಶ್ರೀ ಗಂಧಾನುಲೇಪಿಲ್ಲವೆ
ಸ್ವಸ್ತಂಬ್ರ ಸ್ಮರಣಿಲ್ಲವೆ ಮಮಸಖಿ ಸ್ವಸ್ಥಾಗುಸುಭ್ರಾವೆ ನಂ
ಬು ಸ್ತ್ರೈಣರ್ಬಗೆ ತೋರಿದೆ ಸ್ವಸುಖದಿ ತಾ ಸ್ತ್ರೈಣನಲ್ನಿಶ್ಚಯ
ಹೇ ಸ್ತ್ರೀರತ್ನ ಶಿಖಾಮಣಿ ರಮಣಿ ಕೇಳ್ಸುದ್ಧಚಿತ್ತ ಮಾಣೆಂದನು ೧೮

ಪದ

ಈ ಪರಿ ಭಾವೆಯ ಚರಣದೆಡೆ ಕುಳಿತು
ಶ್ರೀಪತಿ ಪ್ರಾರ್ಥನೆ ಮಾಡೆ
ತಾ ಪತಿಯೊಡನೊಂದು ಮಾತನಾಡಳು ಸತಿ
ತಾಪ ದ್ವಿಗುಣಿಸಿತು ಕೇಳಿ ೧೯

ಮಾನಭಂಗವ ಮಾಡಿದ ಮೇಲೆಂತು ಬಹು
ಮಾನವನೊಲ್ಲದಿಹ ಸತಿಯ
ತಾನೆತ್ತಿ ತೊಡೆ ಮೇಲೆ ಮಲಗಿಸಿಕೊಂಡು ದು
ಮ್ಮಾನವ ಬಿಡಿಸುವ ಹರಿಯು ೨೦

ಶ್ಲೋಕ

ಮಾನವ ಮನ್ನಿಸಿದಾಕೆಯ ಸ್ಥಿತಿಯನು ಶ್ರೀನಾಥ ಕಂಡೆಂದನು
ಏನೆ ಮಾನಿನಿ ನಿನ್ನ ಕೋಪ ಬಿಡದೆ ನಾ ನೋಡಿದೆ ಕಲ್ಲೆದೆ
ಮನುಷ್ಯರೊಳು ದಾವ ಸ್ತ್ರೀಗೆ ಸಲಿಗೆ ತಾನಿತ್ತವಂಗೀ ಬಗೆ
ತಾನೆ ತೋರಿದೆ ವಿಶ್ವ ಶಿಕ್ಷಿಕ ಗಡಾ ಏನಾಶ್ಚರ್ಯ ಗಡಾ ೨೧

ಎಚ್ಚೆತ್ತೆನ್ನೊಳು ಮಾತನಾಡೆ ಪ್ರವುಢೆ ಹುಚ್ಚಾಗದಿರೆಂದನು
ಸಚ್ಚಿನ್ಮೂರ್ತಿಯ ಮಾತಕೇಳಿ ಕುಳಿತಳ್ವಚ್ಚೆರೆಗಣ್ಮುರಿಯಲು
ಉಚ್ಚಾರಂ ಗದಗದ್ಗಿಸಿ ಸ್ಫುರಿತಾಧರೆಗಚ್ಚಗ ತಾನೆಂದನು
ಉಚ್ಚಾರದೊಳಗೊಂದು ನಿನ್ನ ಮನದ ಮಚ್ಚಾಟ ಬೇರೆಂದಳು ೨೨

ಪದ

ನಾರಿ ಪತಿಯ ಬಿಟ್ಟು ದೂರದಿ ಕುಳಿತಳು
ವಾರೆ ನೋಟದ ಬೆಡಗಿನಲಿ
ಜಾರಿದ ಸೆರಗೆದೆಗೇರಿಸಿ ಹೊದ್ದು ಮು
ರಾರಿಗೆ ವಾರೆ ಮುಖದಿರುಹಿ ೨೩

ಕಪಟನಾಟಕ ನಿನ್ನ ಮಾಯವಗಾಧವು
ಕಪಟಗಿತ್ತಿಗೆ ದಿವ್ಯ ಕುಸುಮ
ಅಪಮಾನ ಸತ್ಯಳಿಗೆ ಮಾನ ಬಂಗಾರಿಗೆ
ಚಪಲತೆ ತಿಳಿಯದು ನಿನ್ನ ೨೪

ಶ್ಲೋಕ

ಕೇಳ್ನಾರೀಮಣಿ ನಾರದ ಕುಸುಮದ ಅರಳೊಂದು ಪಾದಾಬ್ಜಕೆ
ನಲ್ವಿಂದರ್ಪಿಸಲಾಗ ಯೋಚಿಸಿದೆ ನಾ ಚೆಲ್ವ ಅಮಭೂರುಹ
ಬಲ್ವಿಂದೀ ನಗರಕ್ಕೆ ನಿನ್ನ ಮನೆಯಂಗಳದೊಳು ಸ್ಥಾಪಿಸುವ
ಉಲ್ಲಾಸಂ ಪಿಡಿದಿರ್ದೆ ನಾ ಕುಸುಮ ಜೇಷ್ಠಳ್ಗೀಯೆ ನೀ ಮುನಿವರೆ ೨೫

ಹೂವೊಂದಾಕೆಗೆ ಕೊಟ್ಟೆ ಸಾಕು ತರುವ ನಿವಾರಿಸಿ ವಜ್ರಿಯ
ಗರ್ವಿಂ ನಿನ್ನಿದಿರಲ್ಲಿ ಕೊಂಡು ಬಹೆ ನಾ ಭವ್ಯಾಂಗಿ ಕೇಳ್ಭಾಮಿನಿ
ದಿವ್ಯಾಮೋದಮಯ ದ್ರುಮಂ ಸುರರಿಗಂ ಸೇವ್ಯಾದುದ ನಿನ್ನಯ
ಭವ್ಯಂಗಳದೊಳಗಿಟ್ಟು ಮೆಚ್ಚಿಸುವೆ ನಾ ನವ್ಯಾದ್ಭುತಂ ನೋಡು ನೀ ೨೬

ಬಿನ್ನಣೆ ಮಾತಲ್ಲ ನಿನ್ನಾಣೆ ಭಾವಕಿ
ಇನ್ನು ದುಮ್ಮಾನವೇಕೆನ್ನುತಾ
ಚೆನ್ನಿಗರರಸನು ರಮಣಿಯ ನಳಿತೋಳ
ಚೆನ್ನಾಗಿ ಸೆಳೆದಪ್ಪಿಕೊಳುತ ೨೭

ಎನ್ನ ಶಪಥವಿದು ನಿನ್ನೆತ್ತಿ ಖಗವೇರಿ
ಕನ್ನೆ ಶಚಿಯ ಮನೋಹರನ
ಮನೆಗೆ ಹೋಗಿ ವಿಜಯರವದಿ ತಂದು
ರನ್ನದ ತರು ನಿನಗೀವೆ ನಾ ೨೮

ಶ್ಲೋಕ

ಹೀಗೆಂದಾಕೆಯ ಮೆಚ್ಚಿಸಿದನು ಆ ವಿಯೋಗಿಯ ಸಂಯೋಗಿಯ
ಭೋಗ ಭಾಗಾಶೆಯ ನಿಯತಿ ಸುಖಿಯಾ ತ್ರೈಗೇಹ ಸಂಸ್ಥಾನಿಯಾ
ಯೋಗೇಶೇಶ್ವರ ತನ್ನ ಪಾರ್ಶ್ವದಿ ದಿವಿಪ ನಾಗೇಶೈರ್ವಂದಿಯಾ
ಶ್ರೀಗೋವಿಂದ ಮನುಷ್ಯರ ತೆರದಲಿ ಹೀಂಗಾಡಿದ ಲೀಲೆಯ ೨೯

ಬಾ ಸತ್ರಾಜಿತ ಗರ್ಭಸಿಂಧು ಸುಮಣಿ ಬಾ ಸೋಮಬಿಂಬಾನನೆ
ಬಾ ಸೌಂದರ್ಯದ ವಾರಿಧಿ ಪರಮೆ ಬಾ ಬಾ ಸತ್ಯಭಾಮೆ ರಮೆ
ಬಾ ಸಂಧ್ಯಾರುಣದಂಬಕಿ ಸುಕಬರೆ ಬಾ ಸ್ವಚ್ಛ ಬಿಂಬಾಧರೆ
ಬಾ ಸದ್ರತ್ನದ ಭೂಷಣೆ ಪ್ರಸನ್ನವಾಗೆ ಸರ್ವತೋಷಾಂಗನೆ ೩೦

ಪದ

ನಿನಗಾಗಿ ವೇದ ಕದ್ದವನ ಕೊಂದೆ
ನಿನಗಾಗಿ ನನ್ನುದಧಿಯಲ್ಲಿ ನಿನ್ನ ತಂದೆ
ನಿನ್ನ ಕದ್ದವನ ಕೊಂದೆ ನೀ ಬರಲೆತ್ತಿದೆ
ನಿನ್ನ ಭಾಗ್ಯದ ಸಖಿ ಹಿಡಿದೆ ೩೧

ನಿನ್ನ ಭಾರವ ತೆಗೆದೆ ನಿನಗಾಗ್ಯಟವಿಯಲ್ಲಿದ್ದೆ
ನಿನ್ನ ಮುನಿಸು ತಿಳಿಯ ಬಂದೆ

ನಿನ್ನನೆ ಮೆಚ್ಚಿ ಅನ್ಯ ಕನ್ಯೇರ ವ್ರತವನಳಿದೆ
ನಿನ್ನ ಪುಣ್ಯದ ಬೆಳಸ ಬೆಳೆದೆ ೩೨

ಶ್ಲೋಕ

ಶ್ರೀ ಶೌರಿ ಸರಸೋಕ್ತಿಯಿಂದ ಸತಿಯ ಲೇಸಾಗಿ ಸಂತೈಸುತ
ಆಸ್ಯಾಬ್ಜಾಂಕಿತ ಸ್ವೇದವನ್ನು ಸುಮುಖವನೊತ್ತಿ ಆರೈದನು
ಕೇಶ ನೇವರಿಸುತ್ತ ತಾ ಚತುಷ್ಕಪರ್ದಾ ಸತ್ಯಭಾಮಿನಿಗೆ
ಶ್ರೀಶ ಮಂಡಿಸಿ ವೇಣಿಯಲ್ಲಿ ಇಡುವ ಭೂಷಣಗಳನಿಟ್ಟನು ೩೩

ಕಸ್ತೂರಿ ತಿಲಕಿಟ್ಟ ನೇತ್ರಯುಗಕೆ ಮತ್ತಂಜನವಿಟ್ಟನು
ವೃತ್ತಾದ ಸುಕಪೋಲದೊಳ್ಮಕರಿಕಾ ಪತ್ರಂಗಳನಿಟ್ಟನು
ಮುಕ್ತಾಹಾರ ಪ್ರವಾಳ ನೀಲಮಣಿಗಳ್ವೆತ್ತಾದ ಸ್ವರ್ಣಮಾಲಿಕಾ
ರತ್ನಾಂಕಾಭರಣಿಟ್ಟನು ಯದುಪತಿ ಸತ್ಯಂಗನಾಪ್ರಿಯನು ೩೪

ಪದ

ಮುಡಿಗೆ ಮಲ್ಲಿಗೆಯ ಮುಡಿಸಿದ ಮದನನಯ್ಯ
ಮಡದಿಯೆದೆಗೆ ಮಲಯಜವ
ಕಡು ನರ್ಮೋಕ್ತಿಗಳಲ್ಲಿ ಪೂಸಿದ ಘನಶ್ಯಾಮ
ಬಿಡು ನಿನ್ನ ಖತಿಯೆಂದ ದೇವ ೩೫

ಕೋಟಿ ಚಂದ್ರಾರ್ಕ ಲಾವಣ್ಯನರ್ಧಾಂಗಿಗೆ
ಕೋಟಿ ಕೋಟ್ಯಾಭರಣಿತ್ತ
ನೋಟ ಬೇಟದಿ ಮನೋರಥವ ಪೂರೈಸಿದ
ನಾಟಕ ಸೂತ್ರ ನಿರ್ಲಿಪ್ತ ೩೬

ಶ್ಲೋಕ

ಇತ್ಯಾದಿ ಬಹುಮನ್ನಿಸಿ ಗರುಡನ ಹತ್ತಿದ ಸ್ವಸ್ತ್ರೀ ಸಹ
ನಿತ್ಯಾನಂದಮಯ ಸ್ವರೂಪ ಅಮರಾವತಿಗೆ ಪೋಪನ್ನಕ

ಪೃಥ್ವೀಜಾತನು ಮತ್ತನಾಗಿ ಅಮರರ್ಮೊತ್ತವ ಬಾಧಿಸಲು
ಇತ್ತೀ ಕಾರ್ಯವ ಬಿಟ್ಟು ಮುಂಚೆ ನಡೆದ ಜೋತಿಷ್ಮತಿಸ್ಥಾನಕೆ ೩೭

ಹೋಗಿ ಆ ನರಕನ್ನ ಸೀಳಿ ಭೌಮಿಜಗಿತ್ತನು ಭಾಗ್ಯವ
ಸೌಗಂಧಿಯರ ಷೋಡಶ ಸಹಸ್ರರ ಯೋಗಾರ್ಹರಂ ತಂದನು
ಶ್ರೀ ಗೋಪೀಜನ ಮೋಹನಾಘಹರಣ ಹೋಗ್ವಾಗ ಸ್ವರ್ಧಾಮಕೆ
ಆಗಿತ್ತಾ ಕುಂಡಲ ಅದಿತಿಗೆ ಮ್ಯಾಗಿಂದ್ರನಿಂ ಸಂಪೂಜ್ಯನು ೩೮

ಪದ

ಶಚಿಯರಸನು ಪೂಜಿಸಿದ ಮೇಲೆ ರಾಣಿಯ
ಉಚಿತಕೆ ಮಂದರ ತರುವ
ಮುಚುಕುಂದವರದನು ತರುತಿರೆ ಅಮರರ
ನಿಚಯ ಸಹಿತ ಕಾದಿದಿಂದ್ರ ೩೯

ಗರುಡನ ಗರಿಯ ಗಾಳಿಯಲೆಲ್ಲರೋಡಿಸಿ
ಧರೆಗೆ ತಂದನು ದ್ವಾರಾವತಿಗೆ
ಅರಸಿಯಂಗಳದೊಳು ನಿಲಿಸಿದ ತರುಮೂಲ
ಸರಿ ಲೆತ್ತವಾಡುವ ಎಂದಳಾಗೆ ೪೦

ಶ್ಲೋಕ

ಪಾರಿಜಾತದ ಮೂಲ ಚೈತ್ಯದಲ್ಲಿನ ಶ್ರೀರಂಗ ರತ್ನಾಸನ
ಸಾರಿ ಇಬ್ಬರು ಲೆತ್ತವಾಡುವ ಹರಿ ನಾರೇರ ಮುಂದೆನ್ನನು
ಭೂರಿ ಮಾನಿಯ ಮಾಡು ಸ್ವಾಮಿ ಎನಲು ಕಾರುಣ್ಯ ವಾರಿನಿಧಿ
ಧಾರಿಣಿಯಲ್ಲಿ ಸ್ತ್ರೈಣನೆಂಬರು ಸಖಿ ಈ ರೀತಿ ಮಾಣೆಂದನು ೪೧

ನೀ ಲೆತ್ತವನು ವೃಕ್ಷ ಮೂಲದಲಿ ಎನ್ನೊಳಾಡ ಒಲ್ಲೆಂದರೆ
ಮೇಲೀ ಅಂಬರ ಭೂಷಣೇಕೆ ವಿಭುವೆ ಮೇಲೀ ಶರೀರೇತಕೆ
ಶ್ರೀಲೋಲ ಶರಣೇಪ್ಸಿತದ ಎನಿಸುವ ನಿನ್ನ ಬಿರುದೇತಕೆ
ಬಾಲೇರ್ಮುಂದಪಹಾಸ್ಯವಾಯಿತೆನುತ ಲೋಲಾಕ್ಷಿ ತಾ ಮುನಿದಳು ೪೨

ಪದ

ಹಂಸದುಪ್ಪಳದ ಸುಪ್ಪತ್ತಿಗೆ ಮಂಚದಿ ರಾಜ
ಹಂಸಗಮನೆ ಮುನಿದು ಮಲಗೆ
ಹಂಸ ಶಶಾಂಕನಂತ:ತೇಜ ಮನೆಗೆ ಬರೆ ರ
ಮಾಂಶಳು ಕದವನಿಕ್ಕಿದಳು ೪೩

ನೀನೆಂದ ಮಾತ ನಡೆಸುವೆ ಮುನಿಯದಿರು
ಮಾನಿನಿರನ್ನೆ ಕದತೆರೆಯೆ
ಶ್ರೀನಾಥ ಹೀಗೆ ಮನ್ನಿಸಿ ಕದತೆರೆಸಿದ ದ
ಯಾನಿಧಿ ಪ್ರಸನ್ವೆಂಕಟೇಶ ೪೪

ಶ್ಲೋಕ

ಲಕ್ಷ್ಮೀ ಭೂರಮಣ ಭವಾಬ್ಧಿಮಥನ ಪಕ್ಷೀಂದ್ರ ಸದ್ವಾಹನ
ಮೋಕ್ಷಾಧೀಶ ವಿರಿಂಚಿ ವಾಯು ಫಣಿ ಭೂ ತ್ರ್ಯಕ್ಷೇಂದ್ರ ದೇವಾಯನ
ವಕ್ಷೋಜಾವರ ಸುಂದರಾಗ್ರಣಿ ವರಲಕ್ಷ್ಮೀ ಮನೋನಾಯಕ
ರಕ್ಷಿಸಿದನು ಸ್ವಸ್ತ್ರೀಯ ನೆರೆದನು ಸಾಕ್ಷಾತ್ ಪ್ರಸನ್ವೆಂಕಟ ೪೫

ಅನಂತಾಬ್ಜ ಭವಾಂಡ ಹುಟ್ಟಿ [ಸಿ] ಸ[ಲಹು] ವತಾನೇ ಬಯಲ್ಮಾಡುವ
ತಾ ನಿರ್ಲಿಪ್ತ ಸದಾಗಮೈಕ ಸುವಿಜಯಾನಂದ ಪೂರ್ಣಾತ್ಮನು
ಈ ನಾಟ್ಯವನು ತೋರಿದ ಸುಜನರಿಗಾನಂದ ವೃದ್ಧಿಕರ
ತಾನಾಡಿದನು ಲೆತ್ತವ ಸತಿಗೂಡ ಜ್ಞಾನಿ ಪ್ರಸನ್ವೆಂಕಟ ೪೬

ಪದ

ಮಂಗಳಾತ್ಮಕ ವಿಶ್ವನಾಟಕವಾಡಿದ ಸ
ತ್ಯಂಗನೆಯೊಳು ಲೆತ್ತದಾಟ
ಅಂಗನೆ ಷೋಡಶ ಸಹಸ್ರರ ಸೋಲಿಸುವ
ರಂಗ ಪ್ರಸನ್ನವೆಂಕಟೇಶ ೪೭

ಶ್ರೀ ಸುರವೃಕ್ಷತಳದಿ ರತ್ನಾಭರಣಮಯ
ಹಾಸಿಗೆಯಲಿ ಲೆತ್ತವಾಡಿ
ನೀ ಸೋತೆ ಸತ್ಯಭಾಮಿನಿಯೆಂದರೆ ಹರಿ
ನೀ ಸೋತ್ಯೊ ಪ್ರಸನ್ನವೆಂಕಟೇಶ ೪೮

ಲೇಶ ಹಾಸದಿ ಜಗತ್ಪ್ರಪಂಚವ ತೋರುತ್ತ
ವಾಸುದೇವ ಪ್ರಕೃತಿ ಗೂಡಿ
ಈ ಶೋಭಿಸುವ ದ್ವಾರಕಾ ನಗರದಲಿದ್ದ
ಪ್ರಸನ್ವೆಂಕಟೇಶನ ನೋಡಿ ೪೯

ಅನಂತದೇಶದಿ ಅನಂತ ಕಾಲದಿ
ಅನಂತ ಸದ್ಗುಣ ಸಾಂದ್ರ
ದೀನ ದಯಾನಿಧಿ ಪ್ರಸನ್ನವೆಂಕಟ ಕೃಷ್ಣ
ಮನುಷ್ಯಲೀಲೆಯ ತೋರಿದ ೫೦

ಈ ಸತ್ಯಭಾಮಾವಿಲಾಸದ ಪದ್ಯಪದ
ಲೇಸಾಗಿ ನರನಾರಿಯರು
ತೋಷಭರಿತರಾಗಿ ಪಾಡಲು ಸುಖವೀವ
ಶ್ರೀಶ ಪ್ರಸನ್ನವೆಂಕಟೇಶ ೫೧

೨೮

ಸಾಮಜಗಮನೆ ಕೇಳೀ ಮನ ನಿಲ್ಲದು
ಸ್ವಾಮಿಯ ಕರೆತಾರೆ ನೀರೆ ಪ.

ಯಾತರ ಜನುಮ ಇನ್ನ್ಯಾತರ ಬಾಳುವೆ
ಪ್ರೀತಿಯಿಲ್ಲವೆ ಎನ್ನಲ್ಲಿ ಅಗಲಿ
ಧಾತುಗುಂದಿಹ್ಯದು ಮತ್ಯಾತಕೆ ಸಲ್ಲವಮ್ಮ
ನಾಥನಿದಿರಿನಲ್ಲಾಸೆ ಉದಿಸೆ ೧

ಕಣ್ಣ ಕಜ್ಜಲ ನಿಲ್ಲದಿನ್ನೇನು ತರವಮ್ಮ
ರನ್ನದುಡುಗೆ ಭಾರ ತೋರ
ಪನ್ನಗವಾದವು ಎನ್ನ ಹೂವಿನಹಾರ
ಮನ್ನಿಸಿ ಬರಲೊಲ್ಲನೆ ಎನ್ನೊಲ್ಲನೆ ೨

ಕೂಡಿದವಳ ಹೀಗೆ ಕಾಡಬಹುದೇನಕ್ಕ
ಬ್ಯಾಡ ಕಠಿಣ ಮನಸು ಮುನಿಸು
ನೋಡೆ ಪ್ರಸನ್ನವೆಂಕಟ ಗಾಡಿಕಾರನು ನೆರದು
ಆಡಿದನೆ ಕಾಂತೆ ಏಕಾಂತ ೩

೨೯

ಸುಳಿದನ್ಯಾರೆ ಈಗ ಸುಳಿದನ್ಯಾರೆ
ಕೆಳದಿ ಎನ್ನುಪ್ಪರಿಗೆಯ ಮುಂದೆ
ಹೊಳೆವ ಹೊಂಬಕ್ಕಿಯ ಮೇಲೆ
ಥಳಥಳಿಪ ಮಿಂಚಿನಂತೆ ಪ.

ಎಸೆವ ಮಣಿ ಕನಕಾಭರಣಿಟ್ಟು
ನಸುನಗೆ ಬೆಳಗ ವೈಸರಿಸಿ
ಬಿಸಜಾಕ್ಷಿಯಳೋರ್ವಳ ಕೂಡ
ಹೊಸ ಪರಿ ಸರಸವಾಡುತಲಿ ೧

ಮುಂದುಗ್ಗಡಿಪ ಸುರಸಂದೋಹ
ಹಿಂದಕ್ಕೆಳದಿ ಮುನಿಸಮ್ಮೋಹ
ಅಂದದಿ ಮುಂಗಡಿರುವ ವಾದ
ಸಂದಣಿಯ ಸೊಬಗಿನಲ್ಲಿ ೨

ಎನ್ನ ಮನದಿ ನೇಹವ ಬೀರಿ
ಇನ್ಯಾಕೆ ದೂರ ನೋಡಿದನೆ
ಮನ್ನಿಸ್ಯವನ ತಾರೆ ಶ್ರೀ ಪ್ರ
ಸನ್ನವೆಂಕಟವರದನ ಬೇಗ ೩

೩೦

ಸುಳಿದವನಾರಮ್ಮಯ್ಯ ಬೆಟ್ಟದಮೇಲೆ
ಹಳುವದೊಳಿಹ ತಿಮ್ಮಣ್ಣ ಪ.

ವಾರೆದುರುಬಿಗೆ ಸಂಪಿಗೆಗೂಡಿ ವಿಹಗವ
ನೇರಿ ಬರುವನಕ್ಕ
ವಾರಿಜಾನನ ವಜ್ರ ಮಣಿದಂಥಾನಗೆ ಸೊಬ
ಗೇರಿದ ಹರಿ ಕಾಣಕ್ಕ ೧

ಅಡಿಗೊಮ್ಮೆ ಜೀಯಾ ಪರಾಕೆಂಬ ಸುರಮುನಿ
ಗಡಣದ ವೀರನಾರಮ್ಮ
ನುಡಿದರೆ ನುಡಿವ ನುಡಿಯದಿದ್ದರೊಲ್ಲದ
ಬೆಡಗಿನ ಮಹಿಮ ನೀರೆ ೨

ಮಕರಕುಂಡಲ ಶಂಖ ಚಕ್ರ ಕೌಸ್ತುಭ ಶಿರಿ
ಯುಕುತ ವಕ್ಷದವನಾವನೆ
ಅಖಿಳ ಜಗವ ತನ್ನ ಬಸುರಲಿ ಬಚ್ಚಿಟ್ಟ
ಸಖ ಶ್ರೀನಿವಾಸದೇವನೆ ೩

ಸಾಮಗಾನವನಾದರಿಪ ಶಾಮಲಾಂಗದ
ಕೋಮಲ ದಾರು ಹೇಳೆ
ವ್ಯೋಮಕಚಾಜಾದಿ ವಂದಿತಾನತಜನ
ಪ್ರೇಮವಾರಿಧಿ ನೋಡೆಲೆ ೪

ಸಿರಿ ಅಂಜನಾದ್ರಿಯೊಳಾವಾಗ ಮಂಗಳ
ಚರಿತನು ದಾರೆ ತಂಗಿ
ಮರೆಹೊಕ್ಕವರ ಕಾವ ಪರಸನ್ನವೆಂಕಟ
ವರದನ ನಂಬು ಬೇಗ ೫

೩೧

ಹಕ್ಕಿಯ ಹೆಗಲೇರಿ ಬಂದವಗೆ ನೋ
ಡಕ್ಕ ಮನಸೋತೆ ನಾನವಗೆ ಪ.

ಸತ್ರಾಜಿತನ ಮಗಳೆತ್ತಿದ ಉ
ನ್ಮತ್ತ ನರಕನೊಳು ಕಾದಿದ
ಮತ್ತೆ ಕೆಡಹಿದ ಅವನಂಗವ
ಸತಿಗಿತ್ತನು ಆಲಿಂಗನವ ೧

ಹದಿನಾರು ಸಾವಿರ ನಾರಿಯರ ಸೆರೆ
ಮುದದಿಂದ ಬಿಡಿಸಿ ಮಾ ಮನೋಹರ
ಅದಿತಿಯ ಕುಂಡಲ ತಳೆದಾ ಹರ
ವಿಧಿ ಸುರ ನೃಪರನು ಸಲಹಿದ ೨

ಉತ್ತಮ ಪ್ರಾಗ್ಜ್ಯೋತಿಷ ಪುರವ ಭಗ
ದತ್ತಗೆ ಕೊಟ್ಟ ವರಾಭಯವ
ಕರ್ತ ಕೃಷ್ಣಯ್ಯನ ನಂಬಿದೆ ಶ್ರೀ
ಮೂರ್ತಿಯ ಪಾದವ ಹೊಂದಿದೆ ೩

ನರಕ ಚತುರ್ದಶಿ ಪರ್ವವ ಹರಿ
ಹರುಷದಿ ಪ್ರಕಟಿಸಿದನು ದೇವ
ಶರಣಾಗತಜನ ವತ್ಸಲ ರಂಗ
ಪರಮ ಭಾಗವತರ ಪ್ರತಿಪಾಲ ೪

ಹೊಗಳಿ ಕೃಷ್ಣಯ್ಯನ ಮಹಿಮೆಯ ಮುಕ್ತಿ
ನಗರದ ಅರಸನ ಕೀರ್ತಿಯ
ಜಗದೀಶ ಪ್ರಸನ್ವೆಂಕಟೇಶನೆ ಭಕ್ತ
ರಘಹಾರಿ ರವಿಕೋಟಿಕಾಶನೆ ೫

೩೨

ಹೇಳೆ ಕಾಮಿನಿ ರಂಗಗೆ ಬುದ್ಧಿಯ
ಹೇಳೆ ಕಾಮಿನಿ ರಂಗಗೆ ಪ.

ಹೇಳಿದಂದದಿ ಕೇಳಿ ಕಾಲಿಗೆರಗುವಳ
ಮ್ಯಾಲೆ ಕೋಪಿಸಿಕೊಂಡು ಬಾಲೇರ ನೆರೆವಂಗೆ ಅ.ಪ.

ತನ್ನ ಮೈಗಂಪು ಕಸ್ತೂರಿಗಿಂದಧಿಕ ಕಂಡೆ
ತನ್ನಧರದ ರಸಾಮೃತಗಿಂತ ಸವಿದುಂಡೆ
ತನ್ನ ದಂತದ ಛಾಯಕೆ ಅಂಜದೆ ಕರ
ಜನ್ನಟ್ಟಿಸಲು ಕುಚಕ್ಕೆ ಸುಂದರಿಯ
ರನ್ನು ಮೆಚ್ಚಿದ ದಾನಕ್ಕೆ ಇನಿಯಳಿರೆ
ಅನ್ಯರ ಮೋಹಿಪಗೆ ಕಲಿಮಾನವಗೆ ೧

ಸ್ನೇಹ ನೋಟಕೆ ಮೆಚ್ಚಿ ಸುಖಭಾರ ತನಗಿತ್ತೆ
ಬಾ ಹೆಣ್ಣೆ ಎನಲು ಭಾಗ್ಯಾಂಬುಧಿಗೊಶವಾದೆ
ತಾ ಹೊನ್ನಾಸೆಗೆ ಮಂಚದಿ ಘಾತಿಸಿದರೆ
ನೇಹಿಯ ಬೆರದೆ ಕೆಲದಿ ಕರಾಳ ಚೇಷ್ಟೆಗೆ
ನೇಹದಾರದಲೊಪ್ಪಿದೆ ಎನ್ನನು ಬಿಟ್ಟು
ಬಾಹು ಜೋರಿನ ಬುದ್ಧ ವಾಜಿಯಲ್ಲೇರ ೨

ಚಪಲತೆಯಲ್ಲಿ ಕಪಟ ವಿದ್ಯದಲಿ ಭೂಪ
ಕುಪಿತಾಶಾಯಿಲ್ಲ ಹೆಜ್ಜೆ ಹೆಜ್ಜೆಗೆ ಕಥೆಯಿಲ್ಲ
ನೃಪಕೃಷ್ಣ ಸಲಹೆಂದರೆ ಎನ್ನಿಂದಾದ
ಅಪರಾಧ ಕ್ಷಮಿಸೆಂದರೆ ಪ್ರಸನ್ವೆಂಕಟ
ಕೃಪಿ ಧರ್ಮಿಯೆಂದರೆ ಇದಕೆ ತಾ
ವಿಪರೀತ ತಿಳುಹನಂತೆ ಹಾಗಲ್ಲಂತೆ ೩

(ಇ) ವಾತ್ಸಲ್ಯಭಾವ

೩೩

ಅಮ್ಮ ಕೇಳೆ ಯಶೋದಮ್ಮ ಗೋಪಿಯರೆನ್ನ
ಸುಮ್ಮನೆ ದೂರುತಿದ್ದಾರೆ ಬುದ್ಧಿ ಹೇಳೆ ಇವರಿಗೆ ಪ.

ನಾನೊಲ್ಲೆನೆಂದರು ಗೋಪ ಮಾನಿನಿರೆತ್ತಿಕೊಂಬರು
ಆನೆಯಾಡಬಾರೊ ರಂಗ ಎಂದೆನ್ನನೊಯಿದು
ತಾನಾಗಿ ಗೋರಸವನು ಕೊಟ್ಟರುಣ್ಣದೆ ಚೆಲ್ಲುವೆ
ನೀನಣ್ಣನ ಕರೆದು ಕೇಳೆ ಗೋವಳೇರ ಠಕ್ಕ ಡೌಲು ೧

ಸಾಸಿರ ಬಿಸಳಿಗೆ ಬೆಣ್ಣೆ ಕೂಸುಗಳು ಮೆಲ್ಲೋದುಂಟೆ
ಹೇಸಿಕೆ ಬರುತಿದೆ ಅವರ ಮೊಸರು ಕಂಡು
ಮೀಸಲ ಮುರಿದರೆ ಅವರ ಜೆಟ್ಟಿಗ ನನ್ನ ಕಚ್ಚನೆ
ಹಾಸ್ಯದೊಳು ಮಾತನಾಡಿ ಮೋಸ ಮಾಡುತಿಹರಮ್ಮ ೨

ತಮ್ಮ ಮಕ್ಕಳುಪಟಳ ನಮ್ಮ ಮೇಲಿಕ್ಕುತಿಹರು
ತಮ್ಮ ನಲ್ಲರ ಕಾಟವು ನಮ್ಮದೆಂಬರು
ನಿಮ್ಮ ಮಕ್ಕಳ ಗುಣವ ನೀ ಬಲ್ಲೆ ನಂದನರಾಣಿ
ಗುಮ್ಮನಂಜಿಕೆಗೆ ಮನೆಯೊಳಿಹೆನೆ ಪ್ರಸನ್ವೆಂಕಟ ೩

೩೪

ಅಮ್ಮ ಬಾರೊ ರಂಗಮ್ಮ ಬಾರೊ ಪುಟ್ಟ
ತಮ್ಮ ಬಾರೊ ಮುದ್ದಿನುಮ್ಮ ತಾರೊ ಪ.

ಅಯ್ಯ ಬಾರೊ ಅಜನಯ್ಯ ಬಾರೊ ಚಿನು
ಮಯ್ಯ ಬಾರೊ ಬೆಣ್ಣೆಗಯ್ಯ ಬಾರೊ ೧

ಕಂದ ಬಾರೊ ಪೂರ್ಣಾನಂದ ಬಾರೊ ಸುರ
ವಂದ್ಯ ಬಾರೊ ಬಾಲ್ಮುಕುಂದ ಬಾರೊ ೨

ಅಣ್ಣ ಬಾರೊ ತಾವರೆಗಣ್ಣ ಬಾರೊ ಎನ್ನ
ಚಿನ್ನ ಬಾರೊ ಶಿಶುರನ್ನ ಬಾರೊ ೩

ನಲಿದು ಬಾರೊ ಕರುಣಾಜಲಧಿ ಬಾರೊ ಆಡಿ
ಬಳಲ್ದೆ ಬಾರೊ ಕರೆದರೊಲಿದು ಬಾರೊ ೪

ಶ್ರೀಶ ಬಾರೊ ಹಸುಗೂಸೆ ಬಾರೊ ಪರಿ
ತೋಷ ಬಾರೊ ಪ್ರಸನ್ವೆಂಕಟೇಶ ಬಾರೊ ೫

೩೫

ಅಳದಿರೊ ಸುಮ್ಮನಿರಮ್ಮ ನೀ
ಅಳದಿರೊ ಬವ್ವ ಬಂದಾವಮ್ಮ ಕೃಷ್ಣಮ್ಮ ಪ.

ನಾಲ್ಕು ಮೊಗವುಳ್ಳ ಬವ್ವ ಹದಿ
ನಾಲ್ಕು ಜಗವ ಜೋಳಿಯಲ್ಲಿಟ್ಟ ಬವ್ವ
ಗೋಳಿಟ್ಟಿಸುತಿದೆ ಬವ್ವ ನಿನ್ನ
ಕಾಲು ಕಂಡರೆ ಕಚ್ಚಿ ಕೊಂಡೊಯ್ವ ಬವ್ವ ೧

ಗಗನ ತುಂಬ್ಯಾಡುವ ಬವ್ವ ಪ್ರಾ
ಣಿಗಳ ದೇಹವ ಪೊಕ್ಕು ಚೇಷ್ಟಿಪ ಬವ್ವ
ಜಗವನಲ್ಲಾಡಿಪ ಬವ್ವ ನಿನ್ನ
ಮೊಗವರಿತು ದೂರಲಿ(ದಿ?) ನಿಂತಿಪ್ಪ ಬವ್ವ ೨

ಮೊಗವೈದು ಪಣೆಗಣ್ಣ ಬವ್ವ ಪುಲಿ
ದೊಗಲು ಕೆಂಜೆಡೆ ರುಂಡಮಾಲೆಯ ಬವ್ವ
ಬಗೆಯಿಂದ ಪೆಣ್ಣೆತ್ತಿ ಬವ್ವ ತಾ
ಸೊಗಸಿಲೆ ರಾಮರಾಮೆನುತಿದೆ ಬವ್ವ ೩

ಮೈಯೆಲ್ಲ ಕಣ್ಣಿನ ಬವ್ವ ತನ್ನ
ಕೈಯಲ್ಲಿ ವಜ್ರವ ಬೀಸುವ ಬವ್ವ
ಉಯ್ಯಲಾಡುತಲಿದೆ ಬವ್ವ ನಿನ್ನ
ಒಯ್ವೆನೆನುತ ಬಂತು ಹಲಕಾಲ ಬವ್ವ ೪

ಒಂದಲ್ಲ ನೂರಲ್ಲ ಬವ್ವ ನಿನ್ನ
ಮಂದಿರ ಸುತ್ತುತವನಂತ ಬವ್ವ
ಪೊಂದೊಟ್ಟಿಲೊಳು ನಿದ್ರೆಗೆಯ್ಯೈ ಎನ್ನ
ತಂದೆ ಪ್ರಸನ್ವೆಂಕಟ ಸಿರಿದೊರೆಯೆ ೫

೩೬

ಆಟಪಾಟವ ನೋಡಿ ಧನ್ಯರು ರಂಗಯ್ಯನಾಡ್ವ
ಆಟಪಾಟವ ನೋಡಿ ಧನ್ಯರು ಪ.

ಹೊಕ್ಕಳಲ್ಲಿರೊ ಮಗನು ಕಂಡರೆ
ನಕ್ಕಾನೆಂಬ ಹೇಯ ಬಿಟ್ಟು
ಚಿಕ್ಕರೊಡನೆ ನಂದವ್ರಜದಿ
ಮಕ್ಕಳಂತಲಿಪ್ಪ ರಂಗನಾಟ ೧

ಅಂಗಳದಲ್ಲಿದ್ದ ಪಂಕದಲ್ಲಿ
ಮುಂಗೈಯ ಮುರಾರಿ ಕೃಷ್ಣ
ಸಂಗದೆಳೆಯ ಮಕ್ಕಳೊಡನೆ
ಹಿಂಗದೆ ಬೈಯ್ಯಾಟವಾಡುವಾಟ ೨

ಚಿನ್ನ ಬಾ ನೀ ಹಸಿದೆಯೆಂದು
ಚೆನ್ನ ನೀ ಉಣಿಸಿದರೊಲ್ಲದೆ
ಕನ್ನವಿಕ್ಕಿ ಗೊಲ್ಲರ ಮನೆಯ
ಬೆಣ್ಣೆಮೊಸರ ಸೂರ್‍ಯಾಡಿ ಮೆಲ್ಲುವಾಟ ೩

ರಂಬಿಸಿ ಗೋಪಿ ನೀಲವರ್ಣದ
ಬೊಂಬೆ ಬಾಲ ತೋಟಿ ಬೇಡೆನೆ
ಕೊಂಬು ಕೊಳಲು ಸೆಳೆದು ಹೆಟ್ಟಿಕುಟ್ಟುವ
ಡೊಂಬಿಕಾರ ವೀರಧೀರನಾಡುವಾಟ ೪

ಅಡಗಿದರ್ಭಕರ ಬಲ್ಪಿನಿಂದಲೆ
ಹಿಡಿದುತಂದು ಚಿಣ್ಣಿ ಚಂಡನಾಡುತ
ಬಡಿದು ಸೋಲಿಸಿ ದೂರು ಬರುವ ಮುನ್ನೆ
ಹುಡಿಯ ಹೊರಳೇಳುವ ತೊಂಡೆಕಾರ ದೇವನಾಟ ೫

ಮೃತ್ತಿಕೆಯನುಂಬ ಮಗನ ಕಂಡು
ಮತ್ತೆಶೋದೆ ಅಕ್ಕಟೆಂದು
ತುತ್ತಿಸಿದ ಮಣ್ಣ ತೆಗೆಯಲಾಗಳೆ
ಮರ್ತ್ಯ ನಾಕ ವಿಸ್ತಾರ ತೋರಿದ ೬

ಪಲವು ಹಗ್ಗದಿಂ ಕಟ್ಟಿದ ಗೋಪಿ
ಲಲನೆಗಚ್ಚರಿಯಾಗಿ ಉಲೂ
ಖಲನ ಎಳೆದು ಮತ್ತಿಯ ಮರಗಳ
ಛಲದಿ ಮುರಿದ ವಿಚಿತ್ರ ಚರಿತ್ರನ ೭

ಕರುಣದೋರಿ ಗೋಪಾಂಗನೇರ
ತೋರದ ಮೊಲೆಯುಂಡ ವರಶಿಶುಗಳ
ಉರುಳಗೆಡಪ್ಪವರೊಳು ನಲಿವ
ದುರುಳ ಮಾಯಕಾರಖಿಳರೊಡೆಯನ ೮

ಆರ ಪುಣ್ಯವೆಂತಂತೆ ಲೀಲೆಯ
ತೋರಿ ಮುದ್ದು ಮೋಹವ ಬೀರಿದ
ಸಾರಿದ ಭಕ್ತವತ್ಸಲ ನಮ್ಮ ಜಾರ
ಚೋರ ಪ್ರಸನ್ವೆಂಕಟೇಶನಾಡುವ ಆಟ ೯

३೭

ಆನೆ ಬಂತಾನೆ ಬಂತಾನೆ ಬಂತಮ್ಮ
ದಾನವಕದಳಿಯ ಕಾನನ ಮುರಿವ ಮದ್ದಾನೆ ಬಂತಮ್ಮ ಪ.

ಉಂಗುರುಗುರುಳು ನೀಲಾಂಗ ಚೆಲ್ವಾನೆ
ಕಂಗಳು ಹೊಳೆವೊ ವ್ಯಾಘ್ರಾಂಗುಲಿಯಾನೆ
ಬಂಗಾರದಣುಗಂಟೆ ಶೃಂಗಾರದಾನೆ
ಮಂಗಳತಿಲಕದ ರಂಗನೆಂಬಾನೆ ೧

ಅಲೆದೊಲೆದಾಡುವ ಎಳೆಮರಿಯಾನೆ
ಕೆಳದಿ ಗೋಪಿಯರೊಳು ಗೆಳೆತನದಾನೆ
ಘಳಿಲು ಘಳಿಲು ರವದಿ ಸುಳಿದಾಡುವಾನೆ
ಮಲೆತವರೆದೆ ತುಳಿದಾಡುವಾನೆ ೨

ನಳಿನಭವರಿಗೆ ತಾ ನಿಲುಕದ ಆನೆ
ಹಲವು ಕವಿಗಳಿಗೆ ಸಿಲುಕದೀ ಆನೆ
ನಲವಿಂದ ಭಕ್ತರ ಸಲಹುವ ಆನೆ
ಸಲೆ ಪ್ರಸನ್ವೆಂಕಟನಿಲಯನೆಂಬಾನೆ ೩

३೮

ಆರ ಬಾಲಕನೆ ಜಾರನಿವನಾರ ಬಾಲಕನೆ ಪ.

ಗುಂಡಿಗೆ ಬೆಣ್ಣೆ ಕದ್ದುಂಡಸಿಯರ ಕುಚ
ಪುಂಡರೀಕವಿಡಿದು ಭಂಡು ಮಾಡುತಲಿಹ ೧

ನಿದ್ದೆಯ ಕಾಲಕೆ ಸದ್ದಿಲ್ಲದೆ ಬಂದು
ಗದ್ದ ಮುಂಡ್ಯಾಡಪ್ಪಿ ಮುದ್ದು ನೀಡುವ ನೋಡೆ ೨

ಅರ್ತಿಲಿ ಬಾಲನ್ನೆತ್ತಿಕೊಂಡರೇನಮ್ಮ
ಅತ್ತೆ ಮಾವನ ಮುಂದೆ ಬತ್ತಲೆ ಮಾಡುವ ೩

ಬಲು ಮೋಹ ಬರುತಿರೆ ಎಳೆಯನ ಕಾಣುತ
ಅಳುಕದೆಮ್ಮುಡಿಯೇರಿ ಕಳೆವ ಕಂಚುಕ ಇವ ೪

ಹಸಿಯೇ ಅಳಲು ಅವಚಿ ರಂಬಿಸಿದ ಮೇಲೆ
ಪ್ರಸನ್ವೆಂಕಟ ಕೃಷ್ಣ ನಸುನಗು ನಗುತಾನೆ ೫

೩೯

ಆವ ಪುಣ್ಯವೊ ಗೋಪಿಗಾವ ಪುಣ್ಯವೊ ಪ.

ಆವ ಪರಬೊಮ್ಮನಾವಾವ ಪರಿಯಲಾಡಿಸುವ ಅ.ಪ.

ಮಾರನನ್ನ ಪೆತ್ತನ ಕುಮಾರನೆಂದು ಕರೆದು ತನ್ನ
ಮಾರ ಬೀಸಿ ಬಿಗಿದಪ್ಪಿ ಮೋರೆ ನೋಡಿ ಮೊಲೆಯ ಕೊಡುವ ೧

ಕಾಲನಾಗಿ ಜಗವ ತತ್ಕಾಲದಲ್ಲಿ ನುಂಗುವಂಗೆ
ಕಾಲ ಮೇಲೆ ಮಲಗಿಸಿ ತ್ರಿಕಾಲದಲ್ಲಿ ಹಾಲನೆರೆವ ೨

ನೀತ ಪ್ರಭು ವಿಶ್ವಕೆ ವಿನೀತನಾಗಿ ಕೈಯ ಒಡ್ಡೆ
ನೀತಿ ಹೇಳಿ ನವನವನೀತವಿತ್ತು ರಂಜಿಸುವ ೩

ಆನೆಗೊಲಿದು ಎಂಟುದಿಕ್ಕಿನಾನೆಯಾಳ್ದ ಅಪ್ರತಿಮ ದ
ಯಾನಿಧಿಯ ಕುಳ್ಳಿರಿಸಿ ಆನೆ ಬಂತಂತಾನೆಯೆಂಬ ೪

ತೋಳ ನೋಡು ಧೈರ್ಯದೀರ್ಹತ್ತು ತೋಳಿನವನ ಹೋರುವ ನಳಿ
ತೋಳವಿಡಿದು ವಾರಂವಾರ ತೋಳನ್ನಾಡೊ ಮಗನೆ ಎಂಬ ೫

ತಾರಕೋಪದೇಶಕಗೆ ತಾರಕ ರಂಗನಳಲು
ತಾರಕಪತಿಯ ತೋರಿ ತಾರಕ್ಕ ಬಿಂದಿಗೆಯೆಂಬ ೬

ದಟ್ಟವಾದ ಜೀವಜಾಲದ ಅಟ್ಟುಳಿ ನಿವಾರಣಂಗೆ
ದಟ್ಟಿ ದಟ್ಟಿ ಎಂದು ರಂಗನ ದಟ್ಟ ಸಾಲನಿಕ್ಕಿಸುವ ೭

ಚಿನ್ಮಯಾತ್ಮ ಮುಕ್ತಾಮುಕ್ತ ಚಿನ್ನರನಾಡಿಸುವಂಗೆ
ಚಿನ್ನ ತಾ ಹೊನ್ನ ಗುಬ್ಬಿ ಚಿನ್ನ ಗುಬ್ಬಿಯಾಡಿಸುವ ೮

ದೃಷ್ಟಾದೃಷ್ಟದೇಹಿಗಳದೃಷ್ಟ ನಿಯಾಮಕಂಗೆ
ದೃಷ್ಟಿ ತಾಕಿತೆಂದು ತೆಗೆದು ದೃಷ್ಟಿ ದಣಿಯೆ ತುಷ್ಟಿ ಬಡುವ ೯

ಅನ್ನಮಯನು ಬ್ರಹ್ಮಾದ್ಯರಿಗೆ ಅನ್ನಕಲ್ಪತರು ಪರ
ಮಾನ್ನ ಚಿನ್ನಿಪಾಲಿನಿಂದ ಅನ್ನಪ್ರಾಶನ ಮಾಡಿಸುವ ೧೦

ನಿತ್ಯತೃಪ್ತ ನಿತ್ಯಾನಂದ ನಿತ್ಯಭೋಗಿ ನಿತ್ಯತಂತ್ರ
ನಿತ್ಯಕರ್ಮನ್ನೆತ್ತಿಕೊಂಡು ನೆತ್ತಿ ಮೂಸಿ ಮುದ್ದಿಸುವ ೧೧

ಆ ಲಯದಲ್ಲಾಲದೆಲೆ ಆಲಯಗೆ ತೊಟ್ಟಿಲು ಉ
ಯ್ಯಾಲೆಯಿಟ್ಟು ಮುದ್ದು ಮಾತನಾಲಿಸಿ ಜೋಗುಳವ ಪಾಡುವ ೧೨

ಅಂಜಲಿ ಪುಟದಿ ಸುರರಂಜಿಕೆಯ ಬಿಡಿಸುವ ನಿ
ರಂಜನಗಭ್ಯಂಜನಿಸಿ ಅಂಜನಿಟ್ಟು ಅಮ್ಮೆ ಕೊಡುವ ೧೩

ಸಪ್ತ ಸಪ್ತ ಭುವನ ಜನಕೆ ಸುಪ್ತಿ ಎಚ್ಚರೀವನಿಗೆ
ಸುಪ್ತಿ ಕಾಲವೆಂದು ತಾನು ಸುಪ್ತಳಾಗಿ ಸ್ತನವ ಕೊಡುವ ೧೪

ತನ್ನ ಮಗನ ನಡೆಯ ನುಡಿಯ ತನ್ನ ಪತಿಗೆ ಹೇಳಿ ಹಿಗ್ಗಿ
ತನ್ನ ಭಾಗ್ಯ ಲಕ್ಷ್ಮೀಶ ಪ್ರಸನ್ನವೆಂಕಟ ಕೃಷ್ಣಯೆಂಬ ೧೫

೪೦

ಆವ ಮಾನುನಿ ನಿನಗೇನು ಮಾಡಿದಳೊ ಇಂದಿನ
ಭಾವ ಬೇರ್‍ಯಾಗಿದೆ ಮುಖದಲಿ ಕೇಳೊ ಪ.

ಬಿರಿಗಣ್ಣು ಬಿಡುವೆ ಮೊಲೆಯನೊಲ್ಲೆ ಕಂದ ದಿವ್ಯ
ಶರೀರಕ್ಕೆ ಗ್ರಹಕಪಟೇನೊ ಮುಕುಂದ ೧

ಬಾಯೊಳು ಬಿರಿಜೊಲ್ಲು ಬರುತಿದೆ ಮಗುವೆ ಹಾ ಹಾ
ಹಾಯೆಂದು ತೆರಬಾಯ ತೆರದ್ಯಾಕೊ ನಗುವೆ ೨

ತಿರುಕರಣುಗನಂತೆ ತಿರುಗುವೆ ಬಾಲ ಲೇಶ
ಕರುಣವಿಲ್ಲ ಎನ್ನೊಳು ಪುಣ್ಯಶೀಲ ೩

ಅನ್ನವನೊಲ್ಲೆ ಮನೆಯ ಬಿಟ್ಟೆಯೊ ಕೂಸು ನಿನ್ನ
ಚಿನ್ನತನದ್ಭುತವಾಗಿದೆ ಲೇಸೊ ೪

ಉದ್ದಿಡಿದಾಡುವ ಮರುಳಾಂತ ಶಿಶುವೆ ಪುಣ್ಯ
ದೊಡೆಯ ಪ್ರಸನ್ನವೆಂಕಟನೆ ಎನ್ನಸುವೆ ೫

೪೧

ಆವಳಂಜಿಸಿದವಳು ಪೇಳು ರಂಗಮ್ಮ ನಾ
ನವಳ ಗಾರು ಮಾಡುವೆ ನಡೆ ಕೃಷ್ಣಮ್ಮ ಪ.

ದೂರುವಿರಾದರೆ ಮಗನ ದಾರಿಗೆ ಹೋಗದಿರಿ ಎಂದು
ಸಾರಿ ಕೈಯ ಕಡ್ಡಿ ಕೊಟ್ಟೆ ಜಾರೆಯರಿಗೆ
ಸಾರಿ ಸಾರಿಗೆ ನಿನ್ನನು ರಟ್ಟು ಮಾಡುವ ಮಾತೇನು
ಆರಿಗೆ ಮಕ್ಕಳಿಲ್ಲೇನೊ ನಾನೇ ಹಡೆದವಳೇನೊ ೧

ಇದ್ದರಿರಲಿ ಕೂಸಿನ ಆಡುವಾಟಕೊಪ್ಪಿದರೆ
ಎದ್ದು ಹೋದರೆ ಹೋಗಲಿ ಆವಪಳ್ಳಿಂದ

ಕದ್ದು ತಿಂದನೆಂದಾವಾಗ ಕೂಗುವ ಕಾರಣವೇನೊ
ಮುದ್ದೆ ಬೆಣ್ಣೆ ಕೈಯಲಿತ್ತರೊಲ್ಲದೆ ಚೆಲ್ಲುವೆ ಕಂದ ೨

ಏಸು ಪುಣ್ಯರಾಶಿ ಕೂಡಿತೆಂದು ನಿನ್ನಾಟವ ನೋಡಿ
ಬೀಸಿ ಬಿಗಿದಪ್ಪುವಂಥ ಭಾಗ್ಯವನುಂಡೆ
ಕೂಸೆ ನಿನ್ನ ಕಂಡಸೂಯೆಬಡುವರಳಿಯಲಮ್ಮ
ದಾಸರಿಗೆ ಲೇಸಾಗಲಿ ಪ್ರಸನ್ವೆಂಕಟ ಕೃಷ್ಣ ೩

೪೨

ಇದೆಕೊ ದಧಿ ಮಥಿಸಿ ಹೊಸ ಬೆಣ್ಣೆ ಕೊಡುವೆನೊ
ಪದುಮನಾಭನೆ ಗೊಲ್ಲ ಗೋರಸಕೆ ಗೋಳಿಡಬ್ಯಾಡೊ ಪ.

ಮಲತ ಹಾಲು ಹುಳಿಮೊಸರು ತಂಗಳ ಬೆಣ್ಣೆ
ನಳಿನಾಕ್ಷ ನಿನಗೇನು ರುಚಿಯೊ ಕಂದ
ಕಳವಿನ ಮಾತ್ಯಾಕೆ ಹಸುಳೆ ಗೋವಳೆಯರ
ಗೆಳತನವ್ಯಾತಕೊ ನಿನಗೆ ರಂಗಮ್ಮ ೧

ಮನೆ ಮನೆ ತಿರುಗಲು ತಿರುಕರ ಮಗನೇನೊ
ಮನೆಯಲೇನು ಗೋರಸ ಕೊರತ್ಯಾಗಿದ್ಯೆ
ಅನುದಿನ ವಿಗಡೇರು ದೂರುತಲೈದಾರೆ
ದಣಿದೆನಾರೋಪಣೆಯ ಕೇಳಿ ಕೃಷ್ಣಮ್ಮ ೨

ಎನ್ನ ಮುದ್ದಿನ ಮೂರ್ತಿ ಎನ್ನ ಭಾಗ್ಯದ ನಿಧಿಯೆ
ಎನ್ನ ಚಿತ್ತದ ಚಿಂತಾಮಣಿಯೆ
ಚಿನ್ನರರಸನಾದ ಪ್ರಸನ್ವೆಂಕಟ ಕೃಷ್ಣ
ನನ್ನಾಣೆ ಕಣ್ಣ ಮುಂದಿರೊ ನಮ್ಮಮ್ಮ ೩

೪೩

ಎಂತಲೊ ನಿನ್ನ ಮಹಿಮೆ ಯಶೋದೆಕಂದ ಪ.

ದೇವರದೇವನೆನಿಸಿ ಆ ವೈಕುಂಠವಿರೆ ನಿತ್ಯ
ಪಾವಿನೊಳು ನಿದ್ರೆಗೈವದಾವ ಚಂದವೊ ಮುಕುಂದ ೧

ಸರಸಿಜ ಭವೇಶಾದಿ ಸುರಮುನಿಪೂಜೆಗಿಂದ
ಪಿರಿದು ಸುಖವೆ ವಿದುರನ ಕುಡಿಕೆಪಾಲೌತಣ ೨

ಪಾಲಗಡಲ ನಿವಾಸ ಮೂಲೋಕದುದರನಾಗಿ
ಬಾಲಕತನದ ಲೀಲೆ ಸಲುವದೆ ನಳಿನಾಕ್ಷ ೩

ಪಕ್ಷಿವರನೇರಿ ವಾಮ ಲಕ್ಷ್ಮಿಯಿರಲು ಯಜ್ಞ
ಭಿಕ್ಷವ ಬಯಸಿ ನಿನ್ನ ಕುಕ್ಷಿ ರಕ್ಷಿಸಿದೆಯಯ್ಯ ೪

ಅನ್ಯಚಿಂತೆಯನು ಬಿಟ್ಟು ನಿನ್ನ ಚಿಂತೇಲಿಹರ
ಜನ್ಮದ ಲತೆಯ ಹರಿ ಪ್ರಸನ್ನವೆಂಕಟೇಶ ತಂದೆ ೫

೪೪

ಎತ್ತೋದೆಯಮ್ಮ ನಂಗನ್ನೆತ್ತಿಕೊ ಅಮ್ಮ ಬಲು
ಹೊತ್ತು ಹತ್ತು ಬಂದೇನೆ ಇತ್ತೆ ಅಮ್ಮಿ ತಿಂದೇನೆ ಪ.

ತುತಿಬಾಯಿ ವಂಗ್ಯಾವೆ ಬಿತಿ ಆವು ವಾಕಿಕ್ಕಿ ಬತ್ತಾವೆ
ಅತಿ ಆವು ಉಪ್ಪುಕಾಯಿ ಅಮ್ಮ ಮಮ್ಮೊಲ್ಲೆ
ಉತ್ತತ್ತಿ ಹನ್ನು ಬೆನ್ನೆ ತಿಂದೇನೆ ೧

ಕಲ್ಲ ಕಿತ್ನ ಎಂತಾಡೆ ಬಂಗಾಡ ಬುಲ್ಲಿ ಬೆಲ್ಲ ತಿಂತಾಡೆ
ಗಲ್ಲ ಕತ್ತಿ ಉಮ್ಮು ಕೊತ್ತು ಹಲ್ಲು ನತ್ತುತಾಡೆ
ಕೊಲ್ಲಬಾಲದೆ ದೂತ್ತ ಗೊಲ್ಲತೇಲನ ೨

ಎಕ್ಕೋ ಬಾ ಎಂಬ್ಯಾಡೆ ಬಿಸಿ ನೀಲು ಬುಕಶ್ಶಿ ಮಾಬ್ಯಾಡೆ
ಸಕ್ಕರಿ ಚಿನ್ನಿಪಾಲು ಬತ್ತಲ ತುಂಬ ಕೊಡು
ಬಕ್ಕು ಮರಿಗಳ ಕೂಡ ಉಂಡೇನೆ ೩

ನತ್ತೆತ್ರ ತಂದುಕೊಡೆ ಚಂದಮಾಮನಿತ್ತಿತ್ತ ಕಡತಾಡೆ
ಪುತ್ತಮಿಲ್ಲಿ ತುಂಬ ವಲ್ಲೆ ಮುತ್ತು ಕೊತ್ತರೆ ಶನ್ನ
ಬುತ್ತಿ ತುಂಬ ಹನ್ನು ತಂದು ತಿಂದೇನೆ ೪

ಲಾಲಿ ಮಾಡಿಸಬ್ಯಾಡೆ ಕಿತ್ತನ್ನ ಮ್ಯಾಲೆ ದೋಗುಲ ಪಾಡೆ
ಬಾಲ ಬವು ಕಂಡ್ಯನಗಂಜಿಕಿ ಬತ್ತದೆ
ದೂಲ ಎನ್ನ ಬಿತ್ತು ನೀ ವೋಗಬ್ಯಾಡೆ ೫

ಉಗ್ಗು ಕೂಸು ಬಾಯಂಗೆ ಬಚ್ಚನಿಗೆ ಮಗ್ಗಮ್ಮಿ ಕೂಯಂಗೆ
ಕೊಗ್ಗ ಮೀಸಿ ಜೋಗಿಗೆ ಕೋಬ್ಯಾಡೆ ಬಾಗಿಲ
ಹೊಗ್ಗೆ ಹೋಗದಿಲ್ಲ ಜತ್ತಿಗನಾಣೆ ೬

ಕೂಚಿಗಮ್ಮಿ ಕೋಬ್ಯಾಡೆ ನಂಗಂಗಚ್ಚತಾನೆ ಅಮ್ಮ ನೋಡೆ
ಪೆಚನ್ನ ವೆಂಕತ ಕಿತ್ತಪ್ಪ ಕನ್ನಡೀಲಿ
ನಚುನಗಿ ನಗುತಾನೆ ಕಡತಾಡೆ ೭

೪೫

ಎಷ್ಟು ಸುಖಿಗಳೊ ಗೋವು ಗೊಲ್ಲತಿ ಗೋಪರು ಶ್ರೀ
ಕೃಷ್ಣನೊಡನೆ ಹಗಲಿರುಳು ಕ್ರೀಡೆಯಲಿ ಕಾಲವ ಕಳೆವರು ಪ.

ಕೋಹೋ ಕೋಹೋ ತೃವ್ವೆ ತೃವ್ವೆ ಅಂಬೆ ಅಂಬೆ ಬಾರೆ ಎಂದು
ಮೋಹದಿಂದ ಕರೆಸಿಕೊಂಡು ಓಡಿ ಓಡಿ ಬಂದು
ಶ್ರೀಹರಿಯ ಹೆಗಲ ಮೇಲೆ ಗಳಗಳಿಟ್ಟು ಕದಪು ಕಂಠ
ಲೇಹಿಸಿ ಮೊಗದಿರುದಿರುಹಿ ಸಿರಿನಖದಿಂ ತುರಿಸಿಕೊಂಬರು ೧

ತುಡುಗನೆಂದು ತುಡುವಿಡಿದು ಅಡಿಗಡಿಗೆ ಅಪ್ಪಿ ಚುಂಬಿಸಿ
ಪಿಡಿಪಿಡಿದು ಗೋಪಿಯಡಿಗೆ ಒಪ್ಪಿಸಿ ಒಪ್ಪಿಸಿ
ಮಡದೆರೆಲ್ಲ ಮಧುವೈರಿಯ ಸಂಗ ಸೊಬಗಿಲೋಲಾಡುತಲಿ
ಒಡನೊಡನೆ ಗೋಪಾಲ ಮೂರುತಿಯ ಕಣ್ಣು
ಮನದಲಿಟ್ಟು ಸುಖಿಪರು ೨

ಸಣ್ಣವರಾಡಲೊಲ್ಲೆನೆನಲು ಗದ್ದವಿಡಿದು ಮುದ್ದಿಸಿ ನ
ಮ್ಮಣ್ಣ ತಮ್ಮಗಳಿರಾ ಗೆಳೆಯರಿರಾ ಬನ್ನಿರೆಂದು
ಅಣ್ಣೆಕಲ್ಲೊಡ್ಡಿ ಗಜಗವಾಡಿ ಸೋಲಿಸಿಕೊಂಡಳುವ
ಚಿಣ್ಣರ ಮನ್ನಿಪ ಪ್ರಸನ್ವೆಂಕಟೇಶನ ಉಣ್ಣುವೆಂಜಲ
ಸೆಳೆದುಂಬುವರು ೩

೪೬

ಎಳೆಯನೆನ್ನದಿರಮ್ಮ ಎಲೆ ಗೋಪಿ ಕೃಷ್ಣಗೆ
ಕೆಳದೇರುಟ್ಟಿಹ ವಸನ ಕಳೆವ ಜಾರಮಣಿಗೆ ಪ.

ನಡುವಿರುಳೆ ಬಂದೆಮ್ಮ ನಲ್ಲರಂತೆ ಮಾತನಾಡಿ
ಪಿಡಿದು ಚುಂಬಿಸಿ ಪರಿಯಂಕದಲ್ಲಿ ಕೂಡಿ
ಮಡದಿಯರಂತ ನಾವು ಮಾಯ ಮೋಸದಿ ಗೆಲ್ಲುವ
ಒಡನೆ ಗೋವಳನಂತೆ ಒಪ್ಪುವ ಗಾಡಿಕಾರಗೆ ೧

ಬಾಲಕನಂತೆ ಕಂಗೊಳಿಸಿ ಬೀದಿಯೊಳು ಸುಳಿಯಲು
ನಲವಿಂದೆತ್ತಿಕೊಂಡು ನೇಹ ತೊಡರಿ ಅಪ್ಪಿಕೊಂಡು
ನೀಲದ ಹಣ್ಣ ನೀಡೆ ತಾನಾಲದ ಹಣ್ಣು ಬೇಡುವ
ಮೇಲಣ ಮಾತೇನೆ ಬೇಗ ಮೊಳೆಮೊಲೆಗ್ವೆಣಗುವಗೆ ೨

ರನ್ನದುಂಗುರ ಬೆರಳ ರತಿಗೆ ಮಾರನ ಸರಳ
ಕನ್ನೆಯರನೆಲ್ಲ ಚೆಲ್ವ ಕಣ್ಣ ಸನ್ನೆಲೆ ಮೋಹಿಸುವ
ಚಿನ್ನನೆನ್ನಬಹುದೆ ಇವಗೆ ಚಟುಲ ಪ್ರಾಯದವಗೆ ಪ್ರ
ಸನ್ನ ವೆಂಕಟೇಶ ನಮ್ಮ ಸೇರಿ ಬೆನ್ನಬಿಡನಮ್ಮ ೩

೪೭

ಕಂಡೀರೇನೆ ಕಂಡೀರೇನೆ ಹಿಂಡುಗೋಪೇರು
ಪುಂಡರೀಕವರದ ಶ್ರೀ ಪಾಂಡುರಂಗ ಕೃಷ್ಣಯ್ಯನ ಪ.

ಒಮ್ಮೆ ನಾನಂಜಿಸಿಕೊಂಡರಮ್ಮೆಯನುಣ್ಣದೆ ಹೋದ
ನಮ್ಮ ರಂಗ ಸುಮ್ಮಾನದಿ ಭೀಮರಥಿಯಲಿದ್ದಾನಂತೆ ೧

ಎಡಬಲ ನೋಡದಲೆ ನಡೆದ ಕಾರಣವೇನೆ
ಹಡೆದವರ ಮೇಲೆ ತಾ ಕಡುಕೋಪ ಉಚಿತೇನೆ ೨

ಗೆಜ್ಜೆ ಘಿಲ್ಲು ಒಡ್ಯಾಣದ ಗುಜ್ಜನ ಕಾಣದೆ ಕಣ್ಣ
ಕಜ್ಜಳ ನೀರಾಗುತಿವೆ ದುರ್ಜನಾರಿ ಕೃಷ್ಣಯ್ಯನ ೩

ತಾಯಿತಂದೇರಗಲಿ ತಾನು ಬಯಲೊಳಗೆಂತಿಹನೆ
ಮಾಯದ ಲೀಲೆಯ ನೋಡ್ವ ಬಯಕೆ ಕೈಗೂಡಲಿಲ್ಲ ೪

ಆಡುತಾಡುತ ಬತ್ತಲೆ ಓಡಿದ ವಾಜಿಯನೇರಿ
ರೂಢಿಯೊಳ್ಪ್ರಸನ್ವೆಂಕಟ ಒಡೆಯ ವಿಠಲಯ್ಯನ ೫

೪೮

ಕುಣಿದ ಕಾಳಿಯ ಶಿರದಿ ನಂದನಂದನು ಪ.

ಕಿರುಗೆಜ್ಜೆ ಕಾಲಂದಿಗೆ ಕಟಿಯ
ವರದಾಮದ ಪೊಂಗಂಟೆರವದ
ಕರಕಂಕಣ ಮುದ್ರಿಕೆ ಹಾರಪದಕಾ
ಭರಣ ಝಣ ಝಣ ಝಣ ಝಣ ಝಣ ಝಣ
ಝಣ ಝಣಕೆನ್ನಲು ೧

ವಿಗಡಾಹಿ ಫಣದಲ್ಲಿ ನಿಂದು ಕ
ರಗಳೊಲವಿಲಿ ಅಭಿನವ ತೋರುತಲಿ
ನಗೆಮೊಗದಮೃತ ರುಚಿಗಳ ಬೀರಿ ತೋ
ಧಿಗಿ ಧಿಗಿ ಧಿಗಿ ಧಿಗಿ ಧಿಗಿ ಧಿಗಿ ಧಿಗಿ ಧಿಗಿ ಥೈ ಥೈಯೆಂದು ೨

ಪದುಮಜಭವರು ಹನುಮ ಮೂರು ಜತ್ತಾ
ಳ್ಮುದದಿಂ ದಂಡಿಗೆ ತಾಳ್ಗತಿ ನುಡಿಸೆ
ಪದುಮನಾಭ ಪ್ರಸನ್ನವೆಂಕಟ ಕೃಷ್ಣ ತ
ಕುಂದ ಕುಂತ ಗಡ ವಗಧಾಂ ಕಿಡಿ ಕಿಡಿಧಾಯೆಂದು ೩

೪೯

ಕೃಷ್ಣ ನಿನ್ನಂಥ ಕೂಸೆಲ್ಲಿ ಕಾಣೆ ಜಗದಿ ಹೊರಗೆ
ದೃಷ್ಟಿ ತಾಕೀತು ಹೋಗಬೇಡೆಂದು ಎಷ್ಟು ಹೇಳಲಿ ಮಗನೆ ಪ.

ಗೊಲ್ಲತೀರೆಳೆ ಮಕ್ಕಳ ಗುಣವ ನೋಡಬಾರದೊ
ಹೊಲ್ಲತನ ಬೇಡ ಮನೆ ಹೊಂದಿರೊ ಅಯ್ಯ
ಫುಲ್ಲಲೋಚನ ನೀಯೆನ್ನ ಪ್ರಾಣದ ಪದಕವಯ್ಯ
ಪಳ್ಳಿಯ ಗೋಪರ್ಯೆದಾರೆ ಪುಟ್ಟ ನಿನ್ನೈತ್ತ ನೋಡಲೊ ೧

ತರಳರಂಗಿ ಕುಲಾಯವ ತೊಟ್ಟು ನಿಂತಿಹರು ಕಂಡ್ಯ
ಹಿರಿಯ ಗುಮ್ಮಗಂಜುವೆ ಹೆದರಿ ಕಂಡ್ಯ
ಬರಿಮೈಯಾ ಬಿಸಿಲೊಳು ಬಾಡಿತೊ ಮಂಗಳ ಮುಖ
ಬರಿದೆ ಬೊವ್ವ ಕಚ್ಚದೇನೊ ಬೆಟ್ಟದ ಭಾಗ್ಯನಿಧಿಯ ೨

ಕಂದ ಬರಲೆಂದುಣದೆ ಕುಳಿತಿಹನೊ ನಿಮ್ಮಯ್ಯ
ಹೊಂದಳಿಗೆ ಪಾಯಸ ಹಸನಾಗಿದೆ
ಅಂದದಿ ಸಕ್ಕರೆ ತುಪ್ಪ ಅನುಗೂಡಿಸುಣಿಸುವೆ
ತಂದೆ ಪ್ರಸನ್ನವೆಂಕಟ ನಿನಗೆ ಹಸಿವೆ ಮರೆದೆಯೊ ೩

೫೦

ಕೃಷ್ಣ ಲೀಲಾನಂದ ನೋಡಿರ್‍ಯೆ
ಕೃಷ್ಣಾಕೃತಿಯ ಚಂದ ನೋಡಿರ್‍ಯೆ
ಕೃಷ್ಣ ಗೋಪಿಗಮ್ಮಂದ ನೋಡಿರ್‍ಯೆ
ಕೃಷ್ಣ ಬಾಲಮುಕುಂದನ ನೋಡಿರ್‍ಯೆ ಪ.

ಬಾಲರ ವಿಭು ಬೆಣ್ಣೆ ಮೊಸರ ಸವಿದು ಗೋಪ
ಬಾಲೇರ ವಿಭಾಡಿಸಿ ಮೆಲುವ
ಬಾಲರವಿಭಾ ನಖತೇಜನೊಳಾಡುವ
ಬಾಲರ ವಿಭವವ ನೋಡಿರ್‍ಯೆ ೧

ಸಮವಾಯಿ ಕಾರಣನಲ್ಲಾ ಜಗಕೆ ತಾನು
ಸಮವಯ ಗೋವರ್ಗೆಳೆಯನಾದನು
ಸಮವೆ ಇಲ್ಲೆಶೋದೆನಂದರ ಭಾಗ್ಯ ಮಗನಾದ
ಶಾಮಮ್ಯೆಯವನ ಮುದ್ದು ನೋಡಿರ್‍ಯೆ ೨

ಕಣ್ಣಲ್ಲಲಸದೆ ವಿಶ್ವವ ಹೊರೆದ
ಕಣ್ಣಿಲ್ಲೊಲಿದು ಕಟ್ಟಿಸಿಕೊಂಡನು
ಕಣ್ಣಲ್ಲಾಲಯವುಳ್ಳ ಪ್ರಸನ್ವೆಂಕಟೇಶನ
ಕಣ್ಣಲಿ ಲಯವಿಟ್ಟು ನೋಡಿರ್‍ಯೆ ೩

೫೧

ಚಪ್ಪಾಳೆನಿಕ್ಕೆಲೊ ಕೃಷ್ಣಮ್ಮ ಚಪಲ ಬಾಲ ರಂಗಮ್ಮ
ಕಾಪುರುಷರ ಚಪ್ಪಾಳೆ ಮಾಳ್ಪ ಚಪ್ಪಾಳೆ ಪ.

ತುಪ್ಪ ಬೆಣ್ಣೆ ಪಾಲನೊಲ್ಲೆ ಹೆಪ್ಪನಿಟ್ಟ ದಧಿಯೊಲ್ಲೆ
ಗೋಪಿಯರೊಡನೆ ಕೇಳಿಗೊಪ್ಪಿದ ಚಪ್ಪಾಳೆ ೧

ಪಾಯಸವುಣ್ಣಲೊಲ್ಲೆ ಕಜ್ಜಾಯ ಸಕ್ಕರೆಯನೊಲ್ಲೆ
ಆಯತಾಕ್ಷಿಯರ ಮೇಲೆ ಸ್ನೇಹದ ಚಪ್ಪಾಳೆ ೨

ತನಿವಣ್ಣ ಮೆಲ್ಲಲೊಲ್ಲೆ ಮನೆಯ ಸೇರಲೊಲ್ಲೆ ಪ್ರ
ಸನ್ನ ವೆಂಕಟಾದ್ರಿಲಿ ಕುಣಿವ ಚಪ್ಪಾಳೆ ೩

೫೨

ಚಿಣ್ಣರೊಡನಾಡನಡೆದ ಮುದ್ದುರಂಗ ಮುದ್ದು ಕೃಷ್ಣ ಪ.

ಇಟ್ಟು ಹಣೆಯೊಳು ಉಗುರು ನಾಮವ ಗೋವ
ಗಟ್ಟಿಗೆಯನು ಕರದೊಳು ಪಿಡಿದು
ಪುಟ್ಟ ಕಂಬಳಿ ಹೊದ್ದು ಪದಕೆ ಪಾದುಕೆ
ಮೆಟ್ಟಿ ಅಣ್ಣ ಬಲರಾಮ ನಡೆಯೆಂದು ೧

ಆಡಲೊಲ್ಲೆನೆಂಬ ಮಕ್ಕಳ ಮನ್ನಿಸಿ
ಕೂಡಿಕೊಂಡು ಅಣ್ಣ ತಮ್ಮನೆಂದು
ಹಾಡುತ ಕುಣಿದು ಚಪ್ಪಾಳೆ ಹೊಯಿದಾಡುತ
ಓಡ್ಯಾಡಿ ಅಮ್ಮನ ಮಾತ ಕೇಳದೆ ಕೃಷ್ಣ ೨

ಚಿಣ್ಣಿ ಪೊಂಬಗರ್ಚೆಂಡು ಗುಮ್ಮ ಗುಸಕು ಹಬ್ಬೆ
ಅಣ್ಣೆಕಲ್ಲು ಹಲ್ಲೆ ಗಜಗ ಗೋಲಿ
ಕಣ್ಣುಮುಚ್ಚಾಲೆ ಮರನೇರಾಟ ನೀರಾಟ
ಸಣ್ಣರೊಳಾಡಿ ಸೋಲಿಪೆನೆಂಬ ತವಕದಿ ೩

ರಾಜಿಪ ರಾಜಬೀದಿಲಿ ನಿಂದು ನೋಡುವ
ರಾಜಮುಖಿಯರೊಳು ಸೆಣಸ್ಯಾಡುತ
ರಾಜಕುಲಾಗ್ರಣಿ ಸರ್ವಭೂಷಣದಿ ವಿ
ರಾಜಿತನಾಗಿ ಗೋಳಿಡುತ ಮುರಾರಿ ೪

ಜಗವ ಪುಟ್ಟಿಸಿ ನಲಿದಾಡುವಾಟವು ತ
ನಗೆ ಸಾಲದೆಂದು ಆವಹಳ್ಳಿಲಿ
ಬಗೆ ಬಗೆ ಲೀಲೆಯ ತೋರಿ ಗೋಗಾವರ್ಗೆ
ಸುಗತಿನೀವೆನೆಂದು ಪ್ರಸನ್ವೆಂಕಟ ಕೃಷ್ಣ ೫

೫೩

ತಾಂಡವಾಡಿದನಂದು ಯಶೋದೆಕಂದ ಪ.

ಅಂದದಿ ಬೆಣ್ಣೆಯ ಪಿಡಿದು ಶುದ್ಧಗತಿಗ
ಳಿಂದ ತಗಡಧಂ ಧಾಂ ಧಿಮಿಕಿಟ ಧಿಗಿ ಧಿಗಿ ಥೈಯೆಂದು ೧

ಕುಚಮಾಟದ ಗದ್ದಿಗೇಲಿ ಒಂದಡಿಯಿಟ್ಟ ತಾಳ
ನಿಚಯದಿ ತತ್ತಂ ತಾಹಂ ಥರಿಕುಟ ತಕುಂದ ಕಿಡಿಕಿಟಿಲೆಂದು ೨

ಕಂಕಣ ಕುಂಡಲಹಾರ ಪದಕ ದಾಮಾ
ಲಂಕೃತ ಕಿಂಕಿಣಿ ಕಿಣಿ ಝುಣ ಎನೆ ವನಜನಯನನು ೩

ಅಜಭವಾದ್ಯರು ತಾಳ ವೀಣೆ ಆವುಜ ಮೃದು
ಋಜು ಧಳಂ ಧಳಂ ಝ್ಯುಂ ಝ್ಯುಂ ಝುಕಿಂ ನುಡಿಸೆ ಜಡಿ
ಜಡಿದೊಡನೆ ೪

ಮಂದಹಾಸದಿ ನಂದವ್ರಜದ ಗೋವರ ಕೂಡ
ತಂದೆ ಪ್ರಸನ್ನವೆಂಕಟಗಿರಿತಟಸ್ಫುಟಿದ್ಧಾಟಕ ನಿಲಯ ೫

೫೪

ತೋಳೆಂಬೆನು ತೋಳೆ ಲಕುಮಿಯಾಲಂಗಿಪ ತೋಳೆ
ಬಾಲರತ್ನ ತೋಳನ್ನಾಡೈ ಬಾಲಕೃಷ್ಣ ನಾಡೆ ಪ.

ಕಂದಿ ಕುಂದ್ಯಾಕ್ರಂದಿದ ನಾಗನ
ಬಂದೆತ್ತಿದ ತೋಳೆ
ನೊಂದ ಕಂದನೆಂದು ತೊಡೆಯಲಿ
ಹೊಂದಿಸಿಕೊಂಡ ತೋಳೆ ೧

ಹರಧನು ಜರಿದು ಮುರಿದ ವಿಕ್ರಮ
ಬಿರುದಾಂಕನ ತೋಳೆ
ಮರೆಯದೆ ಕರೆದರರಿದಂಬರವ
ವರಧಿಸ್ಯುಡಿಸಿದ ತೋಳೆ ೨

ದಾಸವಂಶ ವಿಶೋಷ ರಿಪುಜನ
ನಾಶಕಾರಣ ತೋಳೆ
ಶೇಷಗಿರೀಶ ಪ್ರಸನ್ವೆಂಕಟ
ವಾಸ ರಂಗನ ತೋಳೆ ೩

೫೫

ದಾರೊ ನೀ ಚಿನ್ನ ದಾರೊ
ಕಾರು ರಾತ್ರಿಯೊಳೆಮ್ಮಾಗಾರಕೆ ಬಂದೆ ಪ.

ಇಕ್ಕಿದ ಕದಗಳಿಕ್ಯಾವೊ ನಿದ್ರೆ
ಉಕ್ಕೇರಿ ಕಣ್ಣು ಮುಚ್ಚ್ಯಾವೊ ನಮ್ಮ
ತಕ್ಕೈಸಿ ಕೊಂಬುವೆ ನೀ ಕಳ್ಳ ಚಿಕ್ಕ
ಮಕ್ಕಳಾಟವಿದಲ್ಲೊ ಚೆಲುವ ೧

ಆಗ ಗೋಪಾಲನಂತಿದ್ದೆ ನೀ
ಬೇಗ ಚಟುಲ ರೂಪನಾದೆ ಮ
ತ್ತೀಗೆಮ್ಮ ನಲ್ಲರಂತ್ಯೆದೆ ಕೋಟಿ
ಪೂಗಣೇರ ಹೋಲುತ್ತೈದೆ ನೀ ಹೌದೆ ೨

ಸಪ್ಪಳಿಲ್ಲದೆ ಕೂಡು ಕಾಣೊ ಕೇಳಿ
ಬಪ್ಪರಿನ್ನಾರಾರು ಕಾಣೊ ಪ್ರಾಣ
ಕಪ್ಪವ ನಿನಗಿತ್ತೆ ಇನ್ನು ಕಾಯೊ
ಶ್ರೀಪ್ರಸನ್ವೆಂಕಟ ಜಾಣ ಪ್ರವೀಣ ೩

೫೬

ಧನ್ಯ ಧನ್ಯ ನಂದಗೋಕುಲ ಪ.

ಆ ನಂದವ್ರಜದ ಪೂರ್ವಪುಣ್ಯವೇನೊ
ಆ ನಂದನಾ ಗೋಪಿಕಂದನಾ ಕಿಶೋರಾನಂದವೇನೊ
ಆನಂದಮುನಿವರದನಾನಂದವೇನೊ ಅ.ಪ.

ಗೋವರೆಳೆಯರ್ಮ್ಯಾಳ ನಿವಹದಲ್ಲಿ
ನಿಂತು ರಂಗ ಕೋಹುಕ್ಕಕೋಹೊ
ಹವಳಿ ಹಂಡಿ ಕಾಳಿ ಬಾ ಕೋಹುಕ್ಕ ಕೋಹೊ
ಧವಳಿ ಚಿಂಚಿ ಕಪಿಲೆ ಬಾ ಕೋಹುಕ್ಕ ಕೋಹೊ
ಗೌರಿ ಮೈಲಿ ನೀಲಿ ಬಾಯೆಂದು
ವಿವರಿಸಿ ಕರೆದು ತೃಣದ ಕವಳವನ್ನೀಡುವಾ
ಆವಿನ್ನಾವ ಸಂಚಿತೊ ಪಾವನೆಂತೊ ಪುಲ್ಲಿನಾ ೧

ಅಮ್ಮೆಶೋದೆ ಕಟ್ಟಿದ ನಿರ್ಮಲ ಕಲ್ಲಿಯ ಬುತ್ತಿ
ಡೋಹಕ್ಕಡೋಹೋ
ತಮ್ಮ ಬನ್ನಿರುಣ್ಣ ಬನ್ನಿ ಡೋಹಕ್ಕಡೋಹೊ
ನಮ್ಮ ಬುತ್ತಿ ನಿಮ್ಮ ಬುತ್ತಿ ಡೋಹಕ್ಕಡೋಹೊ
ನಮ್ಮ ನಿಮ್ಮುಪ್ಪಿನಕಾಯಿ ಡೋಹಕ್ಕಡೋಹೊ
ಕಮ್ಮಗಿಹುದೆಂದು ಕೊಡುವ ಒಮ್ಮೆ ಸೆಳೆದು ಮೆಲ್ಲುವಾ ಉ
ತ್ತಮ್ಮರಾವ ಜೀವರೊ ಧರ್ಮದೊದಗೆಂತುಟೊ ೨

ಮಾಧವ ಮಂಜುಳ ಶಬ್ದದೂದುವ ಸುವರ್ಣವೇಣು
ನಾದಸ್ವಾದ ಲುಬ್ಧರಾದರಾ ಗೋಪಕನ್ಯೇರು

ನಾದಸ್ವಾದ ಲುಬ್ಧವಾದವಾ ಗೋವತ್ಸವು
ನಾದಸ್ವಾದ ಲುಬ್ಧವಾದವಲ್ಲಿ ವೃಕ್ಷವು
ಆದರಿಪ ನಾರಿಯರಗಾಧ ತಪವಲ್ಲವೆ
ಪಾದಪ ಪಶುಗಳೆಲ್ಲ ಆ ದೇವರ್ಕಳಲ್ಲವೆ ೩

ತುರುವ ಮೇಯಿಸಿ ವ್ರಜಕೆ ಮರಳಿಸಿ
ಗೋಪಾಲರೇಯ ಹೈಯಿ ಹೈಯೆಂದು
ತರುಬಿ ತಡೆಯಿರೆನ್ನುತ ಹೈಯಿ ಹೈಯೆಂಬ
ಸ್ವರದಿ ಕೊಳಲನೂದುತ ಹೈಯಿ ಹೈಯೆಂದು
ಭರದಿಚೆಂಡು ಚಿಮ್ಮುತ ಹೈಯಿಹೈಯೆಂದು
ಧರೆಯ ಮೇಲಿಂಬಾಡುವ ಕರದ ದಂಡಿಗೇರುವ
ತರಳರಾವ ಭಾಗ್ಯರೊ ಧರಣಿ ಯಾವ ಮಾನ್ಯಳೊ ೪

ಒಪ್ಪುವ ಗೋಧೂಳಿ ಮೈಯಲಿಪ್ಪ ಪೊಂದೊಡಿಗೆ ಚೆಲ್ವ
ಶಾಮಲಾಮಲಾಂಗ
ಗುಪ್ಪಾರತ್ಯೆತ್ತಿದರು ಶಾಮಲಾಮಲಾಂಗಗೆ
ಕುಪ್ಪಿರಿವ ಕರುಗಳ ಶಾಮಲಾಮಲಾಂಗ
ದರ್ಪಿನಾವ ರಂಬಿಸೆ ಶಾಮಲಾಮಲಾಂಗ
ಕ್ಷಿಪ್ರ ಪಾಲ್ಗರೆದು ನಂದ ಗೋಪಾಂಗನೆಯರೀವ ನ
ಮ್ಮಪ್ಪ ಪ್ರಸನ್ನವೆಂಕಟಾಧಿಪ್ಪನೆಂದು ಕಾಂಬೆನಾ ೫

೫೭

ನಂದನ ಕಂದ ಗೋವಿಂದ ಮುಕುಂದ
ಇಂದಿರಜವಂದಿತ ಇಂದುಕುಲೇಂದ್ರ ಪ.

ಗೋರಸಚೋರ ಗೋಪೀರಮಣ ಧೀರ
ಗೋರಜಪೂರಿತ ಚಾರು ಅಲಂಕಾರ
ಗೋರಕ್ಷ ಕ್ರೂರಸಂಹಾರ ಉದಾರ
ವೀರ ಸುಯಮುನಾತೀರ ವಿಹಾರ ೧

ಶೇಷಶೀರ್ಷನೃತ್ಯ ಹಾಸ ವಿಲಾಸ
ವಾಸವ ಮದನಾಶ ವ್ರಜಪೋಷ ನಿರಾಶ
ರಾಸಕ್ರೀಡಾಸುಖಾಧೀಶ ರಮೇಶ
ದಾಸಾಕ್ರೂರಾಶ್ರಯ ಕಂಸವಿನಾಶ ೨

ಪುಣ್ಯಗುಣಾನ್ವಿತ ಸುವರ್ಣವೇಣುಗಾಯನ್ನ
ಚಿನ್ಮಯ ಪನ್ನಗ ನಾಗನಿಲಯ ಪೂರ್ಣ
ಮನ್ನಿಸು ನಿನ್ನ ಭೃತ್ಯನ್ನ ಪ್ರ
ಸನ್ವೆಂಕಟ ಧನ್ಯ ಇವ ನನ್ನವನೆನ್ನೆ ೩

೫೮

ನಡೆಯೊ ನಿಮ್ಮಮ್ಮನೆಡೆಗೆ ಹೋಗುವ ನಿನ್ನ
ತುಡುಗ ಬುದ್ಧಿಯನೆಲ್ಲ ಬಿಡಿಸುವೆ ಕಳ್ಳ ನಡೆ ಗಡ ಪ.

ಏನೆಲೆ ಠಕ್ಕ ನಯನವೆ ಇಕ್ಕೆ
ನಿನ್ನ ಮೈ ಹುದುಗಿಸಿದೆ ಬಾಯಿ ಜೊಲ್ಲುರಿಸಿದೆ ೧

ಕಂಬವಾಶ್ರೈಸಿದೆ ನಂಬೆ ವಂಚಿಸಿದೆ
ದಂಭಪರಳಿದೆ ಕುಂಭಿಣಿಜಳ ಕೂಡ್ದೆ ೨

ಕೆನೆ ಮೊಸರು ಕದ್ದೆ ವಿನೀತೆರೊಂಚಿಸಿದೆ
ಕೊನೆಗೋಡಿ ಹೋಗ್ವೆ ಪ್ರಸನ್ನವೆಂಕಟ ಕೃಷ್ಣ ೩

೫೯

ನಿದ್ರೆಯ ಬಿಟ್ಟೇಳಿ ದಧಿ ಮಥಿಸುವೇಳಿ ಬಲ
ಭದ್ರ ಬಾಲಕೃಷ್ಣರುಲುಹು ಕೇಳಬರುತಿದೆ ಗಡಾ ಪ.

ಗೊಲ್ಲರೆಳೆಯರ ಕೂಡಿ ಗೋಪಿಯ ಕುಮಾರರೀಗೆ
ಚೆಲ್ಲಿಯಾಡಿ ಸೂರೆ ಮಾಡುತಾರೆ ಮೊಸರ

ಚೆಲ್ಲೆಗಂಗಳೆಯರೊಳು ಸರಸವಾಡುತಲಿಹರೆ
ಮೆಲ್ಲಗೆ ಸಪ್ಪಳಿಲ್ಲದೆ ಮನೆಯ ಪೊಗುವರಮ್ಮ ೧

ಕೇರಿ ಕೇರಿಯೊಳು ಹುಯ್ಯಲಿಡುತ ಬಂದರದಕೊ
ಚೀರುತೈದಾರೆ ಬೆನ್ನಟ್ಟಿ ನಾರಿಯರಕೊ
ಆರಿಗೆ ವಶವಾಗರು ದೂರುತಾರೆ ಬಾಲೆಯರು
ಧೀರ ಚೋರರಲ್ಲದಾರ ಗೋರಸ ಉಣ್ಣುತಾರವ್ವ ೨

ಪೊಸಬೆಣ್ಣೆಯ ಕಂಡರೆ ಬಿಡರು ನಮ್ಮ ದೇವರ
ಮೀಸಲಂಜಿಕೆಯಿಲ್ಲ ದುರುಳ ಮಕ್ಕಳಿಗೆ
ಶಿಶುಗಳಟ್ಟುಳಿಯಾಗದ ಮುನ್ನೆಚ್ಚರವಮ್ಮ
ಪ್ರಸನ್ನವೆಂಕಟಕೃಷ್ಣ ಬರುವ ನೋಡಿರಮ್ಮ ೩

೬೦

ನಿನಗೆ ನಾ ಬಯ್ಯಲಿಲ್ಲೊ ಕೃಷ್ಣಯ್ಯ
ಅಣುಗರು ಹುಯ್ಯಲಿಡುವರನು ಬಯ್ದೆ ಪ.

ಮರುಳು ಮಗನೆ ನಿನಗೆ ಗೋಗಾಯ್ವ
ದುರುಳರ ಸಂಗ ಸೊಬಗೆ
ತರಳ ನಿನಗೆ ಕಳ್ಳ ಹರಳಿಗನೆಂದರೆ
ಬೆರಳಿಟ್ಟೆ ಕಿವಿಯೊಳಗೆ ಹರಿಹರಿ ೧

ಠವಳಿಕಾರರು ನಾರೇರು ನಿನ್ನೊಳು ಕಂದ
ಹವ್ವಳಿಸುತಿಹ ಜಾರೇರು
ಗೋವಳರಾಯನೆ ನಿನಗವರ ಸಂಗತಿ ಹೀನ
ಪವಳ ಚೆಂದುಟಿಯ ಕೂಸೆ ಹರಿಹರಿ ೨

ಹುಸಿನುಡಿದರು ತಾರೊ ನನ್ನ ಕಂದ
ಕೃಶನಾದೆ ಮುದ್ದು ತಾರೊ

ನಸುನಗೆಯಲಿ ಮುನಿಯದೆ ಮನೆಯೊಳಗಿರೊ
ಪ್ರಸನ್ವೆಂಕಟ ಕೃಷ್ಣಯ್ಯ ಹರಿಹರಿ ೩

೬೧

ನಿನ್ನ ಮಗನ ಮುದ್ದು ನೀನೆ ಲಾಲಿಸಮ್ಮ
ಚಿನ್ನನೆಂದಾಡಿಸಮ್ಮ
ಬಣ್ಣದ ಬಾಲೇರ ಭೋಗಿಪ ಚದುರತೆ
ಸಣ್ಣವರ ಸರಸೇನಮ್ಮ ಪ.

ತಾಳಬೇಕೆಷ್ಟೆಂದು ಗಾಡಿಕಾರನ ಮಾತ
ಹೇಳಲಂಜುವೆವಮ್ಮ ನ
ಮ್ಮಾಳುವ ಇನಿಯರ ವೇಡಿಸಿ ನಮ್ಮ ಲಜ್ಜೆ
ಹಾಳುಮಾಡಿ ಹೋದನೆ ೧

ಕೃಷ್ಣ ಸಿಕ್ಕಿದನೆಂದು ನಮ್ಮ ಮಕ್ಕಳ ನಾವೆ
ದಟ್ಟಿಸಿ ಕೊಲುವೆವಮ್ಮ ಈ
ದೃಷ್ಟಿ ಮಾಯದ ಜಾಲ ನೋಡೆ ನಂದನರಾಣಿ
ಸೃಷ್ಟೀಶರಿಗೆ ತೀರದು ೨

ಕನ್ನೆಯರೊಗ್ಗೂಡಿ ಕಳ್ಳನ ಕೈಕಟ್ಟಿ
ನಿನ್ನೆಡೆಗೆ ತರುತಿದ್ದೆವೆ
ಕಣ್ಣಿಯ ಕೊರಳಿನ ಕರುವೆಂದು ಜನವಾಡೆ
ಖಿನ್ನರಾಗಿ ಹೋದೆವೆ ೩

ಆವಾವ ಕೇರೀಲಿ ಜಾರ ಚೋರನ ಮಾತು
ಆವಾವ ಮನೆಗಳಲ್ಲಿ
ಭಾವೆಯರೆಳೆ ಮೊಲೆ ಮೂಗ ಚಿವುಟಿ ಜಾವ
ಜಾವಕಂಜಿಸಿಕೊಂಬನೆ ೪

ನಾವು ಮಾಡಿದ ಸುಕೃತವೆಂತೊ ಗೋಪಾಲರೇಯ
ಭಾವಕೆ ಮೆಚ್ಚಿದನೆ

ದೇವರ ದೇವ ಪ್ರಸನ್ವೆಂಕಟೇಶ
ಜೀವಕೆ ಹೊಣೆಯಾದನೆ ೫

೬೨

ನಿರುತ ನಿನ್ನಯ ಲೀಲೆಯನೆ ಹಾರೈಸುವೆ ಮುದ್ದುತಾರೊ ಕಂದ
ಕಿರುಗುರುಳಿನ ಚೆಲ್ವ ಬಾಲಕರನ್ನನೆ ಮುದ್ದು ತಾರೊ ಪ.

ನಿದ್ರೆ ಪೂರಿತವಿಲ್ಲದೆ ನಡೆಯುತ ಬಂದು ಮುದ್ದು ತಾರೊ ಕಂದ
ಮೆದ್ದು ಕಾಯಿ ಕಳಲೆ ಕಿರುನಗೆ ಜೊಲ್ವಾಯ ಮುದ್ದು ತಾರೊ ೧

ಧುಡುಮೆಂಬ ಕಡೆವ ದನಿಗೆ ದುಡು ದುಡು ಬಂದು
ಮುದ್ದು ತಾರೊ ಕಂದ
ಉಡುಗೆ ಜಗ್ಗುತ ತೊದಲ್ನುಡಿದು ಮೊಗವ ನೋಡಿ ಮುದ್ದು ತಾರೊ ೨

ನವನೀತ ನೀಡಲು ಆಯೆಂಬ ಪುಟ್ಬಾಯ ಮುದ್ದು ತಾರೊ ಕಂದ
ಹವಣಾದ ಸಣ್ಣಲ್ಲು ಎಳೆದುಟಿ ಸೊಂಪಿನ ಮುದ್ದು ತಾರೊ ೩

ಅಂಬೆಗಾಲಿಕ್ಕುತೆನ್ನನು ಕಂಡು ಕರವೆತ್ತಿ ಮುದ್ದು ತಾರೊ ಕಂದ
ಕಂಬುಕಂದರ ನಿನ್ನ ಮನದಣಿಯಪ್ಪುವೆ ಮುದ್ದು ತಾರೊ ೪

ಚಿನ್ನರ ಬಡಿದು ನಾನಲ್ಲೆಂದು ಬಾಯಾರ್ವ ಮುದ್ದು ತಾರೊ ಪ್ರ
ಸನ್ನವೆಂಕಟಾಚಲವಾಸವಿಲಾಸನೆ ಮುದ್ದು ತಾರೊ ೫

೬೩

ನಿಲ್ಲು ರಂಗ ನಿಲ್ಲು ರಂಗ ನಿಲ್ಲೆಲೊ ರಂಗ
ನಿಲ್ಲು ಮಜ್ಜಿಗೆಯನೆಲ್ಲ ಚೆಲ್ಲಿ ಬೆಣ್ಣೆ ಮೆದ್ದ ಕಳ್ಳ ಪ.

ಜಾವ ಜಾವಕೆ ಕಾಡುವೆ ನಾವು ಕಟ್ಟಿದರೋಡುವೆ
ಹಾವಳಿಗಾರೆವೊ ನಿನ್ನ ದೇವಕಿ ಚಿನ್ನ

ಗೋವಳೆಗಾರ್ತಿರ ಚಿತ್ತವ ಆವಾಗೆ ಗೆದ್ಯೊ ಮಾಧವ
ದೇವಿ ಗೋಪಿಗೆ ಹೇಳುತೈದೆವೊ ನಡೆ ಯಾಕೊ ಪಿಂತೆ ೧

ಬಾಲ ಬಾಲ ಬಾಲನೆಂದು ತಾಳಬೇಕೆಷ್ಟು ದಿನೆಂದು
ಮೇಲೆ ಬಲ್ಲಿದರ ಮಗ ನೀಲಮೇಘಾಂಗ
ಕಾಲಿಗೆರಗುವೆವಿನ್ನು ಪಾಲಿಸೊ ನಮ್ಮನು ನೀನು
ನಾಲಿಗೇಲಿ ನಿಮ್ಮ ಗುಣಂಗಳ ಹೇಳೋದು ಕಠಿಣ ೨

ಬಿಟ್ಟು ಕೆಟ್ಟೆವೊ ಪಾದವ ಕಟ್ಟೆವೊ ಬಾರೊ ದೇವ
ಸಿಟ್ಟಲಿ ಯಶೋದೆ ಮೇಲೆ ಅಟ್ಟಿ ಬಿಡಲು
ಗಟ್ಟಿ ಮೊಸರು ಹಾಲನು ಅಷ್ಟು ಕುಡಿದಧಿಕನೊ
ದಿಟ್ಟ ಪ್ರಸನ್ನವೆಂಕಟ ಕೃಷ್ಣ ನಿಮ್ಮಮ್ಮನಾಣೆಟ್ಟೆ ೩

೬೪

ನೋಡೆ ಅಮ್ಮ ಯಶೋದಮ್ಮ
ಆಡಬಾರದಾಟವಾಡುವನಮ್ಮ
ಕಾಡುವ ನಿನ್ನ ಮಗನಮ್ಮ ಪ.

ಬುದ್ಧಿ ಹೇಳೆ ತಿದ್ದಿ ಹೇಳೆ ನಮ್ಮ
ಮುದ್ದು ಮಕ್ಕಳನೆಲ್ಲ ಗುದ್ದಿ ಅಂಜಿಸಿ ಕಾಲಿ
ಲೊದ್ದೋಡಿ ಬರುತಾನೆ ಕೇಳೆ ೧

ಕ್ಷೀರ ಕೊಡವ ಸುರುವಿ ಬಿಡುವ
ಸಾರಿ ಸಾರಿಗೆ ಬೆಣ್ಣೆ ಬಿಸಳಿಗೆನೊಡೆವ ಮಂ
ದಿರದೊಳಗೆ ಕುಣಿದಾಡುವ ೨

ಹರಿದು ಬರುವ ಚಾರುವರಿವ ಎಳೆ
ಗರುವ ನೋಡುವೆನೆಂದು ಅಳುತಲುಸುರುವ
ಹರವಿ ಮೊಸರು ಕೆನೆ ಸುರಿವ ೩

ಲೀಲೆ ನೋಡಲಳವಲ್ಲ ನಿನ್ನ
ಬಾಲಕನಲೌಕಿಕ ಹೊಲ್ಲ ನಮ್ಮೆಲ್ಲರ
ಆಲಯದಿ ನಿಲ್ಲಗೊಡ ಸಿರಿನಲ್ಲ ೪

ಗುಣಹೇಳಲೆಣಿಕಿಲ್ಲ ಚಿನ್ಮಯ ಪ್ರ
ಸನ್ವೆಂಕಟೇಶ ತಾ ನಂಬದರ್ಗಿಲ್ಲ
ಬಿನಗು ಮಾತಿಗೆ ಸಿಗನಲ್ಲ ೫

೬೫

ಪಟ್ಟಸಾಲೆ ಮೇಲೆ ರಂಗಮ್ಮ ನಕ್ಕು ನಲಿದು
ದಟ್ಟಸಾಲಿಕ್ಕಲಿ ಕಲಿತ ಪ.

ಕೈಯವಿಡಿದು ಗೋಪಿ ಮುಂಗೈಯ ಮುರಾರಿ ಮಗನ
ಥೈಯ ಥೈಯಯೆಂದು ಕಂದನ ಹಣೆಗೆ ಹಣೆಯೊತ್ತಿ
ಪ್ರಿಯದಿ ಹೊಂಗೆಜ್ಜೆಕಾಲ ಒಯ್ಯನಡಿಯಿಡಿಸೆ ನೀಲ
ಮೈಯನಜನಯ್ಯನ ಮುದ್ದಿಸಲು ಬಂಗಾರದ ೧

ಬಾಯ ಜೊಲ್ಲುಂಗುರುಗುರುಳೆಳೆಯ ಪಲ್ಲಾವ್ಧರ ಮದ್ದಿ
ಕಾಯಿ ಅರಳೆಲೆ ಮಾಗಾಯಂದುಗೆ ಒಪ್ಪೆ
ಮಾಯಾರಸವನ್ನೆಶೋದೆ ತಾಯಿಗುಣಿಸುವ ಬಾಲ
ನಾಯಕ ವೃಂದಾರಕಪಾಲಕ ರತ್ನಮಯದ ೨

ಬಾಳೆಯಂತೆ ಬಳುಕಿ ನಡೆವ ಬಾಲಕೃಷ್ಣ ಬಳಲ್ದನೆಂದು
ಆಲಂಗಿಸಲೊಲ್ಲದಂಬೆಗಾಲನಿಕ್ಕುವ
ಮೇಲೆ ಪ್ರಸನ್ವೆಂಕಟೇಶನ ಲೀಲೆಗೆ ಸುರರು ಮೆಚ್ಚೆ
ಲಾಲಿಸಿ ನಂದನನ ನಿವಾಳಿಸಿಕೊಂಡಳು ನಿರ್ಮಳ ೩

೬೬

ಪಾಲಿಸು ಬಾಲಗೋಪಾಲ ಕೃಪಾಳು ನೀ
ಪಾಲಿಸು ಬಾಲಗೋಪಾಲ ಬಾಲಕಲೀಲಾ ವಿ
ಶಾಲ ಮಾಲೋಲಜ ಲಲಿತ ಬಾಲಗೋಪಾಲ ಪ.

ರಂಗು ರನ್ನುಂಗುರದಂಗುಲಿ ಸಂಜ್ಞದಿ
ಪೊಂಗೊಳಲ ಸಂಗೀತ ರಂಗ
ಮಂಗಳ ಭಾಂಗ ತ್ರಿಭಂಗ ಗೋಜಂಗುಳಿ
ಸಂಗವ ಹಿಂಗದ ರಂಗ
ಅಂಗಜ ತಿಂಗಳ್ವತಂಗ ರೂಪಂ ಗೆಲ್ವ
ತುಂಗೋಜ್ವಲಾಂಗ ಶ್ರೀರಂಗ
ಮಂಗಳಪಾಂಗ ಗುಣಂಗಳ್ತರಂಗ ಆ
ಸಂಗಿ ಜಗಂಗಳ್ಗೆ ರಂಗ ೧

ಕೆಂದಾವರ್ಷ್ಯಂದದಿ ಸುಂದರ ದ್ವಂದ್ವಾಂಘ್ರಿ
ಚೆಂದುಳ್ಳ ತಂದೆ ಗೋವಿಂದ
ಬಂದಿ ಕಾಲಂದುಗೆ ಪೊಂದುಡುಗಿಂದೆಸೆವ
ನಂದನ ಕಂದ ಗೋವಿಂದ
ನಂದವ್ರಜ ಹೊಂದಿದ ವೃಂದಾರಕೇಂದ್ರ ಗೋ
ವೃಂದದಿ ನಿಂದ ಗೋವಿಂದ
ಇಂದಿರಜ ಇಂದುಮೌಳೀಂದ್ರ ಮುನೀಂದ್ರಾದಿ
ವಂದಿತ ನಂದ ಗೋವಿಂದ ೨

ಉನ್ನತ ಪುಣ್ಯ ಗೋಗನ್ನೆರ ಮನ್ನಿಪ
ಚೆನ್ನಿಗ ಚಿನ್ನ ಪಾವನ್ನ
ಪನ್ನಗ ಔನ್ನತ್ಯ ಭಿನ್ನ ದಯಾರ್ಣವ ಜ
ಗನ್ನ ಮೋಹನ್ನ ಪಾವನ್ನ

ಸನ್ಮುನಿಜನ್ನ ಭಾರ್ಯಾನ್ನವನುಣ್ಣುವ
ಚಿನ್ಮಯ ಪುಣ್ಯ ಪಾವನ್ನ
ಸ್ವರ್ಣಗಿರಿ ನಿಕೇತನ್ನ ನೀ ಧನ್ಯ ಪ್ರ
ಸನ್ನವೆಂಕಟರನ್ನ ಪಾವನ್ನ ೩

೬೭

ಬಂದರದಕೊ ಬಲರಾಮ ಮುಕುಂದರು
ಬಂದರಕೊ ಭಾವೆ ಕೆಲೆಯುತ ನಲಿಯುತ ಪ.

ನೀರಜಸಖನುದಯಾಗದ ಮುನ್ನ ಝೇಂ
ಕಾರದೊಳಳಿ ಮೊತ್ತವೇಳದ ಮುನ್ನ
ಸಾರಸ ಕೀರ ಮಯೂರಸ್ವನದ ಮುನ್ನ
ನಾರಿಯರು ಮೊಸರ ಮಥಿಸುವುದರಿತು ೧

ನವ ನವನೀತಕೆ ಮಚ್ಚಿ ಮನವಿಟ್ಟು
ತವಕದಿ ಗೋಡೆಯ ಧುಮುಕುತಲಿ
ಯುವತಿ ಗೊಲ್ಲತಿಯರ ಮರುಳು ಮಾಡುವರು ಸ
ಣ್ಣವರೊಳು ತಾಳ ಮೇಳದ ಅಬ್ಬರದಲಿ ೨

ಸಾರಗೋರಸ ಚೋರರು ಗೋಪಿಮಕ್ಕಳು
ಸೂರಿಡುವರು ಮನೆ ಮೀಸಲನು
ಸಾರಿಸಾರಿಗೆ ಪ್ರಸನ್ವೆಂಕಟ ಕೃಷ್ಣರ
ಚಾರು ಒಡ್ಯಾಣ ಘಂಟಾರವವನಾಲಿಸವ್ವ ೩

೬೮

ಬಂದೆಯಾ ಬಾರೊ ಗೋಪಾಲ ಕೃಷ್ಣ
ಬಂದೆಯಾ ಬಾರೊ ಪ.

ಇಲ್ಲಿಯ ಗೊಲ್ಲತೇರೆಲ್ಲರು
ಬಲ್ಲಿದ ಕಾಮುಕ ನಲ್ಲೇರು
ಫುಲ್ಲಲೋಚನ ನಿನ್ನ ಮುದ್ದಿನ ಮೊಗವ
ಮೆಲ್ಲನೆ ಚುಂಬಿಸಿ ಬಿಡರೊ ಮಗುವೆ ೧

ಚಿಕ್ಕವನೆಂದಾಡಿಸಿ ನಿನ್ನ
ಚಕ್ಕಂದಿಲಿ ಬಾಡಿಸಿ ಚಿನ್ನ
ಸಕ್ಕರೆ ಮಾತಲಿ ಬಿಗಿದಪ್ಪುವರೊ
ಕಕ್ಕಸಕುಚದಂಗನೆ ಗೋಪಿಯರೊ ೨

ಇರುಳ್ಹಗಲೆನ್ನ ಕಂದನ್ನ
ಮರುಳಿಕ್ಕುವರೆಂದಂಜುವೆ ನಾ
ತರಳನ ಕಾಲಿಂಗೆರಗುವೆ ನೋಡೋ
ತರಳೇರೊಡಗೂಡಾಡಲಿ ಬೇಡೊ ೩

ನಿಲ್ಲದೆ ನಿನ್ನ ಬರಮಾಡುವರೊ
ಚೆಲ್ವಹ ಹಣ್ಣುಗಳ ನೀಡುವರೊ
ಒಳ್ಳೆ ನಾರೇರನುದಿನ ನಿನ್ನ
ಬುಲ್ಲಿ ಬೆಲ್ಲಕೆ ಮನಸೋತಿಹರಣ್ಣ ೪

ವಿಗಡೇರ ದೃಷ್ಟ್ಯಾಗಲೆ
ತಗಲಿದವ್ವೆ ನಿನ್ನ ಮೈಯಲಿ
ಅಗಲದಿರೆನ್ನ ಪ್ರಸನ್ನವೆಂಕಟ
ನಗಪತಿ ಬಡವರ ಧನವೆ ಕೃಷ್ಣ ೫

೬೯

ಬಾರೋ ಮಗನೆ ಬಳಲಿದೆಯಾಡಿ
ಬಾರೊ ಮಗನೆ ಪ.

ಎಲ್ಲಿಗೆ ಹೋಗಿದ್ಯೊ ಎನ್ನದೆ
ಝುಲ್ಲು ಝುಲ್ಲು ಎನುತಲಿದೆ

ಮೆಲ್ಲೆದೆಗಾರ್ತಿ ಗೊಲ್ಲತೀರು ನಿನ್ನ
ಗಲ್ಲ ಕಚ್ಚಿಹರಲ್ಲೊ ಹಸುಳೆ ೧

ಬಾಡಿತೊ ವದನ ಇಂದಾರೊಳು
ಮಾಡಿದ್ಯೊ ಕದನ
ಕಾಡುವ ಬಾಲ ಪ್ರೌಢಿಯರ ತೋರಿಸು
ನಾಡ ಬಿಟ್ಟವರನೋಡಿಸುವೆ ನಡೆ ೨

ಕೂಸಿನಾಟವಲ್ಲೊ ಜಟ್ಟಿಗನ
ಮೊಸಲಂಜಿಕಿಲ್ಲೊ
ಹೇಸದೆ ಬೆಣ್ಣೆಯ ಸವಿದು ನಿ
ರ್ದೋಷ ಕೃಷ್ಣ ನೀ ಘಾಸಿಯಾದೆ ೩

ಕೋಮಲಾಂಗವಿದು ಕಲ್ಲೆದೆ
ಕಾಮಿನಿಯರೊಯಿದು
ಕಾಮುಕಿಯರತಿ ಪ್ರೇಮದಲಪ್ಪಪ್ಪಿ
ದಾಮ ಸಡಿಲ್ಯದೆ ಶ್ರೀಮುರಾರಿ ೪

ಮುದ್ದಿನಾಮೃತೆ ಬಾ ಪೊಂದೊಟ್ಟಿಲೊ
ಕ್ಷಿದ್ರೆಗೈಯಲಿಲ್ಲ ಎದೆ
ಗದ್ದಿಗೆಲಿದ್ದು ನಲಿದಾಡೊ ಪೂರ್ಣ
ಶುದ್ಧ ಪ್ರಸನ್ವೆಂಕಟ ಶ್ರೀಕೃಷ್ಣ ೫

೭೦

ಬಾಲನ ನೋಡಿರೆ ನಿವಾಳಿಸಿ ಆಡಿರೆ
ಕಾಲ ಅಂದುಗೆ ಕೈ ಕುಣಿಸದೆ ಸವಿ
ಮಾತಾಲಿಪನ ನಮ್ಮಪ್ಪನ ಪ.

ಬಾಲಕರನ್ನನ ಉಂಗುರುಗುರುಳಿನ ಸುಳಿಯೊ
ಭೃಂಗಾವಳಿಯೊ ಶ್ರೀ

ಲೋಲನ ವಿಸ್ತರ ಬಾಳವು ಕಳೆಗೇಡಿಯೊ
ಪೊಂಗನ್ನಡಿಯೊ
ಪಾಲ್ಗಡಲ ಪ್ರಭುವಿನೀ ಬಟ್ಟಗಲ್ಲಗಳೊ
ಮರಿಯಾವಿಗಳೊ
ಶೂಲಿಯ ಮುತ್ತಿದ ತಿದ್ದಿದ ಹುಬ್ಬಿನ ಹೊಳವೊ
ನಿಂಬ ಸುದಳವೊ ೧

ಯದುಕುಲ ತಿಲಕನ ಥಾಳಿಪ ಕಂಗಳ ಠಾವೊ
ತಾವರೆ ಹೂವೊ
ಮದನನಯ್ಯನ ಮೀಟಿದ ಮೂಗಿನ ಕೊನೆಯೊ
ಸಂಪಿಗೆ ನನೆಯೊ
ಸದಮಲ ಲೀಲನ ಸೊಬಗಿನ ನಾಸಾಪುಟವೊ
ಮುತ್ತಿನ ಬಟುವೊ
ವಿಧುವಂಶೇಂದ್ರನ ವೃತ್ತ ಮನೋಹರ ವದನೊ
ಮೋಹದ ಸದನೊ ೨

ಸುರರುಪಕಾರಿಯ ಎಳೆದುಟಿಯ ಕೆಂಬೊಳವೊ
ಬಿಂಬದ ಫಲವೊ
ಗರುಡಾರೂಢನ ಮೊಳೆವಲ್ಲುಗಳ ಬಿಳುಪೊ
ಕುಂದ ಕುಟ್ಮಳವೊ
ಕರುಣಾಂಬುಧಿಯ ಕಿವಿ ಶುಕ್ತಿಯೊ ಗದ್ದೊ
ಮುದ್ದಿನ ಮುದ್ದೊ
ಶರಣರ ಪ್ರಿಯನ ತ್ರಿರೇಖೆಯ ಕಂದರವೊ ಸುಂದರದರವೊ ೩

ದೇವಕಿತನಯನ ಪುಷ್ಟ ಯುಗಳ ದೋರ್ದಂಡೊ
ಕಲಭದ ಶುಂಡೊ
ದೇವವರೇಣ್ಯನ ಕರತಳದಂಗುಲಿ ಸರಳೊ
ಕೆಮ್ಮಾಂದಳಿಲೊ
ಭಾವಿಕ ಜನಜೀವನ ಪೀನೋನ್ನತ ಉರವೊ
ವಜ್ರದ ಭರವೊ

ಸೇವಕಪಕ್ಷನ ಉದರದ ವಲ್ಲಿ ತ್ರಿವಳಿಯೊ ಅಮರರ
ಹೊಳಿಯೊ ೪

ಅಜನಯ್ಯನ ಅಚ್ಯುತನ ನಾಭಿಯ ಸುಳಿಯೊ
ಅಮೃತದೊಕ್ಕುಳಿಯೊ
ತ್ರಿಜಗದ ಗರ್ಭ ವಿನೋದಿಗಳರಸನ ಮಣಿಯೊ
ಪಚ್ಚದ ಮಣಿಯೊ
ಸುಜನರ ಮಾನಿಯ ಬಟ್ಟದೊಡೆಯ ಸಂರಂಭೋ
ಎಳೆವಾಳೆಯ ಕಂಭೋ
ಗಜವರದನ ಗೋವಿಂದನ ಜಾನುಗಳ ಪೊಗರ್ವೊ
ಹರಿಮಣಿಯ ಪೊಗರ್ವೊ ೫

ತ್ರಿಗುಣಾತೀತನಂತನ ಜಂಘಗಳಿಳಿಕ್ಕೊ ಶರಬತ್ತಳಿಕ್ಕೊ
ನಿಗಮಾಗಮ್ಯನ ಚರಣಯುಗಂಗಳ ನಿಜವೊ
ಅರುಣಾಂಬುಜವೊ
ಮೃಗನರರೂಪನ ಅನುಪಮ ನಖಗಣ ಮಣಿಯೊ
ಬಾಲಖಮಣಿಯೊ
ಸುಗಮನ ಪದತಳದಂಕುಶ ಧ್ವಜಾಂಬುರೇಖ್ಯೋ
ವಿದ್ಯುರ್ಲೇಖ್ಯೊ ೬

ಆಭರಣಗಳಿಗೆ ಆಭರಣವೆ ಎಳೆಗರುವೆ ಕಲ್ಪತರುವೆ
ಸೌಭಾಗ್ಯದ ಶುಭಖಣಿಯೆ ನಂದಾಗ್ರಣಿಯೆ ಚಿಂತಾಮಣಿಯೆ ನಿ
ನ್ನ ಬಿಗಿದಪ್ಪುವ ಭಾಗ್ಯವಿನ್ನೆಂತೊ ಉಮ್ಮು ಕೊಡು ನಮ್ಮಮ್ಮ
ಶ್ರೀಭೃತ ಪ್ರಸನ್ವೆಂಕಟ ಕೃಷ್ಣ ತಮ್ಮ ಬಾ ಪರಬೊಮ್ಮ ೭

೭೧

ಬಾಲನ ಮೇಲೆ ನಿನ್ನ ಮೋಹವಮ್ಮ ನಾವು
ಹೇಳಿದ ಮಾತು ನೀ ಕೇಳೆಯಮ್ಮ ಪ.

ಚಿಣ್ಣ ಗಿಣ್ಣನೆಂಬುವ ಬಣ್ಣ ಬ್ಯಾಡೆ ನಮ್ಮ
ಬೆಣ್ಣೆ ಕದ್ದು ಮೆದ್ದ ಕಟವಾಯಿ ನೋಡೆ
ಸಣ್ಣಗಿಣ್ಣವನಿವನಾದರೆ ಪರರ ಚೆಲುವ
ಹೆಣ್ಣಿನೊಳಗಾಡುವನೆ ಕುವರ ೧

ಪುಟ್ಟಗಿಟ್ಟನೆಂಬುವ ಮಾತು ಬೇಡೆ ನಮ್ಮ
ರಟ್ಟು ಮಾಡುವ ಜನರೊಳು ನೋಡೆ
ಸಿಟ್ಟುಗಿಟ್ಟಿಗೆ ಕೃಷ್ಣ ಅಳುಕನಮ್ಮ ನಮ್ಮ
ಬಟ್ಟ ಕುಚವಿಡಿವ ದಿಟ್ಟನಮ್ಮ ೨

ಚಿಕ್ಕಗಿಕ್ಕವನೆಂಬುದು ರೂಢಿ ಕಾಣೆ ನಮ್ಮ
ಪಕ್ಷವ ಬಿಡನು ಬಾಲಕಾರ್ಯವೇನೆ
ಅಕ್ಕೊ ಇಕ್ಕೊ ಎಂಬುವನ್ನಕ್ಕ ಕಳ್ಳ ನಮ್ಮ
ಠಕ್ಕಿಸೆದ್ದೋಡುವ ಸಿಕ್ಕುವನಲ್ಲ ೩

ಕಕ್ಕುಲಾತಿ ತೋರೆ ನಮ್ಮ ಮನೆಗಳ ಪೊಕ್ಕು ಸಣ್ಣ
ಮಕ್ಕಳಾಟವಾಡದೆಮ್ಮ ನೋಡಿ ನಕ್ಕು
ತಕ್ಕೈಸಿ ಓಡುವ ಮಹಾಮಾಯಗಾರನಮ್ಮ
ದಕ್ಕಲೀಸ ಪತಿವ್ರತಧರ್ಮ ಜಾರ ಕೃಷ್ಣ ೪

ಕೂಸುಗೀಸು ಇನ್ನೆನ್ನಬಾರದವಗೆ ಭವ
ಘಾಸಿಯ ತಪ್ಪಿಸುವ ಎಂದಿಗೆಮಗೆ
ಬೇಸರ ಗೀಸರದೆ ನೆನೆವರ ಒಡೆಯ
ಲಕ್ಷ್ಮೀಶ ಪ್ರಸನ್ವೆಂಕಟ ರಂಗಯ್ಯ ೫

೭೨

ಸುಳಾದಿ

ಧ್ರುವತಾಳ

ಬಾಲ ಸೂರ್ಯನಿಭಮಣ್ಯಾಂಕ ಮೌಳಿ
ಹೀಲಿಯ ಪಿಂಛ ಪ್ರವಾಳ ಗುಚ್ಛ

ಮ್ಯಾಲಲರದಂಡೆ ಝೇಂಕರಿಪಾಳಿ
ಬಾಲರಯ್ಯನ ಮೊಗದ ಶೋಭೆ
ಭ್ರೂಲತೆ ವಿಲಾಸ ನೋಟದಿ ಮಕರ ಕುಂಡಲ ವಿ
ಶಾಲೇರಿ ಸಿರಿವತ್ಸ ಕೌಸ್ತುಭ
ನೀಲಮಾಣಿಕ ವಜ್ರವಲಯ ವೈಜಂತಿ ವನ
ಮಾಲೆ ತುಲಸಿ ಗಂಧ ಮೌಕ್ತಿಕ ಸರಗಳ
ನೀಲನದ ರತುನ ದಾಮ ಪೊನ್ನ
ಚೇಲ ನೂಪುರ ಕಿರುಗೆಜ್ಜೆಯ ಗೋ
ಪಾಲ ಪರಸನ್ನವೆಂಕಟ ಕೃಷ್ಣ ಶಾಮಲಕಾಯ ೧

ಮಠ್ಯತಾಳ

ನಂದವ್ರಜದ ಗೋವರ ವೃಂದಾಂಬುಧಿಗೆ ಪೂ
ರ್ಣೇಂದು ನಂದಸೂನು ಲಾಸ್ಯವಾಡೆ
ಒಂದೊಂದು ಲಯದ ಗತಿ ಹೊಂದ್ಯಮರ
ದುಂದುಭಿಗಳ್ದಂ ಧಳಧಂ ಧಂದಳೆನ್ನೆ
ಗಂಧರ್ವ ತುಂಬುರರು ನಾರಂದ ಮಹತೀಗೀತ ಪ್ರ
ಬಂಧ ಹೇಳೆ ನಂದರಸದಿಂದಾಡುತಿರೆ ಗೋ
ವಿಂದ ದಂದಂ ದಂದಂ ಧಿಮಿಕೆನ್ನ
ಲಂದದಿ ಮದ್ದಳೆ ತಾಳ
ಬಂದಿಮೊಗ (?) ತುತ್ತುರಿ ಕಹಳೆ ಕಂಬುವೇಣುಗೂಡಿ
ಅಂದಾಡಿದ ಪ್ರಸನ್ವೆಂಕಟ ಕೃಷ್ಣ ನಲವಿಂದ ೨

ತ್ರಿವಿಡಿ ತಾಳ

ಶ್ರೀಕಮಲ ಭಭೂರ್ವ ಪಿನಾಕಿ ವಿಪಾಹಿಪ
ನಾಕಜಾದ್ಯರ ಚೇಷ್ಟಕ
ಶ್ರೀಕರ ಪ್ರಸನ್ನವೆಂಕಟ ಕೃಷ್ಣ
ಆಕಳಕಾವರ ವಶಗ ಹಾಹಾ ೩

ಅಟ್ಟತಾಳ

ಅನಂತ ನಿಗಮ ನಿಕರಕೆ ನಿಲುಕದ
ಅನಂತಾನಂತ ಗುಣಪರಿಪೂರ್ಣಗೆ
ಧೇನುಕಾವರ ಪಳ್ಳಿ ಗೋಟಲೆ
ತೀಯಂ ತೀಯಂ ವೈಯ್ಯ ಅಯ್ಯಾ
ಧೇನುಕಾವರ ಪಳ್ಳಿ ಗೋಟಲೆ
ಜ್ಞಾನಿಜನಕೆ ಮೋದ ಹಾನಿ ಖಳಗೀವ
ಜ್ಞಾನಾನಂದ ಬಾಲ ಪ್ರಸನ್ನವೆಂಕಟ ಕೃಷ್ಣಗೆ ೪

ಏಕತಾಳ

ವೈಕುಂಠ ವಾರಿಜಾಕ್ಷ ಲೋಕರಕ್ಷ
ತೋಕವೇಷಧರ ಮುರಹರ ಶ್ರೀಧರ
ಶ್ರೀಕರ ಗುಣನಿಧೆ ಪುರಾಣಪುರುಷ ಹರೇ ಹರೇ
ಗೋಕುಲಪತೆ ಗೋವರ್ಧನಧರ
ಪಾಕಹ ಮದನಿಕಾರಕರ ಪ್ರಸ
ನ್ವೆಂಕಟ ಕೃಷ್ಣನೆಲೊ ಭಕ್ತವತ್ಸಲ ೫

ಜತೆ

ಶುಭಕೀರ್ತನೆ ಜಿಹ್ವೆಗೆ ಶುಭಕಥೆ ಕಿವಿಗಳಿಗೆ
ಶುಭಮೂರ್ತಿ ಕಣ್ಗೀಯಯ್ಯ ಪ್ರಸನ್ವೆಂಕಟಕೃಷ್ಣಯ್ಯ

೭೩

ಬೆದರದಿರೊ ಬೋವು ಬರಲಿಲ್ಲ ನಿನ್ನ
ಮೃದುಲ ಸವಿ ತೊದಲು ಮಾತಾಡೊ ಬಾಲ ಪ.

ಕಣ್ಣೆವೆಯಿಕ್ಕದೆ ನೋಡಬ್ಯಾಡ
ನಿನ್ನ ಮೈಮರವಿಟ್ಟಾಡ ಬ್ಯಾಡ

ಗುನ್ನಗನ್ನೆಳೆದಂಬೆಗಾಲಿಕ್ಕಬ್ಯಾಡ
ಹೊನ್ನೋಲೆ ಕೆಂಪೇರೆ ಹುಯಿಲಿಡಬ್ಯಾಡ ೧

ನೆಲವಿದು ದೈನ್ಯವ ಬಿಡಬ್ಯಾಡ
ಕೊಲ್ಲುವರ್ಯಾರಿಲ್ಲ ಕೊಲೆಗಂಜಬ್ಯಾಡ
ನಲವ ಬಿಟ್ಟಡವಿಯನೈದ ಬ್ಯಾಡ
ಕಳವಲಿ ಹುದುಗಿಕೊಂಡಿರಬ್ಯಾಡ ೨

ಹುಸಿಗೆ ಬೇಸರಬ್ಯಾಡ ಕೃಷ್ಣಮ್ಮ
ಹೊಸ ಕಲ್ಕ್ಯಾಟಬ್ಯಾಡ ನಮ್ಮಮ್ಮ
ಪ್ರಸನ್ನವೆಂಕಟಪತಿ ಪರಬೊಮ್ಮ ನಿನ್ನ
ಕುಶಲಕ್ಕೇನೇನುಪಾಯವಿಲ್ಲಮ್ಮಾ ೩

೭೪

ಬ್ಯಾಡಿರವ್ವ ಎನ್ನ ಕಂದನ್ನ ದೂರ
ಬ್ಯಾಡಿರೆ ಗಾರು ಮಾಡಿ ಚೋರನೆಂದು ಸಾರಿ
ಪಿಡಿದು ತಂದು ದುರುಳನೆನ್ನ ಬ್ಯಾಡಿರೆ ಪ.

ಹಸಿದೆ ಮಗುವೆ ಹಸಿದೆ ಚಿನ್ನ
ಶಿಶುವೆ ಪಾಲ್ಗುಡಿಯ ಬಾರೆನ್ನೆ
ಮಿಸುನಿ ಬಟ್ಟಲೊಳಿಟ್ಟ ಪಾಲಿನ
ಬಿಸಿಗೆ ಬೊವ್ವೆಂದು ಬೆದರುವ
ಮೊಸರ ಹರವಿಯೊಡೆದು ನಿಮ್ಮನೆ
ಪೊಸಬೆಣ್ಣೆಗಳ ಮೆಲುವನೆಂದು
ಅಸಿಯರೊಂದುಗೂಡೆನ್ನ ಕೂಸಿಗೆ
ಪುಸಿಯ ವಾಕನುಸುರಿ ದೂರ ಬ್ಯಾಡಿರೆ ೧

ಮುದ್ದು ತಾರೊ ರಂಗ ಎನಲು
ಎದ್ದು ತಪ್ಪಡಿಗಳನಿಡುತ
ಬಿದ್ದು ಅಂಬೆಗಾಲನಿಕ್ಕಿ

ಮುದ್ದು ನೀಡಲರಿಯನೆ
ಕದ್ದು ನಿಮ್ಮನೆ ಕೆನೆವಾಲನು
ಗೆದ್ದು ನಿಮ್ಮ ಬಾಲರ ಬೆನ್ನ
ಗುದ್ದಿ ಓಡಿ ಬರುವನೆಂತೆ
ಬುದ್ಧಿ ಇಲ್ಲವೆ ನಿಮಗೆ ದೂರ ಬ್ಯಾಡಿರೆ ೨

ಎತ್ತಿಕೊಂಡು ರಂಬಿಸಿ ಬಾಯೊಳು
ತುತ್ತನಿಡಲು ಉಣ್ಣಲರಿಯ
ಕತ್ತಲೆಯೊಳು ಹೆಂಗಳ ಪಿಡಿದು
ಚಿತ್ತ ಮೋಹಿಸಬಲ್ಲನೆ
ಹೆತ್ತ ಮಕ್ಕಳಿಲ್ಲವೆ ನಿಮಗೆ
ವ್ಯರ್ಥ ಜಾರನೆನ್ನುವಿರಮ್ಮ
ಕರ್ತ ಪ್ರಸನ್ವೆಂಕಟರಾಯಗೆ
ಭಕ್ತವತ್ಸಲನಲ್ಲೆಂದು ದೂರ ಬ್ಯಾಡಿರೆ ೩

೭೫

ಮೆಚ್ಚು ಮದ್ದು ಮಾಡಿದರೆನ್ನ ಮುದ್ದು ಚಿನ್ನನ
ಅಚ್ಚ ಕಾಮುಕ ನಲ್ಲೇರೆನ್ನ ಅಚ್ಯುತ ಕೃಷ್ಣನ ಪ.

ಮಾತನಾಲಿಪನಾವಾಗ ಮಡದೇರ್ಗೆ ಸೋತು ರಂಗ
ಧಾತು ವಿಪರೀತಾಗಿದೆ ಧನಿಗಾನಂಜಿದೆ ೧

ವಂಚನೆಯ ಕಲಿತ ಗೃಹದ ವಿತ್ತವೆಲ್ಲ ಸೂರ್ಯಾಡಿದ
ಸಂಚರಿಪ ಹೊರಗೆ ನಾರೇರ ಸೋಂಕಿ ಹಾ ಕುವರಾ ೨

ಹುಸಿ ಖರೆಯ ಕಲಿತ ಹೊಸನಡೆಯರಿತ
ಪ್ರಸನ್ವೆಂಕಟ ಮುಕುಂದ ಪರವಶನಾದ ೩

೭೬

ರಂಗ ಕುಣಿದ ಮುದ್ದು ರಂಗ ಕುಣಿದ ಪ.

ರಂಗ ಕುಣಿದ ಗೋಪಿಕಂಗಳ ಮುಂದೆ
ಪೊಂಗೆಜ್ಜೆ ರವದೊಳು ಅಂಗಳದೊಳು ೧

ಗೆಳೆಯರೆಂದೆನಿಸುವ ಎಳೆಮಕ್ಕಳೊಡಗೂಡಿ
ಬಳುಕುತ ಬಾಗುತ ನಲಿನಲಿದಾಡಿ ೨

ಮೊಳೆವಲ್ಲು ಬಾಯಿಜೊಲ್ಲು ಗಿಳಿಸೊಲ್ಲಿನಿಂದಲಿ
ಕಳಕಳಿಸಿ ನಕ್ಕು ನಗಿಸಿ ಬಿದ್ದೆದ್ದು ೩

ಸುಳಿಗುರುಳು ಪಣೆಯಲಿ ಒಲಿದಾಡಲು
ಬಲರಾಮ ತಿದ್ದಿದರಳುತ ಅಳುಕುತ ೪

ಅರಳೆಲೆ ಮಾಗಾಯಿ ಬೆರಳ ರನ್ನುಂಗುರ
ಕಿರುಗೆಜ್ಜೆ ಭಾರೆಂದು ತರಳರಿಗಿತ್ತು ೫

ಮಕ್ಕಳ ರತುನ ಶ್ರೀ ಚಿಕ್ಕಕೃಷ್ಣಯ್ಯನು
ಬೆಕ್ಕಿಗೆ ಬೆದರ್ಯೆವೆ ಇಕ್ಕದೆ ನೋಡಿ ೬

ನಗುತತಿ ಮುದ್ದಿಸಿ ಬಿಗಿದಪ್ಪಲೆಶೋದೆಯ
ಮಗ ಪ್ರಸನ್ವೆಂಕಟೇಶ ಚಿಗಿದುಡಿಯಲ್ಲಿ ೭

೭೭

ರಂಗ ಬಾ ಮೋಹನಾಂಗ ಬಾ ದೇವೋ
ತ್ತುಂಗ ಬಾರೆಂದು ಕರೆದಳು ಗೋಪಿ ಪ.

ಚೀರುತ ಬಂದ ಚಿನ್ನ ಹಸಿದನೆಂದು ಘೃತ
ಕ್ಷೀರವೆರೆಸಿ ಕೊಟ್ಟರೆ ಒಲ್ಲದೆ

ಚೋರತನಕೆ ಮೆಚ್ಚಿ ಪೋಗುವೆ ನಿನ್ನನು
ದೂರುತ ನಿರುತ ಬಾಹರು ಗೋವಳೆಯರು ೧

ತುರುಗಾವೊ ನೆವದಲಿ ಪೋಗಿ ಗೋಪಾಲರ
ಕುರುಳಿಗೆ ತುರದ ಬಾಲಕೆ ಗಂಟಿಕ್ಕಿ
ದುರುಳತನಗಳನ್ನು ಮಾಡಿ ಮಾಡಿ ಮತ್ತೆ
ಅರಿಯದಂತೆ ಬಿಕ್ಕಿ ಬಿರಿಯಬೇಡೆಲೆ ಕಂದ ೨

ಚೆಲ್ಲೆಗಂಗಳೆಯರ ಶಯನಕೆ ಪೊಂದಿಹ
ನಲ್ಲರ ಬಡಿದೋಡಿ ಬರುತಲಿಹೆ
ಸಲ್ಲದು ನಿನಗಿದು ಬಾಲಕತನದೊಳು
ಫುಲ್ಲಲೋಚನ ಮುದ್ದು ಗೋಪಾಲಕೃಷ್ಣ ೩

ಶಕಟ ಪೂತನಿ ತೃಣಾವರ್ತ ಮೊದಲಾದ
ಶಕುತ ದನುಜರ ಮರ್ದನ ಕೃಷ್ಣಯ್ಯ
ಭಕುತರ ಬವಣೆಯನಳಿಯದಿದ್ದರೆ ಗಡ
ಸಕಲರು ಜಾರ ಚೋರೆಂದು ಸಾರುವರೊ ೪

ಎನ್ನ ಬೇಡು ನೀ ಮನದಣಿ ನೀಡುವೆ
ಅನ್ಯರ ಮನೆಗೆ ಪೋಗಲಿ ಬೇಡವೊ
ಚಿನ್ಮಯ ಮೂರುತಿ ಪ್ರಸನ್ವೆಂಕಟ ಕೃಷ್ಣ
ನನ್ನಾಣೆ ಮನೆಯ ಬಿಟ್ಟಗಲದಿರೊ ೫

೭೮

ಸಿಕ್ಕಿದನೆ ಹರಿ ಅಕ್ಕಕ್ಕ ಸುಖ
ದಕ್ಕಿಸಿ ಕೊಳಬನ್ನ್ಯಕ್ಕಕ್ಕ
ಚಿಕ್ಕವನಿವನಲ್ಲಮ್ಮಮ್ಮ ಬಿಡೆ
ಪುಕ್ಕಟೆ ಜಾರುವನಮ್ಮಮ್ಮ ಪ.

ಹೊಂಗನ್ನಡಿಗಳ ಹಳಿದೊಪ್ಪುವ ಜಾ
ನುಂಗಳ ಚೆನ್ನಿಗನ
ಬಂಗಾರ ಬಾಳೆಯ ಕಂಬದಂತೆಸೆವ ಬೆ
ಡಂಗಿನ ತೊಡೆಯವನ ಕಂಡೆನಾ ೩

ಕಟ್ಟಿಹ ಕಟಹವನಿಟ್ಟ ಝುಗ ಝುಗಿಸುವ ಪೊಂ
ಬಟ್ಟೆಯನುಟ್ಟವನ
ಇಟ್ಟ ಕಿಂಕಿಣಿದಾಮ ಮಧ್ಯತ್ರಿವಳಿ ನಾಭಿ
ಸೃಷ್ಟಿಯುದರದವನ ಕಂಡೆನಾ ೪

ಉರದಿ ಮೆರೆವ ಸಿರಿವತ್ಸಲಾಂಛನಕೇ
ಯೂರ ಕೌಸ್ತುಭಧರನ
ಸಿರಿತುಲಸಿ ಪದಕಹಾರ ಕಂಬುಕಂ
ದರ ತಿರುವೆಂಗಳಯ್ಯನ ಕಂಡೆನಾ ೫

ಅರಿಮಥನವ ಮಾಳ್ಪರಿ ಶ್ರುತಿಮಯವಾದ
ವರ ಶಂಖೋದ್ಧೃತನ
ವರಾಭಯ ನೀಡುವ ವರ ಗದೆಪದುಮದ
ಪರಮಾಂಗನ ಕಂಡೆ ನಾ ೬

ಅಂಬುಜ ಮೊಗದೊಳು ಕಾಂತಿಯ ಬೀರುವ
ಲಂಬಿತ ಕುಂಡಲನ
ಪೊಂಬಣ್ಣದ ಸಂಪಿಗೆ ಸಂಪಿಗೆ ನಾಸಿಕ
ಲುಳಿ ನಾಸಾಪುಟದವನ ಕಂಡೆನಾ ೭

ಮರಿಕೂರುಮನಂದದಿ ಕದಪುಗಳು ಅ
ಮರುತ ಬಿಂಬಾಧರನ
ಪೆರೆನೊಸಲಿನ ಭ್ರೂಲತೆ ಕಿರುನಗೆ ಕ
ಸ್ತೂರಿ ತಿಲಕಾಂಕಿತನ ಕಂಡೆನಾ ೮

ಕೋಟಿ ಇನ ತೇಜದ ಮಕುಟ ವರಕರುಣ
ನೋಟದ ಜಗಪಾಲನ

ಹಾಟಕ ಗಿರಿಯ ಪ್ರಸನ್ನವೆಂಕಟ ಜಗ
ನ್ನಾಟಕ ಸೂತ್ರಧಾರನ ಕಂಡೆನಾ ೯

೮೫

ಕಮಲೇಶ ನಿನ್ನ ವಿಮಲ ಯುಗಳ ಪಾದ
ಕಮಲಕೆ ಅಮರರು ಭ್ರಮರಗಳು ಪ.

ಅತಿಸುವಟು ರೂಪದಿ ವಿತರಣ ಬೇಡಲು
ಕ್ರತದೆಡೆ ಮೂರಡಿ ಕ್ಷಿತಿ ನೋಡೆ
ಅತುಳ ಚರಿತ ವಸುಮತಿಯನಳೆಯುತಲಿ
ದ್ವಿತಿಯ ಪದಕೆ ಅಬ್ಧಿಸತಿಯ ಪಡೆದ ಪಾದಕೆ ೧

ಹಲವು ಕಾಲವು ತನ್ನ ನಲ್ಲನ ಶಾಪದಿ ಅ
ಹಲ್ಯೆಯು ತಾನಿಳೆಯಲ್ಲಿ ಕಲ್ಲಾಗಿರಲು
ಸುಲಭದಿ ಭಕ್ತರ ಸಲಹುವ ಬಿರುದಿಗೆ
ಲಲನೆಯ ಮಾಡಿದ ಸುಲಲಿತ ಪಾದಕೆ ೨

ಚಿನ್ನತನದೊಳೆ ಉನ್ನತ ಭಕ್ತ ಧ್ರು
ವನ್ನ ದೃಢಮತಿಯನ್ನೆ ಕಂಡು
ತನ್ನ ಕರುಣದಿ ಪಾವನ ಪದವಿತ್ತ ಪ್ರ
ಸನ್ನ ವೆಂಕಟೇಶನ ಶ್ರೀಪಾದಕೆ ೩

೮೬

ಉಗಾಭೋಗ

ಕರುಣವಾರಿಧಿ ನೀ ಕರುಣವಾರಿಧಿಯಾದ ಕಾರಣ
ಕರಿ ಕುಲಾಗ್ರಣಿಯನ್ನ ಕಾಯ್ದೆ
ಉರಿ ಉರಗ ಬಾಧೆಯ ತಪ್ಪಿಸಿ ತರಳನಾರೈದೆ
ಕರುಣವಾರಿಧಿಯಾದ ಕಾರಣ

ಸುರರ ಸಂಕಟ ಹರಿದು ಕನಕ
ಪುರದರಸುತನ ಕೊಟ್ಟೆ ಪೌಲಸ್ತ್ಯ ಅನುಜಗೊಲಿದು
ಕರುಣವಾರಿಧಿಯಾದ ಕಾರಣ
ಸ್ಮರಿಸುತಿಹಗಂಬರದಿ ನಿಲಿಸಿದೆ
ಭರದಿ ಮುನಿ ಬಂದೆದೆಯನೊದೆದರೆ ಮರಳಿ ಮನ್ನಿಸಿದೆ
ಕರುಣವಾರಿಧಿ ನೀನು ನಿನ್ನಯ
ಕರುಣ ಪಾತ್ರರು ಸಿರಿ ವಿಧಾತ್ರರು
ಪರಿಚರರ ಅಭಿಮಾನಿ ಪ್ರಸನ್ವೆಂಕಟರೇಯ ಮಾಸಹಾಯ ೧

೮೭

ಕರುಣಿಯೆಂಬೆ ಕರುಣಾಬ್ಧಿಯೆಂಬೆ ಶರಣು ಶರಣೆಂಬೆ
ಪರಮ ಭಾಗವತರ ಅರಿಗಳ ತರಿದು ನೀ
ನರಕ ತಪ್ಪಿಸಿ ನಿಜಪುರಕೊಯ್ಯುವೆಯೆಂದು ಪ.

ತಾಯಿಯೆಂಬೆ ತವರೂರೆಂಬೆ ತ್ರಾಹಿ ತ್ರಾಹಿ ಎಂಬೆ
ಬಾಯೆಂಬೆ ಮಾನವರಘ ಕಾಣಿಸುತಿರೆ
ನೀಯಜಾಮಿಳಗಾಶ್ರಯನಿತ್ತೆಯೆಂದು ೧

ತಾತನೆಂಬೆ ಆದ್ಯಾಪ್ತನೆಂಬೆ ನಾಥನಾಥೆಂಬೆ
ಪಾತಕ ಕೌರವರಾತಂಕ ಬಿಡಿಸಿ ಸಂ
ಪ್ರೀತಿಲಿ ಪಾಂಡವರ ಕಾಯುವೆಯೆಂದು ೨

ಏಕನೆಂಬೆ ಅನೇಕನೆಂಬೆ ಸಾಕು ಸಾಕು ಎಂಬೆ
ಶ್ರೀಕಾಂತ ಪ್ರಸನ್ವೆಂಕಟೇಕಾಂತ ದಾಸರ
ಬೇಕಾಗಿ ದಡ ನೂಕುವೆಯೆಂದು ೩

೮೮

ಜಯ ಜಯ ಜಯ ಜಯ ದಯಾನಿಧೆ
ಭಯನಿವಾರಕ ಭಕ್ತನಿಚಯ ನಿತ್ಯಸೇವ್ಯನೆ ಪ.

ದ್ರುಹಿಣ ಸಮೀರ ಗರುಡಹಿನಾಥ ಮೃಡೇಂದ್ರ
ಸಹನುತ ಪದಸರೋರುಹ ನಿತ್ಯ ಜಯ ೧

ಮದನಜನಕ ಸಿಂಧುಸದನ ದಾನವ ಜಿತ
ಕದನ ಮಾನವ ಮೃಗವದನ ಹರೆ ಜಯ ೨

ದಶಾನನ ಹರಸುರ ಘೋಷಣ ನೀಲ ಸತತ
ಪ್ರಸನ್ವೆಂಕಟಗಿರಿವಾಸ ನಮೋ ತೇ ಜಯ ೩

೮೯

ಜಯಭೋ ಜಯಭೋ ಜಯ ವೆಂಕಟೇಶ ಪ್ರಭೊ
ಜಯಕರ್ತಾ ಭಯಹರ್ತಾಭಯದಾಯಕ ಮೂರ್ತೆ ಪ.

ಫಣಿಗಿರಿವರ ಫಣಮಂದಿರ ಪ್ರಣತಮನೋಹರ
ಘನಸದ್ಗುಣಗಣಪೂರ್ಣ ಘನ ಶಾಮಲವರ್ಣ
ಮನ್ಮಾನಸ ಮುನಿತಾಪಸ ಮನೋಮಾನಸ ಹಂಸ
ದನುಸುತಹರ ಧನುಸಂಹರ ದಿನಮಣೀಶ ರುಚಿರ ೧

ವನಜಾಕ್ಷಾವನಿಜಾಂತಕ ವನಜಾಸನ ಜನಕ
ಕನಕಾಕ್ಷಹ ಕನಕಾಲಯ ಕನಕಸ್ತ್ರೀಪ್ರಿಯ
ವನಭ್ರಮಣಾವನಿರಮಣ ವಿನತಾತ್ಮಜಗಮನ
ಅನಿಮಿತ್ತಜ ಅನಸೂಯಜ ಅನಿಮಿಷೇಂದ್ರಾನುಜ ೨

ಅರಿಧರಧರ ಅರಿಪರಿಹರ ಅರುಣಾಂಬರಧರ
ಚಿರಮಣಿ ರುಚಿರಾಭರಣಾನುಚರ ಸುರತರು ವೀರ
ಸುರಪರಮಾಪ್ತನೆ ಸಾಸಿರ ಕ್ರೀಡಾಶ್ಚರ್ಯಗಾರ
ಕಲಿಕಲುಷಹರ ಕರುಣಾಕರ ಪ್ರಸನ್ವೆಂಕಟೇಶ್ವರ ೩

೯೦

ಜೋಗಿಯ ಕಂಡೆ ಪರಮ ಯೋಗಿಯ ಕಂಡೆ
ಭೋಗಿಶಯನ ಗಂಬೂರ ಚರ್ಚಿತಾಂಗ ವೆಂಕಟೇಶ ಪ.

ವೇದವ ಕದ್ದೊಯ್ದವನ ಕೊಂದ ಜೋಗಿಯ ಕಂಡೆ
ಭೂಧರಧರನಾದ ಜೋಗಿಯ ಕಂಡೆ
ಭೇದಿಸಿ ಪಾತಾಳ ಪೊಕ್ಕು ಗರ್ಜಿಪ ಜೋಗಿಯ ಕಂಡೆ
ಆದರದಿ ಕಂದನ ನುಡಿಯನಾಲಿಸಿ ಬಂದ ೧

ಅಂಗುಟದಿ ಬೊಮ್ಮಾಂಡವ ಸೀಳಿದ ಜೋಗಿಯ ಕಂಡೆ
ಹೆಂಗಳ ತಲೆಯನರಿದ ಜೋಗಿಯ ಕಂಡೆ
ಅಂಗನೆಗೋಸುಗಾರಣ್ಯ ಸಂಚಾರಿ ಜೋಗಿಯ ಕಂಡೆ
ಪೊಂಗೊಳಲನೂದಿ ಮೂಜಗವನು ಮೋಹಿಸುವ ೨

ಕನ್ಯೇರ ವ್ರತಗೇಡಿ ದಿಗಂಬರ ಜೋಗಿಯ ಕಂಡೆ
ಉನ್ನತ ವಾಜಿಯೇರಿದ್ದ ಜೋಗಿಯ ಕಂಡೆ
ಪನ್ನಗಾದ್ರಿವರದ ಪ್ರಸನ್ನವೆಂಕಟೇಶನೆಂಬ
ತನ್ನ ನಂಬಿದವರನು ಬಿಡದೆ ಪಾಲಿಸುವ ೩

೯೧

ಕೋಮಲಾಮಲ ಗಾತ್ರನ ತಾಮರಸದಳ ನೇತ್ರನ
ಸ್ವಾಮಿ ಸಿರಿನಿವಾಸನ ಕಂಡೆ ಹೇಮಗಿರಿ ವರದೀಶನ ಪ.

ಕನ್ನೆ ಲಕುಮಿಯನೆತ್ತಿದ ಶುಭ ಚಿನ್ನವಕ್ಕಿಯ ಹತ್ತಿದ
ರನ್ನದುಡುಗೆಗಳಿಟ್ಟನ ಸುವರ್ಣದಂಬರನುಟ್ಟನ
ಕರ್ಣಕುಂಡಲ ಬೆಳಗಿನ ನುಣ್ಗೆನ್ನೆಲಲುಗುವ ಕುರುಳಿನ
ಸಣ್ಣನಾಮದ ನೊಸಲಿನ ಶ್ರೀ ಚಿನ್ಮಯನ ಬಲು ಚೆಲುವನ ೧

ಕುಂದದಲರಿನ ಮಾಲೆಯ ಪ್ರಭೆಗುಂದದ ಮಕುಟಮೌಳಿಯ
ಸ್ಯಂದನಾಂಗದರಾಭಯವರ ಹೊಂದಿದಮಲ ಸುಪಾಣಿಯ
ಮುಂದೆ ನಾರದ ಹನುಮರ ಗಾಯನಾನಂದದಲಿ ತಾ ಕೇಳುವ
ಹಿಂದೆಡಬಲದಿ ಛತ್ರವ ಪಿಡಿದಿಂದಿರೆಯರೊಳೊಪ್ಪುವ ೨

ತೋರ ಮುತ್ತಿನ ಹಾರದ ಕೇಯೂರ ಕೌಸ್ತುಭ ವಕ್ಷದ
ಚಾರುಸ್ಮಿತ ಮುಖರೋಚಿಯ ದಯಾವಾರಿಧಿಯ ಮಹೋದಾರಿಯ
ಸಾರಿದರ ಸುರತರುವಿನ ಸುರವೈರಿ ಕರಿ ಪಂಚಾನನ
ಭೂರಿ ಪ್ರಸನ್ವೆಂಕಟೇಶನ ಹೃದಯಾರವಿಂದ ನಿವಾಸನ ೩

೯೨

ಕೋಲುಹಾಡು

ಕೋಲು ಕಾಮನ ಗೆದ್ದ ಕೋಲು ಮಾಯ್ಗಳನೊದ್ದ
ಕೋಲು ಆನಂದಮುನಿ ಪಿಡಿದಿಹ ಕೋಲೆ ಪ.

ತಮನೆಂಬುವನ ಕೊಂದು ಕಮಲಜನಿಗೆ ವೇದ
ಕ್ರಮದಿಂದ ಕೊಟ್ಟು ಜಗವನು ಕೋಲೆ
ಕ್ರಮದಿಂದ ಕೊಟ್ಟು ಜಗವನು ರಕ್ಷಿಸಿದ
ವಿಮಲ ಶ್ರೀ ಮತ್ಸ್ಯ ಮನೆದೈವ ಕೋಲೆ ೧

ಸುರಪನ ವಿಭವೆಲ್ಲ ಶರಧೀಲಿ ಮುಳುಗಿರೆ
ಗಿರಿಗಹಿ ಸುತ್ತಿ ಕಡೆಯಲು ಕೋಲೆ
ಗಿರಿಗಹಿ ಸುತ್ತಿ ಕಡೆಯಲು ನಗ ಜಾರೆ
ಧರಿಸಿದ ಶ್ರೀ ಕೂರ್ಮ ಮನೆದೈವ ಕೋಲೆ ೨

ಹೊಂಗಣ್ಣಿನವನು ಭೂವೆಂಗಳನೆಳೆದೊಯ್ಯೆ
ಮಂಗಳಮಹಿಮ ದಯದಿಂದ ಕೋಲೆ
ಮಂಗಳ ಮಹಿಮ ದಯದಿಂದ ನೆಗಹಿದ್ಯ
ಜ್ಞಾಂಗ ಶ್ರೀವರಾಹ ಮನೆದೈವ ಕೋಲೆ ೩

ಒಂದೆ ಮನದೊಳಂದು ಕಂದ ನೆನೆಯಲಾಗ
ಬಂದವನಯ್ಯನ್ನೊದೆದನು ಕೋಲೆ
ಬಂದವನಯ್ಯನ್ನೊದೆದನು ಅನಿಮಿತ್ತ
ಬಂಧು ನರಹರಿಯು ಮನೆದೈವ ಕೋಲೆ ೪

ಎದುರಿಲ್ಲವೆನಗೆಂದು ಮದವೇರಿದವನ ತ್ರಿ
ಪದ ಭೂಮಿ ಬೇಡಿ ಗೆಲಿದನು ಕೋಲೆ
ಪದ ಭೂಮಿ ಬೇಡಿ ಗೆಲಿದಾ ತ್ರಿವಿಕ್ರಮ
ಮುದದ ವಾಮನ ಮನೆದೈವ ಕೋಲೆ ೫

ಕುಜನರಳಿದು ಭಾಗ್ಯ ಸುಜನರಿಗೊಲಿದಿತ್ತ
ನಿಜ ತಾತನಾಜ್ಞ ಸಲಹಿದ ಕೋಲೆ
ನಿಜ ತಾತನಾಜ್ಞ ಸಲಹಿದ ಶುಭಗುಣ
ದ್ವಿಜರಾಮ ನಮ್ಮ ಮನೆದೈವ ಕೋಲೆ ೬

ಕೌಸಲ್ಯೆ ಗರ್ಭದಿ ಜನಿಸಿದ ಕೃಪೆಯಲ್ಲಿ
ಕೌಶಿಕ ಕ್ರತುವ ಕಾಯ್ದನು ಕೋಲೆ
ಕೌಶಿಕ ಕ್ರತುವ ಕಾಯ್ದ ರಾವಣಾಂತಕ
ಶ್ರೀ ಸೀತಾರಾಮ ಮನೆದೈವ ಕೋಲೆ ೭

ಗೋಕುಲದಲಿ ಬೆಳೆದು ಪೋಕ ದನುಜರ ಅ
ನೇಕ ಪರಿಯಲಿ ಸದೆದನು ಕೋಲೆ ಅ
ನೇಕ ಪರಿಯಲಿ ಸದೆದ ಪಾಂಡವಪಾಲ
ಶ್ರೀಕೃಷ್ಣ ನಮ್ಮ ಮನೆದೈವ ಕೋಲೆ ೮

ಮಿಥ್ಯಾವಾದಿಗಳಿಗೆ ಮಿಥ್ಯವನೆ ಕಲಿಸಿ
ಸತ್ಯವಾದಿಗಳ ಪೊರೆದನು ಕೋಲೆ
ಸತ್ಯವಾದಿಗಳ ಪೊರೆದನು ಅಜವಂದ್ಯ
ಕರ್ತ ಬೌದ್ಧನು ಮನೆದೈವ ಕೋಲೆ ೯

ಸ್ವಾಹಾ ಸ್ವಧಾಕಾರವು ಮಹಿಯೊಳಿಲ್ಲದಾಗೆ
ಸುಹಯವೇರಿ ಕಲಿಯನು ಕೋಲೆ
ಸುಹಯವೇರಿ ಕಲಿಯನೆಳೆದು ಕೊಂದ
ಮಹಾಕಲ್ಕಿ ನಮ್ಮ ಮನೆದೈವ ಕೋಲೆ ೧೦

ಹತ್ತವತಾರದಿ ಭಕ್ತಜನರ ಹೊರೆದ
ಮತ್ತಾವಕಾಲದಿ ರಕ್ಷಿಪ ಕೋಲೆ
ಮತ್ತಾವ ಕಾಲದಿ ರಕ್ಷಿಪ ಪ್ರಸನ್ವೆಂಕಟ
ಕರ್ತನ ನಂಬಿ ಸುಖಿಯಾದೆ ಕೋಲೆ ೧೧

೯೩

ಕೋಲುಹಾಡು

ಕೋಲು ಮುಕ್ತಿ ಮಾರ್ಗದ ಕೋಲು ದುಷ್ಟಶಾಸನ
ಕೋಲು ಸುಖತೀರ್ಥಯತಿರಾಯನ ಕರದಂಡು
ಕೋಲು ಕೋಲೆ ಪ.

ಕಂಬುಗೇಹನ ಸೀಳ್ದ ಕಲ್ಲ ಬೆನ್ನಲಿ ತಾಳ್ದ
ಕುಂಭಿನಿ ತಂದ ಕಂಬದಿ ಬಂದನಮ್ಮಯ್ಯ
ಕೊಂಬುವರಿಲ್ಲ ತ್ಯಾಗವೆಂಬ ಬಲಿಯೊತ್ತಿದ
ಡಂಬಕ ಕ್ಷತ್ರೇರ ಕಂಠದರಿ ನೋಡಮ್ಮಯ್ಯ ೧

ಅಂಬುಧಿಯ ದಾಟಿದ ರಂಭೆರೊಳೋಲ್ಯಾಡಿ ದಿ
ಗಂಬರ ತಿರುಗಿ ಪಶುವೇರಿದ ನಮ್ಮಯ್ಯ
ಅಂಬುಜಜಾಂಡ ಒಳಕೊಂಬ ಒಡಲ ಚೆಲುವ
ಕೊಂಬು ಕೊಳಲೂದುವರ್ಥಿಯ ನೋಡಿರಮ್ಮಯ್ಯ ೨

ಸರ್ವಜ್ಞರಾಯನ ಪೂರ್ವದ್ವಾದಶಸ್ತವನ
ಕೋರ್ವನೆ ಮೆಚ್ಚಿ ಉಡುಪಿಲಿ ನಿಂದನಮ್ಮಯ್ಯ

ಉರ್ವಿಗುಬ್ಬಸ ಮತವ ಪೂರ್ವಪಕ್ಷವ ಮಾಡಿದ
ಸರ್ವೇಶ ಪ್ರಸನ್ವೆಂಕಟ ಕೃಷ್ಣ ಕಾಣಮ್ಮಯ್ಯ ೩

೯೪

ತೊರವೆಪುರನಿವಾಸ ನರಸಿಂಹ ನೀ
ಹೊರೆಯೊ ಭಕ್ತರ ಭಯಗಜಸಿಂಹ
ಅರಿವರಾರಯ್ಯ ನಿನ್ನ ಮಹಿಮೆಯ
ಸರಸಿಜಭವ ಭವ ಸುರವರ ಅಹಿ ಕಿನ್ನರ
ವರ ಮುನಿವರ ನರವರವಂದ್ಯ ಪ.

ಹಿರಣ್ಯಕನೆಂಬ ದೈತ್ಯ ಮಹೀತಳದಿ ವಿಧಿ
ಹರವರದಲಿ ಬಲುಸೊಕ್ಕಿ ಅಂದು
ಪರಮ ಭಾಗವತ ಪ್ರಹ್ಲಾದನಿಗೆ
ಪರಿಪರಿದುರಿತವ ಮರಳಿ ಮರಳಿ ಭಯಂ
ಕರವನು ಚರಿಸಲು ನೆರೆಮೊರೆಯಿಡಲು ೧

ತರಳಗಂಜಿಸಿ ನಿನ್ನ ದೊರೆಯ ತೋರೊ ಎನಲು
ಸರವಭೂತ ಭರಿತಾನಂತನೀಗ
ಅರಸಿದರೀ ಕಂಬದೊಳಿಹನೆನಲು
ಮೊರೆ ಮೊರೆದೇಳುತ ಸರಸರನೊದೆಯಲು
ಬೆರಬೆರ ದೋಷದಿ ವರನರಹರಿಯೆ ೨

ಚಿಟಿಲು ಚಿಟಿಲು ಭುಗಿಭುಗಿಲೆನುತ ಪ್ರ
ಕಟಿಸಿ ದೈತ್ಯನುದರವನು ಸೀಳಿ
ತ್ರುಟಿಯೊಳು ಕರುಳಮಾಲೆಯ ಧರಿಸಿ
ಶಠನ ವಧಿಸಿ ನಿಜಭಟನ ಪೊರೆದ ಜಗ
ಜಠರ ಪ್ರಸನ್ನವೆಂಕಟ ನರಸಿಂಹ ೩

೯೫

ದೇವ ದೇವೇಶ ವೆಂಕಟೇಶ
ಶ್ರೀವಿಧಾತ ವಂದ್ಯ ಭೂವೈಕುಂಠೇಶ ಪ.

ಸಾಮಜಾರ್ಚಾರಿ ಶಿಕ್ಷ ಸ್ವಾಮಿ
ಸಾಮಗಾನಪ್ರಿಯ ಸತ್ಪಕ್ಷ
ಶ್ರೀ ಮಾವಧೂ ಮನೋರಮ ತ್ರಿಧಾಮ ಶ್ರೀ
ರಾಮ ಸುಪ್ರೇಮಾಬ್ಧಿ ಕೋಮಲ ಕುಕ್ಷ ೧

ರಾಕೇಂದು ರವಿಕೋಟಿತೇಜ ಸ್ವಾಮಿ
ನಾಕಪಾರ್ಚಿತ ಪದಾಂಬೋಜ
ವ್ಯಾಕೀರ್ಣಾನೇಕಾಜಾಂಡಾಂಕಿತಾವ್ಯಾಕೃತ
ಶ್ರೀಕಾರ ಸಾಕಾರ ಲೋಕೇಶ ಪೂಜ್ಯ ೨

ಅನಂತಗುಣ ಪರಿಪೂರ್ಣ ಸ್ವಾಮಿ
ಆನತಜನ ಬುಧಭರ್ಣ
ಧೇನುಗಿರಿನಾಥ ದಾನಿ ಪ್ರಸನ್ವೆಂಕಟ
ಜ್ಞಾನಾನಂದ ನಿತ್ಯತೇ ನಮೋ ಕರುಣಿ ೩

೯೬

ದೇವಿಯನೆತ್ತಿದನಾರೆಲಮ್ಮಾ ನಮ್ಮ
ದೇವ ಸಿರಿಪತಿ ಕಾಣೆಲಮ್ಮಾ
ದೇವಿ ನಮ್ಮ ದೇವರು ಬಂದರು ಕಾಣಮ್ಮ ಪ.

ಕಣ್ಣೆವೆ ಇಕ್ಕದೆ ಮಾತಿಗೆ ಮನವಿಟ್ಟ
ಸಣ್ಣದೊಡ್ಡನಾಹನಾರೆಲಮ್ಮ
ಉನ್ಮತ್ತ ಖಳ ಸೋಮಕನ ವೈರಿ ಹೊಸ ಹೊನ್ನ
ಬಣ್ಣದ ಮಚ್ಛವತಾರಿ ಅಲ್ಲೇನಮ್ಮ ೧

ಸಾರಿಸಾರಿಗೆ ಉಯ್ಯಾಲಿಡುತಲಿ ಮುಸುಡನು
ತೋರಿ ಜಾರಿದವನಾರೆಲಮ್ಮ
ಆರಿಗು ಮೀರಿದ ಮಂದರ ಬೆನ್ನಲಿ
ಭಾರಾಂತ ಶ್ರೀಕೂರ್ಮನಲ್ಲೇನಮ್ಮ ೨

ಘರ್ಘರಿಸುತ ಕಾಲಕೆದರಿ ಜಗದಗಲ
ಘೋರ್ಗರೆವುತಲಿಹನಾರೆಲಮ್ಮ
ದುರ್ಘಟ ದೈತ್ಯನ್ನ ದಂಷ್ಟ್ರದಿ ಚುಚ್ಚಿದ
ನರ್ಘ್ಯ ವರಾಹ ದೇವನಲ್ಲೇನಮ್ಮ ೩

ಕೂಗುತ ಕೊಲ್ಲುತ ಕಿಡಿಯನುಗುಳುತ
ಲಗುಬಗೆದವನಾರೆಲಮ್ಮ
ನೀಗಿ ದುಷ್ಟನ ಶರಣಾಗತ ಶಿಶುರಕ್ಷ
ಯೋಗಿ ನರಹರಿ ಅಲ್ಲೇನಮ್ಮ ೪

ಭೂಮಿ ಆಕಾಶಕೆ ಒಬ್ಬನೆ ಹಬ್ಬುತ
ಸೀಮೆಯ ಮುಚ್ಚುವನಾರೆಲಮ್ಮ
ಹೇಮ ಹೋಮದಿ ಮತ್ತ ಬಲಿಯನೊತ್ತಾಳಿದ
ಸಾಮದ ವಾಮನನಲ್ಲೇನಮ್ಮ ೫

ಸಾವಿರ ಕೈಯ್ಯವನಳಿದು ಕಡಿದು ತಾನೆ
ಹೇವದಟ್ಟಿವನಾರೆಲಮ್ಮ
ಈ ವಸುಧೆಯ ಭಾರವಿಳುಹಿದ ವೀರ ಭೂ
ದೇವಕುಲದ ರಾಮನಲ್ಲೇನಮ್ಮ ೬

ಕರಡಿ ಕೋಡಗ ಕೊಂಡು ಕಡಲೊಳಗಾಡಿದ
ಹುರುಡಿಲ್ಲದ ಬಿಲ್ಲನುಳ್ಳನಾರೆಲಮ್ಮ
ಸರಕುಮಾಡಿ ರಕ್ಕಸರನೊದ್ದ ಸಮೀರಜ
ವರದ ಸೀತಾರಾಮ ಅಲ್ಲೇನಮ್ಮ ೭

ಬಂಡಿ ಕುದುರಿ ಗೂಳಿ ಹಕ್ಕಿ ಸೀಳಿ ಗೊಲ್ಲ
ಹೆಂಡಿರೊಳಾಡುವನಾರೆಲಮ್ಮ
ಪಾಂಡವಪಾಲ ರುಕ್ಮಿಣಿ ವಿಜಯನು
ಬಂಡಿಕಾರ ಕೃಷ್ಣನಲ್ಲೇನಮ್ಮ ೮

ಉಡುಗೆಯನುಡದಂತರಾಟದಿ ಕದ(ತಪ?)ವಿದ್ದ
ಮಡದೇರ ಕೆಡಿಸಿದನಾರೆಲಮ್ಮ
ಮೃಡಸುರರುಬ್ಬಸಬಡಿಸುವ ಬೌದ್ಧರ
ಕೆಡಿಪ ಮೋಹನ ಬುದ್ಧನಲ್ಲೇನಮ್ಮ ೯

ವಾಜಿಯನೇರಿ ಠೇವಿಡಿದು ಗಡಬಡಿಸಿ
ಮೂಜಗ ಸುತ್ತುವನಾರೆಲಮ್ಮ
ಮಾಜಿದ ಪುಣ್ಯವನೆತ್ತಿ ಕಲಿಯ ಕೊಂದ
ಸೋಜಿಗದ ಕಲ್ಕಿ ಅಲ್ಲೇನಮ್ಮ ೧೦

ಮುಗ್ಧರಾಗಲಿ ಪ್ರೌಢ ಬಂಟರಾಗಲಿ ಕರೆದ
ರೆದ್ದೋಡಿ ಬಂದವನಾರೆಲಮ್ಮ
ಸಿದ್ಧಪುರುಷ ಪ್ರಸನ್ವೆಂಕಟಪತಿ
ಸಾಧಿಸಿ ಪಾಡಿದಲ್ಲಿದ್ದನಮ್ಮ ೧೧

೯೭

ನಾರಾಯಣ ಪಂಜರ

ನಾರಾಯಣಾಯ ನಮೊ ನಾರಾಯಣಾಯ ನಮೊ
ನಾರಾಯಣಾಯ ನಮೊ ನಾರಾಯಣ
ನಾರದರ ಮುಖದಿಂದ ನರಕಸ್ಥರೆಬ್ಬಿಸಿದೆ
ನಾರಾಯಣಾಯ ನಮೊ ನಾರಾಯಣ ಪ.

ಮತ್ತ ಕರಿಯವಸಾನಕಂಜಿ ಹರಿಯೆ ನೀ ಕಾಯ್ದೆ *
ಭಕ್ತ ಪ್ರಹ್ಲಾದನೇಕಾಂಗ ನಿಷ್ಠೆಗೆ ಒಲಿದೆ ೧

ಪೃಥುವಿಗಳ್ಳನನಿರಿದು ಸತಿಯನುದ್ಧರಿಸಿದೆ
ಪೃಥು ಚಕ್ರವರ್ತಿಗೆ ಪ್ರತ್ಯಕ್ಷನಾಗ್ಯೊಲಿದೆ ೨

ಶೂಲಿಯನು ಬೆಂಬತ್ತಿ ಸುಡುವೆನೆಂಬನ ಸುಟ್ಟೆ
ಶೀಲವಿಡಿದಂಬರೀಷನ ಮತವ ಗೆಲಿಸಿದೆಯೊ ೩

ಮಕರರೂಪದಿ ಸತ್ಯವ್ರತಗೆ ತತ್ವವನೊರೆದೆ
ಮುಖದಿ ಶ್ರುತಿ ಪಿಡಿತಂದು ವಾರಿಜಾಸನಗಿತ್ತೆ ೪

ಪುರುಹೂತಗಖಿಳ ಪರಮಾರ್ಥವನು ಅರುಹಿದೆ
ಸುರಪನ್ನ ಭಯವಟ್ಟಿ ಧ್ರುವಗೆ ಧ್ರುವಪದವಿತ್ತೆ ೫

ಮಹಾಪಾಪನಿರತ ಅಜಾಮಿಳನಿಷ್ಟ ಕರಿಸಿದೆ
ಮಹಿದಾಸನಾಗಿ ತಾಯಿಗೆ ತತ್ವವನು ಪೇಳ್ದೆ ೬

ಮುನಿ ಕಾಲಲೊದೆಯೆ ಎದ್ದು ಕರುಣಿಸಿದೆ ಕರುಣಾನಿಧಿ
ಮುನಿವೆಂಗಳರೆಯಾಗೆ ಪದಸೋಂಕಿಸ್ಯೆತ್ತಿದೆಯೊ ೭

ಮಖವ ರಕ್ಷಿಸಿ ರಾಜಋಷಿಗಭೀಷ್ಟೆಯನಿತ್ತೆ
ಮಕರ ಧ್ವಜಾರಿ ಧನು ಮುರಿದವನಿಜೇಶ ೮

ಶುಭಕಪೀಶಗೆ ಅಭಯವರವಿತ್ತು ಕೈಪಿಡಿದೆ
ಶುಭಕಂಠನಂಜಿಕೆಯ ಹನುಮ ಹೇಳಲು ಕಳೆದೆ ೯

ಶರಣು ಹೊಕ್ಕಿರೆ ವಿಭೀಷಣಗರಸುತನ ಕೊಟ್ಟೆ
ಶರದಿ ರಾವಣನರಿದು ಸುರರ ಸಂಕಟ ಹರಿದೆ ೧೦

---

* ಪ್ರತಿ ನುಡಿಯ ೨ನೆಯ ಮತ್ತು ೪ ನೆಯ ಸಾಲಿಗೆ 'ನಾರಾಯಣಾಯ ನಮೊ ನಾರಾಯಣ' ಎಂಬ ಚರಣ ಪಲ್ಲವಿಯಲ್ಲಿರುವಂತೆ ಪುನರಾವರ್ತನೆಗೊಳ್ಳಬೇಕು.

ಅನುಜನಗ್ನಿಗೆ ಧುಮುಕಲವಧಿ ಮೀರದೆ ಪೊರೆದೆ
ಅನಿಮಿಷರ ನಿಕರಕತಿ ಆಹ್ಲಾದ ಬೆಳೆಯಿಸಿದೆ ೧೧

ಉರಿನುಂಗಿ ಗಿರಿನೆಗಹಿ ವ್ರಜವ ಪಾಲನೆ ಮಾಡ್ಡೆ
ಉರಗನೆಳೆತಂದವನ ರಾಣಿಯರ ಸ್ತುತಿಗೊಲಿದೆ ೧೨

ಕ್ರತುನಾರಿಯರನ್ನ ಸವಿದುಂಡು ಸುಖವಿತ್ತೆ
ಕ್ರತು ಭೋಕ್ತೃ ಕ್ರತುಗಾತ್ರ ಕ್ರತುಪಾಲ ಕ್ರತುಶೀಲ ೧೩

ಗೋಪ ಸ್ತ್ರೀಯರ ಕುಚದಿ ನ್ಯಸ್ತ ಚರಣಾಬ್ಜಯುಗ
ಗೋಪೀ ಜನಜಾರ ನವನೀತ ದಧಿಚೋರ ೧೪

ವಂಶಗಾಯನ ಪ್ರಿಯ ವಿಧುಕುಲೋದ್ಭವ ಕೃಷ್ಣ
ವಂಶವರ್ಧಕ ಸುಜನ ವಂಶಮರ್ದಕ ಕುಜನ ೧೫

ಅಕ್ರೂರವಂದ್ಯ ಕಂಸಾರಿ ಕುಬ್ಜಾರಮಣ
ಆಕ್ರಂದಿಸಿದ ತಂದೆ ತಾಯಿಯರ ಭಯವಳಿದೆ ೧೬

ಅದಿತಿ ಕುಂಡಲದಾತ ಭಗದತ್ತವರದನೆ
ಅಧಿಪತಿಗಳಧಿಪತಿಯೆ ಭೈಷ್ಮಿ ಸತ್ಯಾರಮಣ ೧೭

ಶಂಭುವಂದಿತಪಾದ ಸಾಂದೀಪೋದ್ಧವ ಪ್ರಿಯ
ಶಂಬರಾರಿಯ ಜನಕ ಯಜ್ಞಪೂಜಾಗ್ರಣಿಯೆ ೧೮

ಪಾಂಡವರ ಪ್ರಾಣ ದ್ರೌಪದಿ ಮಾನರಕ್ಷಕನೆ
ಪೌಂಡ್ರಕ ಶೃಗಾಲ ಕೌರವ ಭೂಮಿ ಭಾರಹರ ೧೯

ಅಭಿಮನ್ಯುನಾತ್ಮಜನ ಬಸುರೊಳಗೆ ಸಲಹಿದೆಯೊ
ಅಭಯದಲಿ ಪಾಂಡವರ ಸಂತತಿಯ ಬೆಳೆಸಿದೆಯೊ ೨೦

ಗರುಡ ಗಂಧರ್ವ ಕಿನ್ನರ ಗೀತ ಸಂಪ್ರೀತ
ಗರುವೆ ಲಕುಮಿಯ ಕೂಡ ಕ್ರೀಡಾದ್ರಿಯಲ್ಲಿರುವೆ ೨೧

ಶಂಖ ಚಕ್ರ ಗದಾಬ್ಜ ಶ್ರೀವತ್ಸ ಶೋಭಿತನೆ
ಸಂಖ್ಯೆರಹಿತಾಭರಣ ಭೂಷಣಾವ್ಯಾಕೃತನೆ ೨೨

ಮೀನ ಕಶ್ಯಪ ಪೋತ್ರಿ ನೃಹರಿ ವಾಮನ ಭಾರ್ಗವ
ಮಾನವಪ ಕೃಷ್ಣ ಬುದ್ಧ ಕಲ್ಕಿ ಕಪಿಲಾತ್ರೇಯ ೨೩

ಸ್ವಾಮಿ ತೀರ್ಥಾಂಬು ಅಂತರ್ಗಂಗಾಭಿಷಿಕ್ತ
ಸ್ವಾಮಿ ಭೂವರಾಹ ವೈಕುಂಠನಾಥ ವಿಶ್ವೇಶ ೨೪

ಷಟ್ಕೋಟಿ ತೀರ್ಥಯುತಚರಣ ಶ್ರೀಭೂರಮಣ
ಷಟ್ಕಮಲನಿಲಯ ಚಿನ್ಮಯ ಚಿದ್ಗುಣಾರ್ಣವನೆ ೨೫

ಭಕ್ತಾಭಿಮಾನಿ ಭವದೂರ ಭಕ್ತರ ಪ್ರಭುವೆ
ಭಕ್ತವತ್ಸಲ ಕೃಪಾಂಬುಧಿ ಪರಾತ್ಪರ ಕೃಷ್ಣ ೨೬

ವಸುಧೆ ವೈಕುಂಠ ಮಂದಿರವಾಸ ಶ್ರೀನಿವಾಸ
ವಸುಪ್ರೀತ ವಸುಕರ್ತ ವಸುದಾತ ವಸುಪೂರ್ಣ ೨೭

ಆದಿನಾಥಪ್ರಮೇಯಾದಿ ಪುರುಷೋತ್ತಮನೆ
ಆದಿಮಧ್ಯಾಂತ ರಹಿತಾದ್ಯಮೂರುತಿ ವಿಷ್ಣು ೨೮

ಬದುಕಿಪ್ಪಾದರೆ ನಿನ್ನ ಹೊಗಳಿಕೆಲಿ ಬದುಕಿಸೈ
ಬುಧರ ಸಂಗತಿ ಕೊಟ್ಟು ಮನ್ನಿಸೆನ್ನನು ತಂದೆ ೨೯

ಕಿವಿಯಲ್ಲಿ ಮುಖದಲ್ಲಿ ನಾಮಾಮೃತವ ತುಂಬು
ಕವಲಾಗದೆ ಮನೋಳಿ ಮಿಗೆ ಪದಾಬ್ಜವ ತೋರು ೩೦

ಭವಭವದಿ ತೊಳತೊಳಲಿ ಬಳಬಳಲಿ ಬಲುದಣಿದೆ
ಭವ ವಿರಿಂಚ್ಯಾದಿ ಕರಿಗಭಯದನೆ ನೀ ಸಲಹು ೩೧

ನೀ ತಾಯಿ ನೀ ತಂದೆ ನೀ ಬಂಧು ನೀ ಬಳಗ
ನೀತಿಗಳನರಿಯೆ ನಿನ್ನಯ ನಾಮವೆ ಗತಿಯು ೩೨

ತನು ನೆಚ್ಚಿಕಿಲ್ಲ ಚಿತ್ತದ ಗತಿಯು ನೀಟಿಲ್ಲ
ತನಯ ತರುಣಿ ಕೊನೆಯ ಸಂಗತಿಗೆ ಆರಿಲ್ಲ ೩೩

ದೋಷಗಳನರಸದೆನ್ನನು ಸಾಕು ಸಾಕಯ್ಯ
ದಾಸಪಾಲಕ ದೇವ ಡಿಂಗರರ ಸಂಜೀವ ೩೪

ನಿನ್ನ ಮೂರುತಿ ನೋಡಿ ನೋಡಿ ನೋಡಿ ನೋಡಿ
ನಿನ್ನ ಬಿಂಬವನೆಂದು ಕಂಡು ಕೊಂಡಾಡುವೆನೊ ೩೫

ನಿನ್ನ ಮೈ ಬೆಮರ್ಹೊಳೆಯಲ್ಲೆನ್ನ ಮುಳುಗಿಸಿ
ನಿನ್ನವ ನಾ ನಿನ್ನವರ ಕೈಲಿ ಕೊಡು ಗಡಗಡ ೩೬

ವಾರಿಯಲಿ ಸ್ಥಳದಲ್ಲಿ ಅಡವಿಲೆಲ್ಲೆಲ್ಲಿ ಕಾಯೊ
ವಾರಾಹ ವಾಮನ ನೃಸಿಂಹ ಕೇಶವ ಸ್ವಾಮಿ ೩೭

ಸತ್ಕುಲೋದ್ಭವನಾದೆ ಸನ್ಮಾರ್ಗರಿಯಲಿಲ್ಲ
ಸತ್ಕರ್ಮಗಳಿಗೆ ಬಹಿಷ್ಕೃತನಾಗಿ ಬಾಳುತಿಹೆ ೩೮

ಒಂದು ಜಾವದ ತಪ್ಪನೆಂದೆಂದಿಗುಣಲಾರೆ
ವಂದಿಸುವೆ ಸಾಷ್ಟಾಂಗ ತ್ರಾಹಿ ತ್ರಾಹಿ ಪಾಹಿ ತ್ರಾಹಿ ೩೯

ಮಧ್ವೇಶ ಮಧ್ವಪ್ರಿಯ ಮಧ್ವಮತ ಪ್ರತಿಪಾಲ
ಮಧ್ವಗುರು ಸ್ತುತ್ಯ ಮಧ್ವಾರ್ಚಿತ ಪದಾಬ್ಜ ಹರಿ ೪೦

ಏನರಿಯೆನೇನರಿಯೆ ನೀನೆ ನೀಗೆಲೆಲೆ
ಎನ್ನಘವ್ರಜ ಪ್ರಸನ್ನವೆಂಕಟ ಕೃಷ್ಣ ೪೧

೯೮

ನಿನ್ನ ಮಹಿಮೆಗಳೆಲ್ಲ ನೀನೆ ಬಲ್ಲೆಯ್ಯ ವರದ
ಚಿನ್ಮಯ ಗರುಡಗಿರಿಯ ಮಾನ್ಯ ತಿಮ್ಮಯ್ಯ ಪ.

ನಿಜರಾಣಿಗಂಘ್ರಿನಖನಿಜವು ತಿಳಿಯದ ಮಹಿಮೆ
ವ್ರಜದಿ ವದನದಿ ತಾಯ್ಗೆ ತ್ರಿಜಗ ತೋರಿದ ಮಹಿಮೆ
ಅಜ ಫಣಿಗಳುಗ್ಘಡಿಪ ಮಹಿಮೆ ಮಂದ
ಅಜಮಿಳ ಬೆದರ್‍ಯೊದರೆ ಭಜಕನಾದ ಮಹಿಮೆ ೧

ನಿಲ್ಲದಾ ಮುನಿಮನದಿ ಚೆಲ್ವ ಚರಣದ ಮಹಿಮೆ
ಬಲ್ವಿಂದ ಉಂಗುಟದಿ ತಳ್ವೆಂಗದ ಮಹಿಮೆ
ದುರ್ಲಭ ಮಮರಿಗೆ ನೋಟ ಮಹಿಮೆ ಆ
ಗೊಲ್ವೆಂಗಳೇರ ನೋಡಿ ಭುಲ್ಲೈಪ ಮಹಿಮೆ ೨

ವೈಕುಂಠ ಮಂದಿರದಿ ಮುಕುತರೊಂದಿತ ಮಹಿಮೆ
ಗೋಕುಲದಿ ಗೊಲ್ಲರೊಳು ಆಕಳ ಕಾಯುವ ಮಹಿಮೆ ಅ
ನೇಕಜಾಂಡದಿ ಪೂರ್ಣ ಮಹಿಮೆ ಪ್ರಸ
ನ್ವೆಂಕಟಾದ್ರಿಯ ಮೇಲೆ ಏಕೈಕ ಮಹಿಮೆ ೩

೯೯

ನೀ ಎನ್ನ ಸಲಹೋ ದಾತ ಶ್ರೀನಾಥ ಪ.

ಅಣುರೇಣು ತೃಣ ವ್ಯಾಪ್ತ ಅಕಳಂಕ ನಿರ್ಲಿಪ್ತ
ವನರುಹಾಸನ ಪ್ರೀತ ವೈಕುಂಠ ಕರ್ತ ೧

ತಾಪಸಜನ ಪೂಜ್ಯ ತರಣಿಕೋಟಿ ತೇಜ
ಶ್ರೀಪರಮೋತ್ತಮ ಸಕಲಾಂತರಾತ್ಮ ೨

ಬ್ರಹ್ಮಾಂಡಸಂರಕ್ಷ ಭಾಗವತರ ಪಕ್ಷ
ಹಮ್ಮಿನ ಖಳರೊದ್ದ ಹರಿ ಅನಿರುದ್ಧ ೩

ಸ್ವರ್ಣಮುಖರೀ ತೀರ ಸನ್ನಿಧಿ ಮಂದಿರ
ಪೂರ್ಣಮಹಿಮ ವಟಪರ್ಣಾಶ್ರಯ ಕೃಷ್ಣ ೪

ಸ್ವಾಮಿ ಪುಷ್ಕರವಾಸ ಶುಭ ಮಂದಸ್ಮಿತಹಾಸ
ಪ್ರೇಮಾಬ್ಧಿ ಅಹರ್ನಿಶಿ ಪ್ರಸನ್ವೆಂಕಟೇಶ ೫

೧೦೦

ಪಾಲಯ ಸೀತಾರಾಮ ಭೌಮ ಪ.

ದಶರಥನಂದನ ದಶಮುಖಭಂಜನ ತ್ರಿ
ದಶಭಯಶಮನ ಸುಸ್ಮಿತವದನ ೧

ವಾತಜನುತ ಪಾತಕಹರ ವಿಧಿತಾತ ಮು
ನೀತಪದ ಭೂತಪವರದ ೨

ಇನಕುಲರಕ್ಷ ದೀನಜನರಕ್ಷ
ಮುನಿಜನತೋಷ ಪ್ರಸನ್ವೆಂಕಟೇಶ ೩

೧೦೧

ಪಾಲಯಾಲ್ಮೇಲಮಂಗಪ್ರಿಯ ಪರಮಗೇಹ ಖಳ
ಜಾಲ ಕೋಲಾಹಲಗೋಕುಲ ಗೋಪಾಲ
ಬಾಲಲೀಲಾಲೋಲ ಲೋಲ ಚೆನ್ನ ಪ.

ಆದಿಪೋತ್ರಾವತಾರ ಅಮಿತ ಸುಗುಣೋದಾರ
ಭೂಧರ ಭೂಪವೈರಿ ಭ್ರಾತ ಶೌರಿ
ಕುದಶಾಸ್ಯವಿದಾರ ದಯೋದಧಿ ಶ್ರೀ
ಪಾದಾರಾಧಕಾಧಾರಮರ ಪಾದಪಾಧಿಪಾಧಿಪ ೧

ಆನತಘ ವಿದಾರ ಅಂಬುಧರಸುಂದರ
ಏಣಾಂಕರವಿಕಾಶ ಯದುಕುಲೇಶ
ವನಜನಯನ ಮಾಮನೋಹರ ಮುನಿಧ್ಯಾನ
ಮೌನಗಾನ ಲೀನ ಮಾನುಷಮೃಗ ನಮೋ ೨

ಪನ್ನಗರಾರಾತಿಗಮ್ಯ ಪಾರಾವಾರ ಮಹಿಮ
ಘನ್ನಜೀವಾತಿದೂರ ಗೋಸಂಗೋಚರ
ಮನ್ಮಥ ಗಣ್ಯಲಾವಣ್ಯ ಕಾರುಣ್ಯಧಿ ಸ್ವರ್ಣವರ್ಣ
ಚಿನ್ಮಯ ಪ್ರಸನ್ನವೆಂಕಟೇಶ ಮಾಂ ೩

೧೦೨

ಪಾಲಿಸಂಬುಧಿಶಾಯಿ ವ್ಯಾಳಕಶಿಪುಶಾಯಿ
ಪಾಲಿಸು ವಾರಿಧಿಕೂಲದಿ ದರ್ಭಶಾಯಿ ಮೂಲ ವಟಪತ್ರಶಾಯಿ ಪ.

ವೇದೋದ್ಧಾರ ದಯಾಳು ಭೂಧರಧರ ದಯಾಳು
ಮೇದಿನಿ ಅಂತರ್ಮಾಲಾದಂಡ ಶುಭ ಕುಠಾರಧಾರಿಯೆ ದಯಾಳು
ಕೋದಂಡಧರ ದಯಾಳು ಸ್ವಾದ ವೇಣುಧರ ದಯಾಳು ಸ
ಮಾಧಿ ವ್ರತಧರ ಧರ್ಮಾಧರ ವಿಶ್ವಾಧರ ಮಾಧವ ನಿತ್ಯದಯಾಳು ೧

ಪಂಚಜನನ ವೈರಿ ವಂಚಕಾಸುರ ವೈರಿ
ಕಾಂಚನನೇತ್ರಕ ಯದುಪತಿ ಬಲಿಮದಚಂಚಲ ಖಳವೈರಿ
ಪಂಚದ್ವಯಾಸ್ಯನ ವೈರಿ ಪಂಚಪಾರ್ಥಾರಿತ ವೈರಿ
ಪಂಚಬಾಣಾರಿವೈರಿ ಪಂಚಪಾತಕವೈರಿ ಸಂಚಿತಘಕೆ ವೈರಿ ೨

ಸರನಿಕೇತನಿವಾಸ ಗಿರಿತಳ ಸನ್ನಿವಾಸ ವರಸ್ವಾಮಿಪುಷ್ಕರ
ಸಿರಿ ಅಹೋಬಲ ನೃಪಾಗರ ತ್ರಿಜಗನಿವಾಸ
ಸರಯೂತೀರ ನಿವಾಸ ಶರಧಿಮಂದಿರವಾಸ
ಸುರವಿರೋಧಿಸದನ ಪರಮ ಶಂಬಲವಾಸ ಪರಸನ್ನವೆಂಕಟವಾಸ ೩

೧೦೩

ಪಾಲಿಸೆನ್ನ ಮಂದಬಾಲಿಶನ್ನ
ಪಾಲಗಡಲೊಡೆಯ ಸಿರಿಲೋಲ ಪ.

ಅಂಬುರುಹ ಸಂಭವ ತ್ರಿಯಂಬಕ ಶೇಷಾಂಬರಗ
ದಂಭೋಳಿಸಂಭೃತನುತಾಂಘ್ರಿ ೧

ಅಷ್ಟಕೃತ್ಯ ಅಷ್ಟವಿಭವ ಅಷ್ಟ ಭೋಗ್ಯಥೇಷ್ಟ ಶಕ್ತ
ಅಷ್ಟಹರಿತ ಶ್ರೇಷ್ಠವರ್ಯ ಶ್ರೇಷ್ಠ ೨

ದ್ಯುಗ ಶಶಿಭಾಯುಗನಯನ ಜಗಜಠರಘಹರಾಹಿ
ನಗನಿಲಯ ಜಘನಕಟಿಪಾಣಿ ೩

ಕಿರೀಟ ಕುಂಡಲರಿದರ ಕೇಯೂರ ಕೌಸ್ತುಭ ಸಿರಿವತ್ಸ
ವರಾಂಬರ ಮನೋಹರ ಮೇಖಲಧಾರಿ ೪

ದ್ರೌಪದಿ ಮುನಿವಧು ಬಾಲಧ್ರುವ ಪ್ರಹ್ಲಾದ ವಿಭೀಷಣೋ
ದ್ಧವಾಕ್ರೂರ ಮುಖ್ಯವಮಾನಹಾರಿ ೫

ಋಗ್ಯಜು ಸಾಮ ನಿಗಮಧರವಗೋಚರ ಮುನಿಗಣ ಸುಮ
ನಗೇಹನಂತ ಸುಗುಣಾನಂದ ಪೂರ್ಣ ೬

ಮಧು ಕೈಟಭ ಮದನೇಮಿ ಜಲಂಧರ ಕಂಬು ಸದನ ಖಳಾ
ಬುಧಿ ಕುಲಾಂತಕ ದ್ವಿಜೋಪಕಾರಿ ೭

ಋಷಿ ಹನುಮ ರಸಗಾಯನ ತೋಷಭರಿತ ಹಾಸ ವದನ
ಪ್ರಸನ್ನ ವೆಂಕಟೇಶ ನಮೋ ಸ್ವಾಮಿ ೮ *

೧೦೪

ಪಾಲಿಸೊ ಪಾಲನ ಶೀಲ ಶ್ರೀಲೋಲ
ಪಾಲಿಸೊ ಪಾಲನಶೀಲ ಪ.

ಈಶ ಪರೇಶ ನಿರ್ದೋಷ ಸ್ಮಿತಹಾಸ ನಿ
ರಾಶ ಅಘನಾಶ ಘನಶಾಮೆನ್ನಾಶ ೧

* ಸಾಮಾನ್ಯವಾಗಿ ಕೀರ್ತನೆಗಳಲ್ಲಿ ನುಡಿಗಳು ಬೆಸ ಸಂಖ್ಯೆಯಲ್ಲಿರುತ್ತವೆ. ಇಲ್ಲಿ ಒಂದು ನುಡಿ ಬಿಟ್ಟು ಹೋಗಿರುವ ಸಾಧ್ಯತೆ ಇದೆ.

ಕತ್ತಲೆವಿರಿ ಸಂಪಿಗೆ ಕಮಲ ಮೊಲ್ಲೆ ಮಲ್ಲಿಗೆ
ಸುತ್ತಿದ ಎಳೆಪಲ್ಲವ ಮಾರನಂತಹ ಚೆಲುವ ೫

ಮುತ್ತಿನ ಚೊಲ್ಲೆಯಲ್ಲಿಯ ಮುಂಗುರುಳಲ್ಲಿ ವಲಯ
ಕಸ್ತೂರಿ ತಿಲಕ ಒಪ್ಪೆ ಕವಿದಡರ್ವದ್ವಿರೇಫೆ ೬

ಕಡೆಗಣ್ಣಿನ ನೋಟದಿ ಕುಡಿಹುಬ್ಬಿನ ಮಾಟದಿ
ಮಡದೇರ್ಗೆ ಮಾರಶರ ಮೂಡಿಸುತತಿ ಸುಂದರ ೭

ಮುಗುಳುನಗೆಮೊಗದ ಮಣಿಕುಂಡಲ ಕರ್ಣದ
ಯುಗ ಕರ್ಣಾಕರ್ಣಿಕರಾಯತ ನಟ ನರಾಕಾರ ೮

ಹವನಮಾಲೆ ವೈಜಯಂತಿ ಶ್ರೀ ವತ್ಸ ಕೌಸ್ತುಭ ಕಾಂತಿ
ಮಿನುಗುವಾಮೋದ ಗಂಧಮುಡಿ ತೋರೋ ಶ್ರೀ ಗೋವಿಂದ ೯

ಹಾರಕೇಯೂರ ಕಂಕಣ ಹೊಳೆವ ಮಧ್ಯ ಒಡ್ಯಾಣ
ಚಾರು ಪೀತಾಂಬರೋತ್ತರಿ ಚೀರದಿಂದೆಸೆವ ಹರಿ ೧೦

ವಾಮಬಾಹುವಿಲೊಪ್ಪುವ ವೇಣುವಿನ ಘನರವ
ಬ್ರಹ್ಮ ಗಂಧರ್ವರ ಗಾನ ಬಗೆಗೆ ಮೀರುವ ದೇವ ೧೧

ಸುಲಲಿತಂದುಗೆ ಗೆಜ್ಜೆ ಸಂದ್ರೇಖೆ ಶೋಭಿತಹೆಜ್ಜೆ
ಕೆಲದ ಗೋಪಾಂಗನೇರ ಕಾಮಧೇನು ಸಾರೋತ್ತರ ೧೨

ಧರೆಗೆರಗಿದ ಜಡೆ ಸಲೆ ಕಾಳಿಂದಿ ಮೇಲಾಡೆ ಸಕಳ ಪಕ್ಷಿ
ಮೃಗವು ಸಂಚರಿಸದೆ ನಿಂದವು ೧೩

ಜಡಂಗಳು ಚೇತರಿಸೆ ಜನದ ಚೇಷ್ಟೆ ಥಂಬಿಸೆ
ಕಡುರಸ ತುಂಬಿ ತುಳುಕಲಜಭವಾಂಡೊಲಿಯಲು ೧೪

ವೃಕ್ಷಗಳ ಶೃಂಗಾರಿಯ ವತ್ಸಗಳಾವದೊರೆಯ
ಈಕ್ಷಿಸಿ ತೃಣ ಮೆಲ್ಲದೆಯಿದ್ದವು ಗೀತಕೇಳುತ ೧೫

ವರ್ಣ ನಿಗಮಾಗಮ ಅತರ್ಕ್ಯಾನಂತ ಸದ್ಗುಣ ಧೇ
ನಿರ್ಣಯಾತೀತಾನಿರುದ್ದ ಸು
ಖಾರ್ಣವಾಚ್ಯುತ ಸೌಖ್ಯಕರ ನವ
ಕೀರ್ಣ ವಿಗ್ರಹ ಪದ್ಮನಾಭ ಉದಾರಲೀಲ ನಮೋ ೧೦

ಮೋಕ್ಷವಲ್ಲಭ ಭವಮಲಘ್ನ ಮು
ಮುಕ್ಷುವರದ ಮುನೀಂದ್ರ ಸುಮನೋ
ಧ್ಯಕ್ಷ ದಾಮೋದರ ದಯಾಪರ ಜಿತದಿತಿಜ ಸಮರ
ಭಿಕ್ಷುಕಾನ್ವಯಪ್ರಿಯ ಸಮಾಧಿಕ
ಪಕ್ಷ ಸೃಷ್ಟ್ಯಾದ್ಯಷ್ಟ ಕಾರಣ
ದಕ್ಷಾಧ್ವರಹರ ಬ್ರಹ್ಮ ನಿವಹಾದ್ಭಿನ್ನರೂಪ ನಮೋ ೧೧

ಕಂಠ ಕೌಸ್ತುಭ ಭೂಷಣಾಂಶಾ
ಕುಂಠಿತಾತ್ಮೈಶ್ವರ್ಯ ಅಶುಭವಿ
ಲುಂಠಕಾಧೋಕ್ಷಜ ಉಪೇಂದ್ರನೆ ಶ್ರೀಶ ಅನಿರುದ್ಧ
ಕುಂಠಿತ ಜನನ ಮರಣ ಶಿರಿ ವೈ
ಕುಂಠಪಾಬ್ಜಾಮ್ಲಾನ ತುಲಸೀ
ಕಂಠಮಾಲಾನ್ವಿತ ಸುಗಂಧ ಜ್ಞಾನಕೋಶ ನಮೋ ೧೨

ನಿರ್ಜರೇಷ್ಟದ ನೀತಫಲದನೆ
ದುರ್ಜನಾರ್ದಕ ದೂಷಣಾಂತಕ
ನಿರ್ಜಿತಾಖಿಳ ಸುಜನಪಾಲಕ ನಿಶಾಚರೌಘಹರ
ವರ್ಜಿತ ಕಲುಷ ನಿತ್ಯ ವಿಬುಧರ
ಊರ್ಜಿತರ ಚಾರಿತ್ರವಿಮಲ ಗು
ಣಾರ್ಜಿತೋದಧಿ ವಿಪದದ್ವಜ ವೈರಾಗ್ಯ ಪುರುಷ ನಮೋ ೧೩

ಅಪುಶಯನ ಆದ್ಯಾಪ್ತ ಇಷ್ಟಜ
ನ ಪರಗತಿಪ್ರದ ಈಶ ವರನುತ
ಉಪಮವಿರಹಿತ ಊರ್ಧ್ವಗಪ್ರಿಯ ಋಜು ಭೃನ್ರೂಪಧರ

ಲುಪತ ದುಷ್ಕೃತ ಲೋಕ ಮೋದಕ
ಚಪಲ ಏಕಾನೇಕ ವಿಗ್ರಹ
ಸ್ವಪರ ಐಶ್ವರ್ಯೋಜ ಔದಾರ್ಯ ಸಹಸ್ರ ನಮೋ ೧೪

ಕರುಣನಿಧಿ ಖಳಹರ ಗರಾದಪ
ಘರಘರಧಿ ಸಮ್ಯಜ್ಞಾಮಕ ಸು
ಚರಿತ ಪ್ರಾಕೃತ ಛವಿರಹಿತ ಜನಪಾಲ ಝಷ ಋಷಭಾ
ಞರು ಜಗತ್ಪರ್ಯಟನ ಕಮಠ ಡ
ಮರ ಧರೇಢ್ಯನೆ ಗೂಡ ಗುಣಚಿತ್
ಪರ ಕುಧರಧಿಕೋಚ್ಚರ ಜಾರಗ ಧನುಹನ್ ಧನದ ನಮೋ ೧೫

ನರಸಖಾಮಿತ ಪಶುಪ ಫಣಿಮದ
ಹರ ಬಲಾನುಜಭರಿತ ವಿಕ್ರಮ
ಮರುತ ಕಾಂಗಯರುಘ್ನ ನೆರಲೇಶ್ವಶುರ ಲಕ್ಷ್ಮೀಶಾ
ವರದರಾಟ್ ಶಶಿವದನ ಷಕ್ಯಸ
ನಿರುತ ಸರ್ವಭುಕ್ ಯಜ್ಞ ಹವ್ಯೇ
ಶ್ವರ ಸ್ವತೃಪ್ತ ಸ್ವಪೂರ್ಣಲಕ್ಷ್ಮೀಧರ ಯಜ್ಞಾಂಗ ನಮೋ ೧೬

ಕಪಟನಾಟ್ಯಕ ಕಾಲ ಕಿತವ ಭ
ಯಪರಿಹರ ಕೀಚಕರಿಪುಪ್ರಿಯ
ಕುಪುರುಷಾಂತಕ ಕೂಬಕೇಶನೆ ಕೈವಲ್ಯಕೀಶ
ವಿಪುಲಕೋಶನೆ ಕೌಶಿಕಮುನಿ ಮ
ಖ ಪರಿಪೋಷಕ ಕಂಬುಕಂಧರ
ತಪನ ಕೋಟಿಪ್ರಕಾಶ ಕಶ್ಯಪಸುತ ಸುರೇಂದ್ರ ನಮೋ ೧೭

ಖರವಿದಾರಕ ಖಾದಿ ಪಂಚಕ
ಭರಿತನಖಿಳ ವ್ರಜಸಖೀಮನೋ
ಹರ ಸುಖಿರಪುಟ ಶೋಭಿತ ಖಡ್ಗ ಖೂರ್ಚ್ಚ ಇಷುಪಾಣಿ
ಸುರಸಖೇಳನ ಪರಸುಖೈಕ ಪ

ರಿರ ವಿಶಿಷ್ಟ ಸುಖೋದಯಾಂಕುರ
ವರ ಸುಖೌಘಾಖಂಡಪರಶೋ ದುಃಖಹರಣ ನಮೋ ೧೮

ಗಗನನಾಭಾಗಾಧ ಚರಿತ ಗಿ
ರಿಗಣಸೇವ್ಯ ಸುಗೀತಪ್ರಿಯ ಗು
ಪ್ತಗುಣ ಗೂಢಧಿ ಗೇಹ್ಯತ್ರಯಯುತ ಗೈದಿಹನೆ ಗೋಪ್ತಾ
ಸ್ವಗತ ಗೌರವ ಗಂವ್ಹರಾಂಕಿತ
ಸುಗಃನೋತ್ತರ ಶುಭಸುಖಾಕರ
ಸುಗಮ ಸೂಕ್ಷ್ಮ ಸುದುರ್ಗಮಾಲಯ ವಿಜಿತರೋಷ ನಮೋ ೧೯

ಘಟಶ್ರವಣ ಘಾತಕ ಲಘಿಮಯುಕ್
ಚಟುಲಗಾತ್ರಾ ಘೀಜನ ಹರಣ
ಪಟು ರಘುದ್ವಹ ಪಿಶಿತಭೋಜಕ ಘೂಕ ಖದ್ಯೋತ
ಕಠಿಣ ಘೇರಟ ಮಾನ ಖಳ ಸಂ
ಕಟ ನಿವಾರಕ ಘೋರ ಯೋಧಕ
ನಟಕಾಘೌಘ ವಿದಾರ ಘಂಟಾಚಾಪ ದೀರ್ಘ ನಮೋ ೨೦

ಚಕ್ಷುಷಾಲಯ ಚಾರುಗುಣಚಿತ್
ಕುಕ್ಷಿ ಚೀರದ್ವಯ ಚುತೇತರ
ರಕ್ಷ ಚೂಡಾಚೇಷ್ಟ ಚೈದ್ಯಹರಾದ್ಯ ಚೋರಾರೇ
ರಿಕ್ಷಜಾತಾವರ ಚೌರಾಶಿತಿ
ಲಕ್ಷ ಪ್ರತಿಮಾದ್ಯಕ್ಷ ಚಂದನ
ವಕ್ಷ ವನಸ್ರಗ್ಧರ ಖುಚಃಸ್ವನ ಪ್ರೀಯಪುರುಷ ನಮೋ ೨೧

ಛತ್ರಯುಕ್ ಛಾಯಘ್ನ ಛಿದ್ವರ
ಕ್ಷುತ್ತೃಷಾರ್ದಕ ಛೇದವರ್ಜಿತ
* * * ಸ್ವೇಚ್ಛೈಕಚರ ಇಚ್ಛೋದ್ರೇಕ ಮಾಂದ್ಯಹರ
ಶತ್ರುಭಿತ್ಸಚ್ಛೌರ್ಯ ಭೂಷಿತ
ಸತ್ರಭುಕ ಛಂದೋಮಯಾತ್ಮಕ
ಪುತ್ರ ಪೌತ್ರ ಪ್ರಪೌತ್ರ ಶೋಭಿತ ಸ್ವಚ್ಛಃ ವರ್ಣ ನಮೋ ೨೨

ಜಯತರಾನನ ಜಾಡ್ಯಹರಜಿತ
ಭಯನಿಚಯ ಜೀವೌಘರಕ್ಷಯ
ಜುರ್ಯಜಾಸುರ ಜೂಕನುತ ಸುರಜೇಷ್ಠ ಜೈನಧಿಹನ್
ಲಯ ಜಲಾಶ್ರಯ ಜೋತಿರ್ಮಯ ತನು
ವ್ಯಯ ವ್ರಜೌಕಸ ವಂದ್ಯ ಜಂಬುನಿ
ಲಯ ಕುವಲಯನಯನ ಅಜಸ್ರಾನಂದ ಬಲಗ ನಮೋ ೨೩

ಝಡಿತಿಚರ ಝಂಝಾಮರುಚ್ಚರ
ಝಡುಪಚರ ಝಿಲ್ಲಿಕ ವನೇಚರ
ಜಡಧಿಚರ ಝೀರಿತ ಸುರ ಝುಂಟಾವಲಯ ಝೂಣಿಚರ (?)
ಒಡನೆ ಝೇಂಕರಿಸುತಲಿ ಝೈಡಿಯು
ದೃಢದಿ ಝೋಂಡಿಯೋಳ್ಚರಿಸಿ ಝೌಂಕರಿ
ಸ್ಯೊಡಲಿನೊಳು ಝಂಕಾರಪೂರ್ಣನೆ ಝಷಪತಿಯೆ ನಮೋ ೨೪

ಪಟಲಹೈಮ ಕಟಾಹ ಭಂಜಕ
ನಿಟಿಲ ದೃಕ್ ಟೀಕಾರ್ಥಸುಪ್ರಿಯ
ಕಟುಮತಿಘ್ನ ಭವೇಡ್ಯಾ ಟಂಕಾನ್ವಿತ ಕರಾಬ್ಜೇಕಾ
ಜಠರ ಜಡಹ ಕುಠಾರಧರಸತ್
ಕಠಿಣಕರ ಸುಕಠೋರ ಯೋಧ ಕ
ಮಠವಿಕಾರ ಶಠೌಘಸಂಹರ ನೃಹರೆ ಭೃಗುಜ ನಮೋ ೨೫

ಕುಂಡಲೀಶ ಷಡಾಸ್ಯ ಸನ್ನುತ
ಪಂಡಿತಾರ್ಚಿತ ಪಾಂಡುರಾಂಬರ
ಮಂಡಲೇಶ ಬಿಡೌಜನುತ ನೃವಿಡಂಬನ ಚರಿತ್ರ
ಪಂಢರಾಪುರ ರಾಜವಿಠಲಾ
ಖಂಡಮತಿ ಪಾಖಂಡ ದೂಷಕ
ಖಂಡಮರಕ ಪ್ರಭುಘ್ನಮುನಿ ಪುಂಡರೀಕವರದ ನಮೋ ೨೬

ಪ್ರಣತಪ್ರಿಯ ಪ್ರಣಾಯ್ಯಪ್ರಿಯ ವಿಪ
ಫಣಿಪಪ್ರಿಯ ವಾಣೀಧವಪ್ರಿಯ

ಅಣುಮಹದ್ರೇಣೂಸ್ಥಪ್ರಿಯ ಸುಗಣೇಶ ಪ್ರಿಯಕರನೇ
ಕ್ಷಣ ಕ್ಷಣೈಕ್ಯ ಸುವ್ಯಕ್ತಧಾರಣ
ಗುಣಗಣೋತ್ಪಾಟಣ ರಣೌಘಾಂ
ಗಣ ಭಯೋಚ್ಚಾಟಣ ಗುಣಾಂಕ ಶರಣ್ಯಸುಖದ ನಮೋ ೨೭

ತಥ್ಯವ್ರತ ಸತ್ತಾತ್ವಿಕಾಗಮ
ಕಥ್ಯ ತಿಲಮಾತ್ರಾರ್ಪಕೇಷ್ಟದ
ಮಿಥ್ಯದೂಷಕ ತೀರ್ಥಶ್ರವ ತುರ್ಯಾತ್ಮಾತೂರ್ಣಪ್ರಿಯ
ನಿತ್ಯತೇಜಸ ತೈತ್ತಿರಿಯ ಶ್ರುತಿ
ಸ್ತುತ್ಯ ತೋಯಾಯನ ಧೃತೌಷಧ
ಪಥ್ಯ ತಾಂತ್ರಿಕ ಪರಮ ಚೇತಃಪರಮಕಾಲ ನಮೋ ೨೮

ಪ್ರಥಮಪುರುಷ ಪೃಥಾತ್ಮಜಾನ್ವಗ
ಮಥಿತವೀರ್ಯ ರಥೀಂದ್ರ ಪರಿಚರ
ಪೃಥಿವಿ ಪೂಜಿತ ಸ್ಥೂಲಕೃತ್ಯಥೇಷ್ಟ ಸ್ಥೈರ್ಯಮತೇ
ಪಥಿಕಸದನ ಯಥೋಕ್ತ ಫಲದ ವಿ
ಪಥರಥೌಘಪ ಸುರಥಚರಣ ಕು
ಪಥಗ ದೂರಕ ಬ್ರಹ್ಮಸ್ತಂಭಾಂತಸ್ಥ ಸ್ವಸ್ಥಃ ನಮೋ ೨೯

ದಹರ ವ್ಯೋಮಗ ದಾತೃ ದಾಂತ ಹೃದ್
ಗುಹಸದನ ಕರ್ತ ತುಹಿನಬಿಂಬಗ
ಅಹಿಪದೀಪ್ತ ಮಯೂಖ ದುರ್ಗಾವ್ಯಾಕೃತಾಂಬರಗಾ
ಅಹಿತದೂಷಕ ದೇವ ದೈತ್ಯರ
ದೋಹನ ಕಾರ್ಯಗ ದೌತ್ಯಕರ್ಮಗ
ದ್ರುಹಿಣದೇಹ್ಯಗ ದಂಡಕಾರಕ ದರ್ಪಕಸಹ ನಮೋ ೩೦

ಧರ್ಮನಿಚಯಪ ಧಾತು ಸಮುಹಪ
ಕರ್ಮಧಿಷಣಪ ಧೀರಪ್ರಜ್ಞಪ
ನರ್ಮವಾಗ್ಮಿಪ ಧುನಿಕದಂಬಪ ಧೂರ್ಜಟಾಂಕಿತಪ

ಚರ್ಮಖಡ್ಗಪ ಧೇನು ವಿಪ್ರಪ
ಮರ್ಮ ಧೈರ್ಯಾಂಕಿತನಧೋಕ್ಷಜ
ನಿರ್ಮಲಾತ್ಮಕ ಧೌಮ್ಯಗರ್ಗಪ ಧನ್ಯಧನಪ ನಮೋ ೩೧

ನಗವಿಧೃತಕರ ನಾಗಗರ್ವಹ
ನ್ನಿಗಮರಿಪುನಾಶಕ ನೀತಪ್ರಭು
ಸುಗುಣಸೇವ್ಯ ನುತಜನಮಂದಾರ ನೂತನಾಬ್ಜಾಂಘ್ರೀ
ಯುಗ ಯುಗಾಂತಕ ನೇಮನೈಷ್ಠಿಕ
ಸುಗುಣನೋದಧಿ ನೌಗ ನಂದಕ
ವಿಗತ ಸ್ನೇಹವಿನಷ್ಟ ಜಗದೋದ್ಧರಣಶೀಲ ನಮೋ ೩೨

ಪವನ ಮತಿ ಪರಿಪಾಕ ಬಿಂಬ
ಸ್ತವನನಿರತ ಪಿನಾಕಿಮೋಹನ
ಸುವಧು ಪೀಯೂಷಧರ ಪುಷ್ಪವಿಹಾಸ ಪೂರ್ಣಪ್ರಭಾ
ಕವಿ ವರದ ಪೇಶಲ ಜಟಿಲ ಪೈ
ಲವಿನುತ ಶುಕವಿಪೋಷ ಪೌರಾ
ಣವಿರಚಕ ಪಂಚನಿಶಿ ಭಾರತ ಸೂತ್ರಕರ್ತ ನಮೋ ೩೩

ಫಲಿತ ಸದ್ರಸ ಫಾಲಲೇಖಕ
ಲಲಿತ ಸ್ಫೀತಾತ್ಮಕ ಸ್ಫುಟಫಭೃ
ಜ್ವಲ ಮರುತ ಪಯಫೇನ ಭುಕ್ಷತ ಸ್ಫೋಟಾತಂಕಹಾ
ಬಲಬಲದ ಬಾಣಘ್ನ ಬಿಲಗಿರಿ
ನಿಲಯ ಮುನಿ ಹೃನ್ನಿಲಯ ಬುಧ ಮಂ
ಡಲ ವಿರಾಜಿತ ಬೋಧಯುತಕರ ಬಂಧಮೋಕ್ಷ ನಮೋ ೩೪

ಭದ್ರಪದ ಭಾವಕ ಭಿಷಗ್ವರ
ರುದ್ರಭೀಕರ ಭುಕ್ತಿದಾ ದಾ
ರಿದ್ರ್ಯದೂರಕ ಭೂರಿಭೂತಿದ ಭೇದವಾದೀಶಾ
ಹೃದ್ರುಜಹನ್ ಭೈಷ್ಮೀಶ ಭೋಜೇ

ಶಾದ್ರಿ ಕುಲಿಶ ಕುಶಸ್ಥಳೋಕ ಸು
ಪದ್ರವಾರ್ದಕ ಭೌಮವರಪ್ರದ ಭಂಗರಹಿತ ನಮೋ ೩೫

ಮಕರಧ್ವಜಜಿತ ಮಾಸಖಾಮಿತ
ಭುಕುಲಜೀವನ ಮೀನ ಮುರಲಿಧ
ರಕರ ಮೂಲಕವೀಂದ್ರ ಮೇಧ್ಯಚರಿತ್ರ ಮೈಥುಳಪಾ
ಸುಕರ ಮೋಹಕ ಮೌನಿಪೂಜಕ
ಚಕಿತಕರ ದನುಜೇಂದ್ರ ಕಷಣಾಂ
ಬಕ ಬಕಾಂತಕ ಮಂಜುಹಾಸ ಮಹಾಧಿರಾಜ ನಮೋ ೩೬

ಯಜ್ಞ ಭಿಕ್ಷುಕ ಯಾಜ್ಞರತ ಯಿಂ
ದ್ರಾಜ್ಞ ದೂಷಕ ಯೀಷಣಾರ್ದಕ
ಸುಜ್ಞರಾಡ್ಯುಗ ಯೂಗಸಂಭವ ಯೂಥಪೋತ್ತಂಸ
ಅಜ್ಞಭಿದ್ಯೇಕೇಶ ಮೌನಿಗ
ಣಜ್ಞ ಯೌವನ ಪುಂಸಯಂತ್ರಾ
ರ್ಥಜ್ಞ ಪೋಷಕ ಕಿಂಕರೋಧೃತ ಕಾಮುಕಾಷ್ಟ ನಮೋ ೩೭

ರಸಿಕರಾಜಪ ರಾಜ್ಯಚಕ್ರಪ
ವಸುಪ ವೃಕ್ಷಪ ಕುಲಪರೀಕ್ಷಿಪ
ಪ್ರಸರಪಾಂಥಪ ರುಚಿಗುಣೌಘಪ ರೂಪ ಬಹುರೂಪಾ
ಅಸುಪ ರೇತೋದ್ಭವಪ ರೈಗಪ
ರಸಪ ರೋಷಪ ರೌಪ್ಯನಗಪಪ
ಕುಸುಮಬಾಣಪ ರಂಗಕ್ಷೇತ್ರಪ ರಹಸ್ಯಪಾಲ ನಮೋ ೩೮

ಲವಜನಕ ಲಾಘವ ಕರಾಬ್ಜ ಲಿ
ಪ್ತವಿಮಲ ಶ್ರೀ ಚಂದನಾಂಗ ಸು
ಕವಿ ನಚರಲುಬ್ಧ ವಧು ಪೂಜ್ಯನುಲೂಖ ಲೋಧಕನೇ
ಭವ ಜಪಾಕ್ಷರ ಲೇಶ ಮೋಹ ಮ
ದವಿರಹಿತ ಲೋಭಘ್ನ ಲೌಕಿಕ
ಪ್ರವಹೇತರ ಲಂಕೌಕಸಾರ್ದಕ ಲಬ್ಧ ತುಷ್ಟ ನಮೋ ೩೯

ವಕ್ತ್ರವರ ವಾಲ್ಮೀಕಿ ಕೃತೀಶ ವಿ
ವಿಕ್ತಮತಿ ಪದವೀಶಗತಿದನೆ
ವ್ಯಕ್ತ ಸುಚರಿತ ಊರ್ಧ್ವಪಟ ಪ್ರಸ್ಥಾಪ ವೇದ್ಯ ನಮೋ
ರಿಕ್ತಭಯ ವೈದೇಹಿ ಮನೋಹರ
ತ್ಯಕ್ತ ಪ್ರಾಕೃತ ವೋಂ ವೌಷಡಾ
ದ್ಯುಕ್ತಿವಾಚಕ ವಂದ್ಯವಂದಿತ ವಹಕ ವಾಹಕ ನಮೋ ೪೦

ಶಮಯುತಾಗ್ರಣಿ ಶಾಮಶಿವಕರ
ಗಮನ ಶೀಘ್ರಗ ಶುದ್ಧ ವಿದ್ಯೋ
ದ್ಯಮ ಶುಚಿವ್ರತ ಶೂರ್ಪನಖಿ ಮದಹರ್ತ ಶೇಷಸಹ
ಯಮ ದಯಾಂಬುಧೆ ಶೈಲಗ್ರಹ ಸಂ
ಯಮಿ ಗಣಾರ್ಥಿತ ಶೋಕತಾಪ ಪ್ರ
ಶಮನ ಶೌಚಾಚಾರಯುತ ಪ್ರಭೊ ಶಾಂತ ಶಸ್ತ ನಮೋ ೪೧

ಷಡ್ವಿಭೂತೆ ನಿಷಾದ ಭಯಹರ
ಷಡ್ವಧೂಧವ ಖುಷಿವಧೂಸಖ
ಶಾಡ್ವಲಚರ ಇಷೀಕ ಇಷುಧರ ಕಾಂಡ ಸುವಿಹಾರಾ
ಷಡ್ವಿಕಾರಾತೀತ ವಿಜಿತಾ
ನಡ್ವಷೇಚಿತ ಸೌರಭೇಯ ಭೂ
ವಿಡ್ವರಘ್ನ ವೃಕ್ಷೌಘಘ್ನ ಸ್ವರ್ಣ ನಿಷಂಗ ಚಾಪ ನಮೋ ೪೨

ಸರಸಿಜಾನನ ಸಾಧ್ಯ ಸಿದ್ಧನಿ
ಕರ ಕರಾರ್ಚಕ ಸೀಕ್ಷರಕ್ಷಕ
ಸುರಪ್ರನ್ಮಂದಿರ ಸೂರಿ ಹೃದ್ಗುಹಸೇವ್ಯ ಸುರಮೌಳಿ
ನಿರುಜ ಸೈಂಧವಕಾಸ್ತ್ಯ ಸೋಮಾ
ಭರಣ ತೋಷಕ ಸೌಮ್ಯ ರತ್ನಾ
ಕರ ನಿರಂಜನ ಸಂಜಯೋತ್ಸವ ಸಹಜಶೂರ ನಮೋ ೪೩

ಹಲಿ ಸಹಗ ಹಾರ್ದಿಕ ಮನೋಗತ
ಫಲ ಹಿರಣ್ಮಯವಸನ ಹೀರಾ

ವಲಯ ಹತ ಭುಗ್ವಲದ ಹೂಣಪವಿತ್ರ ಹೇತ್ವರ್ಥ
ಜಲಧಿ ಪುರಪತೆ ಹೈಮರಾಶಿದ
ಬಲಿದ ಹೋಮದ ಹೋತ್ರಭಾಗದ
ಸುಲಲಿತೋದನ ಪರಮಹಂಸ ಸತ್ಕುಲ ಹರುಷ ನಮೋ ೪೪

ಪಳಲವಾಂತ ಕಳಾಢ್ಯ ಯಜ್ಞಾ
ವಳಿ ಕೃತಾದರ ನಿರ್ವ್ಯಳೀಕ ನಿ
ಖಿಳ ಕೃಪಾಳು ವರೇಣ್ಯ ಜೀವ ಜಿಳೂಕ (ಜಾಳಕ?)ತೃಪ್ತಿಕರ
ಸ್ಥಳ ಕಳೇವರ ಭರಿತ ಬ್ರಹ್ಮ ವಿ
ಪುಳ ಕಳೈಕ್ಯ ತಳೋರ್ಧ್ವಮದ ವಿ
ಹ್ವಳ ಬಳೌಘನೆ ನಿಷ್ಕಳಂಕ ಕಳಾಪ್ರವೀಣ ನಮೋ ೪೫

ಕ್ಷತರಹಿತ ಕ್ಷಾರಾಬ್ಧಿ ಬಂಧಕ
ಕ್ಷಿತಿಭರಹರ ಕ್ಷೀರನಿಧಿಗ್ರಹ
ಅತುಳಗ್ರಹ ಕ್ಷುದ್ರಾರೆ ಕ್ಷೂರಾಯುಧನೆ ಕ್ಷೇಮೇಶ
ಗತಿ ಗತೇ ದೀಕ್ಷೈಕ್ಯ ಕ್ಷೋಣಿ
ಪತಿ ಪತೇ ಕ್ಷೌಮರಥ ಕ್ಷಾಂತಿಭ
ರಿತ ನೃಗೋದ್ಧರ ಕ್ಷತ್ರವಲ್ಲಭ ಕ್ಷತ್ರವೇಷ ನಮೋ ೪೬

ಏಕರಾಡ್ ವಿಶ್ವೇಕಕಾರಕ
ಏಕವ್ಯಾಪಕ ಏಕಸ್ಥಾಪಕ
ಏಕಭೋಜಕ ಏಕಯಾಜಕ ಏಕತೋಕಾತ್ಮ
ಏಕಸೃಜ ಭುವನೈಕವರ್ಧಕ
ಏಕಮಾರಕ ಏಕತಾರಕ
ಏಕಯಾಚಕ ಏಕಸೂಚಕ ಏಕಪತ್ರನಮೋ ೪೭

ದ್ವಯಕ್ರಿಯೇಶ್ವರ ದ್ವಯಪಥೇಶ್ವರ
ದ್ವಯಸುವಿಸ್ತರ ದ್ವಯವಿಗೋಚರ
ದ್ವಯನಿವಾರಕ ದ್ವಯಪ್ರದಾಯಕ ದ್ವಯಸಮಯಪೂರ್ಣ

ದ್ವಯ ಪ್ರವಾಹಕ ದ್ವಯನಿಯಾಮಕ
ದ್ವಯನಿರಂತರ ದ್ವಯದ್ವಯೇತರ
ದ್ವಯಸುಬೋಧಕ ದ್ವಯಪ್ರಸ್ಥಾಪಕ ದ್ವಯಭಯಘ್ನ ನಮೋ ೪೮

ತ್ರಯ ಸುವಿಗ್ರಹ ತ್ರಿಪದಕಾಲ
ತ್ರಯಗ ತ್ರಿದಿವಪ ತ್ರಿಪಥಗಪಿತ ತ್ರಿ
ನಯನಾರಿಹನ್ ತ್ರಿಪುರಮೋಹಕ ತ್ರಯ ಸ್ತ್ರಿಂಶತ್ ಸುರಪ
ತ್ರಿಯುಗುದಿತ ತ್ರಿಗುಣೇಶ ಸಾಗರ
ತ್ರಯಪ ಪಂಚಕ ತ್ರಿವಿಧ ಭಾಷ್ಯನಿ
ಚಯ ಕಚಕ ತ್ರಿದಶಾರ್ಚ ತ್ರಿಜಗದ್ಧರಣ ಮಾರ್ಗ ನಮೋ ೪೯

ಚತುರ್ವಿಧಾತ್ಮಾ ಚತುರ್ಭುಜಾಂಚಿತ
ಚತುರ್ಮುಖಾಧಿಪ ಚತುರ್ವಿಧಾರ್ಥದ
ಚತುರ್ವರ್ಣಾಶ್ರಯ ಚತುರ್ಮುಕ್ತಿ ಚತುಷ್ಟಯೇಶ್ವರ ತೇ
ಚತುಃಸಮುದ್ರಗ ಚತುರತರಮತಿ
ಚತುರ್ವಿಧಾಯಥ ಚತುರ್ಬಲಾಂಬುಧಿ
ಚತುರವೇದಾರ್ಥಿತಚರಣ ಚತುಶ್ಶಾಸ್ತ್ರಪೂಜ್ಯನಮೋ ೫೦

ಪಂಚಮುಖಮುಖ ಪಂಚಮುಖನುತ
ಪಂಚಜನರಿಪು ಪಂಚಮೋಕ್ಷದ
ಪಂಚಪಾಂಡವಪ್ರಾಣ ವರಪಂಚಾಕೃತಾವ್ರಾತ
ಪಂಚಶರಪಿತ ಪಂಚವ್ಯೂಹ ಸು
ಪಂಚಭಿದಮತ ಪಂಚಪರ್ವಹ
ಪಂಚಕಾಲಜ್ಞ್ಯಜ್ಞ ಸಂಭೃತ ಪಂಚಬಾಣ ನಮೋ ೫೧

ಷಟ್ಸಹೋದರ ಷಟ್ಚರಣಚರ
ಷಟ್ಸಪತ್ನಹನ್ ಷಡೂರ್ಮಿಹರ
ಷಟ್‌ಶಕ್ತ್ಯಾತ್ಮಕ ಷಡ್ಗುಣೋತ್ತರ ಷಡೃತುಪ್ರವಹ
ಷಟ್ಕರಾಭಿದ ಷಟ್ಚರೋಕ್ಷದ
ಷಟ್ಕ್ರಿಯುಗ ಷಟ್ಶಾಸ್ತ್ರಪ್ರಿಯತಮ ಷಟ್ಕಸಹಗ ನಮೋ ೫೨

- ೫೩*

ಅಷ್ಟಕಾರಣ ಶ್ಲಿಷ್ಟ ಮಹಿಷಿಯ
ರಷ್ಟಕಾಶ್ರಯ ಅಷ್ಟಮದಹರ
ಅಷ್ಟಕಾಷ್ಟಿಗ ಅಷ್ಟಭೂತಿದ ವ್ಯಷ್ಟಸೃತ್ಯಹ
ಅಷ್ಟದಂಶ ಕ್ಷೋಣಿ ಪ್ರಜಹರ
ಅಷ್ಟನಾಗಪ ಅಷ್ಟಭುಜಧರ
ಅಷ್ಟ ಆಯುಧ ಸಂಭೃತಾಷ್ಟೌಷಧ ತ್ರಿಭಂಗ ನಮೋ ೫೪

ನವಸುರತ್ನಾಭರಣಯುಕ್ ತ್ರಿ
ರ್ಣವಕಪ್ರಿಯ ನವದ್ವಾರಪುರ ಪ್ರಭೊ
ನವಶಯುಕ್ತ್ಯಾತ್ಮಕ ನವಗ್ರಹ ನವದ್ಯಯಾಗದ್ರುಣ
ನವರಸೇಶ್ವರ ನವಪ್ರಜೇಶಪ
ನವನಿಧೀಶ ನವಾರ್ಥದೆ ದಾ
ನವರಿಪುವೆ ನವಕೋಟ್ಯಮರರಿಂ ನಮಿತಚರಣ ನಮೋ ೫೫

ದಶಶತಾನನ ದಶಶತಾಂಬಕ
ದಶಶತ ಸುತೋರ್ದಂಡ ದರಕಳ
ದಶದಶಾಭಿದ ದಶಶತಾಭಿದ ದಶಖಗಾಮರಪ
ದಶವರೂಥಜ ದಶಮುಖಘ್ನ ತ್ರಿ
ದಶ ಭಯಾಂತಕ ದಶಕಕುಭ ಹಸತ್
ದಶನ ದಶಮತಿಭಾಷ್ಯ ಋತದಶನೀಶದ್ರಕ್ಷ ನಮೋ ೫೬

ಶತಸುಖಾರ್ಥಿ ಶತಾಬ್ದಶಯನ ಸು
ಶತಮಖಾರ್ಚಿತ ಶತಗೋಪಿಪತೆ
ಶತಸೋಮ ನೃಪ ಶತಕ ಸ್ಥಾಪಕ ಶತಶತಾಂಶುಧರಾ
ಶತಕುರುಜಹನ್ ಶತಕುಲೋದ್ಧರ
ಶತಾಯುಃಪ್ರದ ಶತಾಪರಾಧಿಪ
ಶತಸಹಸ್ರಾರ್ಕಭ ಶತಪತ್ರಾಕ್ಷ ಸುಖದ ನಮೋ ೫೭

* ೫೨ ನೇಯ ನುಡಿಯ ಒಂದು ಸಾಲು ಮತ್ತು ೫೩ ನೇಯ ನುಡಿ ಸಿಕ್ಕಿಲ್ಲ.

ಕ್ಷಿತಿ ಪ್ಲವೋದ್ಧರ ಕ್ಷಿತಿ ಭೃತೋದ್ಧರ
ಕ್ಷಿತಿ ತಳೋದ್ಧರ ಕ್ಷಿತಿ ಚಲನಕರ
ಕ್ಷಿತಿ ತ್ರಿಪದಧರ ಕ್ಷಿತಿಪಕ್ಷಯಕರ ಕ್ಷಿತಿಕನ್ಯಾಸುವರ
ಕ್ಷಿತಿಜನಾಶ ಕ್ಷಿತಿ ಖಳಮೋಹಕ
ಕ್ಷಿತಿಭರಾರ್ದಕ ಕ್ಷಿತಿಪಾಲನಪರ
ಕ್ಷಿತಿವಲಯಚರ ಕ್ಷಿತಿಜನೇತರ ಕ್ಷಿತಿಸುರೇಶ ನಮೋ ೫೮

ಅಂಬುಗಮನ ಪಯೋಂಬುಮಥನ ಲ
ಯಾಂಬು ತಳಗಾರುಣಾಂಬು ಸಟ ಬಾ
ಹ್ಯಾಂಬುವಾಹಕ ಅಂಬುಶೋಷಕ ಅಂಬುಧಿಮದಘ್ನ
ಅಂಬುಗೃಹ ಮೋಹಾಂಬುಧೆ ಧ
ರ್ಮಾಂಬು ಶ್ರೀಮತ ಅಂಬುಜೇಶ ಸು
ಧಾಂಬುಧಿ ಸಮಾನೋದರಾಂಬುದಗಾತ್ರ ಕಪಿತ ನಮೋ ೫೯

ಅಗ್ನಿನಿಭ ಅಬ್ಧ್ಯಾಗ್ನಿ ಸಹಚರ
ಅಗ್ನಿಮಯ ಪ್ರಳಯಾಗ್ನಿಲೋಚನ
ಅಗ್ನಿಕಾರ್ಯಜ್ಞಾಗ್ನಿ ಪೂಜಿತ ಅಗ್ನಿ ಹೋತ್ರಯುತಾ
ಅಗ್ನಿ ರುಧನ್ನಾಗ್ನಿಕೋಪನ
ಅಗ್ನಿಸ್ಥಾಪಕ ಅಗ್ನಿವ್ಯಾಪಕ
ಅಗ್ನಿವರ್ಧಕ ಅಗ್ನಿದೀಪಕ ಅಗ್ನಿವರ್ಣ ನಮೋ ೬೦

ವಾತಜನಕನೆ ವಾತಸಮಭ್ರಮ
ವಾತಪಾಗ್ರಜ ನಾಸಿಕಜಲಯ
ವಾತಸಮ ಕ್ವಾಶಾಂಕ ವಾತಭ್ರಾತೃ ಹಿತಕರಣಾ
ವಾತಸಖಗತ ವಾತಭವನುತ
ವಾತಸುತನುತ ವಾತರಶನ ಸು
ವಾತಸಮ ಹರಿಗಮನ ಸೂತ್ರ ಸುವಾತಜನಕ ನಮೋ ೬೧

ಅಂಬರ್ವಾನರಜಾರ್ಚಿತ ನಗಾಂಬ
ರಾಂಬರ ಕ್ರೀಡಾಂಬರಾಳಕ
ಸಂಭಜಿತ ಸ್ವಾಂಬರಭರಿತಪದ ಅಂಬರೇಣುಕಹನ್

ಅಂಬರಗ ವಂಶೇಂದ್ರ ಗೋವ
ಧ್ವಾಂಬರಾಪಹರಾಂಬರಾಂಬರ
ಅಂಬರಗ ಹಯಗಾಂಬರಪ ಪಾಂಬರ ಸುನಾಭಿ ನಮೋ ೬೨

ಶಬ್ದಬೋಧಕ ಶಬ್ದಕಾರಕ
ಶಬ್ದಘರ್ಘರ ಶಬ್ದಹುಂಕರ
ಶಬ್ದಪಾರಗ ಶಬ್ದ ವೀರಗಭೀರ ಶಬ್ದಾಂಕಾ
ಶಬ್ದಶೋಧಕ ಶಬ್ದದೂಷಕ
ಶಬ್ದಸ್ಥಾಪಕ ಶಬ್ದವಿಸ್ಮೃತ
ಶಬ್ದ ಬ್ರಹ್ಮಜ್ಞೇಶ ಶಬ್ದಾತೀತ ಶಬ್ದ ನಮೋ ೬೩

ವೃಷಭಗೇಷ್ಟ ಮಿಥುನ ಕುಜಾರ್ದಕ
ವಿಷಮ ಕರ್ಕಶ ಮೃತ್ಯು ಕರಿಹರಿ
ವಿಷರದನ ಕನ್ಯಾಪತಿಸಖ ವೃಶ್ಚಿಕಾಭಾಂಗಾ
ವಿಷಪಧನುಹರ ಮಕರಕುಂಡಲ
ವಿಷಕುಂಭ ಸ್ತನಪಾನ ತತ್ಪರ
ವಿಷಯಸುಖಮಾಯ ಮೀನ ಮೇಷಾರೂಢ ಸೇವ್ಯ ನಮೋ ೬೪

ಅಶ್ವರೂಪ ಮಹಾಭರಣಿ ಸಖ
ವಿಶ್ವಕೃತ್ತಿಕಾಯಂಗಿ ವರರೋಹಿ
ಣೀಶ್ವರೋದ್ಭವ ಮೃಗಮದಾಂಕಾರಿದ್ರವಿಣ ಹರಣಾ
ನಿಸ್ವಜನ ಪುನರ್ವಸುದ ಗುರುಗಣ
ಹೀಶ್ವರಾಸನ ಪಿತೃಚಯಾರ್ಚಿತ
ಸ್ವ ಸ್ವಭಾಗ್ಯ ಸುಪೂರ್ಣ ಅಮೃತೋತ್ತರ ಸುಹಸ್ತ ನಮೋ ೬೫

ಚಿತ್ರರಥ ಸ್ವಾತಿಶಯದೂರ ಮ
ರುತ್ತವೇಶಾನುರಾಧಕೋದ್ಧರ
ಗೋತ್ರಿ ಸುಖಕರ ಮೂಲರಾಕ್ಷಸವಂದ್ಯ ಜಲರೂಪ
ಶತ್ರು ಶ್ರವಣರಹಿತ ಧನಿಷ್ಠ ನ

ಕ್ಷತ್ರ ಶತಪತಿ ಕುಲಜ ಮಧ್ಯ ಪೂ
ರ್ವೋತ್ರ ಭದ್ರಪದೇಶ ರೇವತಿ ರಮಣಾವರಜ ನಮೋ ೬೬

ಕತರಕರ್ಚಿತ ಕಿತವಹರ ಸತ್ಯ
ವ್ರತಪ ಕ್ರೀಡಾಪರ ಕುಧರ ಕೂ
ಜಿತ ನಿಗಮಕೇಡ್ಯ ಕೋಟರಮುಖ ಕೌಶಲ ಜವಗಮಾ
ಶ್ರುತಿ ಹರಹರ ಕಂಠರೇಖಾಂ
ಕಿತ ಕಶ್ಯಪಸುತ ಕರುಣಭಾಷಕ
ಶತಸುಖೋದ್ಧರ ಸಿತತರೋದರ ಶಫರಿರೂಪ ನಮೋ ೬೭

ಕಮಠಕಾಲಯ ಕಿಲ್ಬಿಷೋದರ
ವಿಮಲ ಕೀಲಾಲೇಷ್ಟ ಕುಲಗಿರಿ
ಭ್ರಮಣಕರ ಕುಪರ ಕರ್ಮೇತರ ಕೇಶ್ವರೇಷ್ಟಕರ
ಅಮಿತ ಕೈತವಾನಿಷ್ಟ ಕೋಮಲ
ವಿಮಲ ಜಠರ ಕಠಿಣವಪುಃ ಕೌ
ರ್ಮ ಮಹತ್ಸ್ತುತಿಪ್ರಿಯ ಕಂಠಲಂಬ ಕಚ್ಛಪಾತ್ಮ ನಮೋ ೬೮

ಕನಸಭವ ಕಾಪುರುಷ ಮಥನ ಕಿ
ಟಿನಟ ಕೀರ್ತಿತಯಜ್ಞ ಕುಶಮಯ
ತನೋ ಶ್ರೀ ಕುಧವ ಕೆಗಕ್ರೋಡ ಕೈಶೋರ ಕುಜವರದ
ಘನಸಮಸ್ವನ ಕೋಲ ಘರ್ಘರ
ಮನುಸನಕನುತ ಕೌತುಕಾಟಣ
ಕನಕಗಿರಿಚರ ಕಂಜಭವನುತ ಕಷ್ಟಹರಣ ನಮೋ ೬೯

ಮಧ್ವವಲ್ಲಭ ಮಧ್ವತೀರ್ಥಗ
ಮಧ್ವಮತಪರ ಮಧ್ವಪತೆ ಮುನಿ
ಮಧ್ವರಮಣ ಶ್ರೀಮಧ್ವಯತಿನುತ ಮಧ್ವಪುಷ್ಕರಪಾ
ಮಧ್ವಪೋಷಕ ಮಧ್ವಭಾಷಕ
ಮಧ್ವತೋಷಕ ಮಧ್ವರಿಪುಹರ
ಮಧ್ವಕಾಮದ ಮಧ್ವಹೃದ್ಗುಹ ಮಧ್ವವಿಭವ ನಮೋ ೭೦

ಪ್ರಸನ್ನವದನ ಪ್ರಸನ್ನಲೋಚನ
ಪ್ರಸನ್ನಭವನ ಪ್ರಸನ್ನಭಾಷಣ
ಪ್ರಸನ್ನಕಾರ್ಯ ಪ್ರಸನ್ನಗುಣನಿಧೆ ಪ್ರಸನ್ನತರ ಮೂರ್ತೆ
ಪ್ರಸನ್ನಪುರುಷ ಪ್ರಸನ್ನ ಸೋಂಕಿತ
ಪ್ರಸನ್ನಕಥನ ಪ್ರಸನ್ನಭೂಷಣ
ಪ್ರಸನ್ನಚರಿತ ಪ್ರಸನ್ನವೆಂಕಟ ಪ್ರಸನ್ನಕೃಷ್ಣ ನಮೋ ೭೧

೧೩೯

ಶ್ರೀ ವೆಂಕಟೇಶ ಸಲಹು ವೆಂಕಟೇಶ
ಭಾವಿಕ ಸೇವಕ ಭವಭಯನಾಶ ಪ.

ಸುರಾರಿ ಗಜಗಳೆಂಬ ಗಣಕೆ ಕಂಠೀರವ
ಕರಿರಾಜ ಸಂಕಟ ಛಿತ್ತ ದೇವ
ಪರಮ ಭಾಗವತರ ಸಮೂಹ ಸಂಜೀವನ
ಮುರಹರವರ ಮತ್ತ ವೃಕ(ಷ?) ಮಥನ ೧

ವನಜಭವ ಸಮೀರರೊಡೆಯ ಶ್ರೀರಮಣ
ಮುನಿ ಹೃದಯಾಲಯ ಪರಿಪೂರ್ಣ
ಫಣಿವರಶಾಯಿ ಪರಾತ್ಪರ ಅಗಣಿತ
ಗುಣಗಂಭೀರ ಜಗದ ದಾತ ೨

ಶುಕ ಶೌನಕ ಸನಕಾದಿ ದೇವಋಷಿ
ಸಕಳ ಸುರಭೂಸುರ ರಾಜಾಧೀಶ
ಭಕುತವತ್ಸಲ ಬಾದರಾಯಣ ಹರಿ ಹಯ
ಮುಖ ಪ್ರಸನ್ವೆಂಕಟ ಗಿರಿನಿಲಯ ೩

೧೪೦

ಸಂತತ ನಿಮ್ಮ ಸ್ಮರಣೆ ಉಳ್ಳವರಿಗೆ
ಅಂತರ್ಬಾಹ್ಯಾರ್ಥವು ತೋರುವುದೊಂದರಿದೆ ಪ.

ಅಂತ್ಯಜಾತಿಯಳಂಗಸಂಗದಿ ಮತಿಗೆಟ್ಟು
ಅಂತ್ಯವಸಾನದೊಳೊಯ್ಯ ಬಂದ
ಅಂತಕನವರ್ಗಂಜಿ ಅಣುಗ ನಾರಾಯಣ
ನೆಂತೆಂದಜಾಮಿಳನ ಕಾಯ್ದೆ ಕರುಣಾಬ್ಧಿ ೧

ಕಾಂತಾರ ತಿರುಗಿ ಕ್ರೀಡೆಗೆ ಜಲದೊಳು ಪೊಕ್ಕ
ದಂತಿ ಅಂಘ್ರಿಯ ನಕ್ರ ನುಂಗೆಳೆಯೆ
ಚಿಂತಿಸಿ ತುದಿಯಲ್ಲೆ ಹರಿಯೆಂದು ಕೂಗಲ
ನಂತಾಸನವ ಬಿಟ್ಟು ಬಂದೆತ್ತಿ ಹೊರೆದೆ ೨

ಕಂತುವೈರಿಯ ಭಕ್ತ ಸೊಕ್ಕಿ ನೃಪರನೌಸೆ
ಕಾಂತ ನಿಮ್ಮಡಿಗೆ ಬಿನ್ನಹ ಕಳುಹೆ
ಕುಂತಿಯ ತನುಜನಿಂದವನ ಕೊಲ್ಲಿಸಿ ಭೂ
ಕಾಂತರಿಗೊಲಿದ್ಯೊ ಪ್ರಸನ್ನವೆಂಕಟಕೃಷ್ಣ ೩

೧೪೧

ಸಲಹು ವೆಂಕಟರಮಣ ದಯಾಂಬುಧಿ
ಸಲಹು ವೆಂಕಟರಮಣ ಪ.

ಮಸ್ತಕದೊಳೊಪ್ಪುವ ಮಾಣಿಕ ಮಕುಟದ
ಕಸ್ತೂರಿನಾಮದ ಚೆಲುವ
ವಿಸ್ತರ ಕದಪಿಲಿ ಹೊಳೆವ ಕುಂಡಲ ಪ್ರ
ಶಸ್ತ ವದನ ಜಗಜೀವ ೧

ಎಳೆನಗೆ ತಿಂಗಳ ಕಾಂತಿಲಿ ಹೃತ್ತಾಪ
ಕಳೆವ ಕರುಣಿ ಸಿರಿಕಾಂತ
ಗಳದೊಳು ವನಮಾಲೆ ವೈಜಯಂತಿ ಪದಕ
ಗಳೊಲೆವ ಮಂಗಳಮೂರ್ತಿಮಂತ ೨

ಮುತ್ತಿನ ಸರ ಸರಪಳಿ ಭುಜಕೀರ್ತಿಯು
ಎತ್ತಿದ ಶಂಖಾರಿಪಾಣಿ

ರತ್ನನ ಮೇಲೊಡ್ಯಾಣ ಕಂಕಣ ಮುದ್ರೆ
ಒತ್ತೆ ಅಭಯವರದನೆ ೩

ಉಟ್ಟು ಪೊಂದಟ್ಟಿ ಕಠಾರಿ ಕಟ್ಟಿರುವ
ದುಷ್ಟರ ರಣಜಿತವೀರ
ಇಟ್ಟ ವಜ್ರದ ಕಾಲಂದಿಗೆ ಪಾವುಗೆ
ಮೆಟ್ಟಿದ ಸುರರ ಮಂದಾರ ೪

ಅಗರು ಚಂದನ ಕಪ್ಪುರ ಕೇಶರ ಸುರ
ಭಿಗಳಿಗೆ ಅತಿಪ್ರಿಯ ಅಂಗ
ಮಘಮಘಿಸುವ ಮಲ್ಲಿಗೆ ಸಂಪಿಗೆಯ ಮಾ
ಲೆಗಳ ಪ್ರಸನ್ವೆಂಕಟ ರಂಗ ೫

೧೪೨

ಸಿಂಧುಶಯನನೆ ಬಾರೊ ಇಂದಿರಾರಾಧ್ಯನೆ ಬಾರೊ
ಮಂದಿರಜನಯ್ಯನೆ ಬಾರೊ ಇಂದೆನ್ನ ಮನಮನೆಗೆ ಪ.

ಬಾರೊ ಭಕ್ತರ ಪಾಲಕ ವೆಂಕಟರನ್ನ ಬಾರೊ ಅ.ಪ.

ರಾತ್ರಿನಾಮನರಿಯೆ ಬಾ ಗೋತ್ರಧರ ಬಾರೊ ಹೇಮ
ನೇತ್ರನ ಸದೆದು ಧರಿತ್ರಿ ತಂದೆ ಪೋತ್ರಿ ರೂಪ ಬಾರೊ ೧

ಹರಿಮೊಗದವ ಬಾರೊ ಹರಿಯನುಜನೆ ಬಾರೊ
ಕರಜರ ಸವರಿದ ಹರಿಕುಲೋತ್ತಮರನ್ನ ಬಾರೊ ೨

ಚೆನ್ನನಾಗಿ ಮೆರೆದೆ ಬಾ ಚೆನ್ನೆವಾಸ ಜರಿದೆ ಬಾ
ಉನ್ನತ ಹಯವೇರಿ ಪ್ರಸನ್ನವೆಂಕಟಾದ್ರಿವಾಸ ಬಾರೊ ೩

೧೪೩

ಸಿರಿ ಅರಸಂಗೆ ನಮೋ
ಗುರುಮಧ್ವವರಿಯ ವರಸ್ತುತಿ ಪ್ರಿಯ ಪ.

ನಿಗಮಾಗಮಾಗಣಿತ ಸುವಿದಿತ ಸುಗುಣ ವಿ
ಹಗಗಮನಘರಿಪು ಉರಗಶಯನ ೧

ಅಜನುತ ರಾಜರವಿ ವಿಜಿತ ಪ್ರತೇಜ ಕುಜ
ರಜನೀಚರ ಹನನ ಮೂಜಗಜೀವನ ೨

ತನ್ನ ವಂದಿಪರನ್ನು ಹೊರೆವನ್ನಭಯವನ್ನೀಡಿಪ
ಎನ್ನಯ್ಯ ಪ್ರಸನ್ನವೆಂಕಟನಾಥ ದಾತಾರ ೩

೧೪೪

ಸಿರಿಪತಿ ಧರಾಪತಿ ದುರ್ಗಾಪತಿ ಫಣಿಗಿರೀಶ ಪ.

ಅರಿದರಧರಕರ ವರಾಭಯಕರ ಶಿರಾ
ಭರಣ ಸಿರಿವತ್ಸ ಕೇಯೂರ ಕೌಸ್ತುಭೋರು ಹರೆ ಹರೆ ನಮೋ ೧

ಖಗಾಸನ ಪನ್ನಗಾಸನ ದಿಗೇಶನುತಗಣಿತ
ದ್ಯುಗಸನ್ನಿಭ ಸುಗಾತ್ರ ಸಾಮಗ ಘೋಷಿತ ಪಾಹಿ ಪಾಹಿ ೨

ಪರಾತ್ಪರ ಪಾರಾವಾರ ವರ ಹೇಮಾಂಬರ ಚಾರು
ಚಿರ ಪ್ರಸನ್ನವೆಂಕಟರಮಣ ಕರುಣಾಳು ತ್ರಾಹಿ ತ್ರಾಹಿ ೩

೧೪೫

ಸೀತಾಪತೆ ಸ್ವಾಮಿ ಸೀತಾಪತೆ
ವಾತಜನುತ ಭೂತನಾಥಪತೆ ರಾಮ ಪ.

ಗುಪ್ತ ಗುಣ ತಾಳ ಸಪ್ತಾಘಹನ
ದೀಪ್ತಕಾಯ ಕುಶಸುಪ್ತಜಯ ರಾಮ ೧

ತಾಟಕಾರಿ ರಘುರಾಮ ಹರಿ
ಹಾಟಕಪುರಪ ನಿಶಾಟಹರ ರಾಮ ೨

ಭರ್ತ ನೇಮ ಪರಿಪೂರ್ತ ನಮೋ
ಕರ್ತ ಪ್ರಸನ್ವೆಂಕಟಾರ್ತಾಶ್ರಯ ಪಾಹಿ ೩

೧೪೬

ಸುವ್ವಿ ಕೈಟಭಹಾರಿ ಸುವ್ವಿ ಚಾಣೂರದಾರಿ
ಸುವ್ವಿ ಮಲ್ಲ ಮುಷ್ಟಿಕರ ವೈರಿ ಶ್ರೀ ಕೃಷ್ಣನ್ನ
ಸುವ್ವೆಂದು ಪಾಡಿ ರಕ್ಷಿಪ ಸುವ್ವಿ ಪ.

ವಿಶ್ವಬೀಜವ ಪೊತ್ತ ಗಿರಿ ಪೊತ್ತ ಧರೆ ಪೊತ್ತ
ಶಿಶು ಕೃಷ್ಣಾಜಿನ ಪರಶು ಧನು ಪೊತ್ತ
ಶಿಶು ಕೃಷ್ಣಾಜಿನ ಪರಶುಧನು ಪೊತ್ತಗವ ಪೊತ್ತ ದಿ
ಗ್ವಸನ ಇಟ್ಟಿಯ ಪೊತ್ತ ೧

ಶ್ರುತಿ ಗೆದ್ದವನ ಗೆದ್ದಾಮೃತ ಗೆದ್ದ ಸತಿ ಗೆದ್ದ
ದಿತಿಜ ಬಲಿ ಕ್ಷತ್ರಿಯರಾಕ್ಷಸರ ಗೆದ್ದ
ದಿತಿಜ ಬಲಿ ಕ್ಷತ್ರಿಯ ರಾಕ್ಷಸರ ಗೆದ್ದ ಅಲರ ಗೆದ್ದ
ಪತಿವ್ರತೆ ಅಧರ್ಮಿಗಳ ಗೆದ್ದ ೨

ಎವೆ ಇಲ್ಲ ಮೃದು ಇಲ್ಲ ಜವದೊಳೆಡಬಲವಿಲ್ಲ
ಕುವರೇಂದ್ರ ವಿಪ್ರಮಾರ್ಗೆಡರಿಲ್ಲ
ಕುವರೇಂದ್ರ ವಿಪ್ರಮಾರ್ಗೆಡರಿಲ್ಲ ಕೃಷ್ಣ ಪ್ರ
ಸನ್ವೆಂಕಟ ಯೋಗಿ ಕೃಪೆಗೆ ಕಡೆಯಿಲ್ಲ ೩

೧೪೭

ಸ್ವಾಮಿ ನರಸಿಂಹ ಶರಣು
ಶ್ರೀಮಹಾ ಅಹೋಬಲನಿಲಯ ದೇವ ಶರಣು ಪ.

ಭವನಾಶಿನಿಯ ಕೂಲಭವನ ಭಟಪ್ರತಿಪಾಲ
ಭವಸಹಸ್ರಾಂಬಕರ ಭಯವಿದೂರ
ಭುವನಕದ್ಭುತ ಗಾತ್ರ ಭಜಕಜನತಾಪತ್ರ
ಭವಕರ್ದಮ ಶೋಷ ಬುಧರ ಪರಿತೋಷ ೧

ಅಣುರೇಣು ತೃಣ ವ್ಯಾಪ್ತ ಅಖಿಳರೊಳು ನಿರ್ಲಿಪ್ತ
ದನುಜ ಹಿರಣ್ಯಕಹರ್ತ ದೀನನಾಥ
ಕನಕಜಠರನ ಜನಕ ಕರುಣಾಂಕ ಕ್ರೂರಮುಖ
ಪುನೀತ ಶುಭಚಾರಿತ್ರ ಪ್ರಹ್ಲಾದಮಿತ್ರ ೨

ಪದುಮದೇವಿಯ ರಮಣ ಪ್ರದ್ವಿಷಾನ್ವಯದ ಮನ
ಮುದ ಶಾಂತ ಪರಿಪೂರ್ಣಮೂರ್ತಿ ಪುಣ್ಯ
ಪ್ರದನಾಮ ನವರೂಪ ಪತಂಗಾನಂತಪ್ರದೀಪ ನಿನ್ನ
ಪದವೆ ಗತಿ ಹೊರೆಯೆನ್ನ ಪ್ರಸನ್ವೆಂಕಟರನ್ನ ೩

೧೪೮

ಸ್ವಾಮಿಪುಷ್ಕರ ತೀರ ನಿಲಯ ನಮೋ
ಸ್ವಾಮಿವರಾಹ ವೆಂಕಟನಾಯಕ
ಸ್ವಾಮಿ ಪಾಹಿ ಪಾಹಿ ಸ್ವಾಮಿ ತ್ರಾಹಿ
ಸ್ವಾಮಿ ವರಾಹವೆಂಕಟನಾಯಕ ಪ.

ಯಜ್ಞಗಾತ್ರ ವಿಧಿನುತ ಪ್ರಭು ಶ್ರೀ
ಯಜ್ಞ ವರಾಹ ವೆಂಕಟನಾಯಕ

ಯಜ್ಞಭೋಕ್ತೃ ಹೇಮಾಂಬಕ ಹರ
ಯಜ್ಞವರಾಹ ವೆಂಕಟನಾಯಕ ೧

ಭೂಭಯದೂರ ಧರಾಮನೋಹರ
ಭೂವರಾಹ ವೆಂಕಟನಾಯಕ
ಶೋಭಿತ ಬಾಲಚಂದ್ರೋಪಮ ಕ್ರೋಡ
ಭೂವರಾಹ ವೆಂಕಟನಾಯಕ ೨

ಶ್ವೇತಾದ್ರೀಶಾರ್ಚಿತ ಪಾದಕಮಲ
ಶ್ವೇತವರಾಹ ವೆಂಕಟನಾಯಕ
ಪಾತಕ ಮೋಚಕ ಪ್ರಸನ್ವೆಂಕಟ
ಶ್ವೇತವರಾಹ ವೆಂಕಟನಾಯಕ ೩

೧೪೯

ಹರಿ ನೀ ಪಿಡಿದ ಕಲ್ಲವೆ ರತುನ
ಹರಿ ನಿನ್ನಡಿಗಲ್ಲದವನೆ ಯವನ ಪ.

ಹರಿ ನೀನೊಲಿದ ಕಪಿರಾಜ ವಿಧಿಯು
ಹರಿ ನೀನೊಲಿಯದಿರೆ ಕಪಿಗೆ ವಧೆಯು
ಹರಿ ನೀ ಗೆಲಿಸೆ ಪಾರ್ಥನಿಗೆ ಗೆಲುವು
ಹರಿ ನಿನ್ನ ಛಲದಿ ಕೌರವರಿಗಳಿವು ೧

ಹರಿ ನೀ ಮೆಚ್ಚಿದರ್ಭಕರಾರ್ಯರು
ಹರಿ ನೀ ಮೆಚ್ಚದಾರ್ಯರೆ ಕಿರಿಯರು
ಹರಿ ನಿನ್ನುಚ್ಚರಿಪರು ಮಾನ್ಯರು
ಹರಿ ನಿನ್ನೆಚ್ಚರಿಲ್ಲದ ಜನರುಚ್ಚರು ೨

ಹರಿ ನೀ ಕನಕಗಿರಿಗಣುಕಲ್ಲೆನಿಪೆ
ಹರಿ ನೀ ತೃಣವೆಟ್ಟ ಮಾಡುತಲಿಪ್ಪೆ
ಹರಿ ನೀ ಘನಕೆ ಘನತರ ಮಹಿಮ
ಹರಿ ನೀ ಪ್ರಸನ್ವೆಂಕಟಪ ಹೊರೆಯೆಮ್ಮ ೩

೧೫೦

ಹೊರಿಯೊ ವಿಪಗಮನ ಮಂಗಳ
ಶರಧಿಜಾರಮಣ ಪ.

ಸುರಕಾರ್ಯಕೆ ಪಕ್ಷ ಶಾರ್ವರಿ
ಚರವರ ಶಿಕ್ಷ
ಧರಣಿಜ ಹರ ಸತ್ರಾಜಿತಜಾವರ
ಶರಣಾಗತ ಭಟ ದುರಿತ ವಿದೂರ ೧

ಪೌಂಡ್ರಕವೈರಿ ನಿಜ ಕೃಷ್ಣ
ಪಾಂಡವರ ತಾರಿ
ಶುಂಡಾಲ ಚಾಣೂರ ಸಂಹಾರಿ
ಖಾಂಡವವನ ದಹಕಾರಿ ೨

ವಿದುರೋದ್ಧವ ಪೋಷ ಸುಖತೀರ್ಥ
ಹೃದಮಾನಸ ಹಂಸ
ಪದುಮನಾಭ ಪ್ರಸನ್ವೆಂಕಟೇಶ ಪಾಹಿ
ಸದಮಲಸದನ ಕ್ಷೀರಾರ್ಣವಶಾಯಿ ೩

ಲಕ್ಷ್ಮೀದೇವಿ

೧೫೧

ಅಂಬೆ ಶ್ರೀ ಅಂಬೆ ಜಗದಂಬೆ ಶರಣೆಂಬೆ
ಅಂಬುಜಾಯತಾಂಬಕನ ಇಂಬಲಿಹ ಬೊಂಬೆ ಪ.

ಕಾವನಯ್ಯನ ಭಟರ ಕಾವೆ ವರವೀವೆ
ದೇವಾದಿ ದೇವರ್ಕಳಿಗೆ ಕುಲದ ದೇವೆ (ವಿ?)
ಭಾವಕರ ಜೀವೆ ಚಿದ್ಭವನ್ನೈದಿಸುವೆ
ಸೇವಕರಾವೆ ಕಾಯಿ ಎನುವೆ ಧನ್ಯ ಎನುವೆ ೧

ಮಾಯಾಗುಣಮಯ ಅಂಬಾ ತರುವ ಹೊಂದಿರುವೆ
ತಾಯಂದಿರಖಿಳಾರ್ಥ ತಾಯಿ ನೀನೀವೆ
ಬಾಯೆನ್ನ ತಾಯೆನ್ನಲಾಯಾಸ ಬಿಡಿಸುವೆ ಎ
ನ್ನಯ ಪ್ರಿಯಳೆ ಪೀಯೂಷನುಣಿಸುವೆ ೨

ಬೊಮ್ಮನಿಗಮ್ಮ ಪರಬೊಮ್ಮನೊಲಿಸಮ್ಮ
ಸುಮ್ಮನಸರ ಮನೋರಮ್ಮೆ ಶ್ರೀರಮ್ಮೆ
ನಿಮ್ಮ ಮನ ನಮ್ಮರಿಯಾ ಉಮ್ಮಯವೀಯಮ್ಮ
ನಮ್ಮಯ ಪ್ರಸನ್ನವೆಂಕಟನ ಮೆಚ್ಚಿನಮ್ಮ ೩

ವಾಯುದೇವರು

೧೫೨

ಎಣೆಗಾಣೆ ಭುವನದಿ ಶ್ರೀರಾಮಚಂದ್ರನ ಪ್ರಿಯವೀರ
ಹನುಮ ಘನಧೀರ ಪ.

ಬ್ರಹ್ಮ ಪಿತೃ ಪಾದಕ್ಕೆರಗಿ ಉಮ್ಮಯದಿ ಕೊಂಡಾಜ್ಞೆ
ಸಮನೆ ಶರಧಿ ಗೋಷ್ಪದ ಮಾಡಿ ಹೋ
ಗ್ಯಮ್ಮ ಜಾನಕಿಗೆ ಪರಬೊಮ್ಮನುಂಗುರವಿತ್ತು
ಹಮ್ಮಿನ ನಿಶಾಚರನಿಗುಮ್ಮಳಿಕೆನಿತ್ತೆ ೧

ಕ್ರೀಡೆಯಿಂ ದಶಶಿರನನೊಡೆವನಾಯದೆ ಶಿಥಿಲ
ಮಾಡುವನಾಗಿನಾ ಮಾತನಾಡಿ ರಮೆಯ
ಚೂಡಾಮಣಿಯ ತಂದು ನೀಡಿ ರಾಘವಗೆ ಸುಖ
ಮಾಡಿಸಿದೆ ಅಪ್ರತಿಮಾರುತಿ ಅತಿಧೀರ ೨

ಗರುವಿನ ಖಳನ ವನದ ತರು ವಿಟಪಮೂಲಸಹ
ಮುರಿದು ಕರಚರಣದಿ ತಂದಾ
ನೆರದ ರಿಪುರಕ್ಕಸರ ತರಿ ತರಿದು ಮರಲುಂ
ದಿ ರಭಸದಿಂದಸುರಪುರವನುರುಹಿದೆ ೩

ಕದನ ಕರ್ಕಶರಿಪುಗಳೆದೆಯೊದೆದು ಕೋಟಿ ಸಿಂ
ಹದ ರಭಸದಿನಲ್ಲಿ ಬಿಸುಟಿ ಉದಧಿಯಲ್ಲಿ
ಸುದುರ್ಲಭಾದ ನಾಕೌಷಧವ ತಂದು ರಣದಿ ಮಲ
ಗಿದ ವೀರರಸುಗಾಯಿದೆ ಅದ್ಭುತ ಮಹಿಮ ೪

ಸೀತಾಪತಿಯ ಪ್ರೀತಿಯತ್ಯಾದರದಿ ಪಡೆದು ವಿಷಯಾ
ತೀತನಾಗಿ ವಿಧಾತನಾದೆ ವಾತ
ಜಾತನೆ ನಿಮ್ಮ ಖ್ಯಾತಿಯ ಪೊಗಳಲಳವೆ
ನಾಥ ಪ್ರಸನ್ನವೆಂಕಟ ದಾತನಿಗೆ ದೂತ ೫

೧೫೨

ಕಡಲದಾಟಿದ ಬಲುಧೀರನೆ ಬಂದು
ಒಡಲ ಹೊಕ್ಕವರಿಗುದಾರನೆ ಪ.

ಬಿಡದೆ ಭಕ್ತರ ಕೈಯವಿಡಿದು ರಕ್ಷಿಸುವ ಎ
ನ್ನೊಡೆಯ ಹನುಮರಾಯ ಅಡವಿಯ ನಿಲಯ ಅ.ಪ.

ದೃಢದಿಂದ ಲಂಕೆಯ ಪೊಕ್ಕನೆ ದೇವ
ಮೃಡನಿಂದ ಪೂಜೆಗೆ ತಕ್ಕನೆ
ಪೊಡವಿಯ ಮಗಳನು ಕಂಡನೆ ಕಿತ್ತು
ಗಿಡ ವನಗಳ ಫಲ ಉಂಡನೆ
ಅಡಿಗಡಿಗೊದಗಿದ ಕಿಡಿಗೇಡಿ ರಕ್ಕಸ
ರ್ಹೊಡೆದು ಪುರವನೆಲ್ಲ ಕಿಡಿಗಂಜಿಸಿದ ಧೀರ ೧

ತಡೆಯದೆ ಸುದ್ದಿಯ ತಂದನೆ ಜಗ
ದೊಡೆಯ ರಾಮನ ಮುಂದೆ ನಿಂದನೆ
ಪಿಡಿದೆತ್ತಿ ತರುಗಿರಿ ಪೊತ್ತನೆ ಕಪಿ
ಗಡಣಕ್ಕೆ ಒಬ್ಬನೆ ಕರ್ತನೆ
ಜಡಧಿ ದಾರಿಯ ಕಟ್ಟಿ ನಡೆದು ರಾವಣನೆದೆ
ಒಡೆಗುದ್ದಿ ಕಾಳಗ ಜಡಿದು ಮಾಡಿಸಿದೆ ೨

ಪೆಡಕಿಲಾಸನವಿತ್ತು ದಾತಗೆ ತುಷ್ಟಿ
ಬಡಿಸಿದೆ ಶ್ರೀರಘುನಾಥಗೆ
ಕಡುವೇಗ ಸಂಜೀವ ಸಲಿಸಿದೆ ನೊಂದು
ಪುಡಿವಟ್ಟ ಕಟಕವ ನಿಲಿಸಿದೆ
ಬಡವರಾಧಾರಿ ನಿನ್ನಡಿಗೆರಗುವೆ ಲೇಸ
ಕೊಡು ಪ್ರಸನ್ವೆಂಕಟ ಒಡೆಯನ ನಿಲಯ ೩

೧೫೪

ಭಳಿ ಭಳಿರೆ ಭಳಿರೆ ಹನುಮ
ಭಳಿ ಭಳಿರೆ ಋಜುನಿಕರ ಮಕುಟಮಣಿ ಪ.

ಅಂಜನಿ ಜಠರ ಸಂಜನಿತ ಪ್ರಾಜ್ಞ
ಮೌಂಜಿಯುತ ಕೋದಂಡ ಧೃತಕರ
ಕಂಜನೆದುರಲಿ ಪ್ರಾಂಜಲಿತ ಬಹುಭಕುತಿ ಅಭಿನಯ
ಅಚ್ಛಿನ್ನ ಅಚ್ಚಿನೊಳು ಶುಭಚಿಹ್ನ
ಪಾವನ್ನ ಗುಣರನ್ನ ಪರಿಪೂರ್ಣ ಅ.ಪ.

ತಾಟಕಾಂತಕ ಭಟರೊಳು ನೀ
ಮೀಟೆನಿಸಿ ಧೀಂಕಿಟ್ಟು ಶರಧಿಯ
ದಾಂಟಿದವನಿಜೆ ತೋಷಕಾರಿ ಅಶೋಕವನಹಾರಿ
ಕೋಟಿ ಕೋಟಿ ನಿಶಾಟ ಹೃದಯ
ಸ್ಫೋಟಕಕ್ಷಯ ಪಾಟವ ಕರಿ
ತ್ತಟ ಕೇಸರಿ ಕಟಿತಟದಿ ಕರವಿಟ್ಟ ಹನುಮ
ದಿಟ್ಟ ವಿಕಟ ಖಳಕಳ ಪಟಾರ್ಭಟ
ಪಟು ಹರಿದ್ವಿಟ್ಟದ್ವಿಟ್ಟು ಚಟುಲವಟು ೧

ವೀರ ಸಮೀರಕುಮಾರ ಪಾರಾ
ವಾರ ಚರಿತ ಮಾರಜಿತ ಘನ
ವಾರಿಜೋದ್ಭವ ಶರಕೆ ಮನ್ನಿಸಿದೇರಿದೌದಾರಿ

ಈರೈದು ಮುಖದವನ ಪುರಪ್ರ
ಸರಾಗಾರವನುರುಹಿ ರಘುಜನ
ಚಾರುಚರಣವ ಕಂಡ ಪ್ಲವಗಪ್ರಚಂಡ ಶುಭ ತುಂಡ
ಬಾಲದಂಡ ಅಗಣಿತ ಲೆಂಡರ ಖಂಡ
ಪುಂಡರ ಗಂಡ ಗಂಡಭೈರುಂಡುದ್ದಂಡ ೨

ಜೀವಜಾಲರ ಜೀವ ವಿಪ ಮಹಾ
ದೇವ ಮುಖ್ಯರ ದೇವ ಚತುರ್ದಶ
ಭುವನಾಶ್ರಿತ ಭೂತಭರ್ಗಸದಾವಿರತಿಭರಿತಾ
ಆವಜನುಮಜ್ಜನುಮ ಎನಗೆ
ನೀ ಒಡೆಯನಾಗ್ಯಾಳುತ ನನ
ಗೀವುದೆಲೆ ಗುರು ಪರಮ ಭಾಗವತಾರ್ಯ ಆ ಚರಿಯ
ಹರಿಯ ಕಾರ್ಯಕಕ್ಕರದ ಹಿರಿಯ
ಪರಮ ವೀರ್‍ಯಾಚ್ಚರಿಯ ಸಚ್ಚರಿಯ ೩

ಹರಿ ಸೇವ್ಯಂಗೀಕರಿಸಿ ಒಡನವ
ತರಿಸಿ ಆಜ್ಞಂವೆರಸಿ ಅಟ್ಟಿದ
ಹರಸಿ ಮದಮತ್ತರಿ ಸಮೂಹ ಭಯಹರಿಸ್ಯಭಯ ಧರಿಸಿ
ಹರಿಶುಭಚರಣ ಸರಸಿಜದಿ ಶಿರ
ವಿರಿಸಿ ಸುಗಿರೋಚ್ಚರಿಸಿ ಅಖಿಳೊ
ಪ್ಪಿರಿಸಿ ವಿಷಯ ಸ್ಪರ್ಶವಿಲ್ಲದ ಅರಸ ನೀನೆ ಕಣಾ ಜಾ
ಣರೊಳು ಜಾಣ ಪ್ರಾಣ ಮುಖ್ಯಪ್ರಾಣ ಕೇಣಿ
ಗರ ಗಂಟಲಗಾಣ ಪ್ರವೀಣ ಹನುಮ ೪

ವಾಸವಾರಿಯ ಘಾಸಿಗಂದು ಕ
ಪೀಶರಳಿದಿರಲಾಸಮಯದೊ
ಳೌಷಧವ ತಂದಾಸಮರ್ಥರ ಪೊರೆದ ಕಪಿವರದ
ಶ್ರೀಶ ವರದ ಪ್ರಸನ್ನವೆಂಕಟಾ
ಧೀಶ ಭೃತ್ಯೋಲ್ಲಾಸ ಅಜಪದ
ಧೀಶ ಮೂರವತಾರಿ ಸುಖಕಾರಿ ಸದಾಶೂರಿ ಸ

ಮೀರ ಕುಮಾರ ಭಾರತ ಧೀರ
ಸಾರ ಯಂತ್ರೋದ್ಧಾರ ತತ್ವವಿಚಾರ ೫

೧೫೫

ಭೂರಿ ಕರುಣಿ ಹನುಮ ಪಾಲಿಸು ಪ.

ಬೀರಕಬ್ಬಿಯ ಕೃಷ್ಣಾತೀರನಿವಾಸ
ಭಾರತಮಲ್ಲ ಬುಧರ ಪರಿತೋಷ ಅ.ಪ.

ಕರ್ತನ ನೇಮದಿ ಕಡಲ ಕಾಲುವೆ ಮಾಡಿ
ಅರ್ತಿಲಿ ದಾಟಿ ರಕ್ಕಸರ ಪಟ್ಟಣದಿ
ಕೀರ್ತಿಯ ಬೆಳಗಿದೆ ವನವ ಕಿತ್ತು ವಿನೋದ
ಮೂರ್ತಿ ಬಲ್ಲಿದ ರಾಮನ ಬಂಟನಹುದೊ ೧

ಭೀಕರ ಅಕ್ಷ ಮೊದಲಾದರೊದೆದು
ಏಕಜ್ವಾಲೆಯಲಿ ಲಂಕೆಯ ಸುಟ್ಟು ನಲಿದು
ಕಾಕುತ್ಸ್ಥನಿಗೆ ಸೀತೆ ಕುಶಲವ ಮುಟ್ಟಿಸಿದೆ ಮೂ
ಲೋಕದಿ ನಿನಗೊಬ್ಬ ಸಮನೆನ್ನಬಹುದೆ ೨

ಅತಿ ಘಾತಿಸಿಕೊಂಡು ಕಪಿಗಳು ರಣದಲಿ
ಮೃತ ವಿಕ್ರಮರಾಗಿ ಹರಣಗುಂದಿರಲು
ಮೃತ ಸಂಜೀವನವ ತಂದು ರಕ್ಷಿಸಿದೆ ಅ
ಪ್ರತಿಮ ಪ್ರಸನ್ವೆಂಕಟೇಶಗರ್ಪಿಸಿದೆ ೩

೧೫೬

ಶ್ರೀಕರ ಚರಿತ್ರ ಅಂಜನೆಯ ಪುತ್ರ
ಸಕಲ ಲೋಕೇಶ ಸಲಹಯ್ಯ ಬಾಲ ಹನುಮಯ್ಯ ಪ.

ಸಿದ್ಧ ಮುನಿಸೇವ್ಯ ಸೀತಾಶೋಧಕಾಭಯ
ಶುದ್ಧ ವಿಜ್ಞಾನನಿಧೆ ಅಪ್ರಮೇಯ
ಉದ್ಧಟ ದಶಾಸ್ಯಮದಹರಣ ಬುಧಜನಪ್ರಾಣ
ಖದ್ಯೋತ ಕೋಟಿ ತೇಜಾತ್ಮಾಂತರಾತ್ಮ ಶ್ರೀ ೧

ಲಂಕಾ ಭಯಕಾರ ರಘುರಾಮಂಘ್ರಿ ಕಂಜಭ್ರಮರ
ಶಂಕರಹಿತ ನಿಶಾಚರ ಭೀಕರ
ಪಂಕಜಪ್ರಿಯ ಬಾಲಯತಿ ಕಾರ್ಯಪಾರಶೀಲ
ಸಂಖ್ಯಾವಿರಹಿತವೀರ್ಯ ಸುರವರಾರ್ಯ ೨

ಶತಕೋಟಿ ರಾಮಾಯಣಗಾನ ಪ್ರವೀಣ
ಸೀತಾಸುಖಪದಗ ಸೋಮಕುಲಲಲಾಮ
ಯತಿರೂಪ ತತ್ವಪ್ರದೀಪ ಪೂರ್ಣ ಪ್ರತಾಪ
ಸತತ ಪ್ರಸನ್ನವೆಂಕಟ ಸ್ಮರಣಕರ ೩

ರುದ್ರದೇವರು

೧೫೭

ಪಾಹಿಮಾಂ ಪಾಹಿ ಪಾರ್ವತೀಪತೆ ಪ.

ಪಾಹಿ ಪಾಹಿ ಗಂಗಾಹಿಮಕರಧರ
ದೇಹಿಕ ಸುರತರೊ ಮೋಹನಮೂರ್ತೆ ೧

ದರ್ಪಕ ಮದಹರ ಅರ್ಪಕ ಮಂದರ
ಸರ್ಪವಿಭೂಷಣ ಕರ್ಪೂರ ಕಾಯ ೨

ಗುಹಗಣಪತಿಪಿತ ಗಜಮಥನ ವೃಷ
ವಾಹನ ಪೂಜಕ ವಾಹಿನಿಪಾಲ ೩

ತ್ರ್ಯಂಬಕ ದುರಿತಕದಂಬ ನಿವಾರಕ
ಸಾಂಬ ಸದಾಶಿವ ಅಂಬರಕೇಶ ೪

ಕಪಟಿ ಜನಾರ್ದಕ ತಪನನಿಚಯಧುತೆ
ತ್ರಿಪುರಾಂತಕ ಭವವಿಪಿನಕೃಶಾನೊ ೫

ಪ್ರಮಥಜನಾರ್ಥಿತ ಅಮಿತ ದಯಾನಿಧೆ
ಸುಮತಿ ಕುಲೇಶ್ವರ ಕುಮತಿಖಳಾರೆ ೬

ಕರುಣಾಕರ ಸುಖಕರಣ ಭುವನ ನುತ
ಚರಣಯುಗಳ ಖಳವಾರಣ ಪ್ರಹರಣ ೭

ಶೂಲ ಡಮರ ಸುಕಪಾಲಧರ ಶಿರೋ
ಮಾಲಾನ್ವಿತ ಗುಣಜಾಲ ಸುಶೀಲ ೮

ಭಾಸುರ ಶುಭಕೈಲಾಸನಿಲಯ ಭೂತೇಶ
ಪ್ರಸನ್ವೆಂಕಟೇಶ ಭಟೇಶ ೯

೧೫೮

ಬಿಲ್ವೋದೇಶ್ವರ ಶ್ರೀ ಮದುಮಾ
ವಲ್ಲಭ ಸಂತತ ಪಾಲಯಮಾಂ ಪ.

ನಾಕಪವಂದ್ಯ ಕೃಪಾಕರ ಪಾಪ
ನೇಕ ನಿವಾರಕ ಮೂಕಹರ
ಲೋಕೇಶೇಶ ನಿಶಾಕರ ಶೇಖರ
ಶ್ರೀಕರಕಾಯ ಪಿನಾಕಧರ ೧

ಭುಜಗಾಭರಣ ಗಜಮದಹರಣ
ಗಜ ಚರ್ಮಾಂಬರ ಸುಜನವರ
ದ್ವಿಜರವಿ ವೃಷಧ್ವಜಾಸಮಲೋಚನ
ರಜನೀಚರ ತ್ರಿಪುರಜಮಥನ ೨

ದುರ್ಧರ್ಷಾಂಧಕ ಮರ್ದಕ ಶಂಭೊ
ನಿರ್ದೋಷ ಶ್ವೇತಾದ್ರಿ ಪ್ರಭೊ
ಸ್ವರ್ಧುನಿ ಸಹಿತ ಕಪರ್ದಿನ್ ಶಿವಶಿವ
ಊರ್ಧ್ವ ಪಟಾರ್ಚಕ ವದನ ಭೋ ೩

ಗರಕಂಧರ ವೃಷಚರ ಅದ್ಭುತ ನಿ
ಕರ ಪರಿಚರ ಪಾಂಡುರಗಾತ್ರ
ಶಿರಮಾಲಾನ್ವಿತ ಸ್ಫುರತ್ಕಪಾಲಿನ್ಹರ
ಹರ ಭವ ಸುಖಕರ ಮೂರ್ತೆ ೪

ಶಂಕರ ಸುಗುಣಾಲಂಕೃತ ಭಕ್ತಾ
ತಂಕವಿದೂರಕ ಶಂಖ ರಥಾಂ
ಗಾಂಕಿತ ಪ್ರಸನ್ವೆಂಕಟ ನಾಯಕ
ಕಿಂಕರ ಜನಪ್ರಿಯ ತ್ವಂ ಕೃಪಯಾ ೫

೧೫೯

ಬೇಸರದೆಂದೂ ಸದಾಶಿವನೆನ್ನಿ
ಕಾಶಿಯ ಪ್ರಭು ವಿಶ್ವೇಶ್ವರನೆನ್ನಿ ಪ.

ನಂದಿವಾಹನ ಆನಂದನು ಎನ್ನಿ
ಸುಂದರ ಗಣಪನ ತಂದೆಯು ಎನ್ನಿ ೧

ನಂಬೆ ಭವಾಂಬುಧಿ ಅಂಬಿಗನೆನ್ನಿ
ಅಂಬಿಕೆಯರಸು ತ್ರಯಂಬಕನೆನ್ನಿ ೨

ಕರ್ಪರ ಭಾಂಡ ಕಂದರ್ಪಹರೆನ್ನಿ
ಸರ್ಪಭೂಷಣ ಸುಖದರ್ಪಣನೆನ್ನಿ ೩

ಬೇಡಿದ ಭಾಗ್ಯವೀಡಾಡುವನೆನ್ನಿ
ಬೇಡನ ಭಕುತಿಗೆ ಕೂಡಿದನೆನ್ನಿ ೪

ಶಂಭು ಗಜದ ಚರ್ಮಾಂಬರನೆನ್ನಿ
ಸಾಂಬ ಸುಗುಣ ಕರುಣಾಂಬುಧಿಯೆನ್ನಿ ೫

ಎಂದಿಗೂ ಭಾವಿಕ ಮಂದಿರನೆನ್ನಿ
ಇಂದುಶೇಖರ ನೀಲಕಂಧರನೆನ್ನಿ ೬

ದುರ್ದನುಜಾಂಧಕ ಮರ್ದಕನೆನ್ನಿ ಕ
ಪರ್ದಿ ಕೃಪಾಲತೆವರ್ಧಕನೆನ್ನಿ ೭

ಶರಣು ಸುರಾರ್ಚಿತ ಚರಣನೆ ಎನ್ನಿ
ಶರಣಾಗತರಾಭರಣನು ಎನ್ನಿ ೮

ತ್ರಿಪುರಾಂತಕ ನಿಷ್ಕಪಟನು ಎನ್ನಿ
ಅಪಮೃತ್ಯುಹರ ಖಳರಪಹರನೆನ್ನಿ ೯

ದಕ್ಷಯಜ್ಞವೀಕ್ಷಕನೆನ್ನಿ
ಪಕ್ಷಿಗಮನ ಭಟರಕ್ಷಕನೆನ್ನಿ ೧೦

ಈ ಪರಿ ನೆನೆದರೆ ಪಾಪದೂರೆನ್ನಿ
ಶ್ರೀ ಪ್ರಸನ್ವೆಂಕಟಗತಿ ಪ್ರೀತೆನ್ನಿ ೧೧

೧೬೦

ಸಲಹು ಸಲಹು ನನ್ನಯ್ಯನೆ
ಸಲಹು ಸಲಹು ಪ.

ಶ್ರೀಗಿರಿವಾಸ ನಾಗವಿಭೂಷ
ಯೋಗಿಜನೇಶಾಘೌಘವಿನಾಶ ೧

ಗಜದ ಸುಚೈಲಿ ಅಜನ ಕಪಾಲಿ
ದ್ವಿಜ ಮೌಳಿ ಅಂಗಜಹರ ಶೂಲಿ ೨

ಸ್ಫಟಿಕ ಸುಗಾತ್ರ ಪಟೂಜ್ವಲ ನೇತ್ರ
ಕುಟಿಲ ಪ್ರಸನ್ವೆಂಕಟಪತಿ ಪೌತ್ರ ೩

೧೬೧

ಹರಹರ ಪುರಹರ ಗಿರಿಜಾಮನೋಹರ
ಸುರವರ ಕರುಣಾಕರನೆ ನಮೋ ನಮೋ
ಶರಣರ ಸುರತರು ವರ ಪಂಪಾಪತಿ
ವಿರೂಪಾಂಬಕ ಹೊರೆ ಶುಭದಿ ಪ.

ಮದನಮಥನ ಪಂಚವದನ ಕೈಲಾಸದ
ಸದನ ಸದಾಶಿವ ನಮೋ ನಮೋ
ಹದಿನಾಲ್ಕು ಭುವನದ ಹದನ ಬಲ್ಲರಿಜಿತ
ಕದನ ಕಲುಷಹರ ನಮೋ ನಮೋ ೧

ತಾರಕಪತಿಧರ ಭೂರಿಕೃಪಾಂಬುಧಿ
ತಾರಕಹರಪಿತ ಜಯ ಜಯ
ತಾರಕ ಉಪದೇಶಕಾರಕ ಘನಭವ
ತಾರಕ ಮೃತ್ಯುಂಜಯ ಜಯ ೨

ಶೇಷಾಭರಣ ವಿಭೂಷಾಭವ ವಿ
ಶೇಷ ಭಕುತಪ್ರಿಯ ವಿಭೋ ವಿಭೋ
ಶೇಷಭೂಭೃತ್ ಪೋಷ ಪ್ರಸನ್ವೆಂಕ
ಟೇಶ ಭಜನಶೀಲ ವಿಭೋ ವಿಭೋ ೩

ಶ್ರೀತುಳಸಿ

೧೬೨

ಶ್ರೀ ತುಳಸಿ ಮಹಿಮೆಯನು ಪೊಗಳಲಳವಲ್ಲ ಶ್ರೀ
ನಾಥ ನಾರಾಯಣನ ಅರ್ಚನೆಗೆ ಸರ್ವದಾ

ಪ್ರೀತಿಕರಳಾಗಿ ರಾಜಿಪಳು ಕಲಿಯುಗದಲ್ಲಿ ನೋಂತವರ
ಭಾಗ್ಯವೆಂತೊ ಪ.

ಶ್ರೀಮದಾರ್ಜಿತ ಕ್ಷೀರವಾರಿಧಿಯ ಮಥಿಸುತಿರೆ
ಆ ಮಹಾವಿಷ್ಣುವಿನ ನೇತ್ರದಿಂದಲಿ ಹೊರಟ
ಪ್ರೇಮಜಲದುದ್ಭವಿಸಿ ನಳನಳಿಸಿ ದಿವ್ಯ ಆಮೋದ ಪೂರ್ಣಳಾಗಿ
ಭೂಮಿ ಪಾವನವ ಮಾಡುತಲಿ ಭೂನಿರ್ಜರರ
ಧಾಮ ಧಾಮಗಳಲ್ಲಿ ವೃಂದಾವನದಿ ನೆಲಸಿ
ಕಾಮಿತ ಫಲವನೀವ ಕಲ್ಯಾಣಿ ಕೃಷ್ಣನಿಗೆ ನೇಮದಿಂ ಪ್ರಿಯಳಾದ ೧

ಈ ಮನುಜ ದೇಹದಲಿ ದಾವ ಪ್ರಾಣಿಯು ಪಿತೃ
ಸ್ತೋಮವನ್ನುದ್ಧರಿಪೆನೆಂದರೆ ಸುಲಭ ಸಾಧ್ಯ
ಕೋಮಲ ದಳವನೊಂದು ತಂದು ಮಾಧವನ ಚರಣ
ತಾಮರಸಕರ್ಪಿಸುವದು
ತಾ ಮುನ್ನ ಮಾಡಿದಘ ಪಂಚಕಗಳೋಡಿದವು
ಸಾಮಾನ್ಯವಲ್ಲ ತುಳಸಿಯ ವನವ ಸೋಂಕಿ ಬಂ
ದಾ ಮರುತದಿಂದ ದೇಶ ಗ್ರಾಮಗಳು ಪಾವನವು
ಧೀಮಂತ ಮಾನ್ಯಳಾದ ೨

ತುಳಸಿ ನೆಳಲಲ್ಲಿ ಅಂಕುರಗಳೆದ್ದಲ್ಲಿ ಪಿತೃ
ಗಳಿಗನ್ನವಿತ್ತರಕ್ಷಯಫಲವು ಊರ್ಧ್ವಮಂತ್ರ
ತಳದ ಮೃತ್ತಿಕೆಯಲಿಟ್ಟರೆ ಕೋಟಿ ತೀರ್ಥಗಳ ಮುಳುಗೆದ್ದ
ಫಲ ಸಿದ್ಧವು
ನಿಲಯದಲಿ ಪತ್ರ ಮೃತ್ತಿಕೆ ಕಾಷ್ಠವಿರಲಲ್ಲಿ
ಕಲಿ ಮುಟ್ಟಲಂಜಿ ತೊಲಗುವನು ಮಣಿಸರಗಳನು
ಗಳದೊಳಾಂತರಾ ಕಲುಷ ಸಂಹರವು ಸಹ ಸಲೆ
ವಿಷ್ಣುಪದವಿಯನೀವ ೩.

ಶತಸಾಸಿರಪರಾಧವಿರಲಿನ್ನು ಮೃತ್ತಿಕೆಲಿ
ಪಿತ ಕಾಯದನಿಗೆ ಬಹುಜನ ನೋಡೆ ವಿಘ್ನಗಳ

ಗತಿಯುಡುಗಿ ದುಷ್ಟಗ್ರಹಗಳೆಲ್ಲನುಕೂಲಗತಿಯಾದ ಫಲವೀವವು
ಪ್ರತಿದಿನದಿ ನಾಭಿಕಕರ್ಣದಲಿ ಶಿರದಲ್ಲಿ ಶ್ರೀ
ಪತಿಯ ನಿರ್ಮಾಲ್ಯದಳ ಧರಿಸಿ ಹರಿಪಾದ ತೀ
ರಥವೊಮ್ಮೆ ಸೇವಿಸಿದವರ ಮುಕ್ತಿ ಕರತಳವು ಪತಿತಪಾವನಿ
ಎನಿಸುವಾ ೪

ದರುಶನದಿ ಸ್ಪರುಶನದಿ ಧ್ಯಾನದಿಂ ಕೀರ್ತನೆಯು
ನಿರುತ ಪ್ರಣಾಮಗಳು ಸ್ತೋತ್ರದಾರೋಪಣಿಂ
ಪರಮಜಲ ಶೇಚನಾರ್ಚನ ನಿಷ್ಠೆಯಿಂದ ನವ ಪರೀಕ್ಷೆಯನು
ಮಾಡಲು
ಹರಿಚರಣ ಕಮಲರತಿ ದೊರಕಿ ಯುಗ ಕೋಟಿ ಸಾ
ಸಿರ ಕಾಲ ತಿರುಗಿ ಬಂದರೆ ಸತತ ಮಾಂಗಲ್ಯ
ಹರಿಯ ಮನೆಯಲ್ಲಿ ನಿಜ ಹರುಷವನ್ನುಂಬುವರು ಮುರಾರಿ
ವರದಂತೆ ಪದವ ೫

ಒಂದೊಂದು ದಳ ಕೋಟಿ ಸ್ವರ್ಣಭಾರಕೆ ಮಿಗಿಲು
ಎಂದು ವಿಶ್ವಾಸದಲಿ ತಂದು ಸಾಸಿರನಾಮ
ದಿಂದ ಗೋವಿಂದಗರ್ಪಿಸಿದರಿಲ್ಲಿಹ ಭವದಂದುಗವು ಮಾನಿಸರ್ಗೆ
ಸುಂದರ ತುಲಸಿ ಮೂಲವನ್ನು ತೊಡಕಿರ್ದ ಕಳೆ
ಯಂದೆಗೆದು ಶಾಖೋಪಶಾಖದಿಂ ವೃದ್ಧಿಸಾ
ನಂದವಿತ್ತರಾ ನೂರೊಂದು ಕುಲ ನರಕವನು ಹೊಂದಲೀಸರು
ಪುಣ್ಯದಾ ೬

ಶ್ರೀ ವಿಷ್ಣುವಲ್ಲಭೆಯ ಮೂಲದಲಿ ತೀರ್ಥಗಳು
ಬಾವನ್ನಗಂಧಿಯಳ ಮಧ್ಯದಲಿ ಸುರನಿಕರ
ಪಾವನಿಯಳಾ ಹರಿಯ ಕೊನೆಯಲಿ ಶ್ರುತಿ ಸಮೂಹ
ಲಾವಣ್ಯ ಗುಣರಾಸಿಯು
ಭಾವಶುದ್ಧಿಯಲಿ ಉದಯದಿ ಸ್ಮರಿಸಿ ನಿರುತದಿ
ನಾವ ಕಾರ್ಯಕೆ ಗೆಲುವು ಇಹಪರದ ಸೌಖ್ಯವಿ
ತ್ತಾವ ಕಾಲಕ್ಕೆ ಹೊರೆವ ಪ್ರಸನ್ನವೆಂಕಟ ದೇವನಂಗ ದೊಳೊಪ್ಪುವಾ ೭

ಸುಬ್ರಹ್ಮಣ್ಯ

೧೬೩

ಸಂತತಂ ತೋಷಂ ದೇಹಿ ತ್ವಂ ದೇಹಿ
ಶ್ರೀ ಸುಬ್ರಹ್ಮಣ್ಯ ದೇಹಿ ತ್ವಂ ದೇಹಿ ಪ.

ದೇಹಿ ದೇಹಿ ತವ ಸ್ನೇಹ ಸುಖ ವಚಂ
ಬ್ರೂಹಿ ಸುವಚನಂ ಗಹನ ಜ್ಞಾನಂ ೧

ಅಭ್ರೋಡುಪ ನಿಭ ಶುಭ್ರಶರೀರಾ
ದಭ್ರ ದಯಾನಿಧೆ ವಿಭ್ರಾಜಿತಶಂ ೨

ವಾಸವ ಸೇನಾಧೀಶ ಖಳಾನ್ವಯ
ನಾಶ ಸ್ವಜನ ಪರಿಪೋಷ ಸುತೋಷಂ ೩

ಭೂರಿ ಫಲದ ಭಯದೂರ ಕುಮಾರ ಕು
ಮಾರ ಸುಧಾರಾತೀರಗ ಸುಮತಿಂ ೪

ಪನ್ನಗ ನೃಪ ಸುಪನ್ನಗನಗಪ ಪ್ರ
ಸನ್ನವೆಂಕಟಪತಿ ಚಿನ್ಮಯ ಭಕ್ತಿಂ ೫

ಕೃಷ್ಣವೇಣಿ

೧೬೪

ನಮೋ ನಮೋ ಕೃಷ್ಣವೇಣಿ
ನಮೋ ನಮೋ ಕೃಷ್ಣವೇಣಿ ಕಲ್ಯಾಣಿ ಪ.

ಈ ಜನ್ಮದಘವು ನಾನಾ ಜನ್ಮಕೃತದೋಷ
ಆರ್ಜಿತವಾದ ಪಂಚ ಮಹಾಪಾಪವು

ತ್ರಿಜಗತ್ಪಾವನಿಯೆ ನಿನ್ನ ಕಂಡು ನಾ ಕಳೆದೆ
ರಾಜಿಸುವ ದಿವ್ಯಗತಿಯೀಯೆ ಎನ್ನತಾಯೆ ೧

ವಿಪ್ರಮುನಿ ಸುರನರರು ಕನ್ಯಕ್ಕೆ ಗುರು ಬರಲು
ಕ್ಷಿಪ್ರ ನೆರೆದರು ಉಭಯತೀರವಿಡಿದು
ಸುಪ್ರಾರ್ಥನೆಯ ಮಾಡಿ ಆನಂದದಿ ಹರಿಯ
ನೆ ಪ್ರಸನ್ನೀಕರಿಸಿಕೊಳ್ಳುವರಮ್ಮ ೨

ನಿರ್ಮಳಾತ್ಮಕೆ ಗಂಗೆ ಸಂಗೆ ಗುಣೋತ್ತುಂಗೆ
ಹಿಂಗಿಸು ಭವವ ಪಾವನತರಂಗೆ
ಜಂಗಮ ಜಡಾತ್ಮರನುದ್ಧರಿಸುತಿಹೆ ಸದಾ
ಮಂಗಳ ಶ್ರೀಪ್ರಸನ್ವೆಂಕಟನೊಲುಮೆಯಲ್ಲಿ ೩

೨ (ಅ) ಗುರುಸ್ತುತಿ

೧೬೫

ಅಗಲಿ ಜೀವಿಸಬಹುದೆ ಕರುಣಿಯನಗಲಿ ಜೀವಿಸಬಹುದೆ ಪ.

ಆಗಮಜ್ಞನ ಬುಧ ಉಡುಗಣ ಚಂದ್ರನ
ವಿಗಡ ಜನಾರ್ದನವರ್ಯರನುಳಿದು ಅ.ಪ.

ಇಳೆಯೊಳು ಸುರತರುವಿಲ್ಲದ ಕಾರಣ
ನಳಿನನಾಭಾಜ್ಞದೊಳವತರಿಸಿ
ನೆಳಲೊಳಿರಿಸಿ ಬಹುಸಲಹಿ ಕರವ ಬಿಟ್ಟು
ಸಲೆ ಹರಿಪುರಕೆ ಪೋಗಿಹ ಮಾತಾಪಿತನ ೧

ಆರುಕರ್ಮಕ್ಕೆ ಎಳ್ಳನಿತು ಕುಂದಿಲ್ಲದೆ
ಮೀರದೆ ಹರಿಪದಸೇವೆಯನು
ಸೂರೆ ಮಾಡಿದ ತತ್ವಸಾರವ ಜನರೊಳು
ಮೀರಿದ ಸುಗುಣನ ಪರಮಪಾವನನ ೨

ಸೀತಾಪತಿಯ ಪಾದಯಾತ್ರೆಯ ಕಾಲಕೆ
ಇತರ ವಿಷಯ ಭ್ರಾಂತಿಯ ಜರಿದು
ಪ್ರತತಿಮತಿಗುಣಾನ್ಮುಕ್ತಿಮೇತೇ ವ್ರಜಂತಿಯೆಂದು
ಪಥವಿಡಿದ ಪ್ರಸನ್ವೆಂಕಟೇಶ ಪ್ರಿಯನ ೩

೧೬೬

ಇಂದೆ ಕಂಡೆವು ಗುರುರಾಯನ ನಮ್ಮ
ತಂದೆ ಸತ್ಯಾಭಿನವತೀರ್ಥನ ಫಲಿಸ
ಬಂದೊದಗಿತು ನಮ್ಮ ಸುಕೃತ ಆ
ನಂದರಸಾಬ್ಧಿ ಉಕ್ಕೇರಿತು ಪ.

ಇದೀಗೆ ಕಲ್ಪದ್ರುಮ ಕಾಣಿರ್ಯೆ ಅಹು
ದಿದೀಗೆ ಚಿಂತಾಮಣಿ ನೋಡಿರ್ಯೆ ಮತ್ತಿ
ದಿದೀಗೆ ಸುರಭಿ ಬಂದಿತೆನ್ನಿರ್ಯೆ ತಮ್ಮ
ಮುದದಿಂದ ಯತಿರೂಪವಾಯಿತ್ಯೆ ೧

ಬಡವರ ದೊರೆ ನಮ್ಮ ಗುರುರಾಯ ಈ
ಪೊಡವಿಲಿ ಯಾಚಕರಾಶ್ರಯ ಆಪ್ತ
ಹಡೆದ ತಾಯಿತಂದೇರ ಮರೆಸಿದ ಎ
ಮ್ಮೊಡೆಯ ಭಕ್ತಿ ಭಾಸವ ಬೆಳೆಸಿದ ೨

ಭಕ್ತಿ ಪಥವ ನೋಡಿ ನಡೆವನು ಯತಿ
ಮುಕುಟಮಣಿಗೆ ಸರಿಗಾಣೆನು ಜ್ಞಾನ
ಸುಖದ ಬಳ್ಳಿಯ ಬೆಳೆ ಬೆಳೆಸಿದ ಸಲೆ
ಮುಕ್ತಿ ಮಂದಿರ ವಾರ್ತ್ಯರುಹಿಸಿದ ೩

ಒಂದೊಂದು ಗುಣಗಳ ಮಹಿಮೆಯು ಮ
ತ್ತೆಂದಿಗೆ ಹೊಗಳಲಿ ತೀರವು
ಹಿಂದಾದ ಪೂತರು ಅಹರು ಯ
ತೀಂದ್ರನ ಸಾಮ್ಯಕೆ ಸರಿಯಾರು ೪

ಗುರುಭಕ್ತಿ ನೆಲೆ ಕಳೆ ಮರೆಯದೆ ಶ್ರೀ
ಧರಜೆ ರಾಘವಪಾದ ಜರಿಯದೆ ದೇವ
ವರವೇದವ್ಯಾಸನ ಸೇವೆಗೆ ಒಂ
ದರಘಳಿಗ್ಯಲಸ ತಾನೆಂದಿಗೆ ೫

ಹೊನ್ನ ತೃಣದೊಲು ಸೂರ್‍ಯಾಡಿದ ವಿ
ದ್ಯೋನ್ನತರ ತವರುಮನೆಯಾದ
ಮನ್ನಿಪ ಸುಜನಚಕೋರವ ಹೊರವ
ಪೂರ್ಣ ಚಂದಿರನಂತಲ್ಲೊಪ್ಪುವ ೬

ತಪ್ತಲಾಂಛನ ತೀರ್ಥವೀವಾಗ ಭೃತ್ಯ
ರುಪಟಳಕೊಲಿದು ನಲಿವನಾಗ
ಕಪಟವ ಲೇಶಮಾತ್ರರಿಯನು ಇಂಥ
ಗುಪ್ತ ಮಹಿಮಗೆಣೆಗಾಣೆನು ೭

ಸಕಳ ಪುರಾಣೋಕ್ತ ದಾನವ ಬಿಡ
ದಖಿಳ ಧರ್ಮವನೆಲ್ಲ ಮಾಡುವ
ನಿಖಿಳ ತತ್ವವನೊರೆದು ಹೇಳುವ ಈ
ಅಕಳಂಕನೆಂದೂ ನಮ್ಮನು ಕಾವ ೮

ಕಷ್ಟ ಮೌನದಿ ವಾರಣಾಸಿಯ ಬಹು
ಶಿಷ್ಟರ ಸಲಹುತ ಯಾತ್ರೆಯ ಮಾಡಿ
ತುಷ್ಟಿ ಬಡಿಸಿದಲ್ಲಿ ವಾಸರ ಬೇಡಿ
ದಿಷ್ಟಾರ್ಥವನೀವನು ದಾಸರ ೯

ಪ್ರತಿದಿನ ಗುರುಪಾದುಕೆಯನಿಟ್ಟು ಮೇಲೆ
ನೂತನ ವಸನ ಹೊನ್ನಾರ್ಚನೆಗಿಟ್ಟು ಮುಂದೆ
ನುತಿಸಿ ಹಿಗ್ಗುವ ನವಭಕುತಿಂದ ಈ
ವ್ರತಕಾಗಲಿಲ್ಲ ಒಂದಿನ ಕುಂದು ೧೦

ಶ್ರೀ ಭಾಗವತ ಶಾಸ್ತ್ರ ಟೀಕನು ಹರಿ
ಗಾಭರಣವ ಮಾಡಿಟ್ಟನು
ಈ ಭೂಮಿಲಿಹ ಶಿಷ್ಯ ಜನರನು ತತ್ವ
ಶೋಭಿತರನು ಮಾಡಿ ಹೊರೆದನು ೧೧

ಬಲುಹಿಂದ ಯವನನ ಬಲದಲ್ಲಿ ಕೃಷ್ಣ
ಒಳಪೊಕ್ಕು ಸದೆದ ಪರಿಯಲ್ಲಿ
ಕಲಿನೃಪ ಮ್ಲೇಚ್ಛನ ಬಂಧನ ತಪೋ
ಬಲದಿಂದ ಗುರುರಾಯ ಗೆಲಿದನು ೧೨

ಭಕ್ತಿ ವಿರತಿ ಜ್ಞಾನಪೂರ್ಣನು ಸೇ
ವಕ ಜನರಿಗೆ ಪ್ರಾಣಪ್ರಿಯನು
ಪ್ರಕಟಿಸಿದನು ನಿಜಕೀರ್ತಿಯ ನಿತ್ಯ
ಸಕಲ ಸದ್ಗುಣಗಳ ವಾರ್ತೆಯ ೧೩

ಈ ಪರಿ ಬಹು ಪಟ್ಟವಾಳುತ ದಿವ್ಯ
ಶ್ರೀಪಾದವ್ರತ ಪೂರ್ಣ ತಾಳುತ
ಸ್ಥಾಪಿಸಿದನು ಮಧ್ವಸಿದ್ಧಾಂತ ದುಷ್ಟ
ಕಾಪುರುಷರ ಮೊತ್ತ ಗೆದ್ದಾತ ೧೪

ಹರಿಗುಣ ಜಿಜ್ಞಾಸೆಯಿಂದ ಶ್ರೀ
ಹರಿಮೂರ್ತಿ ಧ್ಯಾನ ಚಿಂತನೆಯಿಂದ ಶ್ರೀ
ಹರಿನಾಮ ಸ್ಮರಣಶ್ರವಣದಿಂದ ಶ್ರೀ
ಹರಿ ಪ್ರೀತಿಬಡಿಸಿದ ನಲವಿಂದ ೧೫

ನಿರುತ ಉದಯಸ್ನಾನ ಮೌನವ ಶ್ರೀ
ಗುರು ಮಧ್ವಶಾಸ್ತ್ರವ್ಯಾಖ್ಯಾನವ ಮಹಾ
ಗೀರ್ವಾಣ ವಾಕ್ಯದಿಂದ ಪೇಳುವ ಆತ್ಮ
ಗುರುಗಳ ಸ್ಮರಣೆಯ ಮಾಡುವ ೧೬

ಗುರು ಸತ್ಯನಾಥರ ತಂದನು ನಿಜ
ಗುರುಪದವೇ ಗತಿಯೆಂದನು ತನ್ನ
ಸ್ಮರಣೇಲಿ ಇಹರ ಕಾವನು ಬೇಡಿ
ದರೆ ಅಭೀಷ್ಟಾರ್ಥವನೀವನು ೧೭

ಗುರುಸತ್ಯನಾಥಾಬ್ಧಿ ಸಂಜಾತ ಸಜ್ಜ
ನರ ಹೃತ್ಕುಮುದ ತಾಪ ಸಂಹರ್ತ
ಸರಸ ಸುಧಾಂಶು ವಾಕ್ಯಾನ್ವಿತ ಸಿತ
ಕರನಹುದಹುದಯ್ಯ ಧರೆಗೀತ ೧೮

ಆವ ಪ್ರಾಣಿಯು ಗುರುಮಹಿಮೆಯ ಸ
ದ್ಭಾವದಿ ನೆನೆಯಲು ಸುಖಿಯಾದ
ದೇವ ಪ್ರಸನ್ವೆಂಕಟಾದ್ರೀಶ ಅವ
ಗಾವಗೆ ಪಾಲಿಪ ಮದ್ವೇಶ ೧೯

೧೬೭

ಎಂಥ ಉಪಕಾರಿಗಳು ಸುಜನರು ಶ್ರೀ
ಕಾಂತ ನಿನ್ನೊಲುಮೆಯ ಉಪಾಯದೋರುವರು ಪ.

ಅಜ್ಞಾನ ಕತ್ತಲೆಯೊಳು ಎಡಹಿ ನಡೆಗೆಟ್ಟಡಿ(ಯವ?)ರಿಗೆ
ಸುಜ್ಞಾನವೆಂಬ ಅಂಜನವನಿಟ್ಟು
ಪ್ರಜ್ಞಾಪೂರ್ಣರ ಶಾಸ್ತ್ರಪ್ರಭೆಯಲ್ಲಿ ಪಥವಿಡಿಸಿ
ಯಜ್ಞೇಶ ನಿನ್ನ ಬಳಗವ ಕೂಡಿಸುವರೊ ೧

ಭವತಾಪದಲಿ ಬಳಲಿ ಎದೆಯಾರಿದರಿಗೆ ಸ
ನ್ನವಭಕ್ತಿಯಮೃತ ರಸವಾರಿನಿಧಿಯ
ಸವಿದೋರಿ ಸ್ನಾನಪಾನವ ಕಲಿಸಿ ಸುಖವಿತ್ತು
ಸವಿಯದಾನಂದ ಉರದಲಿ ಪೊಯ್ದಿಡುವರು ೨

ವಿಷಮ ವಿಷಯ ಧ್ಯಾನ ದಾರಿದ್ರ್ಯ ಪೀಡಿತ ಮಾ
ನುಷರ ಜಂಗುಳಿಗೆ ವೈರಾಗ್ಯವೆಂಬ
ಅಸಮಭಾಗ್ಯವನಿತ್ತು ಭವ ಬಿಡಿಸಿ ಸಲಹಿ ಅಕ
ಲ್ಮಷ ಪ್ರಸನ್ನವೆಂಕಟಪತಿಯ ನಂಬಿಸಿದರು ೩

೧೬೮

ಎಷ್ಟೆಂದು ಬಣ್ಣಿಪೆ ಗುರುಸತ್ಯಪೂರ್ಣನ
ದೃಷ್ಟಾಂತವ ಕಾಣೆನಾ
ಶಿಷ್ಟ ಜನರಿಗೆ ಚಿಂತಾಮಣಿ ದೊರಕಿದಂ
ತಿಷ್ಟಾರ್ಥದಾಯಕನಾ ಪ.

ಶ್ರೀರಾಮ ವ್ಯಾಸರ ಸೇವೆಗೆ ಪೂರ್ವದ
ಲ್ಲಾರಾಧನೆ ಮಾಡುತ
ಧಾರುಣಿ ಮೇಲವತರಿಸಿದ ದ್ವಿಜಕುಲ
ವಾರಿಧಿ ಚಂದ್ರನಂತೆ ೧

ವೇದ ವೇದಾಂತ ಸಕಳಶಾಸ್ತ್ರ ಕ್ಷಿಪ್ರ
ದಿಂದೋದಿ ಶ್ರೀ ಮಧ್ವಶಾಸ್ತ್ರ
ಬೋಧವ ಕೇಳಿ ಮಹಾಭಕುತಿಲಿ ಗುರು
ಪಾದಾಬ್ಜ ನಂಬಿ ನಿಂತ ೨

ಬ್ರಹ್ಮಚರ್ಯಾಶ್ರಮ ಮೊದಲಾಗಿ ದಿನ ದಿನ
ನಿರ್ಮಲ ಕಳೆಯನಾಂತ
ಉಮ್ಮಯದಿಂದ ಷಟ್ಕರ್ಮಸಾಧನವಾದ
ಧರ್ಮದ ದಾರಿಲಿ ನಿಂತ ೩

ತಾಯಿ ಮಕ್ಕಳ ಸಾಕಿದಂತೆ ಗುರುಕೃಪಾ
ಪೀಯೂಷವನುಂಡು ತಾ
ಬಾಯೆಂದು ಕರೆಸಿಕೊಂಡಖಿಳಾರ್ಥ ಪಡೆದ ನಿ
ಷ್ಕಾಯನ ತೇಜವಂತ ೪

ನಿತ್ಯದಿ ಕರ್ಮಕೆ ಕುಂದಾಗಲಿಲ್ಲಗ್ನಿ
ಹೋತ್ರ ಸಹಿತ ಸುವಾನ
ಪ್ರಸ್ಥನಾಗಿ ಭೋಗಾಸಕ್ತಿಯ ತೊರೆದ ವಿ
ರಕ್ತಿ ಭಾಗ್ಯಾನ್ವಿತನ ೫

ಬಣ್ಣವಿಟ್ಟಿಹ ಚೊಕ್ಕ ಚಿನ್ನನೊ ಅಭ್ರಗೆ
ದ್ದುಣ್ಣಿಮೆ ಚಂದ್ರಮನೊ
ಉನ್ನತಗುರು ಸತ್ಯಾಭಿನವ ತೀರ್ಥರ
ಪುಣ್ಯವೆ ನೀನೊ ಯತಿರನ್ನನೊ ೬

ಹೀಗೆಂದು ಸುಜನರು ಹೊಗಳಲು ಶ್ರೀಪಾದ
ಯೋಗಿ ತಾನೆನಿಸಿದನು
ಮ್ಯಾಗೆ ಮ್ಯಾಗದ್ಭುತ ಪಾಂಡಿತ್ಯವೆಂಬ ವ
ಲ್ಲಿಗೆ ಹಬ್ಬುಗೆನಿತ್ತನು ೭

ಗುರುಗಳಭೀಷ್ಟೆ ಪೂರೈಸಿತು ಶ್ರೀರಘು
ವರನ ಮೂರ್ಧನಿಯಲಿಟ್ಟು
ಸ್ಥಿರ ಪಟ್ಟಾಭಿಷೇಕವಾಂಗೀಕರಿಸಿ ಜಗ
ದ್ಗುರುವೆ ತಾನಾದ ಕರ್ತ ೮

ದಿವ್ಯ ನಾಚಾರ ಕ್ಷೇತ್ರದಿ ಪರಿಸ್ಮರಣೆಂದ
ಹವ್ಯಸಾಂಕಿತ ಗುರುಗಳು
ಆ ವ್ಯಯಾಬ್ದ ಜ್ಯೇಷ್ಠಾಧಿಕ ಶುದ್ಧ ಚತುರ್ದಶಿ
ದಿವಸ ದಿವಿಗೆ ಸಾಗಲು ೯

ಹರಿಪಾದಯಾತ್ರೆಗೆ ಗುರುಗಳೈದಿದ ಮೇಲೆ
ಪರಮ ದುಃಖಿತ ಮೌಳಿ
ತ್ವರಿಯದಿ ವೃಂದಾವನ ವಿರಚಿಸಿದ ಮುನಿ
ವರನ ಮಹಿಮೆಯ ಕೇಳಿ ೧೦

ಪೃಥ್ವಿಪರಿಂದ ಪೂಜಿಸಿಕೊಂಡು ದುರ್ವಾದಿ
ಮೊತ್ತವ ಗೆಲುತಲಿಹ
ಅರ್ಥಿಲಿ ಜಯಪತ್ರವನು ಜಯಿಸುತ ಗುರು
ಚಿತ್ತಕರ್ಷಿಸುತಲಿಹ ೧೧

ನಿಜಗುರುದಯದಿಂದ ದುರಿತತಮವ ಗೆದ್ದಂ
ಬುಜ ಸಖನಂತೊಪ್ಪುವ
ತ್ರಿಜಗವಂದಿತರಾದ ವೇದ ವ್ಯಾಸಾಂಘ್ರಿಯ
ಭಜನ ಭಾಗ್ಯದೊಳೊಪ್ಪುವ ೧೨

ಧ್ಯಾನ ಮೌನ ಸದ್ವ್ಯಾಖ್ಯಾನ ಪೂರ್ಣನು
ಜ್ಞಾನ ಭಕುತಿಪೂರ್ಣನು
ಏನೆಂಬುವಿರೊ ಕರುಣಗುಣ ಪೂರ್ಣನು
ದಾನ ಮುದ್ರಾಪೂರ್ಣನು ೧೩

ಗುರು ಸತ್ಯಾಭಿನವ ತೀರ್ಥರ ಸತ್ಯಪೂರ್ಣನು *
ವರದರಾಜಯತಿಯೊಳು ದಯಾಪೂರ್ಣನು
ಸರಸೋಕ್ತಿ ಪರಿಪೂರ್ಣನು ೧೪

ತಂದೆ ಸತ್ಯಾಭಿನವಾಂಬುಧಿಜಾತ ತತ್ವಾರ್ಥ
ವೃಂದರುಚಿರ ಪೂರ್ಣನು
ಎಂದು ಪ್ರಸನ್ವೆಂಕಟ ಪ್ರಿಯಾನಿಲಮತ
ಸಿದ್ಧಾಂತದಿ ಪೂರ್ಣನು ೧೫

೧೬೯

ಏಳು ಶ್ರೀ ಗುರುರಾಯ ಬೆಳಗಾಯಿತಿಂದು
ಧೂಳಿ ದರುಶನ ಕೊಡಿರಿ ಈ ವೇಳೆ ಶಿಷ್ಯರಿಗೆ ಪ.

---

* ಎರಡನೆಯ ಸಾಲು ಬಿಟ್ಟು ಹೋಗಿರಬೇಕು. (ಸಂ)

ಏಳು ಗುರು ರಾಘವೇಂದ್ರ ಏಳು ದಯಾಗುಣ ಸಾಂದ್ರ
ಏಳು ವೈಷ್ಣವ ಕುಮುದಚಂದ್ರ ಶ್ರೀ ರಾಘವೇಂದ್ರ ಅ.ಪ.

ಅಶನ ವಸನಗಳಿಲ್ಲವೆಂಬ ವ್ಯಸನಗಳಿಲ್ಲ
ಮುಸುಕ್ಹಾಕಿ ಮೋಸದಲೆ ಮೋಹಿಸಿದೆನೆಲ್ಲ
ಅಸುರಾರಿಯ ಸ್ಮರಿಸದೆ ಪಶುವಿನೊಲು ಈ ದೇಹ
ವಸುಮತಿಯೊಳು ಬಹಳ್ವಸಗೆಟ್ಟಿತಲ್ಲ ೧

ನಾನು ನನ್ನದು ಎಂದು ಹೀನಮನಸಿಗೆ ತಂದು
ಏನು ಮಾಡುವ ಕರ್ಮ ನಾನೆ ಅಹುದೆಂದು
ಸ್ವಾಮಿ ಕರ್ತೃತ್ವವನು ತಿಳಿಯಲಿಲ್ಲ ನಾನೊಂದು
ನೀನೆ ಉದ್ಧರಿಸಯ್ಯ ದೀನ ದಯಾಸಿಂಧು ೨

ಅನ್ಯರ ಕೈಯಲ್ಲಿ ನಿನ್ನವರನಿರಿಸುವುದು
ಅನ್ಯಾಯವಾಯ್ತು ಪಾವನ್ನ ಗುರುರಾಯ
ಎನ್ನ ಮಾತಲ್ಲವಿದು ನಿನ್ನ ಮಾತೇ ಸರಿ
ಮನ್ನಿಸಿ ಆಗು ಪ್ರಸನ್ನ ಗುರುರಾಯ ೩

ವೇದ ಶಾಸ್ತ್ರಗಳನ್ನು ಓದಿ ಪೇಳ್ದವನಲ್ಲ
ಭೇದಾಭೇದವನು ತಿಳಿಯಲಿಲ್ಲ
ಸಾಧು ಸಜ್ಜನರ ಸಹವಾಸ ಮೊದಲಿಲ್ಲ
ಹಿಂದಾಗಿ ಮಾನ ಮಾರಿಸಿದಿ ಉಳಿಸಲಿಲ್ಲ ೪

ಆಸೆಗೊಳಗಾದೆನೊ ಹೇಸಿ ಮನುಜನು ನಾನು
ಕ್ಲೇಶ ಭವಸಾಗರದೊಳೀಸುತಿಹೆನೊ
ಏಸು ಜನ್ಮದಿ ಎನ್ನ ಘಾಸಿ ಮಾಡಿದೆ ಮುನ್ನ
ದಾಸನಾಗುವೆ ತೋರೊ ಪ್ರಸನ್ನವೆಂಕಟನ ೫

೧೭೦

ಕೊಂಡಾಡಲಳವೆ ಕರುಣಾನಿಧಿ ಕಾವನ
ದಂಡ ಸಂಜಿತ ಗುರುಸತ್ಯನಾಥರ ಕೀರ್ತಿ ಪ.

ಶ್ರೀ ವಾಸುದೇದ ತಾ ಭಾವಿಸಿ ಚಿತ್ತದಿ
ಭೂವಲಯಕೆ ಸುಜನಾವಳಿಗಾಶ್ರಯ
ವೀವೆನೆನುತ ಶುಭದೇವವೃಕ್ಷವನಟ್ಟೆ
ಈವರ ಪರಮಹಂಸಾವಲಂಬನ ತಾಳ್ದು
ಶ್ರೀ ವಾಯುಮತದಿ ತತ್ವವೆ ಲಕ್ಷಿಸುವ ಪ್ರೇ
ಕ್ಷಾವಂತರಾಗಿಹ ಜೀವಕೋಟಿಗಳ ಕೃ
ಪಾವಲೋಕನದೊಳಿಟ್ಟ ಅಪೇಕ್ಷಿತ
ಭಾವಾರ್ಥಗಳನೆ ಕೊಟ್ಟು ನಂಬಿದ
ಸೇವಕರ್ಗಭಯವಿಟ್ಟ ಗುರುರಾಯನ ೧

ಭಾನು ತೋರುವ ಮುನ್ನೆ ಸ್ನಾನವ ಮಾಡಿ ಸು
ಮ್ಮಾನದಿಂದಲಿ ನೇಮ ಮೌನದೊಳಿದ್ದು ಶ್ರೀ
ಮಾನಾಥನಂಘ್ರಿಯ ಮಾನಸದಲಿ ದೃಢ
ಧ್ಯಾನದಿಂ ಬಲಿದು ಗೀರ್ವಾಣ ಭಾಷ್ಯಾಮೃತ
ಪಾನವ ಜನರಿಗೆ ಸಾನುರಾಗದಲಿತ್ತು
ನಾನಾ ತತ್ವಾರ್ಥ ವ್ಯಾಖ್ಯಾನವ ಜನರಿಗೆ
ತಾನಂದು ಬೋಧಿಸಿದ ತಾಮಸ
ಜ್ಞಾನವನೋಡಿಸಿದ ಆ ಕಾಮಧೇನು
ವೆನಿಸಿ ಎಸೆದ ಗುರುರಾಯನ ೨

ಭೇದವರ್ಜಿತ ಮತ್ತವಾದ ಕುಂಭಿಯ ಕುಂಭ
ಭೇದಕ ಸಿಂಗ ಹಲಾಧಾರಿ ಹರಿ ಸಗು
ಣೋದರ ಸಾಕಾರ ಮಾಧವ ಹರನುತ

ಪಾದನೆನುತ ಸೂತ್ರ ವೇದ ಪುರಾಣದಿ
ಸಾಧಿಸಿ ಕುತ್ಸಿತವಾದಿಗಳ
ಪಾದಾಕ್ರಾಂತರ ಮಾಡಿ ಮೇದಿನಿಯೊಳು ಜಯ
ನಾದಭೇರಿಯ ಹೊಯಿಸಿದ ಮುಕ್ತಿಯ
ಸಾಧನ ತೋರಿಸಿದ ಭ್ರಷ್ಟಂಕು
ರೋದಯ ಮಾಣಿಸಿದ ಗುರುರಾಯನ ೩

ಕಾಲಕಾಲಕೆ ಧರ್ಮ ಪಾಲಿಸಿ ಯಾಚಕ
ಜಾಲಕೆ ಮನ್ನಿಸಿ ಮೂಲ ಮಂತ್ರೋಪದೇಶ
ಪೇಳಿ ಪೂತರ ಮಾಡಿ ಹಾಲು ಸಕ್ಕರೆ ತುಪ್ಪ
ಹೋಳಿಗ್ಯನ್ನವನಿಕ್ಕಿ ಮೇಲೆ ದ್ರವ್ಯವನಿತ್ತು
ಪಾಲಿಸಿ ತಾಯಿತಂದೆಗಳ ಹಂಬಲ ಬಿಡಿ
ಸಿ ಲೋಕದವರಿಗಭಿಲಾಷಾ ಪೂರ್ಣಾನು
ಕೂಲ ಚಿಂತಾಮಣಿಯ ಯತಿಕುಲ
ಮೌಳಿ ಮಕುಟಮಣಿಯ ವಿರತಿಭಾಗ್ಯ
ಶಾಲಿ ಸುಗುಣಖಣಿಯ ಗುರುರಾಯನ ೪

ಮಣ್ಣು ವನಿತೆ ಸತಿ ಹೊನ್ನಿನ ಬಯಕೆಯ
ಘನ್ನತೆ ಜರಿದು ಪಾವನ್ನ ಮಹಿಮನಾದ
ಚೆನ್ನ ಸತ್ಯನಿಧಿ ತೀರಥನ್ನ ಕರೋದ್ಭವ
ತನ್ನಾಕಷೆಂಬುವಭಿನ್ನವಚಂದ್ರಿಕೆ
ಯನ್ನು ಪ್ರಕಾಶಿಸಿ ಪೂರ್ಣಚಂದ್ರಮನಂತೆ
ಉನ್ನತ ಕಳೆಯುತ ಚಿನ್ಮಯ ವರದ ಪ್ರ
ಸನ್ನ ವೆಂಕಟಾಧಿಪನ ಭಜಿಸಿ ನಿತ್ಯ
ಧನ್ಯನೆನಿಸುತಿಪ್ಪನ ಸತ್ಯಾಭಿನವ
ರನ್ನನ ಪೊರೆದಪ್ಪನ ಗುರುರಾಯನ ೫

೧೭೧

ಗುರುಪದವ ನಂಬಿ ಹರಿಪದವ ಕಾಂಬೆ
ಮರುತ ಸಂತತಿಗೆ ನಮಿಸುವೆ ನಮಿಸುವೆ ಪ.
ಹರಿಪದಕೆ ಅಚ್ಛಿನ್ನ ಭಕುತಿ ಪರಿಪೂರ್ಣ ಶ್ರೀ

ಹರಿಕಾರ್ಯದಲಿ ಧುರಂಧರನೆನಿಸುವ
ಹರಿಭೃತ್ಯಜನಕೆ ಹಿತಕಾರಿ ಔದಾರಿ ಜಗ
ದ್ಗುರು ಪರಮಹಂಸ ಮಧ್ವತ್ರಿರೂಪಿಯ ೧

ತತ್ವಸಾಗರ ತಿಮಿಂಗಿಲ ಪದ್ಮನಾಭಮುನಿ
ಕರ್ತ ಮೂಲರಾಮ ಮೆಚ್ಚಿದ ನರಹರಿಯ
ಮರ್ತ್ಯ ಮಾಯಿಜನ ತುಹಿನರವಿಭ
ಮಾಧವಾಭಿಜ್ಞ ಅಕ್ಷೋಭ್ಯತೀರ್ಥನಿಪ ಮಲ್ಲರ ೨

ಸುಖತೀರ್ಥ ಗಂಭೀರ ವಾಕ್ಯವಾರಿಧಿಚಂದ್ರ
ಅಕಳಂಕ ಜಯವರ್ಯ ಯತಿಸಮೂಹ
ಮಕುಟಮಣಿ ವಿದ್ಯಾಧಿರಾಜ ನಿರ್ಮಲಕಾಯ
ಸುಕವೀಂದ್ರ ವಾಕ್ಸಿದ್ಧ ವಾಗೀಶರ ೩

ಗುರುಭಕುತಿ ನಿಸ್ಸೀಮ ರಾಮಚಂದ್ರಾಖ್ಯಯತಿ
ಗುರು ಆಜ್ಞಾಪಾಲ ವಿದ್ಯಾನಿಧಿಗಳ
ದುರುವಾದಿಗಜಮೃಗಪ ರಘುನಾಥ ತೀರ್ಥ ಶ್ರುತಿ
ಪರಮಾರ್ಥ ಪರಿಚರ್ಯ ರಘುವರ್ಯರ ೪

ವೈರಾಗ್ಯ ವೈಭವಾನ್ವಿತ ರಘೋತ್ತಮ ಮುನಿಪ
ವೈಷ್ಣವ ತತ್ವಜ್ಞ ವೇದವ್ಯಾಸರ
ಕೈವಲ್ಯಮಾರ್ಗಜ್ಞ ವಿದ್ಯಾಪತಿಯು ಹೊನ್ನ
ಮೈಯ ಮರುತಂಶ ವಿದ್ಯಾಧೀಶರ ೫

ವೇದಾಮೃತಾಬ್ಧಿಯೊಳು ಮಗ್ನ ವೇದನಿಧಿಗಳ
ಸಾಧುನಿಕರಲಲಾಮ ಸತ್ಯವ್ರತರ
ಬಾದರಾಯಣ ರಾಮಪಾದರತ ಸತ್ಯನಿಧಿ
ಮೇದಿನಿಗೆ ಕಲ್ಪತರು ಸತ್ಯನಾಥರ ೬

ಶ್ರೀ ಸತ್ಯನಾಥ ರತ್ನಾಕರ ಕರೋದ್ಭವ ಕುಮುದ
ಅಶೇಷಯಾಚಕ ಸುಖದ ಸುಗುಣ
ಶ್ರೀ ಸತ್ಯಾಭಿನವ ಮುನಿ ಭಾಗವತೇಢ್ಯಜ್ಞ
ಶಾಶ್ವತ ಪರೋಕ್ಷ ಗುರುಪದನಿಷ್ಠರ ೭

ದುಷ್ಟ ಪರವಾದಿ ನರಕುಲಿಶ ಜಿತಕಾಮ ತಪೋ
ನಿಷ್ಠ ವಿದ್ಯೋನ್ನತ ವಿಚಾರಶೀಲ
ಶಿಷ್ಟ ಜನಪಾಲ ಶ್ರುತಿ ಜಲಾಬ್ಧಿ ಕಲ್ಲೋಲ
ಇಷ್ಟಾರ್ಥದಾತ ಸತ್ಯಾಧೀಶರ ೮

ಕೃಷ್ಣ ಪಾದಾಸಕ್ತ ಗುರುಕೃಪಾಸಂಯುಕ್ತ
ಇಷ್ಟಾರ್ಥದಾತ ಸತ್ಯಾಧಿರಾಜರ
ಸೃಷ್ಟೇಶ ಪ್ರಸನ್ನವೆಂಕಟಪತಿಯ ಅನವರತ
ತುಷ್ಟೀಕರಿಸುವ ವಾಯುಮತ ಮಹಿಮರ ೯

೧೭೨

ಗುರು ಸತ್ಯಾಧಿರಾಜ ಸುಜನ ತಾರಾರಾಜ
ಪೊರೆ ಎನ್ನ ಕಲ್ಪಭೂಜ
ಸ್ಮರನಯ್ಯನ ಸಿರಿಚರಣಕಮಲ ಭೃಂಗ
ವಿರತ್ಯಾದಿ ಗುಣೋತ್ತುಂಗ ಶುಭಾಂಗ ಪ.

ಕರಿವಿಂಡು ಶಂಕೆಯಿಲ್ಲದೆ ತಿರುಗುತ ಕೇ
ಸರಿಯ ಕಂಡೋಡುವಂತೆ
ಧರೆಯೊಳು ದುರ್ವಾದಿಗಳು ನಿನ್ನಿದಿರು ಸಂ
ಚರಿಸಲಂಜುವರಮ್ಮಮ್ಮ ಮಹಿಮ ೧

ಕಾಲವರಿತ ಸ್ನಾನ ಮೌನ ಜಪ ಸೃಕ್
ಜಾಲ ವ್ಯಾಖ್ಯಾನಗಳ
ಪೇಳಿ ಶ್ರೀರಾಮನ ಮೆಚ್ಚಿಸುವ ಪೂತ
ಶೀಲ ತತ್ವಕಲ್ಲೋಲ ವಿಶಾಲ ೨

ಹಾಟಕಕುವಧುಕಾಂಕ್ಷೆರಹಿತ ಪ್ರಸನ್ನವೆಂ
ಕಟಪತಿ ಪದದ್ವಯವ
ತ್ರುಟಿಯೊಳಗಲ ಸತ್ಯಾಭಿನವ ತೀರ್ಥಕರ
ಕಟ ಸಂಜಾತ ಸುಪ್ರೀತ ೩

೧೭೩

ತಾರಾಪತಿಯಹುದೌ ಸತ್ಯಾಭಿನವ ತೀರ್ಥ ಗುರುವೆ ಪ.

ತಾರಾಪತಿಯಂತೆ ಕೀರ್ತಿ ಪ್ರಸರವಿ
ಸ್ತಾರದಿ ಬುಧ ಚಕೋರವೃಂದಕೆ ನೀನು ೧

ಇಕ್ಷುಚಾಪನ ಗದೆ ಕಕ್ಷಿಪ ಮಾಯಿಗಳ
ನೀಕ್ಷಿಪೆ ನಿರುತ ಸತ್ತ್ರೀಕ್ಷೆಂದುಕಾಂತಿಗೆ ೨

ಶ್ರೀರಾಮ ವೇದವ್ಯಾಸರ ಸೇವೆಯೊಳಿಹೆ
ಮಾರುತಿಮತತತ್ವ ವಾರಿಧಿತರಂಗಕೆ ೩

ಗುರುಪಾದ ಸ್ಮರಣೆಯ ಮರೆಯದೆ ಅಮೃತ ವಾಕ್ಯ
ಗರೆಯುತ ಹೃತ್ತಾಪ ಪರಿಹರಿಸುವಂಥ ೪

ಪ್ರಸನ್ವೆಂಕಟ ಪ್ರೀತ ಶ್ರೀ ಸತ್ಯನಾಥರ ಸುತ
ವಸುಧೆಯಾಚಕ ಕುಮುದ ಕುಸುಮ ಕೋರಕಕೆ ೫

೧೭೪

ಬನ್ನಿಗಡ ಸುಜನರೆಲ್ಲ ಪಾವನಕಾಯ ಸುಜನಪ್ರಿಯ
ಪುಣ್ಯ ಸತ್ಯನಾಥಯತಿರನ್ನನ ಪಟ್ಟಣಕಿಂದು ಪ.

ಪರಬೊಮ್ಮನೆಂಬುವ ಮನೆದೈವನಾಗಿಹ
ಪರಸುಖವನೀವ ಮರುತದೇವನೆಂಬಾತ
ಪರಮಪದದ ಗುರುವು ಯುಕ್ತಿಯಿಂದ ಕಾ
ಪುರುಷರಗಲಿಸುವಂತೆ ಸತ್ಯನಾಥ
ಪುರಪತಿಗೆ ಬೋಧಿಸುವ ಪರಮವಾರ್ತೆಯ ಕೇಳ ೧

ನವಭಕುತಿರತುನದಿಂದ ನಿರ್ಮಿತ ಪ್ರಾಕಾರಕೆ
ನವದ್ವೇಷಿಗಳು ದಾಳಿಯಿತ್ತು ಅಂಡಲೆಯಲು ದಾ
ನವಾರಿಯ ನಾಮಾಯುಧವ ಸತ್ಯಾಭಿ
ನವ ತೀರ್ಥರೆಂಬೊ ಪುತ್ರಗೆ ನೀಡುತ ಮಾ
ನವ ಹರಿಯೆಂಬಸುರರ ಮಡುಹಿಸುವುದು ನೋಡ ೨

ಕಾಯಜ ಚೋರನೆಂಬವ ತಾ ಕಳ್ಳ ಹನ್ನೊಂದರ ಕೂಡಿ
ಕಾಯವೆಂಬ ರಾಜಗೃಹಕೆ ಕನ್ನವಿಕ್ಕುವುದ ಕಂಡು
ಕಾಯುವ ಜ್ಞಾನೆಂಬ ಭಟನು ಅಟ್ಟಲವನ
ಕೈದು ಚಾಪವ ಸೆಳೆದು ಮಿಕ್ಕು ಚೋರನೀ
ಕಾಯ ಕಟ್ಟಿಸುವಂಥ ಕರುಣಿಗೆ ನಮಿಸುವ ೩

ಹರಿದಾಸರೆನಿಸುವ ಹಲವು ದೊರೆಗಳುಂಟು
ಹರದಾರಿಕ್ಕೆಲದಿ ಪಣ್ಯವ ಮಾಡಿ ಸುಧೆವೀರಿ
ಹರಿತತ್ವ ನಾಣ್ಯದೊಳು ರಾಮನಾಮದ
ಹಿರಿದುಮುದ್ರೆಯನೊರೆದು ಪರಂಪರ
ಹರುಷ ವ್ಯವಸಾಯವುಂಟು ಹಿರಿಯಾಮೃತವುಣ್ಣ ೪

ಅಭಿನವ ಚಂದ್ರಿಕೆದೋರಿ ಅಭಿಜ್ಞಾನತೆ ಮೆರೆದ
ಅಭೀತ ಮಂಗಳಗಾತ್ರ ಅಮಿತ ಬುಧರ ಮಿತ್ರ

ಅಭಿಜ್ಞಗುರು ಸತ್ಯನಿಧಿಯ ಸುತ ಸತ್ಯನಾಥ
ಅಭು ಪ್ರಸನ್ವೆಂಕಟೇಶನ ಭಜಕನ ಕವಿತ
ಅಬುಜ ಪರಿಮಳಮಂದಾನಿಲವಿಡಿವಳಿಯಂತೆ ೫

೧೭೫

ಭಳಿ ಭಳಿರೆ ಬಲಭೀಮ ಭಳಿರೆ ಸದ್ಗುಣಧಾಮ
ಭಳಿರೆ ದ್ರೌಪದಿನಾಥ ಭಳಿರೆ ಶ್ರೀಹರಿದೂತ
ಭಳಿರೆ ಅಪ್ರತಿಚರಿತ ಭಳಿರೆ ಬಲದೇವಸುತ
ಭಳಿರೆ ಭೂಮಿಪಲಲಾಮ ಭೀಮ ಪ.

ಯೋಚಿಸಿ ಖಳರು ನೆರೆದು ಭೂಚಕ್ರವಾಕ್ರಮಿಸೆ
ಶ್ರೀ ಚಕ್ರಿ ದಯದಿ ಅಮೃತ ರೋಚಕುಲಜಾತ ಪಾಂ
ಡು ಚಕ್ರವರ್ತಿ ಕಮಲಲೋಚನೆಯ ಪೃಥೋದರಾ
ಬ್ಧಿ ಚಂದ್ರನಂತೆ ಜನಿಸಿ
ಆ ಚಕ್ಷುವಿಹೀನ ಭವಾಬ್ಧಿಚೋರರೆದೆ ಶೂಲ
ಗೋಚರಿಸುವಂತಿಳೆಗೆ ಸೂಚಿಸಿ ಮುಖೋದಯವ
ಕೀಚಕ ಹಿಡಿಂಬ ಬಕ ನೀಚ ಮಾಗಧ ಮುಖರ
ವಾಚಿಸಗುಡದೆ ಬಡಿದೆ ಭೀಮ ೧

ಕೊಬ್ಬಿದ ಖಳರು ಧಾತ್ರಿಗುಬ್ಬಸವ ತೋರುತಿರೆ
ಅಬ್ಬರದಿ ಕರದ ಗದೆಗ್ಬಬದೌತಣವಿಡುತ
ಒಬ್ಬೊಬ್ಬರೊಮ್ಮೆ ಹನ್ನಿಬ್ಬರನ ಕರೆದು
ಉಬ್ಬುಬ್ಬಿ ರಣದಿ ಕುಣಿದೆ
ಹಬ್ಬಿ ಬಹ ನಾಗರಥನಿಬ್ಬರದ ಬಿಂಕದವ
ರೆಬ್ಬಿಸಿ ನಭಕೆ ಚಿಮ್ಮಿ ಬೊಬ್ಬಿರಿದು ಕೌರವರ
ನಿಬ್ಬಗೆದು ಡಾಕಿನಿಯ ಉಬ್ಬಿಸಿದೆ ನಿನಗೆ ಪಡಿ
ಹೆಬ್ಬುಲಿಗಳುಂಟೆ ಜಗದಿ ಭೀಮ ೨

ನಿರ್ಧರ ಪರಾಕ್ರಮ ಧನುರ್ಧರರ ಬೀಳ್ಗೆಡಹಿ
ಸ್ವರ್ಧಾಮಗರು ತುತಿಸೆ ದುರ್ಧಾರ್ತರಾಷ್ಟ್ರರಂ
ದುರ್ಧಾಮಕೆಬ್ಬಟ್ಟಿ ದುರ್ಧರ್ಷ ಗುರುರಥವ
ನೂರ್ಧ್ವಕ್ಕೊಗೆದುಲಿದು ಚೀರ್ದೆ
ದುರ್ಧರ ಖಳಾನುಜನ ಮೂರ್ಧ ಕಾಲೊಳು ಮೆಟ್ಟಿ
ಶಾರ್ದೂಲನಂದದಿ ಕೆಡದೊಡಲಿನ ಅರುಣ ಜಲ
ಪೀರ್ದಂತೆ ತೋರ್ದೆ ಗೋವರ್ಧನಧರನನುಜ್ಞ
ವಾರ್ಧೀಸ್ಪರ್ಶಿಸಿದೆ ಮಝರೆ ಭೀಮ ೩

ಕಡಲೊಡೆಯನೆಡೆಗೆ ಬಲುಕೆಡುನುಡಿಯ ನುಡಿದವರ
ಪಿಡಿ ಪಿಡಿದು ಖಡುಗದಿಂ ಕಡಿಕಡಿದು ಕಡೆಗಾಲದ
ಮೃಡಕೋಟಿಯಂದದಲಿ ಕಡುರೋಷದಡಿಗಡಿಗೆ
ಘುಡುಘುಡಿಸಿ ಹುಡುಕಿ ತುಡುಕಿ
ಷಡಕ್ಷೋಹಿಣಿ ಪಡೆಯ ಹುಡಿ ಹುಡಿಗುಟ್ಟಿ ಪೊಡವಿ ದಿ
ಗ್ಗಡಣ ಜಯದಂತಿ ಧಿಮ್ಮಿಡಿಸಿ ಕರ್ಮಡು ಪೊಕ್ಕು
ಕಡುಗಲಿಯ ತೊಡೆಮುರಿಯೆ ನಡುಮುರಿಯೆ ಗದೆಯಿಂದ
ಹೊಡೆದೆಶಸುಪಡೆದೆ ಜಗದಿ ಭೀಮ ೪

ಅಪ್ಪಳಿಸಿ ಕುರುಪತಿಯ ಚಿಪ್ಪೊಡೆಯೆ ತಲೆದುಳಿದು
ಬಪ್ಪುವಾರುಷವೆಂಬ ಸುಪ್ತಸೂತ್ರದಿ ಅಜನ
ಬೊಪ್ಪ ಕೃಷ್ಣನ ಕಟ್ಟುವ ಪರಾಕ್ರಮಿಗೆನುತ
ಸುಪ್ರಾಯಶ್ಚಿತ್ತವೆನುತ
ತಪ್ಪುಗಳನೊಂದೊಂದ ನೆಪ್ಪೆತ್ತಿ ತನ್ಮತಿಗೆ
ಹೆಪ್ಪೆನುವ ವಾಗ್ಬಾಣ ಕುಪ್ಪಳಿಸಿ ಕೊಂದು ಶ್ರೀ
ಯಃಪತಿ ಪ್ರಸನ್ವೆಂಕಟಾರ್ಪಣವ ಮಾಡಿ ವೈಷ್ಣ
ವ ಪ್ರತತಿಯನು ಪೊರೆದೆ ಭೀಮ ೫

೧೭೬

ಮರೆಹೋಗಿ ಬುಧರೀ ತಾತನ್ನ ವರಗುರು ಸತ್ಯನಾಥನ್ನ ಪ.

ಇಂದ್ರಿಯಜಿತ ಸುಜನೌಘ ಚಕೋರಕೆ ಚಂದ್ರನ್ನ ಮುದ ಸಾಂದ್ರನ್ನ
ಮಂದರಧರ ಜಾನಕಿಪತಿ ರಾಮಚಂದ್ರನ ಪ್ರಿಯ ಮುನೀಂದ್ರನ್ನ ೧

ಅಮಲಸುಖತೀರ್ಥ ಪ್ರಮೇಯ ಸಾಕಲ್ಯ ನಿರ್ಣಯ ಬಲ್ಲನ್ನ
ಎಲ್ಲಾ ಬಲ್ಲೆಂಬೋ ಮಾಯಿಮತದಲ್ಲಣನ ಪಟುಮಲ್ಲನ ೨

ರುಕ್ಷಮಾಯಿಗಳ ಶಿಕ್ಷಿಪನ ಸಪಕ್ಷನ್ನ ಕರುಣಾಕ್ಷನ್ನ
ಪಕ್ಷಿಗಮನನ ದೀಕ್ಷೆಲಿ ಪೂಜಿಪ ದಕ್ಷನ್ನ ಸುರಪಕ್ಷನ್ನ ೩

ಶಂಕರನ ಗರ್ವ ಮುರಿದು ಬಿರುದಾಂಕನ್ನ ನಿಶ್ಯಂಕನ್ನ
ಕಿಂಕರಜನಸುರಭೂರುಹ ಸುಗುಣಗಣಾಂಕನ್ನ ಶಶಿಗಧಿಕನ್ನ ೪

ಮರುತಮತಾಗ್ರಣಿ ಗುರು ಸತ್ಯಾಧಿಸುತ ವಿರತನ್ನಾಮಲ ಚರಿತನ್ನ
ಕರ್ತ ಪ್ರಸನ್ನವೆಂಕಟಪತಿಪದನಿರತನ್ನ ಶುಭಕರತನ್ನ ೫

೧೭೭

ಉಗಾಭೋಗ

ಮೊಗಕೆಲ್ಲ ಹೊಗೆಸುತ್ತಿ ಬಗೆಗೆಟ್ಟನೊಬ್ಬ
ಜಗಳಾಡ್ವ ಘಟಪಟದ ಬಾಯಿಬಡಕನೊಬ್ಬ
ನಿಗಮಾರ್ಥವನು ಕೆಡಿಸುವ ಖಳನೊಬ್ಬ ತ್ರಿ
ಜಗದೊಳಗುಂಡುಟ್ಟು ಬಾಯಾರ್ವನೊಬ್ಬ ಈ
ವಿಗಡ ವಾದಿಗಜಮೃಗರಾಜ ಗುರು ಮಧ್ವ
ಸುಗುಣಾಬ್ಧಿ ಪ್ರಸನ್ನವೆಂಕಟನ ತೋರಿದನಾಗಿ ೧

೧೭೮

ಯತಿರತನತಿಮತಿಯುತನೆ
ರತಿಪತಿಪಿತ ಸೇವಾರತನೆ ಮ
ರುತಮತ ಭಕುತಿಪೂರಿತನೆ
ನಾಥ ಸತ್ಯಾಭಿನುತ(ನವ?)ತೀರಥನೆ ಪ.

ಶ್ರುತಿ ಸ್ಮೃತಿ ಇತಿಹಾಸಾರ್ಥ ನೀ
ಜ್ಞಾತತೆಗತಿ ಸಮರ್ಥ
ಕ್ಷಿತಿಸತಿವಿತ್ತ ವಿರಹಿತನೆ ಮ
ನ್ಮಥ ಜಿತಕಾಂತಿ ಶೋಭಿತನೆ
ನೀತಿ ಚತುರತೆ ಸುವಿರತಿ ನಿಸ್ಸೀಮ ವಿ
ಖ್ಯಾತ ರಘುಪತಿ ಅರ್ಚಿತ ಪಥಗಮ್ಯ
ಸತತ ವಿದ್ವತ್ತ ಪ್ರತತಿಗೆ ವಿತ್ತರಣ ಶೂರೋ
ನ್ಮತ್ತ ದುರ್ಮತ್ತ ಕಾಂತಾರ ಕುಠಾರ ೧

ಧ್ಯಾನ ಮೌನ ಪೂರ್ಣ ಗಂಭೀರ ಗೀ
ರ್ವಾಣ ವಾಣಿನಿರುತ ಉಚ್ಚಾರ
ಜ್ಞಾನಿ ಜನರಿಗೆ ಘನ್ನಗುರುವೆ ನಿ
ದಾನ ಗುಣ ಕಲ್ಪತರುವೆ
ಮಾನಾಥನ ಪೂಜೆ ಮನ ಮನೆಯೊಳು ಮಾಡಿ
ನೀಣ್ಯವಿನಾನೆಸದು (?) ನಲಿನಲಿದಾಡಿ
ದೀನಜನರಿಗೆ ತತ್ವಜ್ಞಾನ ಸುಧೆ
ಯನುದಿನದೊಳೆರೆದ ಕಾಮಧೇನುವಿನಂತಯ್ಯ ೨

ತ್ರೇತಾ ಕ್ಷಿತಿಪರ್ಗೆ ಮಿಗಿಲೆನಿಸಿ ಶ್ರೀ
ಸೀತಾಪತಿ ಅತಿಮುದಬಡಿಸಿ
ಮತ್ತಮಾಯಿಮೊತ್ತಗಜಸಿಂಗ ನಿನ್ನ
ಪ್ರತಿ ಎಂತೊ ಗುರುಕುಲೋತ್ತುಂಗ
ಚಿತ್ತಜನಯ್ಯ ಪ್ರಸನ್ವೆಂಕಟೇಶ ಭಜನಶೀಲ

ಸತ್ಯನಾಥಸುತ ಸತ್ಯಾಭಿನುತ (ನವ?) ತೀರಥನೆ
ಸುತ್ತ ವಿಸ್ತರಿಸಿ ನಿನ್ನ ಕೀರ್ತಿ ದ್ಯುತಿಮಣಿಯಂತ
ನ್ಯಥಾ ಗತಿ ಕಾಣೆನೆನ್ನ ರಕ್ಷಿಸಯ್ಯ ಪಿತನೆ ೩

೧೭೯

ವಂದಿಸಿದರ ಕಾವೆ ವರವನೀವೆ ಅಹಿಪ
ವೀಂದ್ರ ಭವ ಸುರರ ಗುರು ಮಧ್ವಮುನಿರಾಯ ಪ.

ಒಂದೊಂದು ಶ್ರುತಿ ಸ್ಮೃತಿಗೆ ಬಹ್ವಾರ್ಥಗಳ ಪೇಳದೆ
ಒಂದೆರಡು ತತ್ವವಿಸ್ತರವ ಪೇಳಿದೆ
ಒಂದು ಮೂರವತಾರದಲ್ಲಿ ಹರಿಯನೆ ಒಲಿಸಿ
ಒಂದು ನಾಲ್ಕರ ಭೇದ ನಿಜರಿಗರುಹಿದೆಯ ೧

ಒಂದೈದು ರಿಪುವರ್ಗ ನಿಗ್ರಹವ ಮಾಡಿಸಿದೆ
ಒಂದಾರು ತ್ರಿಗುಣಿಸಿದ ಮತವ ಮುರಿದೆ
ಒಂದೇಳು ಮದವ ಕಾಲಲಿ ಮೆಟ್ಟಿ ಹರಿಪುರಕೆ
ಒಂದೆಂಟು ಭಕುತಿಪಥ ತೋರ್ದೆ ವೈಷ್ಣವರಿಗೆ ೨

ಒಂದು ಒಂಬತ್ತು ಹರಿಯವತಾರ ಕಥೆ ರಚಿಸಿ
ಒಂದು ಹತ್ತೇಂದ್ರಿಯದ ಗೆಲವ ಕಳಿಸಿ
ಒಂದು ಹನ್ನೊಂದು ಸ್ತೋತ್ರದಿ ಕೃಷ್ಣನ ಮೆಚ್ಚಿಸಿದೆ
ಒಂದು ಹನ್ನೆರಡು ತತ್ವದಾಗ ೩

ಒಂದು ಹದಿಮೂರು ಭುವನಗಳಲ್ಲಿ ನೀ ವ್ಯಾಪ್ತ
ಒಂದು ಹದಿನಾಲ್ಕು ದ್ವಿಗುಣಿಸಿದ ಮ್ಯಾಲೇ
ಳೊಂದಿದ ಸದ್ಗ್ರಂಥಗಳ ನಿರ್ಮಿಸಿ ಬುಧರಿಗಿತ್ತೆ
ಒಂದು ಹದಿನೈದು ಗುಣದ ಲಕ್ಷಣಾಂಗ ೪

ಒಂದು ಹದಿನಾರೆಂಟು ತತ್ವ ಸಿದ್ಧಾಂತದಲಿ
ಒಂದು ಹದಿನೇಳು ಪರ್ವಮೋಹಕ ಬಿಡಿಸಿದೆ

ಒಂದು ಮನದಿಂದ ಶಿರಿ ಪ್ರಸನ್ನವೆಂಕಟ ಕೃಷ್ಣನ
ಒಂದೊಂದು ಗುಣಕೆ ಅನಂತ ವ್ಯಾಖ್ಯಾನ ೫

೧೮೦

ಶರಣು ಮುನಿಪಮಣಿಯೆ ಸುಮತೀಂದ್ರ
ಕರುಣಾಮೃತದ ಖಣಿಯೆ
ಶರಣೆಂದವರಿಗೆ ವರಚಿಂತಾಮಣಿಯೆ
ಧರೆಯ ಮೇಲಿನೊಬ್ಬ ದೊರೆ ನಿನಗೆಣೆಯೆ ಪ.

ಸಂತತ ಸೇವಕ ಸಂತರಿಗೊಲಿದೀಗ
ಸಂತತಿ ಸಂಪದವಿತ್ತೆ ಬೇಗ
ಶಾಂತ ಶುಭಗುಣ ವಸಂತನೆಂಬೊ ಕೀರ್ತಿ ವಿ
ಶ್ರಾಂತಿಯಮಿತ ದಿಗಂತಕೆ ವಾರ್ತಿ ೧

ತಾಳ ತಮ್ಮಟೆ ಕಂಬು ಕಾಳೆ ಬಿರುದು ಬುಧ
ಮೇಳದಿಂ ಶಿಷ್ಯ ಜನಾಲಯಕೆ ಸಾಲದೀವಿಗೆ
ಯೊಳು ಮಾಲಿಕೆ ಗ್ರಹಿಸಿ ಆಂದೋಳಿ
ಕಿಳಿದು ಬಂದು ಪಾಲಿಪೆ ಅವರ ೨

ಶ್ರೀಗುರು ಪ್ರಸನ್ನವೆಂಕಟಾಚಲವಾಸ ರಾಮನ ಪಾದ
ನಿಶಿದಿನಾರ್ಚಿಸುವೆ ಸಂತೋಷ ಸಾಂದ್ರ
ಋಷಿಯೋಗೀಂದ್ರರ ಕರ ಬಿಸಜಜ ಯೋಗೀಂದ್ರ
ಸುಶರಧಿ ಸಂಭವ ಶಶಿ ಸುಮತೀಂದ್ರ ೩

೧೮೧

ಶರಣು ಶರಣು ಜಯ ಮುನಿರಾಯ ಸ್ವಾಮಿ
ಶರಣಾಗತ ತಾತ್ವಿಕ ಪ್ರಿಯ ಪ.

ಶ್ರೀ ಮಧ್ವಗುರು ದಯವನು ಪಡೆದು ಅ
ದೇ ಮಹಿಮನ ಮನೆಯೊಳು ಬಂದು

ನೇಮದಿ ತುರ್ಯಾಶ್ರಮ ಬಲಿದೆ ಈ
ಭೂಮಿಗಿಂದ್ರನ ಪರಿ ೧

ಅಶ್ರುತ ಪ್ರಭೆ ಬುಧರೊಳು ಬೀರಿ ನಾ
ನಾ ಶ್ರುತಿಯರ್ಥ ಪ್ರಕಟದೋರಿ
ಶಾಶ್ವತಕ್ಷಾದಿ ತ್ರಿಪ್ರಮಾಣವ ನಿ
ಜಾಶ್ರಿತರಿಗೆ ಪೇಳಿದೆ ಅನುವ ೨

ವೇದಾಂಬುಧಿಯೊಳು ಸುಧೆದೆಗೆದೆ ರಾಮ
ಪಾದಕರ್ಪಿಸಿ ಬುಧಜನಕೆರೆದೆ
ಕೈದುಗಳಂತೆ ಪ್ರಮೇಯಾರ್ಥವಿಡಿದೆ ಜಯ
ನಾದದಿಂ ದುರ್ವಾದಿಗಳನ್ಯೆಚ್ಚಿದೆ ೩

ಮರುತಮತದ ವಿಬುಧರ ನೆರಹಿಸಿ
ಮೂರೇಳರಿ ಬಲವ ಜರಿದಟ್ಟಿದೆ ಅವರ
ಬಿರುದು ಸೀಳಿದೆ ಈ ಧರೆಯ ವೈಷ್ಣ
ವರ ಭಯವ ಕಳೆದೆ ೪

ಈ ಕ್ಷೋಣಿಯೊಳು ಪ್ರತಿವರ್ಜಿತನೆ ಶ್ರೀ
ಅಕ್ಷಯಪ್ರಜ್ಞ ಕೃಪಾನ್ವಿತನೆ
ಅಕ್ಷೋಭ್ಯತೀರ್ಥರ ತನಯನೆ ವಿಶ್ವ
ಕುಕ್ಷಿ ಪ್ರಸನ್ನವೆಂಕಟಪ್ರಿಯನೆ ೫

೧೮೨

ಶ್ರೀ ವಾದಿರಾಜ ಸಲಹೆನ್ನ ರಾಜ
ಸೇವಕರಿಗಮರ ಭೂಜ ರಾಜ ಪ.

ಪಾವನ ಸುಕೀರ್ತಿ ಚಂದ್ರಿಕೆಯಿಂದ ಥಳಥಳಿಸಿ
ಭೂವಲಯಕಾಹ್ಲಾದವನಿತ್ತೆ ರಾಜ ಅ.ಪ.

ಚತುರ ಹಯಗ್ರೀವ ವಹಿಸಿ ಹೊಳೆವ ದಶ
ಮತಿಶಾಸ್ತ್ರರಥವ ನಿರ್ಮಿಸಿ
ಶ್ರುತಿ ಪಂಚರಾತ್ರವನ್ನು ವಾಜಿಗೈದು
ಋತು ಭೇದಶರ ಒಗ್ಗೂಡಿಸಿನ್ನೆಸೆದು
ಕ್ಷಿತಿಯರ ದುರ್ವಾದಿಗಳ ಜೈಸಿದೆ ಅ
ಪ್ರತಿ ಮಹಾರಥಿಕನೆನಿಸುವ ಚಕ್ರವರ್ತಿ ರಾಜ ೧

ಬೇಕಾದ ಪುರುಷಾರ್ಥವ ಕೊಡುವ ಗುಣ
ಶಾಖೆಗಳ ಸೊಬಗುದ್ದೋರೆ
ಶ್ರೀಕರ ಗ್ರಂಥರಚನೆಗಳ ವನೇಕ ಪತ್ರದವುಗಳಿರೆ
ಆ ಕರುಣ ಲೋಚನ ಕುಸುಮರಸವನುಂಡು
ಝೇಂಕರಿಪ ಕವಿ ಮಧು ಮಕರಂದ ರಾಜಿಸುವ ರಾಜ ೨

ಸಾರಾರ್ಥ ಚೋರ ಕುಲದಗಲ ಭೇದಿಸಿ ಸಂ
ಚಾರ ಧರೆಯೊಳಗಿಡಿಸಿ
ಈರಮತಸದ್ವನದಿಹ ಪಂಡಿತ ಚ
ಕೋರಗಳ ನಲಿನಲಿಸಿದೆ
ಧೀರ ವಾಗೀಶಕರವಾರಿಧಿಭವ ವಾದಿವಂದ್ಯ
ವಾರಿನಿಧಿ ನಂದಕರ ಪ್ರಸನ್ವೆಂಕಟಪ್ರಿಯ ೩

೧೮೩

ಸಕ್ಕರೆ ಸವಿ ಸಮ ತತ್ವರಸಿಕ
ಸುಖತೀರ್ಥರಲ್ಲದೆ ಶು
ನಿಕುತರ್ಕ ಪರ್ಣಾಶನ ನರಗುರಿ ಬಲ್ಲವೆ
ಮುಕ್ತಿಪಥದ ಹವಣ ಪ.

ಪಯಸ ಪಯವ ನಿರ್ಣೈಸಿ ಸೇವಿಪ ಹಂಸ
ಚಯವಲ್ಲದೆ ಮಲವ
ಬಯಸಿ ಮೆಲ್ಲುವ ವೃದ್ಧ ವಾಯಸ ತಾ ಬಲ್ಲದೆ
ನಯ ರುಚಿ ಹೇಳಾ ೧

ದ್ವಿಪಶಿರ ಪೀಯೂಷವ ಸಾಮಭೇದಜ್ಞ ಮೃಗಾ
ಧಿಪ ಬಲ್ಲಾಮೇಧ್ಯ ಆಮಿಷ
ಚಪ್ಪರಿದುಂಬೊ ಶೃಗಾಲ ಶ್ವಾನ ತಾವು ಬಲ್ಲವೆ
ಆ ಪರವಿಡಿಯ ಸುಖವ ೨

ಮಂಗಳಾಂಬುಜ ಮಕರಂದ ಭೋಜಕ ಶುಭ
ಭೃಂಗವಲ್ಲದೆ ಅಶುಭ
ಗುಂಗಿ ತಾ ಬಲ್ಲದೆ ಸುರಭಿ ಅಸುರಭಿ ಗು
ಣಂಗಳ ಬಗೆಗಳನು ೩

ಸುರತರುವಿಂಧನ ಸುರಭಿ ಪಶು ಪಾ
ಮರಗೆ ಮಣಿಯೆ ಕಲ್ಲು
ವರ ಪೇಯ ವಿಷ ಗುರು ಗುರುಕೃಪೆ ಹಿತ
ದುರುಳನಿಗಪಕಾರ ೪

ಸಲ್ಲ ಕರುಧಿ(ಗಿ?)ರುಣೆ ಪಾಲ್ಗರಿದುಣ್ಣಲು
ಬಲ್ಲ ಪೂರಣಬೋಧರು
ಫುಲ್ಲನಾಭ ಪ್ರಸನ್ನವೆಂಕಟಪತಿಯ
ಆಹ್ಲಾದ ಕಾರಣರು ೫

೧೮೪

ಸತತ ಸ್ಮರಿಸಿ ಮಧ್ವ ಸಂತತಿ ಗುರುಗಳ
ಗತಿಯುಂಟು ಸಂತತಿ ಸಂಪತ್ತಿಯುಂಟು ಪ.

ಶ್ರೀ ಮಧ್ವ ಪದ್ಮನಾಭ ನರಹರಿ ಮಾಧವ
ಆ ಮೌನಿ ಅಕ್ಷೋಭ್ಯ ಜಯರಾಯ ವಿದ್ಯಾಧಿರಾಜ
ಭೂಮ ಕವೀಂದ್ರ ವಾಗೀಶರ ೧

ಮುನಿರಾಮಚಂದ್ರ ವಿದ್ಯಾನಿಧಿ ರಘುನಾಥ ಮಾ
ರನ ಗೆಲಿದ ರಘುವರ್ಯ ರಘೂತ್ತಮ ವೇದವ್ಯಾಸ
ಘನ ವಿದ್ಯಾಧೀಶ ವಿದ್ಯಾನಿಧಿಗಳ ೨

ಸತ್ಯವ್ರತ ದಯಾನಿಧಿ ಸತ್ಯನಾಥ ಅನುಪಮ
ಸತ್ಯಾಭಿನವ ಗುರುಕರಪದ್ಮಜ ನಮ್ಮ ಗುರು
ಸತ್ಯಪೂರ್ಣ ಪ್ರಸನ್ವೆಂಕಟ ಪ್ರಿಯರ ೩

೧೮೫

ಸತ್ಯಪ್ರಜ್ಞರಾಯರಂಘ್ರಿಗಳ ಸಂತತ
ಹೃತ್ಪದ್ಮದಲಿ ನೆನೆಯಿರಯ್ಯ ಪುನರಪಿಭವ.....
ತ್ರತಿಯಂ ತೋರಿ ಸಾಪ್ರಾಯ ಪದ್ಧತಿಯ ವಿ
ಪ್ರತಿಯಂ ತೋರುವ ಹೊರೆವ ಪ.

ಸೂತ್ರಾರ್ಥಸ್ತೇಯ ದಾನವರಿಳೆಗೆ ಭಾರಾಗಿ
ವೇತ್ತೃಜನಗಳ ಮತಿಗೆಡಿಸಿ ಬಾಧಿಸುತಿರಲು
ಗೋತ್ರಧರನಾಜ್ಞದಿಂ ಶ್ರೀ ಮಾರುತನು ತನ್ನ
ಯ ತೃತೀಯಾವತಾರದಿಂ
ದ್ವಾತ್ರಿಂಶತ್ ಲಕ್ಷಣಾನ್ವಿತನಾಗಿ ಋಜುಗಣದ
ಗೋತ್ರದಲ್ಲೆಸೆದು ನಿಜಜನನಿಗ್ಗುರುಷವನಿತ್ತು
ಧಾತ್ರಿಗೆ ಭೂಷಣದ ಮಣಿಯಂತೆ ಹೊಳೆ ಹೊಳೆವ
ಸುತ್ರಾಮಾಶೇಷವರದ ಅಭಯದ ೧

ವಿಶ್ವವೆಲ್ಲ ಮಿಥ್ಯಪ್ರತಿಷ್ಠಿತವು ಅಲ್ಲವು ನಿ
ರೀಶ್ವರ ಭುವನವೆಂಬ ಕುಮತಿಘಟಿಗಳ ಮಾತ
ರಿಶ್ವ ಕಂಠೀರವ ನೀ ಯತಿ ರೂಪದಲಿ ಸದೆದು
ಸುಸ್ವಭಾವದಲ್ಲಿ ಒಪ್ಪುತ ಸು
ಶಶ್ವದೇಕ ಶ್ರೀ ಹರಿಯು ಜೀವ ಜಗದೊಡೆಯ
ನಶ್ವರಾನಶ್ವರಾರ್ಥೇತರ ಮುಕುಂದೆನ್ನುತ
ತಾ ಸ್ವಕೀಯರಿಗೆಲ್ಲ ಶ್ರುತಿ ಸ್ಮೃತಿ ಸುವಾಕ್ಯದಿಂ
ವಿಶ್ವಾಸವಂ ಬಲಿಸಿದ ಸುಬೋಧ ೨

ಮರ್ತ್ಯದ ಬುಧರು ಬುದ್ಧಿಭ್ರಂಶದಲಿ ಮಾಯಿಮತ
ಗರ್ತದಲಿ ಬಿದ್ದಿರಲು ಕಂಡು ಕರುಣದಲಿ ಸುಖ

ತೀರ್ಥ ಮಧ್ವಾನಂದ ದಶಪ್ರಮತಿಯೆಂಬ ವೇ
ದಾರ್ಥ ನಾಮದಲಿ ಮೆರೆದು
ಧೂರ್ತ ದುರ್ಭಾಷ್ಯಾಂಧಕಾರವಂ ಬಿಡಿಸಿ ವಿ
ದ್ಯಾರ್ಥಿಗಳಿಗೊಲಿದು ಸದ್ಭಾಷ್ಯಗಳ ರಚಿಸಿ ಪರ
ಮಾರ್ಥ ವ್ಯಾಖ್ಯಾನಗಳ ಪೇಳಿ ಉದ್ಧರಿಸಿದ ಸ
ಮರ್ಥ ಮಾರ್ತಾಂಡನಾದ ಸುಖದ ೩

ಮಬ್ಬು ಮುಸುಕಿದ ಪರೆಯ ತೆರೆದ ಸುಜನರ ಹೊರೆದ
ಕೊಬ್ಬಿದ ಕುತರ್ಕಿಗಳ ತರಿದ ಇಂದುವ ಜರಿದ
ಸಭ್ಯರಿಗೆ ತತ್ವಸುಧೆಯೆರೆದ ಮಂತ್ರವನೊರೆದ
ನಬ್ಬ ಗುರು ಪೂರ್ಣ ಬೋಧ
ದುಬ್ಬಿ ತಮಸಿನೊಳು ಮಿಥ್ಯಾತ್ಮಕ ದುರಾತ್ಮರಿಳೆ
ಗುಬ್ಬಸದ ದರ್ಶನಗಳೊರೆಸಿ ಸತ್ಯವ ಮೆರೆಸಿ
ಅಬ್ಬರದ ತಪ್ತ ಮುದ್ರೆಯನಿತ್ತಘವ ಕಿತ್ತು
ನಿರ್ಭಯವ ಪದವನೀವ ಕಾವ ೪

ಇಂಥ ಸಂಕರ್ಷಣನ ಪ್ರೀತಿಯ ಕುವರ ಅಮಲ
ವಾತ ನಿಖಿಳ ಪ್ರಾಣನಾಥ ರಘುಪತಿಯ ಸೇವ್ಯ
ತ್ರೇತೆಯಲಿ ಮೂಡಿ ಪ್ರಖ್ಯಾತಾಕ್ಷಯ ಪ್ರಮುಖ
ಭೂತಳದ ಭಾರರೊದೆದ
ಪೂತನಾರಿಯ ಪಕ್ಷಪಾತದಿಂ ಬಕ ಜರಾ
ಜಾತ ಗಾಂಧಾರ್ಯರಂ ಘಾತಿಸಿದ ಶ್ರೀಸ
ವಿತನಯನಾಜ್ಞದಲಿ ಪಾತಕಿಗಳೊರಸಿದಾ
ದ್ವೈತ ಮತ ಕಾಲನೆನಿಪ್ಪ ೫

ಹತ್ತುಪನಿಷದ್ಭಾಷ್ಯ ಸೂತ್ರ ಗೀತಾಭಾಷ್ಯ
ಮತ್ತೆ ಅಣುಭಾಷ್ಯ ಋಗ್ಭಾಷ್ಯ ಭಾಗವತ
ತಾತ್ಪರ್ಯ ವಿಷ್ಣುಸ್ತೋತ್ರದ್ವಯಂ ಕಲ್ಪದ್ವಯಂ
ಹತ್ತು ಪ್ರಕರಣವು ಕೃತಿಯು
ತಂತ್ರಸಾರ ಕೃಷ್ಣಾಮೃತಾಬ್ಧಿಯ ಮಹಾಭಾ

ರತಾನ್ವಯ ವಿವರ್ಣನವೆಂಬ ಸದ್ಗ್ರಂಥ ಮೂ
ವತ್ತೇಳು ರಚಿಸಿ ಮೋಕ್ಷೋಪಾಯವರುಹಿದ ವಿ
ಧಾತ್ರ ಪದಕರ್ತನೀತ ತಾತ ೬

ಭಾಟ್ಟ ಪ್ರಭಾತ ಛೆರಾನಾಯತ (?) ಪ್ರತ್ಯಕ್ಷ ಮತಿ
.... ಚಾರ್ವಾಕ...................ಚೌದ್ಧನೆ
............ಶಂಕರನೆ ಕಡೆಯಾಗಿಪ್ಪತ್ತೊಂದು
ನಷ್ಟ ಭಾಷ್ಯವನಂಘ್ರಿಯಲಿ .
ಮೆಟ್ಟಿ ಸದ್ಗುಣ ಶರಧಿ ಹರಿಯು ಭುವನಂಗಳನು
ಹುಟ್ಟಿಸೆತ್ತಿಳಿದಾಡಿ ಮುಕುತಿಯ ನಿಜಗ್ಗಿತ್ತು
ಕಷ್ಟವ ಖಳರ್ಗೀವನೆಂದು ಡಂಗುರಿದ
ದಿಟ್ಟಾಲವಬೋಧ ರಾಜತೇಜ ೭

ಶ್ರುತಿ ವೇದನಿಕರ ಚಕ್ರವ ಪಿಡಿದು ಬ್ರಹ್ಮತ
ರ್ಕಾವಳಿಯ ಶಂಖದ ಭೀಕರ ಘೋಷದಿಂದ ಜಗ
ತ್ಪಾವನನ ಪುರಾಣಗದೆ ಇತಿಹಾಸ ಪಂಚರಾತ್ರ
ಭಾವ ಶಾರ್ಙ್ಗವಿಡಿದು
ಜೀವೇಶ ಭೇದಶರಪಂಚಕದಿ ಬ್ರಹ್ಮಸೂ
ತ್ರಾವಳಿಯಿಂಬಿನ ನಂದಕವ ಧರಿಸಿ ಬೆಂಬತ್ತಿ
ದೇವರಿಪುದುರ್ಮತವ ಓಡಿಸಿದ
ಮಧ್ವನಾರಾಯಣ ಪಾರಾಯಣ ಯತಿ ಸುಮತಿ ೮

ತರುಣರವಿ ತೇಜ ಸುಸ್ಮಿತ ಸುಂದರ ನಾನಾ ಸು
ವರ್ಣಕಾಪಿನ ಭ್ರಾತ ಪ್ರಬೋಧ ಮುದ್ರಾಭಯ
ಕರ ಸರೋರುಹದಿಂದ ಮೆರೆವ ವಿಧಿಪನ
ಶರಣಜನ ಮಂದಾರನ
ಪರಮನವರತ್ನದ ಪದ್ಮದ ಮಾಲೆಯಿದು ಪುಣ್ಯ
ಕರವು ವೈಷ್ಣವರ್ಗೆ ಅಘದೋಟ ಮುಕ್ತಿಯ ಕೂಟ
ಗುರುಮೂರ್ತಿಯ ಕೀರ್ತಿ ಪ್ರಸನ್ನವೆಂಕಟಪತಿಯ
ವರ ಪ್ರಧಾನಾಂಗ ಮೂರ್ತಿಯ ವಾರ್ತೆ ೯

೧೮೬

ಸಲಹು ಸಲಹು ಗುರುರಾಯನೆ ನ
ನ್ನಾಲಸದೆ ಪಾವನ್ನಕಾಯನೆ ನಾನು
ಹಲವು ದಿವಸ ನಿನ್ನ ನಂಬಿರೆ ದ್ವಿಜ
ಕುಲಮಣಿ ಜನಾರ್ದನಾಚಾರ್ಯನೆ ಪ.

ನಿನ್ನ ಶರಣು ಹೊಕ್ಕ ಭೃತ್ಯರು ತತ್ವ
ಪೂರ್ಣರಾದರು ಪೂತರಾದರು
ನನ್ನ ಮನ್ನಿಸಲಾಗದೆ ದಾತನೆ ವಿ
ದ್ಯೋನ್ನತ ವಿಶ್ವಕೆ ಪ್ರೀತನೆ ೧

ಆ ಬಾಲ್ಯದೊಳು ರಘುಪತಿ ಪಾದ
ಭಜನಾದರ ನಿನಗುಂಟು ಕೋವಿದ
ಈ ಮೇದಿನಿಯಲಿ ಸುಧಾಸುರಸದ
ಬಹು ಸ್ವಾದವ ಬಲ್ಲ ಇಷ್ಟಾರ್ಥದ ೨

ಅಜ್ಞಾನ ಕತ್ತಲೆ ಕವಿದಿದೆ ಅ
ಭಿಜ್ಞನ ಮಾಡಲಿ ಬಾರದೆ ನಿನ್ನ
ಪ್ರಜ್ಞತನದ ಪ್ರಸವ ನಿತ್ಯ
ಆಜ್ಞಾಧಾರಕಗೀಯೊ ಜ್ಞಾನವ ೩

ಭಕ್ತಿ ವೈರಾಗ್ಯ ಸುಜ್ಞಾನ ಸಂ
ಯುಕ್ತ ಮಂಗಳ ಗುಣಾಲಂಕೃತ
ಯುಕ್ತಿ ಸಾಲದು ಹರಿಸೇವೆಗೆ ಸ್ವಪ್ನ
ವ್ಯಕ್ತ ಬೋಧಿಸೆನಗೆ ೪

ತಂದೆ ತಾಯಿ ಆಪ್ತಮಿತ್ರ ನೀ ಗತಿ
ಹೊಂದಿಪ ದುರಿತಘಹರ್ತ ನೀ ಗೋ
ವಿಂದ ಪ್ರಸನ್ವೆಂಕಟೇಶನ ಹೃದಯ
ಮಂದಿರದೊಳು ಪೂಜಾಶೀಲನೆ ೫

೧೮೭

ಸಲಹು ಸುಖತೀರ್ಥಮತ ಜಲಧಿಚಂದ್ರ
ನಳಿನೀಶಾರ್ಚಕ ಇಂದ್ರ ಇಳೆಗೆ ಸುಮುನೀಂದ್ರ (ಮತೀಂ) ಸಲಹು ಪ.

ಅತುಳ ತತ್ವಾರ್ಥ ಗೋಪ್ರತತಿ ಸಂಪೂರ್ಣ ದು
ರ್ಮತಿ ಮಾಯಿಮತತಮ ವಿಶದಗುಣ
ಸತತ ವಿದ್ವತ ಕುಮುದ ಪ್ರತಿಪಾಲಕನೆ ಕರುಣಾ
ಮೃತ ಭರಿತವದನ ಖಚಿತ ಯಶೋಭರಣ ೧

ಸುಜ್ಞಾನ ಸುರಭಿಯುತ ಅಜ್ಞ ಜಂಭಾರಿ ಭಳಿ ವೈ
ರಾಗ್ಯ ಭಕುತ್ಯಾದಿ ವಸುಭಾಗ್ಯಶಾಲಿ
ಯಜ್ಞೇನ(?)ಶುಕನ ಮತವಜ್ಞನ ದಂಭೋಳಿ
ವಾಗ್ರತ್ನಮಾಲಿ ಮುನಿವರ್ಗ ಶುಭ ಮೌಳಿ ೨

ಧೀರ ಯೋಗೀಂದ್ರಕರ ವಾರಿಜೋದ್ಭವ ಯೋಗಿ
ಸೂರೀಂದ್ರ ಭವಕಲ್ಪಭೂರುಹ ಸುತ್ಯಾಗಿ
ಧಾರುಣಿಗೆ ಪ್ರಸನ್ನವೆಂಕಟ ರಾಮ ಪ್ರಿಯವಾಗಿ
ಈರಮತ ಸ್ಥಾಪಿಸಿದೆ ಮೀರಿ ಚೆನ್ನಾಗಿ ೩

೧೮೮

ಸ್ವಾಮಿ ಸತ್ಯಾಧಿರಾಜ ಮುನಿಗೆಣೆಗಾಣೆ ನಾ
ಭೂಮಿಯ ಮೇಲೆ ಚತುರನ
ಸಾಮರ್ಥ್ಯ ನೋಡಿರಿ ಭಕುತಿಯನರಿಯದ
ಪಾಮರನನು ಬಾಗಿಸುವನ ಪ.

ಗುರು ಸತ್ಯಾಭಿನವರಾಯನ ಪಟ್ಟದಾನೆಯು
ಧರೆಯ ಮೇಲೋಡಾಡುವಂತೆ
ಚರಿಸುತ ಖಳರನಂಜಿಸಿ ತಪ್ಪ ಕೈಕೊಂಡು
ಗುರುಪಾದಕೊಪ್ಪಿಸಿ ನಿಂತ ೧

ಕಲ್ಲು ಕರಗುವುದು ಕೆಚ್ಚು ಮಣಿವುದು ಇ
ದೆಲ್ಲಿಯ ಗಾದೆಯೆಂದೆನಲು
ಕಲ್ಲೆದೆ ಮಾನಿಸರ ದ್ರವಿಸುವ ಕೆಚ್ಚೆದೆ
ಕ್ಷುಲ್ಲರ ಮಣಿಸುವ ಕೇಳಿ ೨

ಆಲಸ್ಯವೆ ಮೋಕ್ಷೋಪಾಯ ದಹನೆಂದು
ಕಾಲವ ಕಳೆಯನು ವ್ಯರ್ಥ
ಮೂಲ ರಘುಪತಿ ಪಾದಾರವಿಂದವ ಮೇಲೆ
ಮೇಲರ್ಚಿಪ ಸಮರ್ಥ ೩

ಜ್ಞಾನ ಭಕುತಿ ವೈರಾಗ್ಯ ಪ್ರಣವ ಜಪ
ಧ್ಯಾನ ಮೌನ ಪರಿಪೂರ್ಣ
ಆನಂದತೀರ್ಥ ಶಾಸ್ತ್ರಾಂಬುಧಿ ತಿಮಿಂಗಿಲ
ದೀನರ ಸುರತರು ಜಾಣ ೪

ತಂದೆ ಸತ್ಯಾಭಿನವ ತೀರ್ಥ ಕರಜಾತ
ಎಂದೆಂದು ಸುಜನರ ಪ್ರಿಯ
ಇಂದಿರೆರಮಣ ಪ್ರಸನ್ವೆಂಕಟೇಶನ
ಹೊಂದಿದ ಸದ್ಗುಣ ಗೇಹ ೫

೧೮೯

ತಂದೆ ಪುರಂದರದಾಸರ ಸ್ಮರಿಸುವೆ ಎನ್ನ
ಮಂದಮತಿಗಳೆದು ಹರಿಭಟನೆನಿಸುವೆ ಪ.

ಗುರು ವ್ಯಾಸರಾಜರ ಚರಣಾಬ್ಜ ಷಟ್ಚರಣನ
ವಿರತಿ ಭಕುತಿ ಜ್ಞಾನದಾರ್ಣವನ
ವರ ಉಪನಿಷದ್ವಾರಿನಿಧಿಗೆ ತಿಮಿಂಗಿಲನಹನ
ಧರೆಯ ಕವಿಕುಲ ಶಿಖಾಮಣಿಯೆನಿಪನ ೧

ದಿನ ದಿನ ಯದೃಚ್ಛಾರ್ಥಲಾಭದಲಿ ತುಷ್ಟನ
ಕನಕಲೋಷ್ಠ ಸಮಾನದೀಕ್ಷಿಸುವನ
ಘನ ಸಿದ್ಧಿಗಳು ತಾವೆ ಬರಲೊಡಂಬಡದನ ಹರಿ
ಗುಣ ಕೀರ್ತನೆಯಲ್ಲಿ ಪರವಶದಿಹನ ೨

ಭವಜಲಧಿ ಗೋಷ್ಪದಕೆ ಸರಿದಾಟಿ ಕಾಮ ಕ್ರೋ
ಧವ ಮೆಟ್ಟಿ ಭಕ್ತಿಸುಧೆಯುಂಡು ತೇಗಿ
ಭುವಿಯಲ್ಲಿ ನಿಜಕೀರ್ತಿಯನು ಹರಹಿ ಪವನಮತ
ದವರೆನಿಪ ದಾಸರಿಗೆ ತವರೂಪ ತೋರಿದನ ೩

ಕವನೋಕ್ತಿ ಮಳೆಗರೆದು ಹರಿದಾಸ ಪೈರ್ಗಳಿಗೆ
ಅವಿರಳಾನಂದವಿತ್ತರ್ಥಿಸುವನ
ನವಭಕುತಿ ಮನಗಂಡು ಸವೆಯದಾನಂದಪುರ ಪ
ಥವನು ತೋರಿಸಿದಂಥ ಬಹುಕೃಪಾಕರನ ೪

ಗೀತ ತಾಯಿ ಸುಳಾದ್ಯುಗಾಭೋಗ ಪದ್ಯಪದ
ವ್ರಾತ ಪ್ರಬಂಧ ರಚಿಸಿ ವಿಠಲನ
ಪ್ರೀತಿ ಬಡಿಸಿ ಕಂಡು ನಲಿವ ವೈಷ್ಣವಾಗ್ರ
ನಾಥ ಪ್ರಸನ್ವೆಂಕಟ ಕೃಷ್ಣಪ್ರಿಯನ ೫

೩. ಆತ್ಮ ನಿವೇದನೆ

೧೯೦

ಅಂಜಿಕ್ಯಾಕೆನಗಂಜಿಕೆ
ಕಂಜನಾಭ ಶ್ರೀನಿವಾಸನ ದಯವಿರಲು ಪ.

ಅಶನ ವಸನವನ್ನು ಕುಳಿತಲ್ಲೆ ನಡೆಸುವ
ನಿಶಿದಿನ ನೀಚರಾಧೀನ ಮಾಡದೆ
ಹಸನಾಗಿ ತನ್ನಂಘ್ರಿ ನೆರಳೊಳು ಬಚ್ಚಿಟ್ಟು
ಕುಶಲದಿ ಸಾಕುವ ದೊರೆಯ ನಂಬಿದ ಬಳಿಕ ೧

ಹುಲ್ಲು ಕಚ್ಚಿ ಕಲ್ಲು ಹೊತ್ತು ಧನವನುಳ್ಳ
ಕ್ಷುಲ್ಲ ಜೀವರನೆಲ್ಲ ಕಾಯುವ ಶಕ್ತಿ
ಎಲ್ಲ ವ್ಯವಹಾರವ ಮಾಡುವ ಬಲ ನನ
ಗಿಲ್ಲೆಂದು ಆಯಾಸಬಡಲೀಸದವನಿರೆ ೨

ಆವಾವ ಕಾಲದಿ ಆವಾವ ದೇಶದಿ
ಸೇವೆಗೆ ನಾ ತಪ್ಪೆ ಕೃಪೆ ತಪ್ಪಿಸ
ಭಾವಿಕರೊಡೆಯ ಪ್ರಸನ್ವೆಂಕಟಾದ್ರೀಶ
ಸಾವು ಕಳೆದು ಜೀವಕಾಶ್ರಯನಾಗಿರೆ ೩

೧೯೧

ಅಂಜುವೆನದಕೆ ಕೃಷ್ಣ ಅಭಯವ ಕೋರಿದಕೆ ಪ.

ನೀನಿತ್ತ ಮತಿಯಿಂದ ನಿನ್ನ ಹೊಗಳುತಿರೆ
ಹೀನ ಮಾನವರೊಂದೊಂದೂಣೆಯ ನುಡಿವರು ೧

ಬಾಣವನೆಸೆದು ಬಿಲ್ಲನಡಗಿಸುವಂತೆ
ಆ ನಿಂದಕರು ನಿಂದಿಶಾಣೆಗೆ ನಿಲುವರು ೨

ಮಾಧವ ನಾನೇನು ಓದಿದವನಲ್ಲ ಶ್ರೀ
ಪಾದವೆ ಗತಿಯೆಂಬೆ ಬಾಧಿಸುತ್ತೈದಾರೆ ೩

ಅಪರಿಮಿತಪರಾಧಿ ಕಪಟಿ ನಾನಾಗಿಹೆ
ಅಪರೋಕ್ಷಿಯೆಂದೆಂಬ ಕುಪಿತ ಖಳರ ನೋಡಿ ೪

ಹಿತಶತ್ರುಗಳ ಸಂಗತಿ ಸಾಕು ಪ್ರಸನ್ವೆಂಕಟ
ಪತಿ ನಿನ್ನ ಭಕ್ತರ ಸಂಗ ಕೊಡು ಕಾಣೊ ೫

೧೯೨

ಅನಿಮಿತ್ತ ಬಂಧು ಅತಿದಯಾಸಿಂಧು
ಆನತ ನಾನೆಂದು ಅಭಯ ನೀಡಿಂದು ಪ.

ಮಧುಕೈಟಭಾರಿ ಮುರಾಂತಕೋದಾರಿ
ಮದನೋದ್ಭವಕಾರಿ ಮನ್ನಿಸೆನ್ನನುದಾರಿ ೧

ವೈಕುಂಠಸದನ ವಜ್ರಾಭರಣ
ಶ್ರೀಕರವದನ ಸಲಹೆನ್ನನುದಿನ ೨

ಬಿಸಜಜನಯ್ಯ ಬರುಹಿ ಸುರಯ್ಯ
ಪ್ರಸನ್ವೆಂಕಟಯ್ಯ ಪಾಪವಾರಿಸಯ್ಯ ೩

೧೯೩

ಅನುದಿನ ಭವಾಬ್ಧಿಯಲ್ಲಿ ಭವತರಂಗ ರಾಶಿಯಲ್ಲಿ
ಮುಳುಗುತಿಹೆ ಕೈಯ ಪಿಡಿಯೊ ಜನಕ ಕೃಷ್ಣಯ್ಯ ಪ.

ಶ್ರೀನಿವಾಸ ನಿನ್ನ ಭಕ್ತಿ ಮಾಡದ ಅಘವಂತನೆಂದು
ಹೀನ ಜನರ್ಪಾಳಕಿಟ್ಟರೇನ ಹೇಳಲೊ
ನೀನು ಪಾಲಿಪ ರಾಜ್ಯದಲ್ಲಜ್ಞಾನಿ ದೇಶಿಗನೊಬ್ಬ ಕೆಡಲು
ಹಾನಿ ಹೆಚ್ಚಳ ನಿನ್ನದಲ್ಲೆ ದೀನದಯಾಳು ೧

ಚಿತ್ತವೇಗಕ್ಕವಧಿ ಇಲ್ಲ ಹೊತ್ತುಕೊಂಡು ಕಂಡ ಕಡೆಗೆ
ಸುತ್ತುತಿದೆ ತನ್ನ ದಳವ ಕೂಡಿ ರಂಗಯ್ಯ
ಕರ್ತ ನಿನ್ನ ಪಾದದೆಡೆಯೆ ಒತ್ತಿ ನೀನಿದನಾಳಬೇಕು
ಹೆತ್ತ ತಾಯಿ ನೀನೆ ಗಡಾನೆತ್ತಿಕೊಳ್ಳಯ್ಯ ೨

ಹಳುವಗಳು ದಾರಿಕಾಣೆ ಸೆಳವಿನೊಳಾಶ್ರಯ ಕಾಣೆ
ನಳಿನನೇತ್ರ ನೀನೆ ಕಾಯೊ ಸುಲಭರೊಡೆಯ

ನೆಲೆಯ ತೋರಾತಂಕಹಾರಿ ಒಲಿದು ವರಾಭಯವ ಬೀರಿ
ಒಲಿಯೊ ಪ್ರಸನ್ವೆಂಕಟಾದ್ರಿನಿಲಯ ಉದಾರಿ ೩

೧೯೪

ಆಗಲಿ ಹರಿಕೃಪೆ ಭಾಗವತರ ಸಂಗ
ನೀಗುವೆ ನಿಮ್ಮ ದುರಿತಗಳಿರ ಪ.

ಹರಿನಂಟರೋಲೈಸಿ ಜ್ಞಾನಾಸ್ತ್ರ ಗಳಿಸುವೆ
ಹರಿನಾಮ ವಜ್ರಕವಚ ತೊಡುವೆ
ಹರಿ ನಿರ್ಮಾಲ್ಯದ ಉತ್ತಮಾಂಗಾಭರಣವಿಟ್ಟು
ನೆರೆ ನಿಮ್ಮ ನಾಮ ನಿರ್ನಾಮವ ಮಾಳ್ಪೆ ೧

ಶ್ರೀಲೋಲನಂಘ್ರಿ ಸಮ್ಮದ ಸೈನ್ಯವ ಕೂಡಿ
ತಾಳ ದಂಡಿಗೆ ಗೀತಾಯುಧಗಳಿಂದ
ಕಾಲಕಾಲಕೆ ನಿಮ್ಮ ಮೇಳವ ಮುರಿದಾಡಿ
ಹಾಳು ಮಾಡುವೆ ಕೈಯಲಿ ಕಡ್ಡಿ ಕೊಡುವೆ ೨

ಇಕ್ಷು ಸ್ವಾದಾದರೆ ಬೇರಸಹಿತ ನೀವು
ಭಕ್ಷಿಸಬೇಡಿ ಬಾರದೆ ಮರಳಿ
ಪಕ್ಷಿಗಮನ ಪ್ರಸನ್ನವೆಂಕಟೇಶನ
ಪಕ್ಷದವರ ಹಗೆ ಹೊಲ್ಲಸಲ್ಲ ೩

೧೯೫

ಆರೆನ್ನ ಉಳುಹುವರ್ರೈ ರಂಗ
ಘೋರಾರಣ್ಯ ಭವದಿ ಸಿಕ್ಕಿದೆ ರಂಗ ಪ.

ಎಂಟು ಕಾಡಾನೆ ಎಂಟು ಕಡೆಯಲಿ ನಿಂತಿವೆ
ಗಂಟನಿಕ್ಕಿವೆ ಮೂರು ದಳ್ಳುರಿಯ
ಸುಂಟರಗಾಳ್ಯೆಬ್ಬರಿಸಲು ಗಿಡ
ಗಂಟಿಲಿ ಬಿದ್ದೆ ನೀನಲ್ಲದೆನ್ನ ೧

ಹುಲಿಯೊಂದು ಗುಡುಗುಡಿಸುತಿದೆ ಭಯಂಕರ
ಬಲು ತೋಳೆರಡು ಕೆಕ್ಕರಿಸುತಿವೆ
ಸಲುಗೆಯ ಕೋತಿಯೊಂದಣಕಾಡುತಲಿದೆ
ಮೇಲೆ ಕರಡಿಯು ಹತ್ತೆಳವುತಿದೆ ೨

ಕಾಳುರಗನ ಕಟ್ಟು ಮೈತುಂಬ ನನ್ನ
ನಾಲಿಗೇಳದು ನಿನ್ನ ಕರೆಯಲಿಕೆ ನಿ
ನ್ನಾಳಟ್ಟಿ ಕರೆಸಿಕೊಳ್ಳೆಲೆ ತಂದೆ ನಾ
ಗೋಳಿಟ್ಟೆ ಪ್ರಸನ್ನವೆಂಕಟ ಬಂಧು ೩

೧೯೬

ಆವಾಗ್ಗೆ ಕಾಂಬೆ ನಿನ್ನ ಮೈಯ ನನ್ನ
ಕಾವ ಮುಕುಂದ ಮುರಾರಿಯ ಸರ್ವ
ಜೀವಕೆ ಛಾಯನಾದವನ ನನ್ನ
ಸಾವು ಹುಟ್ಟು ತಪ್ಪಿಸುವನ ಪ.

ದೇಶ ದೇಶ ತಿರುಗಿ ಸೋತೆ ನಾ ಬಲು
ದೇಶಿಗನಾದೆ ಕೃಶಾದೆ ನಾ ತನ್ನ
ದಾಸರ ಹಾನಿ ಇನ್ನಾರಿಗೆ ಆ
ವಾಸುಕಿಶಯನಗೆ ಹೇಳಿದೆ ೧

ಆಪತ್ತು ಬರಲೀಸ ಎಂದಿಗೆ ತ್ರಿವಿಧ
ತಾಪವನಾರೈವದಾವಾಗ್ಗೆ ಬಹು
ಪಾಪ ನೂಕಿದೆ ಅವನ ನಾಮದೆ ಕಂಡ
ಶ್ರೀಪತಿಗೆಲ್ಲ ಬಿನ್ನೈಪೆನಿಂದೆ ೨

ಕಂಗಳು ದಣಿವನ್ನ ಕಾಂಬೆನೆ ಎ
ನ್ನಿಂಗಿತ ಹರಿಮೆಚ್ಚಿ ಕೇಳ್ವನೆ ನಿತ್ಯ
ಮಂಗಳ ಪ್ರಸನ್ವೆಂಕಟಾಚಲವಾಸ
ರಂಗನು ನಿಜಭಕ್ತವತ್ಸಲ ೩

೧೯೭

ಆಶಾವಿಡಿದು ಬಂದಿಹೆ ದೇಶಿಗ ನಾನು ಅಭಿ
ಲಾಷೆ ಪೂರಿಸೆಮ್ಮಯ್ಯ ಶೇಷಗಿರಿಯ ತಿಮ್ಮಯ್ಯ ಪ.

ಘೋರ ಭವಾರಣ್ಯದಲ್ಲಿ ದಾರಾಪತ್ಯಬಂಧು ಜನರೆಂಬ
ಕ್ರೂರಮೃಗಾಸ್ಯಕೆ ಸಿಲುಕಿ ದಾರಿವರಿಯೆ
ನಾರಸಿಂಹ ನಿನ್ನವರು ತೋರಿದರು ಶ್ರೀಮಂಗಳ
ಮೂರುತಿಯ ಕಂಡು ಸುಖಸಾರಾಮೃತವುಣ್ಣಲಾಗಿ ೧

ಒಡಲಿಗೋಸುಗ ವೃತ್ತಿ ಹಿಡಿದು ತಡವರಿಸುತ
ಕಡೆಗಾಣದೊರಲಿ ಅಂಜ್ಯೋಡುತಿರಲು
ಒಡೆಯ ನಿನ್ನಯ ಸಿರಿಸಡಗರ ನಾಮ ಕೇಳಿ
ಹುಡುಕುತ ನಲಿವಿಂದ ಬಡತನ ಹಿಂಗಲೆಂದು ೨

ಈಗಿದೇ ವೈಕುಂಠವೆಂದು ಭೋಗಿ ವಾಸುದೇವನೆಂದು
ಬಾಗಿ ಶ್ರುತಿ ಸ್ಮೃತಿಗಳು ಕೂಗುತಲಿವೆ
ಯೋಗಿ ಪ್ರಸನ್ವೆಂಕಟ ಭಾಗವತರ ಪ್ರಿಯನೆಂದು
ಹೀಗೆ ಘನಗೋಳಿಡುತ ನಾ ನೀಗುವೆ ಚಿಂತೆಯನೆಂದು ೩

೧೯೮

ಇಂದು ನಾಳ್ಯೊ ಈಗಾವಾಗೊ ಈ ಕಾಯ ಸ್ಥಿರವಲ್ಲ
ಇಂದಿರೇಶ ನಿನ್ನ ನೆನೆವ ಮತಿಯ ನೀಡೊ ಮನ್ನಿಸಿ ನೋಡೊ ಪ.

ಕುಚ್ಛಿತ ಕರ್ಮವಾಚರಿಸಿ ಕಶ್ಮಲ ಜನ್ಮನುಭವಿಸಿ
ದುಶ್ಚಿತ್ತದಿ ಬಾಳ್ದೆನಯ್ಯ ದೂರಾದೆ ನಿಮಗೆ ದಮ್ಮಯ್ಯ
ಅಚ್ಚುತ ನಿನ್ನಿಚ್ಛೆಯಿಂದೆ ಆದಿವರ್ಣದವನಾದೆ
ಸ್ವಚ್ಛಿತ ಭಕ್ತಿಯನಿಲಯ ಸುಜನಬಂಧು ಸುಗುಣಸಿಂಧು ೧

ಹೊಟ್ಟೆಯ ಹೋರಟೆಗಾಗಿ ಹೊತ್ತಾರೆದ್ದು ತಿರುಗಿ ತಿರುಗಿ
ಕೆಟ್ಟ ವೃತ್ತಿಯನ್ನು ಹಿಡಿದೆ ಕೀಳುಮನುಜರೊಳಾಡಿದೆ
ಬಿಟ್ಟೆ ನಿಮ್ಮ ಪೂಜೆಯನ್ನು ಬಿದ್ದೆ ಭವಾಂಬುಧಿಯನ್ನು
ವಿಠ್ಠಲ ಎನ್ನುದ್ಧರಿಸೊ ವಿದ್ವದ್ಹೃದ್ಯ ವೇದವೇದ್ಯ ೨

ವೇದಶಾಸ್ತ್ರಾಭ್ಯಾಸವಿಲ್ಲ ವೇದಜ್ಞರರ್ಚಿಸಲಿಲ್ಲ
ಬೋಧವನು ಕೇಳಲಿಲ್ಲ ಬುದ್ಧಿ ಎನ್ನೊಳು ಚೂರಿಲ್ಲ
ಸಾಧನವ ತಿಳಿಯಲಿಲ್ಲ ಸಾಧುಮಾರ್ಗವ ಕಾಣಲಿಲ್ಲ
ಭೇದಜ್ಞರೊಳ್ ಕೂಡಿಸೆನ್ನ ಭೀಮಪಾಲಾಭಿನವಲೀಲ ೩

ಕಾಂತೇರ ಕುಚೇಷ್ಟೆಗಳಿಗೆ ಕೀಳುಚ್ಚಾರದ ಮಕ್ಕಳಿಗೆ
ಭ್ರಾಂತನಾಗಿ ಸ್ನೇಹ ತೋರ್ದ ಬಲೆಯೊಳ್ ಸಿಲುಕಿದೆ
ಸಂತರಂಘ್ರಿ ಸಖ್ಯವನೊಲ್ಲೆ ಸತ್ಕಥೆಯನಾಲಿಸಲೊಲ್ಲೆ
ಅಂತು ಮದವನಿಳಿಸಿ ಕಾಯೊ ಅಂಗಜ ಪಿತನೆ ಅಘರಹಿತನೆ ೪

ಬಳಲಿಸಿದೆ ತನುವನು ಬಯಸಿ ಖಳರಾರ್ಥವನ್ನು
ನಳಿನಾಕ್ಷ ನಿನ್ನ ಬೇಡದೆ ನಾಸ್ತಿಕರಿಗೆ ಕೈಯನೊಡ್ಡಿದೆ
ಹೊಳೆವ ಸುರಭಿಯ ಬಿಟ್ಟು ಹುಲಿಪಾಲಿಗಾಯಾಸಬಟ್ಟೆ
ಕಳೆದೆನನರ್ಘ್ಯಾಯುಷ್ಯವ ಕುಚೇಲಮಿತ್ರ ಕರುಣನೇತ್ರ ೫

ವಿಷ್ಣು ತತ್ವವರಿಯದೆ ಧೀರ ವೈಷ್ಣವನೆನಿಸದೆ
ಭ್ರಷ್ಟಮನವ ತೊಳೆಯದೆ ಬಹಿಷ್ಟಿನ್ನದಲ್ಲೆ ಮೆರೆದೆ
ಶಿಷ್ಯ ಗುರುಗಳ ಜರಿದೆ ಶಠರನು ಅನುಸರಿಸಿದೆ
ದುಷ್ಟವೃತ್ತಿಯನು ಬಿಡಿಸೊ ದುರ್ಗುಣಧಾಮನ ದುರಿತಶಮನ ೬

ಇಂದ್ರಿಯಗ್ರಾಮ ನಿನ್ನದು ಇಷ್ಟ ಬಳಗವು ನಿನ್ನದು
ಸೌಂದರ್ಯ ಸುಖ ನಿನ್ನದು ಸ್ವರೂಪ ಸ್ವಾತಂತ್ರ್ಯ ನಿನ್ನದು
ಮಂದಮತಿಯಿಂದ ಅಹಂಮತಿಯಲ್ಲಿ ನೊಂದೆ ಬಹು
ಕುಂದ ನೋಡದೆನ್ನ ಸಲಹೊ ಕುಂಜರವರದ ಕುಶಲಪದದ ೭

ನಿನ್ನ ಕಥಾಮೃತವು ಕಿವಿಗೆ ನಿನ್ನ [ಕೀರ್ತನೆ ನಾಲಗೆಗೆ]
ನಿನ್ನ ಲಾವಣ್ಯವು ಕಣ್ಣಿಗೆ ನಿನ್ನ ಸೇವೆ ಸರ್ವ ಇಂದ್ರಿಯಕ್ಕೆ
ಎನಗೆ ಬೇಗ ಕರುಣಿಸಿ ಎಲ್ಲ ದುರಿಚ್ಛೆಗಳ ನೂಕು
ಇನ್ನು ದಾಸದಾಸ್ಯವು ಬೇಕೊ ಋಷಿಕುಲೇಶ ಹೃಷಿಕೇಶ ೮

ಅಚ್ಯುತಾನಂತಗೋವಿಂದ ಆದಿಪುರುಷ ಮುಕುಂದ
ಸಚ್ಚಿದಾನಂದ ಸರ್ವೇಶ ಸುಚರಿತ್ರ ಕರಿವರದ
ನೆಚ್ಚಿದೆ ತವ ಪಾದಾಂಬುಜ ನಮೊ ಬೊಮ್ಮಾದ್ಯರ ದೇವ
ನಿಚ್ಚ ಪ್ರಸನ್ವೆಂಕಟ [ನಿನ್ನ ನೆನೆವ ಮತಿಯನೀಡೊ
ಮನ್ನಿಸಿ ನೋಡೊ] ೯

೧೯೯

ಎಂದಿಗೆ ಬಿಡಿಸುವೆ ದಂದುಗ ಗೋ
ವಿಂದ ದಣಿಸುತಿದೆ ದಂದುಗ ಪ.

ಸುಳ್ಳನಾಡಿಸುತಿದೆ ದಂದುಗ ನೇಮ
ಗಳ್ಳನ ಮಾಡಿತು ದಂದುಗ
ಎಲ್ಲೆಂಜಲುಣಿಸಿತು ದಂದುಗ ಕೈ
ವಲ್ಯವ ಮರೆಸಿತು ದಂದುಗ ೧

ಹರಿಸೇವೆ ಬಿಡಿಸಿತು ದಂದುಗ ಗುರು
ಹಿರಿಯರನ್ವಂಚಿಪ ದಂದುಗ
ಸರಕು ಮಾಡಿತು ಎನ್ನ ದಂದುಗ ಯಮ
ಪುರದಾರಿವಿಡಿಸ್ಯದೆ ದಂದುಗ ೨

ನೀಚಗಂಚಿಸುತಿದೆ ದಂದುಗ ಕ್ಷುದ್ರ
ಯಾಚನೆವಿಡಿಸ್ಯದೆ ದಂದುಗ
ಆಚಾರ ಚರಿಸಿತು ದಂದುಗ ದು
ಷ್ಯೋಚನೆ ತ್ಯಜಿಸದು ದಂದುಗ ೩

ಕಾಂಚನದಾಸೇಲಿ ದಂದುಗ ಕೆಟ್ಟ
ಹಂಚಿಗ್ಹಲ್ದೆರೆಸಿತು ದಂದುಗ
ಪಂಚಗಂಗೆಯ ಬಿಟ್ಟು ದಂದುಗ ಜೊಂಡು
ಬೆಂಬಿಲಿ ಮೀಯಿಸಿತು ದಂದುಗ ೪

ನಿನ್ನೊಲುಮ್ಯೊದರಿ ದಂದುಗ ಕಾಡಿ
ಎನ್ನಾಳೋದುಂಟೇನೊ ದಂದುಗ ಪ್ರ
ಸನ್ವೆಂಕಟೇಶ ನಾಮ ಜಿಹ್ವೆ
ಪೂರ್ಣಗಲ್ಲಾದ್ಯಂತ ದಂದುಗ ೫

೨೦೦

ಎನ್ನ ತಂದೆ ಎನ್ನತಾಯಿ ಎನ್ನ ಬಂಧುವೆ ನೀ
ಇನ್ನಾರೊಡೆಯರಿಲ್ಲ ಕಾಯೊ ಲಕ್ಷ್ಮೀನಲ್ಲ ಪ.

ಕರುಣ ನೋಟದಿ ನೋಡಿ ಹೊರಡಿಸಿದ ತಂದೆ ಮಂ
ದರಧರನೆ ಬಸುರೊಳಿಟ್ಟ ತಾಯಿ ನೀನು
ಧರೆಗೆ ಪರಗತಿಗೆ ನೆಲೆಗೊಡುವ ಬಾಂಧವ ನೀನು
ದುರಿತ ಕರಿಗಣಕೆ ಸಿಂಹಾಸ್ಯ ನೀನು ೧

ಷಟ್ಕರ್ಮ ಸಂಗ್ರಹವ ಮಾಡಿಸುವ ತಂದೆ ನೀ
ದುಷ್ಕರ್ಮ ಖಂಡಿಸುವ ತಾಯಿ ನೀನು
ಷಟ್ಕೋಣ ಬಲದಿರುವ ತ್ರಿಕೂಟಾದ್ರಿವಾಸ ವ
ಷಟ್ಕಾರಗೈದ ಕೌರವ ಕುಲಾರಿಯು ನೀನು ೨

ಶ್ರುತಿ ವಿರೋಧಿಗಳ ಮೋಹಿಪ ಸುರರ ತಂದೆ ನೀ
ಅತುಳ ಧರ್ಮಾತ್ಮಕರ ತಾಯಿ ನೀನು
ಕ್ಷಿತಿಗೆ ವೈಕುಂಠವೆನಿಪ ಪ್ರಸನ್ವೆಂಕಟ ಬಂಧು
ಗತಿಗೆ ಗತಿಯಾದಾದಿಪುರುಷ ನಮೋ ೩

೨೦೧

ಎನ್ನ ಭಕುತಿ ನೋಡಲು ಎಳ್ಳನಿತು ಹುರುಳಿಲ್ಲ
ನಿನ್ನ ನಾಮವೆ ನಾ ನಂಬಿದ ಮುನ್ನೆಲೆ ಕೃಷ್ಣ ಪ.

ನಿಚ್ಚ ನೀರೊಳಗೆ ಪೋಗಿ ಮುಳುಗಿ ಮುಳುಗಲೇನು
ಮತ್ಸ್ಯ ಸ್ನಾತಿಯೆನಿಸುವುದೆ ಮಹೀತಳದಿ
ಅಚ್ಯುತ ನಿನ್ನಯ ಧ್ಯಾನವಿಲ್ಲದೆ ದ್ವಾದಶನಾಮ
ಹಚ್ಚುವೆನು ಮೊಲನಾಳು[ವೇಷ]ವಿಟ್ಟ ತೆರದಿ ೧

ಬಯಲು ಡಂಬಕದಿಂದ ಬಹಳ ತುಲಸೀಮಾಲೆ
ನಯದಿ ಕಂಠದೊಳಾಂತಪಾರ ಗರ್ವದಿ
ಆಯಾಟೆಸಬಟ್ಟೆನು ಹರಿದಾಸನೆನಿಪೆನೆಂದು
ಪಯೋನಿಧಿವಾಸ ನಿನ್ನ ಪದವ ಲಕ್ಷಿಸೆ ನಾ ೨

ಮುಸುಕು ಮೌನದಿ ಹರಿಯೆಂದು ಜಪಿಸಲಿಲ್ಲ
ವಸುಧೆ ವಸುಕಾಂತೆಯರ ಚಿಂತಿಪೊ ಹರಿ
ದಾಸ ಬೆಳ್ವಕ್ಕಿಯಂತೆನಗೆ ಹೇಯಂಗಳಿಲ್ಲ
ಪ್ರಸನ್ವೆಂಕಟಪತಿ ತಪ್ಪ ಕಾಯೊ ಜೀಯ ೩

೨೦೨

ಎಲೆ ದುರಿತವೆ ನೀ ಎನ್ನ
ಏಳಿಲ ಮಾಡದೆ ಸಾಗಿನ್ನ ಕಡು
ಛಲ ಮಾಡಲಿ ಬನ್ನಬಡುವೆ ನಮ್ಮ
ನಳಿನಾಕ್ಷನಾಣೆ ನೀ ಕೆಡುವೆ ಪ.

ಪಾಪಿ ನಾನೆಂದು ಸೋಂಕ ಬಂದೆ ನಮ್ಮ
ಶ್ರೀಪತಿ ಕರುಣಿಸಿದಿಂದೆ ಇ
ನ್ನಾಪರೆ ನಿಲ್ಲು ಮುಂದೆ ನಿನ್ನಾ
ಟೋಪವ ಮುರಿವೆನು ಇಂದೆ ೧

ಪರುಸ ಮುಟ್ಟಿದ ಲೋಹ ಚಿನ್ನ ಸಿರಿ
ಅರಸನ ಭಟನೆ ಮಾನ್ಯ ಇ
ನ್ನೊರೆದೆ ನೋಡೆಲೆ ಬಲುವೆಡ್ಡೆ ನಮ್ಮ
ಸರಸವ ಬಿಡು ಕೈಕಡ್ಡೆ ೨

ಲೇಸು ಬೇಕಾದರಿನ್ನುಳಿಯ್ಯೆ ಹರಿ
ದಾಸರ ಸಂಗವ ಕಳೆಯ್ಯೆ ಭೃತ್ಯಾ
ವಾಸೆಯ ಬಿಡುವವನಲ್ಲ ಶ್ರೀ
ಪ್ರಸನ್ವೆಂಕಟ ಚೆಲ್ವ ೩

೨೦೩

ಏನು ಕರುಣಾನಿಧಿ ರಂಗ ನನ್ನ
ನ್ಯೂನತೆ ನೋಡುವರೆ ರಂಗ
ನಾನೇನು ಅರಿಯೆನೊ ರಂಗ ನೀ
ದಾನಿ ನೀನೆ ಗತಿ ರಂಗ ಪ.

ಭಕ್ತಿಯುಂಟೆಂಬೆಯ ರಂಗ ಮಿಶ್ರ
ಭಕ್ತಿಯೆ ತುಂಬಿದೆ ರಂಗ
ಶಕ್ತಿಯ ನೋಡುವೆ ರಂಗ ವಿಷಯಾ
ಸಕ್ತಿಯೆ ಶಕ್ತಿಯು ರಂಗ ೧

ಜ್ಞಾನ ಪರೀಕ್ಷಿಪೆ ರಂಗ ಅ
ಜ್ಞಾನದ ಖಣಿ ಕಾಣೊ ರಂಗ
ಏನಾರು ವಿರತ್ಯುಂಟೆ ರಂಗ ಜಠ
ರಾನುಕೂಲ ವಿರತಿ ರಂಗ ೨

ಪೂಜಿಸು ಇನ್ನೆಂಬೆ ರಂಗ ಹೊಲೆ
ಭಾಜನ ಮನವಾಯ್ತು ರಂಗ
ನಾ ಜಪವರಿಯೆನೊ ರಂಗ ಕಲ್ಪ
ಭೂಜ ಪ್ರಸನ್ವೆಂಕಟ ರಂಗ ೩

೨೦೪

ಏನು ಗತಿಯೊ ಮುಂದೆನಗೆ ಗೋವಿಂದ
ಶ್ರೀನಿವಾಸ ರಕ್ಷಿಸದಿರೆ ದಯದಿಂದ ಪ.

ನಿಶಿದಿನ ಹಸಿವು ತೃಷೆ ಸುಡುವ ಕುಮರಿಯು
ಮಸಿವರ್ಣ ಮಾಡಿ ಕೇರಿಡಿವ ಮೂರುರಿಯು ೧

ನಾಚಿಕಿಲ್ಲದ ವಿಷಯಾಸೆಯಸಹ್ಯ
ನೀಚ ದುರುಕ್ತಿಯಸ್ತ್ರದ ಘನಗಾಯ ೨

ಮಾಯದ ಕಡಲೊಳು ಕಟ್ಟಿಹ ಕೊರಳು
ಆಯಾಸ ಬಡುತ ಬಡುತ ಬಿದ್ದಿತುರುಳು ೩

ಎಳ್ಳನಿತು ಜ್ಞಾನ ಅಹಂಕಾರ ಬಹಳ
ಘಲ್ಲನೆ ತಗಲುವ ಜ್ಞಾನದ ಶೂಲ ೪

ಮರಹು ಮದಗಳೆಂಬ ಮುಸುಕಿದ ಮೆಳೆಯು
ಪರದಾರ ಪರನಿಂದೆಯಗ್ನಿಯ ಮಳೆಯು ೫

ಬೇಡಿದ ಬಯಕೆ ಸಾಧ್ಯಾಗದ ನೋವು
ಮೂಢತನದಿ ದಿನ ನೂಕುವ ಸಾವು ೬

ಇನ್ನಾರೆ ಸಜ್ಜನ ಸಂಗಕೌಷಧ
ಮುನ್ನ ಕೊಡಿಸೊ ಪ್ರಸನ್ವೆಂಕಟ ಮುಕುಂದ ೭

೨೦೫

ಏನು ಗತಿಯೊ ರಂಗ ನಾ ನಿನ್ನವನಾಗಿ
ಜ್ಞಾನದಂತಿರಲಿಲ್ಲವೊ ಪ.

ಉಂಡುಂಡು ತುಡುಗ ಕೋಣನ ಪರಿ ಸೊಕ್ಕಿದೆ
ಕಂಡಲ್ಲಿ ಕುಳಿತೆ ನೊಣನ ತೆರದಿ
ಭಂಡು ಭೂತದ ಮಾತನಾಡಿ ಭಂಡನಾದೆ
ಪುಂಡರೀಕಾಕ್ಷ ನನ್ನಂಥ ಪಾತಕಿಗೆ ೧

ಬಲು ಶಾಸ್ತ್ರಶ್ರವಣೆಂಬುವ ಮಳೆಗರೆದರೇನು
ಕಲುಗುಂಡಿನಂತೆ ಕೆಟ್ಟೆದೆ ತೊಯ್ಯದು
ಹಲವು ಅಧ್ಯಾತ್ಮವನುಸುರೇನು ಚಿತ್ತದ
ಕಳವಳಿ ನಿಲಿಸಲಾರದ ಪಾಮರಗೆ ೨

ಭವಸುಖ ಉಂಬಾಗ ನೋವು ಬೇವಾದಾಗ
ತವಕದಿ ನುಡಿವಾಗ ಕನಸಿನಾಗ
ಅವಿರಳ ಅಚ್ಯುತ ನಿನ್ನಂಘ್ರಿ ನೆನೆದೀಶ
ಅವಸರಕೊದಗೆಂದೆ ಪ್ರಸನ್ವೆಂಕಟೇಶ ೩

೨೦೬

ಒಂದೆರೆಡೇ ನಾ ಹೇಳಲು
ಎಂದಿಗು ತೀರವು ಅಪರಾಧ ಸಿರಿಕೃಷ್ಣ ಪ.

ಪಾಪವ ಗಳಿಸಿದರೇನುಂಡಾರದ ಬಲ್ಲೆ
ಆ ಪುಣ್ಯವಂತರ ಕೀರ್ತಿ ಬಲ್ಲೆ
ಈ ಪರಿ ತಿಳಿದರು ಕೆಟ್ಟವೃತ್ತಿಯ ಬಿಡೆ
ಆಪದ್ಬಂಧು ಇದೇನು ಮಾಯವೊ ಸ್ವಾಮಿ ೧

ತಾಪತ್ರಯವನುಭವಿಸುವಾಗ ಪಶ್ಚಾ
ತ್ತಾಪವಲ್ಲದೆ ಮಾತೊಮ್ಮಿಗಿಲ್ಲ
ಶ್ರೀಪತಿ ನೋಡು ಚಿತ್ತದ ಕಪಟ ವಿಷಯಾ
ಲಾಪವೆವಿಡಿದಿದೆ ಹಿತ ಹೊಂದದಯ್ಯ ೨

ಹಣ್ಣು ಹಂಚಿದ ತೆರ ಹೊತ್ತು ಹೋಯಿತು ಕಿಂಚಿತ್
ಪುಣ್ಯ ಮಾಡಿಹೆನೆಂಬ ನಂಬಿಗಿಲ್ಲ
ಚಿನ್ಮಯ ಮೂರುತಿ ಪ್ರಸನ್ವೆಂಕಟೇಶ
ನಿನ್ನವನೆಂಬ ಹೆಮ್ಮೆಲಿ ಮಾಡಿದ ತಪ್ಪು ೩

೨೦೭

ಒಲಿಯಯ್ಯಾ ರಂಗ ಒಲಿಯಯ್ಯಾ
ನೆಲೆಗಾಣದ ಭವ ಜಲದೊಳು ಮುಳುಗುವೆ ಪ.

ಮಾಯದ ಕೈಯಲಿ ಮೇಲೆ ಮೇಲೆ ಸುತ್ತಿ
ಆಯಾಸಬಡುತಿದೆ ಪ್ರಾಣ ದಾತ
ಬಾಯೆತ್ತಿ ಗೋವಿಂದ ಹರಿಯೆನ್ನಲೀಸದು
ಕಾಯೊ ದಯಾಳು ಕರಿವರದ ಕೃಷ್ಣ ೧

ಮನ ನೀರಾನೆಯ ಕಟ್ಟಿನೊಳಗೆ ಸಿಕ್ಕಿ
ಕ್ಷಣ ಕ್ಷಣ ದೈನ್ಯದಿ ಒರಲುತಿದೆ
ತನತನಗೆಳೆದು ದಣಿಸುವ ಇಂದ್ರಿಯ ಜಂತು
ಮುನಿಸೇವ್ಯ ನಿನ್ನೊಳಿಗಕ್ಕೆ ದೂರಾದೆ ಕೃಷ್ಣ ೨

ಬುದ್ಧಿ ತಪ್ಪಿದವಗೆ ಅಬದ್ಧ ನಡೆವವಗೆ
ಶುದ್ಧ ಕಾರಣ ದಿವ್ಯನಾಮವಲ್ಲವೆ
ಉದ್ಧರಿಸು ಬೇಗ ಪ್ರಸನ್ವೆಂಕಟ ಕೃಷ್ಣ
ತಿದ್ದಿಟ್ಟುಕೊಳ್ಳೊ ನಿನ್ನವಗೆ ನಿರ್ಣಯ ನೀನೆ ೩

೨೦೮

ಒಲುಮೆ ಒಂದಿರಲಿ ನಿನ್ನ ಸಂಪನ್ನ
ಜಗತ್ಪಾವನ್ನ ವೆಂಕಟರನ್ನ ಪ.

ಗೋವು ಗೋವರ ಸಾವು ದಾವ ದಾವಾನಳವು
ದೇವ ದೇವ ತಂಪಾಯಿತು
ಕಾವ ಕಾವನ ಜನಕ ಭಯವಾರಕ
ಪಾವು ಪಾವನನಾದನು ಕುಣಿದೆ ನೀನು ೧

ಬೆಟ್ಟ ಬೆಟ್ಟಲೆತ್ತಿದೆ ವಾರ್ಷ್ಣಿ ವೃಷ್ಟಿಯೊತ್ತಿದೆ
ಕೃಷ್ಣಾ ಕೃಷ್ಣಾ ಗತಿಯೆನ್ನೆ ಲಜ್ಜೆಗಾಯಿದನೆ
ಸೃಷ್ಟಾಸೃಷ್ಟರ ದೊರೆಯೆ ಕರಿಕರೆಯೆ
ಕಷ್ಟಾಕ್ಲಿಷ್ಟವೆ ಹೋಯಿತು ಕೈವಲ್ಯಾಯಿತು ೨

ಹಿಂದೆ ಹೊಂದಿದವರು ಮುಂದೆ ಮಂದ ಭೃತ್ಯರು
ಕಂದು ಕುಂದಿಲ್ಲದಾದರು ನಿಮ್ಮಳರು
ತಂದೆ ತಂದೀವೆ ಹೂವನು ಹಲ್ಲು ತಾರೆನು
ಎಂದೂ ಎಂದೂ ಶ್ರೀ ಪ್ರಸನ್ವೆಂಕಟ ರನ್ನ ೩

೨೦೯

ಕಂಗಳು ಹಿಂಗದಿರಲಿ ಎನ್ನ ನಿನ್ನ
ಮಂಗಳಾಂಘ್ರಿ ಸರೋಜಂಗಳಲ್ಲಿ ಕೃಷ್ಣ ಪ.

ಕ್ಷಿತಿಯನಳೆದ ಋಷಿಸತಿಯರಘ ಕಳೆದ
ಶ್ರುತಿಸಾರಸ್ತುತಿಗೊಮ್ಮೆಗತಿ ಗೂಢದೊಲಿದ
ಯತಿ ಮುನಿಜನ ದೇವತತಿಗಳ ಮನದಿ
ಪ್ರತಿಕ್ಷಣ ತಟಿತದೀಧಿತಿಯುಳ್ಳ ಪದದಿ ೧

ಜಗದಘಹರಿಯೆಂಬ ಮಗಳನು ಪಡೆದ
ಮಿಗಿಲಾದ ಕ್ರತುಕರ್ತನಿಗೆ ಒತ್ತಿ ಪೊರೆದ
ಖಗವರಾದನ ಕರಯುಗಳೊಳು ಮೆರೆದ
ವಿಗಡಾಹಿ ಮೌಳಿಯೋಳ್ ಧಿಗಿಲೆಂಬ ಪದದಿ ೨

ಶ್ರೀ ಚಕ್ಷುಚಕೋರ ಪೂರ್ಣಚಂದ್ರ ನಖದ
ನೀಚಹಿಕೇತುವ ನಾಚಿಸಲೆಸೆದ
ಶ್ರೀಚೆನ್ನ ಪ್ರಸನ್ವೆಂಕಟಾಚಲದೊಳಿದ್ದೆ
ನ್ನಾಚರಣೆಗಕ್ಷಯ ಸೂಚಿಪ ಪದದಿ ೩

೨೧೦

ಕರುಣಾಂಬುಧಿ ಪಾಲಿಸೊ
ಶರಣಾಗತರರಸ ಮುರಾರಿ ಪ.

ಹಿಂದೆ ಕ್ಲೇಶವನುಂಡು ಬಳಲಿ ನಾ ನೊಂದೆ
ಮುಂದೆ ಕತ್ತಲೆ ಕವಿದಿದ್ಯಲ್ಲೊ ತಂದೆ ೧

ಒಡೆಯನಿದ್ದೊಡಲಿನ ಚಿಂತೆ ಎನಗ್ಯಾಕೆ
ಪಡಿಯಾಸೆಲಿನ್ನೊಬ್ಬರೊಲಿಸಲ್ಯಾಕೆ ೨

ಜನಕ ಜನನಿ ಆಪ್ತಧನ ಧಾನ್ಯ ನೀನೆ
ಅನುಮಾನ ಬಿಡಿಸುವ ಅನುಕೂಲದವನೆ ೩

ಪೋಕರ ಮುಂದೆಡಹಿದರಾರ ಕುಂದು
ಜೋಕೆ ಬಿರುದು ದಾತ ಆನತ ಬಂಧು ೪

ನಾಭಿ ಸುರಭಿ ಕಾಣದರಸುವ ಮೃಗದಂಥ
ಈ ಭ್ರಾಂತಿ ಕಳೆಯೊ ಪ್ರಸನ್ವೆಂಕಟೇಶ ೫

೨೧೧

ಕರುಣಿಸಿನ್ನಾದರೆ ರಂಗ ಸುರಾರಿ ಭಂಗ
ಕರುಣಿಸಿನ್ನಾದರೆ ರಂಗ ಪ.

ಹುಳು ಹಕ್ಕಿ ನಾಯಿ ನರಿ ಗಿಡ ಹುಲ್ಲು ಮುಳ್ಳು
ಗಳ ಜನ್ಮವಾಂತು ನಾ ಬಳಲಿದೆ ರಂಗ

ನೆಲೆಗಾಣೆನಿನ್ನು ಮಾನಿಸನಾಗಿ ವೃಥನಾದೆ
ಗುಳದ ಹಣ್ಣಿಗೆ ಸೊರಗಲ್ಯಾಕೊ ರಂಗ ೧

ತುದಿಮೊದಲಿಗೆ ಮದ ಮತ್ಸರದಿಂ ಬೇ
ಗುದಿಗೊಂಡು ನಿನ್ನಂಘ್ರಿ ಮರೆದೆನೊ ರಂಗ
ಪದುಮನಾಭನೆ ನನ್ನ ಹೊರೆಯಲಾರೆಯ ಹುಲ್ಲೆ
ವದನಕ್ಕೆ ಮುಳ್ಳ ಕಡಿವಾಣ್ಯಾಕೊ ರಂಗ ೨

ಮಲೆತವನಾದರೊದಿಯೊ ನಿನ್ನಂಗಣದೊಳು
ತೊಳಲುವ ನಾಯಿಗೆ ಕ್ಲೇಶವು ಸಲ್ಲ ರಂಗ
ಹಲವು ದುಷ್ಕೃತ ನಿನ್ನ ನಾಮ ಘೋಷಣೆಯಲ್ಲಿ
ನಿಲ್ಲಬಲ್ಲವೆ ಪ್ರಸನ್ವೆಂಕಟ ರಂಗ ೩

೨೧೨

ಕರುಣಿಸೊ ಕರುಣಾಸಾಗರ ನರಹರಿಯೆ ನಿನ್ನ
ಚರಣದಾಚರಣೆಗೆಚ್ಚರಾದರನು ಪ.

ಮನ ಮಲಿನವ ತೊಳೆದನುದಿನ ದೃಢದೊಳು
ಜ್ಞಾನ ಭಕ್ತಿ ವಿರಕ್ತಿಯ ಘನಾಸಕ್ತಿಯ
ಮನಗಂಡು ಮುದವಂತರೆನಿಸಿ ನಾಮಾಮೃತ
ಉಣಬಲ್ಲ ಪೂತಾಂಗ ಮಾನಿಸರ ಸಂಗ ೧

ಸಭ್ಯರ ದೂಷಣ ಕೇಳುಬ್ಬಸ ಶ್ರವಣಕೆ
ಇಬ್ಬರ ಕಲಹದಿ ಶಬ್ದಗುಂದಿ
ಅಬ್ಜನಾಭನ ಬಿರುದುಬ್ಬುಬ್ಬಿ ಸುಖವೇರಿ
ಕೊಬ್ಬಿ ಕುಣಿವ ಶಂಲಬ್ಧರೂಳಿಗವ ೨

ವೃಂದಾವನದಲಿ ಮುಕುಂದನಾಲಯದ
ಮುಂದಾ ದಿಗಿದಿಗಿತ ವಾದ್ಯವಂದನಿಂದ

ತಂದೆ ಪ್ರಸನ್ನವೆಂಕಟೇಂದ್ರ ನಿನ್ನ ಮುದ್ರಾಂಕ
ಹೊಂದುವ ಜನುಮವ ಆನಂದಮುನಿಮತವ ೩

೨೧೩

ಕರ್ತ ಕೃಷ್ಣಯ್ಯ ನೀ ಬಾರಯ್ಯ ಎ
ನ್ನಾರ್ತ ಧ್ವನಿಗೊಲಿದು ಬಾರಯ್ಯ ಪ.

ಸುಗುಣದ ಖಣಿಯೆ ನೀ ಬಾರಯ್ಯ ನ
ಮ್ಮಘವನೋಡಿಸಲು ನೀ ಬಾರಯ್ಯ
ಧಗೆಯೇರಿಸಿತು ತಾಪ ಸುಧಾ
ಮುಗುಳ್ನಗೆ ಮಳೆಗರೆಯೆ ಬಾರಯ್ಯ ೧

ವೈರವರ್ಗದಿ ನೊಂದೆ ಬಾರಯ್ಯ ಮ
ತ್ತಾರು ಗೆಣೆಯರಿಲ್ಲ ಬಾರಯ್ಯ
ಸೇರಿದೆ ನಾ ಶರಣ್ಯ ಬಾರಯ್ಯ ಒಳ್ಳೆ
ದಾರಿಯ ತೋರಲು ನೀ ಬಾರಯ್ಯ ೨

ವೈರಾಗ್ಯ ಭಾಗ್ಯ ಕೊಡು ಬಾರಯ್ಯ ಜ್ಞಾ
ನಾರೋಗ್ಯದ ಭೇಷಜ ಬಾರಯ್ಯ
ಜಾರುತದಾಯು ಬೇಗ ಬಾರಯ್ಯ ಉ
ದಾರಿ ಪ್ರಸನ್ವೆಂಕಟಪ ಬಾರಯ್ಯ ೩

೨೧೪

ಕಲ್ಲು ಬೀಳಲಿ ಮೇಲ್ಮುಗಿಲ್ಲು ಬೀಳಲಿ
ಫುಲ್ಲನಾಭ ನಿನ್ನ ಪಾದಪಲ್ಲವ ಛಾಯೆಯ ಬಿಡೆ ಪ.

ಶೂಲ ಕೋಟಿಗಂಜೆ ಕರವಾಳ ಘಾತಿಗಂಜೆ ವಿಶ್ವ
ಪಾಲಕ ನಿನ್ನ ದಿವ್ಯನಾಮಮಾಲಿಕೆ ವಜ್ರಾಯುಧುಂಟು ೧

ಪೋಕ ಜನಕಂಜೆ ದುರಿತಾನೀಕ ಬರಲಂಜೆ ಜಗ
ದೇಕ ನಿನ್ನ ಶ್ರೀಪದಾರಾಧಕರ ಬಲ ಉಂಟೆನಗೆ ೨

ಅಂದು ಅಪಮೃತ್ಯು ಬಂದೆನ್ನಂದಗೆಡಿಸಲು ಎನ್ನ
ತಂದೆ ಪ್ರಸನ್ವೆಂಕಟೇಶ ಬಂದು ಕಾಯಿದ ಹವಣು ಬಲ್ಲೆ ೩

೨೧೫

ಕಾಡದಿರೆನ್ನ ಕಿಡಿಗೇಡಿ ಮನವೆ
ಓಡದಿರು ಅಚ್ಯುತಾಂಘ್ರಿ ನೋಡು ಮನವೆ ಪ.

ಬೆಲೆಯಿಲ್ಲದಾಯು ರತ್ನದ ಮಾಲೆ ಹರಿದಿದೆ
ಆಲಸಿಕ್ಯಾತಕೆ ಹರಿಯ ಊಳಿಗಕೆ
ಹುಲಿಯ ಬಾಯಿಯ ನೊಣನ ತೆರನಂತೆ ಮೃತ್ಯುಮುಖದಿ
ಸಿಲುಕಿಹೆನು ಸರಸವಾಡದೆ ನಂಬು ಹರಿಯೆ ೧

ಕಂಡ ಕಡೆಯಲಿ ತಿರುಗಿ ಬಳಲಿದೆಯಲ್ಲದೆ ಬೇರೆ
ಉಂಡುಟ್ಟು ಸುಖಿಸಿ ಯಶಸೊದಗಲಿಲ್ಲ
ಪುಂಡರೀಕಾಕ್ಷಾಂಘ್ರಿ ಪುಂಡರೀಕವ ಹೊಂದಿ
ಬಂಡುಣಿಯೆನಿಪರ ಸೇರು ಸಾರು ೨

ಗೋವರಂತಖಿಳ ಪಶುಗಳನು ದಾತಾರನಿಗೆ
ತಾವು ಒಪ್ಪಿಸುವ ಪರಿ ಸತಿಸುತರನು
ದೇವದೇವ ಪ್ರಸನ್ನ ವೆಂಕಟಪಗರ್ಪಿಸಿ
ಹೇವ ಹೆಮ್ಮೆಯ ಬಿಟ್ಟು ಸತತ ಹೊಗಳದೆ ೩

೨೧೬

ಕಾಣದೆ ಇರಲಾರೆ ದೇವ ಮುಖ್ಯ
ಪ್ರಾಣ ಮನೋಹರ ದೇವ ನಿನ್ನ

ವಾಣಿಯಲಮೃತವನೂಡೊ ಕಡೆ
ಗಾಣಿಸಿ ಪದದೆಡೆಯಲ್ಲಿಡೊ ಪ.

ಓಡಿಯಲು ಮರದಾಸೆಯಿಲ್ಲ ಕುಳಿ
ತಡೆ ಪೊಡವಿಲಿ ದೃಢವಿಲ್ಲ ನಿ
ನ್ನೊಡಲೊಳಗಿಡಬಹುದೆನ್ನ ನ
ನ್ನೊಡೆಯ ಕರುಣಾರಸಪೂರ್ಣ ೧

ನಿಲಗುಡವರಿಯಾರು ವರ್ಗ ಬಲು
ಬಳಲಿಪ ಮೂರುಪಸರ್ಗ ಇದ
ರೊಳಗೆ ನಿನ್ನಯ ಶುಭನಾಮ ಒಂದೆ
ಬಲಿಕ್ಯಾಗಿರಲಿ ಪೂರ್ಣಕಾಮ ೨

ಚಿನ್ಮಯ ಸುಗುಣದ ಖಣಿಯೆ ಸಲ
ಹೆನ್ನ ನಿರ್ಜರ ಚಿಂತಾಮಣಿಯೆ ಬಿಡ
ದೆನ್ನ ಮನದೊಳಗೆ ಬೆರೆಯೊ ಪ್ರ
ಸನ್ವೆಂಕಟ ಗಿರಿದೊರೆಯೆ ೩

೨೧೭

ಕಾಯೊ ಗೋವಿಂದ ಕಾಯೊ ಮುಕುಂದ
ಮಾಯದ ತಡಿಯ ತಪ್ಪಿಸೊ ನಿತ್ಯಾನಂದ ಪ.

ನಾನಾ ಯೋನಿಯ ಸುತ್ತಿ ನೆಲೆಗಾಣದಂತಾದೆ
ನೀನೊಲಿದಿಂದೀ ಜನ್ಮವ ಪಡೆದೆ
ಜ್ಞಾನ ಹೊಂದಲಿಲ್ಲ ಧರ್ಮದಾಚರಣಿಲ್ಲ
ಏನು ಗತಿಯೊ ಎನಗೆ ಮುಂದೆ ಸಿರಿನಲ್ಲ ೧

ಮರ್ಕಟಗೆ ಹೊನ್ನಕೊಡ ದೊರೆತಂತಾಯಿತು
ಮೂರ್ಖವೃತ್ತಿಯಲಿ ಆಯುಷ್ಯ ಹೋಯಿತು

ನರ್ಕ ಸಾಧನ ಘನವಾಗಿದೆ ಪುಣ್ಯ ಸಂ
ಪರ್ಕವ ಕಾಣೆನೈ ಕರುಣಿಗಳರಸ ೨

ಎನ್ನ ತಪ್ಪಿನ ಹೊಳೆ ಒಳಗೊಂಬುದು ಒಂದೆ
ನಿನ್ನ ದಯದ ಶರಧಿಯಲ್ಲದೆ
ಇನ್ನೇನು ಮಾರ್ಗವು ಸಿಲುಕದು ತಂದೆ ಪ್ರ
ಸನ್ನವೆಂಕಟಪತಿ ಹರಿ ದೀನಬಂಧು ೩

೨೧೮

ಕೆಡಗೊಡದಿರು ಎನ್ನ ಚಿತ್ತಗತಿಯ ಸುರ
ರೊಡೆಯ ತವಾಂಘ್ರಿ ಹೊಂದಿದ ಮತಿಯ ಪ.

ಒಂದು ಗುರಿಗಿಟ್ಟರೆ ತಪ್ಪುತಿದೆ ಮ
ತ್ತೊಂದಕಿಡದೆ ತಾ ತಗಲುತಿದೆ
ಹೊಂದಲೊಲ್ಲದು ತ್ವನಿಷ್ಠೆಯನು ಒಣ
ದಂದುಗಗೊಳುತಿದೆ ಹರಿ ನೀನು ೧

ಮುಂದಿಟ್ಟ ಷಡ್ರಸಾನ್ನವನುಣ್ಣದು ದೂ
ರಿಂದ ನಿಸ್ಸಾರಕ್ಕೆಣಗುವುದು
ನಂದಿಸಲೊಲ್ಲದು ನೆಳಲ್ವಿಡಿದು ಕಿ
ಚ್ಚೆಂದಂಜದೋಡಿ ಧುಮುಕುತದಿದು ೨

ಪ್ರದೇಶ ಅಂಗುಟ ಮಾತ್ರವ ಕಾಣದೆ ತಾ
ಭೂದಿವಿ ಪಾತಾಳಕ್ಕೈದುತಿದೆ
ಮಾಧವ ಪ್ರಸನ್ನವೆಂಕಟ ದಯಾಳು ನಿನ್ನ
ಪಾದದಲ್ಲಿಡು ಇದರುಲುಹು ಬಲು ೩

೨೧೯

ಕೆಡಗೊಡದಿರು ದೇಶಿಗ ನಾ ರಂಗ
ಕೆಡಗೊಡದಿರು ದೇಶಿಗ ನಾ ಪ.

ನುಡಿ ನುಡಿದು ಮುಪ್ಪಾದೆ ನನ್ನಯ
ನಡೆ ನೋಡಲು ಹುರುಳಿಲ್ಲ
ಹುಡಿ ಹುಡಿಯಾದೆನೊ ವಿಷಯದ ಬಯಕೆಲಿ
ಅಡಿಗಡಿಗೊದಗಿತು ಪಾಪವು ರಂಗ ೧

ಜಪತಪವ್ರತಗಳ ನೇಮವನರಿಯೆ
ನಿಪುಣ ಪೂಜಾವಿಧಿಯರಿಯೆ
ಅಪರಿಮಿತ ಶುಭ ಕ್ರಿಯದೊಳು ಕಾಮನ
ಚಪಲತೆ ಭ್ರಮೆಗೊಳಿಸುತಿದೆ ರಂಗ ೨

ಹಿಡಿ ಹಿಡಿ ಮುಳುಗುವೆ ಯಾರಿಲ್ಲವೊ ಪಾ
ಲ್ಗಡಲೊಡೆಯ ಭವಾಬ್ಧಿಯಲಿ
ಚಡಪಡಿಸುವೆ ಮೂರುರಿಯಲಿ ಹರಿ ನಿ
ನ್ನಡಿಯೆಡೆಲಿಡು ಪ್ರಸನ್ವೆಂಕಟ ರಂಗ ೩

೨೨೦

ಕೆಡಿಸುವನಲ್ಲೊ ನೀ ಬಲು ಕರುಣಿ ನನ್ನ
ಕಿಡಿಗೇಡಿತನ ಉಣಿಸಿತು ಭವಣಿ ಪ.

ಹುಸಿಯ ನುಡಿದು ದೆಸೆಗೆಟ್ಟವ ನಾ ನನ್ನ
ಕುಶಲ ಕಲ್ಯಾಣದೊಳಿಟ್ಟ ಕರುಣಿ ನೀ
ಅಸಮ ಚಂಚಲ ಚಿತ್ತವುಳ್ಳವ ನಾ ದು
ರ್ವ್ಯಸನವಿದಾರಿ ಉದಾರಿಯು ನೀ ೧

ಹಗಲರಿತ ಕುಳಿಯೊಳ್ಬಿದ್ದವ ನಾ ಎನ್ನ
ನೆಗಹಿ ನೆಗಹಿ ನೆಲೆಗೊಟ್ಟವ ನೀ
ಬಗೆ ಬಗೆ ದೋಷಾಚರಣ್ಯೆವ ನಾ ಮ
ತ್ತಘ ಸಂಚಿತವನೋಡಿಸುವೆ ನೀ ೨

ವಿಷಯದ ಬಯಕೆಲಿ ನವೆದವ ನಾ ಶುದ್ಧ
ಭೇಷಜನಾಗಿಹೆ ಭವರೋಗಕೆ ನೀ
ವಿಷವನುಂಡು ಕಳೆಗೆಡುವವ ನಾ ಪೀ
ಯೂಷವನೆರೆವ ದಯಾವಾರಿಧಿ ನೀ ೩

ಅಹಂಕಾರದಲಿ ಬೆರೆತಿದ್ದವ ನಾ ಶುಭ
ವಹ ನಾಮವನಿತ್ತು ತಿದ್ದುವೆ ನೀ
ಮಹಿಯೊಳಗಮಿತಘ ಸಾಧಕ ನಾ ಎನ್ನ
ಬಹುಕಲುಷವನ ದಾಹಕ ನೀ ೪

ಕೆಡಿಸಬೇಕಾದರೆ ತಿರ್ಯಗ್ಯೋನಿಯ ನೀ
ಬಿಡಿಸಿ ವೈಷ್ಣವ ಜನ್ಮಕೆ ತಹೆಯಾ
ಒಡೆಯ ಪ್ರಸನ್ವೆಂಕಟ ದಯಾಳು ನಿನ್ನ
ಒಡಲ ಹೊಕ್ಕವನೆಂದು ನಂಬಿನೆಚ್ಚಲು ೫

೨೨೧

ಕೈಗೂಡಿಸು ಬಯಕೆ ರಂಗಾ
ಕೈಗೂಡಿಸು ಬಯಕೆ ಪ.

ಸಂತೆಯ ಬಳಗದ ಸಂಗತಿ ನೀಗಿ
ಸಂತರ ಪದಪಲ್ಲವ ನೆಳಲಾಗಿ
ಚಿಂತನೆ ಮೂರುತಿ ಚಿಂತನೆಗೊದಗಿ
ಪ್ರಾಂತದ ಪಯಣ ಮನೋರಮವಾಗಿ ೧

ಚೆನ್ನಿಗ ಮೈಸುಟ್ಟರಿವ್ಯೆಂತಾಗಿ
ಛಿನ್ನಾಗುವ ಮೈಯಂಜಿಕೆ ನೀಗಿ
ನನ್ನ ರೂಹು ಸನಗಿದ್ದಂತಾಗಿ
ಚಿನ್ಮಯ ಬಿಂಬದ ಒಲುಮೈನಗಾಗಿ ೨

ಬಯಲಿಗೆ ಬಿನ್ನಹವ ಮಾಡ್ಯೇನು
ಬಯಸುವ ಪರಿ ನೀಡುವ ದೊರೆ ನೀನು
ಭಯವಿಲ್ಲದೆ ಮೊರೆ ಹೊಕ್ಕೆನು ನೀಡಾ
ಭಯವರದ ಪ್ರಸನ್ವೆಂಕಟ ಪ್ರೌಢಾ ೩

೨೨೨

ಕೈಯ ಬಿಡದಿರೆನಗೆ ಹುಯ್ಯಲಿಡುವೆ ನಿನಗೆ
ಅಯ್ಯ ವೆಂಕಟರಾಯ ಅಯ್ಯೋ ಸೋತೆನೊ ಜೀಯ
ನೀಯೆನ್ನಲಸದೆ ನೋಡೊ ಕೃಪೆಯ ಮಾಡೊ ಪ.

ಜನನ ಮರಣ ಕ್ಷತ ಇನಿತೆ ಸಾಕೆಲೆ ದಾತ
ಅನುದಿನ ನಿನ್ನ ನಾಮ ನೆನವಿನಾನಂದ ಪ್ರೇಮ
ತನುಮನದಲ್ಲಿ ಬೆಳಸೊ ಉದಯಿಸೊ ೧

ಕರ್ಮ ಬಟ್ಟೆಯನರಿಯೆ ಧರ್ಮಸಂಗ್ರಹವರಿಯೆ
ಶರ್ಮ ಚಿಹ್ನಗಳಿದ್ದು ನಿರ್ಮಳಾಂತವಿಲ್ಲ ದು
ಷ್ಕರ್ಮವೆಲ್ಲ ನಿವಾರಿಸೊ ನೇವರಿಸೊ ೨

ಶುದ್ಧ ಸಾತ್ವಿಕ ಮತದ ಮಧ್ವಮುನಿಯ ಮತದಿ
ತಿದ್ದು ಪ್ರಸನ್ನವೆಂಕಟರಮಣನೆ ಎನ್ನ
ಉದ್ಧರಿಸೊ ಸಶಿಗನೆ ನಿನ್ನವನ ೩

೨೨೩

ಗೋವಿಂದ ಗೋವಿಂದ ಗೋವಿಂದ ನನ್ನ
ತಾಯಿ ತಂದೆ ಗೋವಿಂದ ಪ.

ತಿರುಗಿ ಭವದಲಿ ಗೋವಿಂದ ವೃಥಾ
ಮರುಗಿ ಬಳಲಿದೆನೊ ಗೋವಿಂದ

ಕರಗಿ ತಾಪದಿ ಗೋವಿಂದ ಸಿಡಿ
ಲೆರಗಿಸಿಕೊಂಡೆನೊ ಗೋವಿಂದ ೧

ಎಚ್ಚರ ಹಾರಿತು ಗೋವಿಂದ ನಾ
ಮೆಚ್ಚಿದೆ ವಿಷಯಕೆ ಗೋವಿಂದ
ಹುಚ್ಚು ಮಾಡಿತು ಮನ ಗೋವಿಂದ ನಿ
ನ್ನುಚ್ಚರಣಡಗಿತು ಗೋವಿಂದ ೨

ಆಸೆಯ ಬಿಡಿಸೈ ಗೋವಿಂದ ನಿನ್ನ
ದಾಸರೊಳಿರಿಸೈ ಗೋವಿಂದ
ಪ್ರಸನ್ನವೆಂಕಟ ಗೋವಿಂದ ಭವ
ಘಾಸಿಯ ತಪ್ಪಿಸು ಗೋವಿಂದ ೩

೨೨೪

ಚಂಚಲಿಸದಿರು ನೀನು ಚತುರನಾಗು
ವಂಚಿಸದೆ ಸಕಲವೊಪ್ಪಿಸು ಹರಿಗೆ ಮನವೆ ಪ.

ಆರು ನಿನ್ನವರೆಂಬೆ ಅವರಗಲಿದರು ಕಡೆಗೆ
ಭೂರಿಸಂಚಿತ ಸಂಪದೆರವಾಯಿತು
ಜಾರುತಿವೆ ಕ್ಷಣಲವಗಳೀಗಾಗೆ ತಿಳಿಯದು
ನಾರಸಿಂಹನ ನಂಬು ನಿಷ್ಠೆಯಲಿ ಮನವೆ ೧

ಅಲ್ಪಸುಖಕಾಗಿ ನೀ ಅನೇಕ ಸುಖ ಮರೆವರೆ
ಕಲ್ಪಕಲ್ಪಕೆ ನಿರಯವುಣಲಿಬಹುದೆ
ಅಲ್ಪರುಪದೇಶದಲಿ ಭ್ರಾಂತನಾಗದೆ ಶೇಷ
ತಲ್ಪನ್ನ ಮರೆಹೋಗು ತಡೆಯದಲೆ ಮನವೆ ೨

ನಿನ್ನಿಂದ ಭವ ಬಂಧನವು ಮೋಚನವು ನೋಡು
ನಿನ್ನಿಂದ ಪ್ರಸನ್ವೆಂಕಟೇಶನೊಲುಮೆ

ಇನ್ನೆನ್ನ ದಣಿಸದಿರು ಇದರಿಂದ ಮೀರಿದರೆ
ಘನ್ನಗುರು ಮಧ್ವೇಶನಾಣೆ ನಿನಗೆ ೩

೨೨೫

ಚಿಂತೆಗೆಣಿಕೆ ಇಲ್ಲದಂತಾಗಿ ಎ
ನ್ನಂತರಂಗದ ಕ್ಲೇಶಕೆಂತೌಷಧ ರಂಗ ಪ.

ಒಂದು ದೊರೆತರೆ ಇನ್ನೊಂದಾಗಲುಬೇಕು
ಮಂದಿರವಿರಲು ಮೇಲಟ್ಟ ಬೇಕು
ಮಂದಮತಿ ಸತಿ ಇನ್ನೊಬ್ಬ ಸುಗುಣಿ ಬೇಕು
ಎಂದೆಂದು ಬೇಕೆಂಬ ನುಡಿಗುಂದದು ರಂಗ ೧

ಅವಭೋಗಿ ಅವಗಿಂತ ಮೀರ್ವೆನೆಂಬುವ ಹವಣು
ಅವನ ವಿದ್ಯಕೆ ಹೆಚ್ಚಲೆಂಬ ಹವಣು
ತವಕದಿ ಸಂಪದ ಮೇಳವಿಸುವ ಹವಣು
ಅವಿರಳ ಹವಣಕೆ ಕಡೆಗಾಣೆ ರಂಗ ೨

ರೂಢಿಲಿ ಸಿರಿವಂತರ ಮುಂದೆ ಖೋಡಿ ಮಾ
ತಾಡಿ ಗುದ್ದಿಸಿಕೊಂಡ ನರನಂತೆ
ನೋಡ ಪ್ರಸನ್ವೆಂಕಟೇಶ ಅಲ್ಲದ ಕೃತ್ಯ
ಮಾಡಿ ಕ್ಲೇಶವನುಂಡೆ ನಿನ್ನ ಬೇಡದೆ ರಂಗ ೩

೨೨೬

ಚಿಂತೆಯ ಪರಿಹರಿಸೊ ತಿಮ್ಮಯ್ಯ
ಚಿಂತಾಯಕ ಕಂತು ಕಮಲೆಯ ರಾಯ ಪ.

ಸಾಧ್ಯವಲ್ಲದುದನ್ನು ಹಂಬಲಿಸಿ
ಬುದ್ಧಿಭ್ರಾಂತಿಲಿ ಬಲು ಸುಖ ಬಯಸಿ

ಕದ್ದ ಕಳ್ಳನಂತೆ ವೃಥಾ ಕುದಿದೆ
ಮದ್ದು ಮೆದ್ದಿಲಿಯಂತೆ ಬಳಲಿದೆ ೧

ತಿಳಿದು ಮಾಯದ ಬಲೆಗೆ ಮೈಗೊಟ್ಟೆ
ಬೆಲೆಗಟ್ಟಿ ವೃಥಾ ಹುಚ್ಚು ದೈನ್ಯಬಟ್ಟೆ
ಆಲಿಸಿ ಮೋಕ್ಷದ ನೆಲೆಯ ಕೇಳದೆ ನಾ
ಕಳವಳಗೊಂಬೆ ಕರುಣಾಸಂಪನ್ನ ೨

ಚಿಂತೆಗೆ ಚಿಂತೆ ಸಹಾಯವಾಗಿ
ಅಂತರಂಗದ ಕ್ಲೇಶ ಹೇಸಿತು ಬಾಗಿ
ಶಾಂತಮೂರ್ತಿ ಪ್ರಸನ್ವೆಂಕಟೇಶ ಏ
ಕಾಂತದಾಸರ ನೆಳಲನೆ ತೋರಿಸೊ ೩

೨೨೭

ತಂದೆ ತಾಯಿ ಮಿತ್ರ ನೀನೆ ಬಾಂಧವ ನೀನೆ ನಿ
ನ್ನಿಂದ ಬಳಗಿಲ್ಲೆನಗೆ ಇಂದಿರಾಧವನೆ ಕಾಯೊ ಪ.

ಹೊಲೆಯ ರಕ್ತದಿ ರೇತ ನಿಲಿಸಿದನೊರ್ವ ಪಿತ
ನೆಲೆಸಿ ಗರ್ಭದೊಳು ರಕ್ಷಿಸಿದೆ ನೀನು
ಹಲವು ಯೋನಿಯ ತೋರಿ ತೊಳಲಿಸಿ ತುದಿಯಲ್ಲಿ
ನೆಲೆಗೆ ನಿಲ್ಲಿಸುವಂಥ ಸುಲಭ ಜನಕನಲ್ಲೆ ೧

ನವಮಾಸ ಧರಿಸಿ ಸ್ತನ್ಯವನುಣಲಿತ್ತಳವ್ವೆ
ತವಕದಿ ನಡೆ ನುಡಿಸುವೆಯೊ ನೀನು
ಆವ ಕಾಲಕಾಲದಲ್ಲಿ ತವಗರ್ಭದಲ್ಲಿ ಪೊತ್ತು
ಜೀವಕೆ ಚೈತನ್ಯಾಶನವೀವ ತಾಯಿ ನೀನಲ್ಲವೆ ೨

ಶ್ರೇಯಸನಾದರಿಸುವ ಪ್ರಿಯಸಖರೆಲ್ಲರು ನಿ:
ಶ್ರೇಯಸದಿ ಸುಖಮುದದಾಯಕ ನೀನೆ

ಮಾಯಪಾಶ ಬಂಧನದಿ ನೋಯುವರವರ್ಗಾಬಾ
ಧೆಯನಟ್ಟಿ ಕಳೆವ ಚಿನ್ಮಯ ಮಿತ್ರ ನೀನಲ್ಲವೆ ೩

ವಿತ್ತವಿರೆ ಸಹೋದರರಿತ್ತ ಬನ್ನಿ ಕೂಡ್ಯೆಂಬರು
ವಿತ್ತಶೂನ್ಯನಾದರೆ ನೀನುಪೇಕ್ಷಿಸೆ ಅಯ್ಯ
ಒತ್ತಿ ಬಹ ದುರಿತ ವಿಪತ್ತುಗಳ ಸವರಿ ಸು
ಮುಕ್ತಿಯ ಪದವೀವಾನಿಮಿತ್ತ ಬಂಧು ನೀನಲ್ಲವೆ ೪

ಸಿರಿಯು ಪೋಗೆ ನಿಲ್ಲರು ಶರೀರ ಸಂಬಂಧಿಗಳಾ
ತುರದ ದಾರಿದ್ರ್ಯ ಪಾಪಹರನು ನೀನೆ
ಕರುಣಿ ಪ್ರಸನ್ನ ವೆಂಕಟರಮಣ ನಿನ್ನ ನಾಮ
ಸ್ಮರಣೆ ಎನ್ನ ಜಿಹ್ವೆಗೆ ಮರೆಯದಿರಲಿ ಕಂಡ್ಯ ೫

೨೨೮

* ತಪ್ಪುಗಳೆಲ್ಲ ಪರಿಹರಿಸುವ ನ
ಮ್ಮಪ್ಪನಲ್ಲವೆ ನೀನು
ಒಪ್ಪಿದ ಬಳಿಕವಗುಣ ನೋಡದ ತಿ
ಮ್ಮಪ್ಪನಲ್ಲವೆ ನೀನು ಪ.

ಬೆಳಗಿನ ಜಾವದಿ ಹರಿ ನಿನ್ನ ಸ್ಮರಣೆಗೆ
ಹಳವಿಗೆಗೊಳ್ಳದ ತಪ್ಪು
ಮಲಮೂತ್ರವಿಸರ್ಜನೆಯ ಮೃತ್ತಿಕೆಯಲಿ
ಮಲಿನವ ತೊಳೆಯದ ತಪ್ಪು
ತುಲಸಿ ವೃಂದಾವನ ಗೋಸೇವೆಗೆ
ಅಲಸಿಕೆ ಮಾಡುವ ತಪ್ಪು
ನಳಿನ ಸಖೋದಯಕರ್ಘ್ಯವ ನೀಡದ
ಕಲಿವ್ಯಾಸಂಗದ ತಪ್ಪು ೧

* ಈ ಕೃತಿ 'ಪುರಂದರ ವಿಠಲ' ಅಂಕಿತದಲ್ಲಿಯೂ ಇದೆ.

ದಿನದಿನ ಉದಯದಿ ಸ್ನಾನವ ಮಾಡದ
ತನುವಂಚನೆಯ ತಪ್ಪು
ಕ್ಷಣ ಶ್ರೀ ಹರಿಗುಣ ಜಿಜ್ಞಾಸಿಲ್ಲದ
ಮನವಂಚನೆಯ ತಪ್ಪು
ಮುನಿಸುರ ಭೂಸುರರಾರಾಧಿಸದ
ಧನ ವಂಚನೆಯ ತಪ್ಪು
ವನಜಾಕ್ಷನೆ ನಿನ್ನ ಪಾದ ವಿಮುಖ ದು
ರ್ಜನ ಸಂಸರ್ಗದ ತಪ್ಪು ೨

ಕಣ್ಣಲಿ ಕೃಷ್ಣಾಕೃತಿ ನೋಡದೆ ಪರ
ಹೆಣ್ಣಿನ ನೋಟದ ತಪ್ಪು
ನಿನ್ನ ಕಥಾಮೃತ ಒಲ್ಲದೆ ಹರಟೆಯ
ಮನ್ನಿಸುವ ಕಿವಿ ತಪ್ಪು
ಅನ್ನವ ನಿನಗರ್ಪಿಸದಲೆ ಹರುಷದಿ
ಉಣ್ಣುವ ನಾಲಿಗೆ ತಪ್ಪು
ಚಿನ್ಮಯ ಚರಣಕ್ಕೆರಗದೆ ಉನ್ಮತ್ತ
ರ ನಮಿಸುವ ತಲೆ ತಪ್ಪು ೩

ಶ್ರೀ ನಿರ್ಮಾಲ್ಯದ ವಿರಹಿತ ಸುರಭಿಯ
ಘ್ರಾಣಿಪ ನಾಸಿಕ ತಪ್ಪು
ಆನಂದದಿ ಸಂಕೀರ್ತನೆ ಮಾಡದ
ಹೀನವಿವಾದದ ಬಾಯ ತಪ್ಪು
ಶ್ರೀನಾಥಾರ್ಚನೆ ಇಲ್ಲದೂಳಿಗ
ಮಾಣದಿರುವ ಕೈ ತಪ್ಪು
ಶ್ರೀನಾರಾಯಣ ವೇಶ್ಮನಿಗೈದದ
ನಾನಾಟನ ಪಾದ ತಪ್ಪು ೪

ಯಜ್ಞಾತ್ಮಗೆ ಯಜ್ಞಾರ್ಪಿಸದೆ ಸುಖ
ಮಗ್ನಾದ ಮೇಢ್ರದ ತಪ್ಪು

ಅಗ್ರದ ಕರ್ಮವ ಶೌಚವ ಜರಿದ ಸ
ಮಗ್ರ ಗುಹ್ಯಕೃತ ತಪ್ಪು
ಅಜ್ಞಾನ ಜ್ಞಾನದಿ ಕ್ಷಣಲವಶತ
ವೆಗ್ಗಳಘ ಗಳಿಸುವ ತಪ್ಪು
ಯಜ್ಞೇಶ ಪ್ರಸನ್ವೆಂಕಟ ಕೃಷ್ಣ ನಾ
ಮಾಗ್ನಿಗೆ ತೃಣವೀ ತಪ್ಪು ೫

೨೨೯

ತಪ್ಪು ನೋಡದೆ ಬಂದೆಯಾ ನನ್ನ ತಂದೆಯೆ
ಅಪ್ಪ ತಿರುವೆಂಗಳೇಶನೆ ನಿರ್ದೋಷನೆ ಪ.

ಆಪಾದಮೌಳಿ ಎನ್ನೊಳು ಅಘ ಬಹಳ
ಶ್ರೀಪತಿ ಕ್ಷಮಿಸಿ ಕಾಯಿದೆಯ ಉದಧಿಶಯ್ಯಾ ೧

ಜಗದಘಹರನೆಂಬುದು ನಿನ್ನ ಬಿರುದು
ತ್ರಿಗುಣಾತೀತನೆ ರಾಮನೆ ಗುಣಧಾಮನೆ ೨

ಇನ್ನೆನ್ನ ಕಲುಷವಾರಿಸೊ ಭವತಾರಿಸೊ ಪ್ರ
ಸನ್ನ ವೆಂಕಟರಮಣ ಭಯಶಮನ ೩

೨೩೦

ತೊಲ ತೊಲಗೆಲೊ ಕಲಿಯೆ ನಿಲ್ಲದಿಲ್ಲಿ ಪ.

ತೊಲ ತೊಲಗೆಲೊ ಕಲಿಯೆ ಸಲೆ
ಸಲುಗೆಯ ಬಿಡು ಸಲಿಲಜಾಕ್ಷನ ದಾಸರ ಅ.ಪ.

ರಮೆರಮಣನ ಸಿರಿರಮಣೀಯ ನಾಮವಿರೆ
ಯಮಗಿಮನಂಜಿಕೆ ಎಮಗುಂಟೆ
ತಮ ತಮ ಮಹೋತ್ತಮ ಕುಲಗಳು ಮಹೋ
ತ್ತಮತಮರೊಲುಮೆ ಮತ್ತವನ ಆಶ್ರಯವುಂಟು ೧

ಮನ ಮನೋಸಂಭವನ ಮನೆ ಹೊಕ್ಕರೆ ಸ್ಥೈರಿಸ
ಘನಜ್ಞಾನಿ ಪೂರ್ಣಗುರು ಜ್ಞಾನಿರಾಯ
ತನು ತನಯಾಂಗನೇರು ತನ್ನವಸರಕಾರಿಲ್ಲ
ಈ ನಯನ ಹರಿನಾರಾಯಣನಲ್ಲಿ ತೊಡಗಿರೆ ೨

ಬಿಡಬಿಡ ಭಟನೆಂದು ಬೇಡಿದಂತಾಭಯವೀವ
ಪಡಿ ಪೊಡವಿಲಿ ಕೊಟ್ಟು ಪಿಡಿದ ಎನ್ನ
ಒಡಒಡನೆ ರಕ್ಷಿಪ ಒಡೆಯ ಪ್ರಸನ್ವೆಂಕಟೇಶ
ಅಡಿಯೆಡೆ ಸೇರಿದೆ ಬಾರೊ ಅಡಗಡಗೆಲೆಲೊ ೩

೨೩೧

ದಡ ಸೇರಿಸು ಭವದ ಕಡಲಿನ
ದಡ ಸೇರಿಸು ಹರಿಯೆ
ಕಡೆ ಮೊದಲಿಲ್ಲದ ಕ್ಲೇಶದ ವಾರಿಯ
ಕಡು ಕಾಂಕ್ಷದ ಬಲುತೆರೆಯ ಪ.

ಸಾಧು ಸಮಾಗಮ ಸಚ್ಛಾಸ್ತ್ರ ಶ್ರವ
ಣಾದಿಗಳಿಲ್ಲದೆ ಕೆಡುವೆ
ಮೇದಿನಿಯೊಳು ಮೂಢಾತ್ಮನು ನಾ ಶ್ರೀ
ಪಾದವ ಹೊಂದಿಸು ಹರಿಯೆ ೧

ಸಾಸಿರ ನಾಮದಿ ತುಲಸೀ ಕುಸುಮವ
ಶ್ರೀಶನಿಗರ್ಪಿಸಲಿಲ್ಲ
ಹೇಸದೆ ಬಾರದುದನ್ನೆ ಬಯಸುತ
ವಾಸುದೇವ ಕೆಟ್ಟೆನಲ್ಲ ೨

ಮನ ವಶವಾಗದು ತನು ಮಡಿಯಾಗದು
ಕನಸಲಿ ಧರ್ಮವನರಿಯೆ
ಒಣಮಾತಲಿ ದಿನ ಹೋದವು ಪರಗತಿ
ಗನುಕೂಲಲ್ಲದು ದೊರೆಯೆ ೩

ದುರ್ವ್ಯಸನಕೆ ಬೇಸರೆನೆಂದಿಗೆ ಘನ
ಗರ್ವಿಲಿ ವರ್ತಿಪೆನಲ್ಲ
ಪರ್ವತ ನೆಗಹುವ ನುಡಿಯನ್ನಾಡುವೆ
ನಿರ್ವಾಹ ಕಡ್ಡಿಯೊಳಿಲ್ಲ ೪

ನನ್ನ ಗುಣದ ನಂಬಿಕೆ ನನಗಿಲ್ಲ
ನಿನ್ನಯ ನಾಮವೆ ಗತಿಯು
ಇನ್ನಾದರು ಕಡೆಗಣ್ಣಲೆ ನೋಡು ಪ್ರ
ಸನ್ವೆಂಕಟ ಸಿರಿಪತಿಯೆ ೫

೨೩೨

ದಯಮಾಡು ದಯಮಾಡು ಶ್ರೀನಿವಾಸ ಭವ
ಭಯ ನಿವಾರಣ ಭಜಕ ಭಕ್ತರಘನಾಶ ಪ.

ನೇಮವೆನ್ನಲಿಲ್ಲ ನಾಮದರಿಕೆಯಿಲ್ಲ
ನಾ ಮಹಾಪಾಪಿಯು ಸ್ವಾಮಿ ನೀನೊಲಿದು ಗಡ ೧

ಸದ್ಧರ್ಮ ಸರಕಿಲ್ಲ ಶುದ್ಧ ಬುದ್ಧಿಯಿಲ್ಲ
ಉದ್ಧರಿಸೆನ್ನನಿರುದ್ಧ ಹರಿ ಕರುಣಿ ೨

ಸತ್ಕುಲ ಹೊಂದೇನು ಸತ್ಕರ್ಮ ಮಾರ್ಗಿಲ್ಲ
ಭಕ್ತರಕ್ಷಕ ಪಾಪಮುಕ್ತ ದೇವರ ದೇವ ೩

ಅವಗುಣದೆಣಿಕೆಯ ವಿವರ ನೋಡದೆ ಅಯ್ಯ
ಜವನ ಬಲೆಯನು ತಪ್ಪಿಸುವ ಸರೀಸೃಪ ಶಯ್ಯ ೪

ಅಜಾಮಿಳ ವ್ಯಾಧ ಆ ಗಜ ಅಹಲ್ಯೋದ್ಧರ
ನಿಜ ಪ್ರಸನ್ವೆಂಕಟೇಶ ಸುಜನ ಪರಿಪೋಷ ೫

೨೩೩

ದಾರು ದಾರಿಲ್ಲೆಲೆ ರಂಗ
ದಾರು ದಾರಿಲ್ಲ ಸಂಗ
ನೀರಜಾಕ್ಷ ನೀನೆ ಭವಸಾಗರ
ತಾರಿಸಿ ಕೀರ್ತಿ ಪಡೆಯೊ ದಾತಾರ ಪ.

ಮೀನವಾಮಿಷವುಂಡಂತೆ ಸುಖ
ಮಾನಿನಿಯರ ತಡಿಯು
ಧೇನು ಜರಿಯಾದಂತೆ ಏಳಿಲು
ಸೂನುಗಳ ಬಿರುನುಡಿಯು
ಏನು ಬಳಗಾಮೃಗ ದಗ್ಧ ವಿ
ಪಿನದ ಸ್ನೇಹದೆ ಕಡಿಯು
ಪ್ರಾಣ ಪಯಣಕೆ ಬುತ್ತಿಲ್ಲ ಭವ ಸಂ
ಧಾನ ಹರಿದರೆ ಆರಿಲ್ಲ ಒಡೆಯಾ ೧

ಏಸೋ ದಿನ ನೆಚ್ಚಿದ ಕಾಯ
ಹೇಸಿಕೆ ಘನವಾಯಿತು
ಆಸೆಬಟ್ಟಾರ್ಥ ವೃಥಾ ವ್ರಯ
ಕಾಸು ನಾಶಾಯಿತು
ಲೇಶ ಮಾತ್ರವು ಹಿತ ಹೊಂದದೆ ಮನ
ದ್ವೇಷಿ ತಾನಾಯಿತು ಆ
ಯುಷ್ಯ ಸೂತ್ರವು ಹರಿದರೆ ಭವರೋಗ
ಭೇಷಜರಿಲ್ಲದಂತಾಯಿತು ೨

ಕುನ್ನಿ ಸಂತೆಗೆ ಹೋದಂತೆ ಬಹು
ಜನ್ಮ ನೋವಾದವು
ಮಣ್ಣಿನೊಳು ಹಾಲ ಕೊಡ ಒಡೆದಂತೆ
ನನ್ನ ಧರ್ಮಕರ್ಮವು

ನನ್ನೆಚ್ಚರ ನನಗಿಲ್ಲವು
ನಿನ್ನೆಚ್ಚರವೆಲ್ಲಿಯದು ಪ್ರ
ಸನ್ನವೆಂಕಟ ನಿನ್ನ ಯಾತ್ರೆಗೆ ನೀನೆ
ಬೆನ್ನಾದರೆನಗೆಲ್ಲ ಗೆಲುವು ೩

೨೩೪

ದುರಿತ ಪರಿಹರಿಸು ರಂಗಾ
ಪರಮ ಪಾತಕರು ಬಂದರು ನೆರೆದು ರಂಗಾ ಪ.

ಪ್ರತ್ಯಕ್ಷ ಜೀವನ ಶವಕೆ ಯಮನ ಚಾರಕರು
ಮುತ್ತಿ ಕೊಲುವಂತೆ ಕಾಣಿಸುತದೆ ದಯಾಳು
ಕರ್ತ ನೀನಲ್ಲದಿನ್ನೊಬ್ಬೊಡೆಯ ಕಾಲ
ಮೃತ್ಯು ವಿನಯದೆ ಶೂಲ ನರಪಂಚವದನ ೧

ನೀನರಸನೆನಗಾಗಿ ಇನ್ನೊಬ್ಬ ನೀಚರಿಗೆ
ದೀನನಾಗುವುದುಚಿತೆ ಕರುಣಗುಣ ಖಣಿಯೆ
ಮಾನ ನಿನ್ನದು ಅವಮಾನ ನಿನ್ನದು ಪಾಂಡವ
ಮಾನಿನಿಯ ಸಮಯಕೊದಗಿದ ಭಕ್ತ ಬಂಧು ೨

ಮರೆಹೊಕ್ಕೆ ದಾಸವತ್ಸಲನೆಂಬ ಬಿರುದು ಕೇ
ಳಿರುವೆ ತಪ್ಪಿಸಿಕೊಳಲುಬೇಡ ಭುವನೇಶ
ಉರಗಗಿರಿವಾಸ ಪ್ರಸನ್ವೆಂಕಟೇಶ ಸಂ
ಹರಿಸು ಅಪಕಾರಿಗಳ ಸಲಹು ಸಜ್ಜನರ ೩

೨೩೫

ದೇವ ನೀ ಗತಿಯಯ್ಯ ಶ್ರೀ ಮಾ
ಧವ ನೀ ಗತಿಯಯ್ಯ ಪ.

ಎಂಬತ್ತುನಾಲ್ಕು ಲಕ್ಷ ಯೋನಿಯ ತಿರುಗಿ
ಅಂಬರ ಪೈಶಾಚಿಯ ತೆರ ಮರುಗಿ
ಅಂಬುಧಿಶಾಯಿ ನಿನ್ನೆಡೆಯರುಹಿ(ರಿವಿ?)ಲ್ಲ
ಇಂಬುಗಾಣಿಸಿನ್ನಾದರೆ ಸಿರಿನಲ್ಲ ೧

ಏನೋ ಸುಕೃತದಿಂದ ಮಾನವನಾಗಿ
ನಾನಾ ವಿಷಯವುಂಡು ಅಂಧಕನಾಗಿ
ಹೀನ ನರ್ಕಕೆ ಸಂಚಕಾರವ ಕೊಟ್ಟೆ
ಜ್ಞಾನವಿಹೀನ ನರಪಶುಗೇನು ಬಟ್ಟೆ ೨

ಬುದ್ಧಿ ಇಲ್ಲದವನಾದರೆ ತನ್ನವನ
ತಿದ್ದಬೇಕಲ್ಲದೆ ಬಿಡುವರೆ ಜಾಣ
ಮದ್ದುಂಡಿಲಿಯ ಪರಿ ಬಳಲುವೆನೆನ್ನ
ಉದ್ಧರಿಸು ಪ್ರಸನ್ನವೆಂಕಟ ರನ್ನ ೩

೨೩೬

ದೇವ ಬಾರೊ ಶ್ರೀನಿವಾಸದೇವನೆ ಬಾರೊ ನನ್ನ
ದಾವ ದಾವ ಪರಿಯ ತಪ್ಪ ಕಾವನೆ ಬಾರೊ ಪ.

ಜೀವನ ಪಾವನವ ಮಾಡುವನೆ ಬಾರೊ ನನ್ನ
ಭಾವದ ಬಯಕೆ ಪೂರೈಸುವನೆ ಬಾರೊ ೧

ಧ್ಯಾನಿಸಲೊಮ್ಮ್ಯಾರೆ ದಯದಿ ನೀ ನಿಲ್ಲಬಾರೊ ಅ
ಜ್ಞಾನ ನಾಶ ಮಾಡುವ ಕೃಪಾನಿಧಿ ಬಾರೊ ೨

ಹಡೆದ ತಾಯಿ ತಂದೆ ಗುರು ಒಡೆಯನೆ ಬಾರೊ ಎನ್ನ
ನಡೆ ನುಡಿ ವಿಷಮೆನ್ನದೆ ಕೈ ಪಿಡಿಯಲು ಬಾರೊ ೩

ತೆರೆ ತೆರೆ ಬಪ್ಪಾಸೆಯ ಚರಿಸಲು ಬಾರೊ ಆ
ತುರದ ಕಾಮಾದ್ಯರ ನೀನೊರೆಸಲು ಬಾರೊ ೪

ಕ್ಷುಲ್ಲನುದಾಸಿಸುದುಚಿತಲ್ಲವೊ ಬಾರೊ ಪ್ರಾಣ
ದೊಲ್ಲಭ ಬಿರುದು ನಿನ್ನದಲ್ಲೇನೋ ಬಾರೊ ೫

ಪಾಪಗಳು ಘನ್ನವಾದರೇನಯ್ಯ ಬಾರೊ
ಕೃಪಾಪಾಂಗದಲ್ಲವು ಉಳಿಯಲಾಪವೆ ಬಾರೊ ೬

ಶ್ರೀರಮಣ ಎಂದಿಗಾಪ್ತರಾರಿಲ್ಲೊ ಬಾರೊ ಸುಖ
ತೀರಥೇಶ ಪ್ರಸನ್ವೆಂಕಟರಾಯ ಬಾರೊ ೭

೨೩೭

ಷಡ್ವರ್ಗ ಸುಳಾದಿ

ಝಂಪೆತಾಳ

ಧನಧಾನ್ಯ ಗೃಹಕ್ಷೇತ್ರ ವನಿತೆ ಪುತ್ರಾದಿತರ
ನೆನವಿನಲಿ ಜನುಮಗಳ ತಂದೀವ ಕಾಮ
ಕನಕಗಿರಿ ಕೈಸಾರ್ದಡಂ ಪರಸು ದೊರೆದಡಂ
ಇನಿತು ತೃಪುತಿಯ್ಯೆದದೆನ್ನ ಮನೋಕಾಮ
ಜನಪರ ಸಿರಿಬಯಕೆ ಜಾಣೆಯರ ಸಂಗತಿಯ
ಕನಸಿನೊಳಗಾದಡಂ ಬಿಡದಿಹುದು ಕಾಮ
ತನಗಲ್ಲದ್ದವಣದಿಹ ಕಾಮ ಕಾಮಿನಿ ಭೂತ
ಕೆನಿತಶನ ಸಾಲದಾಯಿತ್ತೆ ಪೂರ್ಣಕಾಮ
ಮುನಿನಾರಿಯಳ ಕಲ್ಲಮೈಯನೆತ್ತಿದ ಪಾದ
ವನು ಎನ್ನ ದುರ್ವಿಷಯ ಕಾಮದಲ್ಲಿಟ್ಟು ನಿನ್ನ
ಜ್ಞಾನ ಭಕುತಿ ವೈರಾಗ್ಯ ಕಾಮವನೀಯೊ
ದಿನಕರ ಕುಲೋದ್ದಾಮ ಪ್ರಸನ್ವೆಂಕಟ ರಾಮ ೧

ಮಠ್ಯತಾಳ

ಗುರುಹಿರಿಯರಿಗಂಜದೆ ನಿಕ್ಕರ ನುಡಿಸುವ ಕ್ರೋಧ
ಬರಿಯಹಂಕಾರದಿ ಬೆರತಘರಾಶಿಯ

ನೆರಹಿಸಿ ನಿರಯವನುಣಿಸುವ ಕ್ರೋಧ
ಮರುಳನ ದುರುಳನ ಮಾಡುವ ಕ್ರೋಧ
ಗುರುಹಿರಿಯರಿಗಂಜದೆ ಉರುಕೋಪದಲೆದ್ದ ಕಾ
ಳುರಗನ ಪೆಡೆದುಳಿದಾ ಸಿರಿಚರಣವ ಕ್ರೋಧಾಹಿ
ಶಿರದ ಮ್ಯಾಲಿಡು ಗಡ ಗರುಡಾದಿ ಪ್ರಸನ್ವೆಂಕಟ ತಾಂಡವ ಕೃಷ್ಣ ೨

ರೂಪಕತಾಳ

ಹೀನ ಧರ್ಮನ ಮಾಡಿ ಸುರಋಷಿ ಪಿತೃ ಋಣ
ವೇನು ಕಳಿಯಲಿಲ್ಲವೆನ್ನ ಲೋಭ
ಜೇನನೊಣನ ವೋಲು ತಾನುಣ್ಣನೊದಗಿಸಿ
ನಾನಾಲಾಭದಲಿ ತುಂಬದು ಲೋಭ ಭಾಂಡ
ದಾನವ ಬೇಡಿಳೆಯಾಜಾಂಡವನೊಡೆದ
ಶ್ರೀನುತಾಂಘ್ರಿಯಲೊದ್ದು ಲೋಭದ ಕೋಶವನು
ನೀನೆ ಸೂರೆಯ ಮಾಡೊ ಪ್ರಸನ್ವೆಂಕಟ ವಾ
ಮನ್ನ ಉದಾರಿ ಶಿಖಾಮಣಿ ಭಾರ್ಗ್ವ ೩

ಪಂಚಘಾತ ಮಠ್ಯ

ಅನ್ನಕೆ ಉಬ್ಬಿ ಯೌವನ ರೂಪಕೆ ಕೊಬ್ಬಿ
ಧನ್ನಕೆ ಮೊಬ್ಬೇರಿಸಿತೆನ್ನ ಮದವು
ಎನ್ನ ಸವಿಸುವ ಪರಿವಾರ ಭುಜಬಲೆಂ
ಬುನ್ನತಿಯಿಂದುನ್ಮತ್ತನ ಮಾಳ್ಪ ಮದವು
ದಾನವೇಂದ್ರನ ಮೌಳಿಯನ್ನು ತುಳಿದ ಪದದಿ
ಎನ್ನ ಮದರಾಜನ ಮೆಟ್ಟಿಯಾಳೆಲೆ ದೇವ
ನಿನ್ನ ಧ್ಯಾನವಿರತಿ ಮದದಿಂದ ಕೊಬ್ಬಿಸು ಪ್ರ
ಸನ್ವೆಂಕಟ ಉರುಕ್ರಮ ಧನ್ಯರೊಡೆಯ ೪

ತ್ರಿವಿಡಿತಾಳ

ಉತ್ತಮರ ಅವಗುಣವೆಣಿಸುತ
ಹೊತ್ತು ಯಮಪುರಕೊಯ್ವ ಮತ್ಸರ

ಮತ್ತೆ ಪರಸೌಖ್ಯಕ್ಕೆ ಕುದಿಕುದಿಸಿತು ಮತ್ಸರವು
ಚಿತ್ತಜನ ಶರ ಮತ್ಸರಿಸುತಿರೆ
ಮೊತ್ತ ಗೋಪೇರ ಕುಚದ ಪೀಠದಿ
ಒತ್ತಿ ಸುಖವಿತ್ತ ಪದವೆನ್ನೆದೆಲಿಡು ಪ್ರಸನ್ವೆಂಕಟ ಕೃಷ್ಣ ೫

ಅಟ್ಟತಾಳ

ಇಂದುಮುಖಿಯರ ಕಂಡಂದಗೆಡಿಪ ಮೋಹ
ಕಂದಗಳಾಡಿಸಿ ಕರುಣ ಉಕ್ಕಿಪ ಮೋಹ
ತಂದೆ ತಾಯಿ ಬಂಧುವರ್ಗದ ಮೋಹ
ಮುಂದಣಗತಿಗೆ ಮೂರ್ಛೆಯನಿತ್ತ ಮೋಹ
ಕಂದರ್ಪನ ಗೆದ್ದ ಯೋಗಿ ಜನರ ಹೃದ
ಯಾಂಧಕಾರವ ಗೆದ್ದು ತವಪಾದನಖಪೂರ್ಣ
ಚಂದ್ರ ಚಂದ್ರಿಕೆದೋರಿ ಅಭಿಜ್ಞನ ಮಾಡೆನ್ನ ದಯಾ
ಸಿಂಧು ಪ್ರಸನ್ನವೆಂಕಟ ಮುನಿಜನವಂದ್ಯ ೬

ಏಕತಾಳ

ಎನ್ನ ಕಾಮವೆಂಬ ಗಿರಿಗ್ವಜ್ರಾಂಕಿತ ಪದ
ಎನ್ನ ಕ್ರೋಧವೆಂಬಾಹಿಗೆ ಧ್ವಜದಂಡಾನ್ವಿತ ಪದ
ಎನ್ನ ಮದವೆಂಬ ಗಜಕಂಕುಶಾಂಕಿತ ಪದ
ಎನ್ನ ಮತ್ಸರಾನ್ವಯಕೆ ಗಂಗಾನ್ವಿತ ಪದ
ಎನ್ನ ಲೋಭ ಗೆದ್ದ ಮನೋಳಿಗೆ ಅಬ್ಜಯುತ ಪದ
ಎನ್ನ ಮೋಹಧ್ವಾಂತ ಪೂರ್ಣೇಂದು ನಖದ ಪದ
ಎನ್ನ ಮನೋರಥ ಸಿದ್ಧಿಯನು ಕರೆದೀವ ಪ್ರ
ಸನ್ನವೆಂಕಟನ ದಿವ್ಯಪಾದಪಾಂಕಿತ ಪದ

ಜತೆ

ಇಂತು ಬಾಧಿಪ ಷಡ್ವರ್ಗದಂಬನೆ ಕಿತ್ತು ಸಂತತ ಶ್ರೀಚರಣ ಸ್ಮರಣೆ
ಮುಂತಾದೌಷಧವನಿತ್ತೆನ್ನ ರಕ್ಷಿಸು ಧನ್ವಂತರಿ ಪ್ರಸನ್ನವೆಂಕಟ ನರಹರಿಯೆ

೨೩೮

ನನಗೆ ಮನಕೆ ಬಡಿದಾಟೆಳೆದಾಟ ಶ್ರೀ
ಸನಕಾದಿವಂದ್ಯ ಬಿಡಿಸಿ ಕಾಯೊ ದಾತ ಪ.

ಸಲಿಲ ಸ್ನಾನವ ಮಾಡಿ ಊರ್ಧ್ವ ತಿಲಕವನಿಟ್ಟು
ನಳಿನಾಕ್ಷ ನಿನ್ನಂಘ್ರಿ ಜಪಿಸೆಂದರೆ
ಛಲದಿಂದ ವಿಹಿತವಲ್ಲದ ದಾರಿಗೊಯ್ದೆನ್ನ
ತೊಳಲಿಸಿ ನೆಲೆಗಾಣಿಸದೆ ಛಲವಿಡಿದಿದೆ ೧

ಬೇಡಿಕೊಂಡರೆ ಕೇಳದಾಡಿಕೊಂಡರೆ ಕೇಳ
ದೀಡಾಡಿ 'ಬಿಸುಟೆನ್ನ ದಣಿಸುತಿದೆ
ನೋಡು ನಾನಾಕ್ರೋಶ ಮಾಡಿದರಂಜದು
ಬಾಡಿ ಬಳಲಿದೆನೆನ್ನ ಕರುಣಿಲ್ಲವಿದಕೆ ೨

ಮನಪಶುಕಟ್ಟಲು ಜ್ಞಾನಧಂಗಡವಿಲ್ಲ
ಘನ ವೈರಾಗ್ಯದ ಕಟ್ಟು ದೃಢವಿಲ್ಲವು
ಮಿನುಗುವ ಭಕುತ್ಯೆಂಬ ಎಳೆಹುಲ್ಲಿನಾಸಿಲ್ಲ
ನೀನೆ ವಶಮಾಡಿಕೊ ಪ್ರಸನ್ವೆಂಕಟೇಶ ೩

೨೩೯

ನಮ್ಮ ತಪ್ಪೇನೊ ಪರಬೊಮ್ಮ ನಿನಗೆ ಕೋಟಿ
ಬೊಮ್ಮಾಂಡ ನಾಯಕ ಅಚಿಂತ್ಯ ಮಹಿಮನಿಗೆ ಪ.

ಒಂದು ನಾಮೋಚ್ಚರಣೆಯಲಿ ಪರಗತಿ ಪಡೆದ
ರೊಂದು ಗುಣ ಪಿಡಿದು ಕಡೆಗಾಣರ್‍ಯಾರು
ಮಂದಮತಿಯಲಿ ಭಜಿಸಿ ಮಹಾಪಾಪ ನೂಕುವರು
ಇಂದಿರಾರಾಧ್ಯಪದ ಭಕ್ತವತ್ಸಲನೆ ೧

ನಾರಾಯಣನೆ ನಿನ್ನ ಮಗಳ ಮೈಗಾಳಿಯಲಿ
ಮೂರುಲೋಕದ ಪುಣ್ಯ ಬೆಳೆವುದು
ಸೂರ್ಯನ ಮಗನವರು ನಿನ್ನ ಬಂಟರಿಗಂಜಿ
ಜಾರುವರೆಲೆ ಶ್ರೀ ಜಾನಕಿರಮಣ ರಾಮ ೨

ಶಿಶುಗಳಪರಾಧಕ್ಕೆ ನಯನದಂಜಿಕೆ ಶಿಕ್ಷೆ
ಪಶುವಿರಕಳಿಗೆ ಕಂಠಕಾಷ್ಠವೆ ಶಿಕ್ಷೆ
ವಿಷಮ ಹಿಂಸೆಯು ಸಲ್ಲ ಪ್ರಸನ್ನವೆಂಕಟರಮಣ
ವಿಷಯಾಸೆ ಭವಶಿಕ್ಷೆ ಸಾಕೆನಗೆ ತಂದೆ ೩

೨೪೦

ನರರ ಪಾಡಲು ಬೇಡ ನಾಯಿ ಮನವೆ
ಮುರಹರನ ಭಕುತಿನೆಲೆ ಹೊಂದು ಮನವೆ ಪ.

ದಾರಿದ್ರ್ಯ ವ್ಯಸನದೊಳು ಮುಳುಗಿ ನರಧನಿಕರನು
ಆರಾಧನೆಯ ಮಾಡಿ ಬರಿದೆ ಕೆಡುವೆ
ಘೋರನರಕದ ಭಯಗಳನು ನೋಡೈ ತಿಳಿದು
ನಾರಸಿಂಹನ ನಂಬು ದೃಢದಿ ಮನವೆ ೧

ಬಲ್ಲಿದರ ಬಳಿವಿಡಿದು ಪೋಗಿ ಭ್ರಮೆಗೊಳ್ಳದಿರು
ಝಲ್ಲೈಸಿ ಬಳಲಿ ಮೃಗ ತೃಷೆಯಂದದಿ
ಫುಲ್ಲಲೋಚನ ಹರಿಯ ದಾಸರನು ಅನುಸರಿಸಿ
ಸೊಲ್ಲು ಸೊಲ್ಲಿಗೆ ಸುಧೆಯ ಸವಿದುಣ್ಣು ಮನವೆ ೨

ಮದದಿ ಮತ್ಸರದಿ ಪ್ರಜ್ವಲಿಸುತಿಹ ದೇಹದಲಿ
ಕುದಿಯದಿರು ತ್ರಿವಿಧ ತಾಪದಲಿ ಉಕ್ಕಿ
ಹದಿನಾಲ್ಕು ಭುವನದೊಡೆಯನ ನಂಬಿದರೆ ನಿನಗೆ
ಪದವಿತ್ತು ಪೊರೆಯನೆ ಪೇಳು ಮನವೆ ೩

ಮಂದಮತಿಯಾಗಿ ಬಹುವಿಷಯ ಭ್ರಾಂತಿಯಲಿ ಮ
ದಾಂಧರನೋಲೈಸಿ ಕೃಶವಾದರೆ
ಮುಂದುಗಾಣದೆ ಖಳರು ನೋಯಿಸಿ ನುಡಿದರೆ
ಕಂದಿ ಕುಂದಿ ಬಳಲುವೆಯಲಾ ಮರುಳು ಮನವೆ ೪

ಮುನ್ನ ಸಂಚಿತ ಸುಕೃತವೆಂತುಟೊ ತಂದೆ ಪ್ರ
ಸನ್ನವೆಂಕಟಪತಿಯ ಒಲುಮ್ಯಾಯಿತು
ಇನ್ನಾದರೆಚ್ಚರಿತು ವಿವಿಧ ಭಕುತಿಯ ಗಳಿಸಿ
ಧನ್ಯ ನೀನೆನಿಸಿ ಸಾರ್ಥಕವಾಗು ಮನವೆ ೫

೨೪೧

ನಿನ್ನರಮನೆ ಕಾಯ್ವ ಪಶುದೇಹಧಾರಿಯ ಮಾಡು ಕಂಡ್ಯ ಕೃಷ್ಣ
ನಿನ್ನವನಲ್ಲದ ಮಾನವ ಜನುಮೆಂದು ಬ್ಯಾಡ ಕಂಡ್ಯ ಪ.

ಅಚ್ಯುತ ಚಿತ್‌ಸ್ವರೂಪೋಚ್ಚಾರಿಪ ಗಿಣಿ ಮಾಡು ಕಂಡ್ಯ ಕೃಷ್ಣ
ನಿಚ್ಚಾರಿ ನಿಶಾಚರಹರನೆಂಬ ಜಾಣ್ವಕ್ಕಿ ಮಾಡು ಕಂಡ್ಯ ೧

ಅಹೋ ಮಾಉಮೇಶವಿಧಿಪನೆಂಬ ನವಿಲು ಮಾಡು
ಕಂಡ್ಯ ಕೃಷ್ಣ
ಕುಹಕ ಕುವ್ರತ ವೈರಿ ಅವರಿಗೆಂಬ ಪಿಕನ ಮಾಡು ಕಂಡ್ಯ ೨

ಹರಿಯವಯವಗಳೆಂಬ ಪುಷ್ಪದಿ ಚರಿಪಾಳಿಯ ಮಾಡು
ಕಂಡ್ಯ ಕೃಷ್ಣ
ಪರಮ ಮುಕ್ತಾಹಾರದ ಪರಮಹಂಸನ ಮಾಡು ಕಂಡ್ಯ ೩

ಭುಲ್ಲಿಪ ವೈಕುಂಠ ಸಿರಿಯ ನಿಟ್ಟಿಪ ಹುಲ್ಲೆ ಮಾಡು ಕಂಡ್ಯ ಕೃಷ್ಣ
ಎಲ್ಲ ಪ್ರಕಾರದ ಸಾರಿ ಕೂಗುವ ನರಿಯ ಮಾಡು ಕಂಡ್ಯ ೪

ಸ್ವರೂಪ ಬಿಂಬವ ನೋಡಿ ನರ್ತಿಪ ಕುದುರೆಯ ಮಾಡು
ಕಂಡ್ಯ ಕೃಷ್ಣ
ವರಮುಕ್ತರರಮನೆಭಾರ ಹೊರುವ ಗೂಳಿ ಮಾಡು ಕಂಡ್ಯ ೫

ನವೀನ ಮುಕ್ತರಿಗೊದಗುವ ಬಾಗಿಲ ಕುನ್ನಿ ಮಾಡು ಕಂಡ್ಯ ಕೃಷ್ಣ
ಗೋವಿಂದ ಗೋವಿಂದೆಂದು ಬೀದಿಲೊದರುವ ಕತ್ತೆ
ಮಾಡು ಕಂಡ್ಯ ೬

ಹರಿ ನಿರ್ಮಾಲ್ಯ ಕಸ್ತೂರಿ ಕರ್ದಮದ ಪತ್ರಿ ಮಾಡು ಕಂಡ್ಯ ಕೃಷ್ಣ
ಸ್ವರ್ಗಾಮೃತ ತಟವಾಪಿಯ ಮೀನವ ಮಾಡು ಕಂಡ್ಯ ೭

ಬಾಡಿ ಕೆಡದ ಪುಷ್ಪಲತೆ ತರುಗುಲ್ಮವ ಮಾಡು ಕಂಡ್ಯ ಕೃಷ್ಣ
ನೋಡಿ ಸ್ವಾನಂದದಿ ಜಿಗಿದಾಡುವ ಕಪಿಯ ಮಾಡು ಕಂಡ್ಯ ೮

ನಾಕಕೈವರ ಸಂಗತಿ ಬಿಟ್ಟಗಲದಂತೆ ಮಾಡು ಕಂಡ್ಯ ಕೃಷ್ಣ
ಆಕಾಂಕ್ಷವಿಲ್ಲದುಗ್ಗಡಿಪ ಭಟನನ್ನೆ ಮಾಡು ಕಂಡ್ಯ ೯

ಮಣಿಮಯ ಭಿತ್ತಿ ಸೋಪಾನ ವಿತಾನವ ಮಾಡು ಕಂಡ್ಯ ಕೃಷ್ಣ
ತೃಣ ಮುಕ್ತಾದವರೊಳಗೊಂದಾರೆ ಜಾತಿಯ ಮಾಡು ಕಂಡ್ಯ ೧೦

ಜ್ಞಾನಾನಂದಗಳ ಯೋಗ್ಯತೆ ನೋಡಿ ಕೂಡುವಂತೆ ಮಾಡು
ಕಂಡ್ಯ ನೀ
ದಾನಕ್ಕೆ ಮೊಗದೋರಿ ಕೈವಲ್ಯ ಪುರಾಗಾರ ಮಾಡು ಕಂಡ್ಯ ೧೧

ಈ ಪರಿ ಬಿನ್ನಹವಾಲಿಸಿ ಭವದೂರ ಮಾಡು ಕಂಡ್ಯ ಕೃಷ್ಣ
ಶ್ರೀ ಪ್ರಸನ್ವೆಂಕಟಪತಿ ಬಿಂಬಾತ್ಮಕ ಕೃಪೆ ಮಾಡು ಕಂಡ್ಯ ೧೨

೨೪೨

ನಿನ್ನವ ನಾನಲ್ಲೇನೊ ರಂಗ ನಿರ್ಜರೋತ್ತುಂಗ ಪ.

ಹುಚ್ಚ ಮಗನ ತಾಯಿತಂದೆ ಹಚ್ಚ ಬಲ್ಲರೆ ಸಾಕದೆ
ನಿಚ್ಚ ನಿನ್ನ ನಾಮ ಕಾಯೋ ನಿಶ್ಚಯಬುದ್ಧಿ ನೀಡೀಗೆ ೧

ಹಣವಳ್ಳೇವಲ್ಲದಿರೆ ಹೀನೈಸಿ ಚೆಲ್ಲುವರೆ ಜನಿತ ದು
ರ್ಗುಣರಾಶಿ ಜನಕ ನೀ ನಿವಾರಿಸೊ ೨

ಶರಣು ಹೊಕ್ಕವರವಸರಕೊದಗುವ ದೇವ
ಸೇರಿದೆ ಶ್ರೀ ಪಾದಾಬ್ಜವ ಸಿರಿ ಪ್ರಸನ್ವೆಂಕಟದೇವ ೩

೨೪೩

ನೀ ಕರುಣಿಸೊ ವಿಠಲ ನಮ್ಮ
ಸಾಕೊ ಪಂಡರಿ ವಿಠಲ ಪ.

ದೋಷಿಗಳೊಳಗೆ ಹಿರಿಯನು ನಾ ನಿ
ರ್ದೋಷಿಗಳರಸನೆ ವಿಠಲ
ಸಾಸಿವೆಯಷ್ಟು ಭಕುತಿಯನರಿಯೆನು
ಶೇಷಶಯನ ಶ್ರೀ ವಿಠಲ ೧

ಭವಸಾಗರದೊಳು ಮುಳುಗುವೆ ಸುಮ್ಮನೆ
ಅವಲೋಕಿಸುವರೆ ವಿಠಲ
ನವ ನವ ವಿಷಯಕೆ ಮುಗ್ಗುತಲಿಹ ಮನ
ದವಸರ ಕಾಯೊ ವಿಠಲ ೨

ತನುಸಂಬಂಧಿಗಳತಿ ಕಾರ್ಯಾರ್ಥಿಗಳ್
ಎನಗಾರಿಲ್ಲೊ ವಿಠಲಾ
ಬಿನಗು ಮಾನವರನುಸರಣೆಯಲಿ
ದಣಿಸದಿರಯ್ಯ ವಿಠಲ ೩

ನಿಶಿದಿನ ಅಶನ ವಸನಕೆ ಹೆಣಗುವೆ
ಹುಸಿ ಸಂಗ್ರಹಿಸಿದೆ ವಿಠಲ
ನಿಶಿದ್ಧಗಳಂಜಿಕೆ ಇಲ್ಲವು ನರಕದ
ಗಸಣೆಗೆ ಅಂಜುವೆ ವಿಠಲ ೪

ಜಾವಕೆ ಮಾಡುವೆ ಸಾವಿರ ತಪ್ಪನು
ಕಾವ ದಯಾಂಬುಧಿ ವಿಠಲ
ನಾ ವಡಲ್ಹೊಕ್ಕೆನೊ ಪ್ರಸನ್ವೆಂಕಟಪತಿ
ಜೀವಕೆ ಹೊಣೆ ನೀ ವಿಠಲ ೫

೨೪೪

ನೀ ಕಾಯ್ದರೆ ಕಾಯ್ದಾ ಬಗೆಯಲ್ಲದೆ ಬೇರೆ
ಏಕಮತಿ ಎನ್ನೊಳಿಲ್ಲ
ಶ್ರೀಕಾಂತ ಕರುಣಿ ನೀನಕ್ಲಿಷ್ಟ ಕಾಣಯ್ಯ
ಬೇಕೆಂದು ಸಾಕುತಿಹೆ ಹರಿಯೆ ಪ.

ವೇದ ಶಾಸ್ತ್ರ ಪುರಾಣ ಸಾರಾರ್ಥ ತಿಳಿದರಿಯೆ
ಸಾಧನ ಸುಮಾರ್ಗವರಿಯೆ
ಆದರದಿ ಭಕುತಿ ಬಲಿದೊಮ್ಮೆ ಪೂಜಿಸಲರಿಯೆ
ಮಾಧವ ಮುರಾರಿ ಕೃಷ್ಣಾ ತುಷ್ಟಾ ೧

ಮನ ಮರ್ಕಟವು ತನ್ನ ಮತಿಯಲ್ಲಿ ವಿಷಯ್ಯೆಂಬ
ವನಕೆ ಮೆಚ್ಚಿದೆ ನೋಡಯ್ಯ
ವನಚರತ್ವವ ನೀಗಿ ಕ್ಷಣವಾರೆ ತವಚರಣ
ವನಜರಸವುಣ್ಣದಲ್ಲೈ ರಂಗಯ್ಯ ೨

ಜನುಮ ಜನುಮದ ತಾಯಿ ತಂದೆ ಗುರು ಬಂಧು
ನನ್ನನು ಗತಿಗಾಣಿಪ ದಾತನೆ
ಎನ್ನ ಭವ ತಪ್ಪುಗಳನರಸದಿರು ಅರಸಿದರೆ
ನಿನಗುಚಿತೆ ಪ್ರಸನ್ವೆಂಕಟೇಶ ಶ್ರೀಶ ೩

೨೪೫

ನೀನೆ ಕರ್ತ ಎನ್ನ ಕರ್ತ ನಾ ನಿನ್ನ ಭೃತ್ಯ ಹಿತ
ಮಾನಹಾನಿ ನಿನ್ನದಯ್ಯ ಕೊನೇರಿ ತಿಮ್ಮ ನಮ್ಮಯ್ಯ ಪ.

ತನುಧನ ನೆಚ್ಚಿಕಿಲ್ಲ ಮಾನಿನಿ ತನ್ನವಳಲ್ಲ
ಸೂನು ಬಂಧುಗಳೆಲ್ಲ ಕ್ಷಣದವರಲ್ಲ

ನಾನಾ ಜನ್ಮದಲಿ ಎನ್ನ ಪ್ರಾಣ ಕಿತ್ತೈಯ್ಯ ಚೈತನ್ಯ
ದಾನವಾರಾತಿ ಕೃಷ್ಣಯ್ಯ ದೀನನ ಬಿಡದಿರಯ್ಯ ೧

ಭವಾಂಧಕಾರದೊಳನುಭವಿಸಿ ಬೆಂಡಾಗುವೆನು
ವಿವರಿಸಿ ನಿತ್ಯ ಹಿತವ ಕಾಣೆನು
ಜಾವ ಒಂದದರೊಳರ್ಧ ದಾರಿಯಲಿ ಶ್ರೀಪಾದ
ಭಾವಿಸಲೊಲ್ಲೆ ನೋಡಲವಗುಣಾಂಕಿತ ಮೂಢ ೨

ಸ್ವಾಮಿ ನಿನ್ನ ಮುದ್ರಾಂಕನ ಮಾಡಿನ್ನನುಮಾನ್ಯಾಕೆ
ಶ್ರೀಮಂತ ಭಾಗವತರ ಪ್ರೇಮಾನ್ವಿತರ
ಶ್ರೀ ಮಧ್ವರಾಯರ ಸಿಕ್ವಾನೇಮರಾಚರಣಾಧ್ಯಕ್ಷ
ಸಾಮೀಪ್ಯ ಮುಕ್ತಿಯನೀಯೊ ನನ್ನ ಪ್ರಸನ್ವೆಂಕಟಯ್ಯ ೩

೨೪೬

ನೀನೆ ಗತಿ ಕೃಷ್ಣ ಎನಗೆ ನೀನೆ ಗತಿ ಕೃಷ್ಣ ಪ.

ನೀನೆ ಗತಿಯೆಂದಾನತನಾಗಿ
ಮಾನಾಪಮಾನವ ನಿನಗೊಪ್ಪಿಸಿದೆ
ಜ್ಞಾನವಿಹೀನನ ಪಾವನ ಮಾಡಿ
ಶ್ರೀನರಹರಿ ಕರುಣಿಸು ನಮ್ಮಯ್ಯನೆ ೧

ತನುವಸ್ಥಿರ ಮನವತಿಚರ ಒದಗಿದ
ಧನ ನಶ್ವರ ನಿನ್ನಯ ಪಾದಾಬ್ಜದ
ನೆನವಿಗೆಯೊಂದನೆ ಕೊಡು ಕಡೆ ಮೊದಲಿಗೆ
ಜನನವಸಾನದ ಬಳ್ಳಿಯ ಕಡಿಯಲು ೨

ಶರಣಾಗತ ಶರಣರ ಕರವಿಡಿವ
ಬಿರುದಿನ ದೊರೆಗಿನ್ನನುಮಾನ್ಯಾಕೆ
ಪರಮಪತಿತನ ಪೂತನ ಮಾಡ್ಯು
ದ್ಧರಿಸುವ ಸಿರಿ ಪ್ರಸನ್ನವೆಂಕಟಕೃಷ್ಣ ೩

೨೪೭

ನೀನೆ ಗತಿಯೆಂದು ನಂಬಿದೆ ಕಾಯಯ್ಯ ಶ್ರೀನಿವಾಸ ಎನ್ನ
ಹೀನಗುಣಗಳೆಣಿಸಲಿ ಬ್ಯಾಡ ದಯಮಾಡೊ ಶ್ರೀನಿವಾಸ ೧

ನಾನಾ ದುಷ್ಕೃತಫಲವ ಉಂಡೆ ಇನ್ನಾರೆ ಶ್ರೀನಿವಾಸ
ಎಂದೂ ದುರ್ವಿಷಯಕೆ
ಮನ ಎರಗದಂತೆ ಮಾಡೊ ಶ್ರೀನಿವಾಸ ೨

ಸತ್ಕಥಾ ಶ್ರವಣ ಭಾಗ್ಯವ ಕೊಡು ಅನುದಿನ ಶ್ರೀನಿವಾಸ ಎನ್ನ
ಹೃತ್ಕಮಲದಿ ವ್ಯಕ್ತನಾಗಯ್ಯ ಶ್ರೀನಿವಾಸ ೩

ಪುತ್ರ ಕಳತ್ರ ಮಿತ್ರರು ನಿನ್ನ ದಾಸರೊ ಶ್ರೀನಿವಾಸ ತ್ವದ್ಭೃತ್ಯ
ಭೃತ್ಯರ ಪರಿಚಾರಕ ನಾನು ಶ್ರೀನಿವಾಸ ೪

ಅನಂತ ಜನ್ಮದ ಸತ್ಕರ್ಮ ನಿನಗೇವೆ ಶ್ರೀನಿವಾಸ ನಿತ್ಯ
ದೀನೋದ್ಧಾರ ಪ್ರಸನ್ನವೆಂಕಟ ಮುಕುಂದ ಶ್ರೀನಿವಾಸ ೫

೨೪೮

ನೀನೋಡುವುದುಚಿತಲ್ಲೊ ಕೃಷ್ಣಯ್ಯ
ನಾನಾ ದುಃಖವನುಂಡು ದಣಿದೆ ನಮ್ಮಯ್ಯ ಪ.

ಮಜ್ಜ ಮಾಂಸ ರುಧಿರ ಮಲಮೂತ್ರ
ಮಜ್ಜನ ಮಾಡುತ ಬಸಿರೊಳಗೆ
ಜರ್ಜರಿತನಾದೆ ಲೆಕ್ಕವಿಲ್ಲದಕೆ ಪಾ
ದಾಬ್ಜವನೆಂದು ತೋರಿಸುವಿಯೊ ರಂಗ ೧

ಎರವು ತಂದಿರುವ ಸಂಸಾರದ ಸುಖದೊಳು
ಉರಿ ಮೂರು ಬೆರಸಾಡಿ ದಹಿಸುತಿದೆ
ತರಳ ಯೌವನ ಮುಪ್ಪಿಲ್ಯಾರೊಮ್ಮೆ ಚಿತ್ತವು
ಸ್ಥಿರವಾಗದಿನ್ನೇನು ಗತಿ ಚಿಂತಿಸೈದೆ ೨

ಯಮಭಂಟರುಪಟಳ ನಿನ್ನವರಾದರೆ
ಕ್ರಮವಲ್ಲ ಆನತ ಜನರ ದಾತಾರ
ಭ್ರಮಿಸಲಾರೆನು ಕರುಣಿಸು ಕರುಣಾಂಬುಧಿ
ರಮೆಯ ರಮಣ ಪ್ರಸನ್ವೆಂಕಟ ಧೀರ ೩

೨೪೯

ನೀ ಸಾಕದಿದ್ದರೆ ಸಾಕುವರಾರೊ
ದಾಸಾಭಿಮಾನಿ ನೀನಲ್ಲದಾರೊ ಕೃಷ್ಣಾ ಪ.

ನಿನ್ನವರನು ಬಾಧಿಸ ಬಂದ ಮೂರ್ಖರು
ಮುನ್ನೆ ದುರ್ಭಾಗ್ಯರಾಗಿ ಹೋದರು
ಕುನ್ನಿ ಕಚ್ಚಿದರಾನೆ ಅಳುಕುವುದೆ ರಂಗ
ಎನ್ನ ನಂಬಿಕೆಯ ಮೂರುತಿ ಶ್ರೀನಿವಾಸ ೧

ಹಸಿದು ಮಳಲ ಮೆದ್ದವನಂತೆ ಕಂಗೆಟ್ಟು
ತೃಷೆಯಾಗಿ ಬಿಸಿಲ್ದೊರೆಗೋಡುವನಂತೆ
ವಿಷಮ ಮಾನಿಸರನುಸರಿಸುವುದುಚಿತಲ್ಲ
ಬಿಸಜದೇವಿಯರಸ ಸುದಾಮಘ ಭಂಗ ೨

ಬಂಟರ ಮಾತ ಕೇಳದೆ ಭಾರ ತಾಳದೇ
ನುಂಟು ಕಾರ್ಯವು ನಿನಗೆಲೆ ದಯಾಳು
ಕಂಟಕ ಜನಕಪಕಾರಿ ದೀನೇಶ ವೈ
ಕುಂಠವಲ್ಲಭ ಪ್ರಸನ್ವೆಂಕಟ ಬಂಧು ೩

೨೫೦

ನೋಡಬಾರದೆ ಕೃಷ್ಣಾ ಕರುಣದಿ
ನೋಡಬಾರದೆ ಕೃಷ್ಣ
ಹಾಡಿ ಹರಸಿ ನಿನ್ನನೆ ಹೊಗಳುವ ಪರಿ
ಮಾಡಬಾರದೆ ಹರಿಯೆ ಪ.

ಹಾನಿ ಹಿತಗಳನರಿಯೆ ಸು
ಜ್ಞಾನ ಭಕುತಿಗಳರಿಯೆ
ದೀನ ದೇಶಿಗನುದ್ಧರಿಸೆಲೆ ದೇವ
ಸಾನುರಾಗದಿ ದೇವ ೧

ಏಸು ಜನ್ಮದಿ ಬಂದೆ ನಾ
ಘಾಸಿಯಾದೆನೊ ತಂದೆ
ದಾಸರೊಳು ಆವಕಾಲಭಿ
ಲಾಷೆಯುಳ್ಳ ಶ್ರೀಲೋಲ ೨

ಏನು ಹೇಳಲಿ ಮನವು ನಿನ್ನ
ಧ್ಯಾನಕೊದಗದು ಕ್ಷಣವು
ತಾನೆ ಹರಿದಡೆ ಕೇಡು ಅದರಿಂದ
ಪ್ರಾಣನಾಥ ಮುಕುಂದ ೩

ಕುಂಬಳವು ಕೈಗತ್ತಿ ಕ
ರಾಂಬುಜಕೆ ನಿನಗಿತ್ತೆ
ನಂಬಿದವಗಿನ್ನೇನಾರೆ ಮಾಡಯ್ಯ
ಅಂಬುಜಜ ಸ್ಮರರಯ್ಯ ೪

ಕಿಂಕರೌಘದೊಳಿಡೊ ನಿ
ಶ್ಶಂಕನೆ ದಯಮಾಡೊ
ಪಂಕಜಾಕ್ಷ ಮುರಾರಿ ಪ್ರಸನ್ನ
ವೆಂಕಟಾದ್ರಿ ಪಾವನ್ನ ೫

೨೫೧

ನೋಡು ನೋಡು ದಯಮಾಡು ಮಾಡಿನ್ನ ಪ.

ನೋಡು ವೈರಾಗ್ಯಭಾಗ್ಯವಿಹೀನನ
ಕಾಡುತಿದೆ ಮನ ಕರುಣಾಸಂಪನ್ನ ಅ.ಪ.

ಸ್ನಾನ ಸಂಧ್ಯಾವಂದನೆ ಸಚೇಲದಿ
ಧ್ಯಾನ ಮೌನವ ಹಿಡಿಸಿ
ಜ್ಞಾನ ಭಕ್ತಿ ವಿರಕ್ತಿ ಮಾತಿನ
ನಾಣ್ನುಡಿಯಂತೆ ನುಡಿಸಿ
ದಾನ ಧರ್ಮ ಕೈವಲ್ಯದಾರ್ಯೆಂದು ನಿ
ದಾನ ತುಷ್ಟಿಯ ಬಡಿಸಿ
ತಾನರೆಕ್ಷಣ ಸ್ವಸ್ಥವಿರದೆಲ್ಲ
ಹಾನಿ ಮಾಡಿತೆನ್ನ ಚಿತ್ತವ ಕೆಡಿಸಿ ೧

ಸಾಲಂಕೃತ ಬಾಲನೊಯ್ದಡವಿಯಲಿ ಕೊಲ್ವ
ಆಲಯದ ಕಳ್ಳನಂತೆ
ಬಾಲೆಯನ್ನಾಳದೆ ಷಂಡ ಘನ ಕೂಪ
ದೊಳು ನೂಕಿಸುವಂತೆ
ಪೇಳಲೇನು ದುರ್ಬಲರನು ಅರಸ ತಾ
ಶೂಲಕಿಕ್ಕಿಸುವಂತೆ
ಮೇಲೆ ಮೇಲೆ ದುರ್ವಿಷಯಾಟವಿಯೊಳು
ಕಾಲ ಕಟ್ಟೆನ್ನ ಕೆಡಹುತಿದೆ ೨

ಕನ್ನಿಕೆಗೆ ವರನೊಪ್ಪಿದರೆ ತೆತ್ತಿ
ಗನ್ನ ಪ್ರತಿಕೂಲವೇನು
ಪುಣ್ಯಶ್ಲೋಕನ ಅಭಯವಿರಲು ಸುಖಿ
ಗನ್ಯ ತೊಡರ್ಯಾಕಿನ್ನ
ಮನ್ನೆಯನ ಪಾದವಿಡಿದಿಹ ಮಡದಿಗೆ
ಅನ್ಯರಾತಂಕವೇನು ಪ್ರ
ಸನ್ನವೆಂಕಟಸ್ವಾಮಿ ನೀ ಒಲಿದರೆ
ಕುನ್ನಿ ಮನ ಕಾಡಿ ಮಾಡುವದೇನು ೩

೨೫೨

ನೋಡೆನ್ನೊಳು ಮೂಡಣಾದ್ರಿ ಪ್ರೌಢ ಕೃಷ್ಣ ಕೃಪೆ
ಮಾಡು ಚಿತ್ತ ಕಾಡಿತಭಯ ನೀಡು ಕೃಷ್ಣ ಪ.

ಬಾಯೆಂಬರಿಲ್ಲೊ ಎಂಬರಿಲ್ಲ ಕಾಯೊ ಕೃಷ್ಣ ಫುಲ್ಲ
ಸಾಯಕನ ಗಾಯ ತಪ್ಪಿಸಯ್ಯ ಕೃಷ್ಣ ೧

ಭೂರಿ ಜನ್ಮದ ಧಾರೆಯಳಿಯೊ ಶೌರಿ ಕೃಷ್ಣ ಭವ
ವಾರಿಧಿಯ ತಾರಿಸೊ ಉದಾರಿ ಕೃಷ್ಣ ೨

ದುಷ್ಟಸಂಗ ನಷ್ಟವಾಗಲಿಷ್ಟು ಕೃಷ್ಣಾಮಿತ
ತುಷ್ಟಿ ನನ್ನ ಕಷ್ಟ ಬಡಿದಟ್ಟು ಕೃಷ್ಣ ೩

ಎಂದು ನಿನ್ನ ಹೊಂದುವೆನೊ ತಂದೆ ಕೃಷ್ಣ ಭದ್ರ
ಮಂದಿರನೆ ಇಂದಿರೇಶ ನಂದ ಕೃಷ್ಣ ೪

ದಾಸ ದಾಸ ದಾಸನಾ ನಿರ್ದೋಷಿ ಕೃಷ್ಣ ನೀನೆ
ಪೋಷಿಸಯ್ಯ ಪ್ರಸನ್ವೆಂಕಟೇಶ ಕೃಷ್ಣ ೫

೨೫೩

ನೋಡೊ ನೋಡೊ ರಂಗ ತನ್ನ
ಖೋಡಿತನ ಬಿಡದೋಡು ಚಿತ್ತವು ಪ.

ಎಳೆ ಎಳೆದು ನಾನೆ ಬಳಲಿದೆ ತಾ ತನ್ನ
ತಿಳಿದ ಕಡೆಯಲಿ ಸುಳಿದಾಡಿತು
ಒಲಿದು ಭಕುತಿಯ ಬಲಿದಿರೆಂದರೆ
ಛಲದಿ ಶುಭಮಾರ್ಗ ಕೊಳದು ದಾತಾರ ೧

ಕ್ಷಣದೊಳಾರೆ ನಾರಾಯಣ ದಾಮೋದರ
ಮುನಿಧ್ಯೇಯನೆ ನಿನ್ನ ನೆನೆದಾಡದೆ

ಹಣಿದಾಡೆನ್ನೊಳು ಒಣ ಧ್ಯಾನಿಸುತಿದೆ
ಜನದೂಷಣದೊಳು ದಣಿದಾಡುತಿದೆ ೨

ಇನ್ನಾವಗೆ ಪೇಳಲೆನ್ನ ಒಡಲ ಮಾತ
ಎನ್ನ ಒಡೆಯ ಪಾವನ್ನಕಾಯ ಪ್ರ
ಸನ್ನ ವೆಂಕಟರನ್ನ ಒಲಿಯೊ ನೀ
ಅನ್ಯ ವಿಷಯಕೆ ದೈನ್ಯವಾಗಿದೆ ೩

೨೫೪

ಪಾಲಿಸೊ ಮಾಧವ ಈ ತೆರದಲಿ ಪ.

ನಿನ್ನನೆ ಹಾಡಿಸಿ ನಿನ್ನವರ ಕೂಡಿಸಿ
ನಿನ್ನ ಸಾಹಸ ಕೀರ್ತಿಯನ್ನೆ ಕೇಳಿಸುವಂತೆ ೧

ನೀಚರಾಧೀನ ಮಾಡಿ ನಾಚಿಸಬೇಡ ಸ
ದಾಚಾರವೃತ್ತಿಯ ಆಚರಿಪಂತೆನ್ನ ೨

ನೀ ಮರೆಸದಿರು ಶ್ರೀನಾಮವ ಜಿಹ್ವೆಗೆ
ಸ್ವಾಮಿ ಪ್ರಸನ್ವೆಂಕಟ ಮನೋಹರ ಕೃಷ್ಣ ೩

೨೫೫

ಪಾಲಿಸೊ ವನಮಾಲಿ ಮುಂದೆನ್ನ
ಬಾಲಕನಲೆಯಲೆಸದವನ ಪ.

ಹದ್ದನೇರ್ವನಿರುದ್ಧ ನಿನ್ನಲ್ಲಿ
ಬುದ್ಧಿ ನಿಲ್ಲದು ಶುದ್ಧ ವೃತ್ತಿಲಿ
ಮುದ್ದುಮಕ್ಕಳು ಮುಗ್ಧರಲ್ಲೆ ಅಯ್ಯ
ತದ್ಧ್ಯಾನಾಲಾಪ ಬಿದ್ದದ್ದಲ್ಲಯ್ಯ ೧

ತುಲಸಿ ಪುಷ್ಪಾಂಜಲಿ ತರಲಿಲ್ಲ
ಹೊಳೆವಂಘ್ರಿಗರ್ಪಿಸಲು ಹೊತ್ತಿಲ್ಲ
ಬಲು ಧನ ಬಹ ಕೆಲಸ ಕೈಕೊಂಡೆ
ಕಲಿಕೂಡ ನಿರಯದ ಭೋಗುಂಡೆ ೨

ಆಡುವ ಮಾತು ಮಾಡಲರಿತರಿಯೆ
ಬೇಡುವರಿಗುಣ ನೀಡಲಿಕ್ಕರಿಯೆ
ಖೋಡಿಗೇನುಂಟು ಸುಖ ಹೇಳು ತಂದೆ
ಹಾಡುವೆ ನಿನ್ನ ಕಾಡುವೆನಿಂದೆ ೩

ಹೆತ್ತ ತಾಯಿ ಕುತ್ತಿಗೊತ್ತಿದರಾರೊ
ಮತ್ತೆ ತಂದೆ ಮಾರಲಿತ್ತರಿನ್ನಾರೊ
ಪೃಥ್ವಿಪ ಸುಲಿದರೊತ್ತರೆಂಬುವರು
ಕರ್ತ ನೀನಿದ್ದೆನ್ನೆತ್ತುವರಾರು ೪

ಕರುಣವಾರಿಧಿ ಕರುಣಿಸು ಗಡ
ಪರಮಭಾಗವತರಿರುವಲ್ಲೆನ್ನಿಡು
ಪರಸನ್ನ ವೆಂಕಟರಸ ನೀ ಬಾರೊ
ಮರಣ ಹೊಂದದ ಅರಮನೆಗೊಯ್ಯೊ ೫

೨೫೬

ಪ್ರಹ್ಲಾದ ವರದ ಭಯಗಜಕೆ ಸಿಂಹ ಪರಮ
ಆಹ್ಲಾದಪದವಿತ್ತು ಪೊರೆಯೊ ನರಸಿಂಹ ಪ.

ಹಿಂದೆ ಹಿರಣ್ಯಕನುದರದಲಿ ಜನಿಸಿ ಪ್ರಹ್ಲಾದ
ನೊಂದವನ ಬಾಧೆಯಲಿ ಮರಳಿ ಮರಳಿ
ಇಂದಿರೇಶ ಸಲಹೆನಲು ಗಡಾ ಸ್ತಂಭದಲೊದಗಿ
ಬಂದವನುರವ ಬಗಿದು ರುಧಿರವನು ಸವಿದೆ ೧

ಅಸುರ ಕೆಡೆದದ ಕಂಡು ಅತಿ ಹರುಷದಿಂದ ತ್ರಿ
ದಶರಂಬರದಿ ಪೂಮಳೆಗರೆಯಲು
ಶಿಶುವೇಕ ಮಾನಸದಿ ಮರೆಹೊಕ್ಕು ಪೊಗಳುತಿರೆ
ಬಿಸಜಾಕ್ಷ ಕರುಣದಿಂದವನ ಸಲಹಿದೆಯಾಗಿ ೨

ಹಲವು ಯೋನಿಗಳಲ್ಲಿ ತಿರುಗಿ ಬಳಲಿದೆನಯ್ಯ
ನಳಿನಾಕ್ಷ ನಿಮ್ಮ ಗುರುತವ ಕಾಣದೆ
ಇಳೆಯಲ್ಲಿ ದ್ವಿಜನಾಗಿ ಪುಟ್ಟಿ ತವ ಪದವಿಡಿದೆ
ಗೆಲಿಸು ಭವದುರಿತವ ಪ್ರಸನ್ವೆಂಕಟ ನೃಸಿಂಹ ೩

೨೫೭

ಬಂಟನಿಂದ ವ್ಯಾಳೆ ವ್ಯಾಳೆಗೆ ಊಳಿಗವ ಕೊಂಡು
ಉಂಟು ಮಾಡು ನಿನ್ನ ದಯವ
ನಂಟನಾಗಿ ನೀಯೆನ್ನ ಅವಸರಕೆ ಒದಗು ವೈ
ಕುಂಠಪತಿ ವೆಂಕಟೇಶ ಶ್ರೀಶ ಪ.

ನೀನಟ್ಟಿದಲ್ಲಿಗೈದುವೆ ಕರೆದರೋಡಿ ಬಹೆ
ನೀನುಂಡುಳಿದುದನುಣುವೆ
ನೀನಾರಧೀನ ಮಾಳ್ಪೆ ಅವರಾಜ್ಞದಲಿ ನಡೆವೆ
ನೀನುಟ್ಟ ಮೈಲಿಗ್ಯುಡುವೆ ತೊಡುವೆ ೧

ಕ್ರೂರಕಂಟಕ ಕುಲವ ನಿನ್ನ ನಾಮಾಸ್ತ್ರದಿ ವಿ
ದಾರಿಸುವೆ ಹುಯ್ಯಲಿಡುವೆ
ಆರಿಗಂಜೆನು ಯಮನ ಚಾರಕರಿಗಂಜೆ ನಾ
ಮಾರುವೆ ತವಾಂಘ್ರಿಗುರವ ಶಿರವ ೨

ಇಂತೆ ಸೇವೆಯ ಕೊಂಡು ಎನ್ನ ತನುಮನದಲ್ಲಿ
ಸಂತತವಸರಕೊದಗಯ್ಯ

ಚಿಂತನೆಯವಸರ ಅಂತ್ಯಯಾತ್ರೆಯವಸರಕೊದಗು
ಕಾಂತ ಪ್ರಸನ್ವೆಂಕಟಗಪ್ಪ ಎನ್ನಪ್ಪ ೩

೨೫೮

ಬಂದಿದೆ ದುರಿತಘಸಂಗ ಶ್ರೀರಂಗ
ಮಂದಮತಿಯೆಂದುಪೇಕ್ಷಿಸದುಳುಹೊ ಪ.

ಒಲ್ಲೆನೆಂದರೆ ಬಿಡದೀ ಮನ ತಿಳಿದತ್ತೆ
ಕ್ಷುಲ್ಲ ವೃತ್ತಿಯ ಸೇರಿ ಬಿಡಲೊಲ್ಲದು
ಕಲ್ಲುಗೊಂಡಿದೆ ಪುಣ್ಯಮಾರ್ಗಕ್ಕೆ ಇದರೊಳು
ಫುಲ್ಲನಾಭನೆ ಆವ ತೆರದಿಂದ ಸಲಹೊ ೧

ಕೆಂಡವ ಕೊಂಡು ಮಂಡೆಯ ಬಾಚುತಿದೆ ಪರ
ಹೆಂಡಿರು ವಿತ್ತದಾಸೆಗೆ ತೊಡಕಿ
ಕಂಡರೆ ಸೊಗಸದು ಭಕುತಿ ವೈರಾಗ್ಯವ
ಪುಂಡರೀಕಾಕ್ಷನೆ ಗತಿ ನೀನೆ ಬಲ್ಲೆ ೨

ಮೆಲ್ಲ ಮೆಲ್ಲನೆ ದುಷ್ಕರ್ಮವ ಸಾಧಿಸಿ
ಬಲ್ಲಿದ ಜವನವರ ಬರಮಾಡಿದೆ
ವಲ್ಲಭ ಪ್ರಸನ್ವೆಂಕಟ ಕೃಷ್ಣ
ನಿಲ್ಲಿಸು ನಿನ್ನ ನಾಮವ ನಾಲಿಗೆಯಲಿ ೩

೨೫೯

ಬಾರೊ ಭಾವಜನಯ್ಯ ಭಾನು ಸಾಸಿರ ಮೈಯ
ದೂರ ಮಾಡದಲೆನ್ನ ದುರಿತವಿದಾರಿ ಪ.

ಕಡೆ ಮೊದಲಿಲ್ಲದ ಕೆಡಕು ಯೋನಿಗೆ ಬಿದ್ದು
ಕಡಲಶಾಯಿ ನೀಯೆಂದು ಒಡಲ್ಹೊಕ್ಕೆನಿಂದು ೧

ಕ್ಷಣಲವ ಮಾಳ್ಪಘಕೆಣಿಕೆ ಇಲ್ಲೆಲೆ ದೇವ
ಘನ ಕೃಪೆಯಲಿ ನನ್ನ ಮನಮನೆಗಾಗಿ ೨

ಮುನ್ನೆ ನಿನ್ನಯ ಮೊರೆಯ ಅನುಕರಿಸಿದವರ
ಮನ್ನಿಸಿ ಪೊರೆದ ಪ್ರಸನ್ನವೆಂಕಟ ದಾತ ೩

೨೬೦

ಬಿಡಲಾರೆ ಬಿಡಲಾರೆ ನಿನ್ನಡಿದಾವರೆಯ ನೀ
ಕೊಡು ಕಂಡ್ಯ ಅಭಯವಿಡಿದೆಮ್ಮಯ ತಂದೆ ಪ.

ಕೂಗುವೆ ಕೂಗುವೆ ಕೃಪಾಸಾಗರನೆಂದ್ಹೇಳಿ ತಾ
ಕೂಗಿದರೊದಗಿ ಕಾಯಿದೆ ನಾಗನ್ನ ಕೇಳಿ ತಂದೆ ೧

ಬಡವ ನಾ ಬಡವನು ಕಾಣೊ ಬಾಡದೊನಮಾಲಿ ಕಡು
ಬಡವ ಸುದಾಮನ ಕೈಯವಿಡಿದ್ಯೆಂದು ಕೇಳಿ ತಂದೆ ೨

ಡೊಂಕು ನಡೆದೆ ಡೊಂಕು ನುಡಿದೆ ಶಂಕಿಲ್ಲದಲೆ ಮೂ
ಡೊಂಕಿಯ ತಿದ್ದಿದ ಬಿರುದಾಂಕನ ಕೇಳಿ ತಂದೆ ೩

ಬಲ್ಲೆನೊ ಬಲ್ಲೆನೊ ನೀನಿದ್ದಲ್ಲಿ ವ್ರಜದಲ್ಲಿ ಗೋ
ಗೊಲ್ಲರು ಪುಲ್ಗಲ್ಲಿಗೆ ಕೈವಲ್ಯವು ಕೇಳಿ ತಂದೆ ೪

ಅವರೇವೆ ನಿನ್ನವರು ನಾನೇನವರ ಶಿಶುವಲ್ಲೆ ತ
ನ್ನವರ ಹೊರೆವ ಪ್ರಸನ್ವೆಂಕಟ ತವರೂರ ಕೇಳಿ ತಂದೆ ೫

೨೬೧

ಬಿಡು ನಾಚಿಕೆಯನು ಉಗ್ಗಡಿಸು ಚಕ್ರಿಯನು
ಹಿಡಿಯೈ ವೈಕುಂಠ ಚಾವಡಿಯವನಡಿಯ ಪ.

ಎಳೆತನ ಯೌವನ ಮುಪ್ಪೆಂದಲಸಿಸಿ ಹೆ
ಬ್ಬುಲಿಯಂಥ ಮೃತ್ಯುಗಂಟಲ ಬಲೆಗೆ
ಸಿಲುಕಿ ಸಿಲುಕಿ ಸಂದುಗಡಿಯದ ಲೇಖವ
ನಳಿಯೆ ರಾಮನ ಪೊಗಳೆಲೆಲೆ ಜೀವವೆ ೧

ಅಹಂಕಾರ ವಾರಿಧಿಯಲ್ಲೀಸಾಡಿ ಬರೆ
ಬಹಿರ ಸದ್ಗುಣದಿ ನಿರಯಕೆ ಸಾಗದೆ
ಅಹರ್ನಿಶಾಂಬುಜನಾಭನೊಲಿವಂತೆ ಭಕುತಿಯ
ಸಹಸ ಸಾಧಿಸು ಡಂಭವ್ಯಾಕೆನ್ನ ಮನವೆ ೨

ಯೋಚನೆಗೊದಗದ ಅನಂತ ಮಹಿಮನೆಂದು
ವಾಚಿಸ್ಯವನ ಕರ್ಮಗುಣ ನಾಮವ
ಲೋಚನ ದಣಿಯೆ ಪ್ರತಿಮೆಯ ನೋಡಿ ಪ್ರಸನ್ವೆಂಕ
ಟಾಚಲಪತಿ ಮುಂದೆ ಕುಣಿದಾಡು ಗಡ ೩

೨೬೨

ಬಿಡೆ ನಿನ್ನ ಚರಣವ ಉಡುಪಿ ಕೃಷ್ಣನೆ ಭವ
ಕಡಲ ದಾಟಿಸು ಕೈಯವಿಡಿದು ಪಾಲಿಸು ತಂದೆ ಪ.

ಧ್ರುವ ಶುಕ ಪ್ರಹ್ಲಾದ ಬಲಿ ಅಜಾಮಿಳನು
ದ್ಧವ ಅಂಬರೀಷ ವಿದುರ ಮುಖ್ಯರು
ತವ ಪಾದವಿಡಿಯಲವರಿಗಿಂಬು ನೀಡ್ದ
ಹವಣವ ಬಲ್ಲೆ ನಾನೇನ ಮಾಡಿದರೇನ ೧

ಪಾಂಚಾಲಿ ಮಾನವ ಕಾಯ್ದೆ ಪೆರರಿಗಂದು
ಅಚ್ಯುತ ನಿನ್ನಂಗುಟವು ಸೋಂಕಲು
ನಿಚ್ಚಳ ಸತಿಯಾದಳೆಂಬ ಸಾಹಸ ಕೇಳಿ
ಮುಚ್ಚು ಮರೆಯ ಮಾಡಿದರೆ ನಿಮ್ಮ ಮರೆಯೆನು ೨

ನಿನ್ನ ಪಾದಾಂಬುಜ ಧ್ಯಾನ ಮರೆಯದಂತೆ
ಎನ್ನ ಮನದ ವಕ್ರಗತಿಯ ತಿರ್ದು
ಮನ್ನಿಸು ತಂದೆ ಪ್ರಸನ್ನವೆಂಕಟ ಕೃಷ್ಣ
ಪೂರ್ಣಪ್ರಜ್ಞಾರ್ಚಿತ ಚರಣಕಮಲನೆ ೩

೨೬೩

ಬಿಡೆನೊ ನಿನ್ನಂಘ್ರಿ ಶ್ರೀನಿವಾಸ ನನ್ನ
ದುಡಿಸಿಕೊಳ್ಳೆಲೊ ಶ್ರೀನಿವಾಸ ನಿ
ನ್ನುಡಿಯ ಜೀತಲ್ಲೊ ಶ್ರೀನಿವಾಸ ನನ್ನ
ನಡೆ ತಪ್ಪು ಕಾಯೊ ಶ್ರೀನಿವಾಸ ಪ.

ಬಡಿಯೊ ಬೆನ್ನಲಿ ಶ್ರೀನಿವಾಸ ನ
ನ್ನೊಡಲ ಹೊಯ್ಯದಿರೊ ಶ್ರೀನಿವಾಸ ನಾ
ಬಡವ ಕಾಣೆಲೊ ಶ್ರೀನಿವಾಸ ನಿ
ನ್ನೊಡಲ ಹೊಕ್ಕೆನೊ ಶ್ರೀನಿವಾಸ ೧

ಪಂಜುವಿಡಿವೆನೊ ಶ್ರೀನಿವಾಸ ನಿ
ನ್ನೆಂಜಲ ಬಳಿದುಂಬೆ ಶ್ರೀನಿವಾಸ ನಾ
ಸಂಜೆ ಉದಯಕೆ ಶ್ರೀನಿವಾಸ ಕಾ
ಳಂಜಿಯ ಪಿಡಿವೆನೊ ಶ್ರೀನಿವಾಸ ೨

ಸತ್ತಿಗೆ ಚಾಮರ ಶ್ರೀನಿವಾಸ ನಾ
ನೆತ್ತಿ ಕುಣಿವೆನೊ ಶ್ರೀನಿವಾಸ ನಿನ್ನ
ರತ್ನುನ ಹಾವಿಗೆ ಶ್ರೀನಿವಾಸ ನಾ
ಹೊತ್ತು ನಲಿವೆನೊ ಶ್ರೀನಿವಾಸ ೩

ಹೇಳಿದಂತಾಲಿಹೆ ಶ್ರೀನಿವಾಸ ನಿ
ನ್ನಾಳಿಗಾಳಾಗಿಹೆ ಶ್ರೀನಿವಾಸ ಅವ

ರೂಳಿಗವ ಮಾಳ್ಪೆ ಶ್ರೀನಿವಾಸ ನನ್ನ
ಪಾಲಿಸೊ ಬಿಡದೆ ಶ್ರೀನಿವಾಸ ೪

ನಿನ್ನ ನಾಮ ಹೋಳಿಗೆ ಶ್ರೀನಿವಾಸ ಕಳ್ಳ
ಕುನ್ನಿ ನಾನಾಗಿಹೆ ಶ್ರೀನಿವಾಸ ಕಟ್ಟಿ
ನಿನ್ನವರೊದ್ದರೆ ಶ್ರೀನಿವಾಸ ನನ
ಗಿನ್ನು ಲಜ್ಜ್ಯಾತಕೆ ಶ್ರೀನಿವಾಸ ೫

ಬೀಸಿ ಕೊಲ್ಲಲವರೆ ಶ್ರೀನಿವಾಸ ಮುದ್ರೆ
ಕಾಸಿ ಚುಚ್ಚಲವರೆ ಶ್ರೀನಿವಾಸ ಮಿಕ್ಕ
ಘಾಸಿಗಂಜೆನಯ್ಯ ಶ್ರೀನಿವಾಸ ಎಂಜ
ಲಾಸೆಯ ಬಂಟ ನಾ ಶ್ರೀನಿವಾಸ ೬

ಹೇಸಿ ನಾನಾದರೆ ಶ್ರೀನಿವಾಸ ಹರಿ
ದಾಸರೊಳು ಪೊಕ್ಕೆ ಶ್ರೀನಿವಾಸ ಅವರ
ಭಾಸೆಯ ಕೇಳಿಹೆ ಶ್ರೀನಿವಾಸ ಆ
ವಾಶೆಯ ಸೈರಿಸೊ ಶ್ರೀನಿವಾಸ ೭

ತಿಂಗಳವನಲ್ಲ ಶ್ರೀನಿವಾಸ ವತ್ಸ
ರಂಗಳವನಲ್ಲೊ ಶ್ರೀನಿವಾಸ ರಾ
ಜಂಗಳ ಸವಡಿಪೆ ಶ್ರೀನಿವಾಸ ಭ
ವಂಗಳ ದಾಟುವೆ ಶ್ರೀನಿವಾಸ ೮

ನಿನ್ನವ ನಿನ್ನವ ಶ್ರೀನಿವಾಸ ನಾ
ನನ್ಯವನರಿಯೆನೊ ಶ್ರೀನಿವಾಸ ಅಯ್ಯಾ
ಮನ್ನಿಸೊ ತಾಯ್ತಂದೆ ಶ್ರೀನಿವಾಸ ಪ್ರ
ಸನ್ನ ವೆಂಕಟಾದ್ರಿ ಶ್ರೀನಿವಾಸ ೯

೨೬೪

ಬೆದರದಿರೆಲೆ ಆತ್ಮ
ಮಧುಸೂದನನ ಕೃಪೆ ಹೊಂದು ದುಷ್ಕೃತಕೆ
ಬೆದರದಿರೆಲೆ ಆತ್ಮ ಪ.

ಹರಿಮುಖ್ಯಪ್ರಾಣರ ಸ್ಮರಣೆಯೊಂದಿರಲಿ
ದುರಿತ ನೊರಜುವಿಂಡು ಉರಿಯ ನುಂಗುವವೆ ೧

ಪರವನಿತೆಗೆ ಚಿತ್ತ ಬೆರೆಯದಲಿರಲಿ
ಮರುಳು ಕೀನಾಶಭಟರ ಊಳಿಗಕ್ಕೆ ೨

ಭೂತದಯ ವಿನಯ ಮಾತುಗಳಿರಲಿ
ಪಾತಕ ದಾರಿದ್ರ್ಯವ್ರಾತ ಬೊಬ್ಬುಳಿಗೆ ೩

ದ್ವಿಜರಾಜಗಮನನ ದ್ವಿಜಭಜನಿರಲಿ
ಸುಜನಪವಾದ ಶೀಲ ರಚಕ ಸಮೂಹಕೆ ೪

ವಿಬುಧರು ಬರೆದಿತ್ತ ಅಭಯಪತ್ರಿರಲಿ
ಶುಭಪಥ ತಡೆವ ಅಬುಧಸುಂಕಿಗರ್ಗೆ ೫

ಸುವೈರಾಗ್ಯಮನೆ ದೃಢ ಕವಟ ಬಲ್ಕಿರಲಿ
ಭವಾಂಬುಧಿ ಗೋಷ್ಪಾದವಹುದು ತಿಳಿಯದೆ ೬

ಪ್ರಸನ್ವೆಂಕಟೇಶನ್ನ ದಾಸರೆ ರಂಭೆಯರು
ಹೇಸಿ ನೃಪಾಂಗನೇರು ಎಳೆಸಲಿ ಕಂಗೆಟ್ಟು ೭

೨೬೫

ಮಂಗಳಾನನ ರಂಗ ಕರುಣಾ
ಪಾಂಗವೆಂಬ ಪತಂಗದಿಂದಘ
ತುಂಗ ತಿಮಿರವಿಭಂಗ ಭಕ್ತರ ಇಂಗಿತವನೀವುದು ಪ.

ಮಾರನ ಮನೋಹರ ಮದ ಅಂಧ
ಕಾರ ಕವಿಯಲು ಕ್ರೂರವಿಷಯವಿ
ಕಾರ ಭವವೆಂಬಪಾರಾಂಬುಧಿಯೊಳು ದಾರಿದೊಡಕಿದೆ ನಾ
ಆರೆ ನಾರದ ತಾತ ಕರುಣಾಳು
ತೋರಿ ನಿನ್ನಯ ಚಾರು ಮೂರುತಿಯ
ಘೋರ ಕಲುಷವಿದೂರ ಮಾಡು ಮಂದರಧರ ಮುಕುಂದ ೧

ಪ್ರಿಯ ಮನಮುನಿಗೇಹ ಮಲೆತ ಇಂ
ದ್ರಿಯಗಳಿಗೆ ಸಹಾಯವಾಗಿದೆ
ಹೇಯವಿಲ್ಲದ ನಾಯಿಮನವೆನ್ನ ನೋಯನೋಯಿಸುತಿದೆ
ಕಾಯಬೇಕೆಲೆ ಜೀಯ ಕರಿಮಕ
ರಿಯ ಬಾಧೆಗೆ ಬಾಯಿ ತೆರೆಯೆ ಪೊ
ರೆಯಬೇಕೆಂದು ಕೆಲದೆ ಎಸೆದಿರಲು ತಾಯಿಪಿತನಾರೆಂದು ೨

ಮನ್ಮಥಪಿತ ಚಿನ್ಮಯಾತ್ಮಕ
ಮುನ್ನ ಸಂಚಿತ ಘನ್ನಕರ್ಮವು
ಬೆನ್ನ ಬಿಡದು ದುರ್ಜನ್ನ ಸಂಗದಿ ಖಿನ್ನನಾದೆ ನಾ
ಉನ್ನತ ಗುಣಪೂರ್ಣ ಎಂದೆಂದು
ನಿನ್ನ ದಾಸರನ್ನು ಕೂಡಿಸು
ಪನ್ನಗಾದ್ರಿ ಪ್ರಸನ್ನವೆಂಕಟರನ್ನ ಜಗಜೀವನ್ನ ೩

೨೬೭

ಮತ್ತವನಲ್ಲೊ ಮುರಾರಿ ನಿನಗೆ ನಾ
ಮತ್ತವನಲ್ಲೊ ಮುರಾರಿ ನಿನ್ನ
ಭೃತ್ಯರ ಭೃತ್ಯರ ಭೃತ್ಯರ ಭೃತ್ಯನಿ
ಗೆತ್ತಣ ಸ್ವಾತಂತ್ರ್ಯ ಸಲಹಯ್ಯ ಶೌರಿ ಪ.

ರಂಗಾ ನೀ ಕೊಳ್ಳದ ಬಂಗಾರ ತಳಿಗ್ಯೂಟ
ನುಂಗುವ ಮತ್ತವನಲ್ಲೊ

ರಂಗಾ ನಿನ್ನ ಮರೆದಂಗನೆಯರನಾ
ಲಂಗಿಸಿ ಮತ್ತವನಲ್ಲೊ
ರಂಗಾ ನಿನ್ನೊಲುಮೆಯ ಡಿಂಗರರಂಘ್ರಿಗೆ
ರಂಗದೆ ಮತ್ತವನಲ್ಲೊ
ರಂಗಾ ನಿನ್ನೆಂಜಲೆನ್ನಂಗೈಯೊಳುಂಡು ರಾ
ಜಂಗಳನುಡುಗುವ ಬಡವ ನಾನಲ್ಲದೆ ೧

ನಾಥನೆ ನಾನೆಂದು ಮಾತು ಕಲಿತು ಖಳ
ವ್ರಾತ ಸಂಗದಿ ಮತ್ತವನಲ್ಲೊ
ನಾಥ ನಿನ್ನ ಮೀರಿದಾತನುಂಟೆಂದು ನಿ
ರ್ಭೀತಿಲಿ ಮತ್ತವನಲ್ಲೊ
ನಾಥ ನಿನ್ನ ಗುಣಖ್ಯಾತಿ ಹೊಗಳದನ್ಯ
ಸ್ತೋತ್ರದಿ ಮತ್ತವನಲ್ಲೊ
ನಾಥ ನಿನ್ನಡಿಯ ತೀರಥವೆ ಗತಿಯೆಂದು
ಯಾತನೆಗಂಜುವ ಬೆದರುಗುಳಿಯಲ್ಲದೆ ೨

ತಂದೆ ನೀ ಮಾರಿದರೊಂದೊಪ್ಪು ಕೊಂದರೊ
ಪ್ಪೆಂದಿಗೆ ಮತ್ತವನಲ್ಲೊ
ತಂದೆ ನಿನ್ನ ಮನೆ ಹೊಂದಿದಟ್ಟಣೆಗೈದಿ
ಬಂಧಿಸು ಮತ್ತವನಲ್ಲೊ
ತಂದೆ ನಿನ್ನಾಯುಧ ಸಂದು ಸಂದಿಗೆ ಕಾಸಿ
ತಂದಿಡು ಮತ್ತವನಲ್ಲೊ
ತಂದೆ ಪ್ರಸನ್ನವೆಂಕಟಿಂದಿರೇಶನೊಬ್ಬ ಅಪ
ದೆಂದ ಸೊಕ್ಕೊಂದುಳ್ಳವನಲ್ಲದೆ ೩

೨೬೭

ಮನವೆ ಮಾಧವನ ಮರೆಯದಿರೆಂದೆ ದಣುವಾಯಿತು ಹಿಂದೆ
ಕ್ಷಣವೊಂದು ಬಿಡದಿರು ಕೃಷ್ಣನ ಮುಂದೆ ಪ.

ಘನ ವಿಷಯಂಗಳ ನೆನವಿಲಿ ಪುನ: ಪುನ:
ತನುವ ವಹಿಸಿ ಭವ ವನವನ ಚರಿಸದೆ ಅ.ಪ.

ಹರಿವಾರ್ತೆಯನು ಕೇಳು ಕೇಳಿದ್ದೆ ಕೇಳು ಅರಿಅರುವರನಾಳು
ಅರಿವಿಂದ ಗರುವದ ಮೂಲವ ಕೀಳು
ಹೆರವರ ಹರಟೆಗೆ ಪರವಶನಾಗದೆ
ಕರಿವರವರದನ ವರವನೆ ಬಯಸು ೧

ಹರಿಗುರುವಿಗೆರಗು ಅರಿತರಿತೆರಗು ತಪವೆರಡಲಿ ಸೊರಗು
ಸೊರಗಿದವರ ಕಂಡು ಕರಗು ಮರುಗು
ತಿರುಗ್ಯೊಡಲುರಿಗೆ ಮುಳ್ಳೊರೆಗೆ ಸ್ಮರಾಸ್ತ್ರಕೆ
ಗುರಿಯಾಗದೆ ಹರಿಸೆರಗ ಬಿಡದಿರು ೨

ಹರಿವಿಗ್ರಹ ನೋಡು ನೋಡಿದ್ದೆ ನೋಡು ಮಮಕಾರವೀಡಾಡು
ಸ್ಥಿರವೊಂದನೆ ಬೇಡಸ್ಥಿರವ ಬಿಸಾಡು
ಸಿರಿವಂತರ ಸಿರಿ ಪರವಧುಗಳ ಸಿಂ
ಗರವೆಣಿಸದೆ ಸಿರಿವರನ್ನೆ ನೋಡು ೩

ಹರಿಪ್ರಸಾದವನುಣ್ಣು ನೆನೆನೆನೆದುಣ್ಣು ಶ್ರೀಹರಿ ಪ್ರೀತ್ಯೆನ್ನು
ಹರಿಪ್ರೇರಕ ನೇಮಕ ಸಾಕ್ಷಿಕನೆನ್ನು
ಹರಿಪ್ರಿಯವಲ್ಲದನರುಪಿತ ಪರಿಪರಿ
ಚರುಪವ ಚರಿಸದೆ ಹರಿಯ ಚರಿಸು ೪

ಹರಿಯಂಘ್ರಿ ಪರಾಗವ ಗ್ರಹಿಸಾಘ್ರಾಣಿಸು ಹರಿಯವರಿಗೆ ಉಣಿಸು
ಹರಿಭಕ್ತಿ ಜ್ಞಾನ ವೈರಾಗ್ಯವ ಗಳಿಸು
ಹರಿಪ್ರಿಯ ಪ್ರಭು ಮಧ್ವಾಚಾರ್ಯರ ಪ್ರಿಯ ಮೇ
ಲ್ಗಿರಿ ಪ್ರಸನ್ವೆಂಕಟ ದೊರೆಯನೆ ನಂಬು ೫

೨೬೮

ಮರೆಯದಿರು ಮನವೆ ಮಾಧವನ ನಮ್ಮ
ದುರಿತ ದಾರಿದ್ರ್ಯವನು ಹರಿಸಿ ಹೊರೆವವನ ಪ.

ಆಳರಿತು ಊಳಿಗವ ಕೊಂಡುಂಡು ದಣಿವಂತೆ
ಮೇಲಾಗಿ ಜೀವವನು ಕೊಡುವ ದೇವನ
ಕಾಲ ಕಾಲಕೆ ಮಾಳ್ಪ ನಡೆತಪ್ಪು ನುಡಿತಪ್ಪು
ಆಲೋಚಿಸದೆ ಕರುಣಿಸುವ ಕರುಣನ ೧

ಮೂಢನಾಗಲಿ ಮತಿಯುಳ್ಳ ನರನಾಗಲಿ
ಪಾಡಿದಾಕ್ಷಣ ಭೃತ್ಯನೆಂದು ಒಲಿದು
ಕೂಡಿಕೊಂಬುವ ದೊರೆಗಳಿಲ್ಲ ಹರಿಯಲ್ಲದಾ
ನಾಡಾಡಿ ಬಣಗು ಕಲ್ಲುಗಳ ಬೇಡಿ ೨

ಮುನ್ನಾರು ಅನ್ಯದೇವರ ಭಜಿಸಿ ಭವಗೆದ್ದ
ರಿನ್ನಾರು ಹರಿಯೊಲುಮೆಯಲಿ ದಣಿದರು
ನಿನ್ನ ಗುರುಗಳಿಂದರಿತು ನೆರೆನಂಬು ಪ್ರ
ಸನ್ನ ವೆಂಕಟಪತಿಯ ಪಾದವನಜವ ೩

೨೬೯

ಮುಂಚೆ ಕೈವಿಡಿದಂತೆ ಮಿಂಚೆನ್ನ ಎದೆಗುಡಿಲಿ
ಪಂಚಬಾಣನ ಜನಕನೆ ಪ.

ಸಂಚಿತಾರಬ್ಧಾಗಾಮಿ ಸಂಚಂಚಲಿಪ ಮನದ ಪ್ರ
ಪಂಚವನು ಬಿಡಿಸು ತಂದೆ ನೊಂದೆ ಅ.ಪ.

ಭವ ಬವಣೆಗಳನು ಅನುಭವಿಸಿದನ ಸತ್ಕುಲೋ
ದ್ಭವನ ಮಾಡಿದ ಕೃಪೆಗೆ ನವಭಕುತಿ ಕಲಿಸು ಎ
ನ್ನವಗುಣವ ಬಿಡಿಸು ದಾನವವೈರಿ ನರ ಮುರಾರಿ ಶೌರಿ ೧

ಲೇಸು ಹೊಲ್ಲೆಯನರಿಯೆ ಲೇಶ ನಿಷ್ಠೆಯನರಿಯೆ ನಾ
ಲೇಶದೊಳು ನಿನ್ನ ಮರೆದೆ ದಾಸಾಭಿಮಾನಿಯೆ ಸ
ದಾ ಸರ್ವಕಾಲದಿ ಉದಾಸೀನವ ಮಾಡಬೇಡ್ವೈ ನೋಡ್ವೈ ೨

ಸ್ಮೃತಿಯೊಳಗೆ ಕೂಡಿ ವಿಸ್ಮೃತಿಯ ಕೂಡೋಡಾಡಿ
ಸ್ಮೃತಿ ದಾರಿ ಕೊಳದು ಮನವು ಸ್ಮೃತಿವಂದ್ಯ ಪ್ರಸನ್ವೆಂಕಟ
ಸ್ಮಿತವದನ ದಾತ ಅಸ್ಮತ್ ಪಾಪ ಪಂಕಶೋಷ ನಿರ್ದೋಷ ೩

೨೭೦

ರಂಗ ನೀ ಎನ್ನೊಡೆಯನಾಗಿ ಅ
ಮಂಗಳಾತ್ಮರ ಮನೆಗೆ ಹೋಗ್ವೆ
ನ್ನಿಂಗಿತವನುಸುರಿದರೆ ಕುಂದಿನ್ನಾರಿಗೆಲೆ ತಂದೆ ಪ.

ಹಂಚಿನೆದುರಲಿ ಹಲ್ಲು ತೆರೆದರೆ
ಮಿಂಚುಕನ್ನಡಿಯಾಗಬಲ್ಲದೆ
ವಂಚಕರ ಅನುಸರಿಸಿ ಒಡಲಾಸೆಯಲಿ ಬಳಲಿದರೆ
ಕಿಂಚಿದಭಿಮಾನಿಲ್ಲೆ ನಿನಗೆ ಪ್ರ
ಪಂಚ ಸೂತ್ರಿ ಮುರಾರಿ ಎನ್ನಯ
ಸಂಚಿತಾರಬ್ಧಾಗಮವ ನೂಕುವರು ದಾರುಂಟ್ವೆ ೧

ಅರಸು ಮುಟ್ಟಿದ ನಾರಿ ಮಾನ್ಯಳು
ಪರಸು ಹೊಂದಿದ ಲೋಹ ಪ್ರಿಯ ಪರಮ
ಪುರುಷ ನಿನ್ನವನೆನಿಸಿ ಕ್ಷುದ್ರರ ವಶವ ಮಾಡುವರೆ
ಅರಿದುದಾವುದಘಟಿತಘಟಕನೆ
ಶಿರಿವಿರಿಂಚಿ ಶಿವೇಂದ್ರರೊಡೆಯನೆ
ಪರಮ ಪಾತಕಿಯಾದರೇನ್ಮುದ್ರಾಂಕಿತನು ಕಾಣ್ವೈ ರಂಗ ೨

ಮಧ್ವರಗಣನೆ ನಿನ್ನ ಶರಣರು
ಒದ್ದು ಭವಸಾಗರವ ದಾಟಿದ

ರುದ್ಧಟರು ನಾ ಕೇಳಿ ಕಕುಲತೆಯಿಂದ ಮೊರೆ ಹೋಗುವೆ
ಅದ್ದು ವಿಷದೊಳಗೆ ಸುಧೆಯೊಳು
ಅದ್ದು ನಿನ್ನ ನಂಬಿದವನು ನಾ
ಶುದ್ಧ ಭಟಜನಪಾಲ ಪ್ರಸನ್ವೆಂಕಟಾದ್ರೀಶ ೩

೨೭೧

ರಕ್ಷಿಸಲರಿಯಾ ರಂಗಯ್ಯ ರಕ್ಷಿಸಲರಿಯಾ ಪ.

ರಕ್ಷಿಸಲರಿಯೇನೊ ಲಕ್ಷ್ಮೀಪತಿ ಎನ್ನ
ಈಕ್ಷಿಸಿ ಕರುಣಕಟಾಕ್ಷದಿ ಭಕ್ತನ ಅ.ಪ.

ಭಾರವಾಗಿಹೆನೇನೊ ರೋಮಕುಳಿಗಳೊಳು
ಭೂರಿ ಬ್ರಹ್ಮಾಂಡಗಳನಿಟ್ಟಿಹಗೆ
ಮೀರಿದವನೇನಯ್ಯ ಬೆಲೆ ಪೇಳಿ ಕೈಗಟ್ಟಿ
ಮಾರುವ ಭಟರಲ್ಲಿ ನಾ ಪೇಳುವೆನು ೧

ಜಿತಮನನಲ್ಲೆಂದು ಹತ ಮಾಡೋದುಚಿತವೆ
ಪ್ರತಿಕ್ಷಣಕೊದಗೊ ತಂದೆ ಜಿಹ್ವೆಗೆ
ಅತಿತನಕಫ ಮುತ್ತೇಳದಿದ್ದರೆ ನಿನ್ನ
ಪತಿತ ಪಾವನನೆಂಬೋರೆ ಚೀರುವರೆ ೨

ಆಚಾರವಿಹೀನನೆಂದೋಕರಿಸಲಿ ಬೇಡ
ನೀಚೋದ್ಧಾರಕ ಬಿರುದು ನೀ ತಳೆದೆ
ಪ್ರಾಚೀನ ಕರ್ಮದಿಂದಲಿ ನಾ ದಣಿದಮೇಲೆ
ನಾಚಿಕಿನ್ಯಾರಿಗಯ್ಯ ಹೇ ಜೀಯ ೩

ದೋಷಿ ನಾನೆಂದು ದೂರಿಡದಿರೊ ತವನಾಮ
ಘೋಷಣೆಗುಳಿವುದೇನೊ ಪಾಪೇನೊ
ಹೇಸಿ ದರಿದ್ರನೆಂಬುವರದ್ಯಾರೊ ನಿನ್ನಭಿ
ಲಾಷೆವಿಡಿದ ಬಳಿಕ ಹೇ ಶ್ರೀಶ ೪

ಡೊಂಕು ನಡೆವರ ಕೊಂಕು ತಿದ್ದುವೆ ನೀ
ಸಂಖ್ಯೆಗಾಣೆನೊ ಕೊನೆಗೆ ಕೃಪೆಗೆ
ಲೆಂಕರಲಿ ಮನವಿದ್ದರೆ ಸಾಕು ಪ್ರಸನ್ನ
ವೆಂಕಟ ಸಾರ್ವಭೌಮ ನಿಷ್ಕಾಮ ೫

೨೭೨

ರಾಮ ರಾಮ ರಘುನಾಥನೆ ಸುರ
ಸ್ತೋಮ ತಿಲಕ ವಿಶ್ವಕರ್ತನೆ ದಿವ್ಯ
ಸ್ವಾಮಿ ಪುಷ್ಕರತೀರವಾಸನೆ ನನ್ನ
ಸ್ವಾಮಿ ವರಾಹ ವೆಂಕಟೇಶನೆ ಪ.

ಕಾಯೊ ಕಾಯೊ ಮಧುಮರ್ದನ ಭವ
ಸಾಯಕ ದೂರ ಜನಾರ್ದನ ಯದು
ನಾಯಕ ಧೃತ ಗೋವರ್ಧನ ನಾ
ರಾಯಣ ನಿಜಜನವರ್ಧನ ೧

ಹೊಂದಿದ ಭಟ ಕಲ್ಪವೃಕ್ಷನೆ ನನ್ನ
ತಂದೆ ತಾಯಿ ವಿಶ್ವಕುಕ್ಷನೆ ಕ್ಷೀರ
ಸಿಂಧು ಮಂದಿರ ಅಧ್ಯಕ್ಷನೆ ನಿ
ನ್ನಿಂದಾರುಗತಿ ಪದುಮಾಕ್ಷನೆ ೨

ಅಡಿಗಡಿಗೊದಗದ ತಪ್ಪನೆ ಇ
ಕ್ಕಡಿ ಮಾಡು ದೇವ ತಿಮ್ಮಪ್ಪನೆ ಮಾಯಾ
ಸಡಕ ತಪ್ಪಿಸು ಸುಪ್ರದೀಪನೆ ನಿತ್ಯ
ಬಿಡದೆ ಕ್ರೀಡಾದ್ರಿಯೊಳಿಪ್ಪನೆ ೩

ಲೇಶಭಕ್ತಿಗೆ ಮನ ಹಾರಿತು ವಿಷ
ಯಾಸೆಯಟವಿಯನೆ ಸೇರಿತು ಈ
ಹೇಸಿ ಚಂಚಲಚಿತ್ತ ಹೋರಿತು ತವ
ದಾಸರ ಸಂಗಕೆ ಜಾರಿತು ೪

ಕುಸುಮಶರನಂತ:ತೇಜನೆ ಮಹ
ಮಿಸುನಿವೆಟ್ಟದ ಕಲ್ಪಭೂಜನೆ ಅಜ್ಞ
ನಿಶಾಕುಲ ಉಡುಗಣರಾಜನೆ ಶ್ರೀ
ಪ್ರಸನ್ವೆಂಕಟ ರಾಜಾಧಿರಾಜನೆ ೫

೨೭೩

ವಾರಿಜರಮಣ ನಮ್ಮ ಸಾಕೊ ಪ.

ಉಬ್ಬಸ ಕೇಳುವರೊಬ್ಬರ ಕಾಣೆ
ಗರ್ಭವಾಸದ ಬಲೆ ನಿಬ್ಬರ ಕಾಣೊ ೧

ಕಳೇವರಪ್ರಿಯರು ಕಳಿಸಿ ಉಳಿವರು
ಬಳಲುವಾಗ್ಯಮನಲ್ಲಿ ಸುಳಿಯರವರು ೨

ಉಮ್ಮಯ ತೀವಿದ ನಿಮ್ಮನಾಗರದಿ
ಒಮ್ಮ್ಯಾದರೆನ್ನಿಡು ಧರ್ಮದಯಾಬ್ಧಿ ೩

ಕಂಗಳಿಲ್ಲವು ಸುಜ್ಞ ಕಂಗಳ ಕೊಡು ನೀ
ಪಂಗುಗುಲ್ಲಾಸ ಪಾದಂಗಳ ಕೊಡು ನೀ ೪

ಕಡೆಯ ಮಾತಿಗೆ ಕೈಯವಿಡಿಯೆನ್ನ ತಂದೆ
ದೃಢ ಪ್ರಸನ್ವೆಂಕಟ ಒಡೆಯ ಪೊರೆಯೆಂದೆ ೫

೨೭೪

* ವಿಠಲ ಎನ್ನನು ಕಾಯೊ ವಿಠಲ ಪಂಢರಿರಾಯ
ವಿಠಲ ಭಕ್ತವತ್ಸಲ ವಿಠಲ ಹರಿ ವಿಠಲ ಪ.

ದಿಟ್ಟ ಪುಂಡಲೀಕ ತನ್ನ ಪುಟ್ಟಿಸಿದವರ ಮನ
ಮುಟ್ಟಿ ಪೂಜಿಸಲು ಚಿತ್ತಗೊಟ್ಟು ಬಂದೆಯೊ ವಿಠಲ

* ಈ ಕೀರ್ತನೆ 'ಪ್ರಸನ್ವೆಂಕಟವಿಠಲ' ಅಂಕಿತದಲ್ಲಿಯೂ ಇದೆ. — ಇದು ಪ್ರಸನ್ನ ವೆಂಕಟನದೇ ನಂಬುವ !
?

ಬಿಟ್ಟು ಬರದಲೆ ಒಡನಿಟ್ಟಿ ನೀಡಲು ಚೆಲುವ
ಇಟ್ಟಂಗಿ ಮ್ಯಾಲಂಘ್ರಿಪದ್ಮವಿಟ್ಟು ನಿಂತ್ಯಯ್ಯ ವಿಠಲ ೧

ಕೊಟ್ಟ ಭಾಷೆಗೆ ಭಕ್ತರ ಕಟ್ಟಲಿ ಸಿಲುಕಿದೆಯೊ ಕಂ
ಗೆಟ್ಟೆನೊ ಭವದಿ ನಿನ್ನ ಗುಟ್ಟು ತೋರಯ್ಯ ವಿಠಲ
ಪಟ್ಟಗಟ್ಟ್ಯಜಭವರ ಕಟ್ಟಿಲೆ ಇದ್ದ ವೈಕುಂಠ
ಪಟ್ಟಣ ಭೀಮಾತೀರದಿ ನಟ್ಟು ನಿಂತ್ಯಯ್ಯ ವಿಠಲ ೨

ನೆಟ್ಟನೆ ವೇದವ ತಂದು ಬೆಟ್ಟವೆತ್ತಿ ಇಳೆಯ ಪೊತ್ತಿ
ಸಿಟ್ಟು ತಾಳ್ದೆ ವಟು ಖಳರೊಟ್ಟಿಲೊದ್ಯ್ಯೆಯ್ಯ ವಿಠಲ
ಕಟ್ಟಿದೆ ಕಡಲ ಜಗಜಟ್ಟಿ ಗೋಪ ಬೌದ್ಧ ಕಲಿಯ
ಮೆಟ್ಟಿ ಆಳ್ದೆ ಪ್ರಸನ್ವೆಂಕಟ ಕೃಷ್ಣಯ್ಯ ವಿಠಲ ೩

೨೭೫

ವಿಹಿತವೆ ಯದುನಾಯಕ ಸುಖದಾಯಕ
ಮಹಿಯೊಳು ನಾನೆ ಪಾಪಿಯೊ ಜೀಯಾ ಕಾಯೊ ಪ.

ಮಾವಗೆ ಈವ ಗಂಧಗಳು ನಿನಗೆನ್ನಲು
ದೇವ ಕಳೆದ್ಯವಳ ಬಿಂಕ ಮೂಡೊಂಕನು ೧

ಕಚ್ಚ ಬಂದಹಿಗೆ ಮುಕ್ತಿಯ ನೀನಿತ್ತ್ಯಯ್ಯ
ಹುಚ್ಚಗೊಲ್ಲರ ಪಾವನ ಮಾಡುವನೆ ೨

ಶರಣ ಜನರುಪಕಾರಿ ನೀ ತವರೂರು ನೀ
ಅರಸ ಪ್ರಸನ್ನವೆಂಕಟಪ ಮಮಪ್ರಾಣಪ ೩

೨೭೬

ವೆಂಕಟೇಶ ಶ್ರೀ ವೆಂಕಟೇಶ ಪಾಲಿಸು
ಕಿಂಕರನ ವೆಂಕಟೇಶ ಪ.

ಸುವರ್ಣಮುಖರಿಲಿ ಶಿವ ನುತ ಪಾದಾಬ್ಜ
ಸುವರ್ಣಗಿರಿ ವೆಂಕಟೇಶ
ನವ್ಯಚಂದನ ಮೃಗನಾಭಿ ಚರ್ಚಿತಗಾತ್ರ
ಅವ್ಯಾಕೃತನೆ ವೆಂಕಟೇಶ ೧

ಹಲವಪರಾಧಿ ನಾ ಭೂರಿದಯಾಳು ನೀ
ನೆಲೆಗೆ ನಿಲ್ಲಿಸು ವೆಂಕಟೇಶ
ಬಲು ತಮ ತುಂಬಿದ ಭವದಿ ಕರುಣಶಶಿ
ಬೆಳಗು ಬೆಳಗು ವೆಂಕಟೇಶ ೨

ತಂದೆ ತಾಯಿ ನೀನೆ ಸಖ ಸಹೋದರ ನೀನೆ
ಹಿಂದೆ ಮುಂದೆ ನೀ ವೆಂಕಟೇಶ
ಹೊಂದಿದ ಬಂಟನ ಕಂದಾಯ ನಡೆಸಯ್ಯ
ಕುಂದನಾಡದೆ ವೆಂಕಟೇಶ ೩

ಸಾಕು ನೀ ಸಾಕದಿದ್ದರೆ ಬಿಡು ನಾ ಬಿಡೆ
ಜೋಕೆ ಬಿರುದು ವೆಂಕಟೇಶ
ನೀ ಕೈಯ ಜರಿದರೆ ಕಾಕು ಮಾಡುವರೆನ್ನ
ಪೋಕ ವೃತ್ತರು ವೆಂಕಟೇಶ ೪

ನಂಬಿದೆ ನಂಬಿದೆ ನಂಬಿದೆ ನಿನ್ನ ಪಾದ
ದಿಂಬಿನೊಳಿಡು ವೆಂಕಟೇಶ
ಬಿಂಬ ಮೂರುತಿ ಪ್ರಸನ್ವೆಂಕಟೇಶ ಪ್ರತಿ
ಬಿಂಬಕ್ಕರುಹು ವೆಂಕಟೇಶ ೫

೨೭೭

ಶೇಷಾದ್ರಿತಟವಾಸ ಸುರೇಶ ಕಾಯೊ ನಿನ್ನ
ದಾಸಾನುದಾಸ ನಾ ತಾರಿಸೊ ಪ.

ಈ ಬೆಂದ ಭವಾಂಧಕಾರಿಂದಹಂದಿಂದೆ ನಾ
ಮಂದಕಂದನು ನೊಂದೆನೊ ತಂದೆ ಹೊಂದಿಸು ಗತಿ ೧

ಎನ್ನೊಡೆಯ ಕೈವಿಡಿಯೊ ಅಮೃತ ನುಡಿಯೊ ಮೈದ
ಡಹೊ ಮತ್ತಡಿಗಡಿಗೆಡರಂ ಬಡಿಯೊ ಮೃಡನುತ ಅಡಿಯಲ್ಲಿಡು ೨

ಶ್ರೀನಲ್ಲ ನೀನಲ್ಲದಾರಲ್ಲಾಶ್ರಯಿಲ್ಲಯ್ಯ
ಬೆಲ್ಲವಿಲ್ಲನ ಗೆಲ್ವ ಪ್ರಸನ್ವೆಂಕಟೊಲ್ಲಭ ಜಯ ೩

೨೭೮

ಉಗಾಭೋಗ

ಶ್ರೀನಾಮ ಸಾಸಿರಪೆಡೆಯ ನೆನೆದು ಕಾಣದಿಹ ಕಡೆಯ
ವನಿತೆ ಗಿರಿಸುತೆ ನುಡಿಗೆಣತಿಗೊಡೆಯ
ವನಜಜಮುಖ್ಯರ ಪಡೆಯ ಮನುಜೋತ್ತಮಾಧಮ ಕಡೆಯಾ
ರನುವರಿದು ಪದ ಪಡೆಯಲುಣಿಪೆ ಕಡೆಯ
ದನುಜರ ಭಯದ ಕಡೆಯ ಕ್ಷಣಕರಿದೆ ಇಕ್ಕಡಿಯ
ಪುನೀತನಾಗಿ ಕೆಂಜೆಡೆಯ ಕುಣಿಯೆ ಗಡನೆ ಮೃಡಯ್ಯ
ಎನ್ನ ಮನವು ತವ ಮಂಗಳಡಿಯ
ಕೊನೆಯಲ್ಲೆರಗಿಪ ದೃಢೆಯ ಜ್ಞಾನ ಶುದ್ಧವಿರತೇರಡಿಯ
ಅನುದಿನದೈಯ್ಯ ಗುಣಗಣವಾಶ್ರಯವಿಡಿಯೆ
ಘನ್ನಭವ ಕಡಲ ತಡಿಯ ಕಾಣಿಸಬಹುದು ಎನ್ನೊಡೆಯ
ಚಿನ್ನದಗುಡಿಯ ಮನೆಯ ಪ್ರಸನ್ವೆಂಕಟೊಡೆಯ
ಬಿನುಗು ದುರಿತೆನ್ನ ಬಡಿಯೆ ಮಾನಹಾನಿ ನಿನ್ನದು ಗಡ
ಎನ್ನನೆ ಪಾಲನೆ ಮಾಡಯ್ಯ

೨೭೯

ಶ್ರೀನಿವಾಸನಿಮೇಷ ಮುನಿಶುಭನಾಗಪ್ರಿಯ್ಯ ಹರೆ
ದೀನನಾಥ ನೀ ಎನ್ನ ಪಾಲಿಸೊ ಪ್ರಾಣಪತಿಬಿಡದೆ ದೇವ ಪ.

ಭೂರಿದುರಿತವು ಬೆನ್ನಬಿಡದಿರಲಾರಿಗುಸುರುವೆನೊ
ಘೋರ ಭವ ಬವಣೆಯ ಅನುಭವವಾರಿಗೊಪ್ಪಿಪೆನೊ
ಮೀರಿ ದಹಿಸುವ ಮೂರುತಾಪದದಾರುಕ್ಕುರೇನೊ
ಸಾರಸೇವಕಮಾನಿ ನರಹರಿ ಸಾರಿದೆನೊ ನಿನ್ನ ದೇವ ೧

ಪೋಕಮನುಜರ ಅನುಸರಣಿಗಳಿಂದಾ ಕಾನನ ಗೆಲುವು
ಸಾಕು ಸಾಕಲ್ಪರ ಸಖಿತ್ವವು ಸೇವೆಗತ ಸುಖವು
ಯಾಕಿನಿತು ಕ್ಲೇಶವು ನನಗೆ ನೀ ಸಾಕು ನೂಕುಳುಹು
ಶ್ರೀ ಕಮಲಲೋಚನ ಕರುಣಿ ನಿನ್ನ ಬೇಕು ಊಳಿಗವು ದೇವ ೨

ನೀಚ ಸಂಗವನೊಲ್ಲೆ ಬಲುದುರ್ವಾಚ್ಯದಲಿ ನೊಂದೆ
ನಾಚಿಕಿಲ್ಲದೆ ವಿಷಯದಲಿ ಸಂಕೋಚ ನಡೆ ತಂದೆ
ಸೂಚಿಸಿನ್ನಾದರೆ ತವಾಂಘ್ರಿ ಗುಣಾಚರಣೆಯಿಂದ
ಯಾಚಕರೊಡೆಯ ಪ್ರಸನ್ವೆಂಕಟಗೋಚರನೆ ತಂದೆ ದೇವ ೩

೨೮೦

ಶ್ರೀ ವಾಸುದೇವ ಕಾಯೊ
ಈ ವಿಷಯ ಬಾಧೆಗಳನೊದೆದು ಕಳೆದೆಮ್ಮಯ್ಯನೆ ಪ.

ತಂದೆ ತಾಯಿಗಳಿಲ್ಲ ಬಂಧು ಬಳಗಿಲ್ಲ ಭವ
ದಂದುಗದಿ ಸಿಲುಕಿ ಬಲು ನೊಂದೆನಯ್ಯ
ಇಂದಿರೆರಮಣ ನೀನೆ ತಂದೆ ಬಾಲಕನ
ಕುಂದು ನೋಡದೆ ಘಕ್ಕನೆತ್ತಿಕೊಂಡು ೧

ಒಂದು ಘಳಿಗೆಯೊಳೊಮ್ಮೆ ಹರಿ ಕೃಷ್ಣ ಮುಕುಂದ
ಎಂದೆನ್ನ ಬಾಯಿಗೆ ಬರಲಿಲ್ಲವೊ
ಮಂದನರರೋಲೈಸಿ ಮಸಿವರ್ಣನಾದೆ ಸಿರಿ
ಕಂದರ್ಪಜನಕ ಕಡುಪಾಪಿ ನಾನಯ್ಯ ೨

ವೈಭವಯುತರ ಕಂಡು ವೈಮನಸಿಯಾಗಿ ವೃಥಾ
ಸುಯಿಗರೆದುಗರೆದು ಕಾಲವ ಕಳೆದೆನೊ
ಧೈರ್ಯವಿಡಿದೊಮ್ಮೆ ನಿನ್ನಯ ಮೂರುತಿಯ ಮುಂದೆ
ಮೈಗೆಡಹಿ ನಮಿಸಲೊಲ್ಲದ ಪಾಪಿಯ ೩

ನೀರ ತಡಿಯಲಿ ಕುಳಿತು ನಾನಾ ಕುವಚನಗಳ
ಪಾರವಿಲ್ಲದೆ ಬೊಗಳಿ ಬೇಸರುವೆನೊ
ಓರಂತೆ ನಿನ್ನ ಕಥೆ ಕೇಳಿ ಕರ್ಣಾಮೃತದ
ಸಾರ ಕೊಳದರ್ಭಕಗೆ ಸ್ಮರಣೆಯನಿತ್ತು ೪

ಘನ್ನ ಪಾತಕಿಯು ನಾನಾದರೇನೊ ದಯಾ
ಪೂರ್ಣನೆಂಬೊ ಬಿರುದು ನಿನ್ನದಲ್ಲೆ
ಮುನ್ನಿನಪರಾಧಗಳ ಕ್ಷಮಿಸಯ್ಯ ತಂದೆ ಪ್ರ
ಸನ್ನ ವೆಂಕಟಾಚಲ ನಿವಾಸ ಕೃಷ್ಣ ೫

೨೮೧

ಸಂಗವಿಡಿಸು ರಂಗಾ ವಿಬುಧರ
ಹಿಂಗದೆ ನಿನ್ನಯ ನಾಮ ಪಾಡ್ವ ಭಕುತರ ಪ.

ಸಂಗವಿಡಿಯೆ ಭವ ಹಿಂಗುವ ಲೆಕ್ಕದ
ಅಂಗವಣೆಯನರಿತಂಗವಿವೇಕದಿ
ಲಿಂಗವಪುವಿಭಂಗ ವಿಚಾರಕೆ
ರಂಗಿ ವಿಷಯಭಯ ನುಂಗುವರ ೧

ಹರಿದಿನ ನಿಶಿಜಾಗರದ್ಯಶನಂಗಳ
ಮರೆದಂಬುಜಾಕ್ಷನ ಬಿರುದೊಕ್ಕಣಿಸುತ
ಮರುದಂಶರ ಮತವರಿದಿತರಾಗಮ
ಜರಿದು ವಿರತಿಯಲಿ ಪಿರಿದಪ್ಪರ ೨

ಬೆನ್ನಬಿಡದೆ ಊರು ಬನ್ನವಬಡಿಸಲು
ತನ್ನ ವಿಮಲಮತಿಯನ್ನು ಬಿಸಾಡದೆ
ಅನ್ಯವಧುವಿಗೆ ಬಿನ್ನವಿಸದೆ ಪಾ
ವನ್ನವ ಮಾಳ್ಪ ಮಾನವರ ೩

ಸರಿಸ ಸಮನಿಹ ಹರುಷಪಡೆನುತಲಿ
ಸುರಸಂಪದಕೆ ಮನವಿರಿಸಿ ಪರಂಪರಾ
ಅರಸಪದವಿ ಓಕರಿಸಿ ಪರೇಶನ
ಸ್ಮರಿಸಿ ಪದಾಬ್ಜವ ಸ್ಮರಿಸಿಪ್ಪರ ೪

ಅರಿಸಖರೊಳು ಸಮವೆರಸಿ ನೋಡುತ ಹರಿ
ಯಿರಿಸಿದೊಲಂಗೀಕರಿಸಿ ನಿರಂತರ
ಪರಸನ್ನ ವೆಂಕಟಗಿರೀಶ ನಾಮಾಸ್ತ್ರವ
ಧರಿಸಿ ಸಂಸಾರವ ಉತ್ತರಿಸುವರ ೫

೨೮೨

ಸಲಹಯ್ಯ ಸ್ಮರ ಬೊಮ್ಮರಯ್ಯ
ವ್ಯಾಳಶಯ್ಯ ಪಿಡಿಕೈಯ
ನೀಲಮೈಯ ನೀರಜಪ್ರಿಯ ಪ.

ಭವಾರಣ್ಯದಿ ಬಲುತೊಳಲಿ ನಾ ಮಾ
ನವನಾಗಿ ಮದಾಂಧಕನಾಗಿ
ಹೇವಗೆಟ್ಟೆನಯ್ಯ ಹೇಯಬಿಟ್ಟೆನಯ್ಯ
ತವ ಪಾದವ ತೋರೊ ಮಾಧವ ೧

ಎನ್ನ ಭಕ್ತಿ ಗಹನ ವಿರಕ್ತಿ ನಿ
ಧಾನ ತತ್ವನಿರ್ಣಯದ ಸತ್ವ
ಹೀನ ಹೃದಯ ನಾ ಹಿತವನರಿಯೆ ನಾ
ನೀನೆ ಕರುಣಿಸೊ ನಿಜರೊಳಿರಿಸೊ ೨

ನೆನೆವರ ನೆನಪಿನ ಚದುರ
ದೀನತಮ ದಿನಕರ ರಾಮ ಶುಭಾ
ನನ ಶರಣೆಂಬೆ ನಾ ಪ್ರ
ಸನ್ನವೆಂಕಟೇಶ ಶ್ರೀ ಶ್ರೀನಿವಾಸ ೩

೨೮೩

ಸುರ ಮುನಿಜನನುತ ಪಾದ ನಿನ್ನ
ಶರಣು ಪೊಕ್ಕೆನೊ ಗೋವಿಂದ ನೀ
ಚರ ಕೈಯಲಿ ಕೊಡದಿರೊ ಎನ್ನ ಮೇ
ಲ್ಗಿರಿ ಶ್ರೀನಿವಾಸ ಪಾವನ್ನ ಪ.

ದುಷ್ಟದೂಷಕ ಸಂಗದಿಂದೆ ನನ್ನ
ನಿಷ್ಠೆ ಜಾರುತಲಿದೆ ತಂದೆ ಸಲೆ
ಭ್ರಷ್ಟನಾಗುವುದೇನು ಚಂದೆ ಬಲು
ಕಷ್ಟಿಸಿ ಭವದಲಿ ನೊಂದೆ ೧

ಅಮಿತ ದುರ್ಗುಣ ದೋಷಹಾರಿ ಶುಭ
ಅಮಲ ಮುಕ್ತಿದಾತ ಉದಾರಿ ಎನ್ನ
ಭ್ರಮಣ ನೀಗಿಸು ಹೊರೆ ಸ್ವಾಮಿ ಹೃ
ತ್ಕಮಲದಿ ಪ್ರಕಟಿಸು ಪ್ರೇಮಿ ೨

ಅರಿಯೆನರಿಯೆ ಅನ್ಯಮರೆಯೆ ನಿನ್ನ
ಸ್ಮರಣೆಗೆಚ್ಚರವಿತ್ತು ಹೊರೆಯೊ
ಸಿರಿಗುರು ಆನಂದಮುನಿ ದೊರೆಯೆ ನಿತ್ಯ
ಪರಸನ್ನ ವೆಂಕಟ ಭಕ್ತರ ಸಿರಿಯೆ ೩

೨೮೪

ಸುರರಾಜ ಪೂಜಿತರಾಜ ಪಂಕೇಜಸಖ ಶತತೇಜ ಪ.

ಶ್ರೀನುತ ಶ್ರೀನಿಧಿ ದೀನ ದಯಾನಿಧಿ
ಜ್ಞಾನವಿಹೀನನ ನೀನೆ ಪೊರೆ ೧

ಜೀಮೂತ ಶಾಮಲ ರಾಮ ಶುಭಾಮಲ
ನಾಮನೆ ಸಾಮಜಸ್ವಾಮಿ ಸಲಹು ೨

ದೋಷವಿನಾಶ ಪರೇಶಾಮರೇಶನೆ
ಶೇಷವರಾಸನ ಕೇಶವನೆ ನಮೊ ೩

ದೂಷಕ ಭೀಷಣ ದಾಸ ವಿಪೋಷಕ
ತೋಷ ವಿಕಾಸ ವಿಹಾಸ ಜಯತು ೪

ಪಶುಪತಿ ವಿಷಹರ ಶಶಿನಿಭದಶನ
ಪ್ರಸನ್ನವೆಂಕಟೇಶ ಕರುಣಾಶರಧಿ ಹರಿ ೫

೨೮೫

ಸುಳಾದಿ

ಧ್ರುವತಾಳ

ಹರಿ ನಿನ್ನ ಕಥಾಮೃತ ವರ್ಷವು
ಚಿರಕಾಲದ ಪುಣ್ಯಾಂಕುರಗಳೊರ್ಧಿಯು
ಹರಿ ನಿನ್ನ ಶುಭನಾಮ ರಸಾಯನ ಭವರೋಗ
ಪರಿಹರ ಕಾರಣವಲ್ಲದೌಷಧ ಉಂಟೆ
ಹರಿ ನಿನ್ನ ಧ್ಯಾನ ಧಾರಣ ಬಿಂಬ
ದರುಶನ ಕಾರಣವಲ್ಲದನ್ಯ ಸಾಧನ ಜೀವರಿಗುಂಟೆ
ಹರಿ ನೀ ವ್ಯಕ್ತನಾದರೆ ಪಾತ್ರನೆನಿಪೆ ನಾ
ಕರುಣಿಸೊ ಕರುಣಾಬ್ಧಿ ಪ್ರಸನ್ನವೆಂಕಟ ಕೃಷ್ಣ ೧

ಮಠ್ಯತಾಳ

ನಿನ್ನ ಕೇಳಿ ಕೇಳಿ ಕೆಲರನ್ಯವ ಮರೆದರು
ನಿನ್ನ ಸುಚರಿತೆ ಕೇಳಿ ಧನ್ಯರು ಒರೆದರು
ನಿನ್ನ ಪಾದಕಾಂತು ಮನ ವೇದಿಸಿದರು
ನಿನ್ನ ಕಾಣಲೋಸುಗಾರಣ್ಯವ ಸೇರಿದರು
ನಿನ್ನ ಮಹಿಮೆಯೆಂತೊ ನಿನ್ನ ಮೋಹವೆಂತೊ
ನಿನ್ನ ಬಿಡಲಾರೆ ಪ್ರಸನ್ನವೆಂಕಟ ಕೃಷ್ಣ ೨

ತ್ರಿಪುಟತಾಳ

ಪ್ರಕೃತಿಯಿಂ ಬದ್ಧ ನಾ ಪ್ರಕೃತಿಯಾಳುವೆ ನೀನು
ಪುರುಷರಧೀನ ನಾನು ಪುರುಷರ ಪ್ರಭು ನೀನು
ಸಕಲ ಸ್ವತಂತ್ರ ಭಕ್ತರಾಧೀನನೆ
ನಿಖಿಳ ಸಂದೇಹ ಧ್ವಾಂತಧಿಕ ಪ್ರಸನ್ವೆಂಕಟ ಕೃಷ್ಣ ೩

ಅಟ್ಟತಾಳ

ಶ್ರೀನಾಥ ನಿನ್ನ ಮರೆದೆನಾಗಿ ಎಂಭ
ತ್ತುನಾಲ್ಕು ಲಕ್ಷ ಗರ್ಭದ ದುರ್ಗದಿ ಸಿಲ್ಕಿ
ಯೋನಿ ಯಂತ್ರದಿ ಕೆಟ್ಟು ನೊಂದೆ
ಹೀನ ವಿಷಯ ಭೋಗ ಸಾಕೆನ್ನಲೊಲ್ಲದೆ
ಆ ನಾರಿ ಸಾರೆ ಮನ ಮಾರ ಬಾಧೆಗಧೀನ
ದೀನನಾಥ ಪ್ರಸನ್ನವೆಂಕಟ ಕೃಷ್ಣ ೪

ಆದಿತಾಳ

ಹರಿ ಹರಿ ಹರಿ ಹರಿ ಹರಿ ಹರಿ ಹರಿಯೆಂ
ಬೆರಡಕ್ಕರವೆನ್ನ ನಾಲಗೆಯೊಳಾದ್ಯಂತ
ತಿರು ತಿರುಗೆನಿಸು ಹರಿಯೆಂದದರಿಂ

ತಿರು ತಿರುಗಿ ಬರುವ ಅರುಹಂ ಮರೆವೆ
ಪರಸನ್ನವೆಂಕಟ ಕೃಷ್ಣ ಪರಮದಯಾನಿಧೆ
ಶರಣರ ಹೊರೆವ ಬಿರುದು ನಿನ್ನದದರಿಂ ೫

ಜತೆ

ನಾನಾ ಯೋಗ ಯಾಗದೆಡಹಿಗೆ ಪ್ರಾಯಶ್ಚಿತ್ತ
ನೀನೆ ನೀನೆ ನೀನೆ ಪ್ರಸನ್ನವೆಂಕಟ ಕೃಷ್ಣ

೨೮೬

ಹರಿಯೆ ಎನಗಾರು ಗತಿಯೊ ನೀನಲ್ಲದೆ ಪ.

ಹಿಂದಿನಾಪತ್ತು ಮರೆತೆ ಇಂದು ಮಾಯದಿ ಬೆರೆತೆ
ಒಂದುಗೂಡಿದವು ಅಘ ಮುಂದಿನರುಹಿಲ್ಲ ೧

ಹಗಲು ಅಶನದ ಕೃತ್ಯ ಇರುಳು ನಿದ್ರೆಯ ಮಬ್ಬು
ವಿಗಡ ಕಾವನ ತಡೆ ತಗಲು ಬಿತ್ತೊ ರಂಗಾ ೨

ಅತ್ತಿತ್ತ ಸುತ್ತುವನಕ ಹೊತ್ತು ಹೋಯಿತು ಯಮನ
ಮುತ್ತಿಗೆ ಬಿದ್ದಾಗ ಮತ್ತಾರಿಲ್ಲೊ ಸ್ವಾಮಿ ೩

ಅಜ್ಞಾನೆಂಬಹಿ ಕಚ್ಚಿ ಯಜ್ಞೇಶ ನಿನ್ನಂಘ್ರಿ
ಸಂಜ್ಞವಿಲ್ಲದೆ ದು:ಖ ಮಗ್ನನಾದೆನಲ್ಲೊ ೪

ಶ್ರೀ ಪ್ರಸನ್ವೆಂಕಟೇಶ ತಾಪತ್ರಯವಿನಾಶ
ನೀ ಪಾಲಿಸಯ್ಯ ವಿಶ್ವವ್ಯಾಪಕ ಸ್ವಾಮಿ ೫

೨೮೭

ಹರಿ ಶರಣು ಮಧ್ವಗುರು ಶರಣೆಂಬೋದೆ ಬೀಜ ಮಂತ್ರ ಇಹ
ಪರಕಿದೆ ಸಾಧನವೆಂದು ನಂಬಿಬಿಟ್ಟೆ ಹಲವು ತಂತ್ರ ಪ.

ಹರಿ ಕೊಡದಾರು ಕೊಡುವರಿಲ್ಲ ನರರನು ಬೇಡಲ್ಯಾಕೆ ಶ್ರೀ
ಹರಿ ಕೊಟ್ಟರುಂಟು ಹಗಲಿರುಳು ಒಣಹಂಬಲ್ಯಾಕೆ ೧

ಇದು ನನ್ನದದು ನನ್ನದೆಂದು ಬರಿದೆ ಹೊತ್ತು ಹೋಯಿತಲ್ಲ ಶ್ರೀ
ಪದುಮನಾಭನ ಕೃಪೆ ಭಕುತಿದಾರಿಯ ಹೊಂದಿ ಪಡೆಯಲಿಲ್ಲ ೨

ಎರವಿನ ಸತಿಸುತ ಪಶು ಧಾನ್ಯ ಒಂದೊಂದಾಗ್ಯಗಲುವಾಗ ಗತ
ಹರುಷನಾಗಿ ರಂಗನಂಘ್ರಿಯ ಮರೆದುಂಡೆ ನಿರಯ ಭೋಗ ೩

ಕರ್ಮತ್ರಯಗಳು ಕರಗವೆ ಶ್ರೀನಿವಾಸನೊಲುಮೆಯಿಂದ ದು
ಷ್ಕರ್ಮಾರಣ್ಯವು ಸುಟ್ಟು ಹೋಗದೆ ನಾಮಾಗ್ನಿಯಿಂದ ೪

ಬೇಡಿದುದೀವ ಪ್ರಸನ್ವೆಂಕಟೇಶನ ಬೇಡಬೇಕು ಅವನ
ಹಾಡುತ ಹೊಗಳುತ ಜನ್ಮಾಯುಷ್ಯವ ಹೋಗಾಡಬೇಕು ೫

೨೮೮

ಹರಿಹರಿಯೆ ಕಡೆಗಾಣೆನ್ನೈ ಜನುಮವ ಭವ
ಕಡಲ ತಡಿಯ ಸೇರಿಸು ಮಾಧವ ಪ.

ವಿಷಯಾಸೆ ತೆರೆಗಳಲ್ಲಿ ಗೃಹವೆ ಗ್ರಹ
ವಿಷಮ ಸತಿಸುತ ಗುಲ್ಮವು ವಡವಾಗ್ನಿ
ಹಸಿವು ತೃಷೆ ದಹಿಸಿತೆನ್ನ ಇದರೊಳಾ
ಲಸಿಕೆ ಸುಳಿ ಭ್ರಮಣ ಘನ್ನ ೧

ಷಟ್ವರ್ಗ ಹಡಗದವರು ಬಿಡದೆ ಬೆ
ನ್ನಟ್ಟಿ ಬಡಿದಂಜಿಸುವರು ಮನವಾಯುವಿ
ನಟ್ಟುಳಿಗೆ ನಿಲವಿಲ್ಲವು ಇಂದ್ರಿಯಜಂತು
ಕಟ್ಟಿಲ್ಲದೆಳೆದೊಯ್ವವು ೨

ಸಂಸಾರ ಸಾರ ಫೇನ ಭುಂಜಿಸಲು
ಸಂಶಯದ ರೋಗ ನವೀನ ದುರಿತಾಂಬು

ಹಿಂಸೆ ಮಾಡದೆ ಉಳುಹಿತು ಅಜ್ಞವ್ಯಾಳ
ದಂಶ ಕ್ಷಣಲವಕಾಯಿತು ३

ಸುಖವೆ ಬೊಬ್ಬುಳಿ ರಾಶಿಯು ಬಂಧು ಬಳಗ
ಸಖ ಸ್ನೇಹ ಪಾಶಲತೆಯು ಅಹಿತಾಗ
ಮ ಕಠೋರ ದುಶ್ಯಬ್ದಕೆ ಸ್ಮೃತಿ ಹೋಗಿ
ಚಕಿತನಹೆ ದೀನಬಂಧು ೪

ಇಂತು ಬಳಲುವುದ ನೋಡಿ ಸಿರಿಲಕುಮಿ
ಕಾಂತ ನಿರ್ದಯನಾದೆ ನೀ ಪ್ರಸನ್ನವೆಂಕಟ
ಕಾಂತ ಸಂತರ ಕೂಡಿಸೊ ಶ್ರೀ ಮೂರುತಿ
ಅಂತ್ಯಯಾತ್ರೆಗೆ ಉದಯಿಸೊ ೫

೨೮೯

ಹಾ ಹಾ ಸಾಧುರು ಮೆಚ್ಚದನಕ ಹರಿಗುರು ಮೆಚ್ಚ ಪ.
ನನ್ನ ಗುಣಕೆ ನಾ ಮೆಚ್ಚಿದೆ ಬರಿದೆ
ಪುಣ್ಯವಂತನೆಂದನ್ಯರ ಜರಿದೆ
ಉನ್ನತ ಸೂಕ್ಷ್ಮ ಸುಧರ್ಮವ ಕಾಣೆ
ನನ್ನೊಳು ನಾ ವೃಥಾ ಹಿಗ್ಗಿದರೇನು ೧

ಜನದೊಳು ದಣಿಯದೆ ಜ್ಞಾನವನೊರೆದು
ಘನವೈರಾಗ್ಯಕೆ ಹಿಂದಕೆ ಸರಿದು
ತನು ಮನ ಕದ್ದು ಭಕುತಿಯೊಳಿದ್ದು
ಹೆಣಗಾಡುತ ಭಾಗವತೆನಿಸಿದ್ದು ೨

ಸಂತರು ಒಪ್ಪಿದ ಜ್ಞಾನಿಯವ ಸಂತ
ಸಂತರಿಗಾಗದ ವಿರತಿ ಭ್ರಾಂತಿ
ಸಂತರು ಕೂಡಿದ ಭಕುತಿ ಮುಕುತಿ
ಸಂತರ ಪ್ರಿಯ ಪ್ರಸನ್ವೆಂಕಟಯ್ಯ ೩

೨೯೦

ಹೇ ಮನವೆ ಈ ದೇಹ ಗಾಳಿದೀಪ ಪ.

ನಳ ಪುರೂರವ ಹರಿಶ್ಚಂದ್ರ ಪುಣ್ಯಶ್ಲೋಕರು
ಇಳೆಯೊಳು ಒಯ್ಯಲಿಲ್ಲ ದಾರೂ ೧

ಹಂಬಲಗಡಲೊಳು ಮುಳುಗಲಿನ್ನಾವ ಸುಖ
ಅಂಬುಜಾಕ್ಷಗೆ ಸಲ್ಲಲೀ ಲೆಕ್ಕ ೨

ಧರ್ಮವ ಹಳಿದು ಸತ್ಕರ್ಮವ ಜರೆದರೆ
ನಮ್ಮ ಪ್ರಸನ್ನವೆಂಕಟ ದೂರ ೩

೨೯೧

ಹೊಂದು ಹೊಂದು ಹರಿಪಾದ
ಹೊಂದು ಮನವೆ ಪ.

ಮಾತುಳನ ಚಂದನ ಪ್ರೀತಿಲಿ ಕೊಟ್ಟು ಮನ
ಸೋತವಳ ಅಂಗಪುನೀತ ಮಾಡಿದನಂಘ್ರಿ ೧

ಅಜಮಿಳ ಸಹಜ ತನುಜನ ಕರೆಯಲಾಗಿ
ನಿಜ ಭಟರಟ್ಟಿದ ಸುಜನೇಶನಂಘ್ರಿಯ ೨

ಹೊಂದಿದರವಗುಣ ಕುಂದುನೋಡದೆ ಹೊರೆವ
ತಂದೆ ಪ್ರಸನ್ವೆಂಕಟೇಂದ್ರನ ಅಂಘ್ರಿಯ ೩

೨೯೨

ಹೋಯಿತಲ್ಲಾಯುಷ್ಯ ಹೋಯಿತಲ್ಲಯ್ಯ
ಸಾಯಸಬಟ್ಟೆನು ಭವದಿ ಶ್ರೀಯರಸನ್ನ ನಂಬದೆ ಪ.

ಪಶ್ಚಿಮ ಜಾಗರದಿ ಕಾಕುತ್ಥನ ಪ್ರೀತಿಗೋಸುಗ
ದುಶ್ಚಿತ್ತ ವೃತ್ತಿಯ ನೀಗಿ ನಿಶ್ಚಿತನಾಗಿ
ಸಚ್ಚಿದಾನಂದಕಾಯನ ಆಶ್ಚರ್ಯಕರ ನಾಮವ
ಉಚ್ಚರಿಸದೆ ನಿದ್ರೇಲಿ ಮೆಚ್ಚಿ ಘುರುಘುರಿಸುತ ೧

ತುಲಸಿ ಮಂಜರಿ ಪುಷ್ಪ ಅಲಸದೆ ತಂದು ಶ್ರೀ
ನಳಿನ ನೇತ್ರನ್ನ ನಾಮಾವಳಿಗಳಿಂದ
ಸಲೆ ಅವನಂಘ್ರಿಕಮಲಕರ್ಪಿಸದೆ ಸದಾ
ಲಲನೆ ಸಂಪದಾಬ್ಧಿಲಿ ಮುಳುಗಿ ದುರಾಶೆಯಲ್ಲಿ ೨

ಸತತ ಶಕ್ತ್ಯಾನುಸಾರ ವ್ರತಧರ್ಮಾಚರಿಸದೆ
ಅತಿಥರೊಳೀತನ ನಂಟನೆಂದರೆ
ಅತಿಸ್ನೇಹ ಬಳಸುತ ಹಿತಬಿಟ್ಟೆ ವೃಥಾ ಕೆಟ್ಟೆ
ಗತಿ ಕಾಣಿಸಿನ್ನಾರೆ ಶ್ರೀಪತಿ ಪ್ರಸನ್ವೆಂಕಟಯ್ಯ ೩

೨೯೩

ಹ್ಯಾಂಗಾದರು ದಾಟಿಸೊ ಭವಾಬ್ಧಿಯ
ಹ್ಯಾಂಗಾದರು ದಾಟಿಸೊ ಪ.

ಗಂಗಾಜನಕ ನಾ ನಿನ್ನವನೆಂದು
ಹ್ಯಾಂಗಾದರು ದಾಟಿಸೊ ಅ.ಪ.

ನಗುತ್ತಾದರು ಉಂಡೆ ಅಳುತ್ತಾದರು ಉಂಡೆ
ಬಗೆ ಬಗೆ ದುರ್ಜನ್ಮ ಸುಖದು:ಖವ
ತಗೆ ಬಗೆ ನಿರಯದಿ ಹೊರಳ್ಯಾಡುವನ ತಂದು
ಮಿಗಿಲಾದ ದೇಹವನಿತ್ತೆ ಇನ್ನೆಲೆ ಕೃಷ್ಣ ೧

ತಿಳಿದಾದರು ಮಾಡಿ ತಿಳಿಯದಾದರು ಮಾಡಿ
ಹಲವು ದೋಷದ ರಾಶಿ ಒದಗಿಸಿದೆ

ಬಲುತಪ್ಪು ನೋಡದೆ ನಾಮಾಮೃತವನಿತ್ತು
ಸಲಹುವ ಮನಬಲ್ಲ ಎಲ ಎಲೋ ಮುಕುಂದ ೨

ಮಂದಮತಿಯುಗ್ರಾಹ ಅಂಧ ಕೂಪದಿ ಬಿದ್ದು
ಎಂದಿಗು ಭೋಗ ಭೋಗಿಸಲಾಪೆನೆ
ತಂದೆ ಪ್ರಸನ್ನವೆಂಕಟಪತಿಗೊಲಿದು
ನಿಂದೆನ್ನ ಛಿದ್ರವನೆಣಿಸುವರೆ ರಂಗ ೩

೪ ಲೋಕನೀತಿ

೨೯೪

ಅಂದೇನಿಂದೇನಯ್ಯ ಶ್ರೀ ಅರ
ವಿಂದನಾಭನ ಹಗೆಯವ ಅಸುರ
ಎಂದಿಗೆ ಮತಿ ಕವಲಿಲ್ಲದೆ ಹರಿಪದ
ಹೊಂದಿದಗೆ ಮುಕ್ತಿಯವಸರ ಪ.

ಅಂದಿಗೆ ಹರಿಮಹಿಮೆಗಳನ್ನು ಆ
ನಂದದಿಂದ ಕೇಳದವ ದ್ವೇಷಿ
ಇಂದಿಗೆ ಹರಿಕಥೆ ತಾತ್ವಿಕ ಜನರನು
ನಿಂದಿಸುವವನೆ ನಿಜದ್ವೇಷಿ ೧

ಸರ್ವಹ ಕೃಷ್ಣಾಕೃತಿಗೆ ವೈರ್‍ಯಾಗಿ ಬಹು
ಗರ್ವಿಪ ಕಂಸನು ಅತಿತಾಮಸ
ಉರ್ವಿಲಿ ನರಹರಿ ಚರಣವರ್ಚಿಸದೆ
ಶರ್ವ ಸರ್ವೋತ್ತಮನೆಂಬವ ತಾಮಸ ೨

ವಾಸುದೇವನ ಪಾಶದಿ ಬಿಗಿಸುವೆನೆಂದು
ಆಶಿಸಿ ಕೆಟ್ಟ ಕೌರವ ಕುಮತಿ

ದೋಷ ಧರ್ಮವನೆಲ್ಲ ಸರಿಮಾಡಿ ಶಾಕ್ತನಾ
ಗ್ಯಾಸುರಿ[ಯ] ಪೂಜಿಪ ಹೊಲೆ ಕುಮತಿ ೩

ರುಕ್ಮಿಣಿ ದೇವಿಯೆ ಲಕ್ಷ್ಮಿಯೆಂದು ತಿಳಿಯದ
ರುಕ್ಮನು ಮದಸೊಕ್ಕಿದ ಪಾಪಿ
ಲೆಕ್ಕವರಿಯದೆ ಜೀವೇಶರು ಸಮರೆಂದು
ಲೆಕ್ಕಿಸುವವ ನರರೊಳು ಪಾಪಿ ೪

ಕೃತಕ ಹಕ್ಕಿಯನೇರಿ ತಾ ವಾಸುದೇವನೆಂದು
ಅತಿಕ್ಲೇಶವುಂಡ ಪೌಂಡ್ರಕ ಕಲಿಯು
ಸಕಳ ಜಗದೊಡೆಯ ಪ್ರಸನ್ವೆಂಕಟೇಶನ
ಭೃತ್ಯನಾಗದೆಯೆ ನಾನೆಂದವ ಕಲಿಯು ೫

೨೯೫

ಅವನೆ ಜೀವಾಂಕಿತ ಪ್ರೇತ ನೋಡಿ
ಭುವಿಗೆ ಭಾರನು ಅವನು ಹರಿ ಹಗೆಯನು ಪ.

ಹರಿಕಥೆಗೆ ಬೇಸತ್ತು ಹರಟೆಯನೆ ಕೇಳುವವ
ಹರಿಯಗುಣ ಹೊಗಳದೊಣಪಂಟ ಬಡಿವವ
ಹರಿ ಮರೆದು ಮಲಭಾಂಡವನು ತುಂಬಿಕೊಳುವವ
ಹರಿಭಟರ ನಡೆನುಡಿಗೆ ಸೈರಿಸದವ ೧

ಹರಿಪ್ರಿಯರ ನೆರೆಗಾರದತ್ತತ್ತ ಜಾರುವವ
ಹರಿಯವರಿಗುಣಿಸದೆ ಧನ ಕಳೆವವ
ಹರಿಯಾತ್ರೆಗಂಜಿ ಬಲವನೆ ಕೊಳುವವ
ಹರಿವ್ರತವ ಬಿಟ್ಟಿತರ ವ್ರತ ಕೊಳುವವ ೨

ಹರಿ ಪದಾಂಬುಜವ ಜರಿದು ಹಲವು ನೀರ್ಕುಡಿವವ
ಹರಿಲಾಂಛನಿಲ್ಲದ ಚೆಲುವಿಕೆಯವ

ಹರಿ ಪ್ರಸನ್ವೆಂಕಟೇಶನ ಪಾದಾಬ್ಜವ ಭಜಿಸಿ
ಹರಿ ಪರದೈವವೆನ್ನದ್ಲೊಲೆಮನದವ ೩

೨೯೬

ಆಗಬಲ್ಲದೆ ಹೀಗಾಗಬಲ್ಲದೆ
ಯೋಗಿಜನವಂದ್ಯನವರಿ
ಗ್ಹೀಗೆ ಯಮನ ಮನೆಯ ಬಾಧೆ ಪ.

ಕಾಮನಯ್ಯನರಮನೆಯ
ಪ್ರೇಮದ ದಾಸಿಗೆ ಮಹಾ
ಪಾಮರ ರಾಕ್ಷಸ ಕ್ರೂರ
ಕಾಮುಕರ ಸಂಯೋಗವಾಗಬಲ್ಲದೆ ೧

ಸಜ್ಜನರರಸನ ಮನೆಯ
ವಜ್ರ ಪಂಜರದ ಗಿಣಿಯು
ಮಜ್ಜಿಗೆ ಕಾಣದ ಮುದಿ
ಮಾರ್ಜಾಲನ ಬಾಯಿತುತ್ತಿಗಾಗಬಲ್ಲದೆ ೨

ರಾಜಾಧಿರಾಜನ ಮನೆಯ
ರಾಜಹಂಸವು ಕುಣಪ
ಭೋಜಕನಾದ ವೃಕನ
ಭೋಜಕನ ಅನುಕೂಲವಾಗಬಲ್ಲದೆ ೩

ಹರಿಯ ಬೇಂಟೆಯ ಮನೆಯ
ಹರಿಣಗಣಗಳಿಗೆ
ಗಿರಿಯ ಹಳುವದ ಹುಲಿಯ
ಗರಜರದ ಘಸಣೆಯಾಗಬಲ್ಲದೆ ೪

ಪ್ರಸನ್ನವೆಂಕಟನ ಮನೆಯ
ಕಸಕಡ್ಡಿಯೆಲ್ಲವು ವಜ್ರ

ವಿಷಮ ಯಮಬಂಟರೆಂಬ
ಮುಸಲಕೆ ಹಿಡಿ ಹಿಟ್ಟು ಆಗಬಲ್ಲದೆ ೫

೨೯೭

ಆರ ಮಕ್ಕಳಾರ ರಾಣಿ ಆರ ಸಂಪದ
ವಾರಿಜಾಕ್ಷನಿಟ್ಟ ತೆರದಿ ಇರು ಎಲೆಲೆ ಆತ್ಮಾ ಪ.

ಬೇಡಿದರೆ ಕೊಡ ದೇವ ಬೇಡದಿದ್ದರೀವ ದೇವ
ನೋಡುತಿಹ ಸುಮ್ಮನೆ ತಾನಾಡಿಪ ಜಗವ
ರೂಢಿಯಲ್ಲಿ ಎಳೆ ಮಕ್ಕಳಾಡುವಂತೆ ಕೊಟ್ಟು ಕಳೆದು
ಓಡಿಸಾಡುತಿಹ ಯಂತ್ರಾರೂಢನ ಬಳಗಿದೆಲ್ಲ ೧

ಕಂದನ್ನಿಟ್ಟು ತಂದೆ ತಾಯಿ ತಂದೆ ತಾಯಿ ಮುಂದೆ ಕಂದನ
ಹಿಂದೆ ಮುಂದೊಯ್ಯುವನ್ಯಮ ಸಂಬಂಧರಿಗ್ಹೇಳಿ
ಚಂದದಿ ಜಗಜ್ಜೀವರು ದಂದುಗದಿ ತೊಳಲೆ ಕಂಡು
ಮಂದಸ್ಮಿತದೊಳಿಪ್ಪ ಮುಕುಂದನ ಮಾಯವಲ್ಲದೆ ೨

ಹಾವು ಹಾರವಕ್ಕು ಮೃತ ಜೀವರು ಸಂಜೀವರಕ್ಕು
ಪಾವಕ ತಂಪಕ್ಕು ವಿಷ ಪೀಯೂಷಮಕ್ಕು
ಆವಕಾಲದಿ ಶ್ರೀ ಪ್ರಸನ್ವೆಂಕಟೇಶನಂಘ್ರಿಯ
ಭಾವದೊಳರ್ಚಿಸು ಕ್ಷುದ್ರ ಜೀವಿಗಳಾಸೆ ಸಲ್ಲ ೩

೨೯೮

ಆವಾವಾಗಲಿ ರಾಮನ ನೆನೆವನವ ಜಾಣ ಪ.

ಸಚೇಲ ಸ್ನಾನ ಮೋನಗಳ್ಯಾಕೆ
ಶುಚಿ ಇಲ್ಲೆಂಬನುಮಾನಗಳ್ಯಾಕೆ
ಉಚಿತಾನುಚಿತ ಕಾಲವದ್ಯಾಕಘ
ಪಚನ ಮಾಡುವ ಹರಿನಾಮಾಗ್ನಿ ೧

ಅಮಲ ಸ್ಥಾನವು ಬರಲಿನ್ಯಾಕೆ
ಕ್ರಮದಕ್ಷರ ಮಾಲಿಕೆ ಬೇಕ್ಯಾಕೆ
ರಮಣೀಯಾಸನ ಬಯಸುವದ್ಯಾಕತಿ
ಕ್ರಮವಾಹುದು ಭವಕೋಟಿಯ ವಾರ್ತೆ ೨

ಆಲಸ್ಯದೆ ಅವನ ಮರೆಯಲಿನ್ಯಾಕೆ
ಪಾಲಿಪ ಕರುಣಿಯ ಬಿಟ್ಟಿರಲ್ಯಾಕೆ
ನಾಲಿಗೆಲವನಿರೆ ಕಾಲನ ದೂತರ
ಹಾಳುಮಾಡುವ ಪ್ರಸನ್ವೆಂಕಟ ದಾತಾರ ೩

೨೯೯

ಆ ಸುಖ ಹರಿಮರೆದವಗಯ್ಯ
ದೋಷಾಂಧಃತಮದೊಳಗೇನು ಸುಖ ಪ.

ಕಂಠತ ವ್ಯಸನ ಹೊಲಬಿಲ್ಲದೆ ಧರ್ಮ
ಕಂಟಕ ಶಾಸ್ತ್ರ ವಿಚಾರಕಗೆ
ಎಂಟು ವೃಷಭ ಹೂಡಿ ಮಹಾಶ್ರಮಿಸಿ ಬರೆ
ದಂಟು ಬೆಳೆದವನಿಗೇನು ಸುಖ ೧

ಅನಿರುದ್ಧಗಖಿಳವರ್ಪಿಸಿದಾನಲ್ಪ
ಗುಣದೆ ಮತಿ ದೃಢವಿಲ್ಲದ ಮಾನವಗೆ
ಹಣ ವೆಚ್ಚಿಸಿ ರಿಣದೆಗೆದಿಟ್ಟ ಧಾನ್ಯವ
ತೃಣಸಮ ವಿಕ್ರಿಸಲೇನು ಸುಖ ೨

ಶಂಖಪಾಣಿಯ ನಿಂದಿಸಿ ಕರ್ಮಶಕ್ತಿಯ
ಶಂಕರ ರವಿಗಣೋಪಾಸಕಗೆ
ಸಂಖ್ಯೆ ಇಲ್ಲದ ವಸ್ತು ನಿಶ್ಶೇಷದಿ
ಸುಂಕಕೆ ತೆತ್ತಿದರಾವ ಸುಖ ೩

ಆಧ್ಯಾತ್ಮಾನುಭವ ಗುರುಕೃಪೆ ಇಲ್ಲದೆ
ವಿದ್ಯೋನ್ಮತ್ತ ದಯಾಶೂನ್ಯಗೆ
ನದ್ಯೋಲ್ಲಂಘಿಸಿ ದಡದಲಿ ನಾವೆ ಮುಳು
ಗಿದರೆ ಪ್ರಾಣಿಗಳಿಗೇನು ಸುಖ ೪

ಪ್ರಸನ್ನವೆಂಕಟ ಪದಸರೋರುಹಗಳ
ಪ್ರಸನ್ನೀಕರಿಸದೆ ಸಾಹಸಬಡುವ
ಅಶುಭದನುಜರು ತಪಮಾಡಿ ತುದಿಯಲಿ
ವಿಷಮಗತಿಗ್ಹೋಗಲೇನು ಸುಖ ೫

೩೦೦

ಆಳಬೇಕೈ ಸುಮತಿ ಪತಿವ್ರತೆಯ
ಜಾಳಿಸಬೇಕೈ ಕುಬುದ್ಧಿಯ ಬುಧರು ಪ.

ನಾಗರಕ್ಷಕನ ಪಾದ ಹೊಂದಿ ವಿಷಯ ಸ್ವಾರ್ಥ
ನೀಗಿಹ ಮಡದಿಯ ಕೂಡಬೇಕೈ
ಭಾಗವತರನು ಮಲಿನಿಪ ಮೋಹಿಯ
ಮೂಗು ಮುಂದಲೆ ಮೊಲೆ ಕೊಯಿದಟ್ಟಬೇಕೈ ೧

ಶೀಲವಿಡಿದು ನವನಾರೇರ ಸಖ್ಯದಲಿ
ಆಲಯ ನಡೆಸುವಳಿರಲಿಬೇಕಯ್ಯ
ಆಲಿ ಕುಣಿಸಿ ನವ ಪುರುಷರ ಕಂಡು ತಾ
ಮ್ಯಾಲೆ ಬೀಳುವಳ ಜಿಹ್ವೆ ಸೀಳಬೇಕೈ ೨

ಷಂಡಗಂಡಗೆ ಹಿತ ಹೇಳಿ ಅಂಗವ
ದಂಡಿಸಿ ಕೊಳುವಳ ನಂಬಬೇಕೈ
ಕಂಡ ಬೀದಿಲಿ ಸಾಧು ಕೊಂಡೆಯಾಡುವಳ
ಮಂಡೆ ಬೋಳಿಸಿ ಕತ್ತೆನೇರಿಸಬೇಕೈ ೩

ಮನೆಗೆಲಸದಲಿಟ್ಟು ಮಹಾತ್ಮರ ಸೇವೆಗೆಂದೂ
ದಣಿಯದ ರಂಭೆಯ ಒಲಿಸಬೇಕು
ಅಣಕಿಸಿ ಒಲಿದರ ನೀಚಾನುಕೂಲೆಯಾದ
ತನಗಲ್ಲದವಳ ಹೊಳೆ ನೂಕಬೇಕೈ ೪

ಶಶಿರವಿರಾಶಿ ಮೈ ಹೊಳವಿಲಿ ಮೆರೆವ
ಕುಶಲಗೆ ಮನವಿಟ್ಟ ಜಾಣೆ ಬೇಕೈ
ಪ್ರಸನ್ನವೆಂಕಟಪತಿಯಾಕಾರ ನೋಡಿ ತಾ
ಅಶರೀರನೆಂಬಳ್ಗೆ ವಿಷವಿಕ್ಕಿರೈ ೫

೩೦೧

ಇರಬರಲಿಲ್ಲ ಬಂದರು ಇರಲಿಲ್ಲ ಈ
ಶರೀರ ಯಮನವಶ ಹರಿ ಮೊರೆ ಹೋಗು ನೀ ಪ.

ಘಟಪಟಗಳಿವು ದಿಟಕೀಟಕ ಹೂವು ಕ
ಪಟನಾಟಕನ ಪಾದ ಬಿಟ್ಟು ಕೆಟ್ಟೆಯಲ್ಲೊ ೧

ನಗುನಗುತ ಭವ ಸೊಗಸೆಂದು ಸವಿವೆ ಬಹು
ತಗೆಬಗೇಸಯ್ಯ ನಿನಗೆ ಭವದ ಭಯ ೨

ಶರಣರ ಕಂಡು ಜರಿದರೆ ಕೇಡು ತಂದೆ
ಸಿರಿಪ್ರಸನ್ನವೆಂಕಟ ಅರಸನ್ನ ನಂಬು ೩

೩೦೨

ಈ ಕಾರಣ ಹರಿನಾಮವ ನೆನೆಯಲಿ
ಬೇಕಾಲಸ್ಯವಿಲ್ಲದಲೆ
ಭೀಕರ ಯಮಭಟರಂತ್ಯದಿ ಕವಿಯಲಿ
ನೂಕುವುದೀ ಅಸ್ತ್ರದಲಿ ಪ.

ಷೋಡಶ ಉಪಚಾರದ ಪೂಜಾವಿಧಿ
ಮಾಡುವ ಪಕ್ವಗೆ ಸಾಧ್ಯ ತಾ
ಮಾಡೇನೆಂದರಗಾಧ ಮಾ
ತಾಡಿದರೇನದಸಾಧ್ಯ
ರೂಢಿಲಿ ಶ್ರೀಹರಿಗುಣ ಸಂಕೀರ್ತನೆ
ಪಾಡಿದರತಿ ಆಹ್ಲಾದ ೧

ಸುಜ್ಞಾನಿಗಳ್ಹರಿ ಮೆಚ್ಚಿಸಿದರೆ ಅನ
ಭಿಜ್ಞರಿಗೆಲ್ಲಿಯ ಜ್ಞಾನ ಭವ
ಸುಗ್ಗಿಯೊಳೆಲ್ಲಿ ಧ್ಯಾನ ವೈ
ರಾಗ್ಯದ ನಡೆಯು ಕಠಿಣ ಅ
ನರ್ಘ್ಯದ ಭೋಜನ ದೊರೆತಿದೆ ಹರಿನಾ
ಮಂಗಳೆ ಅಮೃತದ ಪಾನ ೨

ಈ ಜನುಮವು ಜಗುಳುವ ಮುನ್ನ ಖಗ
ರಾಜಗಮನ ರಂಗನ್ನ ಸರ್ವ
ದಾ ಜಪಿಸುವನೆ ಧನ್ಯ ಸುಖ
ಬೀಜವಿದೆನ್ನಿ
ತ್ರಿಜಗತ್ಪತಿ ಪ್ರಸನ್ವೆಂಕಟರಾಯನ
ಸೋಜಿಗ ನಾಮಂಗಳಣ್ಣ ೩

೩೦೩

ಈಗಾಗೋ ಇನ್ನಾವಾಗೋ ಮ
ತ್ತೀಗಾತ್ರ ಅಸ್ಥಿರವಣ್ಣ
ಹೇಗಾದರು ಹೊಗಳಾಡಲಿ ಬೇಕು
ನಾಗಾರಿಗಮನನ್ನ ಪ.

ಮನಹರಿದತ್ತಲೆ ಹರಿಹರಿದಾಡಿ
ದಿನ ಹೋದವು ವೃಥಾ ನೋಡಿ ದು

ರ್ಥನದಾಸೆಲಿ ಬಾಡಿ ದು
ರ್ಜನರಾರಾಧನೆ ಮಾಡಿ ಈ
ತನು ಚಪಲತೆ ಹೋಗಾಡದೆ ಶ್ರೀಹರಿ
ಗುಣ ಕುಣಿದು ಕೊಂಡಾಡಿ ೧

ತುಂಬಿದ ಸಿರಿ ಬಿಡಿಸಿ ಸೆರೆ ಒಯಿವರು ವಿ
ಲಂಬಿಲ್ಲದೆ ಜವನವರು ಕೃಪೆ
ಯೆಂಬುದ ಅರಿಯರು ಅವರು ಹಲ
ವ್ಹಂಬಲಿಸಿದರೊದೆವರು ಸುಡು
ನಂಬಲಿಬಾರದು ಸಂತೆಯವರ
ಅಂಬುಜನಾಭನ ಸಾರು ೨

ಸಕಳಾಗಮ ವೇದೋಕ್ತಿ ವಿಚಾರಕೆ
ಮುಖವೆನಿಸುವುದಾಚಾರ ಆ
ಸುಖವೇ ಧರ್ಮದ ಸಾರ ಈ
ಅಖಿಳಕೆ ಪ್ರಭು ಯದುವೀರ
ಭಕ್ತವತ್ಸಲ ಪ್ರಸನ್ವೆಂಕಟರಾಯನ
ಸಖ್ಯವಿಡಿದರೆ ಭವದೂರ ೩

೩೦೪

ಎಂದು ಹರಿಭಟರು ಕೆಡರು ಇವರಿಗೆ ಮ
ತ್ತೆಂದಿಗಿಲ್ಲೆಡರು ತೊಡರು ಪ.

ಘಟಜನುಕ್ತಿಯಲಿ ಕರಿ ಗಟ್ಟಿಯಾಗಿ ಪ್ರಾಣ ಸಂ
ಕಟಬಡಲು ನಕ್ರನ ತುಟಿ ಹರಿದು ಹರಿ ಪೊರೆದ ೧

ಎಣಿಕೆಯಿಲ್ಲದ ಪಾಪ ಎಣಿಸಿ ಬಂದ್ಯಮನವರ
ಹಣಿದು ವಿಪ್ರಜಾಮಿಳನ ವನಜಾಕ್ಷ ಪುರಕೊಯ್ದ ೨

ಮುನಿ ಕನಲಿ ಅಂಬರೀಷನ ದಣಿಸುತಿರೆ ಚಕ್ರ
ವನು ಕಳುಹಿ ವೈಷ್ಣವಾಗ್ರಣಿಯ ಛಲ ಗೆಲಿಸಿದನು ೩

ಕಪಟಿ ಕೌರವ ಪಾಂಡುನೃಪಜರನು ಬೆಂಕೊಳಲು
ಕುಪಿತನಾಗಲೆ ಬಂದು ಕೃಪೆಯಿಂದ ಕಾಯ್ದ ಗಡ ೪

ಶ್ರೀಪ್ರಸನ್ವೆಂಕಟನ ಶ್ರೀಪದವ ನಂಬಿದರೆ
ಶಾಪ ಪಾಪೋಗ್ರಸಂತಾಪವೇನು ಮಾಡುವುವು ೫

೩೦೫

ಎಚ್ಚರ ಮನವೇ ಯದುಪತಿಯ
ನೆಚ್ಚದಿರು ಚೋಹದನಿಕೆ ತನುವ ಪ.

ವೇಳ ವೇಳಾಯು ವೃಥಾ ಹೋಯಿತೆಚ್ಚರ
ಕಾಲಪಮೃತಿ ವೃಕ ಕೊಲುವೆಚ್ಚರ
ಕೋಳು ಹೋಗುತದಲ್ಲ ಕೃತ ಪುಣ್ಯವೆಚ್ಚರ
ನಾಲಿಗೆಯಲಿ ಸಿರಿನಾಥನೆಚ್ಚರ ೧

ಸತಿ ಸದನಾತ್ಮಜಸ್ಥಿರವ್ಯರ ವೆಚ್ಚರ
ತಿಥಿ ಪೂಜೆಗಳಲಿ ಸತ್ವರ ಎಚ್ಚರ
ಪ್ರತಿದಿನ ತತ್ವದಿ ಪ್ರವೀಣನಾಗೆಚ್ಚರಾ
ಹಿತಲ್ಪನ ಕೀರುತಿ ಹೊಗಳೆಚ್ಚರ ೨

ಹರಿಭಟರೌಘದಿ ಹಿಂಗದಿರೆಚ್ಚರ
ದುರಿತಭಯ ದಂದುಗದೆಚ್ಚರ
ಪರಾಪರದ ವಚನವಟ್ಟಿಸದಿರೆಚ್ಚರ
ಪರಿಪರಿ ಸದ್ವ್ರತ ಪಿಡಿದೆಚ್ಚರ ೩

ಸಂತವರಿಯರನುಸರಣಿಗಳೆಚ್ಚರೇ
ಕಾಂತ ಬೀರುವ ಗುರುಕೃಪೆಯೆಚ್ಚರ

ಸಂತ್ಯಿರಲಾಗಿ ಶಾಂತ ಸರಕು ಕೊಳ್ಳೆಚ್ಚರ
ಕಂತುಪಿತನ ನಾಮ ಕಡೆಗೆಚ್ಚರ ೪

ವಿಷಯಗತೇಂದ್ರಿಯವಿಡಿದಾಳುವೆಚ್ಚರ
ಮೀಸಲು ವೈರಾಗ್ಯ ಮುರಿಯದೆಚ್ಚರ
ಬಿಸಜನಾಭನ ಭಕ್ತಿ ಬಲಿದಿರುವೆಚ್ಚರ
ಪ್ರಸನ್ನವೆಂಕಟಪತಿ ಪದದೆಚ್ಚರ ೫

೩೦೬

ಎಲೆ ಮಾನವ ಹರಿಯ ಸ್ಮರಿಸು
ಸಲೆ ಕಾವನು ಖರಿಯ ಪ.

ಶಂಖಾರಿ ಸಂಧೃತನ ಮತ್ತಾ
ಶಂಖಜನ ಬಲಹೃತನ
ಶಂಕರ ವಿಧಿನುತ ಚರಣನುದಾರಾ
ಶಂಕಾವಾರಣ ವಾರಣೋದ್ಧರನ ೧

ಕಮನೀಯತರ ಗಾತ್ರನ ಅರುಣ
ಕಮಲಾಯತ ನೇತ್ರನ
ಕಮಲಾವ್ಯಯ ಪೂತ ಮುಖ ಚಾರುವಿಲಸಿತ
ಕುಮುದಾಸಿತ ಶರಣ ಕರುಣಾಕರನ ೨

ಅಗಣಿತ ಗುಣ ಗಣ್ಯನಾನಂತ ಆಗಮ
ನಿಗಮಾದಿ ಪೂರ್ಣನ
ಅಗಧರ ಮಹಿವರ ಪ್ರಸನ್ವೆಂಕಟವರ
ಅಗನಂದನಿಲಯ ಕಲಿಯಕೋಲಾಹಲನ ೩

೩೦೭

ಎಲ್ಲರಾಡ್ಯೇನು ಭಾಗವತರಾವೆಂದು
ಬಲ್ಲವರೆ ಬಲ್ಲರು ಹರಿಯ ಊಳಿಗವ ಪ.

ಸಟೆಯನ್ನೀಗಿದ ಭಕ್ತಿ ಮಿಶ್ರವಿಲ್ಲದ ಜ್ಞಾನ
ಜಠರಾನುಕೂಲಕಲ್ಲದ ವಿರಕ್ತಿ
ದಿಟವಾಗಿ ಮಾಡುವ ಮಹಿಮರಿಗಲ್ಲದೆ
ಘಟಿಸದು ಒಣಮಾತಿನ ಕೋವಿದಂಗೆ ೧

ಡಂಬವಿಲ್ಲದ ದಾನ ಕಳವಳಿಸದ ಪೂಜೆ
ಡೊಂಬಿಯಾಗದ ಜಪಧ್ಯಾನ ಮೌನ
ಕುಂಭಿಣಿಯೊಳು ಮಾನುಭವಗಲ್ಲದೆ ಭವ
ಸಂಭ್ರಮಕುಬ್ಬುವ ಸುಖಿಪುಂಸಂಗೇನು ೨

ಹೇಯವಿಲ್ಲದ ಕೀರ್ತ್ನೆ ಹೇವವಿಕ್ಕದ ವಿದ್ಯೆ
ಬಾಹ್ಯ ತೋರದ ಹರಿ ಭೃತ್ಯ ವೃತ್ತಿ
ದೇಹ ಚಿತ್ತವ ಕದಿಯದ ಧರ್ಮವ್ರತ ಕೃಷ್ಣ
ಸ್ನೇಹಿತಗುಂಟು ಸಂಸಾರಿಗಗಾಧ ೩

ವಂಚಿಸದ ಬುಧಸೇವೆ ತೌಳಿಸದ ಮಂತ್ರ ಪ್ರ
ಪಂಚ ಕೂಡದ ತತ್ವ ಚರ್ಚಂಗಳು
ಮುಂಚುವ ಮುಕುತರಿಗಲ್ಲದೆ ಯಾತನೆಯ
ಸಂಚಕಾರವಿಡಿದ ಸುಖಿ ಪುಂಸಂಗೇನು ೪

ಯಾಗವ ತಾ ನಿಯೋಗವ ತಾನಾ
ತ್ಯಾಗವ ತಾನಾಗಿಹದು ಸುಲಭ
ಭೋಗವತಿಯ ತಂದೆ ಪ್ರಸನ್ವೆಂಕಟೇಶನ
ಭಾಗವತಾಂಘ್ರಿ ಪರಾಗ ದುರ್ಲಭವು ೫

೩೦೮

ಎಲ್ಲೆಲ್ಲಿ ಭಾಗವತಾಂಶ ಮತ್ತೆಲ್ಲೆಲ್ಲಿ ಹರಿಸನ್ನಿವಾಸ
ಎಲ್ಲೆಲ್ಲಿ ಕರೆದರೆ ದಾಸರಲ್ಲಲ್ಲಿಗೆ ಬಾಹ ರಮೇಶ ಪ.

ಆವೆಡೆ ಲಕ್ಷವಂದನೆಯು ಆವಾವೆಡೆಗೆ ಭಕ್ತ ನರ್ತನೆಯು
ಆವೆಡೆ ಸುಪ್ರದಕ್ಷಿಣೆಯು ಆವಾವೆಡೆ ರಂಗನಾರಾಧನೆಯು ೧

ಎಂತು ದಂಡಿಗೆ ತಾಳ ಘೋಷ ಎಂತೆಂತು ಕಥಾಮೃತ ವರುಷ
ಎಂತು ತತ್ವಾರ್ಥ ಜಿಜ್ಞಾಸ ಅಂತಂತೆ ಶ್ರೀಕಾಂತನ ಹರುಷ ೨

ಎಷ್ಟು ತಂತ್ರಸಾರಾರ್ಚನೆಯು ಎಷ್ಟೆಷ್ಟು ಶ್ರುತಿ
ಸೂತ್ರಗಳ ಧ್ವನಿಯು
ಎಷ್ಟು ತಾತ್ಪರ್ಯ ವರ್ಣನೆಯು ಅಷ್ಟಷ್ಟು ಕೃಷ್ಣನ
ಕಂಠ ಮಣಿಯು ೩

ಏಸು ಶ್ರೀಹರಿವ್ರತ ಮೌನ ಏಸೇಸು ಶ್ರೀ ಹರಿರೂಪಧ್ಯಾನ
ಏಸು ಸದ್ವ್ಯಾಖ್ಯಾನ ದಾನ ಆಸನ್ನ ಕೈವಲ್ಯನಿದಾನ ೪

ಎನಿತು ಗುರುಪಾದಗಳ ಸ್ಮರಣೆ ಎನಿತೆನಿತು ಮಧ್ವಯತಿಗಳ ಸ್ಮರಣೆ
ಎನಿತೇಕಾದಶಿಯ ಜಾಗರಣೆ ಅನಿತನಿತು ಸುಲಭ ಹರಿಸ್ಮರಣೆ ೫

ಆರು ಆರೂರು ಮೆಟ್ಟಿಹರು ಮತ್ತಾರೂರರಸರ ಕಟ್ಟಿಹರು
ಆರೀರ್ವರ ಪೊರಮಟ್ಟಿಹರು ಆರಾರಾಗಲಿ ಕೃಷ್ಣನವರು ೬

ಹೇಗೆ ಸಜ್ಜನರ ಉಲ್ಲಾಸ ಹಾಗ್ಹಾಗೆ ಮಹಾಮಹಿಮರಭಿಲಾಷ
ಹೇಗೆ ಬುಧರ ಪರಿತೋಷ ಹಾಗಾಗುವುದು ಪ್ರಸನ್ವೆಂಕಟೇಶ ೭

೩೦೯

ಏನು ಭ್ರಮೆ ಮನುಜ ನಿನಗ್ಯಾಕೆ ಹರಿಭಟರ ಹಗೆ ಪರ
ಮಾನಿನಿಯ ಸಂಗ ನರಕದೊಳು ಬಲು ಭಂಗ ಪ.

ಮಬ್ಬು ಮುಸುಕಿದ ಪರಿಯ ನಿಜಸತಿಯ ನೋಡದೆ ಮ
ತ್ತೊಬ್ಬಳ ಕುಚಕೆ ಕಮಲವ ಹೋಲಿಸಿ
ಕೊಬ್ಬು ಮೈಯವಳ ಸಖವಿಡಿದರದು ಮಹಾಶೋಕ
ತಬ್ಬಿಬ್ಬುಗೊಳುತ ನಿರಯಂಗಳುಂಬೆ ೧

ಇಂದುಮುಖಿಯಳ ಸಂಗ ಎನಗಿಂದು ಕೈಗೂಡ
ಲೆಂದೊಬ್ಬ ಕುಂಟಣಿಗೆ ಧನವಿತ್ತೆ ನಿನ್ನ
ಸಂದುಗಳ ಕಡಿದು ವೈತರಣಿ ಸಲಿಲದಿ ದೇಹ
ಹೊಂದಿಸುವರುಂಟು ಕಾಲನ ಕುಂಟಣಿಗರು ೨

ಚಿಕ್ಕಬಲೆಯರ ಕಂಡು ಚಂಚಲಿತನಾಗ್ಯವರ
ವಕ್ರನೋಟದಿ ಹಲವು ಸನ್ನೆಯಿಂದ
ತರ್ಕೈಸಬೇಕೆಂಬ ಲಂಪಟದಿ ತಪ್ತಾದ
ಶರ್ಕರಾಯಸ ಸ್ತಂಭವಪ್ಪಿ ಪೊರಳೇಳುವೆ ೩

ಹರಿದಾಸರಾಚಾರ ಕೇಳಲಸಿ ಪಳಿದೊರೆದು
ಒರಟು ಮಾತಿನ ಸರಕಲಾಯುಗಳಿದೆ
ವಿರತಿ ಜ್ಞಾನಾನ್ವಿತರ ವೆರಸದಂಧಕನಾದೆ
ತರಣಿಯೊಳು ಹೊಂಬುಳವು ಗರುವಿಸಿದ ತೆರದಿ ೪

ಜಂಬುಕವು ಹರಿಯೊಡನೆ ಸರಸವಾಡಿದ ಪರಿಯೊ
ಳಂಬುಜಾಕ್ಷನ ದಾಸನಿಂದೆ ಮಾಡಸಲ್ಲ
ಕುಂಭಿಪಾಕಿನಿಯಲ್ಲಿ ಮರಳಿಸುವ ಭಯವರಿತು
ನಂಬು ಪ್ರಸನ್ವೆಂಕಟೇಶನಂಘ್ರಿಯ ೫

೩೧೦

ಉಗಾಭೋಗ

ಕಗ್ಗೊರಡೆಳೆಗಾಳಿಗೆ ಚಲಿಸುವುದೆ ದು
ರಾಗ್ರಹಿ ಹರಿಚರಿತಾಮೃತ ಉಂಬುವನೆ
ಕಗ್ಗಲ್ಲೆಳೆ ಬೆಳದಿಂಗಳಿಗೆ ದ್ರವಿಸುವುದೆ
ಸ್ವರ್ಗಾಪವರ್ಗ ದುರ್ಜನಕೆ ಸೊಗಸುವುದೆ
ಸುಜ್ಞಾನದ ಸಾಮ್ರಾಜ್ಯದ ಭಕುತಿ ವೈ
ರಾಗ್ಯದ ಭಾಗ್ಯವು ದಶಪ್ರಮತಿ ಶಾಸ್ತ್ರದ
ಅಗ್ಗಸವಿ ಸುಗ್ಗಿಯು ಭವ ಸ್ವರ್ಗ
ಲಗ್ಗಿಗಗುಂಟೆ ಪ್ರಸನ್ನವೆಂಕಟ ಕೃಷ್ಣ ೧

೩೧೧

ಕೇಳಿ ಮರೆವುದು ಮನ ಕುಶಶಯನನ
ಆಳು ಕಂಡಂತೆ ಚಂದ್ರಮೌಳಿ ಹೇಳಿದಂತೆ ಪ.

ಮುಂಜಾವದಿ ಗುರುಮಧ್ವಮತ ಮಹಿಮಾಹರ ಪಾದ
ಕಂಜಗಳ ಬಲಗೊಂಡು ಕಲಿಯಾನಕೆಂದು ೧

ಕುಂಜರವರದನ ನಾಮ ಕೀರ್ತನೆ ಮಾಡೆಂದು
ಮಂಜುಳ ಶಾಸ್ತ್ರಶ್ರವಣ ಮಹಿಮೆ ಪುರಾಣ ೨

ಪ್ರಸನ್ವೆಂಕಟೇಶನ ಪಾದ ಪಿಡಿದವರಿಗಾಹ್ಲಾದ
ನಿಶಿದಿನ ಸಂಸಾರ ನಿಸ್ಸಾರ ಘೋರ ೩

೩೧೨

ಕೇಳು ಶ್ರೀ ಕೃಷ್ಣ ಕಥೆಯ ಬಾಳು ವೈಷ್ಣವರ
ಪಾಳಿಕೆ ಭಕುತಿಯಿಂದಾಳಾಗಿ ಎಲೆ ಮನುಜ ಪ.

ಖೂಳರೊಳು ಮಾತಾಡದೇಳು ಹರಿಭಟರಡಿಗೆ
ಬೀಳು ಭಗವಜ್ಜನರ ಮ್ಯಾಳದೆದುರಿನಲಿ
ಹೇಳು ಕೀರ್ತನೆ ನಾಮದೋಳಿಗಳ ತನುಮನದಿ
ಊಳಿಗ ಮಾಡು ಬಿಡದಾಳು ಕರಣಗಳ ೧

ಕೂಳು ಕಾಸಿನ ಸವಿಗೆ ಕೀಳು ಮಾನಿಸರ ಹೊಗಳಿ
ಕೋಳು ಬಂಧನ ಹೋಗದಿರು ಮನದಾಳಿಗೊಳಗಾಗಿ
ಏಳೆರಡು ಭುವನಗಳ ಆಳುವ ಪಿತನಗುಣ
ದೇಳಿಗೆಗೆ ಹರುಷವಂ ತಾಳು ಅನ್ಯವ ಮರೆದು ೨

ಗಾಳಿಯ ಸೊಡರು ದೇಹ ನಾಳೆಗೆನ್ನದೆ ಸುಧೆಯ
ಮೇಳೈಸಿಕೊಂಡು ಭವವೇಳಿಲಿಸು ನೀ
ಜಾಳು ಭಾಷ್ಯಗಳ ಗತಿ ಹಾಳೆಂದು ಗುರುಮಧ್ವ
ಹೇಳಿದಂತಿರುತಲಿ ದಯಾಳು ಪ್ರಸನ್ವೆಂಕಟನ ೩

೩೧೩

ಕ್ಷಣಕೆಲವಕೆ ನೆನೆ ಹರಿಯ ಮನವೆ
ಕ್ಷಣಕೆ ಲವಕೆ ಹರಿಯ ಪ.

ಮನಕೆ ಶ್ರುತಿಗಳಿಗೆ ದೊರೆಯ ಶಶಿ
ದಿನಕರ ವಂಶಕೆ ಹಿರಿಯ
ಘನ ಕಲುಷದೊಳವತಾರಿಯ ಪೆತ್ತ
ಜನಕ ತಿರುಮಲೆಯ ದೊರೆಯ ೧

ಕನಕಾಂಗಿಯಳ ಸಿರಿಯ ಭವ
ಕನಕೋದರರಿಗೆ ವರಿಯ
ಮುನಿಕುಲಕಾಂತಿ ಅತಿಪರಿಯ ತನ್ನ
ಜನಕನ ವರಕುಪಕಾರಿಯ ೨

ಜನಕನಳಿಯ ಖಳರರಿಯ
ದಿನದಿನಕೆ ಲಾವಣ್ಯದ ತೆರೆಯ
ಸನಕಾದ್ಯರ ಮನೋಹರಿಯ
ವೈರಿನಿಕರದ ಕದಳಿಗೆ ಕರಿಯ ೩

ಮೀನ ಕಮಠಾದ್ಯವತಾರಿಯ ಭು
ವನಕೊಬ್ಬನೆ ಸುಖಕಾರಿಯ
ಧನು ಕರದಿ ಮುರಿದ ಶೌರಿಯ ಮಾ
ವನ ಕೆಡಹಿದ ಹೊಂತಕಾರಿಯ ೪

ತನ್ನ ಕರುಣಕೆ ನಿತ್ಯ ಗುರಿಯಾಗಿ
ಹನ ಕಾಯುವನು ಪರಂಪರೆಯ
ಎನ್ನ ಕುಲದೈವ ಮೇಲ್ಗಿರಿಯ ಪ್ರ
ಸನ್ನವೆಂಕಟಕೃಷ್ಣ ನಮ್ಮ ಮರೆಯ ೫

೩೧೪

ಕ್ಷುಲ್ಲರಿಗೊದಗದು ಫುಲ್ಲನಾಭನ ಪದ
ಅಲ್ಲ್ಯವಧಾರಣ ಬುದ್ಧಿಗಳು
ಬಲ್ಲಿದ ಸುಖತೀರ್ಥರುಲ್ಲಾಸದ ಪಥ
ದಲ್ಲಿಹರಿಗೆ ಪರಸಿದ್ಧಿಗಳು ಪ.

ಆಡುವುದಮಿತವು ಮಾಡುವುದಹಿತೀ
ಶಾಡುವದಾಶೆಗಳಬ್ಧಿ
ನಾಡವಚನ ಉಪಗೂಡಿಸಿ ತಾಳಿಪ
ಮೂಢರ್ಗೆ ವಿಷಯದ ಲುಬ್ಧಿ
ರೂಢಿಯೊಳಿವ ತನುಗೂಡಿದ ಬಯಕೆಯ ನೀ
ಡಾಡಿದರೆ ಸುಖ ಲಬ್ಧಿ
ಹಾಡಿ ಹರಿಯ ಕೊಂಡಾಡ್ಯನುದಿನಕೋ
ಲ್ಯಾಡಲು ಒಲಿವ ದಯಾಬ್ಧಿ ೧

ಹೀನ ಶ್ರದ್ಧದಿ ಘನ ಸ್ನಾನ ಸುರಾರ್ಚನೆ
ನಾನಾಡಂಬರಕುದಿಸುವ ಗಳಿಕೆ
ಮೌನವೆ ವಧು ಹಣ ಧ್ಯಾನದಾರೋಹಣ
ಜ್ಞಾನದೊಳಜ್ಞಾನದ ಬಳಕೆ
ಏನೊಂದರಿಯರು ಮಾನುಭವಾರ್ಯರು
ಮಾನಪಮಾನ್ಗಳ ವೆಗ್ಗಳಿಕೆ
ಶ್ರೀನಾಥಪದಕೊಪ್ಪು ಪ್ರಾಣವನೊಪ್ಪಿಪ
ಜಾಣರ್ಗೆ ಮುಕುತಿಯ ಕಳವಳಿಕೆ ೨

ತರ್ಕಕೆ ನಿಶಿದಿನ ಕರ್ಕಶ ಭಾವದ
ವರ್ಕಡು ಪಾತಕರ್ಬಾಧಕರು
ಮರ್ಕಟ ಮುಷ್ಟಿಯೊಳು ಮೂರ್ಖ ಪ್ರತಿಷ್ಠೆಯೊಳು
ನರ್ಕ ಪದೇ ಪದೇ ಸಾಧಕರು
ಆರ್ಕೂಡ ಮುಕ್ತರು ಶರ್ಕರ ಸೂಕ್ತರು
ಅರ್ಕ ಸುತೇಜ ಮುಖಾಧೀಶರು
ತರ್ಕೈಪರು ಸಂತರ್ಕಳ ಖಳ ಸಂ
ಪರ್ಕಕೆ ಹೆದರುವ ಭೇದಕರು ೩

ಶಾಸ್ತ್ರ ವಿಚಾರಿಸಿ ಪ್ರಸ್ತಾರದೋರಿ ಸ್ಮ
ರಾಸ್ತ್ರಕೆ ಮಗ್ನುತ ಸೋಲುವರು
ಸ್ವಸ್ಥ ಮನಿಲ್ಲದೆ ದುಸ್ತರ ಬೋಧ ಸ
ಮಸ್ತರೊಳಗೆ ಬೋಧಿಪರವರು
ವಿಸ್ತರ ತತ್ವ ಪ್ರಶಸ್ತ ಬೀರುತ್ತ ಪ
ರಸ್ತ್ರೀ ಜನನಿಸಮನೆಂಬುವರು
ಅಸ್ತಮಯೋದಯದಿ ವ್ಯಸ್ತವಿದೂರ ಹೃದ
ಯಸ್ಥ ಹರಿಯನೆ ಚರಿಸುವರು ೪

ಒಂದರಿದವರು ನೂರೊಂದನರಿತವರಾ
ರೆಂದತಿಶಯಮದ ವಿಹ್ವಲರು

ಕುಂದು ಕುಚೇಷ್ಟೆ ವಿನಿಂದೆಯ ಧೃಷ್ಟ ಮು
ನೀಂದ್ರ ದ್ರೋಹದ ಗುಣ ಸಂಕುಲರು
ಮಂದರಧರನವರಂದನುಭವದಿವ
ನೊಂದನರಿಯರತಿ ನಿರ್ಮಳರು
ತಂದೆ ಪ್ರಸನ್ವೆಂಕಟೇಂದ್ರನ ಕಿಂಕರ
ರೆಂದೆಂದಿಗಪವಾದಕೊಳಗೊಳರು ೫

೩೧೫

ಜಾರಿ ಬಿದ್ದಳು ಕುಣಿಯೊಳು ಜಾರಿ ಬಿದ್ದಳು ಪ.

ಜಾರಿಬಿದ್ದಳು ಕೆಸರಿಲ್ಲದೆ
ಊರೆಲ್ಲ ನಕ್ಕಿತು ತವ
ರೂರು ಮಾವನ ಮನೆಯವರು
ಚೀರಿ ಅಳುವ ಸೋಜಿಗ ನೋಡಿ ೧

ಶುದ್ಧ ನಡೆಯದೆ ಅಡ್ಡಡ್ಡೊಲಿದು
ಬಿದ್ದ ಭರಕೆ ಮೂಗುತಿ ಕಳೆದು
ಚೋದ್ಯವ ನೋಡಿ ಕಂಡರ ಕೈಯಲಿ
ಗುದ್ದಿಸಿಕೊಂಡಳು ವಾರಂವಾರ ೨

ಈ ಪರಿ ಜಾರಿಬಿದ್ದರೆ ನೋಡ್ಯೆ
ಲ್ಲಾ ಪತಿವ್ರತೆಯರೆಚ್ಚತ್ತು ನಮ್ಮ
ಶ್ರೀಪತಿ ಪ್ರಸನ್ವೆಂಕಟರಮಣನ
ಶ್ರೀಪಾದವ ನಂಬಿ ನಡೆವರು ೩

೩೧೬

ಜ್ಞಾನಿಯಾಗಬೇಕು ಅಜ್ಞಾನ ನೀಗಬೇಕು ತತ್ವ
ಜ್ಞಾನದಿಂದಿರಬೇಕು ಮುಕ್ತಿ ತಾನೆ ಆವಾಗಕ್ಕು ಪ.

ಅಬ್ಜಾನನನ್ನ ಪಾದಾಬ್ಜ ನಂಬಿರಿನ್ನು ಕು
ಶಬ್ದಗುಂದಿರಣ್ಣ ಭವಾಬ್ಧಿ ದಾಟಿರಣ್ಣ ೧

ಮಾಡಿ ಸಾಧುಸಂಗ ಬಿಡಿ ಖಳರ ಹಂಗ ನೀವು
ನೋಡಿ ಅಂತರಂಗ ಕೈ ನೀಡುವನು ರಂಗ ೨

ತ್ಯಾಗ ಭೋಗ ಸರ್ವ ಶ್ರೀಹರಿಗೆ ಒಪ್ಪಿಸಿರುವ ಆ
ಯೋಗಿಯನ್ನು ಕರೆವ ಶ್ರೀ ನಾಗಶಯನ ಹೊರೆವ ೩

ತಿದ್ದಿನೋಡಿ ವರ್ಮ ಅಸಾಧ್ಯ ಶರ್ಮನರ್ಮ ಬೇ
ಗೆದ್ದು ಬಿಡಿ ಅಧರ್ಮ ನಿನ್ನದು ಶುಭಕರ್ಮ ೪

ದಾಸರ ಜೀವನ ಭಕ್ತಪೋಷಕ ಪಾವನ ಶ್ರೀ
ಪ್ರಸನ್ನ ವೆಂಕಟ ಪ್ರಸನ್ನ ಅಭಿಲಾಷೆ ಸಂಜ್ಞನೆ ಧನ್ಯ ೫

೩೧೭

ತೋರುತಲೈದಾನೆ ಮುಕ್ತಿಯ ತೋರುತಲೈದಾನೆ
ಸಾರಿ ಶರಣರೆಂದು ಶ್ರೀನಿವಾಸದೇವ ಪ.

ಹುಲ್ಲು ಕಲ್ಲಿನ ಪೂಜೆಯ ಮಾಡಿ ಕೆಡದೆ
ಬೆಲ್ಲದಾಸೆಗೆಂಜಲು ತಿನ್ನದೆ ಸೊಲ್ಲು
ಸೊಲ್ಲಿಗೆ ಹರಿಸರ್ವೋತ್ತಮನೆಂದು
ಬಲ್ಲವರು ಭಕ್ತಿಲಿ ಭಜಿಸಿರೆಂದು ೧

ಭುವಿಯ ವೈಕುಂಠವು ನೋಡಿರಾನತರೆಂದು
ನವನವ ಉತ್ಸಾಹದೊಳಿಹನು
ಯುವತಿ ಲಕುಮಿ ಕೂಡ ಸ್ವಾಮಿ ಪುಷ್ಕರಕೂಲ
ಭವನದೊಳಗಿಪ್ಪ ಭಕ್ತ ಚಿಂತಾಮಣಿ ೨

ನೆಲೆಯೆ ಸಿಕ್ಕದ ಧರ್ಮಕರ್ಮದ ತೊಡರ ಬಿ
ಟ್ಟಲಸದೆ ತನ್ನಂಘ್ರಿಯಾತ್ರೆ ಮಾಡಿ

ಸುಲಭದಿ ಮೋಕ್ಷವ ಗಳಿಸಿಕೊಳ್ಳೆನುತಲಿ
ಕಲಿಯುಗದೊಳಗೆ ಪ್ರಸನ್ನವೆಂಕಟಪತಿ ೩

೩೧೮

ದಾಟು ಭವಾಟವಿಯನ್ನು ಮನುಜ ನೀ
ದಾಟು ಭವಾಟವಿಯನ್ನು
ಕೈಟಭಾಂತಕನಾಮಪಾತಕರೊಡಗೂಡಿ
ನೀಟಾಗದಂದದ ಪಾಟಿಯ ಕೇಳಿನ್ನು ಪ.

ಹೆಣ್ಣೆಂಬ ಹೆದ್ದೋಳ ತಿರುಗುತಿವೆ ಬಲು
ಪುಣ್ಯಮಾರ್ಗವ ನಡಿಗುಡವು
ಬಣ್ಣ ಬಣ್ಣದ ಮೃತ್ಯುಗಳೆಂಬ ಹೆಬ್ಬುಲಿ
ಕಣ್ಣಲಿ ಕಂಡರೆ ಬಿಡವು
ಸಣ್ಣಮಕ್ಕಳು ನೆಂಟರಿಷ್ಟ ನರಿಗಳರ್ಥ
ಪೆಣ್ಣಿನ ನಾತಕೆ ಓಡ್ಯಾಡುವುವು
ಹಣ್ಣುಕಾಯಿಗಳೆಲ್ಲ ವಿಷಮಯವಾಗಿಹ ಅ
ರಣ್ಯದ ಖಳರೆಂಬ ಗಿಡವು ೧

ಆರಿಂದ್ರಿಯ ಕಳ್ಳರೆಂಬ ಕಾಮವೆಂಬ
ಚೋರನಾಯಕನುಪಟಳವು
ಭೂರಿಕಾಲದ ಧರ್ಮವೆಂಬ ದ್ರವ್ಯವೆಲ್ಲ
ಸೂರ್‍ಯಾಡಿ ಸುಲಕೊಂಬ ಹಯವು
ಮೂರು ಬಗೆಯಿಂದ ಸುಡುತ ಕಂಗೆಡಿಸುವ
ದಾರುಣತರ ದಾವಾನಳವು
ಚೀರುವ ನಿಂದಕ ಝಿಲ್ಲಿಕದುಶಾಸ್ತ್ರ ನಿ
ಸ್ಸಾರ ಘೂಕಗಳ ರವವು ೨

ಅಡ್ಡಡ್ಡ ಬಂದು ಅಜ್ಞಾನ ಕಾಳೋರಗ
ವೆಡ್ಡುಗೊಳಿಸಿ ಕಚ್ಚುತಿವೆ

ದೊಡ್ಡೆಂಟು ಮದವೆಂಬೊ ಮದ್ದಾನೆ ಎದೆಯೆಂಬ
ಗುಡ್ಡದೊಳಗೆ ಸುತ್ತುತಿವೆ
ಹೆಡ್ಡನೆಂದು ಚುನ್ನವಾಡಿ ಮನೋಬುದ್ಧಿ
ಗಡ್ಡದ ಕಪಿ ಕಾಡುತಿವೆ ೩

ಜನ್ಮಮರಣ ಹಸು ತೃಷೆ ಜರಾವ್ಯಾಧಿಯೆಂ
ಬುಮ್ಮಳಿಕೆಯ ಪೊರೆಯುಂಟು
ಹಮ್ಮು ಮಮತೆ ಎಂಬ ತಲೆಹೊರೆ ಭಾರಾಗಿ
ಒಮ್ಮೆಗಿಳಿಯಲಿಲ್ಲ ಗಂಟು
ಸ್ವರ್ಮಂದಿರವೆ ಹೆಬ್ಬೆಟ್ಟ ನಾಯಕ ನರ್ಕ
ಕಮ್ಮರಿಗಳು ಇಪ್ಪತ್ತೆಂಟು
ಸನ್ಮಾನ ರಾಗಭೋಗಗಳೆಂಬ ಬಯಲಾಸೆ
ಯ ಮೃಗತೃಷ್ಣೆಯ ನಂಟು ೪

ಅಲ್ಲಿಗಲ್ಲಿಗೆ ಸುಖದು:ಖನೆಳಲು ಬಿಸ
ಲಲ್ಲಿಗಲ್ಲಿಗೆ ಪ್ರಿಯತರುವು
ಬಲ್ಲಿದರಿಂದಾಹ ಭಯದಂತೆ ಸೂಚಿಪ
ಕಲ್ಲುಕೊಳ್ಳಗಳ ನಿರ್ಝರವು
ಕೊಲ್ವಾರಿನೃಪದೂತರೆಂಬ ಸೂಕರಮೋಹ
ಹಲ್ಲೊಳಗಘಕೂಪದಿರವು
ಕ್ಷುಲ್ಲಕ ಪಿಸುಣರೆಂಬುವ ಋಕ್ಷಬಿಡಾಲ
ಹೊಲ್ಲನಖಿಗಳ ಸಂಚರವು ೫

ಈಷಣತ್ರಯ ಯಂತ್ರ ಏಳು ಪ್ರಾಕಾರದಿ
ದ್ವೇಷಿಗಳಿದ್ದ ದುರ್ಗಗಳು
ದೂಷಣ ಸ್ತುತಿ ಎಂಬ ಕಾಕಪಿಕೋಕ್ತಿ ಪ್ರ
ದೋಷದ ಮಳೆ ಮಂಜುಗಳು
ನೈಷಧನುಂಡು ಕೊಬ್ಬಿದ ಇಂದ್ರಿಯಗೋಳಕ
ಮೂಷಕಗಳಿಹ ಬಿಲಗಳು

ದೋಷ ದುರ್ವಾರ್ತೆ ದುರಿತವೆಂಬ ಕ್ರವ್ಯಾದ
ಘೋಷಣ ಭಯಂಕರಗಳು ೬

ಈ ರೀತಿ ಕಾಂತಾರ ದಾಟುವ ಧೀರಗೆ
ಮಾರುತಿ ಮತ ಪಕ್ಷ ಬೇಕು
ನಾರಾಯಣನೆ ಸರ್ವೋತ್ತಮನೆಂದೆಂಬ
ತೋರ ಗಧಾಯುಧ ಬೇಕು
ಘೋರಾದ್ವೈತ ಕಕ್ಷವ ಛೇದಿಸುವ ಸುಕು
ಠಾರ ತತ್ವಗಳಿರಬೇಕು
ಸಾರಜ್ಞಜನಪ್ರಭು ಪ್ರಸನ್ವೆಂಕಟಕೃಷ್ಣ
ನಾರಸಿಂಹನ ಸ್ಮೃತಿ ಬೇಕು ೭

೩೧೯

ದಾಟುವೆನೆಂದರೆ ದಾಟು ಹೊಳೆಯು
ಕೈಟಭಾಂತಕ ಭಟರಿಗೆ ಭವಜಲವು ಪ.

ಪೂರ್ವಯಾಮದಿ ಹರಿಗುಣಕರ್ಮನಾಮ
ನಿರ್ವಚನದಿ ಕೀರ್ತನೆ ಮಾಡುವ ಮಹಿಮ
ಉರ್ವಿಯ ಮೇಲಿದ್ದು ಒಲಿಸಿಕೊಂಡನು ಸುರ
ಸಾರ್ವಭೌಮನ ಸೀತಾರಾಮನ ೧

ಜಲದಲಿ ಮಿಂದೂರ್ಧ್ವ ತಿಲಕಿಟ್ಟು ನಲಿದು
ತುಲಸಿ ಕುಸುಮ ಗಂಧ ಅಗ್ರದ ಜಲದಿ
ನಳಿನೇಶನಂಘ್ರಿಗರ್ಪಿಸಿ ಸಹಸ್ರನಾಮಾ
ವಳಿಯಿಂದ ಧೂಪದೀಪಾರತಿ ಬೆಳಗಿ ೨

ಪರಮಾನು ಯೋಗಾವಾಹನೆ ವಿಸರ್ಜನೆಯು
ಸ್ಮರಣೆ ವಂದನೆ ಪ್ರದಕ್ಷಿಣೆ ನರ್ತನವು

ವರಗೀತಪಠಣೆ ಭಾಗವತಾ ಶ್ರವಣವು
ತ್ವರಿಯದಿ ಭೂತಕೃಪೆಯಲ್ಲಿ ಮನವು ೩

ಗುರುಪಾದಪದ್ಮದಿ ಬಲಿದು ವಿಶ್ವಾಸ
ಗುರುಕೃಪೆಯಿಲ್ಲದ ಪುಣ್ಯ ನಿಶ್ಶೇಷ
ಗುರು ಬೆನ್ನಟ್ಟಿದ ಕರಿಗಡ್ಡಹಾಸ ಹಾಸ
ಗುರುಗಳ ಮರೆದು ಕಳೆಯನೊಂದು ಶ್ವಾಸ ೪

ಈ ಪರಿ ಹರಿಪುರ ದಾರಿಯ ತೊಲಗಿ
ಕಾಪುರುಷರು ಭವ ಮಡುವಲಿ ಮುಳುಗಿ
ಆಪತ್ತು ಪಡುವರ ನೋಡಿ ಬೆರಗಾಗಿ
ಶ್ರೀ ಪ್ರಸನ್ವೆಂಕಟಪತಿ ನಕ್ಕನಾಗಿ ೫

೩೨೦

ದಾಸರಿಗೆ ದುರಿತದೋರದು
ಶೇಷಾಧೀಶ ಶ್ರೀ ಶ್ರೀನಿವಾಸನ
ದ್ವೇಷಖಳ ಮೋಳಿಗೆಯ ನಿ:
ಶೇಷವೆನಿಸಿ ನಿಜಜನರ ವರ್ಧಿಪನ ಸುರಾಧಿಪನ ಸುಪ್ರತಾಪನ ಪ.

ಅವನಿಯ ಕೊಂಡಿಳಿದವನ ಕೊಂದವನಿ ತಂ
ದ ವನಜಭವ ಸನಕಾದ್ಯರಿಗೊಲಿದನ
ಕುವರ ತನ್ನವರಿದ್ದಾಟವಿಯಲಿದ್ದವನ ಭ
ಯವ ನಿವಾರಿಸಿ ಕುವರಗೆ ವರದನ ಪೊರೆದನ ಮೆರೆದನ ೧

ವಿಧಿಪದಕರ್ತರ ಗುರುಸುಖತೀರ್ಥರ
ಹೃದಯ ಮಂಗಳ ಮಾನಸದ ಮರಾಳನ
ಪದಸೋಂಕಿಸಿ ಪಾರಾಕಿಯನು ತ್ವರಿಯದಿ
ಸುದತಿಯ ಮಾಡಿದುದರಿಯಾಘಹಾರಿಯ ಅರಿದಾರಿಯ
ಮುರಾರಿಯ ೨

ಕಿರುಗೆಜ್ಜೆ ನೂಪುರ ವರಜಾಂಬೂನದಾಂ
ಬರ ದಾಮ ಕೌಸ್ತುಭ ಸಿರಿವತ್ಸ ಕೇಯೂರ
ಹಾರ ಕರವಲಯ ಕುಂಡಲ ಮಣಿಮಕುಟಾ
ಭರಣ ಭೂಷಿತ ಘನಗಾತ್ರನಬ್ಜನೇತ್ರನ ಮಾಕಳತ್ರನ ಖಗಪತ್ರನ ೩

ಸಿರಿದೊರೆತಿರೆ ಬೆರೆತಿರದೆ ಆ ಹರಿಶರ
ಣರವೆರೆಸಿ ಗರ್ವಜರಿದು ಶ್ರೀಹರಿಯ
ಗುರು ನಿರೂಪದ ಪರಿ ಅರಿದೆಡರದರಿದು
ಅರಿ ಅರುವರಿಗಂಜದಿಹ ಅಳುಕದಿಹ ದೃಢದಲ್ಲಿಹ ಮುಕ್ತನಾಗಿಹ ೪

ಪಂಚಬೇಧ ವಿವರ ತಿಳಿದು ತತ್ವ ಜಪಿಸಿ
ಪಂಚರಾತ್ರಾಗಮ ತಂತ್ರಸಾರಾರ್ಥಗಳಿಂ
ಮಿಂಚುವ ಭಕ್ತಿ ಪಥದಲಿ ನಿಜಾಯುವ
ಹಿಂಚುಮಾಡುವ ಭವಾರ್ಣವವನೀಸಾಡುವ ಕಡೆಗೋಡುವ
ನಲಿದಾಡುವ ೫

ವೆಂಕಟೇಶನ ನಾಮ ಪಾಡಿಕೊಂಡಾಡುವ
ವೆಂಕಟೇಶನಾಕೃತಿ ನೋಡೋಲೆದಾಡುವ
ವೆಂಕಟೇಶನ ಕಥಾಮೃತ ಕೇಳಿ ಬಾಳುವ
ವೆಂಕಟೇಶನ ಚರಣವೆ ಶರಣೆನುವ ಕಾರಣೆನುವ ಪೂರಣೆನುವ ೬

ಮೊದಲೆ ಸ್ವಾಮಿ ಪುಷ್ಕರಣಿ ಶ್ರೀವರಾಹನ
ಸದಮಲ ಸುವಿಮಾನ ಶ್ರೀನಿವಾಸನ
ಇದೀಗೆ ಭೂವೈಕುಂಠವೆನಿಪಾನತ
ರಾದರ ಪ್ರಸನ್ವೆಂಕಟೇಶನ ಕಾಣುವ ಶಮಮಾಣುವ ಕೊಬ್ಬಿಕುಣಿವ ೭

೩೨೧

ನಂಬಿ ಚೊಕ್ಕಟಿಂಬು ಪಡೆಯಿರೈ ಪ.

ಇಂಬು ಪಡೆದು ಹರಿಯ ಚರಣ
ಅಂಬುಜ ಬಂಡುಂಡು ಮಿಕ್ಕ
ಹಂಬಲವ ಉಳಿದು ಭೂರಿ ಸಂಭ್ರಮಿಸುವವರ ಕೇಳಿ ಅ.ಪ.

ಹರಿವ ಮನವ ಕಟ್ಟಿ ಮೀರಿ
ಬರುವ ದುರಿತಕಂಜದೆ ಸು
ತ್ತಿರುವ ಮಾಯಾಪಾಶ ಹರಿವ ಹರುವನಾಲಿಸಿ
ಗುರುವಿನಾಜ್ಞಾದಂತೆ ಪುಣ್ಯ
ದುರುಹು ಬಲ್ಲ ಪ್ರೇಕ್ಷಕಲ್ಪ
ತರುವ ಪಿಡಿದು ನಷ್ಟ ಕಳೇವರವು ತನ್ನದಲ್ಲವೆಂದು ೧

ಆವಾಗ ಸಚ್ಛಾಸ್ತ್ರ ಶ್ರವಣ
ಭಾವಗುಟ್ಟು ಕೇಳಿ ಭಕುತಿ
ತಾವುಗಂಡು ಹಸಿವು ತೃಷೆಯ ಕಾವ ಘಸಣೆಯ
ಸಾವಿಗ್ಹೊಂದದಂತೆ ಸಾಧು
ಸೇವ್ಯ ಗರುಡಗಮನನಂಘ್ರಿ
ಸೇವೆಗಧ್ಯಕ್ಷಿತರಾಗಿ ನೀವೀಗ ವೈರಾಗ್ಯ ಬಲಿದು ೨

ಕ್ಷುದ್ರ ಭೋಗ ಬಯಸದೆ ದಾ
ರಿದ್ರ ಭೀತನಾಗದೆ ಸ
ಮುದ್ರಭವನನೆಂದು ಶ್ರೀಮುದ್ರಾಭರಣದ
ಭದ್ರ ಭಾಗವತನು ಆ
ಭದ್ರ ಬುದ್ಧಿಯಲ್ಲಿ ಕೂಡಿ
ಚಿದ್ರೂಪ ಪ್ರಸನ್ನವೆಂಕಟಾದ್ರಿ ಭೋಗಶಯನನೆಂದು ೩

೩೨೨

ನಂಬು ನಂಬೆಲೋ ಮನುಜಾ ಹರಿಚರ
ಣಾಂಬುಜಯುಗಳ ಸಹಜ
ನಂಬಿದರೊಲಿವ ದಯಾಂಬುಧಿ ನಿಶ್ಚಯ ಪ.

ತಂದೆಯ ನುಡಿಗೇಳದೆ ತನ್ನ ಕೊಲ್ಲ
ಬಂದ ದುರಿತಕಂಜದೆ
ಇಂದಿರೇಶನೆ ಗತಿಯೆಂದೇಕ ನಿಷ್ಠೆಯ
ಹೊಂದಿದಸುರಜಗೆ ಬಂದ ನೃಹರಿಯ ೧

ಅಣ್ಣನಿಲ್ಲದೆ ರಾಜ್ಯವನೊಲ್ಲೆನೆಂ
ದುಣ್ಣದೆ ಭರತನಿರೆ
ಚಿನ್ಮಯ ಹನುಮನ ಮುಂದಟ್ಟಿ ಬಂದ ರಾ
ಮೆನ್ನಿಸಿ ಭರತಗೆ ತನ್ನಿತ್ತ ರಾಮನ ೨

ದ್ರೌಪದಿಯಳ ವಸನವ ಸಭೆಯೊಳು
ಪಾಪಿ ತಾ ಸೆಳೆಯುತಿರೆ
ಶ್ರೀ ಪ್ರಸನ್ವೆಂಕಟ ಭೂಪತಿ ಸಲಹೆನ್ನೆ
ಆಪತ್ತಿಗಾದ ಯದುಪತಿ ಕೃಷ್ಣನ್ನ ೩

೩೨೩

ನಂಬೊ ನಂಬೊ ಹರಿಪದವ ನಂಬೊ ಪ.

ಮಾತುಳನ ಚಂದನ ಪ್ರೀತಿಲಿ ಕೊಟ್ಟ ಮನ
ಸೋತವಳಂಗ ಪುನೀತ ಮಾಡಿದನಂಘ್ರಿಯ ೧

ಅಜಾಮಿಳ ಸಹಜ ತನುಜನ ಕರೆಯಲಾಗಿ
ನಿಜಭಟರಟ್ಟಿದ ಸುಜನೇಶನಂಘ್ರಿಯ ೨

ನಂಬಿದರವಗುಣ ಕುಂದ ನೋಡದೆ ಹೊರೆವ
ತಂದೆ ಪ್ರಸನ್ನವೆಂಕಟೇಶನಂಘ್ರಿಯ ೩

೩೨೪

ನೆಚ್ಚಿಕೆಯಿಲ್ಲದ ದೇಹ ನಂಬಬೇಡಿರೊ ಗಡ
ಅಚ್ಯುತಾನಂತನ ಪಾದದಿಂಬು ಬೇಡಿರೊ ಪ.

ದಿನಪನುದಯದಲೆದ್ದು ನಿತ್ಯಕರ್ಮವ ಜರಿದು
ದೀನ ವೃತ್ತಿಯಲಿ ಧನವನೊದಗಿಸಿದಿರೊ
ವಿನಯವಿಲ್ಲದೆ ವೈವಸ್ವತನ ಭಟರೊಯ್ವಾಗ
ಮನಸಿನ ಹವಣು ಸಂಗಡ ಬಾಹದೆ ೧

ಅರಿಯಾರು ವರ್ಗಾಳಿಗೊಳಗಾಗಿ ಸತಿಸುತರ
ಪರಕಿಂದಧಿಕರೆಂದು ಬಗೆವರೇನೊ
ಕರುಣವಿಲ್ಲದೆ ಯಾತನೆಗೆ ಪೊಗಿಸಿ ಬಡಿವಾಗ
ತರುಣಿ ಸಂಪದವಾಗ ಸಹಾಯವಾಹದೆ ೨

ಮುನ್ನೇಸು ಜನ್ಮಗಳ ವೃಥಾ ಕಳೆದೆಯಲ್ಲದೆ ಪ್ರ
ಸನ್ನವೆಂಕಟನ ಪದವಿಡಿಯಲಿಲ್ಲ
ಚೆನ್ನಾಗಿ ಮರುತಮತವಿಡಿದು ನಡೆದರೆ ನಿಮ್ಮ
ಮನ್ನಿಸಿ ಗತಿಗೊಡದಿಹನೆ ರಂಗ ನೋಡಿ ೩

೩೨೫

ನೆನೆ ಮನವೆ ದಾನವಾರಿಯ
ಹಿತಕಾರಿಯಾಶ್ರಿತ ದೊರೆಯ ಪ.

ಹೀನ ಪಾಪಾಖ್ಯ ವಿಪಿನದಾವಕೃಶಾನು
ಸನಾತನ ನಾರಾಯಣ ಶ್ರೀನಾಥನ ೧

ಘೋರ ನಿರಯ ವಿದೂರ ಕರುಣಾಪಾರ
ವಾರಿಜಾಸನ ವಂದ್ಯ ಸುರಶ್ರೇಷ್ಠನ ೨

ತನ್ನವರಿಗೆ ಪ್ರಸನ್ನವೆಂಕಟಕೃಷ್ಣ
ಮನ್ನ ಸದ್ಭಕ್ತರ ಪಾವನ್ನ ನಾಮನ ೩

೩೨೬

ಬರಿಯ ಮಾತಲಿಲ್ಲ ಶ್ರೀ
ಹರಿಯ ಪ್ರೀತಿರಣ್ಣ ಮಧ್ವಾ
ಚಾರ್ಯರುಪದೇಶವೆ ಮುಕ್ತಿ
ಪುರದೊಳು ಖ್ಯಾತಿರಣ್ಣ ಪ.

ರಂಗನ ಪ್ರತಿಮೆಯನು ಬಿಡದೆ ಬಹಿ
ರಂಗದಿ ಪೂಜೆಯ ಮಾಡಿ
ಕಂಗಳು ತುಂಬಲು ಮೆಲ್ಲನೆ ಅಂತ
ರಂಗದಿ ಪೀಠದಿ ನೋಡಿ
ಹಿಂಗದೆ ಗುರುಶಿಕ್ಷಾಕ್ರಮದಲಿ ಧ್ಯಾ
ನಂಗತನಾಗ್ಯೊಲಿದಾಡಿ
ಲಂಘಿಸಿ ಜನ್ಮಾಯುಷಗಳ ತುದಿಯಲಿ
ಮಂಗಳ ಬಿಂಬವ ನೋಡದೆ ನೋಡಿ ೧

ಒಮ್ಮೊಂದೊಮ್ಮೆ ಹೃದಯದದ್ದಕೆ
ಧರ್ಮವ ಜರಿದರೆ ಹೀನ
ನಿರ್ಮಳ ಶೌಚಾಚಮನವೆ ಗಳಿಸಿದ
ಸಮ್ಯಕ್‌ಜ್ಞಾನ ನಿಧಾನ
ತಮ್ಮವಗುಣ ರೋಗಕೆ ಔಷಧವು
ಕರ್ಮದ ಮೂಲವೆ ಸ್ನಾನ
ಹಮ್ಮಿಲಿ ಸನ್ಮಾರ್ಗಕೆ ಕುಂದಿಡದೆ
ಇಮ್ಮಡಿ ಸಾಧಿಸಿ ನವನವೀನ ೨

ಸದ್ವ್ರತ ದೀಕ್ಷೆಯು ಧ್ರುವಪದ ಮುಕ್ತಿಯು
ಸುದ್ವಾರವ ಬಿಡಬಹುದೆ
ಮಧ್ವೇಶನ ಮಹಿಮೆಯ ಕೇಳದೆ ರ
ಕ್ಷಾಧ್ವರ ಕಥೆ ಕೇಳಬಹುದೆ

ವಿಧ್ವಂಸಿಸುವ ಚೋರರು ಹೇಳ್ಯಾಡುವ
ಸದ್ವಚನದಿ ಸುಖವಾಹುದೆ
ಅದ್ವಯ ಪ್ರಸನ್ವೆಂಕಟೇಶನ ಪಾದಕಮ
ಲದ್ವಯ ಬಿಟ್ಟಗೆ ತಮಸಹುದಹುದೆ ೩

೩೨೭

ಬಿಡು ಮೂಢತನವ ಚಿತ್ತಷಂಡ ನಮ್ಮ
ಕ್ರೀಡಾದ್ರಿಪನ ನೋಡು ಕಂಡ ಪ.

ಬೇಡಿದೀಪ್ಸಿತವೀವ ಗೂಢ ಸುರಮಣಿಯು
ಗೂಡಿನೊಳಿರೆ ಅರೆಗೋಡಿಯಾಡದೆ ಬಿಡು ೧

ಅರಸನೊಲಿದು ತಳವರನ ಓಲೈಸುವ
ಪರಿಯಲಿ ಚಿರಧನಿಪರ ಆರಾಧನೆ ಬಿಡು ೨

ಗುರುದ್ವಿಜ ವೈಶ್ವಾನರ ಸಾಕ್ಷ್ಯದಿ ಗ್ರಹಿತ
ತರುಣಿ ಇರೆ ಪರನಾರಿಯರ ಪಂಬಲವ ಬಿಡು ೩

ಸಿರಿವರದನವರ ಬಿರುದು ಹೊಗಳುತಲ
ವರ ನಿತ್ಯ ಬೆರೆಯೋಣ ತರಕದಾರಿಯ ಬಿಡು ೪

ದೊರೆಗಳ ದೊರೆ ನನ್ನರಸ ಪ್ರಸನ್ನವೆಂಕಟರಮಣ
ನಿರೆ ಅನ್ಯಾಸುರ ಭೂತಾರ್ಚನೆ ಬಿಡು ೫

೩೨೮

ಮನುಜ ವಿಶ್ವಾಸ ಬೇಡ ವನಿತೇರೊ
ಳ್ಮನುಜ ವಿಶ್ವಾಸ ಬೇಡ ತಿಳಿದು ಪ.

ನಗೆಮೊಗದಬಲೇರ ಬೆಗಡು ಸ್ನೇಹದಕಿಂತ
ಹೆಗಲ ಶೂಲವೆ ಸುಖವು

ಸುಗುಣವಿಲ್ಲದ ನರ್ಕಸೌಖ್ಯ ಬೇಕಾದರೆ
ವಿಗಡೆಯರ್ಸಖ್ಯವೆ ಸಾಕು ತಿಳಿದು ೧

ಮಹಪ್ರೇಕ್ಷರಾದರ ಅಹಿತಕಾರಿಣಿ ಮಾಯೆ
ಸಹಜ ತಾಮಸರೂಪಿಯ
ಐಹಿಕಾಮುಷ್ಮಿಕದ ಬಹು ಪುಣ್ಯ ಕೆಡಿಸುವ
ಕುಹಕ ಕೃತ್ರಿಮಶೀಲೆಯ ತಿಳಿದು ೨

ಗುರುಹಿರಿಯರ ಭಕ್ತ್ಯಾಚರಣೆಗೆ ಪ್ರತಿಕೂಲೆ
ತ್ವರಿತ ಕಾಮುಕಿ ಮೋಹಿಯ
ಧರೆಯೊಳಭಿಜ್ಞರ್ರ ಮರುಳು ಮಾಡುವ ಬುದ್ಧಿ
ಭರಿತೆ ನಿಷ್ಠುರೆ ನೀಚೆಯ ತಿಳಿದು ೩

ಎನಿತಿಲ್ಲ ಪತಿವ್ರತೆ ವನಿತೇರವರೆ ನಾಕಾ
ವನಿಯ ಪಾವನ ಮಾಳ್ಪರು
ಅನುದಿನವರ ನಾಮ ನೆನವಿಗಿರಲಿ ಮಿಕ್ಕ
ಬಿನುಗು ನಾರೇರ ನೆಚ್ಚದೆ ತಿಳಿದು ೪

ಪ್ರಸನ್ವೆಂಕಟೇಶ ಪಾದ ಬಿಸಜಾರ್ಚನಾನುಕೂಲೆಯಾ
ದಸಿಯಳೆ ಶುಭಗುಣಳು
ಹುಸಿ ಢೌಳಿಕಾರ್ತಿ ದುರ್ವ್ಯಸನಿಯನಾಳ್ವ ಮಾ
ನಿಸಗೆ ಸುಖವೆ ಸ್ವಪ್ನವು ತಿಳಿದು ೫

೩೨೯

ಮನುಷ್ಯನಾದ ಫಲವೇನು
ಶ್ರೀನಿವಾಸನ ಕಂಡು ಸುಖಿಯಾಗದನಕ ಪ.

ಭಾನು ಉದಿಸದ ಮುನ್ನ ಸ್ವಾಮಿ ಪುಷ್ಕರಿಣಿಯಲಿ
ಸ್ನಾನ ಸಂಧ್ಯಾನ ಜಪಗಳನೆ ಮಾಡಿ

ಸಾನುರಾಗದಿ ಶ್ರೀವರಹಗೆ ನಮಿಸಿ
ತಾನಖಿಳ ಪುಣ್ಯವನು ಸೂರೆಗೊಳದನಕ ೧

ಹಸ್ತದಲಿ ವೈಕುಂಠವೆಂದು ತೋರುವ ವಿಮಾ
ನಸ್ಥಾಚ್ಯುತನ ಕರ್ಮಗುಣನಾಮವ
ಸ್ವಸ್ಥಮತಿಯಾಗಿ ಕೊಂಡಾಡಿ ಕುಣಿದಾಡಿ ತಾ
ವಿಸ್ತರದ ಕೈವಲ್ಯ ಪಡೆಯದನಕ ೨

ತುಲಸಿ ಬರ್ಹಕೆ ಪೋಲ್ವ ಆ ಮಹಾಪ್ರಸಾದವನು
ಅಲಸದೆ ಸೇವಿಸಿ ಕೃತಾರ್ಥನಾಗಿ
ಹಲವು ದುರಿತಾರಿ ಪ್ರಸನ್ವೆಂಕಟಗಿರಿಯ
ನಿಲಯನೆ ಗತಿಯೆಂದು ಭಜಿಸದನಕ ೩

೩೩೦

ಮರುಳಾಟವ್ಯಾಕೆ ಮನುಜಗೆ ಮರುಳಾಟವ್ಯಾಕೆ
ಹರಿಭಕ್ತನಲ್ಲದವಗೆ ಹಲವಂಗವ್ಯಾಕೆ ಪ.

ಮೃತ್ತಿಕಾಶೌಚವಿಲ್ಲದೆ ಮತ್ತೆ ಸ್ನಾನ ಜಪವ್ಯಾಕೆ
ಹತ್ತು ಕಟ್ಟದವಗೆ ಅಗ್ನಿಹೋತ್ರವ್ಯಾತಕೆ
ತೊತ್ತುಬಡಕಗೆ ಬಹು ತತ್ವವಿಚಾರವ್ಯಾಕೆ
ಕರ್ತ ಕೃಷ್ಣನ್ನೊಪ್ಪದ ವಿದ್ವತ್ತವ್ಯಾತಕೆ ೧

ಹಸಿವೆ ತೃಷೆ ತಾಳದವಗೆ ಹುಸಿ ವೈರಾಗ್ಯವ್ಯಾತಕೆ
ವಿಷಮ ಚಿತ್ತಗೆ ಪರರ ಕುಶಲ ಬಯಕ್ಯಾಕೆ
ದಶ ಜಪ ಮಾಡಲಾರ ಮುಸುಕಿನ ಡಂಬವ್ಯಾಕೆ
ಕುಶಶಾಯಿಗರ್ಪಿಸದ ಅಶನವ್ಯಾತಕೆ ೨

ಮೂಲಮಂತ್ರವರಿಯದ ಮೇಲೆ ದೇವಾರ್ಚನೆ ಯಾಕೆ
ಸಾಲಿಗ್ರಾಮವಿಲ್ಲದ ತೀರ್ಥವ್ಯಾತಕೆ

ಸೂಳೆಗಾರಗೆ ತುಳಸಿಮಾಲೆ ಶೃಂಗಾರವ್ಯಾಕೆ
ಮೇಲೆ ಮೇಲೆ ಹರಿಯೆನ್ನದ ನಾಲಿಗ್ಯಾತಕೆ ೩

ಊರ್ಧ್ವಪುಂಡ್ರಿಲ್ಲದಾಸ್ಯ ತಿದ್ದಿನೋಡಬೇಕ್ಯಾಕೆ
ಶುದ್ಧ ಸಾತ್ವಿಕವಲ್ಲದ ಬುದ್ಧಿ ಯಾತಕೆ
ಕದ್ದು ಹೊಟ್ಟೆ ಹೊರೆವವಗೆ ಸಿದ್ಧ ಶೀಲ ವೃತ್ತಿ ಯಾತಕೆ
ಮಧ್ವ ಮತವ ಬಿಟ್ಟಿತರ ಪದ್ಧತ್ಯಾತಕೆ ೪

ಕಂಡ ನಾರೇರಿಚ್ಛೈಸುವ ಲೆಂಡಗೆ ಪುರಾಣವ್ಯಾಕೆ
ಭಂಡು ಮಾತಿನ ಕವಿತ್ವ ಪಾಂಡಿತ್ಯಾತಕೆ
ಕುಂಡಲಿ ಪ್ರಸನ್ವೆಂಕಟ ಮಂಡಲೇಶನ ಶ್ರೀಪಾದ
ಪುಂಡರೀಕ ಬಿಟ್ಟವನ ವಿತಂಡವ್ಯಾತಕೆ ೫

೩೩೧

ಉಗಾಭೋಗ

ಮಲಯ ಗಿರಿಯಲಿಪ್ಪ ಬೊಬ್ಬುಳಿ ಬಾವನ್ನದ
ಬಳಿಯಿದ್ದೇನದು ಬಾವನ್ನವಹುದೆ
ಕಲಿಮನದವ ವೇದ ವೇದಾಂತ ಓದಲು
ಇಳೆಯಲ್ಲವನು ವೈಷ್ಣವರ ಬೆರೆವನೆ
ಜಲನಿಧಿಶಯನ ಪ್ರಸನ್ನವೆಂಕಟ ಕೃಷ್ಣ
ಅಲವಬೋಧನವರಿಗೊಲಿವನು ಕಾಣಿರೊ

೩೩೨

ಮಾಡು ಸಾಧು ಸೇವೆಯ ಬೇಡು ಅಭಯ
ಕೂಡು ನಂತರ ನೀ ನಿರಂತರೀಡಾಡಿದರೆ
ಅಂಜಿ ಓಡದೆ ಆತ್ಮ ಪ.

ಸಂತರೊಳು ಕುತರ್ಕ ಕಲ್ಪಾಂತ ರೌರವ ನರ್ಕ
ಸಂತರೊಳು ಉಗ್ರ ಮನಸು ಆದ್ಯಂತ ಪಾಪದ ಬೆಳಸು
ಸಂತರ ಕೂಡ ದುಶ್ಚಿತ್ತ ದೇಹಾಂತ ಪ್ರಾಯಶ್ಚಿತ್ತ
ಸಂತರಾಧೀನನಾದರೆ ಹರಿ ತಾ ಸಂತೋಷದಿಂದ ಒಲಿವನು ನಿತ್ಯ ೧

ತೀರ್ಥ ಸ್ನಾನವು ಹಲವು ಕಾಲೋತ್ತರಕಾಹುದು ಫಲವು
ಮೂರ್ತಿ ಔಪಾಸನವು ಧರ್ಮಾರ್ಥ ಮುಂದಣ ಅನುವು
ಅರ್ಥಗಳ ವಿತರಣವು ಶೂನ್ಯಾರ್ಥ ಸಮಯಕೆ ದಣಿವು
ಸಾರ್ಥಕವು ಸಧ್ಯ ಸಾಧುನಿಕರದ ಗಾತ್ರ ಕ್ಷೇತ್ರಯಾತ್ರೆಯ ಬಿಡದೆ ೨

ಸಾಧುಸಂಗವಗಿಲ್ಲ ಮುಕ್ತಿಯ ಹಾದಿ ಅವನಿಂಗಿಲ್ಲ
ಸಾಧುರ ದಾವ ಹಳಿವ ತಮಸಕ್ಕೈದುವುದು ಅವನ ಕುಲವು
ಸಾಧುಕೃಪೆ ದಾವಗುಂಟು ಎಲ್ಲಿ ಹೋದರಾನಂದದ ಗಂಟು
ಸಾಧುಪ್ರಿಯ ಪ್ರಸನ್ವೆಂಕಟರಮಣನು ಸಾಧುರ ಮೆಚ್ಚಿದವರಿಗೆ
ಮೆಚ್ಚುವನು ೩

೩೩೩

ಮುಂದೋರುವವನು ಮುರಾರಿ
ಎಂದೆಂದು ಕುಜನಕೆ ದೂರನು ಶೌರಿ ಪ.

ಘನ ಭಾಗವತ ಶ್ರವಣವ ಮಾಳ್ಪರಿಗೆ
ವನಜನಾಭನ ಸಂಕೀರ್ತನೆ ಕಾಮೇಷ್ಟರಿಗೆ
ಮುನಿವಂದ್ಯ ಕೃಷ್ಣನ ಮನಸಲಿ ಮರಿಯದೆ
ಗುಣ ಕರ್ಮ ನಾಮ ಸ್ಮರಣೆಯಲಿಹರಿಗೆ ೧

ಶ್ರೀ ವಾಸುದೇವಾಂಘ್ರಿ ಸೇವಾಸಕ್ತರಿಗೆ
ಶ್ರೀವರನರ್ಚನೆ ಸದ್ಭಾವಯುಕ್ತರಿಗೆ
ಸಾವಿರಭಿದಾನದ ದೇವದೇವಗೆ ಸರ್ವ
ದಾ ವಂದಿಸುವ ವ್ಯಾಸಂಗವಿಡಿದರಿಗೆ ೨

ಶೇಷಶಯನನ ಸದ್ದಾಸರಾದರಿಗೆ
ದೋಷದೂರನ ಸಖರಹ ಸಜ್ಜೀವರಿಗೆ
ಪ್ರಸನ್ವೆಂಕಟವಾಸಗೆ ತನ್ನನ
ರ್ಪಿಸಿ ಮುಕುತಿ ಮನೆಯಾಸೆವಂತರಿಗೆ ೩

೩೩೪

ಯಾತಕೆಲೆ ಮನವೆ ನೀ ಭೀತಿಗೊಳುವೆ ಶ್ರೀ
ನಾಥ ಜಗತಾತ ಹೆತ್ತಾತನಿರೆ ಅನವರತ ಪ

ಒಡಲೊಳಿರೆ ನವಮಾಸ ಪಡಿಯ ನಡೆಸಿದರಾರು
ದೃಢಕುಚದಿ ಪಾಲ್ದುಂಬಿ ಕೊಡುವರಾರು
ನಡೆನುಡಿಗಲಿಸಿ ನಿದ್ರೆವಿಡಿಸಿ ಎಚ್ಚರಿಪರಾರು
ಕಡೆಮೊದಲಿನೊಡೆಯನಿರಲಡಿಗಡಿಗೆ ಬರಿದೆ ೧

ಅಪ್ರಸಿದ್ಧಾತ್ಮನಿಗೆ ವಿಪ್ರಕುಲವಿತ್ತರಾರ್
ಶ್ರೀಪ್ರಜ್ಞಮತದಿ ನೆಲೆಸಿಪ್ಪರಾರು
ಅಪ್ರಬುದ್ಧರಿಗೆ ಮತಿಕ್ಷಿಪ್ರ ಬೋಧಿಪನು ಮು
ಖ್ಯಪ್ರಾಣವರದ ಸುಪ್ರಧಾನನಿರೆ ನಿರುತ ೨

ಧರೆಗೆ ಮಳೆಗರೆದು ಸಸಿಗಳನು ಬೆಳೆಸಿದರಾರು
ಗಿರಿವಿಪಿನ ಖಗಮೃಗದ ಹೊರುವರಾರು
ಪರಮ ಕಾರಣಿಕ ನಮ್ಮ ಪ್ರಸನ್ವೆಂಕಟನೆ ಜಗ
ದರಸೆಂದು ಶ್ರುತಿ ಸ್ಮೃತಿಯೊಳಿಹುದರಿದು ಮರೆದು ೩

೩೩೫

ಯೋಗವೆಂದರೆ ದಾವುದು ಮಾನಿಸಗೆ
ಯೋಗವೆಂದರೆ ದಾವುದು
ನಾಗಶಯನನ ನಾಮ ಕೂಗುವುದೆ ಮಹಾಯೋಗ ಪ.

ಪೂಸರಳನ ಬಲೆಗೆ ಸಿಲುಕಿ ದೃಢ
ಆಸನ ಬಲಿದಹಗೆ
ಹಾಸ್ಯವದನೆಯರ ಲೇಶ ಹಾರೈಸದೆ
ದಾಸಾಗಿ ಹರಿಯ ಸದಾಧ್ಯಾಸವೆ ಮಹಾಯೋಗ ೧

ವಾಗಾದಿಂದ್ರಿಯ ಕಟ್ಟದೆ ಕುಂಭಕವೆಂದು
ಮೂಗಿನುಸಿರ ಕಟ್ಟಿದ
ಭೋಗ ಬಯಸದೆ ತಾನಾಗಿ ಬಂದದನುಂಡು
ಲೋಗರ ಹಣ ಹೆಣ್ಣಿನ ತ್ಯಾಗವೆ ಮಹಾಯೋಗ ೨

ಭಾವಶುದ್ಧಿಯ ಮಾಡದೆ ಯೋಗ ಮಾರ್ಗದ
ಠಾವ ಸಿದ್ಧವ ಮಾಡಿದ
ದೇವ ಪ್ರಸನ್ವೆಂಕಟವರದನ ಸ
ದ್ಭಾವುಕರ ಪಾದಾಬ್ಜಸೇವೆಯೆ ಮಹಾಯೋಗ ೩

೩೩೬

ರಸಿಕರವರ ಪ್ರಿಯರಸ ಕಾವನು ಭಕ್ತಿ
ಕುಶಲನಿಗಿಹಪರಕುಶಲಾಘ ದೂರ ಪ.

ಪಥ ಮನೆ ವನದಿ ಶ್ರೀಪತಿ ಮಹಿಮೆ ಘೋಷಿಸಿ
ಪ್ರಥಮ ಯಾಮದಿ ಹರಿಪ್ರತಿ ಮುದವೇರಿ
ಸ್ತುತಿಸಿ ತಾರತಮ್ಯದ ಸ್ಥಿತಿ ಸನ್ಮತದೊಳಿದ್ದು
ಸತಿ ತನುಜ ಸೌರಂಭ ಸತತ ಹರಿಯದೆಂಬ ೧

ಹಿತಾಹಿತವರಿದು ವಿಹಿತಹೇತು ಬಲಿದು ವಿ
ರತಿ ಭಕ್ತಿ ಜ್ಞಾನ ನಿರುತ ಭೇದ ನಿ
ರತನಾಗಿ ಕುಜನವಾರತೆಯ ಕೇಳದಿರುವ
ಚತುರರ ಸುಕೃತ ಸಂಚಿತದಿರವೇ ಲೇಸು ೨

ವಿಷಮೀರೈದಿಂದ್ರಿಯ ವಶಮಾಡಿ ಮನೋರಿಯೋ
ಲ್ಲುಸುಖಾವಿಡಿದುಕೊಂಬಾ ಸುಸುಖಾವುಂಬ
ಭೈಷಜ್ಯ ಭವರೋಗ ಭೇಷಜನೆನಿಪ ಜಗ
ಪ್ರಸನ್ನ ವೆಂಕಟೇಶಾಂಘ್ರಿ ಸ್ಪಶ್ಯನಾದಾರೋಗ್ಯ ೩

೩೩೭

ರಾಮನೆನ್ನಿ ರಾಮನೆನ್ನಿ
ವ್ಯೋಮಕೇಶಗೆ ದಿವ್ಯನಾಮಾಮೃತವಿತ್ತ ಪ.

ಪಾತಕವನು ಮಾಡಿ ಪಾತಕರೊಡನಾಡಿ
ಸೂತಕಾಗಿ ವಿಪ್ರಘಾತಕಾಗಿ
ಜಾತಿಬಾಹಿರನಾಗಿ ಧಾತುಗೆಟ್ಟವಗೆ ಶ್ರೀ
ಸೀತಾಕಾಂತನ ನಾಮಪೂತಕಾರಣ ೧

ಕದ್ದು ಬಂಗಾರವ ಮೆದ್ದು ಅಭಕ್ಷಣ
ಒದ್ದು ದುರ್ಬಲರ ಸೊಕ್ಕಿದ್ದು ನಿತ್ಯ
ಶ್ರದ್ಧಾವಿಹೀನನಾದ ಮದ್ಯಪ್ರಾಶನಿಯಾದ
ಶುದ್ಧಾತ್ಮಕನಿಗೆ ಶುದ್ಧಕರನು ಮೂಲ ೨

ಪರಪತ್ನಿ ಗಮಿಸಿ ಭೂಸುರವೃತ್ತಿ ಭೇದಿಸಿ
ಪರತಾಪೇಕ್ಷಿಸದೆ ಪಾಮರನಾಗಿಹ
ನರಗೆ ಪಶ್ಚಾತ್ತಾಪ ಬರಿಸುವ ಪ್ರಸನ್ವೆಂಕ
ಟರಸನೆ ತುದಿಯಲಿ ಹೊರೆವ ಬಿಡದೆ ರಘು ೩

೩೩೮

ರೂಹ ಹೇಳುವೆ ಕೃಷ್ಣನ ಕೃಪೆಯಲ್ಲಿ
ನವೀನ ಜನನ ಮೃತ್ಯು ಭಯವೆಲ್ಲಿ ಪ.

ಕುಶತಲ್ಪ ತಂತ್ರಸಾರಾರ್ಚನೆಯೆತ್ತ ಖಳ
ಪ್ರಸರದ ಗೊಂದಣದಾರಿಯೆತ್ತ
ಹೊಸಮಲ್ಲಿಗೆಯ ಹಾರ ಸುರಭ್ಯೆತ್ತ ಮಲ
ಕಶ್ಮಲರತ ಗ್ರಾಮಸೂಕರೆತ್ತ ೧

ಚಕ್ರಪಾಣಿ ಒಲುಮೆ ವಿರತರಿಗುಂಟು ಕರ್ತ
ವಿಕ್ರಮವಾದಶೀಲಗೆ ಮತ್ತ್ಯೆಲ್ಲುಂಟು
ತಕ್ರ ಭಿನ್ನಾದರೆ ಹಾಲ ಹೋಲಲಿಲ್ಲ ಭಕ್ತಿ
ವಕ್ರನೆಂದೆಂದಿಗೆ ಭಾಗವತನಲ್ಲ ೨

ಡಂಬರ ಶ್ರದ್ಧೆಗೆ ಹರಿ ಮೆಚ್ಚಲಿಲ್ಲ ಸಲೆ
ಡೊಂಬ ರಾಷ್ಟ್ರ ತಿರುಗೆ ಭೂ ಪ್ರದಕ್ಷಿಣೆಯಲ್ಲ
ಅಂಬುಜಾಕ್ಷನನ್ನು ನಂಬದವ ಕ್ಷುಲ್ಲ ಗತ
ಅಂಬಕನ ನೋಟ ಬದಿಯ ಧನದಲಿಲ್ಲ ೩

ಇಂದಿರೇಶಮಹಿಮೆ ಮತಿಮಂದಗೇನು ದೀಪ
ಹೊಂದಟ್ಟೆ ಭೋಜನಸುಖ ಶ್ವಾನಗೇನು
ಎಂದೂ ಸಾಧುಸಂಗಸೌಖ್ಯ ಕುಹಕಗಿಲ್ಲ ಕೆಚ್ಚ
ಲೊಂದಿದ ಉಣ್ಣೆಗೆ ಕ್ಷೀರಸ್ವಾದವಿಲ್ಲ ೪

ಪೂರ್ವಕೃತಪುಣ್ಯ ಒದಗದೆಂದಿಗಿಲ್ಲ ಯತಿ
ಸರ್ವಜ್ಞರಾಯನ ಮತ ಸುಲಭವಲ್ಲ
ಉರ್ವಿಯೊಳು ಸಮೀರಮತಸ್ಥರ ಕಾವ ತಂದೆ
ಸರ್ವೇಶ ಪ್ರಸನ್ನವೆಂಕಟಾಧಿದೇವ ೫

೩೩೯

ವಂದಿಸಿದರೆ ವಂದ್ಯರು ಪೂಜಿತರು ಮು
ಕುಂದ ಗೋವಿಂದ ಶ್ರೀಹರಿಯನ್ನು
ಎಂದೆಂದು ಕುಂದದಾನಂದವ್ಯೆದಿಸುವ
ಇಂದಿರೆಯರಸ ಭವಬಂಧಮೋಚಕನ ಪ.

ಹತ್ತಶ್ವಮೇಧಾವಭೃಥಸ್ನಾನ ಮಾಡಲು
ಮರ್ತ್ಯರ್ಗೆ ಪುನರ್ಜನ್ಮಗಳಿಲ್ಲವೊ
ಸತ್ಯಭಾಮಾಧವನಿಗೆ ನಿಷ್ಕಾಮದಿ ನಮಿಸಿ
ಮತ್ತೊಮ್ಮೆ ನಮಿಸೆ ಮುಕ್ತಿಗೆ ಸಾಧನ ೧

ಕೋಟಿಸಹಸ್ರ ತೀರ್ಥಗಳಲಿ ಮಿಂದು
ಕೋಟಿಸಹಸ್ರ ವ್ರತಗಳಾಚರಿಸೆ
ಕೋಟಿ ಭಾಂತಕಗೆ ನಮಿಸಿದ ಫಲಕೆ ಸರಿ ಪಾ
ಸಟಿ ಷೋಡಶಕಳೆಯೊಳೊಂದಲ್ಲ ೨

ಹೇಳೆನೆ ಇಂದಾದರು ನಮಿಸಿ ಶ್ರೀ
ಲೋಲ ಶಾರ್ಙ್ಗಪಾಣಿಯನ
ಸಾಲು ಜನ್ಮದಘವ ಹಾಳುಮಾಡಿ ಮುಕ್ತಿ
ಓಲಗಕೆ ಕರೆವ ವೈಷ್ಣವ ಜನರ ೩

ಉರ ಶಿರದೃಷ್ಟಿಲಿ ಮನವಾಚದಲಿ
ಚರಣ ಕರಗಳಲಿ ಜಾನುಗಳಲಿ
ಧರೆಯಲಿ ಅಷ್ಟಾಂಗಪ್ರಣಾಮ ಮಾಳ್ಪರ್ಗೆ
ಹರಿದು ಹೋಗೆ ಪಾಪವರ ಮುಕ್ತಿ ಈವ ೪

ಸರುವಾಂಗವ ಧರೆಗೊಂದಿಸಿ ಭಕುತಿಲಿ
ಹೊರಳಾಡಿ ಭೂಮಿಲಿ ಪರವಶದಿ
ಹರಿಗೆ ನಮಿಸಲು ಮೈಗೊರೆದ ಧೂಳಿಯ ಕಣಾ
ಪರಿಮಿತ ಸಹಸ್ರಾಬ್ದ ಪರಮಾಣ ಪದವಕ್ಕು ೫

ಸಿರಿ ಅಜಭವೇಂದ್ರ ಸುರರು ಮಹಾಮುನಿನಿ
ಕರ ನೃಪ ಮನುಜೋತ್ತಮರೆಲ್ಲ
ಪರಮ ಭಕುತಿಲಿ ನಮಿಸೆ ಹರಿವಶನಾಗುವ
ಹರಿಜನಕೆ ಮುಕ್ತಿಪಥಕಿದೆ ಪಾಥೇಯ ೬

ಅರ್ಚಿತ ಕೃಷ್ಣನ ನೋಡುತಾನಂದಾಶ್ರು
ಹುಚ್ಚನಂತೆ ನಮಿಸಿ ನಗುತ ಸುರಿಸಿ
ಅಚ್ಯುತಾನಂತ ಸದ್ಗುಣನಿಧಿ ಭಕ್ತಪ್ರಿಯ
ನಿಜ್ಜ ಪ್ರಸನ್ವೆಂಕಟನೆಂದುಚ್ಚರಿಸಿ ೭

೩೪೦

ವಾರಿಜನಾಭನ ಕರುಣವೆ ಸ್ಥಿರ ಸಂ
ಸಾರ್ಯೆರವು ಕೇಳಾತ್ಮ
ಜಾರುತದಾಯು ದೂರದ ಮುಕುತಿಯ
ದಾರಿಯ ಪಾಥೇಯ್ಯೆಲ್ಲಾತ್ಮ ಪ.

ಧರ್ಮದ ಸರಕಿಲ್ಲದವನೆಂದು ಬೇಗ್ಯಮ
ಧರ್ಮ ಭಟರು ಬಂದರಲ್ಲೊ
ಚರ್ಮದ ಮನೆ ಬಿಡಿಸಿದರು ಮುಟ್ಟಲು ನೋವ
ಕರ್ಮಯಾತನೆ ಕೊಟ್ಟರಲ್ಲೊ
ಹರ್ಮ್ಯನಿಕೇತನ ವೃತ್ತಿಕ್ಷೇತ್ರವನು ಅ
ಧರ್ಮಿಗಳಗಲಿಪರಲ್ಲೊ
ಮರ್ಮವರಿತು ತ್ರಾಟಿಸುವಾಗ ಶ್ರೀ ವಿಶ್ವ
ಕರ್ಮನ ಪೂಜೆ ಹೋಯಿತೆಲ್ಲೊ ೧

ಹೆಡಗೈಯ ಕಟ್ಟಿ ಪರಿಘದೊಳು ಬಡಿವಾಗ
ಮಡದಿ ಮಕ್ಕಳ ಸಹಾಯವೆಲ್ಲೊ
ಒಡೆಯ ದಮ್ಮಯ್ಯ ನಮ್ಮಯ್ಯನೆಂದರೆ ಕಾಲ
ಹಿಡಿದರೆ ಕೊಡಹಿದರಲ್ಲೊ
ಸುಡುವ ಮಳಲು ಹುಡಿ ಕಲ್ಮುಳ್ಳೊಳೆಳೆವಾಗ
ಹಿಡದೇಜಿ ಕೊಂಬುಕಾಳೆಲ್ಲೊ
ಪೊಡವಿಲಿ ಬಂದಾಗ ಹರಿಸೇವೆ ಮಾಡದೆ
ಕಡುಹುಂಟಾದರೆ ತೋರದೆಲ್ಲೊ ೨

ಕೀವು ರುಧಿರವಿಟ್ಟ ಕುಂಡದಿ ಮುಣುಗುವಾ
ಗ್ಯಾವಿನ ಮಾತೇನಾಯಿತಣ್ಣ
ಸಾವುತೀನವ್ವಪ್ಪಾ ಮೊರೆಯ ಕೇಳೆಂದರೆ
ಆವಾಗ ಬಾಧೆ ಕಾಣಣ್ಣ
ಆ ವೈವಸ್ವತ ದಂಡ ಕೊಟ್ಟು ಬೊಗಳೆಂಬಾಗ
ಚಾರ್ವಾಕತನವೆಲ್ಲಣ್ಣ
ಆ ವಾಸುದೇವನ ಭಟಸಂಗ ನಿನಗೀ
ಗ ವೈರ ಆಗೆಲ್ಲಿದಣ್ಣ ೩

ನಾಲಿಗೊಣಗಿ ನೀರು ಕೂಳೆಂದು ಅಳುವಾಗ
ಹಾಲ ಶಾಲ್ಯೋದನವೆಲ್ಲೊ
ಮ್ಯಾಲೆ ಮ್ಯಾಲ್ವೈತರಣಿ ಸ್ನಾನವ ಮಾಡುವ
ಕಾಲಕೆ ಅಭ್ಯಂಗನವೆಲ್ಲೊ
ಕಾಲನ ದೂತರ್ಗೆ ಕೊಟ್ಟುಳಿವೆನೆಂದರೆ
ಹೂಳಿದ ಧನ ದೂರಾಯಿತಲ್ಲೊ
ಕಾಲ ಕಾಲಕೆ ದ್ವಿಜಪಂಕ್ತಿಭೋಜನಸುಖ
ವ್ಯಾಳೆ ತಪ್ಪಿತನ್ನವೆಲ್ಲೊ ೪

ಕಷ್ಟಿಸಿ ಬಳಲುವೆ ಹಾಹಾಯೆಂದಳಲುವೆ
ಇಷ್ಟನೆಂಟರು ಹೋದರೆತ್ತ
ಮುಷ್ಟಿ ಕುಠಾರ ಪ್ರಹಾರ ನೋಡು ನಿನ್ನವ
ರಿಷ್ಟತನವು ನಿಂತಿತೆತ್ತ
ಶಿಷ್ಟರ ನೋಡದೆ ಸತ್ಕಾರ ಮಾಡದೆ
ನಿಷ್ಠುರ ನುಡಿದೆ ಪ್ರಮತ್ತ
ಕೃಷ್ಣ ನಮೊ ಎಂದು ಕಡೆಗಾಣಲರಿಯೆ ಎ
ಳ್ಳಷ್ಟು ಪುಣ್ಯವ ಕಾಣೆನೆತ್ತ ೫

ಕಂಗೆಟ್ಟು ತಕ್ರನ್ನೆ ಕಾಸಿ ಸೀಸ್ಯೆರೆವಾಗ
ಅಂಗಣದ ಪಶು ಬಹುದೂರ

ಕೆಂಗೆಂಡಗಂಭವಪ್ಪಿಸುವರು ನಿನ್ನ ಪ
ರಾಂಗನೆ ಭೋಗಿ ಚದುರ
ಅಂಗ ಶೃಂಗಾರದ ಕೊನಬುಗಾರ ನಿನ
ಗ್ಹಿಂಗುವದೆ ಯಮದ್ವಾರ
ಮಂಗಳ ಮಹಿಮ ಮುಕುಂದ ಮುರಾರಿ ಶ್ರೀ
ರಂಗನ ಭಕುತಿವಿದೂರ ೬

ಸುಟ್ಟರೆ ಹಿಡಿಬೂದಿ ಕೆಟ್ಟರೆ ಕ್ರಿಮಿಕಾಯ
ಇಟ್ಟರಿರದು ವಾಯುವಿರದೆ
ಹುಟ್ಟಿ ಸುಜನ್ಮದಿ ಜಾಣರಾಗದೆ ಬುಧ
ರಟ್ಟುವರೆ ದಿವಸ ಬರಿದೆ
ಇಟ್ಟಣಿಸಿದ ಭವಗತ ಸುಖದು:ಖವುಂ
ಡುಟ್ಟು ರಾಮನ ಮನವಿರದೆ
ಕಟ್ಟಕಡೆಲಿ ನರಕವನುಂಬೋದುಚಿತಲ್ಲ
ದಿಟ್ಟನಾಗು ಮಾಯೆಯ ಜರಿದು ೭

ನಿತ್ಯ ನೈಮಿತ್ಯಕಾಮ್ಯಾದಿ ಸತ್ಕರ್ಮವ
ಮತ್ತೆ ತಿಳಿದು ನಡೆ ಆತ್ಮ
ಹತ್ಯವಸತ್ಯ ಅನ್ಯವಧೂಜನಸಖ್ಯ ಪರ
ವಿತ್ತದಂಜಿಕೆ ಇರಲ್ಯಾತ್ಮ
ಕರ್ತ ಮೂರವತಾರಿ ಪೂರ್ಣ ಬೋಧಾಚಾರ್ಯರ
ಭೃತ್ಯನಾಗಿ ಬಾಳೊ ಆತ್ಮ
ಎತ್ತೆತ್ತ ನೋಡಲು ಬೆನ್ನಬಿಡದೆ ಕಾವ
ಪ್ರತ್ಯಕ್ಷನಾಗಿ ಪರಮಾತ್ಮ ೮

ಮಂಗಳಾತ್ಮರಿಗೆ ಅಹರ್ನಿಶಿ ಶ್ರೀವರ
ಅಂಗಜಜನಕನೆಚ್ಚರಿಕೆ
ಸಂಗಡಿಸಿದ ವಿಷಯಂಗಳಿದ್ದರೇನು
ತಂಗಳ ಅನ್ನದೋಕರಿಕೆ

ಹಿಂಗದೆ ವರಸಂಗ ಮಾಡಿದರೊಯಿವರು
ಮಂಗಳಾತ್ಮಕನಿದ್ದ ಪುರಕೆ
ಬಂಗಾರ ಮನೆಯ ಪ್ರಸನ್ವೆಂಕಟೇಶನ
ಡಿಂಗರರಿಗೆ ನರ್ಕಸರ್ಕೆ ೬

೩೪೧

ವೃಥಾ ಭವದಿ ಮರೆದೆ
ರಥಚರಣಧರನ ಸ್ಮೃತಿಯನೆ ಮರೆದೆ ಪ.

ಸತಿ ಸುತರೆನ್ನವರತಿಶಯ ಗೃಹಧನ
ಪತಿಯು ನಾನೆಂಬೊ ಮಮತೆವಿಡಿದು
ರತಿಪತಿಪಿತನಂಘ್ರಿರತಿ ಲೇಶವಿಲ್ಲದೆ
ಸತತ ಯಮಪುರದ ಪಥವನೆ ಪಿಡಿದು ೧

ಅತಿಥಿಗಳೊಲ್ಲದೆ ಯತಿಪೂಜೆಯಿಲ್ಲದೆ
ಪೂತಿ ಮಲಭಾಂಡ ಭರಿತನಾಗಿ
ಚತುರ್ಮುಖನಯ್ಯನ ವ್ರತವ ಬಿಸುಟು ಅನ್ಯ
ಪತಿತ ಮಾರ್ಗವ ಪೊಂದಿ ಹತಭಾಗ್ಯನಾಗಿ ೨

ಮಿತಮನರಹಿತ ದುರ್ಮತಪಂಡಿತನಾಗಿ
ಪ್ರತಿ ಬೊಮ್ಮ ರಕ್ಕಸೋನ್ನತನೆನಿಸಿ
ಅತಿ ಪ್ರಾಜ್ಞ ಶಾಸ್ತ್ರದೇವತೆ ಪ್ರಸನ್ವೆಂಕಟ
ಪತಿಯನೆ ಬಿಟ್ಟನ್ನಿತರವ ಭಜಿಸಿ ೩

೩೪೨

ವ್ಯರ್ಥ ಆಯು ಕಳೆಯಬ್ಯಾಡಿರೊ ಶ್ರೀಹರಿಯ ಸಂ
ಕೀರ್ತನೆಯ ಮರೆಯಬ್ಯಾಡಿರೊ
ಮೃತ್ಯು ಬಾರದಿರದು ಮುನ್ನೆ ಮನೋನೂರುವರ್ಷಕೆ ಪ.

ಹಿಂದು ಹೀನ ಯೋನಿಮುಖದಲಿ ತಾ
ಬಂದು ಬಂದು ಕುಕರ್ಮ ಸವೆಯದಾಯಿತು
ಕಂಡ ಕುಹಕರ ಕೂಡ ಕೊಂಡಮಾತನಾಡಿ ಯಮ
ದಂಡ ತೆರಬ್ಯಾಡಿ ಕೋದಂಡಕರನ ಹೊಗಳಿರೊ ೧

ಬಾಲತ್ವವು ಆಟಕಾಯಿತು ಈ ಯೌವನವು
ಬಾಲೆಯರ ಬ್ಯಾಟಕಾಯಿತು
ಮ್ಯಾಲೆವಾರ್ಧಕ್ಯಕಂಗಬೀಳೆ ಸೊಪ್ಪಾಗಿ ಹೊಲ
ಸಲದೀಗ ಎಚ್ಚರಿಕೆಯಲ್ಲಿ ಹರಿಯ ನೆನೆಯಿರೊ ೨

ಹಗಲು ಹಸಿವೆ ತೃಷೆಗೆ ಪೋಯಿತು ಯಾಮಿನಿಯು
ಮಿಗಲು ಮೀರಿ ಮಧು ಮುಸುಕಿತು
ಸುಗುಣನಾಗಿ ಭವದ ನಂಬಿಕೆಯ ನೀಗಿ ಪ್ರಸನ್ವೆಂಕಟ
ನಗಪತಿಯು ಪಾದಪದ್ಮಯುಗಳವನೆ ಕೊಂಡಾಡಿರೊ ೩

೩೪೩

ಶಾಶ್ವತ ಭಾಗವತರು ನಗರೆ ಮತಿ
ಮಿಶ್ರರ ನೋಡಿ ಕೈ ಹೊಡೆದು ಪ.

ಮಾಧವನಲ್ಲದೆ ಆ ದೈವೀದ್ವೈ
ವಾದಿಗಳ ಹಿರಿಯರು ನಂಬರು
ಆದರವರ ಬಿಟ್ಟರೆ ಈ ಧನಧಾನ್ಯವು
ಹೋದರೆ ಕೆಟ್ಟೆವೆಂಬರ ನೋಡಿ ೧

ಕೃಷ್ಣನೆ ಸುಖದಾಯಕನಿರೆ ಸತಿಯಳು
ಹುಟ್ಟಿದ ಶಿಶುವಿನ ದೆಸೆಯಿಂದ ಎನ್ನ
ಕಷ್ಟವೆ ಹೋಯಿತು ತುಷ್ಟಿಯೊಳಿಹೆನು
ಸೃಷ್ಟಿಗೆ ನಾ ಸುಖಿಯೆಂಬನ ನೋಡಿ ೨

ನಾರಾಯಣ ದಾತಾರನು ವಿಶ್ವಕೆ
ತೋರುತಿರಲು ನರಧನಿಕರನು
ಆರಾಧಿಸಿ ನಾ ಭೂರಿ ಧನಾಢ್ಯನು
ಆರೆನಗೆದುರಿಲ್ಲೆಂಬನ ನೋಡಿ ೩

ಶ್ರೀ ಗುರುವರ ಸುಖಯೋಗಿಯ ಸಂತತಿ
ಯೋಗಿಗಳಂಘ್ರಿಯ ನಂಬಿರದೆ
ಆ ಗುರು ಈ ಗುರುವೇ ಗತಿಯೆನುತಲಿ
ಭೂಗುರುವಾಗಿಹ ರೋಗಿಯ ನೋಡಿ ೪

ಬೂಟಕ ತೋಟಕ ಭಕುತಿಗೆ ದ್ವಾದಶ
ಗೂಟಬರೆಗೆ ಬುಧರೊಪ್ಪುವರೆ ಜಗ
ನ್ನಾಟಕ ಪ್ರಸನ್ವೆಂಕಟೇಶನ ಗುಣಗಣ
ಭಟರೆನಿಪ ವೈಷ್ಣವರಹ ಸಜ್ಜನ ೫

೩೪೪

ಶ್ರೀ ರಮಣನ ಪಾದಸೇವನ ಮಾಡಿ ಬುಧರು ಪ.

ಈರಮತದವರನುದಿನ ಅ.ಪ.

ಮಹಾಲಕುಮಿ ಪಾದ ಸರೋ
ರುಹದ್ವಯವ ತೋಳಲಪ್ಪಿ
ಸ್ನೇಹವಾರ್ಧಿಯಲ್ಲಿ ಮುಳುಗಿ
ಗಹನದಿ ಭಜಿಸುತಲಿಪ್ಪ ೧

ವಿಧಿಯು ನೈಜ ಭುಕ್ತಿ ಭರಿತ
ಹೃದಯ ಸರೋವರದಲ್ಲಿಟ್ಟು
ಪದಸರೋಜಾವಧಿ ಇಲ್ಲದೆ
ಮುದದಿ ಭಜಿಸಿ ಸುಖಿಸುತಿಪ್ಪ ೨

ಮತ್ತೆ ತನ್ನ ಭಕ್ತಿಯಲ್ಲಿ
ಸತ್ವದಾಬ್ಜಗಳನು ತೊಳೆದು
ಸತ್ತಿಪಥದ ಗಾಮಿನಿಯಳು
ಪೊತ್ತು ಪೂಜೆ ಮಾಡುತಿಪ್ಪ ೩

ಸಾಲಿಗ್ರಾಮವಾಗಿ ಭವನ
ಮೌಳಿತೀರ್ಥದಲ್ಲಿ ತೋಯಿಸಿ
ಮೇಲೆರಡೇಳ್ಜಗಗಳಘವ
ಪಾಳುಮಾಡಿ ಪೂಜೆಗೊಂಬ ೪

ಮುಕ್ತರಿಗೆ ವ್ಯಕ್ತಪಾದ
ಶ್ರೀಕರ ಪ್ರಸನ್ವೆಂಕಟವಲ್ಲಭ
ಸುಖಮುನೀಶಗೊಶನಾಗಿಪ್ಪ ೫

೩೪೫

ಶ್ರೀ ವಿಷ್ಣುಮಹಿಮೆ ಸಂಕೀರ್ತನೆ ಸರ್ವ
ದಾ ವಿಸ್ಮೃತಿಯ ನೀಗಿ ಮಾಡಿ ವೈಷ್ಣವರು ಪ.

ಪುಣ್ಯಮಾರ್ಗವನರಿಯದ ಮೂಢರಿಗೆ
ಉನ್ನತಕುಟಿಲ ಪಾಮರ ಮನುಜರಿಗೆ
ಘನ್ನ ಸಾಧನವಿದೆ ಮತ್ತೊಂದು ಕಾಣೆ
ಪುಣ್ಯಶ್ಲೋಕನ ವಾರ್ತೆ ಕೀರ್ತನೆಯ ಪಠನೆ ೧

ಜನ್ಮ ಮರಣವಿಲ್ಲ ಅವ ಜೀವನ್ಮುಕ್ತ
ಧನ್ಯ ವಿಶುದ್ಧಾತ್ಮ ನಿಜ ಹರಿಭಕ್ತ
ಚಿನ್ಮಯಾಚ್ಯುತನ ಚಾರಿತ್ರ್ಯವಿಸ್ತರವ
ವರ್ಣವರ್ಣಂಗಳಿಂದೆ ಪಾಡಿ ನಲಿಯುತ ೨

ಧರ್ಮ ಸುಮಾರ್ಗವರ್ಜಿತ ಕಲಿಯುಗದಿ
ನಿರ್ಮಲಮನ ಹೊಂದಲೀಸದ ಭವದಿ

ಧರ್ಮಪ್ರಭು ಶ್ರೀ ಹರಿಗುಣಕೀರ್ತನೆ
ಉಮ್ಮಯದಲಿ ಮಾಡುವುದು ಹರಿಪ್ರಾರ್ಥನೆ ೩

ನಿರುತ ವಿಶುದ್ಧಾಂತರಾತ್ಮ ಶ್ರೀಹರಿಗೆ
ಗುರುಸುಖತೀರ್ಥರ ತೀರ್ಥಜೀವರಿಗೆ
ಹರಿ ಹರಿ ಹರಿ ಎಂದು ಕೂಗಿ ಬಾಳ್ವರಿಗೆ * ೪

ಅಘೋರ ಯಮಮಾರ್ಗ ನರಕ ಶ್ರೀ
ಮದ್ಗರುಡಧ್ವಜ ನಾರಾಯಣಾಪವರ್ಗ
ರಾಮ ರಾಮ ರಾಮ ರಾಮ ರಾಮನೆಂಬ
ನಾಮಪಾತಕರಿಗೆ ಸ್ವಪ್ನದಿ ವರ್ಜ್ಯ ೫

ಹೃದಯದಿ ಹರಿರೂಪ ಮುಖದಿ ಸದ್ಗಾನ
ಉದರದಿ ನೈವೇದ್ಯ ಶಿರದಿ ನಿರ್ಮಾಲ್ಯ
ಸುದರ್ಶನಶಂಖಾಂಕಿತ ಭುಜದವರಿಗೆ
ಪದ್ಮನಾಭನ ನಾಮಕೀರ್ತನೆ ಕೈವಲ್ಯ ೬

ಶತಕೋಟಿ ರಾಮಾಯಣ ಕೀರ್ತನೆ ಹನುಮಂತ
ಯತಿ ಶುಕಾಚಾರ್ಯ ಭಾಗವತಶಾಸ್ತ್ರ
ಸತತ ನಾರದದೇವ ಮುನಿತತಿ ನೃಪರೆಲ್ಲ
ರತಿಪತಿಪಿತನ ಪೊಗಳಿ ಮುಕ್ತಾಗಿಹರು ೭

ಕಲಿಕಾಲದಲಿ ಕೇಶವಗೆ ಪ್ರಿಯ ಕೀರ್ತನೆ
ಲಲಿತಸಾಧನವೆನಿಪುದೀ ಕೀರ್ತನೆ
ಬಲು ಶ್ರುತಿ ಮಥಿತಾರ್ಥಸಾರವೆ ಕೀರ್ತನೆ
ಹುಲುಮಾನವರಿಗೆ ದೂರವು ಹರಿಕೀರ್ತನೆ ೮

ಭವರೋಗ ಭೇಷಜ ಹರಿನಾಮಕೀರ್ತನೆ
ಭವವಾರ್ಧಿಪೋತ ಭವಾಟವಾಗ್ನಿ

* ಒಂದು ಸಾಲು ಬಿಟ್ಟು ಹೋಗಿದೆ. – ಸಂ

ಭವ ವಿಧಿಕೀರ್ತಿತಪದ ಪ್ರಸನ್ವೆಂಕಟ
ಭವನದಾಸರು ಸವಿದುಂಬಾಮೃತವು ೯

೩೪೬

ಶ್ರೀ ವಿಷ್ಣು ಸ್ಮರಣೆಯಿಂ ಸಾಧು ಸಂಸರ್ಗ
ಶ್ರೀ ವಿಷ್ಣು ಸ್ಮರಣೆಯೆಂಬುದೆ ಅಪವರ್ಗ
ಶ್ರೀ ವಿಷ್ಣು ಸ್ಮರಣೆಲಿ ಸದ್ಬುದ್ಧಿ ದೀರ್ಘ
ಶ್ರೀ ವಿಷ್ಣು ಸ್ಮರಣೆಗೆಚ್ಚರ ಬುಧವರ್ಗ ಪ.

ಶೀತಲವಾಯ್ತು ಹಾಲಾಹಲ ಹರಗೆ
ಮಾತೆ ದ್ರೌಪದಿ ಲಜ್ಜೆ ಕಾಯಿತು ಮರುಗೆ
ಪಾತಕಿ ಅಜಾಮಿಳನ ಪಾಪವು ಕರಗೆ
ಪೂತರಾಗ್ವರು ಸುಜನರು ಒಳಹೊರಗೆ ೧

ಸಿರಿ ಅರ್ಥ ಮಾಡಲಚ್ಚರವಾದ ಸ್ಮರಣೆ
ಪರಸೋದ್ವಾಪರಿಯೆಂಬುವ ಗುಹ್ಯಸ್ಮರಣೆ
ವಿರಿಂಚಿಗೆ ತೃಪ್ತಿಯಾಗದ ನಾಮಸ್ಮರಣೆ
ಉರಗೇಶನ ಜಿಹ್ವೆಗೆ ನಿಲುಕದ ಸ್ಮರಣೆ ೨

ತ್ಯಾಗ ಭೋಗ ಯೋಗ ಛಿದ್ರ ಮುಚ್ಚುವುದು
ಭೂಗಗನಸ್ಥರ ಪುಣ್ಯ ಹೆಚ್ಚುವುದು
ಕೂಗ್ಯಾಡಿ ಕುಣಿವರಾನಂದ ಫಲವಿದು
ಶ್ರೀ ಗಂಗಾಜನಕನ ತಂದು ತೋರುವುದು ೩

ಭೂಪ್ರದಕ್ಷಿಣೆ ತೀರ್ಥಯಾತ್ರೆಗೆ ಮಿಗಿಲು ಅ
ಸಂಪ್ರಜ್ಞಾತಸ್ಥರಿಗೆ ಹರಿಗೋಲು
ಸುಪ್ರಾಪ್ತ ಮುಕ್ತರುಂಬಮೃತ ಕಣಗಳು
ಶ್ರೀ ಪ್ರಾಣನಾಥನ ನಾಮಾವಳಿಗಳು ೪

ಸ್ವಾದನ್ನದೊಟ್ಟಿಲು ಹರಿನಾಮಸ್ಮರಣೆ
ಮಧ್ವಶಾಸ್ತ್ರಜ್ಞರ ವಚನಾಗ್ನಿಗೆ ಅರಣಿ
ಅದ್ವೈತ ಮತಧ್ವಾಂತಕ್ಕುದಿತ ಸತ್ತರಣಿ ಶ್ರೀ
ಮದ್ವಿಷ್ಣು ಪ್ರಸನ್ವೆಂಕಟನ ಸ್ಮರಣೆ ೫

೩೪೭

ಶ್ರೀ ವೆಂಕಟೇಶನ ಬಿಡಬೇಡಿ ಪ.

ಹಲವು ದೈವಕೆ ಹಲ್ಲು ತೆರೆಯದೆ ಹೊಗಳದೆ
ಛಲದೆ ಮನದಣಿಯೆ ಕೊಂಡಾಡಿ ೧

ಸುರಭಿಯ ಬಿಟ್ಟು ಕಂಡಾವಿನ ಬೆಂಬತ್ತಿ
ತಿರುಗದೆ ಕಣ್ಣುದಣಿಯೆ ನೋಡಿ ೨

ಸ್ಥಿರವಲ್ಲ ಮಿಕ್ಕವರ ವರಂಗಳು ಚರಂಗಳು
ಪರಸನ್ನವೆಂಕಟಪತಿಯ ಬೇಡಿ ೩

೩೪೮

ಸಂತರೆ ಭವದೂರರು ಹಿತಕಾರ್ಯರು ಪ.

ಸಂತರ ಸೇವೆ ಶ್ರೀಹರಿ ಸೇವೆ
ಸಂತರ ಮತವೆ ಹರಿಸಮ್ಮತವು
ಸಂತರ ಮತಿಯೆ ಮುಕುತಿಯ ಗತಿಯು
ಸಂತರ ಪಾದ ಚಿಂತನೆಗಾಹ್ಲಾದ ೧

ಸಂತರ ಗಾತ್ರ ಭುವನ ಪವಿತ್ರ
ಸಂತರ ನೋಟ ಪಾಪಗಳೋಟ
ಸಂತರ ವಚನ ಧರ್ಮವಿರಚನ
ಸಂತರ ಸಂಗ ತೋಷತರಂಗ ೨

ಸಂತರಿಂದೈಹಿಕಾಮುಷ್ಮಿಕ ಸೌಖ್ಯ
ಸಂತರ ಅಭಯವಿರಲಾವ ಭವ
ಸಂತರ ಕಂಡವ ನಿಜ ಸುಖ ಕಂಡ
ಸಂತ ವಿಯೋಗ ತಮಸಿನ ಭೋಗ ೩

ಸಂತರ ಖೇದ ವಂಶ ವಿಚ್ಛೇದ
ಸಂತರ ಪ್ರೀತಿ ಶುಭಪದ ಪ್ರಾಪ್ತಿ
ಸಂತರ ವಾರ್ತಾಖಿಳ ಪುರುಷಾರ್ಥ
ಸಂತರ ಮಹಿಮಿ ಹೊಗಳ್ವಾತ ಪ್ರೇಮಿ ೪

ಸಂತರ ಊರೆ ಎನ್ನ ತವರೂರು
ಸಂತರ ಗತಿಗೋತ್ರರು ಎನಗಾಗಿ
ಸಂತರ ಪದವನಪ್ಪಿದರೊಲಿವ
ಸಂತರಿಗರಸ ಪ್ರಸನ್ವೆಂಕಟೇಶ ೫

೩೪೯

ಸಂಸಾರದೊಳು ಸಾರದಾವುದು ಸಾರದಾವುದಯ್ಯ ಸುಖ
ತೀರಥ ಗುರು ಸಾರಿದ ಮತಸೇರಿ ತತ್ವ ವಿಚಾರಿಸದೆ ಪ.

ದಾವ ಕಾಲಕೆ ದಾವ ಧರ್ಮವು
ಈ ವಿಚಾರದಿ ಜೀವಿಸುತ ಮ
ತ್ತಾವ ತರತಮ ಭಾವದಲಿ ರಾ
ಜೀವನೇತ್ರನ ಭಾವಿಸದೆ ೧

ಇಂದಿರಾಧವಗೆಂದು ಆತ್ಮಗೆ
ಹೊಂದಿಸದೆ ಸ್ವಾನಂದ ಬಯಕೆಗೆ
ಇಂದು ನಾಳೆಗೆ ಎಂದು ಅಲಸದೆ
ತಂದೆ ಕೃಷ್ಣಗೆ ವಂದಿಸದೆ ೨

ತನ್ನ ಗುರು ಮತಿ ಸನ್ಮತದಿ ತಾ
ಧನ್ಯನಾಗಿ ಚಿನ್ಮಯ ಪ್ರ
ಸನ್ನವೆಂಕಟ ಎನ್ನ
ಯ್ಯನ ವರ ಪೀಯೂಷವುಣ್ಣದ ೩

೩೫೦

ಸತತ ಕಲ್ಯಾಣ ಅಚ್ಯುತ ಭಟರಿಗೆ
ರತಿಪತಿಪಿತನಂಘ್ರಿರತ ಮಹಾತ್ಮರಿಗೆ ಪ.

ಆಧಿ ವ್ಯಾಧಿಗಳಿಲ್ಲ ಅಶುಭವಾರ್ತೆಗಳಿಲ್ಲ
ಕ್ರೋಧ ನೃಪಭಯವಿಲ್ಲ ಕಾಕುಮತಿ ಇಲ್ಲ
ಖೇದ ಮನಕಿಲ್ಲ ಖಿನ್ನತೆಯು ಮುಖಕಿಲ್ಲ
ಶ್ರೀಧವನ ನವ ಭಕುತಿಶೀಲ ಜೀವರಿಗೆ ೧

ಅರಿಗಳೆ ಸಖರಕ್ಕು ಅತಿವಿಷ ಅಮೃತವಕ್ಕು
ಉರಗ ಪೂಮಾಲೆಯಕ್ಕು ಉರಿ ತಣ್ಣಗಕ್ಕು
ಶರಧಿ ಗೋಷ್ಪದವಕ್ಕು ಶರಘಾತ ಬೆಂಡಕ್ಕು
ನರಹರಿಯ ನಾಮವನು ನಂಬಿ ತುತಿಪರಿಗೆ ೨

ಪಾಪ ತಾಪಗಳ್ಗೋಟ ಪರಿದುಬಹ ಎಡರ್ಗೋಟ
ಆಪತ್ತುಗಳಿಗೋಟ ಆಲಸ್ಯಕೋಟ
ಕೋಪದಾರಿದ್ರ್ಯಕೋಟ ಕಲಿವ್ಯಸನ ಮದಕೋಟ
ಶ್ರೀ ಪ್ರಸನ್ವೆಂಕಟನ ಭಜಿಪ ಭಕ್ತರಿಗೆ ೩

೩೫೧

ಸತ್ಸಂಗವಿಡಿದು ಸರ್ವೋತ್ತಮನೆ ಗತಿಯೆಂದು
ನೆಚ್ಚಿ ಅರ್ಚಿಸು ಗಡ ಮನುಜ ಪ.

ವಿರಹ ಶಬ್ದಗಳ ಮೈಯ್ಯೊಲಿದೊಲಿದು ಕೇಳಿ ಸತಿ
ಯರ ಧ್ವನಿಗೆ ಮಗುಳೆ ಮೋಹಿಸುತ
ಹರಿಣ ಘಂಟಾರವಕೆ ಬಲೆ ಬೀಳುವಂತಾಗದಿರು
ಹರಿ ಕಥೆಯ ಕೇಳಿ ಬಾಳು ೧

ಅರಿಯದರ್ಭಕನು ಕೆಂಡವ ಮುಟ್ಟಿ ಅಳುವಂತೆ
ಪರಸ್ತ್ರೀಯ ಸರಸಕೊಳಗಾಗಿ
ನರಕದೊಳು ಬೀಳ್ವ ಪಾಮರನೆ ಹರಿಚರಣಾಬ್ಜ
ಸ್ಪರುಶ ದೊರಕುವುದೆಂತೊ ನಿನಗೆ ೨

ದೀಪ ಕಾಶಕೆ ಪತಂಗವು ಕೆಡೆವ ಪರಿಯು ಸ
ಲ್ಲಾಪವು ಪರಸತಿಯರೊಡನೆ
ಶ್ರೀಪತಿಯ ಮೂರುತಿಯ ಕಂಡೆರಗು ಮೂಢಮತಿ
ಪಾಪ ಬುದ್ಧಿಗಳನ್ನು ಜರಿದು ೩

ಶಸ್ತ್ರಧಾರೆಯ ಮಧುವ ಬಯಸುವಂತನ್ಯೋತ್ತ
ಮ ಸ್ತ್ರೀಯರಧರ ಸುಧೆ ಬಯಸಿ
ಚಿತ್ತವ್ಯಸ್ತವ ಮಾಣದೊಮ್ಮೆಗಾದರೆ ಹರಿ
ಭಕ್ತಿರಸವೀಂಟಿ ಸುಖಿಯಾಗು ೪

ವನಜವನವಂ ಬಿಟ್ಟು ಅಳಿವೃಂದ ಚಂಪಕದ
ನನೆಗೈದಿ ಪ್ರಾಣ ಬಿಡುವಂತೆ
ವನಿತೆಯರ ವಾಸನೆಯೆ ನಿರಯದೌತಣವೆಂದು
ವನಜಾಕ್ಷ ನಿರ್ಮಾಲ್ಯ ಸೂಡು ೫

ಇಂತೆಂಬ ಪಂಚಭೌತಿಕದೇಹದಾಸೆಯೊಳು
ಸಂತತದಿ ಲಂಪಟ ನೀನಾಗಿ
ಅಂತ್ಯದೊಳು ಜರೆ ಕಾಡುವಾಗ ಕಫ ವಾತವೆ
ಮುಂತಾದ ವ್ಯಥೆ ಬೆನ್ನ ಬಿಡವು ೬

ಭಸ್ಮಕ್ರಿಮಿಕೀಟವಾಗಿ ಪೋಪ ಕಾಯಕೆ ನಂಬಿ
ವಿಸ್ಮರಣೆ ಬೇಡ ಹರಿಪದಕೆ
ಕಶ್ಮಲಾನ್ವಿತವಾದ ಯೋನಿಗಳ ಬರವರಿತು
ವಿಸ್ಮರಣೆ ಬೇಡ ಹರಿಪದಕೆ ೭

ಬಲ್ಲಿದರ ಸಿರಿಯ ಸೈರಿಸಲಾರೆನೆಂದೆಂಬ
ಕ್ಷುಲ್ಲಕರ ನುಡಿಯನಾಡದಿರು
ಎಲ್ಲಿ ಭಾಗವತರ ನಿಕೇತನಾಜ್ಞೆಯ ಕೇಳೆ
ಅಲ್ಲಿ ಮಧುಕರ ವೃತ್ತಿ ತಾಳು ೮

ಹರಿದಾಸರ ವಿಲಾಸವೆ ಎನ್ನ ಸಿರಿಯೆಂದು
ಹರಿದಾಸರಡಿಗೆ ಮಗುಳೆರಗಿ
ಹರಿದಾಡುವ ಮನಕೆ ಸೆರಯಿಕ್ಕಿ ಹರಿಯನೆ ನೆನೆದು
ಹರುಷ ಪುಳಕಿತನಾಗಿ ಬಾಳು ೯

ದಶಇಂದ್ರಿಯಂಗಳಿಗೆ ವಶವಾಗದಿರು ಏಕಾ
ದಶಿ ವ್ರತಕೆ ವಿಮುಖವಾಗದಿರು
ದಶಶಿರಾರಿಯ ನಾಮದಶನವೆ ಭುಂಜಿಸು
ದಿಶೆಯರಿತೂ ಕಾಣನಾಗದಿರು ೧೦

ಪದ್ಮನಾಭನ ಪಾದಪದ್ಮವೆ ಗತಿಯೆಂದು
ಪದ್ಮಜನ ಪದಕೆ ಪೋಗುವನ
ಪದ್ಧತಿಯವಿಡಿದು ವರ ಪದ್ಮಪತಿ ವಾಸ ತ್ರೈ
ಸದ್ಮನಿಗೆ ಉದ್ಯೋಗ ಮಾಡು ೧೧

ಕಡು ಬಂಧುಬಳಗ ಸತಿಸುತರುಂಟು ವೃತ್ತಿಯೊಳು
ಕಡಿಮಿಲ್ಲವೆಂಬ ಪಾಶವನು
ಕಡಿದು ಕಡಲೊಡೆಯನೆ ಸಲಹೆಂದು ಗರ್ಜಿಸಲು
ಕಡೆಹಾಯಿಸಬಲ್ಲದಿದು ನಿನಗೆ ೧೨

ಆವಾಗೆ ಜಗಕೆ ಸರ್ವೋತ್ತಮನೆ ಹರಿಯೆಂದು
ಜೀವೋತ್ತಮನೆ ವಾಯುವೆಂದು
ಭಾವಶುದ್ಧಿಗಳಿಂದ ಬಯಲು ಡಂಬಕ ಬಿಟ್ಟು
ಜೀವಿಸಲು ಸ್ವರೂಪ ಸುಖವಾಹುದು ೧೩

ವರ ಊರ್ಧ್ವಪುಂಡ್ರ ಹರಿ ಮುದ್ರೆಯನಲಂಕರಿಸು
ಶಿರಿ ತುಲಸಿ ಪದ್ಮಸರ ಧರಿಸು
ಸ್ಮರನ ಶರಕಂಜದರಿಯಾರುವರ್ಗವನೊದೆದು
ಹರಿದು ಬಹ ದುರಿತಗಳ ಸದೆದು ೧೪

ಏಸು ಜನ್ಮದಿ ಬಂದು ನೊಂದೆ ಭವಾಟವಿಯೊಳು
ಮೋಸ ಹೋಗದಿರಿನ್ನು ತಿಳಿದು
ಬೇಸರದೆ ಉರಗಾದ್ರಿವರದ ಪ್ರಸನ್ವೆಂಕ
ಟೇಶನಂಘ್ರಿಯ ಬಿಡದೆ ಭಜಿಸು ೧೫

೩೫೨

ಸರಿಸರಿದೋಡುತಿವೆ ಲವ ತ್ರುಟಿಗಳು
ತಿರುಗದಲಿಟ್ಟಡಿಯ
ಹರಿಗುರು ಪ್ರೀತಿಯ ದೊರಕಿಸು ಪ್ರಾಣಿ
ಕಿರಿಯರಲ್ಲ್ಯಮನವರು ಪ್ರಾಣಿ ಪ.

ಪರದಾರ ಪರಸಿರಿ ಪರನಿಂದೆ ನಿರುತದಿ
ಚಿರರತಿ ಬೆರತ್ಯಲ್ಲೊ
ಪರಉಪಕಾರ ದಾರಿಯರಿಯದೆ ಬರಿ ಒಣ
ಗರುವಿನಲಿರುವ್ಯಲ್ಲೊ
ನರಹರಿ ಚರಣವಾದರಿಸದೆ ಸ್ಮರಿಸದೆ
ನರರನುಸರಿಪ್ಯಲ್ಲೊ
ಶರೀರ ಸಿಂಗರಿಸಿ ಸತ್ಕಾರ್ಯಬಾಹಿರನಾಗಿ
ನಿರಯಕೆ ಗುರಿಯಾದ್ಯಲ್ಲೊ ಪ್ರಾಣಿ ೧

ಸುಖಿಗಳ ಕಕುಲತೆಗಖಿಳ ಸಾಧಕನಾದೆ
ಭಕುತಿಗಳಿಕೆ ತೊರೆದು
ಬಕವೃತ್ತಿಯ ಕಲಿತು ಮುಖವ ಮುಸುಕಿದೆ ವಿ
ರಕ್ತಿ ಸರಕುದೋರ್ಲೈ
ಲೋಕದ ಮೋಹಕ ಜ್ಞಾನಾಧಿಕನಾದೆ ಅಕಳಂಕ
ಸುಖತೀರ್ಥ ವಾಕುದೋರ್ಲೈ
ಸಕಲಕಲೆ ಕಲಿತು ಸ್ತ್ರೀಕದಂಬ ಸಖನಾದೆ
ಮುಕುತಿ ಹೊಂದಿಕೆ ತೋರ್ಲೈ ಪ್ರಾಣಿ ೨

ಅಶನ ದುರ್ವ್ಯಸನಕೆ ನಿಶಿದಿನ ವಶನಾದೆ
ಶ್ರೀಶ ಭೃತ್ಯೆ ನಿಸಿಕೊಳ್ಳೊ
ಹುಸಿ ಉಪದೇಶಧ್ಯಾತ್ಮ ವೇಷದೊಳು ಘಾಸಿಯಾದೆ
ದಶವ ವರಿಸಿಕೊಳ್ಳೈ
ವಿಷಯ ಬಯಸಿ ವೃಥ ಮಸಿವರ್ಣನಿಸದೆ ನೀ
ನ್ಯಶಸ ಕೂಡಿಸಿಕೊಳ್ಳೈ
ಹಸಿ ತೃಷೆ ಗಸಣೆಗೆ ಬೇಸರದೆ ಪ್ರಸನ್ವೆಂಕ
ಟೇಶನ ಒಲಿಸಿಕೊಳ್ಳೈ ಪ್ರಾಣಿ ೩

೩೫೩

ಉಗಾಭೋಗ

ಸಲೆ ಸಲ್ಲನವ ಸಲೆ ಸಲ್ಲ
ಬಲಿಮದಹೃತ ನಿನ್ನೊಲುಮೆಯರೊಳ್ಳಳ ಸಲೆ ಸಲ್ಲ
ಹೊಂಬಾಳೆಂದೊಡಲಿಂಬುಗೊಡಲು ಬಲು
ಸಂಭ್ರಮವಕ್ಕುದೆ ಲಕುಮೀಶ
ನಂಬಿಗೆ ಇಲ್ಲದಗಿಂಬಿಲ್ಲೆಂದಿಗೆ
ಡಂಬರ ವ್ರತ ವೃಥಾ ಲಕುಮೀಶ
ಕುಂಭಿನಿಗುಬ್ಬಸನೆಂಬರು ಹರಿಪಾ

ದಾಂಬುಜವಿಮುಖಗೆ ಲಕುಮೀಶ
ಶಂಭು ಪ್ರಸನ್ವೆಂಕಟಾಂಬುಧಿಶಾಯಿ ನಿ
ನ್ನ್ಹಂಬಲವಿಲ್ಲದ ಕಾಕನರಂ ಸಲೆ ಸಲ್ಲ ೧

೩೫೪

ಸಿರಿಸೊಕ್ಕಿ ಮರೆಯದೆ ಮುರವೈರಿಯ
ಮರೆಹೋಗು ಮೊರೆಯಿಡು ಮರೆಯದೆ ಮನವೆ ಪ.

ಶರೀರವು ಸೆರೆಮನೆ ಸರಿಕಾಣ ಜೀವಕ್ಕೆ
ಸಿರಿ ಪಂಚಶರನವಸರಕೆ ಮೆಚ್ಚಿ
ಸಿರಿಪತಿ ಶರಣಾನುಸರಣೆ ಭಕುತಿಜ್ಞಾನ
ಸರಕಿಲ್ಲ ಸರಿಯಿತಾಯುಷ್ಯಿರವು ವ್ಯರ್ಥಾಯಿತು ೧

ಸತಿಸ್ನೇಹ ಸುತಮೋಹಾಶ್ರಿತ ಜನರನು ಬೇಡಿ
ಸ್ಯಾತನೆಯ ಸುತ್ತಿಕೊಂಡು ಶಿಥಿಲಿಪಾಗ
ಸತಿ ಇಲ್ಲ ಸುತರಿಲ್ಲಾಶ್ರಿತ ಸಹಾಯವಿಲ್ಲ ವೈವ
ಸ್ವತ ಭೃತ್ಯಶತಕೆ ಈಷತ್ತೂ ಕೃಪೆಯಿಲ್ಲ ೨

ಪುಸಿನುಡಿ ಪಿಸುಣರ ಪೆಸರಿಸದಲೆ ನಿತ್ಯ
ಪ್ರಸಾದರ ಪ್ರಸಾದವ ಪ್ರಸನ್ನೀಕರಿಸೆ
ಪೊಸತಾಪೋಪಶಮನ ಪ್ರಸನ್ನವೆಂಕಟಪತಿಯ
ಪ್ರಸಿದ್ಧರ ಪ್ರಸರದ ಪ್ರಸಂಗದೆ ಮುಕುತಿ ೩

೩೫೫

ಸುಕಾಲಕೆ ಧರ್ಮವ ಮಾಡುವುದೆ ಲೇಸು
ದುಷ್ಕಾಲಕೆ ಮಾಡಗೊಡದಲ್ಪಾಯು ಪ.

ಯೌವನವೆಂಬ ಸುಕಾಲಕೆ ಸುರಮುನಿ
ಸೇವ್ಯನ ಭಾಗವತರ ಮೆಚ್ಚಿಪ

ದಿವ್ಯಜ್ಞಾನ ಭಕ್ತಿ ವೈರಾಗ್ಯವಿರಬೇಕು
ಹವ್ಯಾಸ ನಡೆಯದು ಮುಪ್ಪು ದುಷ್ಕಾಲ ೧

ಧನದಾಗಮದ ಸುಕಾಲಕೆ ಸತ್ಪಾತ್ರ
ರನು ಕರೆದರ್ಚಿಸಿ ಉಣಿಸಿ ಕೃಷ್ಣಾ
ರ್ಪಣ ಬುದ್ಧಿಯಿಂದ ಸರ್ವಸ್ವನೊಪ್ಪಿಸಬೇಕು
ತನಗಿಲ್ಲದಾಗೆ ದಾರಿದ್ರ್ಯ ದುಷ್ಕಾಲ ೨

ವೃತ್ತಿಕ್ಷೇತ್ರಿದ್ದ ಸುಕಾಲಕೆ ಶ್ರೀ ಮಧ್ವ
ಶಾಸ್ತ್ರ ವ್ಯಾಖ್ಯಾತರಿಗಿತ್ತು ಜನ್ಮ
ಸಾರ್ಥಕ ಮಾಡಿ ಸಂತೋಷದಲ್ಲಿರಬೇಕು
ತಾ ಸ್ಥಾನ ಭ್ರಷ್ಟನಾಗಿಹುದೆ ದುಷ್ಕಾಲ ೩

ಸಂಸಾರಾವಸ್ಥೆಯವರಿಗೀ ಸುಕಾಲಕೆ
ಹಂಸವಾಹನ ಪಿತನಂಘ್ರಿ ಪದುಮ
ಪಾಂಸುಲಭ್ಯವು ಕೇಚಿತ್ಕಾಲಕೆ ಹರಿಯಲಿ
ಸಂಶಯ ಭಕ್ತಿಯವನಿಗೆ ದುಷ್ಕಾಲ ೪

ಮುಕ್ತ ಮಹಿಮಗೆ ಜ್ಞಾನವೆ ದ್ರವ್ಯ ವಿಷಯವಿ
ರಕ್ತಿಯೆ ಭಾಗ್ಯ ವಿಜಯ
ಭಕ್ತವತ್ಸಲ ಪ್ರಸನ್ವೆಂಕಟೇಶನ ಸೇವಾ
ಸಕ್ತಿಲ್ಲದವಗಾವಕಾಲ ದುಷ್ಕಾಲ ೫

೩೫೬

ಸುಳಾದಿ

ಧ್ರುವತಾಳ

ಸುಜನರಾವನ ಮನೆಯಲ್ಲುಂಡು ದಣಿದರೆ
ಅಜನಜನಕನೇವೆ ತೃಪುತನಾದನು ಗಡ

ಅಜನಜನಕ ತೃಪುತನಾದಡೆ ತಡಿಯದೆ
ತ್ರಿಜಗಜ್ಜೀವರುಂಡಂತಾಯಿತು ನೋಡಿರೊ
ಸುಜನರಿಂದುರು ವಿಷಯದ ನಿವೃತ್ತಿ
ಸುಜನ ಸಂಗವೆ ಭವಾಂಬುಧಿಗೆ ಪ್ಲವ
ಪ್ರಸನ್ನವೆಂಕಟ ಕೃಷ್ಣನೆ ಕರ್ಣಧಾರ ೧

ಮಠ್ಯತಾಳ

ಎಲ್ಲಿ ಹರಿಯ ಪೂಜಕರಿದ್ದ ದೇಶ
ಅಲ್ಲಿ ಗಂಗಾದಿನದಿಗಳ ನಿವಾಸ
ಅಲ್ಲಿ ಸರ್ವಸಂಪದ ಶ್ರೇಯಸಕ್ಕು
ಸಲ್ಲಲಿತ ಪಾತ್ರ ಲಾಭವೆಲ್ಲಕ್ಕು
ಫುಲ್ಲಲೋಚನ ಪ್ರಸನ್ನವೆಂಕಟ ಕೃಷ್ಣನ
ಬಲ್ಲ ಭಾಗ್ಯನಿಧಿಗಳ ಬರವೆಲ್ಲಿ
ಅಲ್ಲಿ ಸರ್ವಸಂಪದ ಶ್ರೇಯಸಕ್ಕು ೨

ರೂಪಕತಾಳ

ಬ್ರಹ್ಮವಿದ್ಯಾ ತಪೋಪೂರ್ಣ ಹೃದಯರಾದ
ಬ್ರಾಹ್ಮರಿದ್ದಲ್ಲಿ ಪರಬ್ರಹ್ಮನಿಪ್ಪನಾಗಿ
ಬೊಮ್ಮನಲ್ಲಿ ವಿಶ್ವವಿಪ್ಪದು ತಪ್ಪದು
ಬ್ರಹ್ಮವಿದ್ಯಾ ತಪೋಪೂರ್ಣ ಹೃದಯರಾದ
ಬೊಮ್ಮನ ಪ್ರತಿಮರು ಬ್ರಹ್ಮಜ್ಞ ಬ್ರಾಹ್ಮರು
ಬ್ರಾಹ್ಮರ ದೈವ ಪ್ರಸನ್ವೆಂಕಟ ಕೃಷ್ಣ
ಬ್ರಹ್ಮವಿದ್ಯಾ ತಪೋಪೂರ್ಣ ಹೃದಯರ ೩

ಪುಷ್ಕರತ್ರಯ ಕುರುಕ್ಷೇತ್ರ ಪುಲ
ಹಾಶ್ರಮ ಗಯಾ ಪ್ರಯಾಗ ಶ್ರೀ
ಪುಷ್ಕರಾಕ್ಷನ ದಾಸರಲ್ಲಿ ನೈ
ಮಿಷಾರಣ್ಯ ಫಲ್ಗುಶೇತು ಕು

ಶಸ್ಥಳ ಮಧುರಾಪುರವು ಪ್ರಭಾ
ಸಕ್ಷೇತ್ರವು ವಾರಣಾಸಿ ಬಿಂದುಸರ ಪಂ
ಪಾಕ್ಷೇತ್ರವು ಶ್ರೀ ಪ್ರಸನ್ನವೆಂಕಟ ಕೃಷ್ಣ ತೀರ್ಥಚರಣ ಶ್ರೀ
ಪುಷ್ಕರಾಕ್ಷನ ದಾಸರಲ್ಲಿ ೬

ಏಕತಾಳ

ನಾರಾಯಣಾಶ್ರಮ ನಂದಾಶ್ರಮ ಸೀ
ತಾರಾಮಾಶ್ರಮ ಸರ್ವಾಶ್ರಮದಲಿ
ನೈರಂತರವಾಸಕೆ ಸಹಸ್ರಾಧಿಕವು
ಶ್ರೀ ರಮಣನ ಶರಣರು ಕೊಂಡರೆ
ಮೇರು ಮಹೇಂದ್ರವು ಮಲಯಾದಿ ಕುಲಗಿರಿ
ಭೂರಿಪುಣ್ಯದ ಧರ್ಮಾದಿ ಫಲಸ್ಥಳ
ಕಾರುಣ್ಯನಿಧಿ ಪ್ರಸನ್ನವೆಂಕಟ ಕೃಷ್ಣನ
ಚಾರು ಚರಣ ಚಾರಕರೆ ಪಾವನರು ೭

ಜತೆ

ಸುಜ್ಞಜನರ ಪ್ರಿಯ ಪ್ರಸನ್ವೆಂಕಟಕೃಷ್ಣ
ಸುಜ್ಞರೆ ಹರಿಪ್ರಿಯರಹರೆಂದೆಂದು

೩೫೭

ಸುಲಭಲ್ಲ ಹರಿಭಕುತಿ ಗುರುಕೃಪೆ ಇಲ್ಲದಿಲ್ಲ ಪ.

ಸಿದ್ಧಿ ಸೊಲ್ಲುವ ಗುರುಗಳುಂಟು ಧರೆಯೊಳಲ್ಲಿ
ಗಲ್ಲಿ ಅವರೆಲ್ಲ ಹಿತಕಾರಿಗಳೆಂದಿಗಲ್ಲ
ಸಲ್ಲ ಕೈವಲ್ಯದ ಮಾರ್ಗವ ಬಲ್ಲ
ಬಲ್ಲಿದ ಭಾರತಿನಲ್ಲಗೆ ಸಲ್ಲಲಿ
ಬಲ್ಮತದಲ್ಲಿರಿರ್ರೈಲ್ಲ ೧

ಭವಸಾಗರ ವೈರಾಗ್ಯದ ನಾವೆಲಿ ನೀಗಿ ಸಾಗಿ ಜ್ಞಾ
ನಾಗರದಾಗಮವ ಕೇಳಿ ವೇಗ
ದೀಗ ನಿರಯಾಗಾರ ತಪ್ಪಿಸದೆ ಶ್ರೀರಂಗ ಬ್ಯಾಗೊ
ದಗ ಸುಜ್ಞನಾಗಿರದೆಮಗೆ ಮ್ಯಾಗೆ ಲೋಗ
ರೋಗರಕಾಗಿ ರಹಿತಧರ್ಮರಾಗಿರೆ ತಾಗೂದು ರೋಗ ೨

ನಾ ನನ್ನದು ಸಂಪದೆಂಬಭಿಮಾನಿ ನೀಚನು
ನೀ ನಿನ್ನದು ಕೃಷ್ಣನೆಂಬ ಮತಿವಂತನೆ ಧನ್ಯ ಬಹು
ಪುಣ್ಯಶ್ಲೋಕರ ವೈಭವವಾಯಿತನ್ಯೋನ್ಯ ನನ
ಗಿನ್ಯಾತರ ನೆಚ್ಚಿಕೃಣ್ಣ ಪ್ರಸನ್ವೆಂಕಟರನ್ನನ
ಪುಣ್ಯದ್ವಾರನ್ನಾಂತ ಸನ್ನುಮತಿಗನ್ಯದೆ ಏನಣ್ಣ ೩

೩೫೮

ಸೊಡ್ಡು ಡಂಬಕ ಅವನಿಭಾರಂಗೆ ಸೊಡ್ಡು
ಸೊಡ್ಡು ಭಕುತಿಹೀನ ಹೆಡ್ಡಂಗೆ ಸೊಡ್ಡು ಪ.

ಶುದ್ಧ ಸಾತ್ವಿಕ ಗುರು ಮಧ್ವಮತವ ಬಿಟ್ಟು
ಬದ್ದಡ್ಡ ದಾರಿಯವಿಡಿದಗೆ ಸೊಡ್ಡು
ಮದ್ಯಘಟಕೆ ಮನವಿಟ್ಟು ಪೀಯೂಷವ
ನೊದ್ದು ಕಳೆದ ಹೊಲೆ ಮಾನಿಸಗೆ ಸೊಡ್ಡು ೧

ಜಗದೆರೆಯನ ಜಗದಾಕಾರ ಸಟೆಯೆಂದು
ಬಗುಳ್ವ ಬಾಯೊಳು ಹೊಡೆ ಮಗುಳೆ ಸೊಡ್ಡು
ಅಘಹರನಾಳಿಗಾಳಾಗಿ ದೊರೆಯೆ ತಾನೆಂ
ಬಗೆ ನಗೆಗೇಡಿನಾ ಮಾತೆ ಸೊಡ್ಡು ೨

ಶ್ರುತಿ ಸ್ಮೃತಿಗಳವಡದನಂತಗುಣಗೆ ದು
ರ್ಮತಿಯಲ್ಲಿ ನಿರ್ಗುಣನೆಂದವಗೆ ಸೊಡ್ಡು

ರತಿಪತಿಪಿತನಲ್ಲದನ್ಯ ಸರ್ವೋತ್ತ
ಮತ್ವಕೆ ನಿರಯದಂಧತಮದ ಸೊಡ್ಡು ೩

ಹರಿಗೆ ಮನು ಭವ ವಿಧಿಯೆಂದೊಕ್ಕಣಿಪಗೆ
ಚಿರಕ್ಲೇಶ ಭವಯಾತ್ರೆಲಂಜು ಸೊಡ್ಡು
ಒರೆದೊರೆದಖಿಳಾಗಮಾರ್ಥವ ತಿಳಿದೇನು
ಹರಿಯೊಪ್ಪದಾ ನರಖರನಿಗೆ ಸೊಡ್ಡು ೪

ಪರಮ ಭಾಗವತರಾಚರಣೆಗೆ ಅಸೂಯಕ್ಕ
ವರ ಗ್ರಂಥಚೋರಗೆ ಶಿರದಿ ಸೊಡ್ಡು
ಸಿರಿಪತಿ ಪ್ರಸನ್ವೆಂಕಟೇಶನ ಭಟರ ಕಂ
ಡ್ಡುರುಷಲ್ಲದವಗೆ ಮೂಗಲಿ ಸುಣ್ಣ ಸೊಡ್ಡು ೫

೩೫೯

ಸ್ಥಿರವಲ್ಲೀ ಕಾಯ ಸ್ಥಿರವಲ್ಲ ಹೀ
ಗರಿವಿದ್ದು ಹರಿಪಾದ ಮರೆವರೆ ಪ್ರಾಣಿ ಪ.

ಅಟ್ಟಡಿಗೆ ಎರವು ಉಟ್ಟುಡುಗೆ ಎರವು
ಇಟ್ಟರೆ ಸಂತತಿ ಸಿರಿ ಎರವು
ಕಟ್ಟೊಡೆದು ಬೆಮರಿಡಿಸಿ ಜವನವರೊಯ್ಯೆ
ಇಟ್ಟಿರುವ ಧಾನ್ಯ ಧನವೆಲ್ಲೊ ಪ್ರಾಣಿ ೧

ಕೃಪಣತೆಯೊಳಗಿನ ನಿಪುಣತೆ ಬಾರದು
ಸ್ವಪನ ಸುಖ ಭೋಗಕೆ ಬಾರದು
ವಿಪಿನದಹನ ಮೃಗದಂತಾಪ್ತರು ಬರರು
ನೃಪನಾರಾಧನೆ ಫಲವು ಸ್ಥಿರವೆಲೊ ಪ್ರಾಣಿ ೨

ಹರಿಕೊಟ್ಟಾಗಲೆ ಧರ್ಮ ದೊರಕಿಸಬೇಕು
ಸರಕಿದ್ದು ತಿರುಕಬುದ್ಧಿಯನು ಬಿಡು

ಅರಿವುಳ್ಳವರ ಕೂಡಿ ಕೋಟೆ ಜತನ ಮಾಡು
ಮರುಗಲಿ ಬೇಡ ಮುಕ್ತಿಗೆ ಬಂತು ಪ್ರಾಣಿ ೩

ಹವಳ ಮುತ್ತಿನಂಥ ಅವಳಿ ಮಕ್ಕಳ ನಂಬಿ
ಕುವಲಯೇಶನ ಪ್ರಿಯಕುಲೇಶನ ಪುರದ
ಲವಲವಿಕೆಯಲಿ ನಿರಯವಾರ್ತೆ ಜರೆವರೆ ತ
ನ್ನವಳೆ ತನಗೆ ಓಕರಿಸುವಳೊ ಪ್ರಾಣಿ ೪

ಫಣಿತಲ್ಪಗೊಪ್ಪಿಸಿ ಹಣ ತೃಣ ಮಾಡದ
ಹೆಣ ತನ್ನ ತಾನೆ ಹೊಗಳಿಕೊಂಡರೆ
ಎನಿತುಕಾಲಕೆ ಮೆಚ್ಚ ಪ್ರಸನ್ವೆಂಕಟಪತಿ
ಘನ ತಪ್ಪ ಕಾಯೆ ತನ್ನವರನು ಪ್ರಾಣಿ ೫

೩೬೦

ಹರಿತಾ ದೂರಿಲ್ಲ ದೂರಿಲ್ಲ
ಒರಟು ಮಾತಿನ ಸರಕೆ ಸಲ್ಲ ಪ.

ಹರಿದಾಸರ ಸಂಗಕೆ ಸರಿ ಇಲ್ಲ ಗುರುಕೃಪೆಯಿರಲಿ ನಿತ್ಯೆಲ್ಲ
ತರತಮವಿರಹಿತಗೆಲ್ಲಿ ಕೈವಲ್ಯವು ಅ.ಪ.

ಧರ್ಮಾರ್ಥಕಾಮ ಮೋಕ್ಷವನಿಚ್ಛಿಸುವ
ನಿರ್ಮಳ ಮತಿಗಳಿಗಾವಾಗ
ಕರ್ಮದ ಮೋಡಿಗೆ ಸಿಲುಕದವನ ಗುಣ
ಕರ್ಮ ನಾಮೋಚ್ಚರಣೆ ಸಾಧನ ೧

ಜ್ಞಾನ ಭಕುತಿ ವೈರಾಗ್ಯ ಹೊಲಬಲಿ
ನಾನಾ ವ್ರತವ ಮಾಡಲು ಬೇಕು
ಹೀನಕೇಳಿಕೆ ಕಾಳಿಕೆಯನುಳಿದು ನಿತ್ಯ
ಶ್ರೀನಿವಾಸನೆ ಗತಿ ಎನ್ನಲು ೨

ಸಂತತ ಅಂಗದಿ ಬಲವಿರುವನಕ
ಕಾಂತ ಪ್ರಸನ್ವೆಂಕಟಪತಿಯ
ಅಂತರಂಗದಿ ಚಿಂತಿಸಿ ಕಳೇವರವನು
ಪ್ರಾಂತಯಾತ್ರೆಗೆ ತ್ಯಜಿಸುವಗೆ ೩

೩೬೧

ಹರಿಯ ನಂಬದ ನರನು ಗೂಡರಿತು ಇರದ ವಾನರನು ಶ್ರೀ
ಹರಿಯ ಹೊಗಳದ ಕವಿಯು ಭೂಸುರರುಣ್ಣಿಸದ ಹವಿಯು ಪ.

ಕರುಣವಿಲ್ಲದ ಅರಸ ಕಾಳೋರಗನಾಡುವ ಸರಸ
ಮಾನಕಿಲ್ಲದ ಮಂತ್ರಿ ತಾ ಗರಹೊಡಕ ಕುಮಂತ್ರಿ ೧

ಮೆಚ್ಚು ನುಂಗುವ ದೊರೆಯು ಮೀವ ಬಚ್ಚಲಿನ ದೊಡ್ಡಹರಿಯು ಕೈ
ಮುಚ್ಚಿ ನೀಡದ ದಾನ ಹುಸಿರಚನೆ ನಿಧಾನ ೨

ಧರುಮಕೆ ಕೂಡದ ಸತಿಯು ಯಮಪುರದಾರಿ ಸಂಗತಿಯು ಬಲು
ಚರಿಗ ಮತ್ಸರಿ ತನಯ ಅವ ಅರಗದ ಅಗ್ಗಣಿಯ ೩

ಮೂರ್ಖನ ಗೆಳೆತನ ಜರ್ಜರಿತ ತಂತುವಿತಾನ ಒಣ
ಕರಕರಿ ಕಲಹದ ನೆರೆಯು ಸಾಸಿರ ತೇಳಗಗಚ್ಚಿದ ಸರಿಯು ೪

ವಂಚಿತವಾದಿ ಬಂಧು ಪ್ರಾಣ ಮುಂಚಿಸುವ ವಿಷಬಿಂದು ಬಹು
ಕಾಂಚನದಾಸೆ ಬಳಗ ಪ್ರಪಂಚದಳತೆ ಕೊಳಗ ೫

ಕೊಡದಿಟ್ಟ ಕೊಡಹಣವು ಸುಡುವ ಅಡವಿಲಿ ಬಿದ್ದ ಹೆಣವು ಬಾಯಿ
ಬಡಕನ ಒಡಂಬಡಿಕೆ ಛಿದ್ರಿಡಿದ ಮಣ್ಣಿನ ಮಡಿಕೆ ೬

ಬ್ರಾಹ್ಮರಿಗುಣಿಸದ ಸದನ ದುರ್ಬೊಮ್ಮ ರಕ್ಕಸನ್ವದನ
ಮದ್ವಮ್ಮಿನಣ್ಣಗಳ ವಿದ್ಯಾ ಮಾಯಮ್ಮನ ಮಹನ್ನೈವೇದ್ಯ ೭

ಓದಿ ಮಲತ ಗುರುಶಿಷ್ಯ ಸದ್ಬೋಧಾಮೃತ ಪರಿ ಹೇಯ ಆ
ಪ್ತಾಧಾರಿಲ್ಲದ ಅರಸೆ ಗ್ರಾಮಾದರಿಸುವ ಆಳರಸೆ ೮

ವೇತ್ತೃವಿವರ್ಜಿತ ಸಭೆಯು ಲೋಕತ್ರಯದಲ್ಲಿ ಅಶುಭವು ಕಂ
ಠತ್ರಾಣಿಲ್ಲದ ಗಾನ ಮುದಿ ಎತ್ತೆಳೆದಾಡುವ ಗಾಣ ೯

ಹುಸಿ ನುಡಿವ ದೈವಜ್ಞ ತಾ ಹಡದ ಮಗನಿಂದ ಅವಜ್ಞ ದು
ರ್ವಸುಕಾಂಕ್ಷೆಯ ಭೇಷಜನು ಮಾನಿಸರ ಉಂಬ ಮಾಯಿ ದನುಜನು ೧೦

ಶ್ರವಣ ಮನನ ಧ್ಯಾನವನು ಬಿಟ್ಟವನೆ ಜೀವಚ್ಛವನು ಮಾ
ಧವ ಪ್ರಸನ್ವೆಂಕಟ ಮೂರ್ತಿ ತನ್ನವರಿಗೆ ಕೊಡುವನು ಅರ್ಥಿ ೧೧

೩೬೨

ಹರಿಯಲ್ಲದನ್ಯ ದೈವಂಗಳು ಕೈವಲ್ಯವೀವವೇನ್ನೈ ಶ್ರೀ
ಹರಿಯ ಕರುಣಾಸಾಗರಕೆ ಕೂಪವಾಪಿಯು ಹೋಲ್ವವೇನ್ನೈ ಪ.

ಹಳುವದ ಬಿದಿರಮೃತದ ಮಳೆಯಲಿ ಇಕ್ಷುವಹದೇನ್ನೈ
ಹಲಕಾಲವರೆಯ ಬೇಯಿಸಿದರೆ ಮೃದುರುಚಿಯಹದೇನ್ನೈ ೧

ಕೆಸರು ಮಳಲು ಮೆದ್ದರೊಡಲಗ್ನಿ ತಣ್ಣಸವಹದೇನ್ನೈ
ಬಿಸಿಲ ತೊರೆಗೆ ಮಂಜುವನಿಗೆ ಧಗೆಯ ತೃಷೆ ಹೋಹದೇನ್ನೈ ೨

ಮಲಯಜಲೇಪಕೆ ಬಲವತ್ತರ ಭವತಾಪ ಶಾಂತವೇನ್ನೈ
ಎಳೆಗರು ಮಣ್ಣಾವಿನ ಮೊಲೆಯುಂಡು ಜೀವಿಪುದೇನ್ನೈ ೩

ಹರಿಯೊಪ್ಪದಿರದಾ ಹಲವು ಧರ್ಮಕರ್ಮದ ಕಾರಣೇನ್ನೈ
ಕರಿಯುಂಡ ಬೆಳವಲ ಹಣ್ಣಿನ ತಿಳಲೆಂದಿಗುಳಿವುದೇನ್ನೈ ೪

ಏಕೋ ನಾರಾಯಣ ಆಸೀತ್ ಹಾಗಂದಿಲ್ಲವೇನ್ನೈ
ಸಾಕು ನ ಬ್ರಹ್ಮಾ ನ ಚ ಶಂಕರಃ ಎಂಬೊ ಮಾತದೇನ್ನೈ ೫

ವಾಸುದೇವನ ಡಿಂಗರರಿಗೆ ಅಶುಭ ಹೊಂದಬಲ್ಲದೇನ್ರೈ
ಕ್ಲೇಶಾಧಿಕವು ನೋಡಿ ಅವ್ಯಕ್ತಾಸಕ್ತರಿಗಲ್ಲವೇನ್ರೈ ೬

ಪ್ರಸನ್ನವೆಂಕಟಪತಿ ಅರ್ಚನೆದಾರಿಲಿ ಕಂಟಕೇನ್ರೈ
ಹುಸಿಯಲ್ಲ ಧ್ರುವ ಬಲಿ ವಿಭೀಷಣರೆ ಸಾಕ್ಷಿ ನಂಬಿರಿನ್ನು ೭

೩೬೩

ಹರಿಯೆ ಗತಿಯೆನ್ನಿರೈ ಶ್ರೀ ನರ
ಹರಿಯೆ ಶರಣೆನ್ನಿರೈ ಪ.

ಹರಿಪಾದಕಮಲವ ನಂಬದ ಮೂಢನು ಮನುಜನಲ್ಲ ದನುಜ ಶ್ರೀ
ಹರಿಚರಿತಾಮೃತ ಕೇಳದೆ ಗರ್ವಿಪ ನರನು ಪಾಮರನು ೧

ಹರಿಯ ಬಂಟರ ಅನುಸರಣೆಗಳ ಪರಿತ್ಯಾಗಿ ವೃದ್ಧಗೂಗಿ
ಹರಿಮಹಿಮೆಯ ಹೊಗಳಾಡದ ಮಾತಿನ ಮುಖನು ಮಂಡೂಕನು ೨

ಕೃಷ್ಣಗೆ ಪ್ರಿಯವ್ರತ ದಾನಕೆ ವಿಮುಖಾದ ಧನಪನವ ಕುಣಪ
ಕೃಷ್ಣಾಕೃತಿಯ ಬಹಿರಂತದಿ ನೋಡದ ಜಾಣನವ ಕೋಣ ೩

ಕೃಷ್ಣಗೆ ನಮಿಸದೆ ಸತಿ ಸುತರೊಳು ಭೂರಿತುಷ್ಟ ಹಿತನಷ್ಟ ಶ್ರೀ
ಕೃಷ್ಣನವರ ಕಂಡೆರಗದ ವಿಷಯದ ಭೋಗಿ ಭವರೋಗಿ ೪

ಗೋವಿಂದ ಸರ್ವೋತ್ತಮನಿರೆ ಬೇರೆಂಬಜ್ಞಾನಿ ಮದ್ಯಪಾನಿ
ಗೋವಿಂದನೊಳು ವಿಶ್ವಾಸಿಲ್ಲದ ಭಕ್ತಿಯ ಧೀರ ಶುದ್ಧ ಜಾರ ೫

ಗೋವಿಂದ ತೀರ್ಥ ಪ್ರಸಾದವ ನರಿಯದ ಬಲ್ಲನೆ ಕಳ್ಳನು
ಗೋವಿಂದನೊಪ್ಪದ ಮತವಿಡಿದವ ಮಹಿಗೆ ಕಕ್ಕಸ ರಕ್ಕಸ ೬

ಪ್ರಸನ್ನ ಮೂರುತಿ ವಿಧಿಭವವಂದ್ಯನ ಅರ್ಚಕ ಧನ್ಯರೆ ಮಾನ್ಯರು
ಪ್ರಸನ್ನವೆಂಕಟಪತಿ ಕಂಡುಂಡಾ ಭಕ್ತಿಯಾಸಕ್ತರೆ ಮುಕ್ತರು ೭

೩೬೪

ಹರಿಯೆನ್ನಬಾರದೆ ಜಿಹ್ವೆ ವಾರಂವಾರ ಪ.

ಪರಗತಿ ಮಾರ್ಗವು ದುರಿತವನಾಗ್ನಿಯು
ಪರಿ ಪರಿ ಭವರೋಗಕೌಷಧ ಅ.ಪ.

ಉರಿವ ಕಾಳಕೂಟ ಕಂಠದಿ ದಹಿಸಲು
ಹರಿನಾಮ ಹರನ ಕಾಯ್ತು
ಕರಿ ಉರಗ ವಿಷಾಗ್ನಿ ಶಸ್ತ್ರ ಭಯದಲಿ
ಹರಿನಾಮ ಶಿಶುವ ಕಾಯ್ತು
ಶರಧಿಲಿ ನಕ್ಕರ ಚರಣವ ಕಚ್ಚಿ ಬರೆ
ಹರಿನಾಮ ಕರಿಯ ಕಾಯ್ತು
ನಿರಯ ನಿವಾಸರ ಸುರಋಷಿ ಮುಖದಿಂದ
ಹರಿನಾಮ ಎಲ್ಲರ ಕಾಯ್ತು ೧

ಹಿರಿಯರ ನಿಕ್ಕರ ನುಡಿಯಿಂದಡವಿಲಿರೆ
ಹರಿನಾಮ ಧ್ರುವನ ಕಾಯ್ತು
ಕುರುಕಂಟಕರು ಅಭಿಮಾನವ ಕೊಳುತಿರೆ
ಹರಿನಾಮ ಸತಿಯ ಕಾಯ್ತು
ಮರಳೊಮ್ಮೆ ದುರ್ವಾಸ ದ್ರೌಪದಿಗುಣಬೇಡೆ
ಹರಿನಾಮ ಇರುಳೆ ಕಾಯ್ತು
ಗುರುಪುತ್ರನುರಿಬಾಣದುರವಣೆಗಡ್ಡಾಂತು
ಹರಿನಾಮ ಭ್ರೂಣವ ಕಾಯ್ತು ೨

ವರಬಲದಿಂದಲ್ಲಿ ಅಸುರರು ನೋಯಿಸಲು
ಹರಿನಾಮ ಸುರರ ಕಾಯ್ತು
ಚಿರಪಾಪ ಭವಯಾತ್ರೆ ಘಟಿಸಲು ತುದಿಯಲಿ
ಹರಿನಾಮ ಭಟರ ಕಾಯ್ತು
ಶರಣರ ಮಹಿಮೆಯಂತಿರಲಿ ಅಪಮರಣದಿ

ಹರಿನಾಮ ನನ್ನ ಕಾಯ್ತು
ಗುರು ಮಧ್ವವರದ ಪ್ರಸನ್ವೆಂಕಟೇಶ ಶ್ರೀ
ಹರಿನಾಮ ಗತಿ ಎನ್ನೆ ಕಾಯ್ತು ೩

೩೬೫

ಹರಿಯೆನ್ನಿ ಹರಿಯೆನ್ನಿ ಹರಿಯೆನ್ನಿರೈ
ಹರಿಯೆಂದವರಿಗೆಲ್ಲಿ ದುರಿತ ದಂದುಗವು ಪ.

ಹರಿಯೆಂದಜಾಮಿಳಗೆ ನರಕ ತಪ್ಪಿತಾಗಲೆ
ಹರಿಯೆಂದ ಕರಿಗೆ ಕೈವಲ್ಯಾಯಿತು
ಹರಿಯೆಂದ ತರಳಗೆ ಉರಗ ಹಾರಾದವು
ಹರಿಯೆಂದವ ಅಕ್ಷಯ ಸಿರಿ ಪಡೆದ ೧

ಹರಿಸೇವೆಯನೆ ಮಾಡಿ ವಿರಿಂಚಪದವನುಂಡ
ಹರಿಸೇವೆಯಲಿ ನಿಶಾಚರರಸಾದ
ಹರಿಸೇವೆಯಲಿ ಹರಿವರರ್ಮುಕ್ತರಾದರು
ಹರಿಸೇವೆಯಲಿ ಮರ್ತ್ಯರು ಸುರರಾದರು ೨

ಹರಿಪಾದ ಸೋಕಲು ಸ್ಥಿರ ಪಾತಾಳದ ಪಟ್ಟ
ಹರಿಪದ ಸೋಕಿದ ಅರೆ ಪೆಣ್ಣಾಗೆ
ಹರಿಪಾದ ಸೋಕಿ ಕಾಳುರಗ ಪಾವನನಾದ
ಹರಿಪಾದ ಸೋಕುವಾತುರವಿಡಿದು ಹರಿಯೆನ್ನಿ ೩

ಮಂಡೂಕಹಿ ಮುಖದಿ ಕಂಡ ಮಕ್ಷಕವ ತಾ
ನುಂಡೇನೆಂಬುವ ಪರಿ ಮೃತ್ಯುವಿನ
ಕುಂಡದಿ ವಿಷಯದ ಹಿಂಡು ವಿಚಾರ್‍ಯಾಕೆ
ಪುಂಡರೀಕಾಕ್ಷಾಂಘ್ರಿ ಕೊಂಡಾಡಿ ಮನದಿ ೪

ಯುವತಿ ಮಕ್ಕಳು ಮಂದಿರವನಗಲಿಸುವರು
ಜವನ ಬಂಟರು ಈ ಕಾಯವ ನೆಚ್ಚದೆ

ಅವಿರಳ ಪ್ರಸನ್ವೆಂಕಟವರದ ರಂಗನ
ಸವಿ ನಾಮಾಮೃತದಾಸ್ವಾದವನುಂಬ ದೃಢದಿ ೪

೩೬೬

ಹೀಗಾದರು ದೂರ ಪರಗತಿ
ಹೀಗಾದರು ದೂರ ಪ.

ತಾನೊಳ್ಳೆದುಂಡು ವಿಪ್ರಾನೀಕಕೊಂದು
ಹೀನ ದಯದಿ ಅತಿ ಜ್ಞಾನಿ ಆಗಿದ್ದು ೧

ಆತುರದ ಧರ್ಮಾರ್ತರ ನಡವು
ಯಾತಕು ಸಲ್ಲದು ಮಾತಿನ ಮಡುವು ೨

ಭೂರಿಗುಣಜ್ಞ ಉದಾರವನರಿಯದ
ಆರಿಗೆ ಪ್ರಸನ್ವೆಂಕಟ ದೊರೆಯ ೩

೩೬೭

ಹೀಗಿದ್ದರೆ ಲೇಸು ಜ್ಞಾನಿಗೆ
ಹೀಗಿದ್ದರೆ ಲೇಸು ಪ.

ಸತಿ ಇದ್ದರೆ ಸಮಹಿತದವಳಾಗಿ
ಸುತನಿದ್ದರೆ ನಿಜಮತದವನಾಗಿ ೧

ಧನವಿದ್ದರೆ ಸಜ್ಜನಕೆ ವಿಭಾಗ
ಮನೆ ಇದ್ದರೆ ಮಧ್ಯಾಹ್ನಕನ್ನತ್ಯಾಗ ೨

ಭಕುತಿ ಇದ್ದರೆ ಡಂಭಕವನಳಿದು ವಿ
ರಕುತಿದ್ದರೆ ಭವದಾಶೆಯ ಕಳೆದು ೩

ಮತಿ ಇದ್ದರೆ ಶುಭಮತಿಯವನಾಗಿ
ಧೃತಿ ಇದ್ದರೆ ದುಷ್ಕೃತಿಗಳ ನೀಗಿ ೪

ಪ್ರಸನ್ವೆಂಕಟೇಶನ ಪ್ರಸಾದವನುಣುತ
ವಿಷಮ ಜನನ ಮೃತಿ ಗಸಣೆ ತಪ್ಪಿಸುತ ೫

೩೬೮

ಹುಡಿಯ ಹೊರಳ್ಯೇನು ಬಡಕೊಂಡರೇನು
ಕಡಲಶಯನನೊಳು ದೃಢ ಭಕ್ತಿ ಇರದೆ ಪ.

ಐದು ಪಾವಕನೊಳು ಮೈ ದಹಿಸಿದರೇನು
ಒಯ್ದು ಶ್ವಾಸವ ನೆತ್ತಿಲಿಟ್ಟರೇನು
ತೊಯ್ದುಟ್ಟರಿವೆ ತುದಿಗಾಲಲಿ ನಿಂತೇನು
ಮೈದುನಸಖನಂಘ್ರಿ ಪೂಜಿಸದನಕ ೧

ತೊಪ್ಪಲ ಮೆದ್ದಗ ತಪ್ಪಲ ಸೇರೇನು
ಉಪ್ಪವಾಸನಿಲವ ನುಂಗಲೇನು
ಒಪ್ಪುವ ಇಳೆಯ ಸುತ್ತಾಡಿ ದಣಿದರೇನು
ದರ್ಪಕನಯ್ಯನ ಒಲುಮಿಲ್ಲದನಕ ೨

ಮಧ್ವಸರೋವರ ಮೀಯದ ಜನುಮೇನು
ಮುದ್ದುಕೃಷ್ಣನ ನೋಡದಕ್ಷಿಯೇನು
ಮದ್ವೇಶ ಪ್ರಸನ್ವೆಂಕಟೇಶನೊಪ್ಪಿರದವ
ನಿದ್ದೇನು ಇಲ್ಲದೇನೀಧರೆಗೆ ೩

೩೬೯

ಹೆಣಗಿದರಾಗದು ಒಣತರ್ಕದಲಿ
ದಣಿದರೆ ಕೂಡದು ಭಕುತಿ

ವನಜಾಕ್ಷನ ಕೃಪೆ ಮನಸ್ಸಾಕ್ಷ್ಯಾದರೆ
ತನ ತಾನಾಹದು ಮುಕುತಿ ಪ.

ಸೂಕ್ಷ್ಮತತ್ವದಿ ದಕ್ಷನೆನಿಸದೆ
ದೀಕ್ಷಿತ ನಾಮಿದ್ದೇನು
ಅಕ್ಷರ ಬಲದಲಿ ಲಕ್ಷವು ವೃಥಾ ಗುರು
ಶಿಕ್ಷಿಲ್ಲದ ಜನುಮೇನು
ಭಿಕ್ಷುಕ ಧಾನ್ಯದ ಲಕ್ಷ್ಯದಲಿ ಪ
ದ್ಮಾಕ್ಷನ ಪೊಗಳಿದರೇನು
ಕುಕ್ಷಿಯ ಲಾಭವು ಅಕ್ಷಯ ತೋಷದ
ಮೋಕ್ಷೋಪಾಯವದೇನು ೧

ದ್ರವ್ಯಾದಿವ್ರಯ ಹವ್ಯಾದಿಕ್ರಯ
ಅವ್ಯಯ ಜೀವ ಸ್ವಭಾವಾಖ್ಯ
ಕಾವ್ಯರಚನೆ ಶಬ್ದ ವ್ಯಾಕರಣದ
ಹವ್ಯಾಸವು ಇಹ ಸೌಖ್ಯ
ಅವ್ಯಾಕೃತ ನಾಮಾವ್ಯವಹಾರಿಲ್ಲದ
ನವ್ಯ ಕಥಾಜನಸಖ್ಯ
ದಿವ್ಯಮೂರುತಿ ವೇದವ್ಯಾಸಜಭವ
ಸೇವ್ಯನ ನಿಷ್ಠೆಯೆ ಮುಖ್ಯ ೨

ಕಡು ಆದರದೊಳು ಕಡಲಳಿಯನ ಪದ
ವಿಡಿಯದವನ ಶ್ರುತಿಶಾಸ್ತ್ರ
ನಡುಹೊಳೆ ದಾಟುತ ತಡಿಯಲಿ ನಾವೆಯು
ಬುಡಮೇಲಾಯಿತು ವ್ಯರ್ಥ
ದೃಢ ಪ್ರಸನ್ವೆಂಕಟ ಒಡೆಯನಾಜ್ಞೆನ್ನ ದಯ
ಪಡೆದನು ಗುರು ಸುಖತೀರ್ಥ
ನುಡಿಗಳ ಮಾಲೆಯ ತುಡುಗರ ತಮಸಕೆ
ಬಡಿದಟ್ಟುವನು ಸಮರ್ಥ ೩

೩೭೦

ಹೇಳಿದ ಯಮಧರ್ಮ ತನ್ನಾಳಿಗೆ ಪ.

ಹೇಳಿದ ಯಮ ತನ್ನೂಳಿಗದವರಿಗೆ
ಖೂಳ ದುರಾತ್ಮರಾಗಿ ಬಾಳುವರನು ತರ ೧

ಹರಿ ಸಂಕೀರ್ತನೆಯ ನರ ನಾರಿಯರು ಆ
ದರದಲಿ ಮಾಡಿದವರ ನಿಂದಿಪನ ತರ ೨

ಹರಿದಾಸರಿಗೆ ಉಣಕರಿಯದೆ ಜನ್ಮಾಂತ
ಒರಟುಮಾತಿನ ಲುಬ್ಧನರನ ನಿಲ್ಲದೆ ತರ ೩

ಹರಿಕಥಾಮೃತ ಉಪಚಾರಕಾಗಿ ಕೇಳುವ
ಪರನಾರೇರಾಳುವ ದುರುಳನ ಕಟ್ಟಿ ತರ ೪

ಗುರುಹಿರಿಯರೊಳು ನೀಚೋತ್ತರವನು ಕೊಡುವ
ಮರುಳಾಗಿ ಮತಿಯ ಸತಿಯರಿಗಿತ್ತವನ ತರ ೫

ಅಂಬುಜಾಕ್ಷನ ಪೂಜೆ ಸಂಭ್ರಮದಿ ಮಾಡದೆ
ರಂಭೆಯೊಡನಾಡುವ ಡಂಭಕನ ಹಿಡಿ ತರ ೬

ಒಳ್ಳಿದರ್ಹಳಿದು ತಾ ಬಲ್ಲವನೆನುವ
ಚೆಲ್ವ ಪ್ರಸನ್ವೆಂಕಟ ವಲ್ಲಭನ ವೈರಿಯ ತರ ೭

೫ ತತ್ವವಿವೇಚನೆ

೩೭೧

ಅಂಜನೆಸುತ ನಮೊ ಸ್ವಾಮಿ
ಕಂಜಜಪದಪತಿ ಮೌಂಜಾಶ್ರಮಿ ಪ.

ಪತಿತ ಪಾವನ ನಾಮಧೇಯ ಹನುಮಾಜ್ಞೆಯಿಂ
ದತೀತಾನಾಗತ ಅಜಾಂಡಜ್ಞೇಯಾ
ಮೃತ ಸಂಜೀವನಾದಿ ಚತುರೌಷಧ ತಂದೆ
ಕ್ಷತಘಾತ ಪ್ಲವಗರ ಪ್ರತತಿ ರಕ್ಷಿಸಿದೆ ೧

ವ್ಯಾಘ್ರೇಶ್ವರಾಜಿತ ಸಮರ್ಥ ವಸುಧಾಹೃತ
ಅಗ್ರಜ ಯಜ್ಞಾಧಿಕರ್ತ
ಉಗ್ರ ಕೌರವಜನ ನಿಗ್ರಹ ಕೃಷ್ಣ ಮ
ತಾಗ್ರಣಿ ಭೀಮ ಸಮಗ್ರ ಸುಜ್ಞಾನಿ ೨

ದುಷ್ಟೋಕ್ತಿ ಪೂರ್ವಪಕ್ಷಜಾರಿ ಭೇದೋಚ್ಚಾರಿ
ವಿಷ್ಣುಪಕ್ಷ ಸಿದ್ಧಾಂತ ಸೂರಿ
ಸೃಷ್ಟಿಲಿ ವರದ ವಾಸಿಷ್ಠ ಪ್ರಸನ್ವೆಂಕಟಾ
ಧಿಷ್ಟನ ಪ್ರಿಯ ಮುನಿ ಶಿಷ್ಟರೊಡೆಯ ನೀ ೩

೩೭೨

ಅಂಜರು ಹರಿಭಟರು ದುರಿತಾರಿ
ಗಂಜರು ಹರಿಭಟರು
ಮಂಜಿನ ದಂಡೋಡಿಪ ಮೂಡಣ ವರ
ಕಂಜಸಖನ ಪೋಲ್ವವರು ಪ.

ಅಗ್ಗಳಿಕೆಯ್ಯೆಗಣೆಯನ ಬಲದಲಿ
ಮುಗ್ಗದೆ ಕುಲಿಶೆದೆಯಲ್ಲಿ ವೈ
ರಾಗ್ಯಾಸ್ತ್ರದಿ ಈರೈದಾಳಾಣ್ಮನ
ಕುಗ್ಗಿಸಿ ಸೆರೆ ತರುವವರು ೧

ಮೂರರಾಯುಧ ಹತಿಭಯ ಜರಿದು
ವಾರಣ ನಾಕೆರಡಿರಿದು ಶೃಂ

ಗಾರದ ರಾಹುತರೆಂಟರ ಸದೆವರು
ವೀರ ಹರಿ ಧ್ವನಿಯವರು ೨

ಎರಡೊಂಬತ್ತು ನಾದಿಕಾಭೇರಿ
ಎರಡು ಕಹಳೆಯ ಚೀರಿ
ಸರಕು ಮಾಡಿ ನವಕಲಿ ಸಂಜಿತರು
ಹರಿ ಮಂಡಿತ ನವರಥರು ೩

ಒಂದೆ ನಿಷ್ಠೆಯ ರಣಧ್ವಜ ಮೇರೆಗೆ
ಹಿಂದಾಗದೆ ಮುಂದಾಗಿ
ಒಂದಿಪ್ಪತ್ತರಿ ವ್ಯೂಹ ಕೆಡಹುವರು
ಕುಂದದ ಧೃತಿ ಮತಿಯವರು ೪

ಹಂಗಿನ ಸ್ವರ್ಗವ ಸೂರ್‍ಯಾಡುವರು
ಡಂಗುರ ಹೊಯ್ಯುವ ಮಹಿಮರು
ರಂಗ ಪ್ರಸನ್ವೆಂಕಟಪತಿ ಭಟರು
ಮಂಗಳಪದ ಲಂಪಟರು ೫

೩೭೩

ಅಂಬುಜಾಕ್ಷನ ಬಂಟ ನೆನೆವರಿಗೆ ನಂಟ
ನಿಂಬರಿಗೆ ನೆಲೆವಂತ ವರದ ಹನುಮಂತ ಪ.

ಜಲಧಿಯನು ದಾಂಟಿ ಜಾನಕಿಗೆ ತಲೆವಾಗಿ ನೀ
ನಲಿದಕ್ಷಯ ನಿಶಾಟಾದ್ಯರರಿದೆ ಸತಿ ರಘು
ಕುಲೇಂದ್ರನಂಘ್ರಿಯ ಕಂಡು ಅಸಹಾಯದಿ
ಹಲವು ಸಾಹಸ ಮಾಡಿದಖಿಳ ಕಪಿನಾಥ ೧

ಕಿರ್ಮೀರ ಬಕ ಹಿಡಿಂಬಕ ಕೀಚಕಾದಿ ಖಳ
ದುರ್ಮತಿ ಕದಳಿವನಕೆ ಮತ್ತ ಕರಿಯೆ

ನಿರ್ಮಳಾನನೆ ದ್ರೌಪದಿಯ ಭಂಗಪಡಿಸಿದ ಕು
ಕರ್ಮಿ ಕೌರವರಿಗಶನಿಯೆ ೨

ಶ್ರೀ ಬಾದರಾಯಣಾಜ್ಞದಿ ತತ್ವಸಾರಾರ್ಥ
ನೀ ಬೋಧಿಸಿದೆ ನಿಜ ವೈಷ್ಣವ ಜನಕೆ
ಈ ಭುವಿಗೆ ಕಶ್ಮಲ ಕುವಾದಿಗಳ ಗೆದ್ದಬ್ಜ
ನಾಭಿ ಪ್ರಸನ್ನವೆಂಕಟೇಶಗರ್ಪಿಸಿದೆ ೩

೩೭೪

ಅರ್ಚನೆ ಮಾಡಿರಯ್ಯ ಶ್ರೀ ಭಗವದರ್ಚನೆ ಮಾಡಿರಯ್ಯ
ಅರ್ಚನೆ ಮಾಡುವ ಅರ್ಚಕ ಬುಧರಿಗೆ
ಅರ್ಚಿಪ ಪದದಲ್ಲಿ ಅಚ್ಯುತ ದೊರೆವನೆಂದು ಪ.

ಅಂತರಂಗದ ಶುದ್ಧಿಲಿ ತನ್ನ ಬಾಹ್ಯಂತರ ಪರಿಪೂರ್ಣನ
ಚಿಂತಿಸಿ ಸರ್ವಸ್ವತಂತ್ರ ಶ್ರೀ ಹರಿವೇದ
ತಂತ್ರೋಕ್ತ ಪಥದಿ ನಿರಂತರ ಮರೆಯದೆ ೧

ಪೃಥು ಧ್ರುವ ಅಂಬರೀಶ ಸುಧರ್ಮಜ ದಿತಿಜೋದ್ಭವ ಅಕ್ರೂರ
ಕೃತವರ್ಮ ಸಾತ್ಯಕಿ ಯದುಕುಲ ಸುರಋಷಿ
ಯತಿತತಿ ಅರ್ಚಿಸಿ ಅತಿಧನ್ಯರಾದರೆಂದು ೨

ಅನಂತಮೂರ್ತಿಯೊಳು ತನಗೊಂದು ಧ್ಯಾನಕ್ಕೆ ತಂದುಕೊಂಡು
ಆನಂದತೀರ್ಥರ ಸಂತತಿಗಳಿಂದ
ತಾನು ಇಷ್ಟನಾಗಿ ನಾರಾಯಣನಾತ್ಮನೆಂದು ೩

ಬ್ರಹ್ಮಸ್ತೋತ್ರದಿ ಸಹಸ್ರ ಸನ್ನಾಮಪೂರ್ವಕ ಸ್ತೋತ್ರದಿ
ಶ್ರೀಮತ್ಪಂಚಸೂಕ್ತ ಪಂಚಾಮೃತ ಸ್ನಾನ
ರಮ್ಯಾಯುಧ ಕೌಸ್ತುಭಮಣಿ ಮಾಲೆಯಿಂದ ೪

ಧ್ಯಾನಾವಾಹನ ಸ್ನಾನ ಸುಪಾದ್ಯಾಚಮನಾರ್ಘ್ಯ ಧೂಪದೀಪ ಪ್ರ
ಸೂನ ತುಳಸಿ ಗಂಧಮೋಘ ನೈವೇದ್ಯದಿಂ
ಮಾನಸಾರ್ಚನೆ ಪ್ರತ್ಯಕ್ಷಾಗಲಿ ಎಂತೆಂದು ೫

ವೀರಾವರ್ಣದ ಮಧ್ಯದಿ ಶ್ರೀ ಮಧುಕೈಟಭಾಂತಕ ಕೃಷ್ಣನ
ಕೋಟಿಕಾಂಚನ ರತ್ನಾಭರಣ ವೈಜಯಂತಿ ಕಿ
ರೀಟ ಕುಂಡಲ ದಾಮಹಾರ ನೂಪುರಗಳಿಂದ ೬

ದಿವ್ಯಾಂಬರ ಭೂಷಣ ನವರತುನ ಭವ್ಯ ಮಂಟಪ ವಸನ
ಅವ್ಯಾಕೃತಾಧ್ಯಕ್ಷ ಶ್ರೀಭೂಮುಕ್ತಾಮುಕ್ತ
ಸೇವ್ಯ ಮಾನನಾಪಾದ ಮೌಳ್ಯಾಂತ ವೀಕ್ಷಿಸಿ ೭

ಬಹು ನೀರಾಂಜನಗಳಿಂದ ಸದ್ವೇದೋಕ್ತ ಗಹಗಹನ ಸೂತ್ರಂಗಳಿಂದ
ಅಹಿವರಶಯನಜ ಭವಾಹಿಪ ವಿಪ್ರವಂದ್ಯ
ಮಹಿಮನನಂತನೆಂತೆಂದು ಪರವಶದಿಂದ ೮

ತಾಳದಂಡಿಗೆ ಜಾಗಟೆ ಶಂಖ ಮದ್ದಳೆ ಕಂಸಾಳೆ ಭೇರಿ
ಆಲಾಬುತಂಬೂರಿ ಭಾಗವತ ಗಾನ
ಮೇಳೈಸಿ ತುತೂರಿ ವಾಜಂತ್ರಿ ಘೋಷದಿಂದ ೯

ಅಲವಬೋಧರು ಪೇಳಿದ ಪೂಜಾವಿಧಿಗಳ ಪ್ರದಕ್ಷಿಣೆ ಪ್ರಮಾಣ
ಲಲಿತ ಗೀತ ನೃತ್ಯ ಬಲು ಪ್ರೇಮದಲಿ ಮಾಡಿ
ಹೊಳೆವ ಬಿಂಬಾತ್ಮನ ಕಾಂಬ ಲವಲವಿಕೆಯಿಂದ ೧೦

ಆತ್ಮ ಕರ್ತೃತ್ವ ನೀಗಿ ಸರ್ವಾಂತರಾತ್ಮ ಪರಮಾತ್ಮನೆಂದು
ಆತ್ಮ ಮತ್ತೆ ಜ್ಞಾನಾತ್ಮ ಪ್ರೇರಕ ಪ್ರೇ
ರ್ಯಾತ್ಮ ನಿವೇದನ ಭಕ್ತಿ ನವಕಗಳಿಂದ ೧೧

ಸರ್ವೇಂದ್ರಿಯ ಮನಸ್ಥ ಮುಖ್ಯಪ್ರಾಣನೋರ್ವ ನಿಯಂತ್ರ ಹರಿ
ಸರ್ವ ಪ್ರೇರಕನೆಂಬೊ ವಿಜ್ಞಾನಮಾರ್ಗದಿ
ಸರ್ವಕಾಲದಲಿ ಸರ್ವಸಮರ್ಪಣೆಯೆಂದು ೧೨

ಮಂದಜನರು ಭಕ್ತಿಲಿ ದೂರ್ವನೀರಿಂದೆ ಪೂಜೆಯ ಮಾಡಲು
ತಂದೆ ಪ್ರಸನ್ವೆಂಕಟಕೃಷ್ಣ ಕಾರುಣ್ಯ
ಸಿಂಧು ಪ್ರಸನ್ನಾತ್ಮಬಂಧು ಮುಕ್ತಿಯನೀವ ೧೩

೩೭೫

ಆತ್ಮನಿವೇದನ ಭಕುತಿ ತ
ನ್ನಾತ್ಮವನೀವ ಪರಮಾತ್ಮ ವಿಶ್ವಾತ್ಮಗೆ ಪ.

ಸರ್ವಕರ್ಮಕರ್ತ ಸರ್ವಕಾಲವರ್ತ
ಸರ್ವಕಾರ್ಯಕೆ ಹರಿ ಸ್ವತಂತ್ರನು
ಸರ್ವಾರ್ಥದಲಿ ಪೂರ್ಣಸರ್ವೇಂದ್ರಿಯ ನಿಯಂತ್ರ
ಸರ್ವದೇಶ ಕಾಲವ್ಯಾಪ್ತ ಗೋಪ್ತನೆಂದು ೧

ಕಾಸು ಕೋಶ ಗೇಹ ದೇಹೇಂದ್ರಿಯ ಪ್ರಾಣ
ಸ್ತ್ರೀ ಸುತ ಪ್ರಿಯ ದಾಸಿ ದಾಸರನು
ಈಶಗರ್ಪಣೆ ಮಾಡಿ ದಾಸದಾಸನಾಗಿ
ಲೇಶವು ತನಗೆನ್ನದೆ ಸರ್ವಾರ್ಪಿಸುವುದು ೨

ಜನ್ಮ ಜನ್ಮಾಂತರ ಧರ್ಮ ಕರ್ಮಂಗಳು
ನಿರ್ಮಲ ಜ್ಞಾನ ವೈರಾಗ್ಯ ಭಕ್ತಿ
ಸ್ವರ್ಮಂದಿರ ಭವಯಾತ್ರೆ ಗರ್ಭಯಾತ್ರೆ
ರಮೆಯ ರಮಣಗರ್ಪಣವೆಂಬ ನಿಷ್ಠೆಯ ೩

ಅಹರ್ನಿಶಿ ಶ್ವಾಸೋಚ್ಛ್ವಾಸಾವಸ್ಥಾತ್ರಯ
ಬಹು ಜಪತಪ ಅರ್ಚನೆ ಸಂಭ್ರಮ
ಬಹುಭಿಃಶ್ರವಣ ಬಹುಧಾಶ್ರವಣ ಮನನ
ಶ್ರೀಹರಿ ಧ್ಯಾನ ಧ್ಯಾಸಾತ್ಮಾರ್ಥದಿ ೪

ಅಲಂಬುದ್ಧಿಯನು ಬಿಟ್ಟು ಅಲಸಮತಿಯನು ಸುಟ್ಟು
ಅಲಸಲಕ್ಷಣ ವಿಸ್ಮೃತಿಯನು ನೀಗಿ

ಅಲವಬೋಧಾಚಾರ್ಯ ಮತದವರನು ಪೊಂದಿ
ಲಲಿತ ಪ್ರಸನ್ವೆಂಕಟ ಚತುರಾತ್ಮಗೆ ೫

೩೭೬

ಆದಿಗುರುರಾಯ ನಮ್ಮ ಮುಖ್ಯ ಪ್ರಾಣ ಭವ
ವ್ಯಾಧಿ ಕೋಟಿ ಭೇಷಜನೆ ಮುಖ್ಯಪ್ರಾಣ ಪ.

ಜೀವ ತೊರೆದ ಪ್ಲವಗಗಣಕೆ ಮುಖ್ಯಪ್ರಾಣ ಸಂ
ಜೀವನ ತಂದೌಷಧವನಿತ್ತ ಮುಖ್ಯಪ್ರಾಣ
ಹೇವಿನ ರಕ್ಕಸರ ಮಾರಿ ಮುಖ್ಯಪ್ರಾಣ ಹನುಮ
ದೇವ ದೇವ ರಾಘವಪ್ರಿಯ ಮುಖ್ಯಪ್ರಾಣ ೧

ಸೋಜಿಗದಿ ಕೀಚಕನ ಕೊಂದ ಮುಖ್ಯಪ್ರಾಣ ಭೀಮ
ಆಜನುಮ ಅಸಹಾಯಶೂರ ಮುಖ್ಯಪ್ರಾಣ
ರಾಜಸೂಯಕೆ ಮುಖ್ಯಕರ್ತಾ ಮುಖ್ಯಪ್ರಾಣ ಕ್ಷಾತ್ರ
ತೇಜಪೂರ್ಣ ಕೃಷ್ಣಾಂಕಿತನೆ ಮುಖ್ಯಪ್ರಾಣ ೨

ರೌಪ್ಯಪೀಠದಿ ಕೃಷ್ಣಾರ್ಚಕನೆ ಮುಖ್ಯಪ್ರಾಣ ಮಧ್ವ ಸಾ
ರೂಪ್ಯ ಮುಖ್ಯದ ಮುಕ್ತಿದಾತ ಮುಖ್ಯಪ್ರಾಣ
ಗೌಪ್ಯ ಶ್ರುತ್ಯಜ್ಞಾಚಾರ್ಯನೆ ಮುಖ್ಯಪ್ರಾಣ ದೇ
ದೀಪ್ಯ ಪ್ರಸನ್ವೆಂಕಟಪತಿಪ್ರಿಯ ಮುಖ್ಯಪ್ರಾಣ ೩

೩೭೭

ಎಂಥ ಶ್ರೀಮಂತಾನಂತನೆ ಶ್ರೀಕಾಂತೆಯ ಕಾಂತ
ಎಂಥ ಶ್ರೀಮಂತಾನಂತನೆ ಪ.

ಬೊಮ್ಮನು ಹೆಮ್ಮಗ ಮೊಮ್ಮ ಮೃಡಮ್ಮರಿ
ಮೊಮ್ಮ ಶಚಿಮನೋರಮ್ಮ ಸ್ಮರಮ್ಮಗ

ಅಮ್ಮರಸಮ್ಮೂಹ ನಿಮ್ಮನುಗಮ್ಯರು
ನಮ್ಮೊ ನಮ್ಮೊ ಪರಮ್ಮ ಮಹಿಮ್ಮ ೧

ಪನ್ನಗಾಪನ್ನ ಶಯನ್ನಕ್ಕೆ ಬೆನ್ನೀವ
ಪನ್ನಗಾಶನ್ನ ವಾಹನ್ನ ರತುನ್ನ ಭ
ವನ್ನ ಸುಖೋನ್ನತರನ್ನಾಗರ ನಿಜ
ನಿನ್ನಿದಿರಿನ್ನಾರೆನ್ನೊಡೆಯನ್ನೆ ೨

ಬಲ್ಲ ಕೈವಲ್ಯಜ್ಞರೊಲ್ಲಭ ಸುಲ್ಲಭ
ಬಲ್ಲಿದ ಕ್ಷುಲ್ಲರದಲ್ಲಣನಲ್ಲವೆ
ಹುಲ್ಲಲುಗಲಳವಲ್ಲ ನೀನಿಲ್ಲದೆ
ಸಲ್ಲದು ಸೊಲ್ಲದು ನಿಲ್ಲದಿದೆಲ್ಲ ೩

ಅಂಗಕೆ ಹೆಂಗಳಾಲಿಂಗನಾಂತ ಗಡ
ಮಂಗಳಾಪಾಂಗ ವಿಶ್ವಂಗಳ ಮಂಗಳ
ಸಿಂಗರದುಂಗುಟ ಸಂಗದಗಂಗೆ ಜ
ಗಂಗಳಘಂಗಳ ಹಿಂಗಿಪಳು ರಂಗ ೪

ಅಂಬರದಂಬುಗೆ ತುಂಬೆ ವಿಶ್ವಂ ಬಸು
ರಿಂಬಿಲಿ ಇಂಬಿಟ್ಟುಕೊಂಬ ಕೃಪಾಂಬುಧಿ
ಡಿಂಬಕದಂಬದ ಬಿಂಬ ಪ್ರಸನ್ವೆಂಕಟ
ನಂಬಿದರ್ಗಿಂಬೀವನೆಂಬ ಕುಟುಂಬಿ ೫

೩೭೮

ಎಂದಿಗೆಂದಿಗೆ ತೀರದು ನಮ್ಮಪ್ಪನ ಮಹಿಮೆ
ನ್ನೆಂದಿಗೆಂದಿಗೂ ತೀರದು ಪ.

ಎಂದೆಂದಂದದಿ ಸಂಧಿಸಿ ಪೊಂದಿದಾ
ಇಂದಿರೆ ಸುಂದರೆ ಬಂದಾನೆಂದೆಂತೆಂದಳು

ವೃಂದಾರಕಾರವಿಂದಜಾಹೀಂದ್ರರು ನಿಂದರೂ
ತಂದೆ ಮುಕುಂದ ಆನಂದನಂದನ ಮಹಿಮೆ ೧

ನಿಗಮಗಳು ಗುರುತ ಪೊಗಳಲು ಮಿಗೆ ತಪ
ಸಿಗಳೆಣಿಕೆಗೆ ಮೈಯಗೊಡದೆ ನಗುವನ
ಖಗಧ್ವಜ ಮೃಗಮುಖ ತ್ರಿಗೇಹ್ಯ ಪನ್ನಗಶಾಯಿ
ಅಘದೂರ ಸುಗುಣಗಣನ ಮಹಿಮೆ ೨

ಉನ್ನತಕುನ್ನತ ಇನ್ನಣುಗಿನ್ನಣು
ಘನ್ನಕೆ ಘನ್ನ ಜಗನ್ನುತ ಸನ್ನಿದ
ತನ್ನವನೆನ್ನಲು ಮನ್ನಿಪ ಚಿನ್ಮಯ
ಚೆನ್ನ ಪ್ರಸನ್ವೆಂಕಟನಾಥನ ಮಹಿಮೆ ೩

೩೭೯

ಎನ್ನ ಪಾಲಿಸು ಪರಮಕಾಯ ರಘು
ರನ್ನ ರಾಮನ ಪ್ರಿಯ ಗುರುಮಧ್ವರಾಯ ಪ.

ಅಂಜನಿ ಆತ್ಮದಲಿ ಬಂದು ರಾಮನ ಪಾದ
ಕಂಜವಿಡಿದೆ ಕಡಲ ಲಂಘಿಸಿದೆ ಗೋಷ್ಪದದಿ
ಪಂಜು ಬೆಳಗಿದೆ ನಿಶಾಚರನ ಪಟ್ಟಣವಳಿದೆ
ಕಂಜಾಕ್ಷಿಯಳ ತುಷ್ಟಿಗೈದೆ ಗಡಾ
ಸಂಜೀವ ತಂದು ಕಪಿಬಲವ ರಕ್ಷಿಸಿದೆ ೧

ಕುರುಕುಲಾಧಮನು ಬಲುಸೊಕ್ಕಿ ಸಂಗರಭಟರ
ನೆರಹಿ ಪಾರ್ಥರ ಬಲವ ಗೆಲುವೆನೆಂದವನ ಭರ
ಮುರಿದೆ ಮಹರಥಿಕರೆದೆ ಹರಿದೆ ಅಸಹಾಯ ಶೂರ
ಸರಿಯಾರು ನಿನಗಸಮಧೀರ ಭಾಪು
ಕರುಣಾಸಾಗರ ಉದಾರ ಅಜಪದದಧಿಕಾರ ೨

ಏಕವಿಂಶತಿ ಮಾಯಿ ರಚಿತ ಭಾಷ್ಯವ ಜರಿದೆ
ಶ್ರೀಕಾಂತನ ನಾಮಾಮೃತವ ಭಕ್ತರಿಗೆರೆದೆ
ಭೂಕನಕ ವಧು ವಿಷಯಕಾಂಕ್ಷೆಗಳ ಮೇಲೊದೆದೆ
ಲೋಕಕೊಬ್ಬನೆ ಗುರುವೆ ಮೆರೆದೆ ವಿಶ್ವೇಶ ಪ್ರಸನ್ನ
ವೆಂಕಟೇಶನಂಘ್ರಿವಿಡಿದೆ ೩

೩೮೦

ಎಲೆ ಗುರುವೆ ಜನುಮ ಜನುಮ ಜನುಮದೊಳು ಗುರುವೆ
ಯಲಗುರದ ಹನುಮಂತ ಗೆಲಿಸು ಭವಪಂಥ ಪ.

ಮೂಜಗದೊಳಾರು ನಿನಗೆಣೆಯೆ ಋಜುಗಣಪತಿ ಸ
ರೋಜಭವಪದ ಗಮ್ಯ ರಮ್ಯ
ಭೂಜಾತೆಯಳ ಶೋಕ ಬಿಡಿಸಿದ ಬಲಾಧಿಕ ಬಿ
ಡೌಜಾರಿಪಿತ ಹೃದಯನೊದೆದೆ ೧

ಲಾಕ್ಷಾಗೃಹದಿ ಧರ್ಮಜರ ಹೊರೆದು ಕಿಮ್ಮೀರ
ರಾಕ್ಷಸ ಹಿಡಿಂಬರನು ತರಿದೆ
ಭಕ್ಷಿಸಿದೆ ವಿವಿಧನ್ನ ಶಿಕ್ಷಿಸಿದೆ ಬಕನ ತಾ
ಮ್ರಾಕ್ಷ ಭಾಗವತಜನಪಕ್ಷ ೨

ಉನ್ಮತ್ತ ಮತಂಗಳನು ಅಳಿದೆ ಯತಿರೂಪದಿ ಜ
ಗನ್ಮಯನ ಭಕುತಿರಸ ಜಗದಿ
ನಿನ್ನ ಬಂಟರಿಗೆರೆದೆ ನಿರಯ ತಪ್ಪಿಸಿದೆ ಪ್ರ
ಸನ್ನವೆಂಕಟನಾಥ ಪ್ರೀತ ೩

೩೮೧

ಔಪಾಸನವ ಮಾಡು ದಾಸ ನಾನೆಂದು
ಶ್ರೀಪತಿದಾನ ಧರ್ಮವೆ ಮೋಕ್ಷವೆಂತೆಂದೂ ಪ.

ವನಿತೆ ಲಕುಮಿಯು ದಾಸಿ ಮುಕ್ತಾಮುಕ್ತ
ಗಣವೆಲ್ಲ ಹರಿದಾಸರು
ಹನುಮತ್ ಸ್ವಾಮಿಯು ರಾಮದಾಸತ್ವದ ಭಾಗ್ಯ
ವನು ಹೊಂದಿ ವಿರಿಂಚಿ ಪದವಿಯ ಪಡೆದನು ೧

ಅನಾದ್ಯನಂತ ಕಾಲ ಸಂಸೃತಿಯಲ್ಲಿ
ಆನಂದವು ಮುಕ್ತಿಲಿ
ನೀನೆಂದಿಗು ಸ್ವಾಮಿ ನಾನು ಭೃತ್ಯರ ಭೃತ್ಯ
ಅನಿಮಿಷರೆಲ್ಲ ನಿನ್ನೂಳಿಗದವರೆಂದು ೨

ದಾರಾಪತ್ಯಾದಿ ಬಳಗ ದಾಸಿ ದಾಸರು
ನಾರಾಯಣ ದೇವನ
ವರವರ ಯೋಗ್ಯತೆ ಸಾರ ಸಂಬಳ ಸೇವೆ
ಮೀರದೀವ ದೀನೋದ್ಧಾರ ಕೃಷ್ಣನೆಂದು ೩

ಕರಣತ್ರಯಗಳಿಂದ ನಿರಂತರ
ಮರೆಯೂಳಿಗವ ಮಾಡಿ
ಸಿರಿದಾರಿದ್ರ್ಯತೆಗಳಿಗ್ಹಿಗ್ಗಿ ಕುಗ್ಗದೆ
ಪರಮ ಭಕುತಿ ಭಾಗ್ಯ ದೊರಕಿದುಲ್ಲಾಸದಿ ೪

ದುರಿತ ಕೋಟಿಗಂಜದೆ ಸಾಧುನಿಕರ
ಹರಿಯ ಸೇವೆಯ ಬಿಡದೆ
ವರವಿರತಿ ಜ್ಞಾನ ಭಕ್ತಿಲಿ ಪ್ರಸನ್ವೆಂಕಟ
ಹರಿ ಕೊಟ್ಟಷ್ಟೆ ಪರಮಸಂಬಳ ಸಾಕೆಂದು ೫

೩೮೨

ಭೇದ ಮುಕ್ತಾವಲಿ (ಕೋಲು ಹಾಡು)

ಕೋಲು ಮುಕ್ತಿಮಾರ್ಗದ ಕೋಲು ದುಷ್ಟಶಾಸನ
ಕೋಲು ಸುಖತೀರ್ಥಯತಿರಾಯನ ಕರದಂಡು
ಕೋಲು ಕೋಲೆನ್ನ ಕೋಲೆ ಪ.

ಶ್ರೀದೇವಹೂತಿಜಾಜನಂಘ್ರಿಗೆ ನಮಿಸುವೆ
ಶ್ರೀದೇವಿ ಪದಕೆ ಎರಗುವೆ ಕೋಲೆ
ಶ್ರೀದೇವಿ ಪದಕೆ ಎರಗುವೆ ಮುಖ್ಯಗುರು
ವಾದಜವಾಯುರೊಂದಿಪೆ ಕೋಲೆ ೧

ವಾಣಿ ಭಾರತಿದೇವಿ ಗರುಡ ಮಹೇಶಾನಂತ
ಜ್ಞಾನದಾತರಿಗೆ ನಮೋ ಎಂಬೆ ಕೋಲೆ
ಜ್ಞಾನದಾತರಿಗೆ ನಮೋ ಎಂಬೆ ಶ್ರೀವಿಷ್ಣು
ಮಾನುನೆರಾರ್ವರ ಶರಣೆಂಬೆ ಕೋಲೆ ೨

ಗರುಡನ ರಂಭೆ ವಾರುಣಿ ಗಿರಿಜೇರಿಗೊಮ್ಮೆ
ಕರಗಳ ಮುಗಿದು ಸ್ಮರಿಸುವೆ ಕೋಲೆ
ಕರಗಳ ಮುಗಿದು ಸ್ಮರಿಸುವೆ ಇಂದ್ರ ಕಾಮ
ವರ ಪ್ರಾಣಾನಿರುದ್ಧರ ಬಲಗೊಂಬೆ ಕೋಲೆ ೩

ಇಂದ್ರಾಣಿ ರತಿ ಮುಖ್ಯರಾದ ತಾರತಮ್ಯದ
ವೃಂದಾರಕ ಋಷಿನೃಪರನು ಕೋಲೆ
ವೃಂದಾರಕ ಋಷಿ ನೃಪರ ಮನುಷ್ಯೋತ್ತಮ
ರಂ ಧ್ಯಾನಿಸುವೆ ಮನದಲಿ ಕೋಲೆ ೪

ಏನೂ ಇಲ್ಲೆಂಬನ ಹಾನಿಗೆ ಕಡೆಯಿಲ್ಲ
ತಾನೀಶನೆಂದು ನುಡಿದವ ಕೋಲೆ
ತಾನೀಶನೆಂದು ನುಡಿದವ ತಮಸನು
ತಾನುಂಬ ತನ್ನ ಬಳಗದಿ ಕೋಲೆ ೫

ಹರಿಯ ಗುಣಕೆ ಎಣಿಕೆನಿಟ್ಟವ ಕೆಟ್ಟವ
ಹರಿನಿರ್ಗುಣೆಂಬ ಡಂಬರ ಕೋಲೆ
ಹರಿನಿರ್ಗುಣೆಂಬ ಡಂಬರ ಸಂಗದಿ
ಧರೆಯ ಸಜ್ಜನರು ಮತಿಗೆಡಲಿ ಕೋಲೆ ೬

ಕ್ಷೀರಾಂಬುಧಿ ಮನೆಯ ವಾಸುದೇವನ ಆಜ್ಞಾ
ಧಾರಿಯೆನಿಪ ವಾಯುದೇವನು ಕೋಲೆ ಆಜ್ಞಾ
ಧಾರಿಯೆನಿಪ ವಾಯುದೇವನು ಮೊದಲಿಗೆ
ವೀರ ಹನುಮ ಭೀಮನಾದನು ಕೋಲೆ ೭

ಮೂರನೆ ಅವತಾರಿ ಮಧ್ವರಾಯನು ಮುಕ್ತಿ
ದಾರಿಯ ತನ್ನವರಿಗೆಲ್ಲ ಕೋಲೆ ಮುಕ್ತಿ
ದಾರಿಯ ತನ್ನವರಿಗೆಲ್ಲ ತೋರಿದು
ದಾರಿಯ ಪದವ ಹೊಂದಿದೆ ಕೋಲೆ ೮

ಗುರು ಮಧ್ವ ಎನ್ನ ಮಾತೆ ಗುರುಮಧ್ವನೆನ್ನ ತಾತ
ಗುರು ಮಧ್ವನಾಥ ಸಖಭ್ರಾತ ಕೋಲೆ
ಗುರು ಮಧ್ವನಾಥ ಸಖಭ್ರಾತನೆಂದ
ವರಿಗೊಲಿವನು ಗತಿಯ ಕೊಡುವನು ಕೋಲೆ ೯

ಸುಖತೀರ್ಥರಾಯನ ಹಿತವಾಕ್ಯಕೆಣೆಯಿಲ್ಲ
ಶುಕತಾತ ಸಮನ ದೈವಿಲ್ಲ ಕೋಲೆ
ಶುಕತಾತ ಸಮನ ದೈವಿಲ್ಲವೆಂದವರ
ಭಕುತಿಯ ಬೇಡಿ ಬಯಸಿದೆ ಕೋಲೆ ೧೦

ಭಕುತ್ಯೆಂಬ ಮುಯ್ಯವ ಹರಿಪಾದಕರ್ಪಿಸಿದ
ಅಕಳಂಕ ಮಧ್ವ ಮುನಿರಾಯ ಕೋಲೆ
ಅಕಳಂಕ ಮಧ್ವಮುನಿರಾಯನಂಘ್ರಿಗೆ
ಸಕಳ ಭಾರವ ಒಪ್ಪಿಸಿದೆನು ಕೋಲೆ ೧೧

ವಿಶಿಷ್ಟ ಸ್ವರೂಪಾನಂದರ್ಭಾವ ಮೋಕ್ಷ ಸು
ವಾಸಿನೇರೆಲ್ಲರೊಂದಾಗಿ ಕೋಲೆ ಸು
ವಾಸಿನೇರೆಲ್ಲರೊಂದಾಗಿ ಹೋಗುವ
ಹೇಸಿ ನಾರೇರ ಗೆಲ್ಲುವ ಕೋಲೆ ೧೨

ನಮ್ಮ ಮುತ್ತಯ್ಯನಾದ ಮರುತರಾಯನ ಕೀರ್ತಿ
ನಿರ್ಮಲ ಬುಧರಿಗಮೃತವು ಕೋಲೆ
ನಿರ್ಮಲ ಬುಧರಿಗಮೃತವು ಧರೆಯೊಳು
ಹಮ್ಮಿನ ಖಳರಿಗೆದೆಗಿಚ್ಚು ಕೋಲೆ ೧೩

ಮುತ್ತಯ್ಯನ್ಂಶದ ಒಳಗೊಬ್ಬ ಜನಿಸಿದ
ಹೆತ್ತಯ್ಯನಮ್ಮ ಜಯರಾಯ ಕೋಲೆ
ಹೆತ್ತಯ್ಯನಮ್ಮ ಜಯರಾಯ ತನ್ನ ಬಂಧು
ಮೊತ್ತದಿ ರಾಜ್ಯವಾಳಿದ ಕೋಲೆ ೧೪

ಜಯರಾಯ ಸಂತತಿಯ ಮಕ್ಕಳು ನಾವೀಗ
ಜಯನವಭೇರಿ ಹೊಯಿಸುತ ಕೋಲೆ
ಜಯನವಭೇರಿ ಹೊಯಿಸುತ ರವದ ಜಾಗ
ಟೆಯ ಬಿರುದಲಿ ಬರುತೇವೆ ಕೋಲೆ ೧೫

ಬಯಲು ಮಾತಿನವ ಕಡೆಗಾಗಿ ತತ್ವವಿ
ನಯ ವಾಕ್ಯ ನಿಮಗೆ ಸೊಗಸಲ್ಲ ಕೋಲೆ ವಿ
ನಯವಾಕ್ಯ ನಿಮಗೆ ಸೊಗಸಲ್ಲ ಕೇಳಿದರೆ
ಭಯಬಿಟ್ಟು ಕೇಳಿ ಕವಿಯರು ಕೋಲೆ ೧೬

ಲೌಕಿಕ ಮಾತಿನಂತಲ್ಲ ಮುಯ್ಯದ ಹಾಡು
ವೈಕುಂಠಪತಿಯ ಅರಮನೆಯ ಕೋಲೆ
ವೈಕುಂಠಪತಿಯ ಅರಮನೆಯಾಸ್ಥಾನದ
ಏಕಾಂತ ನಾರೇರೊಪ್ಪಿದ್ದು ಕೋಲೆ ೧೭

ಹಾದಿ ಬೀದಿಯ ಜನರ ಮೆಚ್ಚಿನ ಮುಯ್ಯಲ್ಲ
ಮಾಧವನ ಶ್ವೇತದ್ವೀಪದ ಕೋಲೆ
ಮಾಧವನ ಶ್ವೇತದ್ವೀಪದ ಮಂದಿರದಿ
ಶ್ರೀದೇವಿಯಮ್ಮ ಕೇಳ್ವಳು ಕೋಲೆ ೧೮

ಭ್ರಾಂತಜನರಿಗೆ ವಿಶ್ರಾಂತಿದೋರದು ಮುಯ್ಯಾ
ನಂತಾಸನದ ಅನಂತನ ಕೋಲೆ ಅ
ನಂತಾಸನದ ಅನಂತನ ಮಡದಿ ಶ್ರೀ
ಕಾಂತೆ ನಮ್ಮವ್ವ ಕೇಳ್ವಳು ಕೋಲೆ ೧೯

ಹಾಡುತ ಬರುತೇವೆ ಹರಸುತ ಬರುತೇವೆ
ರೂಢಿಯ ಸಾಧುಜನರನು ಕೋಲೆ
ರೂಢಿಯ ಸಾಧುಜನರ ಗುಣಂಗಳ ಕೊಂ
ಡಾಡುತ ನಾವು ಬರುತೇವೆ ಕೋಲೆ ೨೦

ದರ್ಶನರಾಯರು ಮೂವತ್ತೇಳು ಮಂದಿ
ಅರಸರು ನಮ್ಮ ಹಿರಿಯರು ಕೋಲೆ
ಅರಸರು ನಮ್ಮ ಹಿರಿಯರ ಮಹಿಮೆ ಉ
ಚ್ಚರಿಸುತ ನಾವು ಬರುತೇವೆ ಕೋಲೆ ೨೧

ನಮ್ಮ ತವರಿಗೆ ಕೀರ್ತಿತಂದ ಕನ್ಯೇರು ನಾವು
ನಮ್ಮ ನೆಳಲಿಗಂಜಿ ನಡೆದೇವು ಕೋಲೆ
ನಮ್ಮ ನೆಳಲಿಗಂಜಿ ನಡೆದೇವು ದುರುಳೇರ
ಉನ್ಮತ್ತ ನಮಗೆ ಎಣಿಕಿಲ್ಲ ಕೋಲೆ ೨೨

ಜ್ಞಾನದೀವಟಿಗೆ ಬೆಳಗಲೆ ಬರುತೇವೆ
ಜ್ಞಾನ ಕತ್ತಲೆಯ ಬೆದರಿಸಿ ಕೋಲೆ ಅ
ಜ್ಞಾನ ಕತ್ತಲೆಯ ಬೆದರಿಸಿ ಬರುವಾಗ
ಹೀನ ಬುಧ್ಯರು ಮೋರೆ ತೆಗೆದಾರು ಕೋಲೆ ೨೩

ನಮ್ಮಯ್ಯನಾಸ್ಥಾನ ಬಣ್ಣಿಸಲಳವಲ್ಲ
ನಿರ್ಮಳಾತ್ಮಕರು ಸಚಿವರು ಕೋಲೆ
ನಿರ್ಮಳಾತ್ಮಕರು ಸಚಿವರು ಪರಿವಾರ
ಧರ್ಮಶೀಲರು ವಿರತರು ಕೋಲೆ ೨೪

ಎತ್ತ ನೋಡಲಿ ನವಭಕ್ತಿರತ್ನದ ಬೆಳಗು
ಚಿತ್ರ ಮಂಟಪಕೆ ಎಣಿಕಿಲ್ಲ ಕೋಲೆ
ಚಿತ್ರ ಮಂಟಪಕೆ ಎಣಿಕಿಲ್ಲ ಶಂಖಚಕ್ರ
ಒತ್ತಿಡಿದವು ಭಿತ್ತಿಲಿ ಕೋಲೆ ೨೫

ಬ್ರಹ್ಮಸೂತ್ರದ ವಜ್ರಕಂಬದಿ ಕುಳಿತಿಹ
ಬ್ರಹ್ಮಜ್ಞಪರಮ ಹಂಸವು ಕೋಲೆ
ಬ್ರಹ್ಮಜ್ಞ ಪರಮಹಂಸವು ಪುಣ್ಯಶ್ಲೋಕ
ಧರ್ಮಜ್ಞರಾಯ ಗಿಳಿವಿಂಡು ಕೋಲೆ ೨೬

ಮ್ಯಾಗೆ ಮ್ಯಾಗೊಪ್ಪುವ ಸದ್ಗ್ರಂಥದುಪ್ಪರಿಗೇಲಿ
ಕೂಗುವ ಸಾಮಕೋಗಿಲೆ ಕೋಲೆ
ಕೂಗುವ ಸಾಮಕೋಗಿಲೆ ನವಿಲ್ಗಳು
ನಾಗಪಾಲಕಗೆ ಅತಿಪ್ರೀತಿ ಕೋಲೆ ೨೭

ಕಡುಭಕ್ತಿಪತಾಕೆ ಹರಿನಿಷ್ಠೆ ಕಳಸವು
ಕೊಡುವ ಅಭಯ ಛತ್ರ ಸಾಲ್ಗಳು ಕೋಲೆ
ಕೊಡುವ ಅಭಯ ಛತ್ರ ಸಾಲ್ಗಳು ಶ್ರೀ ತುಲಸಿ
ನಡುವೆ ಪ್ರಣತ ತೋರಣಗಳು ಕೋಲೆ ೨೮

ತಪವೆಂಬ ತಪಿತದರ ಮೈಸಿರಿಯ
ನೃಪ ಜಯರಾಯನೆಸೆದನು ಕೋಲೆ
ನೃಪಜಯರಾಯನೆಸೆದಾ ಸಿಂಹಾಸನದಿ
ಶಶಿ ತೇಜದಂತೆ ಹೊಳೆದನು ಕೋಲೆ ೨೯

ಆನೆಗಳೆಣಿಕಿಲ್ಲ ಕುದುರೆಯ ಗಣನ್ಯಿಲ್ಲ
ಕಾಲಾಳು ರಥಕೆ ಮಿತಿಯಿಲ್ಲ ಕೋಲೆ
ಕಾಲಾಳು ರಥಕೆ ಮಿತಿಯಿಲ್ಲ ಅನ್ಯೋಕ್ತಿ
ಜಾಣೆ ದಾಸೇರಿಗೆ ಕಡೆಯಿಲ್ಲ ಕೋಲೆ ೩೦

ಕುವಿದ್ಯಾರಣ್ಯವ ಸವರಿ ಬೇಟ್ಯಾಡಿದ
ಕೋವಿದ ನಮ್ಮ ಹಡೆದಪ್ಪ ಕೋಲೆ
ಕೋವಿದ ನಮ್ಮ ಹಡೆದಪ್ಪ ರಚಿಸಿದ
ದೇವವನಗಳ ವರ್ಣಿಪೆ ಕೋಲೆ ೩೧

ತತ್ವಪ್ರಕಾಶದ್ದಾಳಿಂಬೆ ಸುಧಾರಸ
ಬಿತ್ತಿದ ಕಬ್ಬಮೋಘ ಮಾವು ಕೋಲೆ
ಬಿತ್ತಿದ ಕಬ್ಬಮೋಘ ಮಾವು ಪದ್ಯಮಾಲೆ
ಉತ್ತತ್ತಿ ತೆಂಗು ಹಲಸನ್ನು ಕೋಲೆ ೩೨

ಹತ್ತು ಪ್ರಕರಣ ದಾಟಿತೆಂಬೊ ದ್ರಾಕ್ಷದ
ಸುತ್ತಿದ ಬಳ್ಳಿಮಂಟಪ ಕೋಲೆ
ಸುತ್ತಿದ ಬಳ್ಳಿಮಂಟಪದಿ ಶುದ್ಧ
ಮತ್ತ್ಯಾನ ಕೂಡಪ್ಪ ನಲಿದನು ಕೋಲೆ ೩೩

ದೇಶ ದೇಶದೊಳಿದ್ದ ದುರ್ವಾದಿ ಪೋಕರ
ಘಾಸಿಸಿ ಜಯಪತ್ರ ದ್ರವ್ಯವ ಕೋಲೆ
ಘಾಸಿಸಿ ಜಯಪತ್ರ ದ್ರವ್ಯವ ತಂದು ಮ
ಧ್ವೇಶಗರ್ಪಿಸಿದ ಮುದದಿಂದ ಕೋಲೆ ೩೪

ಬಂಧು ಸುದರ್ಶನರಾಯರ ಒಡಗೂಡಿ
ಮಂದಿರದೊಳಗಾನಂದಿಪ ಕೋಲೆ
ಮಂದಿರದೊಳಗಾನಂದಿಪ ಶ್ರುತವೇಷ
ತಂದೆಯನೇನ ಹೊಗಳುವೆ ಕೋಲೆ ೩೫

ಇಪ್ಪತ್ತೈದು ತತ್ವ ನಾಣ್ಯದಿ ರಾಮನಾಮ
ಸುಪ್ಪಾಣಿ ಮುದ್ರೆ ನಡೆಸುವ ಕೋಲೆ
ಸುಪ್ಪಾಣಿ ಮುದ್ರೆ ನಡೆಸುವ ತನ್ನವರಿಗೆ
ತಪ್ತ ಮುದ್ರೆ ಕುರುಹಿಟ್ಟನು ಕೋಲೆ ೩೬

ಭೇದಿಸಿ ನೋಡಿರೊ ಭೇದವ ತಿಳಿಯಿರೊ
ಮಾಧವ ಜೀವ ಜಡರೊಳು ಕೋಲೆ
ಮಾಧವ ಜೀವ ಜಡರೊಳು ಎನುತಲಿ
ಬೋಧಿಸಿದನು ಹಿತಮಾರ್ಗ ಕೋಲೆ ೩೭

ತನ್ನ ಹೊಂದಿದರಿಗೆ ಪ್ರೌಢವೃತ್ತಿಯನು ಶ್ರೀ
ಮನ್ನಾಮಾಮೃತವನುಣಿಸುವ ಕೋಲೆ ಶ್ರೀ
ಮನ್ನಾಮಾಮೃತವನುಣಿಸುವ ಹೊರೆವನು
ಉನ್ನತ ಮಹಿಮ ಜಯರಾಯ ಕೋಲೆ ೩೮

ಆವಾಗ ಸೂತ್ರಾರ್ಥ ನಿಸ್ಸಾಳ ವ್ಯಾಖ್ಯಾನ
ತೀವಿದ ಶ್ರುತಿಯ ಕಹಳೆಯು ಕೋಲೆ
ತೀವಿದ ಶ್ರುತಿಯ ಕಹಳೆ ಧ್ವನಿಯುಂಟು
ಶ್ರೀವ್ಯಾಸ ರಾಮಾರ್ಚನೆಯುಂಟು ಕೋಲೆ ೩೯

ಅಚ್ಚ ಸಾತ್ವಿಕನಾದ ರಾಜಾಧಿರಾಜನ
ಹೆಚ್ಚಿನ ಸತಿ ಶುದ್ಧಮತಿಯಮ್ಮ ಕೋಲೆ
ಹೆಚ್ಚಿನ ಸತಿ ಶುದ್ಧ ಮತಿಯಮ್ಮ ನಮ್ಮಮ್ಮ
ನಿಚ್ಚ ನಮ್ಮನು ಹೊರೆವಳು ೪೦

ತಾಯಿ ತಂದೇರ ಹಾಡಿ ದಣಿಯದು ನಮ್ಮ ಮನ
ಭಯವು ಅದರಲ್ಲಿರುವುದು ಕೋಲೆ
ಭಯವು ಅದರಲ್ಲಿರುವುದು ಶುಭಗುಣ
ಬಾಯಿ ಮಾತಿಗೆ ತೀರವು ಕೋಲೆ ೪೧

ಬಂದೆವು ಬೀಗರ ಮನೆಗಿಂದೆ ಮುಯ್ಯವ
ತಂದೇವು ಬಾಲೇರೊಡಗೂಡಿ ಕೋಲೆ
ತಂದೇವು ಬಾಲೇರೊಡಗೂಡಿ ಬೀಗರ
ಅಂದವ ಹೇಳಲಳವಲ್ಲ ಕೋಲೆ ೪೨

ಬಹುಕಾಲದ್ಧಿರಿಯರು ಬಾಳಿದ ಮನೆಯಿದು
ವಿವರಿಸಿ ನೋಡಲರಿಯದೆ ಕೋಲೆ
ವಿವರಿಸಿ ನೋಡಲರಿಯದೆ ಕೆಡಿಸಿದರು
ಧವಳಾರವೆಲ್ಲ ಮಲಿನವು ಕೋಲೆ ೪೩

ಬೀಗರಿದ್ದ ಮನೆಯನೆತ್ತೆತ್ತ ನೋಡಲು
ಬಾಗಿಲು ಬಯಲು ಬರೆಹುಯಿಲು ಕೋಲೆ
ಬಾಗಿಲು ಬಯಲು ಬರೆಹುಯಿಲು ನಮ್ಮವರು
ಹ್ಯಾಗೆಂತು ಹೆಣ್ಣು ಕೇಳುವರು ಕೋಲೆ ೪೪

ಸಂಖ್ಯಾವಿದನೆಂಬಾತ ಮಾವನಾತನ ರಾಣಿ
ಬಿಂಕದ ಬೌದ್ಧದೇವ್ಯತ್ತಿ ಕೋಲೆ
ಬಿಂಕದ ಬೌದ್ಧದೇವ್ಯತ್ತಿ ಭಾಟ್ಟ ನಿ:
ಶಂಕ ಚಾರ್ವಾಕ ಭಾವ ಮೈದುನರು ಕೋಲೆ ೪೫

ಮಿಥ್ಯ ನಮ್ಮತ್ತಿಗೆ ಮಾಯೆ ನಮ್ಮ ನಾದಿನಿ
ಸುತ್ತಿನ ಬಳಗಕೆಣಿಕಿಲ್ಲ ಕೋಲೆ
ಸುತ್ತಿನ ಬಳಗಕೆಣಿಕಿಲ್ಲ ಕೆಣಕಿದರೆ
ಮತ್ತೇನಾದರು ಹುರುಳಿಲ್ಲ ಕೋಲೆ ೪೬

ಇಪ್ಪತ್ತೊಂದು ಮಂದಿ ಹೆಸರಾದವರ ಕೂಡ
ಬಹುಕಾಲ ಕಜ್ಜವು ನಮಗುಂಟು ಕೋಲೆ
ಬಹುಕಾಲ ಕಜ್ಜವು ನಮಗುಂಟು ಹಾಲಿಗೆ
ಹೆಪ್ಪನೆರೆದಂತೆ ಹಿತಮಾತು ಕೋಲೆ ೪೭

ಅಂಗಳದೊಳು ಬಂದು ತಿಳಿದೇವು ಅತ್ತಿಗೇರ
ಶೃಂಗಾರಗರತಿ ಸಿರಿಯನು ಕೋಲೆ
ಶೃಂಗಾರಗರತಿ ಸಿರಿಯನು ಕಾಣುತ
ಹಿಂಗದೆ ನಿಂತು ನುಡಿಬೇಕು ಕೋಲೆ ೪೮

ತಂಗಳೆಂಜಲು ಎಂಬೊ ಅಂಜಿಕೆ ತಮಗಿಲ್ಲ
ಮಂಗಳಧಾತು ಕಾಣೆವು ಕೋಲೆ
ಮಂಗಳಧಾತು ಕಾಣೆವು ಅತ್ತಿಗೇರು
ತಿಂಗಳಸ್ನಾನ ಅರಿಯರು ಕೋಲೆ ೪೯

ದಾವ ಮೂಲೆಲಿ ಬೂದಿ ಮನೆಗಸ ನೋಡಿರೆ
ಭಾವಿ ಅತ್ತೆಯಕೆಲಸವ ಕೋಲೆ
ಭಾವಿ ಅತ್ತೆಯ ಕೆಲಸಕೆ ಮೆಚ್ಚಿದೆವು
ನಾವೇನುಡುಗೊರೆಯ ಕೊಡಬೇಕು ಕೋಲೆ ೫೦

ಮಿಥ್ಯಾವಾದದಲಿ ನಮ್ಮತ್ತಿಗೆ ಬಲುಜಾಣೆ
ಹೆತ್ತವ್ರನೆಲ್ಲ ಹುಸಿಯೆಂದು ಕೋಲೆ
ಹೆತ್ತವ್ರನೆಲ್ಲ ಹುಸಿಯೆಂದು ಶಿವನೊಬ್ಬ
ಸತ್ಯ ತಾನೆಂದು ನುಡಿವಳು ಕೋಲೆ ೫೧

ಕಚ್ಚೆ ಹಾಕಿದವರಿಗೆ ವಿಪ್ರರೆಂದ್ಹೆಸರಿಟ್ಟು
ನಿಚ್ಚ ಗೆಳತೇರ ಒಡಗೂಡಿ ಕೋಲೆ
ನಿಚ್ಚ ಗೆಳತೇರ ಒಡಗೂಡಿ ಗೆಳೆತನ
ಹೆಚ್ಚಾಗಿ ನಡೆಸುತಿಹಳು ಕೋಲೆ ೫೨

ದೊಡ್ಡಾಕಿ ನಾನೆಂದು ಅಡ್ಡಡ್ಡ ನಡೆವಳು
ದೊಡ್ಡವರ ಕಂಡರೋಡೋಳು ಕೋಲೆ
ದೊಡ್ಡವರ ಕಂಡರೋಡೋಳು ನಡುಮನೆ
ದೊಡ್ಡಿಗೆ ತಾನು ಹಿರಿಯಳೆ ಕೋಲೆ ೫೩

ಮಾಯಿನ ದನಿನೋಡಿ ಮಾವನ ಕಿರಿಮಗಳು
ಬಾಯಿ ಬಡಕಿಯು ಬಹುಭಾಷಿ ಕೋಲೆ
ಬಾಯಿ ಬಡಕಿಯು ಬಹುಭಾಷಿ ವೆಡ್ಡಗೊಂಡ
ನಾಯಿಯ ತೆರದಿ ಬಲುಕೋಪಿ ಕೋಲೆ ೫೪

ತಾಯಿ ತಂದೆಯರಿಗೆ ಗುಣವಂತೆ ಮಗಳೀಕೆ
ನೋಯಿಯ ನುಡಿವಳುಂಡುಟ್ಟು ಕೋಲೆ
ನೋಯಿಯ ನುಡಿವಳುಂಡುಟ್ಟು ಆ ಕ್ಷಣ
ಬಾಯಾರುವಲ್ಲಿ ಬಲ್ಲಿದಳು ಕೋಲೆ ೫೫

ಮಹಾತ್ತುಮರ ಮಟಾಮಾಯ ಮಾಡುವ ಶಕ್ತಿ
ಮಹಾಢಾಳಿಕಿಯ ಬಲ್ಲಳು ಕೋಲೆ
ಮಹಾಢಾಳಿಕಿಯ ಬಲ್ಲಳು ಆ ಬುಧರ
ಮಾಯಿ ಅಭದ್ರೆ ಘನ ಕ್ಷುದ್ರೆ ಕೋಲೆ ೫೬

ತನ್ನ ಬದಿಯ ತನ್ನೆರೆಹೊರೆಯವರನು
ತನ್ನಂತೆ ಮಾಡಿಕೊಂಡಳು ಕೋಲೆ
ತನ್ನಂತೆ ಮಾಡಿಕೊಂಡಳು ಮನದಲಿ
ಉನ್ಮತ್ತ ವೃತ್ತಿ ಕಲಿಸೋಳು ಕೋಲೆ ೫೭

ಪ್ರಸ್ತವ ಮಾಡುವ ಮನೆಯೊಳು ಹೋಗುವಳು
ಅಸ್ತವ್ಯಸ್ತದಲಿ ಬಲುಬೇಗ ಕೋಲೆ
ಅಸ್ತವ್ಯಸ್ತದಲಿ ಬಲುಬೇಗ ಷಡ್ರಸನ್ನ
ಹಸ್ತಲಾಘವದಿ ಕೆಡಿಸುವಳು ಕೋಲೆ ೫೮

ಒಳ್ಳೆ ಶಾಲ್ಯೋದನ ಭಕ್ಷ್ಯಭೋಜನದೊಳು
ಕೊಳ್ಳಿಯಿಕ್ಕಿ ಕೆಡಿಸುವಳು ಕೋಲೆ
ಕೊಳ್ಳಿಯಿಕ್ಕಿ ಕೆಡಿಸುವಳು ಪದಾರ್ಥವ
ನೆಲ್ಲ ಏಕಾಕಾರ ಮಾಡುವಳು ಕೋಲೆ ೫೯

ಅತ್ತಿಗೆ ನಾದಿನೇರ ಗೋಡೆಯ ಮೇಲಿನ
ಚಿತ್ತಾರದ ಗೊಂಬಿ ನೋಡಿರೆ ಕೋಲೆ
ಚಿತ್ತಾರದ ಗೊಂಬಿ ನೋಡಿರೆ ಅಖಂಡ
ಮತ್ತೆ ಭೇದಗಳು ತಿಳಿಯವು ಕೋಲೆ ೬೦

ಕಂಬ ಬೋದುಗಳೊಂದೆ ಕೆಳಮೇಲು ಕಟ್ಟು ಒಂದೆ
ಅಂಬುಜ ಮದ್ದುಗುಣಿಕೊಂದೆ ಕೋಲೆ
ಅಂಬುಜ ಮದ್ದುಗುಣಿಕೊಂದೆ ತುಲಸಿ ಕ
ದಂಬವು ಎಕ್ಕೆ ಗಿಡವೊಂದೆ ಕೋಲೆ ೬೧

ಕಾಗೆ ಕೋಗಿಲೆ ಒಂದೆ ಗೂಗೆ ನವಿಲು ಒಂದೆ
ನಾಗ ನೀರೊಳ್ಳಿಯ ಹಾವು ಒಂದೆ ಕೋಲೆ
ನಾಗ ನೀರೊಳ್ಳಿಯ ಹಾವು ಒಂದೆ ಚಿತ್ತರ
ದಾ ಗಿಳಿಹಿಂಡು ತಿಳಿಯವು ಕೋಲೆ ೬೨

ಕುದುರೆ ಕತ್ತೆಯ ಬಣ್ಣ ಆನೆ ಹಂದಿಯ ಬಣ್ಣ
ಮದಹುಲಿಗೆ ನಾಯಿ ಬಣ್ಣವು ಕೋಲೆ
ಮದಹುಲಿಗೆ ನಾಯಿ ಬಣ್ಣ ಒರ್ಸಿಟ್ಟಿಹ
ಚದುರೆಯ ಕೈಗೆ ಕಡಗವು ಕೋಲೆ ೬೩

ಅತ್ತಿಗೆ ನಾದಿನೇರ ಚಿತ್ತಾರ ಬಲುಘನ
ಮತ್ತೆ ತೀರದ ಗುಣಗಳು ಕೋಲೆ
ಮತ್ತೆ ತೀರದ ಗುಣಗಳು ಭಾವ ಮೈದುನ
ರೆತ್ತೋಡಿದರು ಸುಳುಹಿಲ್ಲ ಕೋಲೆ ೬೪

ಗುರುಗಳ ಭಯವಿಲ್ಲ ಹಿರಿಯರ ಸ್ಮರಣಿಲ್ಲ
ಹರಿಯೆ ತಾವೆಂದು ಬೆರೆತರು ಕೋಲೆ
ಹರಿಯೆ ತಾವೆಂದು ಬೆರೆತರು ದಿಂಡೇರಿ
ಗೊರೆವರು ತಮ್ಮ ಬುದ್ಧಿಯ ಕೋಲೆ ೬೫

ಲಗಳಿಯ ಕೋಣಗೆ ಲಘ್ವಾದ ಕೆಲಸೆತ್ತ
ಜಗದೀಶನೆತ್ತ ತಾವೆತ್ತ ಕೋಲೆ
ಜಗದೀಶನೆತ್ತ ತಾವೆತ್ತ ಭಾವರ
ನಗೆಗೇಡು ನೋಡಿ ನಗುತೇವೆ ಕೋಲೆ ೬೬

ಹೆಗಲ ಕಾವಡಿಯವಗೆ ಹಗಲು ದೀವಟಿಗೇಕೆ
ಮಿಗಿಲಾದ ಬಿರುದು ತಮಗೇಕೆ ಕೋಲೆ
ಮಿಗಿಲಾದ ಬಿರುದು ತಮಗೇಕೆ ಮೈದುನರ
ಮೊಗ ನೋಡಿದರೆ ಹೊಗೆಗೆಂಡ ಕೋಲೆ ೬೭

ಪಂಚದೇವನ ಪೂಜೆ ಮಾಡುವರೊಂದಾಗಿ
ಹಿಂಚು ಮುಂಚುಗಳ ಅರಿಯರು ಕೋಲೆ
ಹಿಂಚು ಮುಂಚುಗಳ ಅರಿಯರು ಬರಿದೆ ಪ್ರ
ಪಂಚವ ಬಿಟ್ಟೆವೆನಿಸುವರು ಕೋಲೆ ೬೮

ಹಿಂಡು ಬಾಂಧವರು ತಮ್ಮೊಳು ತಾವೆ ಕೊಂಡಾಡಿ
ಮಂಡಿಕೆ ಸೂತ್ರ ಹರಕೊಂಡು ಕೋಲೆ
ಮಂಡಿಕೆ ಸೂತ್ರ ಹರಕೊಂಡು ಕೊಂಡಾಡಿ
ಮಂಡೆಯ ಬಿಟ್ಟು ತಿರುಗೋರು ಕೋಲೆ ೬೯

ಇವರ ಲೆಕ್ಕದೊಳಗೆ ಹರಿಶಿವನೊಬ್ಬನೆ
ರವಿಗಣನಾಥನೊಬ್ಬನೆ ಕೋಲೆ
ರವಿಗಣನಾಥನೊಬ್ಬನೆ ಎಲ್ಲೆಲ್ಲಿ
ದಿವಿ ದೇವರೊಳಗೆ ಬೇರಿಲ್ಲ ಕೋಲೆ ೭೦

ವಿಧಿ ನಿಷಿದ್ಧಗಳಿಲ್ಲ ಪೋಕ ಮತದೊಳು
ಉದರ ತುಂಬಿದರೆ ಸಮದೃಷ್ಟಿ ಕೋಲೆ
ಉದರ ತುಂಬಿದರೆ ಸಮದೃಷ್ಟಿ ಹರಿವ್ರತ
ಮೊದಲಿಗಿಂದಿಗೆ ಸೊಗಸವು ಕೋಲೆ ೭೧

ಬದನೆ ನುಗ್ಗೆಯ ಕಾಯಿ ಸಲೆ ತೊಂಡೆ ತುಪ್ಪೀರೆ
ಮೃದು ಮೂಲಂಗಿ ಗಜ್ಜರಿಗಳು ಕೋಲೆ
ಮೃದು ಮೂಲಂಗಿ ಗಜ್ಜರಿಗಳು ಇವರಿಗೆ
ಮುದದೂಟ ಆತ್ಮಾರಾಮನ ತೃಪ್ತಿ ಕೋಲೆ ೭೨

ಬಸಳೆ ಸಬ್ಬಸೆ ಸೊಪ್ಪು ಹುಳಿ ಚುಕ್ಕದ ಗೂಡೆ
ಹಸನಾದ ಪುಂಡಿ ಬಲುಪ್ರೀತಿ ಕೋಲೆ
ಹಸನಾದ ಪುಂಡಿ ಬಲುಪ್ರೀತಿ
ಹಸಿವಿಗೆ ದೊರೆಯ ಪರಲೋಕ ಕೋಲೆ ೭೩

ಮಡಿ ಮೈಲಿಗೆಯು ಒಂದೆ ಸ್ನಾನಪಾನಗಳೊಂದೆ
ಹುಡುಗ ಹಿರಿಯರ ಬಳಿಕೊಂದೆ ಕೋಲೆ
ಹುಡುಗ ಹಿರಿಯರ ಬಳಿಕೊಂದೆ
ನುಡಿಬೇರೆ ಪೋಕರ ನಡೆಬೇರೆ ಕೋಲೆ ೭೪

ನಮ್ಮ ನಗೆಯೊಳಗೆ ಉನ್ನತ ಸುಖವುಂಟು
ರಮ್ಮೆಯ ರಮಣ ಕರುಣಿಪ ಕೋಲೆ
ರಮ್ಮೆಯ ರಮಣ ಕರುಣಿಪ ಒಡಲ್ಹೊಕ್ಕು
ನಮ್ಮವರಾಗಿ ಸುಖಿಯಾಗಿ ಕೋಲೆ ೭೫

ನಿಮ್ಮ ಹಿರಿಯರೆಲ್ಲ ನಮ್ಮ ಮನೆಯ ಹೊಕ್ಕು
ಧರ್ಮಾರ್ಥ ಸೂರೆಗೊಂಡರು ಕೋಲೆ
ಧರ್ಮಾರ್ಥ ಸೂರೆಗೊಂಡರು ಜಗವರಿಯೆ
ನಿರ್ಮಳರಾಗಿ ಸುಖಿಯಾಗಿ ೭೬

ಮಾವನೊಳಗೆ ನಮ್ಮ ನಗೆಯಿಲ್ಲ ಬೌದ್ಧ
ದೇವೀರ ಕೂಡ ಸರಸಿಲ್ಲ ಕೋಲೆ
ದೇವೀರ ಕೂಡ ಸರಸಿಲ್ಲ ಹಿರಿಯರು
ತಾವವರ ಗೆದ್ದು ನಗುವರು ಕೋಲೆ ೭೭

ನಿಪುಣೆಂದೆನಿಸುವಿರಿ ಚಪಳೆರೆಂದೆನಿಸುವಿರಿ
ಅಪರಾತ್ರೆ ಆಯಿತು ಬಂದೀಗ ಕೋಲೆ
ಅಪರಾತ್ರೆ ಆಯಿತು ಬಂದೀಗ ನಮಗಿನ್ನು
ಉಪಚಾರವುಂಟೊ ಗತಿಯಿಲ್ಲೊ ಕೋಲೆ ೭೮

ಮೋರೆ ತೋರದಿದ್ದರೆ ಮನೆಯೊಳಗಿರಿ ನೀವು
ಜಾರುತೇವೆ ನಮ್ಮ ಮನೆಗೀಗೆ ಕೋಲೆ
ಜಾರುತೇವೆ ನಮ್ಮ ಮನೆಗೀಗೆ ಬೀದಿಲಿ
ತೂರುತೇವೆ ನಿಮ್ಮ ಕರುಳನು ಕೋಲೆ ೭೯

ಈ ಪರಿ ನಾರೇರ ಹಿತವಾದ ನಗೆಗಳ
ಕೋಪವ ಬಿಟ್ಟು ಕೇಳುತ ಕೋಲೆ
ಕೋಪವ ಬಿಟ್ಟು ಕೇಳುತ ಬಂದು ಸ
ಮಿಾಪಕ ಕೈಯವಿಡಿದರು ಕೋಲೆ ೮೦

ರತ್ನಗಂಬಳಿ ಹಾಸಿ ಒಳ್ಳೇರ ಮಕ್ಕಳೆಂದು
ಉತ್ತಮಗುಣವ ಕೊಂಡಾಡಿ ಕೋಲೆ
ಉತ್ತಮ ಗುಣವ ಕೊಂಡಾಡಿ ಕುಳ್ಳಿರಿಸಿ
ಚಿತ್ತಕೆ ಸುಖವ ಕೊಟ್ಟರು ಕೋಲೆ ೮೧

ಶ್ರೀಕಾಂತನರಮನೆಯ ಹೊಂದಿದವರು ನೀವು
ಏಕಾಂತ ಭಕ್ತಿ ಬಲ್ಲವರು ಕೋಲೆ
ಏಕಾಂತ ಭಕ್ತಿ ಬಲ್ಲವರು ನಮ್ಮ ನೀ
ವೆ ಕೂಡಿಕೊಳ್ಳಿ ದೂರ್‍ಯಾಕೆ ಕೋಲೆ ೮೨

ಸುಖದೂಟಸವಿಯನು ಅರಿಯದೆ ಕೆಟ್ಟೆವು
ಸುಖತೀರ್ಥಗುರುವು ನಮಗಾಗಿ ಕೋಲೆ
ಸುಖತೀರ್ಥಗುರುವು ನಮಗಾಗಿ ಪರಲೋಕ
ಸುಖ ಸೂರೆಗೊಂಡು ಬದುಕೇವು ಕೋಲೆ ೮೩

ಐದು ಭೇದವನರಿತು ನಡೆದೇವು ನಾವಿಪ್ಪ
ತ್ತೈದು ತತ್ವಗಳ ತಿಳಿದೇವು ಕೋಲೆ ಇಪ್ಪ
ತ್ತೈದು ತತ್ವಗಳ ತಿಳಿದೇವು ಮೇಲೆ ಮ
ತ್ತೈದು ಮುಕ್ತಿಯ ಪಡೆದೇವು ಕೋಲೆ ೮೪

ಮುದ್ರೆ ಇಲ್ಲದ ನಾಣ್ಯ ಶುದ್ಧಲ್ಲ ಜಗದೊಳು
ಮುದ್ರಾಂಕರಾಗಿ ಬದುಕೇವು ಕೋಲೆ
ಮುದ್ರಾಂಕರಾಗಿ ಬದುಕೇವು ಮಲೆತವರ
ಗೆದ್ದೇವು ವಾಕ್ಯ ಬಲದಲ್ಲಿ ಕೋಲೆ ೮೫

ಇಂತೆಂಬ ನುಡಿಗೇಳಿ ಅಪಾರಾನಂದದಲ್ಲಿ
ಕಾಂತೆಯರೆಲ್ಲ ಒಂದಾಗಿ ಕೋಲೆ
ಕಾಂತೆಯರೆಲ್ಲ ಒಂದಾಗಿ ಮನದಿ ವಿ
ಶ್ರಾಂತರಾದರು ತಮತಮಗೆ ಕೋಲೆ ೮೬

ಗುರುಭಕ್ತಿ ಅರಿಷಿಣ ಹರಿಭಕ್ತಿ ಕುಂಕುಮ
ಪರಮಾರ್ಥ ಜ್ಞಾನಾಂಜನವನು ಕೋಲೆ
ಪರಮಾರ್ಥ ಜ್ಞಾನಾಂಜನವನು ಇಟ್ಟರು
ಹರಿನಿರ್ಮಾಲ್ಯದ ಪುಷ್ಪ ಮುಡಿದರು ಕೋಲೆ ೮೭

ಸಸ್ಯ ಸಾರಾವಳಿಯ ಸೀರೆಯ ತೆಗೆದರು
ಅತ್ತಿಗೆಯವರ ಮನಮೆಚ್ಚು ಕೋಲೆ
ಅತ್ತಿಗೆಯವರ ಮನಮೆಚ್ಚಿನುಡುಗೊರೆ
ಅರ್ಥಿಲಿ ಕೊಟ್ಟು ನಲಿದರು ಕೋಲೆ ೮೮

ಮಾಧವ ಪ್ರತಿಷ್ಠಾನ ಪೇಟೆಯೊಳುದಿಸಿದ
ಮಾದಳದ ಹಣ್ಣು ಬಣ್ಣದ ಕೋಲೆ
ಮಾದಳದ ಹಣ್ಣು ಬಣ್ಣದ ಸೀರೆಯ
ನಾದಿನಿ ಜಾಣೆಗಿತ್ತರು ಕೋಲೆ ೮೯

ಅಚ್ಚ ಬಂಗಾರದ ಶಂಖಚಕ್ರಂಗಳ
ಅಚ್ಚನೆತ್ತಿದ ನಯವಾದ ಕೋಲೆ
ಅಚ್ಚನೆತ್ತಿದ ನಯವಾದ ಬೇರೆ ಬೇರೆ
ಹಚ್ಚಡಗಳು ಬಾವರಿಗಿತ್ತು ಕೋಲೆ ೯೦

ಭೇದ ಭೇದದ ಬಣ್ಣ ಬಗೆ ಬಗೆ ಚಿತ್ರದ
ನಾದ ಸಮುದ್ರದ ಪೇಟೆಯ ಕೋಲೆ
ನಾದ ಸಮುದ್ರದ ಪೇಟೆಯ ವಲ್ಲಿಗಳು
ಮೈದುನ ಜಾಣರುಡುಗೊರೆ ಕೋಲೆ ೯೧

ಹಿರಿಯ ಕಿರಿಯರ ನೋಡಿ ಮಾನ್ಯಾಮಾನ್ಯನ ನೋಡಿ
ತರತಮ ಭಾವದುಪಚಾರ ಕೋಲೆ
ತರತಮ ಭಾವದುಪಚಾರ ಮಾಡಿದರು
ಹರಿಗುರು ಮೆಚ್ಚಿ ನಲಿವಂತೆ ಕೋಲೆ ೯೨

ಈ ಪರಿಯಲಿವರ ಮನಮುಟ್ಟಿ ಮನ್ನಿಸಿ
ಸುಗಂಧ ಪರಿಮಳ ದ್ರವ್ಯವ ಕೋಲೆ
ಸುಗಂಧ ಪರಿಮಳ ದ್ರವ್ಯವ ಚೆಲ್ಲಾಡಿ
ಶ್ರೀಪತಿಗವರರ್ಪಿಸಿ ಮುದದಿಂದ ಕೋಲೆ ೯೩

ಪರಸ ಮುಟ್ಟಿದ ಮೇಲೆ ಲೋಹ ಚಿನ್ನಾಗದೆ
ಸುರನದಿ ಮುಟ್ಟಿ ಸಗರರ ಕೋಲೆ
ಸುರನದಿ ಮುಟ್ಟಿ ಸಗರರುದ್ಧಾರಾದಂತೆ
ಕರಗಿತು ಅವರ ಮನಮೈಲಿಗೆ ೯೪

ಶುಭ ಭರಿತಾದ ತಾಂಬೂಲ ಕೈಕೊಂಡು
ಶುಭವಾಕ್ಯ ನುಡಿದು ನಡೆವಾಗ ಕೋಲೆ
ಶುಭವಾಕ್ಯ ನುಡಿದು ನಡೆವಾಗ ಬೀಗರು
ಅಬಲೇರಿಗೆ ಕೈಯ ಮುಗಿದರು ಕೋಲೆ ೯೫

ನಾಳೆ ನಿಮ್ಮಾಜ್ಞ ಬರೆ ಮುಯ್ಯ ತರುವೆ
ಆಳವಾಡದಿರಮ್ಮ ನಮ್ಮನು ಕೋಲೆ
ಆಳವಾಡದಿರಮ್ಮ ನಮ್ಮನು ನೀವೀಗ
ಏಳಿಲ ಮಾಡದಿರಿ ಕಂಡ್ಯಾ ಕೋಲೆ ೯೬

ಹೀಗೆಂದ ಮಾತಿಗೆ ನುಡಿದರು ಹರಿಹರಿ
ಭಾಗವತರೆಲ್ಲ ಧರೆಯೊಳು ಕೋಲೆ
ಭಾಗವತರೆಲ್ಲ ಧರೆಯೊಳು ನಮ್ಮವರು
ಶ್ರೀಗಂಧ ಕರ್ಪೂರಕೆ ಮೈತ್ರವು ೯೭

ಅಪ್ಪ ಜಯತೀರ್ಥಗೆ ಹೆತ್ತವ್ವ ಶುದ್ಧಮತಿಗೆ
ಒಪ್ಪುವ ಬಂಧು ಬಳಗಕೆ ಕೋಲೆ
ಒಪ್ಪುವ ಬಂಧು ಬಳಗಕೆ ನಿಮ್ಮ ಗುಣ
ಒಪ್ಪಣೆ ಹೇಳೇವು ಕೋಲೆ ೯೮

ನೀವು ಬಂದಾಕ್ಷಣ ಶ್ರೀವ್ಯಾಸರಾಯರ
ನೈವೇದ್ಯ ತೀರ್ಥವು ಲಭ್ಯವು ಕೋಲೆ
ನೈವೇದ್ಯ ತೀರ್ಥವು ಲಭ್ಯವು ನಮ್ಮಪ್ಪ
ನಾವ ಪರಿಯಲಿ ಒಲಿಸೇವು ಕೋಲೆ ೯೯

ಮೆಲ್ಲನೆ ಹೊರವಂಟು ಫುಲ್ಲಭವ ಕೀರ್ತಿ
ಸೊಲ್ಲು ಸೊಲ್ಲಿಗೆ ಉಗ್ಗಡಿಸುತ ಕೋಲೆ
ಸೊಲ್ಲು ಸೊಲ್ಲಿಗೆ ಉಗ್ಗಡಿಸುತ ಹಾರುವಾಗ
ಕ್ಷುಲ್ಲರ ಮನಕೆ ದಣಿವಾಯ್ತು ಕೋಲೆ ೧೦೦

ಮನೆ ಮುಟ್ಟಿ ಬಂದರು ಗುರುಪಾದ ಕಂಡರು
ಜನನಿಗೆ ಕೈಯ ಮುಗಿದರು ಕೋಲೆ
ಜನನಿಗೆ ಕೈಯ ಮುಗಿದರು ಕೈವಲ್ಯ
ಕ್ಕನುಮಾನವಿಲ್ಲದೆ ನಡೆವರು ಕೋಲೆ ೧೦೧

ಧರೆಯ ಸಜ್ಜನರಿಗೆ ಸಕ್ಕರೆ ಸವಿಗಿಂತ
ಉರೆ ಕಾಯ್ದ ಹಾಲ ಕೆನೆಗಿಂತ ಕೋಲೆ
ಉರೆ ಕಾಯ್ದ ಹಾಲ ಕೆನೆಗಿಂತ ಸವಿಯುಂಟು
ಗುರುಭಕ್ತಿ ಉಂಟು ಪರವುಂಟು ಕೋಲೆ ೧೦೨

ಅಲ್ಪ ಕನ್ನಡದ ನುಡಿಯೆನ್ನಲಾಗದು ಫಣಿ
ತಲ್ಪನ ಪ್ರಿಯಗುರುಮಹಿಮೆ ಕೋಲೆ ಫಣಿ
ತಲ್ಪನ ಪ್ರಿಯಗುರುಮಹಿಮೆ ನೋಡುವುದು
ತಪ್ಪನಾರಿಸದೆ ಶಿಷ್ಟರು ಕೋಲೆ ೧೦೩

ಜನ್ಮ ಜನ್ಮ ಬ್ರಹ್ಮ ವಾಯೂರೆ ಗುರುಗಳು
ರಮ್ಮೆಯ ರಮಣ ಮನೆದೈವ ಕೋಲೆ
ರಮ್ಮೆಯ ರಮಣ ಮನೆದೈವವಾಗಲಿ
ಶ್ರೀಮಧ್ವಾಚಾರ್ಯರು ಕೋಲೆ ೧೦೪

ಪ್ರಸನ್ನವೆಂಕಟಪತಿ ನಾಮದುಚ್ಚಾರಣೇಲಿ
ಅಶುಭಕೋಟಿಗಳು ಉಳುಹಿಲ್ಲ ಕೋಲೆ
ಅಶುಭ ಕೋಟಿಗಳು ಉಳುಹಿಲ್ಲ ಶುಭಮಸ್ತು
ಕುಶಲಾಯುರಾರೋಗ್ಯವಾಹುದು ಕೋಲೆ ೧೦೫

೩೮೩

ಗೆಲಿಸು ಭವವ ಗುರು ಹನುಮಂತ
ಖಳಜಲಧಿ ವಡವಾನಳ ಬಲವಂತ ಪ.

ದಾಶರಥಿಯ ಪದವನೆ ನಂಬಿ ಇತ
ರಾಶೆಯಿಲ್ಲದೆ ಭಕ್ತಿರಸ ತುಂಬಿ
ತೋಷವೃತ್ತಿಗೆ ಕಡೆಮೊದಲಿಲ್ಲ ಕ್ಷುದ್ರ
ದೇಶ ಕೋಶದೆಣಿಕೆ ನಿನಗಿಲ್ಲ ೧

ಅಂಧಕಾತ್ಮಜ ತೃಣ ಸುರಧೇನು ಗೋ
ವಿಂದಾಂಘ್ರಿಬಿಸಜ ಮಧುಪ ನೀನು
ಸಂಧಕಾಯನ ಸದೆದ್ಯೈ ದೇವ ದಯಾ
ಸಿಂಧು ವೈಷ್ಣವಜನ ಸಂಜೀವ ೨

ಶ್ರೀ ಸತ್ಯವತಿಜನ ನೇಮದಲಿ ಹರಿ
ದ್ವೇಷಿಗಳನು ಗೆದ್ದೆ ಭೂಮಿಯಲಿ
ಶ್ರೀ ಸುಖತೀರ್ಥ ಭೀಮ ಕಪಿವರದ ಸ್ವಾಮಿ
ಪ್ರಸನ್ನವೆಂಕಟೇಶ ಭೃತ್ಯಗಣಮುದದ ೩

೩೮೪

ಚಿತ್ತಿಟ್ಟು ನಮಿಸುವೆ ನಿಮ್ಮ ಮೂಲ
ಚೈತ್ಯದಲಿಹ ಚೆನ್ನಿಗ ಬಲ ಹನುಮ ಪ.

ಮೊದಲೆ ರಾಮರ ಭಟನಾಗಿ ಅಂದು
ಪದ್ಮದೇವಿಯ ಚರಣಕೆ ತಲೆಬಾಗಿ
ಮುದದಿ ಮುದ್ರಿಕೆಯ ನೀ ಕೊಟ್ಟೆ ಬಲು
ಮದ ಸೊಕ್ಕಿದಸುರನ ಪುರವನೆ ಸುಟ್ಟೆ
ಚೂಡಾಮಣಿಯ ತಂದಿಟ್ಟೆ ಬಲು ಹರುಷವ ಕೊಟ್ಟೆ ೧

ಕೊಬ್ಬಿದ ಕುರುಪತಿ ಬಲದಿ ಪೊಕ್ಕು
ಬೊಬ್ಬೆಯನಿರಿದು ಶೂರರ ಶಿರ ಹರಿದೆ
ಆರ್ಭಟವನು ತೋರಿದೆ ಬಲು
ದುರ್ಬುದ್ಧ್ಯ ದುಶ್ಯಾಸನನ್ನೋ
ಡಲ್ಬಗಿದೆ ಖಳರ ಹಲ್ಲುಮುರಿದೆಮಪುರಕೆ ಕಳುಹಿದೆ ೨

ಪರಮಪುರುಷ ಹರಿಯೆಂದು ಮಿಕ್ಕ
ಸುರರು ಈತನ ದಾಸಾಂಕಿತರಹುದೆಂದು
ಅರುಹಿದೆ ಶ್ರುತಿ ಇತಿಹಾಸ ಅಹಿ
ಗಿರಿಯ ಪ್ರಸನ್ವೆಂಕಟೇಶನ ದಾಸ ತುಂಗಾ
ತೀರವಾಸನೆ ಸಲಹೊ ಮುಖ್ಯೇಶ ೩

೩೮೫

ಸುಳಾದಿ

ಧ್ರುವತಾಳ

ಜಗದ ಜೀವರ ನೋಡಿ ಯುಕುತಿಲಿ ಸೃಜಿಸುವ
ಮಗನ ಪಡೆದಿರುವೆ ನಾಭಿಕಮಲದಿ
ದೃಗಮೂರನೆಂಬ ಮೊಮ್ಮಗನಿಹನು ನಿನಗೆಲೆ
ಖಗಗಮನಗಣಿತಗುಣನಿಲಯ ದೇವ
ಮಗುಳ್ವೈದುಗಣೆಯಿಂ ಮೂಜಗವ ಮೋಹಿಪ ಕಿರಿಯ
ಮಗನುಳ್ಳ ಸಿರಿಯು ಸಂಗಡಲೆ ಮುಕುಂದ
ದ್ಯುಗಮನೆ ಲೋಕಪಾವನೆ ಪವಿತ್ರೆಯೆಂಬ
ಮಗಳು ಹುಟ್ಟಿದಳು ವಾಮಾಂಘ್ರಿವೆರಳೊಳು
ಮಗುವೆನಿಸಿ ಗೋಕುಲದೆಶೋದೆನಂದನರ ಮು
ದ್ದುಗಳ ಸಲಿಸಿದೆ ಮಹಾಮಹಿಮ ಕೃಷ್ಣ
ಆಗಮಕೋಟಿಗಳು ನಿನ್ನರಸಿ ಕಾಣವು ಗಡ
ಬಗೆಯಲಳವಾರಿಗಹುದಯ್ಯ ಜೀಯ
ವಿಗಡ ಪೋಕರನಳಿಸಿ ಆತ್ಮಜೀವರ ಬೆಳು
ವಿಗೆಯ ತೋರಿಸುವೆ ವೈಷಮ್ಯವಿದೂರ
ಜಗದಾತ್ಮ ಜಗವ್ಯಾಪ್ತ ಜಗದುದರ ಜಗದ್ವರದ
ಜಗದೇಕ ಮೂರುತಿ ಪ್ರಸನ್ನವೆಂಕಟೇಶ ೧

ಮಠ್ಯತಾಳ

ಆಟವಾಡುವ ಬಾಲನೊಳು ಜಗ
ನ್ನಾಟಕ ನೀನೆನಿಸಿ ಜಗದರ
ಕೋಟಲೆಗೆ ನಿಯತ ಕಾರಣ ತರತಮ
ಕೋಟಿಜೀವರ ಪೃಥಗ್ಗತಿಯನೀವ ಪ್ರಸನ್ವೆಂಕಟ
ಹಾಟಕಗೆ ಸಾಮ್ರಾಟ ವಿಭು ನೀ ೨

ರೂಪಕತಾಳ

ಬೊಮ್ಮಾಂಡನಂತವ ನಿರ್ಮಿಸೆತ್ತೆಳೆದಾಡಿ
ಅಮ್ಮಗೋಪಿಗಮ್ಮಿ ಬೇಡಿ
ರಮ್ಮೆಯನಾಳಿ ಗೋವಳೆಯರೊಡನೆ ಕೇಳಿ
ಒಮ್ಮೆ ಗುಂಜಿಯ ಮಾಲೆ ತಾಳಿ
ದ್ಯಮ್ಮಮ್ಮಾಚಿಂತ್ಯಮಹಿಮ ಕ್ರೀಡಾನಂತ
ನಮ್ಮ ಪ್ರಸನ್ವೆಂಕಟ ತಿಮ್ಮ ೩

ಝಂಪೆತಾಳ

ಒರಳನೆಳೆದು ಯಮಳಾರ್ಜುನರುದ್ಧೃತ
ಸರಳತಾಣದ ಹಬ್ಬದಂದು ಮಾತುಳನೊದ್ದ
ಗರಳದಂತನ ಶಿರವೇರಿ ನಾಟ್ಯಾಡಿದ
ಅರಳದಾವರೆ ಮುಖ ಪರಸನ್ನವೆಂಕಟ
ತರಳರೊಳಬಡುತ ಬೆರಳಲಗ ಪೊತ್ತ
ತರಳ ಚಿನ್ಮಯ ತರಳನೆ ೪

ತ್ರಿಪುಟತಾಳ

ಒಂದನುಳಿಸದೆಲ್ಲಾನೊಂದಿಸಿ ಜಲದೊಳಾ
ನಂದದ ಲೀಲೆಯೊಳೊರಗಿದೆಯ
ಒಂದು ಗುಣದಿರವ ಇಂದಿರೆಗರುಹದಾ
ಒಂದ್ವಟ ಪರ್ಣದೊಳೊಂದಿದ ಬಾಲ ಮು
ಕುಂದ ಪ್ರಸನ್ನವೆಂಕಟ ಗೋವಿಂದ ೫

ಜತೆ

ನಿನ್ನಾ ಮೂರುತಿ ನಿನ್ನಾ ಕೀರುತಿ ನಿನ್ನಾ ಕಥಾಮೃತವೆನ್ನ
ಕಣ್ಣು ಕಿವಿ ನಾಲಿಗೆಯಲ್ಲಿ ಪೂರ್ಣಿಸು ಪ್ರಸನ್ವೆಂಕಟೇಶ

೩೮೬

ಉಗಾಭೋಗ

ಜಗದ ಸಾಧನಯೋಗ ಸಮಾಧಿಯಿದೆ ಅ
ಗಾಧ ಮತಿಗಳ ವಿವಾದವಿದೆ
ವೇದಾಧ್ಯಯನದ ಬೋಧವಿದೆ ನಿಜ
ಮೋದವನ್ನೈದುವ ಹಾದಿಯಿದೆ
ಆದಿಕವಿಗಳಾಹ್ಲಾದವಿದೆ ಬ್ರಹ್ಮ
ಶೋಧಕ ಮುನಿಗಳ ಬೋಧವಿದೆ
ಶ್ರೀಧವ ಪ್ರಸನ್ನವೆಂಕಟೇಶ ದಿವ್ಯ
ಸ್ವಾದನಾಮಾಬ್ಧಿಯೊಳು ಮುಳುಗುವ ಸಂಕೀರ್ತನ
ಸಾಧನಯೋಗ ಸಾಧನಯೋಗ ೧

೩೮೭

ಜಯ ಜಯತು ಹನುಮಂತ ಪವಿತ ಸಿಖಿ ಸಹಜಾತ
ಜಯತು ಕಪಿರಾಜ ಯುವರಾಜ ಯತಿರಾಜ ಜಯತು ಪ.

ಸುರರಿಗುತ್ತಮ ಜಗದಾಭರಣ ಶಿರೋಮಣಿ ಜಯತು
ಪರಮ ಅದ್ಭುತಚರಿತ ಸುವಟು ಜಯತು
ಧರಜೆಶೋಧಕ ನಿಶಾಚರಪುರದಹಕ ಜಯತು
ಜಯತು ವೈರಾಗಿ ಮಹಭೋಗಿ ಶುಭಯೋಗಿ ಜಯತು ೧

ಸುರರಿಪುಮಥನ ರಾಮಕಾರ್ಯಧುರಂಧರ ಜಯತು
ಚಿರಪ್ಲವಗ ಭವರೋಗಭೇಷಜ ಜಯತು
ಕರಿರಕರ್ಣ ದಶಮುಖಾಂಗ ಗಿರಿವರಕುಲಿಶ ಜಯತು
ಜಯತು ಅಕ್ಷಹರ್ತಾ ಕ್ರತುಕರ್ತ ಸುಖತೀರ್ಥ ಜಯತು ೨

ತ್ರಿಕೋಟಿ ಪವನಾಖ್ಯರೂಪ ಪ್ರಕಟಾಪ್ರಕಟ ಜಯತು
ಅಕಳಂಕಾಮಿತರೂಪ ಮುಖ್ಯೇಶ ಜಯತು

ಶ್ರೀಕರ ಪ್ರಸನ್ವೆಂಕಟ ರಘುವೀರಾನುಮತ ಮತ ಜಯತು
ಜಯತು ಪರಸಿದ್ಧ ಬಕಮರ್ದ ಗುರುಮಧ್ವ ಜಯತು ೩

೩೮೮

ಜಯ ಜಯ ಸದಮಲ ಗುಣಭರಿತ
ಜಯ ಜಯ ಹನುಮಂತ ಭಾರತೀಕಾಂತ ಪ.

ಮುನ್ನೆ ದಾಶರಥಿಯ ಚರಣವಿಡಿದೆ ನೀ
ಉನ್ನತವಾದ ವರಕೃಪೆಯ ಪಡೆದೆ
ಉನ್ಮತ್ತ ರಕ್ಕಸರೆದೆ ತಲೆಗಡಿದೆ ನೀ
ಚೆನ್ನಾಗಿ ಪ್ಲವಗರ ಪ್ರಾಣವ ಪಡೆದೆ ೧

ದ್ವಾಪರದೊಳಗೆ ಬಲಭೀಮನಾದೆ ಸಿರಿ
ಗೋಪಾಲರಾಯನ ನಿಜದಾಸನಾದೆ
ಕಾಪುರುಷ ಕೀಚಕನ ಸದೆದೆ ಬಲು
ಪಾಪಿ ಕೌರವಾನುಜನೊಡಲ ಬಗೆದೆ ೨

ಹರಿ ಸರ್ವೋತ್ತಮ ಜೀವರೊಳು ಭೇದವೆಂ
ದರಿವವರೊಳು ನೀ ಪೂರಣಬೋಧ
ಸಿರಿ ಪ್ರಸನ್ನವೆಂಕಟೇಶನ ಪಾದ ನೀ
ಸ್ಮರಣೆ ಕೊಡೆಲೆ ವೈಷ್ಣವವರದ ೩

೩೮೯

ಜ್ಞಾನವಿರಲೆನಗೆ ಜನುಮ ಜನುಮ
ಶ್ರೀನಿವಾಸ ಸರ್ವೇಶ ನೀನೆಂಬ ಸುಜ್ಞಾನವಿರಲೆನಗೆ ಪ.

ಸರ್ವಜಗದಲ್ಲಿ ನೀನೆ ವ್ಯಾಪ್ತ ಜಗವೆಲ್ಲ
ಸರ್ವಕಾಲದಿ ನಿಮ್ಮಧೀನವೆಂಬ

ಸರ್ವಜಡಚೇತನರ ಸೃಷ್ಟಾರ ದಾತಾರ
ಹಂತಾ ನಿಯಂತಾ ನೀನೆ ಎಂಬ
ಸರ್ವತ್ರಾವಿಷ್ಟ ಉತ್ಕೃಷ್ಟ ನೀನೇ ಎಂಬ
ಸರ್ವವಿಜ್ಞಾನ ವಿಜ್ಞೇಯನೆಂಬ
ಸರ್ವಜ್ಞಗುರು ಹೃದಯಧಾಮ ಪೂರಣಕಾಮ
ಶರ್ವೇಂದ್ರವಿಧಿ ವಿನುತ ಪ್ರಸನ್ವೆಂಕಟಕೃಷ್ಣ ನಿಮ್ಮ ೧ *

೩೯೦

ದುಮ್ಮಿಸಾಲೆನ್ನಿರಣ್ಣ ದುಮ್ಮಿಸಾಲೆನ್ನಿರೊ
ದುಮ್ಮಿಸಾಲೆನ್ನಿ ಪರಬೊಮ್ಮನಾಳು ಮೂರುರೂಪ
ಕಮ್ಮಗೋಲನಳಿದನೊಡೆಯ ನಮ್ಮ ಗುರು ಬಳಗವೆಂದು ಪ.

ಮುಟ್ಟಿಸೆ ಸುದ್ದಿಯ ರಾಮನಟ್ಟಿದರೆ ರಕ್ಕಸರ
ಕಟ್ಟಿ ಕುಟ್ಟಿ ಕುಣಪ ಮೆದೆಗಳೊಟ್ಟಿಲೊಟ್ಟಿದ
ದಿಟ್ಟತನದಲ್ಲಿ ಲಂಕಾಪಟ್ಟಣ ಮಂದಿರ ಹೋಳಿ
ಸುಟ್ಟು ಬೊಬ್ಬೆಯಿಟ್ಟ ಜಗಜಟ್ಟಿ ಹನುಮಪ್ಪನ ೧

ಕುರುಕಂಟಕ ಠಕ್ಕಿಸಿ ಕೊಟ್ಟರಗಿನ ಮನೆಯಲಿ ಕಾಯ
ಲೊರಗಿದರನುರುಹಿ ನಿಜರ ಹೊರಗೆ ಮಾಡಿದ
ಕುರುಗಣವನಕ್ಕೆ ರಣದಿ ಎರಗಿ ಅಗ್ನಿಯಂತೆ ಹುರಿದಾ
ವರಗದಾಧರ ಭೀಮ ಸಾರ್ವಭೌಮನ ೨

ಧರೆಸಮಗ್ರರಾಜಕೆಂದು ಅರಸುಪದವಿಗಳು ಸೊಕ್ಕಿ
ಸರಸವಾಡಿ ಸರಿಯನುಡಿಯೆ ಪರುಷತೀರ್ಥರು
ವಿರಸ ಪೋಕರಳಿದು ಸರ್ವಹರಿ ಸಮರ್ಪಣೇಕಚಿತ್ತ
ವಿರಿಸಾ ಶ್ರೀ ಪ್ರಸನ್ನವೆಂಕಟರಸ ಸಮತೆನಾಡಿದ ೩

---

*ಕೀರ್ತನೆಗಳಲ್ಲಿ ಪಲ್ಲವಿಯೊಡನೆ ಕನಿಷ್ಠ ಮೂರು ನುಡಿಗಳಾದರೂ ಇರುತ್ತವೆ. ಇಲ್ಲಿ ಒಂದೇ ನುಡಿ ದೊರಕಿದೆ. ಬಹುಶಃ ಇದು ಕೊನೆಯ ನುಡಿಯಾಗಿದ್ದು ಮೊದಲ ನುಡಿಗಳು ಬಿಟ್ಟುಹೋಗಿವೆ.

೩೯೧

ದ್ವಂದ್ವವೆ ವಸಂತದ ಹಬ್ಬ
ದ್ವಂದ್ವವೆ ಇಹಪರದಲ್ಲಿ ಹಬ್ಬ ಪ.

ದ್ವಂದ್ವಾಮೃತ ಕ್ಷೇಮ ಅಭಯ ವಸಂತ
ದ್ವಂದ್ವ ಜೀವೇಶರ ತಿಳಿದವ ಶಾಂತ
ದ್ವಂದ್ವದ ನಡೆನುಡಿ ಬಲ್ಲವ ಸಂತ
ದ್ವಂದ್ವವರಿಯದನ ಗತಿಯೆ ವಸಂತ ೧

ದ್ವಂದ್ವ ಶೀತೋಷ್ಣ ಸಮಾನವ ಕಂಡು
ದ್ವಂದ್ವ ನಿಂದಾಸ್ತುತಿ ಸರಿಯಿಟ್ಟುಕೊಂಡು
ದ್ವಂದ್ವವ ಮಾನವ ಹಿಡಿದರೆ ಭಂಡು
ದ್ವಂದ್ವ ಪಕ್ಷಿಗಳ ಬಗೆಯ ಕೇಳಿಕೊಂಡು ೨

ಫಾಲ್ಗುಣ ಪೌರ್ಣಿಮೆ ಬಂದಿತಿಳೆಗೆ
ಬಾಲಕರೆಲ್ಲ ನೆರೆವುದೊಂದು ಘಳಿಗೆ
ಹೋಳಿಯನಾಡುವ ಸಂಭ್ರಮದೊಳಗೆ
ಕಾಳಗ ಬೇಡಿರೊ ನಿಮ್ಮ ನಿಮ್ಮೊಳಗೆ ೩

ಅಜ್ಞೈಕ್ಯ ಪ್ರತಿಪದ ಹಿಂದಾದರಿಂದ
ಸುಜ್ಞಾನ ದ್ವಿತಿಯಕ್ಕೆ ತೋರುವ ಚಂದ್ರ
ಒಗ್ಗೂಡಿ ಗೆಳೆಯರೊಮ್ಮತದಿಂದ
ಲಗ್ಗೆಕಾರರು ಮುಂದೆ ನಡೆವುದೆ ಚಂದ ೪

ಭಕ್ತೆಂಬೊ ಪುರದಲ್ಲಿ ಒಂಬತ್ತು ಬೀದಿ ವಿ
ರಕ್ತಿ ರಂಹಸ ಬ್ರಹ್ಮದ್ವಾದಿಯ ಐದಿ
ವ್ಯಕ್ತವಾಗುವ ವಸ್ತು ಓದಿಕೆ ಓದಿ
ರಿಕ್ತದ ನುಡಿಗಳು ತಮಸಿನ ಹಾದಿ ೫

ದಿನಪತಿ ಅಡಗಿರೆ ಮಲಗದೆ ಎದ್ದು
ಮನೆಯವರನು ಎಚ್ಚರಿಸಬ್ಯಾಡಿ ಸದ್ದು
ನೆನೆವ ವಿಷಯಗೋಡೆ ಏರುತ್ತ ಬಿದ್ದು
ಮನೆ ಮನೋವಾರ್ತೆಯ ಕುರುಳನೆ ಕದ್ದು ೬

ಹಾರುವರ ಕೇರಿಯ ಹೊಗಬ್ಯಾಡಿ ಕೇಳಿ
ಬೇರೂರವರ ಬಿಟ್ಟು ಬಿಡಿ ದೂರದಲ್ಲಿ
ದೂರುವರೊಡನಾಟ ದುರ್ದೆಶೆಫಲವು ವಸ್ತು
ದೋರುವ ಮನೆಯೇವೆ ಸರಸ ವೆಗ್ಗಳವು ೭

ಧೂಳಿ ನೀರುರಿಗಾಳಿ ಬಯಲೊಳಗಾಡಿ
ಮ್ಯಾಲೆ ಮೂರುರಿಯೊಳು ಮತಿಗುಂದಬ್ಯಾಡಿ
ಹಾಳು ತುರುಕರ ಕೇರಿಯೊಳು ನಿಷ್ಫಲವು
ಜಾಲಗಾರರ ಕೇರಿ ಹೊಕ್ಕರೆ ಫಲವು ೮

ಹಿಂಚಾದ ಹಿರಿಯರ ಮಾತಲೆ ನಡೆದು
ವಂಚಕ ಮೂವರ ಸಂಗವ ಕಡಿದು
ಮಿಂಚುವ ಮಾನ್ಯರ ಪ್ರೀತಿಯ ಪಡೆದು
ಸಂಚಿತ ಪ್ರಾರಬ್ಧಾಗಾಮಿಯ ಒಡೆದು ೯

ಮುಚ್ಚಿದ ಕದವೆರಡನು ಮುರಿಹೊಯ್ದು
ಇಚ್ಛೆ ಮೂರೆಂಬ ನಾಯಿಗಳ ಜಿಹ್ವೆ ಕೊಯ್ದು
ಬೆಚ್ಚದೆ ಮನೆ ಮೆಲ್ಲನೆ ಹೊಗಿರಣ್ಣ
ಸಚ್ಚಿದ ಗೋರಸ ಸೂರ್ಯಾಡಿರಣ್ಣ ೧೦

ಏಕಾಧಿಪತಿಯಾಜ್ಞ ಅಭಯವು ಬೇಕು
ನಾಕು ಝಾವಿನ ರಾತ್ರಿ ನಲವಿರಬೇಕು
ಪೋಕ ಕಳ್ಳಾರ್ವರ ಮೆಟ್ಟ್ಯಾಳಬೇಕು
ಭೂಕಾಂತಗೆ ಸೇವೆಯೊಪ್ಪಿಸಬೇಕು ೧೧

ರಮಣನೊಲ್ಲದ ಆರ್ವರ ಸಂಗವಿಡಿದು
ರಮಿಸುವ ಬುದ್ಧಿಜಾರಿಯ ಗಟ್ಟಿವಿಡಿದು
ಅಮಿತ ವೈರಾಗ್ಯಹಗ್ಗದಿ ಕೈಯ ಕಟ್ಟಿ ಶ್ರೀ
ರಮಣನಂಘ್ರಿಗೆ ಒಪ್ಪಿಸಲು ಕಾರ್ಯ ಗಟ್ಟಿ ೧೨

ಎಲ್ಲೆಲ್ಲ್ಯ ಜ್ಞಾನಾಹಿ ವಿಷಯ ತೇಳುಗಳು
ಎಲ್ಲೆಲ್ಲಿ ನಿರ್ಜಲಸ್ಮೃತಿಯ ಬಾವಿಗಳು
ಎಲ್ಲೆಲ್ಲಿ ನಿರಯ ಕಮ್ಮರಿ ಮಿಟ್ಟೆಗಳು
ಎಲ್ಲ ತಪ್ಪಿಸಿ ಜ್ಞಾನ ಬೆಳದಿಂಗಳೊಳು ೧೩

ವ್ಯಾಳ್ಯವರಿತು ತತ್ವಸಂಧಿಯ ಒಲಿದು
ಸೂಳಿ ಮದೆಂಟರ ಕೈಸೆರೆವಿಡಿದು
ಕಾಲಾಖ್ಯ ತಳವಾರನಾಳಿಗೆ ಕೊಟ್ಟು
ಮ್ಯಾಳದ ಗೆಳೆಯರು ಸಂತೋಷಪಟ್ಟು ೧೪

ಎಂಬತ್ತು ನಾಲ್ಕು ಲಕ್ಷಾಗಾರ ಹೊಗುತ
ಡೊಂಬಿಯಿಲ್ಲದೆ ಬಂದ ಬನ್ನವಬಡುತ
ಕುಂಭಿಣಿಸುರ ಕುಲ ಭೂಮಿಗೆ ಬಂದು
ದಂಭ ಮಾಡದಲೆ ಕುರುಳ ಒಯ್ಯಿರೆಂದು ೧೫

ರಾಗ ಮತ್ಸರಗೂಡಿದರ ಕುರುಳನೊಟ್ಟಿ
ಭೂಗಗನ ಹೊಗುವ ಕಾಮವ ಕಟ್ಟಿ
ಯೋಗವಾಗಿರುವ ಹುಬ್ಬಿನ ಕ್ಷೇತ್ರದಲಿ
ಮ್ಯಾಗ ವಿಜ್ಞಾನಗ್ನಿ ಹಾಕಬೇಕಲ್ಲಿ ೧೬

ಲೋಭ ಹೋಳಿಕೆಯ ಹೋಳಿಗೆ ತುಪ್ಪ ಸವಿದು
ಲಾಭಕ್ಕೆ ಕುಣಿಯಲು ವೇತ್ರರು ಹೊಯ್ದು
ಶೋಭನ ರಸ ಬೊಬ್ಬೆಯ ಸಾಧು ಹಿಂಡು
ತ್ರಿಭುವನ ಪತಿ ಕಾಮನಯ್ಯನ ದಂಡು ೧೭

ಸ್ವರ್ಧುನಿ ಜನಕನ ಗುಣಗಣಕೀರ್ತಿ
ಊರ್ಧ್ವಸ್ವರದಿ ಹಾಡಿ ಪೊಗಳುವ ಅರ್ಥಿ
ನಿರ್ಧೂಮ ಜ್ವಾಲೆಯ ಬೆಳಗಲಿ ಸುತ್ತಿ
ದುರ್ದೇಹಿಗಳ ಕಿವಿಧಾರೆಯ ಕಿತ್ತಿ ೧೮

ಅವಿದ್ಯ ಕಾಮ್ಯಕರ್ಮದ ಹೋಳಿ ಸುಟ್ಟು
ಹ್ಯಾವಿನ ಮೈಯ ಬೂದಿಯ ಮಾಡಿಬಿಟ್ಟು
ಕೋವಿದರ ಚಾತುರ್ಯಕೆ ಒಡಂಬಟ್ಟು ಚಿ
ದ್ಭಾವ ಮಂದಿರದ ಬ್ರಹ್ಮಕೆ ಲಕ್ಷ್ಯವಿಟ್ಟು ೧೯

ಹಂಗಿಲೆ ಬೆಳೆದ ವೃಕ್ಷದ ಮೂಲ ಮುರಿದೂ
ರ್ಧ್ವಾಂಗಕ್ಕೆ ಸುತ್ತುವ ಜಾಣರ ಬಿರಿದು
ರಂಗು ಮುತ್ತಿನ ಮೂಗುತಿ ಹೆಣ್ಣವಿಡಿದು
ಶೃಂಗಾರ ಚೇಷ್ಟೆಯ ಮಾಡಿರೊ ಜಡಿದು ೨೦

ಬೆಳಗಿನ ಝಾವದಿ ಬೂದಿ ಚಲ್ಲ್ಯಾಡಿ
ಗೆಳೆಯರು ನೆರೆವುದೊಂದೆ ತಾಣ ನೋಡಿ
ಜಲಜಾಕ್ಷನುದ್ಯಮದಂಗಡಿಯಲ್ಲಿ
ನಲಿವ ಸ್ವಾನಂದದೂಟವ ಬೇಡಿಕೊಳ್ಳಿ ೨೧

ತಿರುತಿರುಗಿ ಬಂದು ದಣಿದು ನೀವಿಂದು
ಹರಿಯ ಮೈ ಬೆವರಿನ ಹೊಳೆಯಲ್ಲಿ ಮಿಂದು
ಥರ ಥರದ್ದದಿನಾರು ವರ್ಣಗಳಿಂದ
ತರುಣ ತರಣಿಯಂತೆ ಹೊಳೆವುದು ಚಂದ ೨೨

ಆನಂದಮಯ ವಾಸುದೇವನ ಕಂಡು
ಆನಂದಪುರದಿ ಭಕ್ತಿಯ ನೆರೆಗೊಂಡು
ಆನಂದ ತೀರ್ಥಗುರು ಕೃಪೆಯಿಂದ
ಸ್ವಾನಂದದೋಕುಳಿಯಾಡುವ ಚಂದ ೨೩

ಈ ವಿಧ ಅಧ್ಯಾತ್ಮ ಹೋಳಿಯ ಭೇದ
ಭಾವುಕ ಜನರಿಗೆ ಪರಮಾಹ್ಲಾದ
ದೇವ ಋಷಿಕುಲದೈವ ಮುಕುಂದ
ಕಾವನು ಕರುಣಾಬ್ಧಿ ಕೇಳಿ ಗೋವಿಂದ ೧೪

ವೇದನ ತಂದ ಹಯಾಸ್ಯನ ಹೋಳಿ
ಭೂಧರ ಧರಿಸಿದಮರ ಕಾರ್ಯ ಕೇಳಿ
ಮೇದಿನ ತರಲಡ್ಡಾದವನೊಮ್ಮೆ ಹೋಳಿ ಪ್ರ
ಹ್ಲಾದನಿಷ್ಠೆಗೆ ಹರಿ ಉದಿಸಿದ ಕೇಳಿ ೧೫

ನಾನೆಂಬೊ ದಾನವೇಂದ್ರನ ಮದ ಹೋಳಿ
ಹೀನರಿಗಾಗಿ ಕೊಡಲಿ ಹೊತ್ತ ಕೇಳಿ
ಜಾನಕಿ ತಂದ ದಶಾಸ್ಯನ ಹೋಳಿ
ಮಾನಿನಿಯರಾಳ್ದ ವಿಡಂಬನ ಕೇಳಿ ೧೬

ಸನ್ಮಾರ್ಗ ಬಿಟ್ಟ ಖಳರ ಮತಿ ಹೋಳಿ
ಉನ್ಮತ್ತ ಕಲಿಯನರಸಿ ಕೊಂದ ಕೇಳಿ
ಚಿನ್ಮಯಮೂರ್ತಿ ಭೂಭಾರವ ಹೋಳಿ
ಜನ್ಮಿಸಿಬಹುದೆಲ್ಲ ಮೋಹನ ಕೇಳಿ ೧೭

ಅನಂತದುರಿತರಾಶಿಗಳನ್ನು ಹೋಳಿ
ಆನಂದ ಸುಖವೀವ ನೆನೆದರೆ ಕೇಳಿ
ಅನಂತ ಅನವದ್ಯಗುಣ ಪರಿಪೂರ್ಣ
ಅನಂತಾದ್ಭುತ ಕರ್ಮ ದೀನ ದಯಾರ್ಣ ೧೮

ಈ ಪರಿ ವಿಜ್ಞಾನ ವಸಂತದಾಟ
ಚೌಪದಿ ರತ್ನಮಾಲಿಕೆ ಮಾಡಿ ಪಾಠ
ಶ್ರೀಪ್ರಸನ್ವೆಂಕಟ ಕಿಟಿರೂಪಿ ಕೃಷ್ಣ
ತಾ ಪರಿಪಾಲಿಪ ಪುರುಷವರಿಷ್ಠ ೧೯

೩೯೨

ನನ್ನಯ್ಯ ನೀನೊಬ್ಬನೆ ಮಾರುತಿವರದ ಪ.

ಉನ್ಮತ್ತ ತಂದೆ ಕೊಲ್ಲಲು ಒಯ್ಯಲು ತಾಯಿ
ಚಿನ್ನನ್ನುಳಿಸಿಕೊಂಡಳೆ ಬನ್ನವನುಣ್ಣುತ
ನಿನ್ನಿಚ್ಛೆಯೆನ್ನಲು ವಹ್ನಿವಿಷಾನ್ನವ ತಣ್ಣಸ
ವೆನ್ನಿಪೆ ತನ್ನವರಿನ್ನ್ಯಾಕೊ ನರಹರಿಯೆ ೧

ಉತ್ತಾನಪಾದಿ ಮುನಿದು ಅಡವಿಯ ದಾರಿ
ಹತ್ತಿ ನಿರಾಲಂಬದಿ ಉತ್ತಮ ಮಂತ್ರ ನಾರ
ದಿತ್ತರೆ ಭಕ್ತಿಂದ ಅತ್ತಿತ್ತಾಗದ ಚಿತ್ತಕೆ ಒಲಿದೆ
ಹೆತ್ತವರೊತ್ತಾದರೆ ವಾಸುದೇವ ೨

ಅಗ್ರಜಾವಜ್ಞ ಮಾಡಲು ವಿಭೀಷಣ
ಶೀಘ್ರ ಪಾದಾಬ್ಜಕೆರಗಲು ವ್ಯಗ್ರಪ್ಲವ
ಗಗ್ರರು ಉಗ್ರದಿ ನಿಗ್ರಹಿಸೆ ಆಗ್ರಹಿಸಿದೆ ಭ
ಕ್ತಾಗ್ರಣಿ ಹನುಮ ಮತಾಗ್ರದಿ ಪ್ರಸನ್ವೆಂಕಟ ೩

೩೯೩

ನಿನ್ನ ಮಹಿಮೆಯನಾರು ಬಲ್ಲರು
ಚಿನ್ಮಯಾತ್ಮಕನಂತರೂಪನೆ
ಮುನ್ನೆ ಕಮಲಜ ನಿನ್ನ ನಾಭಿಯೊಳುನ್ನತೋನ್ನತದಿ
ಘನ್ನ ತಪವಂಗೈದು ಕಾಣನು
ಇನ್ನು ಶ್ರುತಿಸ್ಮೃತಿ ಅರಸಿ ಅರಿಯವು
ಪನ್ನಗೇಂದ್ರನು ಪೊಗಳಲರಿಯ ಪ್ರಸನ್ವೆಂಕಟನೆ ೧

ಹರಿಯೆ ತ್ರಿದಶರ ದೊರೆಯೆ ಭಕುತರ
ಸಿರಿಯೆ ದಿತಿಜರರಿಯೆ ಅನವರತ

ಮರೆಯದಿಹ ಅಜಹರಯತೀಶ್ವರರರಿಯರಿನ್ನುಳಿದ
ಇರವು ಮನುಜ ನಾನರಿಯಲಾಪೆನೆ
ಪೊರೆಯೊ ಬಿಡದೆ ಪ್ರಸನ್ವೆಂಕಟ
ಗಿರಿಯರಸ ಜಗದೆರೆಯ ಸುರವರವರಿಯ ಮಾಸಹನೆ ೨

ನಾಗರಿಪುಗಮನಾಗಭೃತ ಶುಭ
ನಾಗಪಾಕ್ಷಘನಾಗಮನಿಗಮ
ನಾಗಪತಿ ವದನೈಕಸ್ತುತ ಸುಗುಣ ಗುಣಾರ್ಣವನೆ
ನಾಗಹರಸಖ ನಾಗಘನಮಣಿ
ನಾಗಗ್ರಸಿತಭಾ ನಾಗದ್ವಿಟಮುಖ
ನಾಗಧರನುತ ನಾಗಮದಹ ಪ್ರಸನ್ವೆಂಕಟೇಶ ೩

೩೯೪

ಭಕ್ತರೆಂದರೆ ನೈಜ ಭಕ್ತರವರು ಪ.

ಚಿತ್ತಜನಯ್ಯನ ಚರಿತಾಮೃತಕೆ ಮನವಿಟ್ಟು ಅ.ಪ.

ಅಧಿಯಾತ್ಮ ತಾಪಗಳು
ಅಧಿಭೂತ ಕ್ಲೇಶದನುಭವ
ಅಧಿದೈವದಟ್ಟುಳಿಯನೆಣಿಸರತಿ ಬಲವಂತ
ರ್ಮಧು ಮಥನಗಲ್ಲದರ ಬಗೆಗಂಜರು ೧

ವೇದತಂತ್ರವಾಕ್ಯದಿಂದುಪದೇಶ ಮಾ
ಡಿದರೆ ಮೋಹನಕೊಳಗಾಗರು
ವದಿಸಿ ಬಲವತ್ನಾನವ ಮಾಡಿ ಬೆದರಿಸಲು
ಕದಲದಂತಃಕರಣದ್ಹರಿದಾಸರು ೨

ಬದಿಗೆ ಬಂದಡಲಾವ ದುರಿತ ಕೋಟಿಗಳನ್ನು
ತುದಿಗಾಲಿಲೊದ್ದು ಸಲೆ ತಲೆವಾಗರು

ಹುದುಗೊಂಡು ಷಡುವರ್ಗ ರಿಪುಗಳನು ಗೆದ್ದು ಹರಿ
ಪದಲಂಪಟ ಜ್ಞಾನಾಂಬುಧಿಗಳು ೩

ವಿಧಿಭವೇಂದ್ರಾದಿ ಸುರರಾಳ್ದ ಲಕುಮೀಪತಿಯ
ಸುದಯಾರಸನುಂಬುವ ಬೋಧನವರು
ಸದಮಲ ಗುಣಾನಂತ ಪ್ರಸನ್ವೆಂಕಟಪತಿಯ
ಹೃದಯವಲ್ಲಭರೆನಿಪ ಅಚಲ ಮತಿಯವರು ೪*

೩೯೫

ಭಜಿಸಿ ಬಹು ಭಕುತಿಯಿಂದ
ತ್ಯಜಿಪ ಭವಬಂಧನವ ಹರಿಯ ಪದವ ಪ.

ಮನವೈರಿಯಂ ಪಿಡಿದು ಮಿತ್ರನಂ ಮಾಡಿ ಕೊಂ
ಡನುನಯದಿ ವೈರಾಗ್ಯ ಘನಸಿರಿಯೊಳು
ದಿನದಿನಕೆ ಮುದವೇರಿ ತಾತ್ವಿಕರೊಡನೆ ಮಧ್ವ
ಮುನಿರಾಯನೊರೆದ ಪರಿ ಹರಿಯ ಪಾದವ ೧

ತುದಿಮೊದಲೆ ಸರ್ವಕಾಲಕೆ ಚಿಂತನೆಯ ಬಲಿದು
ಪದುಮಾಕ್ಷನಾಕೃತಿಯ ನೋಡಿ ದೃಢದಿ
ಕದಲಗುಡದಂತಃಕರಣ ಸ್ನೇಹ ಸಾರವನು
ಹೃದಯ ಮಂಟಪದೊಳಗೆ ಹರಿಯ ಪದವ ೨

ಹರಿಪರಾತ್ಪರ ಲಕುಮಿ ಅರಸಿ ಅಜಕುವರ ಹರ
ವರ ಪೌತ್ರ ಸುರಮುನಿಜನರು ದಾಸರು
ತರತಮದ ತಂತ್ರಸಾರ್ಥದಿಂ ನೆರೆ ನಂಬಿ
ಅರಸ ಪ್ರಸನ್ವೆಂಕಟ ಶ್ರೀಹರಿಯ ಪದವ ೩

---

* ಈ ಕೀರ್ತನೆಯ ಒಂದು ನುಡಿ ಕಳೆದು ಹೋಗಿರಬೇಕು. – ಸಂ.

३೯೬

ಭಾಪು ಬಲ್ಲಿದ ಹನುಮ ಭೂಪ ಹನುಮ
ಶ್ರೀಪದ್ಮನಾಭನ ದಾಸ ಭಕ್ತರ ವಿಲಾಸ ಪ.

ಹಾಟಕ ಯಜ್ಞೋಪವೀತ ಕಚ್ಚುಟ ಕರ್ಣಕುಂಡಲ ಮುಖ್ಯ
ಕೋಟಿಕಟಕ ಸಮಗಾತ್ರ ದಿಟ್ಟವಟು ಪಿಂಗಳನೇತ್ರ
ದುಷ್ಟದಶಶಿರನ ಗರುವ ಮುಷ್ಟಿಯಿಂದಲ್ಹೊಡೆದೆ ಉರಕೆ
ಕೋಟಿ ಪ್ಲವಗರ ಪೊರೆದಭಯ ಕೊಟ್ಟು ಪಾಲಿಸೆನ್ನ ಜೀಯ ೧

ದುರುಳ ಕುನೃಪನಟ್ಟಿ ಘನ ಗರಳನುಂಗಿ ಪುರೋಚನನ
ಉರುಹಿ ಧರ್ಮಾದ್ಯರನು ಪೊರೆದೆ ಕಿರ್ಮೀರಕರರಿದೆ
ಕ್ರೂರ ಕೌರವನ ಪಾವಕ ಹರಿಶರಣ ಜನಪಾಲಕ
ಮರೆಹೊಕ್ಕೆ ಬಿಡದಿರು ಕೈಯ ಧೀರ ಶ್ರೀ ಭೀಮಸೇನರಾಯ ೨

ಎಸೆವ ದಂಡಕಮಂಡಲವ ಧರಿಸಿ ಮಾರಶರವ ಜಯಿಸಿ
ಬಿಸಜಾಕ್ಷನ ಪೊಳಲ ತೋರಿದೆ ಕಶ್ಮಲಮತವಳಿದೆ
ವಸುಧೆಗೆ ವೈಷ್ಣವರೊಡೆಯ ನೋಯಿಸದೆ ಪೊರೆ ನಿನ್ನ ಪಡೆಯ
ಶ್ರೀಶ ಪ್ರಸನ್ನವೆಂಕಟೇಶಾಂಘ್ರಿ ಸರೋಜರಜಭೃಂಗ ೩

३೯೭

ಭಾಪು ಹರಿಮತನೆ ಪ.

ಭಾಪು ಹರಿಮತಸ್ಥಾಪಿತನೆ ಮೂರು
ರೂಪಿನಲಿ ಬಂದು ಶ್ರೀಪತಿಯು ಮೆಚ್ಚು
ವಾ ಪರಾಕ್ರಮ ವ್ಯಾಪಿಸಿದೆ ಭಾರತೀಪತೆ ತೇ ನಮೊ ಅ.ಪ.

ಆದಿಯಲಿ ಅಂಜನಾದೇವಿಯ ಮಂಗ
ಳೋದರದಿ ಪುಟ್ಟಿ ಶ್ರೀ ದ್ಯುಮಣಿ ಕುಲ

ಮೇದಿನೀಶನ ಪಾದಕೆರಗಿ ಅಂಬೋಧಿದಾಟ್ಯಾಜ್ಞಧಿ
ಆ ದಶಾಸ್ಯನ ಲಂಕಾ ದಹಿಸಿ ಜಾನ
ಕೀದೇವಿಯ ಸುದ್ದಿ ಶ್ರೀಧರಗರುಹಿ
ಯೋಧ ಬಾಧಿತರಾದ ಕಪಿಚೇತನದಾಯಕ ತೇ ನಮೊ ೧

ತುಂಗಗಿರಿ ಶತಶೃಂಗಕೃತ ಸುವ
ಪ್ರಾಂಗ ಅಗ್ನಿಜಾಸಂಗ ಮತ್ತ ನೃ
ಪಂಗಳನು ಭುಜದಿಂ ಗೆಲಿದು ಯಜ್ಞಸಂಗ್ರಹವ ಪೂರಿಸಿ
ಸಂಗಡಿಸಿದರಿ ಸಂಗರವ ಪೊಕ್ಕು
ಸಿಂಗಗರ್ಜನೆಯಿಂ ಗದೆಯ ಕೊಂಡು
ಭಂಗಿಸಿದೆಯೊ ಯುಗ್ಮಾಂಗ ಕೃಷ್ಣ ಸೇವಾಂಗೀಕೃತ ತೇ ನಮೊ ೨

ತುಚ್ಛರಿಳೆಯೊಳು ಪೆಚ್ಚಿ ಬಗೆ ಬಗೆ
ಕುಚ್ಚಿತಾರ್ಥ ವಿರಚ್ಚಿಸ್ಯಾತ್ಮಗೆ
ಅಚ್ಚುತೈಕ್ಯವ ಉಚ್ಚರಿಸುತಿರೆ ಸ್ವಚ್ಛ ಯತಿರೂಪದಿ
ಮಚ್ಚರಿಪರನು ಕೊಚ್ಚಿ ತಂತ್ರಸಾ
ರಾರ್ಚನೆಯಭೇದ ನಿಶ್ಚೈಸಿದೆ ಶಿರಿ
ಸಚ್ಚಿದಾತ್ಮ ಶ್ರೀವತ್ಸ ಪ್ರಸನ್ವೆಂಕಟೇಚ್ಛಮತ ತೇ ನಮೊ ೩

೩೯೮

ಭೇರಿ ಬಾರಿಸುತಿದೆ ಭೂರಿ
ದ್ವಾರಕೆ ಅರಸನಾಗರ ದ್ವಾರದ ಮುಂದೆ
ಕ್ರೂರ ಖಳರ ಎದೆ ದಾರಿಸುವುದು ಯದು
ವೀರರ ಭೇರಿ ಮುರಾರಿಯ ಪಾಳೆಯ ಭೇರಿ ಪ.

ಅನಂತಾಸನವಿದೇ ಅನಾದಿ ಶ್ರೀವೈಕುಂಠ
ಅನಂತ ಶ್ವೇತ ದ್ವೀಪಸ್ಥಾನ
ಈ ನಂದನ ಸೂನು ಆನಂದಮಯ ಬ್ರಹ್ಮ
ಮೌನಿ ಸುರನಿಕರ ಧ್ಯಾನಗೋಚರನೆಂದು ೧

ಬ್ರಹ್ಮ ರುದ್ರೇಂದ್ರಾದಿ ಸುಮ್ಮನಸರನಾಳ್ವ
ರಮ್ಮೆಯರಸ ಸರ್ವೋತ್ತಮ
ಧರ್ಮೋದ್ಧಾರ ಅಧರ್ಮಸಂಹರ ಪರ
ಬ್ರಹ್ಮ ವಾಸುದೇವ ಬ್ರಹ್ಮಣ್ಯದೇವನೆಂದು ೨

ಸೂತ್ರರಾಮಾಯಣ ಪವಿತ್ರೋಪನಿಷದ್ವೇದ
ಗೋತ್ರ ಭಾರತ ಪಂಚರಾತ್ರ
ಶಾಸ್ತ್ರೌಘ ಸನ್ಯಾಯಶಾಸ್ತ್ರ ಸ್ಮೃತಿನಿಕರ
ಸ್ತೋತ್ರಕ ಯಜ್ಞ ಗೋಪೀ ಪುತ್ರ ಶ್ರೀಕೃಷ್ಣನೆಂದು ೩

ಮಂಗಳಾನಂತ ಗುಣಂಗಳಬುಧಿ ತ್ರಿಗು
ಣಂಗಳಿಂದೆಂದಿಗಸಂಗ
ಗಂಗೆಯರ್ಚಿತ ಗಂಗಾನ್ವಿತಪದ
ತುಂಗ ವಿಕ್ರಮ ಯಜ್ಞಾಂಗಾಚ್ಯುತನೆಂದು ೪

ನೂರೆಂಟು ವೆಗ್ಗಳ ಹದಿನಾರು ಸಾವಿರ ದಿವ್ಯ
ನಾರಿಯರಾಳುವ ಶೌರಿ
ನಾರದನಿದರ ವಿಚಾರ ಮಾಡಲಿ ಬರೆ
ಮೂರುತಿ ಅನಂತ ತೋರಿ ಬೆರೆತರೆಂದು ೫

ಸೃಷ್ಟ್ಯಾದಿ ಕಾರಣ ಶಿಷ್ಟ ಸಂರಕ್ಷಣ
ದುಷ್ಟಮಥನ ಪೂರ್ಣ ತುಷ್ಟ
ಕಷ್ಟ ಜರಾಮೃತ್ಯು ನಷ್ಟಕರ ಏಕೌ
ವಿಷ್ಣು ವರಿಷ್ಠ ವಿಶಿಷ್ಠ ಸುಖದನೆಂದು ೬

ವೇದೋದ್ಧಾರ ಕ್ಷೀರೋದಧಿಮಥನ ಧ
ರಾಧರ ಹಿರಣ್ಯಕಸೂದನ
ಪಾದತ್ರಯ ಖಳಭೇದಕ ಯಶೋಧರ
ಮಾಧವ ಬುದ್ಧ ಕಲಿರೋಧ ಕಾರಣನೆಂದು ೭

ಪಾಂಡವ ಸ್ಥಾಪಕ ಲೆಂಡಕೌರವ ಹರ್ತ
ಗಾಂಡೀವಿ ಸಖ ಸುರಶೌಂಡ
ಚಂಡ ಚಂದ್ರಾನಂತಾಖಂಡ ಪ್ರಕಾಶಮತ
ಪೌಂಡ್ರಕ ಸಾಲ್ವಮತ ಖಂಡಾನಂತನೆಂದು ೮

ಧಾಂ ಧಾಂ ಧಿಮಿಕಿಟ ಧಾಂದಂದಳ ದಂದಳ ಧಿಮಿಕಿಟಧಾಂ
ತಾಂಧಿ ಮದಾಂಧರಿಗೆ ಅಂಧಂತಾಮರ ಸಧಾಂ
ಧೊಂದೊಂದೊಂತು ಪ್ರಸನ್ನವೆಂಕಟಮಂದಿರಾ
ನಂದ ನಿಲಯ ಭಕ್ತವತ್ಸಲನೆಂದು ೯

೩೯೯

ಮಹತಿಗೆ ಮಹತು ಹರಿನಾಮ
ಬಹುಜನ್ಮಜಲಧಿ ಶೋಷಿಸುವ ಹರಿನಾಮ ಪ.

ಹಿಂದೊದಗಿದಘರಾಶಿ ಬೇಯಿಸಿ ಬಿಸುಟುವ ನಾಮ
ಮುಂದೆ ಬಹ ದುರಿತಕಡ್ಡಹ ನಾಮ
ಮಂದಮತಿ ಕತ್ತಲೆಗೆ ಬಾಲಾರ್ಕಸಮ ನಾಮ
ದಂದುಗದ ಬಳ್ಳಿಯನು ಹರಿವ ನಾಮ ೧

ಮುಕುತಿ ನಗರವ ತುಂಬಿಸುವ ಅಭಯಕರ ನಾಮ
ಶಕುತ ಯಮಾಲಯಕೆ ಭಯಂಕರದ ನಾಮ
ಅಕಳಂಕ ದಾಸರಿಗೆ ಆದ್ಯಂತಗತಿ ನಾಮ
ಭಕುತರೆಡರಿನ ಗಿರಿಗೆ ವಜ್ರನಾಮ ೨

ಸರ್ವ ಶ್ರುತಿಮುನಿಗಳುಗ್ಗಡಿಸುತಿಹ ನಾಮ
ಉರ್ವಿಯೊಳು ನಂಬಿದರ ಪೊರೆವ ನಾಮ
ಸರ್ವಜ್ಞರಾಯಗುರು ನಿರ್ವಚನಿಸುವ ನಾಮ
ಸರ್ವೇಶ ಪ್ರಸನವೆಂಕಟೇಶನ ಶ್ರೀನಾಮ ೩

೪೦೦

ಮೋಕ್ಷೋಪಾಯಕಾನಂದ ಮುನೀಂದ್ರನ
ಶಿಕ್ಷಾ ಮಾರ್ಗಹುದಯ್ಯ
ಲಕ್ಷ್ಯಶ: ಲಕ್ಷಣವಾರ್ಹೇಳೇನು
ಲಕ್ಷದಿ ಗುಣವಿಲ್ಲಯ್ಯ ಪ.

ಸುಕೃತ ತಾನಾದರೆ ಚಿರಕಾಲಕೆ ಒಮ್ಮೆ
ಧಿಕೃತವಾಹುದು ಭವತುಷ್ಟಿ
ಸುಖವೆಂಬುದು ಸ್ವರೂಪಾನಂದಾನುಭವ
ವಿಕಸವಾಗುವ ಜ್ಞಾನದೃಷ್ಟಿ ಆ
ಸುಖವಾಪೇಕ್ಷಿಸಿ ಪ್ರಕೃತವುದಾಸಿಪ
ದಖಿಳ ಮಹಾತ್ಮರಭೀಷ್ಟಿ
ಸಕಳಾನಿಷ್ಟವ ಸಾಗಿಸುವ ಶ್ರೀ
ಸುಖತೀರ್ಥರ ಶುಭಗೋಷ್ಠಿ ೧

ಕಿವಿಯಲಿ ಸತ್ಶಾಸ್ತ್ರವ ಕೇಳಿ ಧ್ಯಾನಮನ
ನವ ಸಾಧಿಪುದೆ ದೇವಸಾರ್ಥಿ
ಕುವಲಯಪ್ರಿಯಕುಲತಿಲಕನು ಮೆಚ್ಚಿಹ
ನವಭಕುತಿಯ ಪಥ ಕೀರ್ತಿ
ಅವಿರಳ ಎದೆಗದ್ದಿಗೆಯೊಳು ಮೆರೆವನ
ಸವಿಗುಣ ನಿರ್ಣಯವಾರ್ತಿ
ವಿವರಿಸಿ ವಾರಂವಾರ ವರದ ಮ
ಧ್ವವ ಜಗದ್ಗುರು ವರಮೂರ್ತಿ ೨

ಈಶ್ವರ ಸಾಕ್ಷಾತ್ಕಾರದ ಭೇದರ
ಹಸ್ಯ ವಿಚಾರವಂತ ಯೋಗಿ
ನಶ್ವರಾನಶ್ವರವರಿತ ವೈರಾಗ್ಯದ
ಐಶ್ವರ್ಯಾನ್ವಿತ ಭೋಗಿ

ಶಾಶ್ವತ ಪ್ರತ್ಯಕ್ಷಾದಿ ತ್ರಿಪ್ರಮಾಣ
ಭಾಷ್ಯಕ ಶ್ರೀಪದಯೋಗಿ
ವಿಶ್ವದೊಡೆಯ ಪ್ರಸನ್ವೆಂಕಟಪತಿ ಪದ
ವಿಶ್ವಾಸಿಕ ಮುನಿಯೋಗಿ ೩

೪೦೧

ಯದುವೀರ ಒದಗೆನ್ನ ನಾಲಿಗೆಗೆ
ಉದಯಾದಿ ಅಸ್ತಾಂತ ಆವಾವಾಗೆ ಪ.

ನಿನ್ನ ನಾಮದ ಸ್ಮರಣೆಯೆ ಶುಭಕರ್ಮವು
ಉನ್ನತ ಸಂಕೀರ್ತನೆ ಶತಕ್ರತುವು
ಪುಣ್ಯಗಂಗಾಸ್ನಾನದ ಫಲಕಧಿಕವು
ಘನ್ನ ಜಪದ ಬೀಜವೆ ನಾಮವು ೧

ಬಂಗಾರದಿಳೆಯಳೆದೊಲಿದೀವ ದಾನದಿ
ಹಿಂಗದೆ ಉಭಯಸ್ಯ ಗೋಶತದಿ
ಶೃಂಗಾರ ಕೋಟಿ ಕನ್ಯಾದಾನಕಧಿಕವು
ಮಂಗಳಮಹಿಮ ಮುಕುಂದನ ನಾಮವು ೨

ಧರ್ಮಾರ್ಥ ಕಾಮಮೋಕ್ಷಗಳ ಮೂಲವಿದೆಂದು
ನಿರ್ಮಲ ಶ್ರುತಿ ಸಾರುತಾವೆಂದು
ಮರ್ಮವರಿತು ನಾಮ ನಂಬಿದೆ ಶೇಷಾದ್ರಿಯ
ಹರ್ಮ್ಯನಿಲಯ ಪ್ರಸನ್ವೆಂಕಟಯ್ಯ ೩

೪೦೨

ಯಾತರಭಿಜ್ಞತೆ ಯಾತರ ಭಕುತಿ ಶ್ರೀ
ನಾಥಾಂಘ್ರಿ ವಿಮುಖಾದ ಸೂತಕಿಗಯ್ಯ ಪ.

ಕಪಟನಾಟಕ ಸೂತ್ರ ಅನಂತಗುಣ ನಿತ್ಯ
ತೃಪುತ ಮುಕುತ ನಿತ್ಯ ಸ್ವತಂತ್ರಗೆ
ಉಪಾಧಿ ಸಗುಣನೆಂದನಾದಿ ನಿರ್ಗುಣನೆಂದು
ಉಪಾಸನೆವಿಡಿದ ಸೋಹಂಭಾವದವಗೆ ೧

ಅಪುಶಾಯಿ ಅಗಣಿತ ಆನಂದ ಬ್ರಹ್ಮಾದಿ
ತಾಪಸರರಸ ಪುರುಷೋತ್ತಮಗೆ
ಉಪಚಾರಕ್ಹರಿಯೆಂದು ಹರಕರ್ಮ ರವಿಗಣಾ
ಧಿಪರೆ ಉತ್ತಮರೆಂಬ ಕಪಟಮಾನಿಸಗೆ ೨

ಪೂರ್ಣಪ್ರಜ್ಞರ ಮತ ನವಭಕುತಿಗಳ
ನಿರ್ಣಯದಲಿ ತರತಮವಿಲ್ಲದೆ
ಅರ್ಣವ ಕಲಿತೇನಿನ್ನಾಕಾಶ ಚರಿಸೇನು
ಪೂರ್ಣ ಪ್ರಸನ್ವೆಂಕಟೇಶನೊಪ್ಪಿರದೆ ೩

೪೦೩

ಉಗಾಭೋಗ

ಲಕುಮಿ ಹರಿಯರಸಿ ನಾಲಕುಮುಖನೆ ಮಗ ವಾಣಿ
ಭಕುತಿಗಭಿಮಾನಿ ಪಾರ್ವತಿ ಸೊಸೆಯರು
ಮುಖಸಹಸ್ರನು ಖಗಪ ಮುಖಪಂಚ ಪೌತ್ರ ಶತ
ಮುಖ ನೃಪ್ಪ (?) ಪಂಚಸಾಯಕನಣುಸುತ
ಸಕಲ ಸುರಋಷಿ ವೈಷ್ಣವನಿಕರವೆಲ್ಲವು ಭೃತ್ಯ
ಮುಕುತ ಜನರಲ್ಲಿ ತರತಮಭಾವವು
ಸುಖತೀರ್ಥಗುರು ಶಾಸ್ತ್ರಾನುಕರಿಸೆ ಪ್ರಸನ್ವೆಂಕಟ
ಮುಕುತಿಯ ಕೊಡುವನೆಂಬ ರಾದ್ಧಾಂತದ ಅರುಹಿ(ರಿವಿ ?)ನವ
ಮುಕುತ ಮರಹಿನವ ಮೂಢ ಈ ನರದೇಹವಸ್ಥಿರ ೧

೪೦೪

ಶರಣು ಶುಭಾಮಲಕಾಯ ಋಜುಗಣಾ
ಭರಣಾನಂದ ಮುನಿರಾಯ
ಹರಿಗುಣಗಣವಾರಿಧಿಮಗ್ನನೆ ಜಯ
ಪರಮಪದಜ್ಞನೆ ಜಯತು ಸದಾ ಜಯ ಪ.

ಶುಕ್ಲ ರುಧಿರ ನಿರ್ಲಿಪ್ತ ಪರತ
ತ್ವಕ್ಲುಪ್ತನೆ ತ್ರಿಜಗವ್ಯಾಪ್ತ
ಅಕ್ಲೇಶಾನ್ವಿತ ಮಾಯಾಮನಹರ
ಅಜ್ಞಜನೋದ್ಧರ ಜಯತು ಸದಾ ಜಯ ೧

ಶಲ್ಯರಾಜನ ಭಟಹಾರಿ ಮಹಾವಾ
ತ್ಸಲ್ಯಾಂಕಿತ ಸುಖಕಾರಿ
ಬಾಲ್ಯತನದಿ ಜಗದ್ಗುರುವೆನಿಸಿದೆ ಕೈ
ವಲ್ಯದಾಯಕ ಪ್ರಭು ಜಯತು ಸದಾ ಜಯ ೨

ಸೂತ್ರಾರ್ಥದ ಧೀ ಮಾತ್ರದೇಹಿ ವಿ
ಧಾತೃ ಜನಕ ಪದಪ್ರೇಮಪಾತ್ರ
ಪೌತ್ರ ಪ್ರಸನ್ನವೆಂಕಟಪತಿ ಪೂರ್ಣ
ವೇತೃ ನಂಬಿದೆ ಜಯತು ಸದಾ ಜಯ ೩

೪೦೫

ಶರಣು ಸಕಲ ಪ್ರಾಣನಾಥ
ಸರಸಿಜಭವ ಪದವಿಭೋಕ್ತ
ಮೂರವತಾರಿ ಮುಖ್ಯಪ್ರಾಣ
ಹರಿಪರಾಯಣ ತೇ ನಮೊ ಪ.

ತುತ್ತಿಸಿನನ ಬಿಸುಟು ಜಗದ
ಕರ್ತ ರಘು ಪುಂಗವನ ಪದದಿ

ಭಕ್ತಿ ಬಲಿದು ಇತರ ವಿಷಯ
ಚಿತ್ತನಾಗದ ಸುಗುಣಧೀ
ಹತ್ತು ಹೆಡಕಿನವನ ವನವ
ಕಿತ್ತು ಸಭೆಯನುರುಹಿ ಭಯವ
ಬಿತ್ತಿ ಜನನಿ ಕುಶಲ ಒಡೆಯ
ಗಿತ್ತ ಹನುಮ ತೇ ನಮೊ ೧

ಮುಪ್ಪಿನವಳ ಮಗನನರಿದು ಕೃ
ಷ್ಣಾರ್ಪಣವನೆ ಮಾಡಿ ನೃಪರ
ಕಪ್ಪ ಹೊರಿಸಿ ತಂದು ಮಖಕೆ
ಒಪ್ಪಿಸಿದ ಅಗ್ರಜಾತಗೆ
ಭೂಪನಣ್ಣನ ಅಣುಗರನ್ನು
ಅಪ್ಪಳಿಸಿ ತಮಸಕೆ ಕಳುಹಿ
ತಪ್ಪದೆಂದೂ ರಂಗ ಸೇವೆಯೊ
ಳಿಪ್ಪ ಶ್ರೀಭೀಮ ತೇ ನಮೊ ೨

ವಿಷ್ಣುಭಟರ ಮತಿಗೆ ಕಲಿಯು
ವೇಷ್ಟಿಸಿರಲು ಬ್ರಹ್ಮ ಸೂತ್ರ
ಸ್ಪಷ್ಟ ತಿಳುಹಿ ತಾತ್ವಿಕ ಜನ
ಶ್ರೇಷ್ಠಿ ನೆರಹಿ ಮಿಥ್ಯರ
ಭ್ರಷ್ಟವಚನ ನೀಕರಿಸಿ ನಿ
ಜೇಷ್ಟಮತರ ಹೊರೆದೆ ಗುರುವ
ರಿಷ್ಟ ಮಧ್ವಪ್ರಸನ್ನವೆಂಕಟ
ಕೃಷ್ಣ ಮತ್ಯ ತೇ ನಮೊ ೩

೪೦೬

ಶ್ರೀ ವಧೂಧವಗೆ ನೈವೇದ್ಯಕೊಡುವೆ ಸತತ
ಭಾವಶುದ್ಧಿಯಲಿ ಮನೋವಾಕ್ಕಾಯದಿಂ ಪ.

ಪ್ರಥಮಾನ್ನ ಶ್ರೀಹರಿಯ ಭಕ್ತಿ ಕಾಮನ ದೀಕ್ಷೆ
ದ್ವಿತೀಯಾನ್ನ ಶ್ರೀಹರಿಯ ಸೇವಾಸಂಕಲ್ಪವು
ತೃತೀಯಾನ್ನ ಶ್ರೀಹರಿಯ ಮಹಿಮಾತಿಶಯಜ್ಞಾನ
ಚತುರ್ಥಾನ್ನ ಹರಿಗುಣಜ್ಞತೆಯಲಾಸ್ತಿಕ್ಯ ೧

ಐದನೇ ಅನ್ನ ಹರಿಸೇವೆಯಲಿ ಧೈರ್ಯ ಮ
ತ್ತಾದರದ ಭಗವದ್ಧರ್ಮ ಆರನೇ ಅನ್ನ
ಮಾಧವನ ಗುಣವಿವೇಕದಿ ತಿಳಿವುದೇಳನೇ
ಓದನವು ಅನ್ಯಧರ್ಮತ್ಯಾಗ ಮೃಷ್ಟಾನ್ನ ೨

ಹೀಗೆ ಮನೋರೂಪನ್ನ ಸರ್ವೇಷು ವಾಕ್ಯದಿ ಹರಿಗು
ಣೌಘಗಳ ಕವನ ನವಮಾನ್ನದಿಂದ
ಈ ಗೇಹ ದೇಹ ಪ್ರಾಣಾರ್ಪಣೆಯಲಿ ಉದಾರ
ನಾಗುವದೆ ಪ್ರಸನ್ವೆಂಕಟಕೃಷ್ಣಗೆ ದಶಾನ್ನ ೩

೪೦೭

ಶ್ರೀ ವೆಂಕಟೇಶ ಭುವನೇಶ್ವರೇಶ ಪಾಹಿ ವೇ
ದವೇದ್ಯ ಕರುಣಾಢ್ಯ ಗತಮೌಢ್ಯ ಪ.

ಸರ್ವಚೇತನ ಜಡನಿಚಯಪೂರ್ಣ ಹೇ ಸುಪೂರ್ಣ
ಶರ್ವೇಶ ವಿಧಿವಿನುತ ವಿಮಲಚರಣ
ಉರ್ವಿ ಭಾರಕಹರಣ ಶರಣಾನ್ವಯೋದ್ಧರಣ
ನಿರ್ವಾಣಪದಪ್ರದ ನಿತ್ಯಾಂತ:ಕರಣಾ
ನಿರ್ವಚನೀಯಾತಿಶಯಾನಾಥನಾಥ ಸುಗೀತ
ಸರ್ವಾಮರಾರ್ಥಿಸುದಾತ ತಾತ
ಸರ್ವಜ್ಞ ವಾರಣೇಂದ್ರಭರಣ ಹಿತಕರಣ ದಾ
ಶಾರ್ಹ ಹಿತಕರಣ ಸಂಸ್ಕೃತಿ ವಾರ್ಧಿಕರಣ ೧

ಆತ್ಮಾಂತರಾತ್ಮ ಪರಮಾತ್ಮ ಜ್ಞಾನಾತ್ಮ ಪುರು
ಷೋತ್ತಮಾನ್ನಮಯ ಪ್ರಾಣಮಯ ಮನೋಮಯಾ

ಧ್ಯಾತ್ಮಪ್ರಿಯ ಮಾಪ್ರಿಯ ವಿಬುಧಜನಸ್ವಪ್ರಿಯ
ಆತ್ಮವೈಭವಪ್ರಿಯ ಭಕ್ತಪ್ರಿಯ
ಆತ್ಮೀಯ ವೀರ್ಯ ಔದಾರ್ಯೋದ್ಧೃತಟಂಕ
ಆತ್ಮ ಅನಂತ ನಿಕುರುಂಬ ಬಿಂಬ
ಆತ್ಮ ನಿವೇದನ ಬಲೀಂದ್ರ ನುತ ಉಪೇಂದ್ರ ನಿ
ತ್ಯಾತ್ಮ ಗುಣವೃಂದ ದಯಾಸಾಂದ್ರ ವಿಭೋ ಸಿಂಧೋ ೨

ಸೃಷ್ಟಿ ಸ್ಥಿತಿ ಲಯ ನಿಯಮ ಜ್ಞಾನಾಜ್ಞಾನ ಬಂಧ ಮೋಕ್ಷಾ
ದ್ಯಷ್ಟ ಕಾರಣ ಸದಾಸಾಧುಪಕ್ಷ
ದುಷ್ಟಹರ ದುರಿತತಮೋಭಾನು ಬುಧ ಸುರಧೇನು
ವಿಷ್ಣು ಜನರಕ್ಷ ಸದ್ದೀಕ್ಷ ದಕ್ಷ
ಶಿಷ್ಟಮೂಲ ಪ್ರಕೃತಿ ತುಷ್ಟಿದ ಜಡ ಪ್ರಕೃತಿ
ಪುಷ್ಟಿಕರ ಸುಲಲಿತ ಶ್ರೀವತ್ಸಪಕ್ಷ
ಸ್ಪಷ್ಟಲೀಲಾದಿ ನಾರಾಯಣ ನಿರಾಮಯ
ವೃಷ್ಣೀಶ ಸಾಷ್ಟ ಸಾಪರಾಗತಿ ೩

ಬುದ್ಧೀಂದ್ರಿಯ ಪ್ರಾಣವರ್ಧಕ ಕೃತೀಶ ಅನಿ
ರುದ್ಧ ಪಾಲನಪರ ಪ್ರದ್ಯುಮ್ನ ವಿಭೋ
ರುದ್ರ ನಿಯಂತಾರ ಹಂತಾರ ಸಂಕರ್ಷ
ಣಾದ್ಯ ವಾಸುದೇವ ಸನ್ಮೋಕ್ಷಪ್ರದ
ಸದ್ಧಾಮತ್ರಯಗ ಶ್ರೀಪದ್ಮನಾಭಾಚ್ಯುತ ಮು
ಕ್ತಿದಾತ ಗಾತ್ರ ಅತ್ಯದ್ಭುತಾರ್ಥ
ಶುದ್ಧಕರ ನಾಮಾಪ್ತ ಕಾಮಾಪ್ರಮೇಯ ಸ
ಮೃದ್ಧ ಸುಖಗಾತ್ರಾಬ್ಜನೇತ್ರ ಮಿತ್ರ ೪

ಸತ್ಯವ್ರತ ಪಾಲಾಬ್ಧಿ ಕೀಲನಸ್ರುಕ್ಕೋಲ ಖಳ
ದೈತ್ಯಜಸುಶೀಲಪ್ರಿಯ ವಟು ನೃಪಕುಲ
ಹರ್ತ ದ್ವಿಜಕರ್ತ ದಶವಕ್ತ್ರ ಮಾರಕ ನಮಿತ
ಪಾರ್ಥಪದ ಶುದ್ಧೋದನ ಚಿತ್ತಹರಣ

ಮತ್ತ ಕಲಿಹರ ಧರ್ಮಸ್ಥಾಪಕ ಪರಾತ್ಪರ
ಸತ್ಯಸಂಕಲ್ಪ ಪ್ರಸನ್ನವೆಂಕಟಪರ ೫

೪೦೮

ಸಂಗವಾಗಲಿ ಸಾಧು ಸಂಗವಾಗಲಿ
ಸಂಗದಿಂದ ಲಿಂಗದೇಹ ಭಂಗವಾಗಲಿ ಪ.

ಅಚ್ಯುತಾಂಘ್ರಿ ನಿಷ್ಠರಾದ್ಯದೃಚ್ಛಲಾಭ ತುಷ್ಟರಾಧ
ನಿಶ್ಚಯ ಜ್ಞಾನವಂತರಾದ ಅಚ್ಚ ಭಾಗವತರ ನಿತ್ಯ ೧

ತಂತ್ರಸಾರ ಅಷ್ಟಮಹಾಮಂತ್ರ ಪರಿಪೂರ್ಣ ಸ್ನೇಹ
ಯಂತ್ರದಿಂದ ಜಗತ್ಸ್ವಾತಂತ್ರ್ಯನ ಗುರಿ ಮಾಡುವವರ ೨

ಪಂಚಸಂಸ್ಕಾರ ಭೇದ ಪಂಚಕಯುಕ್ತರಾಗಿ ಪ್ರ
ಪಂಚ ಸೂತ್ರ ಪ್ರಸನ್ನವೆಂಕಟ ಪಂಚಬಾಣನಯ್ಯನವರ ೩

೪೦೯

ಸಂತರವರೆ ನೋಡಿರ್ರೈ ಕೈವಲ್ಯದ
ಸಂತರವರೆ ನೋಡಿರ್ರೈ ಪ.

ಸತ್ಯ ರಮೇಶನ ಸೃಷ್ಟಿಯೆ ಸತ್ಯ
ಹತ್ತೆರಡೈದು ತತ್ವವೆ ಸತ್ಯ
ಸತ್ಯಾತ್ಮೇಶರ ಭೇದವೆ ಸತ್ಯ
ಸತ್ಯಾತ್ಮಕನ ಪದ ಸತ್ಯೆನುವ ೧

ಹರಿಭಕ್ತರ ಕಂಡಪ್ಪುತ ನಿರುತ
ಹರಿಸಲ್ಲಾಪ ಕಥಾಶ್ರಯ ಬಲಿದ
ಹರಿ ಭೃತ್ಯರಿಗನ್ನೋದಕನೀವರು
ಹರಿ ಸಂಕೀರ್ತನೆ ಮನಮನೆಯವರು ೨

ಆನಂದಕೆ ಕವಲಿಲ್ಲದ ಸುಖದು:
ಖಾನಂದವನನುಭವಿಸಿ ಬಿಡುವರು
ಆನಂದಮುನಿಯ ಮತಪ್ರಿಯ ನಿತ್ಯ
ಆನಂದ ಪ್ರಸನ್ವೆಂಕಟಪತಿಯವರು ೩

೪೧೦

ಸಂದು ತೀರದಿರಲಿ ಆನಂದಭಕುತಿ ಕೃಷ್ಣ
ಹೊಂದಿ ಬಿಡಲಾರೆನೊ ಮುಕುಂದ ನಿನ್ನಂಘ್ರಿ ನಿಷ್ಠೆಯ ಪ.

ಸಿರಿ ಭಾಗವತ ಶಾಸ್ತ್ರ ವರ ಪಂಚರಾತ್ರಾಗಮ
ಪರಮಭಾರತದ ತಾತ್ಪರ್ಯಾರ್ಥದ
ಪರಿಚಯವ ಮಾಡು ಹರಿ ಮಹೋದಾರಿ ಕೃಷ್ಣ
ಗುರು ಮಧ್ವ ನಿರೂಪದ ತರತಮ ಭಾವಾರ್ಥದ ೧

ಜಯರಾಯ ಗುರುಗಳ ವಿಜಯವಾಕ್ಯವ ಕೇಳಿಸು
ನಯ ತಂತ್ರಸಾರ ಮಂತ್ರಾಶ್ರಯ ಬಲಿಸು
ದ್ವಯಸಪ್ತ ಭಕ್ತಿಯಿಂದ ಆಯುಷ್ಯ ಸಾಗಿಸು ತತ್ವ
ಚಯ ಜ್ಞಾನವೆಂಬ ದಿವ್ಯ ಪೀಯೂಷವುಣಿಸುವ ಸವಿ ೨

ಲಲಿತ ಶ್ರೀಮುದ್ರೆ ಊರ್ಧ್ವತಿಲಕ ತಪ್ತಲಾಂಛನ
ಹೊಳೆವ ದ್ವಾದಶನಾಮ ತುಲಸಿದಂಡೆ
ಕಳಧೌತ ಮೀರ್ವಾಂಗಾರ ನಳಿನಾಕ್ಷ ಧಾತ್ರಿಸರ
ಗಳದೊಳೊಪ್ಪುವ ಶ್ಲಾಘ್ಯ ಬಲುವೈರಾಗ್ಯ ಭಾಗ್ಯದ ೩

ಅಹರ್ನಿಶಾತ್ಮಜ ಸವಿ ಸ್ನೇಹವೆ ಶ್ರೀಪಾದದಲ್ಲಿ
ದೇಹ ಧನ ಮನ ಒಪ್ಪಿಸಿಹೊ ವೃತ್ತಿಲಿ
ಬಹಿರಂತಕ್ಷಣಕೆ ರೂಹುದೋರ್ವ ಭಾಷ್ಪ ತನು
ರುಹ ತೋಷಾಬ್ಧಿಯೊಳು ಮಗ್ನರಹ ಮಹಿಮರ ಸಂಗ ೪

ಎಸೆವ ಹರಿದಿನ ಅನಿಮಿಷ ಜಾಗರದ ಕೀರ್ತ್ನೆ
ಲಸತ್ತಿರುಳಿನಾಪರವಶನರ್ತನ ಕುಶತಲ್ಪ ಪ್ರಸನ್ವೆಂಕ
ಟೇಶನಂಘ್ರಿ ಲಂಪಟ ನಿಯಮೇರ ತಾಳ ಮೇಳ
ಸುಸುಖ ಸುಬ್ಬಾನ ಸೂರೆ ೫

೪೧೧

ಸಖ್ಯವಿರಬೇಕು ಹರಿಭಕ್ತಜನಕೆ
ಮುಕ್ತಿದಾಯಕ ಪಾರ್ಥಸಖನ ಪಾದಾಬ್ಜದಲಿ ಪ.

ಅನಾದ್ಯನಂತ ಕಾಲಕ್ಕು ಸಾಯುಜ್ಯಸಖ
ಅನಂತಜೀವರಿಗೆ ಬಿಂಬರೂಪ
ತಾನೆ ಜೀವರಿಗನ್ನಪಾನಿತ್ತು ಪಾಲಿಸುವ
ಪ್ರಾಣೇಶ ಹೃದ್ಗುಹ ಪ್ರಾಣಪ್ರಿಯನ ೧

ಶ್ರೇಯಸವನೀವ ಪ್ರತಿ ಶ್ರೇಯಸದ ಬಯಕಿಲ್ಲಗೀ
ಶ್ರೇಯಸವನೀವ ಔದಾರ್ಯಗುಣದಿ
ಮಾಯ ದಾರಿದ್ರಾದ್ಯವಿದ್ಯತಮೋ ಭಾನು
ವಾಯುಸಖ ಜ್ಞಾನಿಜನಪ್ರಿಯ ಸಖನೊಳು ೨

ಕ್ಷುತ್ತೃಷೆ ಭಯಾಂತ ಸರ್ವತ್ರ ಸಂರಕ್ಷಕ ಷಟ್
ಶತ್ರು ಸಂಹಾರಿ ಪರಾತ್ಪರ ಸಖ
ವೇತ್ತೃಜನಧೇನು ವೇದೋಪನಿಷದ್ವೇದ್ಯ
ಮಿತ್ರೇಂದು ಕೋಟಿ ಭ್ರಾಜಿತಗಾತ್ರ ಹರಿಯ ೩

ಕರುಣಾರ್ಣವನು ಶರಣು ಸುರವೃಕ್ಷ ಸುಖವಾರ್ಧಿ
ದುರಿತ ಭವದೂರ ನಿರ್ದೋಷಗುಣದಿ
ಸುರಮುನಿನಿಕರ ಸೇವ್ಯ ಶಾಶ್ವದೇಕೋಭವ್ಯ
ವರ ಸಹಸ್ರಾನಂತ ವಿಗ್ರಹನೊಳು ೪

ಪಾರ್ಥಸಖ ಗೋಪವಧೂಗೋತ್ರಸಖ ಸ್ತ್ರೀಪುತ್ರ
ಮಿತ್ರ ದೇಹೇಂದ್ರಿಯಾತ್ಮಪ್ರಿಯ ಕೃಷ್ಣ
ಮಿತ್ರವರನೊಬ್ಬ ಸರ್ವತ್ರ ನಾರಾಯಣಾ
ನ್ಯತ್ರ ಸ್ನೇಹವ ತ್ಯಜಿಸಿ ಶ್ರೀ ಪ್ರಸನ್ವೆಂಕಟನ ೫

೪೧೨

ಸಾಧ್ಯವಲ್ಲವು ಮುಕುತಿ ಸಾಧ್ಯವಲ್ಲವು
ಶುದ್ಧ ಸಾತ್ವಿಕನಾಗಿ ತತ್ವಸಿದ್ಧ ಶೀಲರವೆರಸದಿರಲು ಪ.

ಇಷುಭೇದವ ತಾನರಿತು ಸಂತತ
ವಿಷ್ವಕ್ಸೇನನ ಅಂಕವಿಧದೊ
ಳೆಸೆವ ಶ್ರದ್ಧೆಯ ತೋರಿ ಋತುಗಳ
ಗಸಣಿಗಂಜದೆ ಶಶಿಮತನಾಗದೆ ೧

ಕಕುಭಬದ್ಧನೆನಿಸಿ ಹರಿವಿನಾ
ನಿಖಿಳ ವಿಷಯಂಗಳ ಮನ್ನಿಸ
ದಖಿಳ ರಾಮಕರ ತತ್ವವ ಜಪಿಸಿ
ಅಕಳಂಕಮತ ಗುಣಧಿಯ ನಂಬದೆ ೨

ಪರನಾರಿಯರಿಗೊಮ್ಮೆ ಮನಸೋ
ತಿರದೆ ಚಿತ್ತದ ಹರಿಯಂ ಮುರಿದು
ಗುರು ಪೂರ್ಣಜ್ಞಾಜ್ಞಧಿ ಪ್ರಸನ್ನವೆಂಕಟ
ಅರಸನ ಚರಣವ ಸ್ಮರಿಸದೆ ಬರಿದೆ ೩

೪೧೩

ಸುರನರರ ಸಹಸಕ್ಹರಿ ಸಹಾಯ ಬೇಕು
ನರಹರಿಯು ಕೊಡದನಕ ದೊರೆವುದೇನು ಪ.

ಹರಿ ಕೊಡದೆ ಅಜಭವರಿಗರಸುತನವೆಲ್ಲಿಯದು
ಹರಿ ಕೊಡದೆ ಸಿರಿಸಂಪದೆರವು ತನಗೆ
ಹರಿ ಕೊಡದೆ ಸಕಳ ಜೀವರಿಗಶನ ದುರ್ಲಭವು
ಹರಿಕೊಡುವನಿರಲು ಅನ್ಯರಿಗೆ ಸ್ವಾತಂತ್ರ್ಯಿಲ್ಲ ೧

ಹರಿಯೆ ಜಡಚೇತನರ ಹೊರೆದುದ್ಧವಿಸಿ ಅಳಿವ
ಹರಿ ಯಾವ ಕಾರ್ಯಕ್ಕೆ ಬೆರೆದು ಬರುವ
ಹರಿ ಅಂತರ್ಬಹಿರದೊಳು ಭರಿತನಾಗಿಹ ತತ್ವ
ಹರಿಯಿಲ್ಲದಾವ ತಾಣಿಲ್ಲ ನಂಬು ಹರಿಯ ೨

ಹರಿ ನುಡಿಯದಾರಿಗುತ್ತರಗುಡಲು ಬಲವಿಲ್ಲ
ಹರಿ ನುಡಿಯನಾಲಿಪರು ಸಿರಿದಿವಿಜರು
ಹರಿ ನುಡಿಯೆ ಗತಿಮತಿಯು ಹರಿಯೆನ್ನ ದಾತಾರ
ಹರಿ ಪ್ರಸನ್ವೆಂಕಟಪ ನಿರುತ ಬಿಡನೆನ್ನ ೩

೪೧೪

ಸ್ಮರಿಸು ಮನವೆ ಸ್ಮರಿಸು ಸ್ಮರನ ಪಿತನ
ದುರಿತ ಭವಭಯಸಮೂಹದೂರಮಾವರನ ಪ.

ಒಬ್ಬ ಬಾಲನಯ್ಯನ ಒದೆದ
ಒಬ್ಬ ಬಾಲಗಟವಿಲೊಲಿದ
ಒಬ್ಬ ಬಾಲನ ಅಪ್ಪಿ ರಾಜ್ಯವ ಒಬ್ಬ ಬಾಲಗಿತ್ತು
ಒಬ್ಬ ಬಾಲೆಯುಂಗುಟದಿ ಪೆತ್ತ
ಒಬ್ಬ ಬಾಲೆಯುಂಗುಟದಿ ಪೊತ್ತ
ಒಬ್ಬ ಬಾಲೆಗಕ್ಷಯ್ಯೆಂದು ಕುಕ್ಷಿಲೊಬ್ಬ ಬಾಲಪನ ೧

ಇಬ್ಬರ ಮೂರುಸಾರೆಲಳಿದ
ಇಬ್ಬರಿಹ ಭೂಜವ ಮುರಿದ
ಇಬ್ಬರೊಗ್ಗೂಡಿ ಬೆಳೆದು ಹನ್ನಿಬ್ಬರ ಬಡಿದ

ಇಬ್ಬರ ಕಾರಾಗಾರ ತಗಿದ
ಇಬ್ಬರುಪ್ಪು ಬೇಡಲಿ ಸದೆದ
ಇಬ್ಬರಿಂದ್ಯೆದಿ ಹೋಳಮಯ್ಯನ ನಿಬ್ಬರಿಸಿದನ ೨

ಮೂರು ಮನೆಯೊಳಗಿಹನ
ಮೂರುಮಾತಿಗೆ ಹೊಂದದವನ
ಮೂರು ಮೈಯನ ಕೃತ ಸೇವೆಗೆ ಮೂರು ರೂಪಾದನ
ಮೂರು ಪೊಳಲ ಹಗೆಕಾರನ
ಮೂರುವೆಂಬನುರುಹಿದನ
ಮೂರಾಂತಕ ಪ್ರಸನ್ವೆಂಕಟ ಮೂರು ಲೋಕೇಶನ ೩

೪೧೫

ಹನುಮ ನಮ್ಮ ಕಾಮಧೇನು ಭೀಮ ನಮ್ಮ ಕಲ್ಪವೃಕ್ಷ
ಆನಂದತೀರ್ಥಗುರು ಚಿಂತಾಮಣಿ ಪ.

ಸೂತ್ರರಾಮಾಯಣ ಮಹಾವ್ಯಾಕರ್ಣ ಪಂಚ
ರಾತ್ರ ಭಾರತಪುರಾಣ ಶ್ರುತ್ಯರ್ಥ ಸುಧಾರಸವಾ
ವೇತ್ತೃಜನಕಾ ಸಂತತ ಕಿಂಪುರುಷ ವರುಷದಿ ಉಣ
ಲಿತ್ತನಾ ಸುಸ್ವರದಿ ಶ್ರೀರಾಮಪ್ರಿಯನು ೧

ರಾಜಸೂಯ ಮೂಲದಿಂದ ಶಾಖೋಪಶಾಖ ಸಧರ್ಮ
ಸೋಜಿಗದ ಕರ್ಮಕುಸುಮ ಬ್ರಹ್ಮತ್ವಫಲದಿ
ರಾಜಿಸುತ್ತ ಸಹಸ್ರಾಕ್ಷ ಸಖಮುಖ್ಯದ್ವಿಜರ್ಗೆ ಸುಖ
ಬೀಜ ನಿಂತು ಹೊರೆದನು ಶ್ರೀಕೃಷ್ಣ ಪ್ರಿಯನು ೨

ಹಂತ ಭಾಷ್ಯಧ್ವಾಂತದಿ ವೇದಾಂತವಡಗೆ ಪೋಕ ಮಣಿ
ಮಂತನ ಮುರಿದನು ಮೂವತ್ತೆರಡು ಲಕ್ಷಣದಿ
ಕಾಂತಿಯಿಂದ ಪ್ರಸನ್ನವೆಂಕಟ ಕಾಂತನ್ನ ಪ್ರಕಾಶಿಸಿದ
ಚಿಂತಿತಾರ್ಥ ನಮಗೀವ ಶ್ರೀವ್ಯಾಸಪ್ರಿಯನು ವೇದವ್ಯಾಸಪ್ರಿಯನು ೩

೪೧೬

ಹನುಮ ನಮ್ಮ ತಾಯಿ ತಂದೆ
ಭೀಮ ನಮ್ಮ ಬಂಧು ಬಳಗ
ಆನಂದತೀರ್ಥರೆ ನಮ್ಮ ಗತಿಗೋತ್ರರು ಪ.

ತಾಯಿ ತಂದೆ ಹಸುಳೆಗಳಿಗೆ ರ
ಸಾಯನುಣಿಸಿ ಸಾಕುವಂತೆ
ಆಯಾಸವಿಲ್ಲದೆ ಸಂಜೀವನವ ತಂದು
ಗಾಯಗೊಂಡ ಕಪಿಗಣವ
ಪ್ರಿಯದಿಂದ ಪೊರೆದ ರಘು
ರಾಯನಂಘ್ರಿಗಳೆ ಸಾಕ್ಷಿ ತ್ರೇತಾಯುಗದಿ ೧

ಬಂಧು ಬಳಗದಂತೆ ಆಪ
ದ್ಬಾಂಧವನಾಗಿ ಪಾರ್ಥರಿಗೆ
ಬಂದ ಬಂದ ದುರಿತಗಳ ಪರಿಹರಿಸಿ
ಅಂಧಕ ಜಾತರ ಕೊಂದು
ಅಂದೆ ಕೃಷ್ಣಾರ್ಪಣವೆಂದಾ ಯದುಕು
ಲೇಂದ್ರನಂಘ್ರಿಗಳೆ ಸಾಕ್ಷಿ ದ್ವಾಪರಾಂತ್ಯದಿ ೨

ಗತಿಗೋತ್ರರಂತೆ ಸಾಧು
ತತಿಗಳಿಗೆ ಸುಜ್ಞಾನವಿತ್ತು
ಮತಿಗೆಟ್ಟ ಇಪ್ಪತ್ತೊಂದು ಕುಭಾಷ್ಯಂಗಳ
ಗತಿಗೆಡಿಸಿ ವೈಷ್ಣವರಿಗೆ ಸ
ದ್ಗತಿಯ ತೋರಿದ ಪ್ರಸನ್ವೆಂಕಟ
ಪತಿ ವ್ಯಾಸಾಂಘ್ರಿಗಳೆ ಸಾಕ್ಷಿ ಕಲಿಯುಗದಿ * ೩

---

* ಈ ಕೀರ್ತನೆ 'ಪುರಂದರ ವಿಠಲ' ಅಂಕಿತದಲ್ಲಿಯೂ ಇದೆ.

೪೧೭

ಹರಿಕಥಾ ಶ್ರವಣ ಸಾಧನವೆ ಮುಕುತಿ ಇದಕೆ
ಸರಿ ಧರ್ಮವಿಲ್ಲೆಂದು ಪೇಳ್ವವು ಶ್ರುತಿತತಿ ಪ.

ಶ್ರವಣದಿಂದಲಿ ಸಕಲ ಸದ್ಧರ್ಮ ಸಾಧನವು
ಭುವಿಯಲ್ಲಿ ಪೂಜ್ಯರಾಹೋರು ಸುಜನರು
ಸವೆಯದಾನಂದಮಯ ಭಕುತಿ ಸಿರಿ ದೊರಕುವುದು
ಅವರೇವೆ ಸೂಜ್ಞರಾಗ್ವರು ಹರಿಯ ದಯದಿ ೧

ಅನವರತ ಶ್ರವಣವೆ ಮನನ ಮೂಲವು ಗಡ
ಮನನದಲಿ ಹರಿಧ್ಯಾನ ಖಚಿತಾಹುದು
ಘನಪರಾತ್ಪರ ತತ್ವ ತಿಳುಹಿ ವಿರಕುತಿ ಭಾಗ್ಯ
ವನು ಕೊಟ್ಟು ಶ್ರೀ ವಿಷ್ಣು ತೋರ್ವ ಗತಿ ಈವ ೨

ಶ್ರವಣದಲಿ ನಾರದಗೆ ಗತಕಲ್ಪದ್ಯಪರೋಕ್ಷ
ಸವಿಯಾದ ಸಾಮ್ರಾಜ್ಯ ಲೆಕ್ಕಿಸದ ಪ್ರಿಯವ್ರತ
ಅವನಿಪರು ವನ ಪೊಕ್ಕು ಹರಿಯನಾಶ್ರಯಸಿದರು
ದಿವಸೇಳರಲಿ ವಿಷ್ಣುರತನಿಗೆ ಮೋಕ್ಷ ೩

ದಿವಿಜ ಋಷಿ ಗಂಧರ್ವ ನೃಪರು ಮನುಜೋತ್ತಮರು
ವಿವಿಧ ತಿರ್ಯಗ್ಜಾತಿ ಸಜ್ಜೀವರು
ಶ್ರವಣಮಾತ್ರದಲಿ ಕಂಡರು ಸದ್ಗತಿಯನವರು
ದಿವಸಗಳೆಯದಲೆ ಆದರದಿಂದ ಬುಧರು ೪

ಹರಿಕಥಾಶ್ರೋತರಿಗೆ ಕರತಲವು ಮೋಕ್ಷ ಗಡ
ಗುರುದ್ವಾರದಲಿ ಹರಿ ದೊರಕುವನು ಸತ್ಯ
ಗುರು ಮಧ್ವವರದ ಶ್ರೀಪ್ರಸನ್ವೆಂಕಟ ಕೃಷ್ಣ
ಕರವಿಡಿದು ಪೊರೆವ ಸದ್ಗುರು ಪ್ರಿಯಜನಕೆ ೫

೪೧೮

ಸುಳಾದಿ

ಧ್ರುವತಾಳ

ಹರಿ ತನ್ನ ಏಕಾಂತಿಗಳಿಗೆ ಕೊಡ ವೈಭವವ
ಸಿರಿ ಸಂಪದದ ಸೌಖ್ಯದ ಲಂಪಟವ
ಹರಿ ತನ್ನೇಕಾಂತಿಗಳಿಗೆ ಕೊಡ ಅಖಿಳದ
ಅರಸುತನದ ಸೌಭಾಗ್ಯದ ಬಯಕೆಯ
ಕರುಣಾಂಬುಧಿ ತನ್ನ ಶರಣಜನರ ಭವ
ಭಾರಕನೆಂಬೊ ಬಲು ಬಿರುದು ರಕ್ಷಕನಾಗಿ
ಅರಿಭಯದ ಬೆದರಿಕೆ ಮನೋವ್ಯಥಾ ವ್ಯಸನವು
ಬರುವುವೆಂದರಿದು ಶ್ರೀ ಪ್ರಸನ್ವೆಂಕಟ ಕೃಷ್ಣ ೧

ಮಠ್ಯತಾಳ

ಮರೆಯೆ ಹರಿಗಭಿಮುಖರ ಭಾಗ್ಯವೆ ಭಾಗ್ಯ
ಹರಿಗೆ ವಿಮುಖರ ಭಾಗ್ಯ ದೌರ್ಭಾಗ್ಯ
ಹರಿಪ್ರಿಯಜನರ ವೃತ್ತಿ ನಿವೃತ್ತಿ
ಹರಿಪರವಲ್ಲದ ಯಜ್ಞ ಅವಜ್ಞ
ಹರಿಮುಖ್ಯನೆಂಬೊ ನಿಗಮ ಸುಗಮ
ಹರಿಯಾದರಿಸದ ಆಗಮ ದುರಾಗಮ
ಸಿರಿ ಪ್ರಸನ್ವೆಂಕಟಕೃಷ್ಣ ಜೀವರಿಗೆ
ಸರಿಯೆಂದವನು ಇಹಪರಕೆ ಬಾಹಿರನು ೨

ತ್ರಿಪುಟತಾಳ

ಹರಿಯಂಘ್ರಿಯ ಮೂಲದಾಸತ್ವವ ಹೊಂದಿ
ಪರಮಮಂಗಳ ನಾಮಸ್ಮರಣೆಯನು ಬಿಡದೆ
ಇರಲೆನ್ನ ಮನವು ಇರಲೆನ್ನ ತನುವು

ತರುಣಿ ಪುತ್ರ ಮಿತ್ರಾ ಸರ್ವರಿಂ ಪ್ರಿಯನೆಂದು
ಹರಿಚರಣಾಂಬುದಮೃತಾನುಂಬೊ ಸ್ನೇಹ
ದಿರಲೆನ್ನ ಮನವು ಇರಲೆನ್ನ ತನುವು
ನಿರುಪಾಧಿಕ ಪ್ರಿಯ ನಿರ್ಮಳ ಶ್ರುತಿಗೇಯ
ನಿರುತ ಪ್ರಸನ್ವೆಂಕಟ ಕೃಷ್ಣ ಸೇವೆಯಲಿರಲಿ ೩

ಅಟ್ಟತಾಳ

ನಿಷ್ಠರಿನ್ನೊಲ್ಲರು ನಾಕವಾಸದ ಸುಖ
ಕೊಟ್ಟರಿನ್ನೊಲ್ಲರು ಸಕಲ ಸಂಪದವನು
ಅಷ್ಟಾಂಗ ಯೋಗದ ಪಥಸಿದ್ಧಿಯೊಲ್ಲರು
ಕೃಷ್ಣನ ಪಾದಾಬ್ಜ ಮಕರಂದ ಭಕುತರು
ತುಷ್ಟಿಯನೊಲ್ಲರು ಸ್ವರೂಪದ ಅನುಭವಾ
ನಿಷ್ಟ ಕೋಟಿಗಳನು ದೃಷ್ಟಿಗೆ ತಾರದ
ಶಿಷ್ಟರಿಗಿಷ್ಟಮೂರುತಿ ಪ್ರಸನ್ವೆಂಕಟ
ಕೃಷ್ಣನ ಭಕುತಿಗೆ ಮೋಹಿತ ಮರುಳರು ೪

ಏಕತಾಳ

ಗರಿ ಉದುಭವಿಸದ ಮರಿ ತಾಯಗರೆದಂತೆ ಕಣ್
ದೆರೆಯದ ಶಿಶು ಜನನಿಯ ಬಯಸುವ ಪರಿ
ಪಿರಿಯನ ಕಾಣದ ರಮಣಿಯ ಮನದಂತೆ
ಸಿರಿರಮಣನ ಆಗಮವನೆ ಬಯಸುತಿಹೆ
ಕರಿವರದ ಪ್ರಸನ್ವೆಂಕಟ ಕೃಷ್ಣನ
ಕರುಣಾಮೃತವನುಂಡು ಸುಖಿಪೆನನುದಿನ ೫

ಜತೆ

ಸಂಸಾರ ಚಕ್ರದಿಂದ ನಿಜರ ದಾಟಿಪ ಪರಮ
ಹಂಸೇಶ ಪ್ರಸನ್ನವೆಂಕಟ ಕೃಷ್ಣ ನಮೊ ನಮೊ

೪೧೯

ಹರಿದಿನ ಇಂಥ ಹರಿದಿನ ಪ.

ಹರಿದಿನದ ಮಹಿಮೆ ಹೊಗಳಲಗಾಧ
ಪರಮ ಭಾಗವತರಾಚರಣೆಗಾಹ್ಲಾದ
ದುರಿತ ದುಷ್ಕೃತ ಪರ್ವತಕೆ ವಜ್ರವಾದ
ಮರುತ ಸದ್ವ್ರತಕೆಲ್ಲ ಶಿರೋರತ್ನವಾದ ಅ.ಪ.

ಭಕ್ತಿಗೆ ಮೊದಲು ವಿರಕ್ತಿ ಬೀಜವೆಂಬ
ಸಕಲ ತಪದೊಳೆಲ್ಲ ಮೇಲೆನಿಸಿಕೊಂಬ
ಮಖಕೋಟಿಗಧಿಕ ಫಲಸ್ಥಿರ ಸ್ತಂಭ
ಮುಕ್ತಿ ಸೋಪಾನ ನಿಧಾನತ್ವವೆಂಬ ೧

ತ್ವಕ್ ಚರ್ಮ ಅಸ್ತಿ ಮಜ್ಜ ಮಾಂಸ ರುಧಿರ
ಯುಕ್ತ ಸಪ್ತ ಧಾತುಗಳಿಹ ಶರೀರ
ನಖ ಕೇಶ ಕಫ ಸ್ವೇದ ಮಲ ಮೂತ್ರಾಗರ ಈ
ನಿಖಿಳ ಪಾವನ ಮಾಡುವ ನಿರಾಹಾರ ೨

ವರ ವಿಪ್ರ ಕ್ಷತ್ರಿಯ ವೈಶ್ಯ ಶೂದ್ರ ಜನರು
ತರಳ ಯೌವನ ವೃದ್ಧ ನಾರಿಯರು
ಕಿರಾತ ಪುಲತ್ಸ್ಯಾಂಧ್ರ ಹೂಣ ಜಾತಿಯವರು
ಹರಿವ್ರತ ಮಾತ್ರದಿ ಮುಕ್ತಿಯೈದುವರು ೩

ದ್ವಿಜ ಗೋವಧ ನೃಪರನು ಕೊಂದ ಪಾಪ
ನಿಜಗುರು ಸತಿಯರ ಸಂಗದ ಪಾಪ
ಅಜಲಪಾನದ ದಿನದುಂಡ ಮಹಾಪಾಪ
ನಿಜನಾಶ ಮೋಕ್ಷ ಪ್ರಾಪ್ತಿಯು ಸತ್ಯಾಲಾಪ ೪

ಯಾಮಿನಿಯಲಿ ಅನಿಮಿಷದ ಜಾಗರವು
ಶ್ರೀ ಮದ್ಭಾಗವತ ಶ್ರವಣ ಗೀತಾಪಠಣ

ಪ್ರೇಮವಾರಿಧಿಲಿ ಮುಳುಗಿ ಸಂಕೀರ್ತನೆಯು
ಧಾಮತ್ರಯದ ಸುಖಕಿದೇ ಕಾರಣವು ೫

ಅರ್ಧಕೋಟಿ ತೀರ್ಥಸ್ನಾನವೆಲ್ಲ ಅ
ಜಸ್ರಪ್ರಯಾಗ ಕಾಶಿವಾಸವೆಲ್ಲ ಸ
ಹಸ್ರ ಕೋಟಿ ಭೂಪ್ರದಕ್ಷಿಣೆಯೆಲ್ಲ
ಸುಶ್ರದ್ಧೆ ಸಹ ಜಾಗರಕೆ ಸರಿಯಲ್ಲ ೬

ಪಂಚಮಹಾ ಪಾಪ ಪ್ರಪಾಪವವಗೆ
ವಂಚಕ ಪಿಶುನ ಜನರ ಪಾಪವವಗೆ
ಮಿಂಚುವ ಕ್ಷೇತ್ರವಳಿ ಪಾಪವವಗೆ
ಪಂಚಕವ್ರತ ಪೆತ್ತ ವ್ರತ ಉಲ್ಲಂಘಿಪಗೆ ೭

ಸರ್ಪಶಯನಗೆ ನೀರಾಜನವೆತ್ತಿ ನೋಡಿ
ಉಪವಾಸದಿ ಭಗವಜ್ಞನ ನೃತ್ಯವಾಡಿ
ಚಪ್ಪಾಳಿಕ್ಕುತ ದಂಡಿಗೆ ಮುಟ್ಟಿ ಪಾಡಿ
ತಪ್ಪೆ ನಾಯಿ ನರಕ ಫಲ ಕೈಗೂಡಿ ೮

ಶ್ರುತಿ ಪಂಚರಾತ್ರಾಗಮವು ಸಾರುತಿವೆ
ಯತಿ ಮಧ್ವರಾಯರುಕುತಿ ಪೇಳುತಿವೆ
ಕ್ರತು ಪ್ರಸನ್ವೆಂಕಟ ಕೃಷ್ಣ ಮತವೆ
ಕ್ಷಿತಿಪತಿ ಸುರರತಿಶಯದ ಸದ್ವ್ರತವೆ ೯

೪೨೦

ಹರಿ ಪದಾಬ್ಜೆನ್ನ ಭಕ್ತ ಹರಿಕಾರ್ಯಕ್ಕಾಸಕ್ತ
ಮರುತಾಂಶನು ನಮ್ಮ ಗುರುರಾಯನು ಪ.

ಇಂದುಮುಖಿ ಸೀತೆಯಾಕೃತಿಯ ರಕ್ಕಸನೊಯ್ಯೆ
ಸಿಂಧು ಲಂಘಿಸಿ ಅವನ ವನವ ಕಿತ್ತು
ಬಂದ ಅಕ್ಷನನು ಮಡುಹಿಟ್ಟು ಬೇಗದಿ
ಬಂದು ರಾಮನ ಪದಕೆರಗಿದ ಹನುಮ ೧

ಮಣಿಮಂತ ಕೀಚಕ ಬಕ ಬಲ್ಲಿದಸುರರ
ತತಿಗಳ ಶಿರಗಳ ಸವರಿ
ವನಜಾಕ್ಷಿ ಸತಿಯಳ ಸಭೆಯೊಳು ಎಳೆಯೆ ದುಶ್ಯಾ
ಸನನ ಕರುಳು ಕೆಡಹಿ ಸೀಳಿದ ಭೀಮಸೇನ ೨

ಆತ್ಮನಾರಾಯಣ ಭೇದವಿರೆ ಒಂ
ದೆಂದು ಮಾಯಿಗಳೊದರೆ ಜಿಹ್ವೆ ಬಿಗಿಸಿ
ಆತ್ಮ ವೈಷ್ಣವರಿಗೆ ಭೇದ ಬಂಧಿಸಿದ ಸ
ರ್ವೋತ್ತಮ ಪ್ರಸನ್ವೆಂಕಟಪತಿಪ್ರಿಯನು ೩

೪೨೧

ಸುಳಾದಿ

ಝಂಪೆ ತಾಳ

ಹರಿಯ ನಗರವು ಕಳೆವರವು ತಾತ್ವಿಕರೆಲ್ಲ
ಹರಿಯ ಚಾರಕರು ಮನಸ್ತತ್ವದಲಿ ನಿಂದು
ಪರಿ ಪರಿ ವ್ಯಾಪಾರಗಳ ಮಾಡಿಸುವರು ಶ್ರೀ
ಹರಿಯ ಪ್ರೇರಣೆಯೆಂದು ಹರಿ ಸೇವೆಯೆಂದು
ಸಿರಿ ವೈಷ್ಣವಧರ್ಮ ಪ್ರೇರಕ ಪದುಮಸಂಭವನು
ವಿರತಿ ಧರ್ಮ ಜ್ಞಾನ ಐಶ್ವರ್ಯಭಾರತಿಯ
ಅರಸ ಪ್ರೇರಕ ಅಹಂಕಾರ ಪ್ರೇರಕನಾದ
ಗಿರಿಜಾರಮಣ ರುದ್ರದೇವ ನಿರುತ
ವರ ಪಂಚರಾತ್ರಾಗಮ ಜ್ಞಾನಪ್ರೇರಕನು
ಉರಗಾಧಿಪನು ವೇದೋಕ್ತ ಜ್ಞಾನಗಳ
ಗರುಡ ಪ್ರೇರಿಪ ಪ್ರಸನ್ನವೆಂಕಟೇಶ್ವರನ
ಮರಿಯಾದೆಯಿಂ ಮೀರದಿಪ್ಪರಾಗಿ ೧

ಮಠ್ಯತಾಳ

ಯಜನಾದಿ ಕರ್ಮಜ್ಞಾನದ ಪ್ರೇರಕ ಇಂದ್ರ ಅಂ
ಗಜ ಹರಿ ಪ್ರೀತಿಕರ ಕಾಮ್ಯ ಕರ್ಮ ಪ್ರೇರಕನು
ತ್ರಿಜಗಜ್ಜೀವರ ಜೀವ ಪ್ರಸನ್ವೆಂಕಟ ಪತಿಯು ೨

ರೂಪಕತಾಳ

ಮನುಮಥಪುತ್ರನಾದನಿರುದ್ಧನು
ಜ್ಞಾನ ಮಂತ್ರ ಪ್ರೇರಕನಾಗಿಹನು
ಸುನೀತಿಶಾಸ್ತ್ರ ಕವಿತ್ವಪ್ರೇರಣೆಗೆ
ಅನಿಮಿಷರ ಗುರು ಕಾರಣನು
ಶ್ರೀನಾಥ ಪ್ರಸನ್ವೆಂಕಟಕೃಷ್ಣದೇವನಾ
ಧೀನಾರಾಗ್ಯೊಪ್ಪುವರೆಲ್ಲಸುರಾನ್ವಯ ೩

ಅಟ್ಟತಾಳ

ನಾನಾವೃಕ್ಷ ಕುಸುಮಲತಾ ಪೂರ್ಣೋ
ದ್ಯಾನ ರಚನೆ ವಿಪ್ರಾನೀಕ ಪೂಜಾ ಪ್ರೇ
ರಣೆಗೆ ಹಿಮಧಾಮ ಜಲ
ದಾನ ಕೂಪವಾರಿ ತಟಾಕಾದಿ ನಿರು
ಮಾಣ ಪ್ರೇರಕನಾದ ವರುಣದೇವನು
ನಾನಾಕಾರಣ ಮುಖ್ಯನು ೪

ಏಕತಾಳ

ಜನರ ಪಾಲಿಸುವಲ್ಲಿ ಪ್ರೇರಕನು ಸ್ವಾಯಂಭುವ
ಮನು ಮುಖ್ಯರಾದವರು ಪ್ರಸನ್ವೆಂಕಟೇಶನ್ನ
ಅನುಜ್ಞದಿಂದಾಧಾರದಿಂದಿಹರಾಗಿ ಶರೀರದಿ
ತೃಣ ಮಾತ್ರ ಚಲನೆ ಶಕುತಿ ಯಾರಿಗೆ ಇಲ್ಲಾದ್ಯಂತ ೫

ಜತೆ

ಮನೋಭಿಮಾನಿಗಳು ಹನ್ನೆರಡು ದೇವಕ್ಕಳು ಪ್ರ
ಸನ್ವೆಂಕಟಕೃಷ್ಣ ಜಗನ್ನಿಯಾಮಕನು

೪೨೨

ಸುಳಾದಿ

ಧ್ರುವತಾಳ

ಹರಿಸರ್ವೋತ್ತಮ ಹರಿಪರಬ್ರಹ್ಮ
ಹರಿಸಮರಾರಿಲ್ಲ ಹಿರಿಯರುಂಟೆಲ್ಲಿ
ಹರಿ ಪಟ್ಟಗಟ್ಟಿದಮರರು ವಂದಿತರು
ಹರಿಯನಾದರಿಸದಸುರರು ನಿಂದಿತರು
ಹರಿಯೊಲಿದಿರುವರ್ಭಕರೆ ಕೀರ್ತಿಯುತರು
ಹರಿಯನರ್ಚಿಸದ ವೃದ್ಧರೆ ಬಹಿಷ್ಕೃತರು
ಹರಿಯವೇನನಾಮವು ಅರೂಪ ಗುಣದೂರ ಶ್ರೀ
ಹರಿ ಪ್ರಸನ್ವೆಂಕಟವರದ ಉದಾರ ೧

ಮಠ್ಯತಾಳ

ಅಯ್ಯನ ನಾಮವೆಂದರೆ ಅನಂತನಾಮವು
ಸ್ವನಾಮವಿಲ್ಲ ಹೀಗಲ್ಲ
ಅರೂಪವೆಂದರೆ ಪ್ರಾಕೃತರೂಪ
ಸ್ವರೂಪವಿಲ್ಲ ಹೀಗಲ್ಲ
ಗುಣರಹಿತೆಂಬುದು ತ್ರಿಗುಣಾತೀತಾ
ಗಣಿತ ಗುಣಗಳಿಲ್ಲ ಹೀಗಲ್ಲ
ನಿರ್ಗುಣ ಅರೂಪನಾಮನೆಂಬರು
ಸ್ವರ್ಗಜವರದ ಪ್ರಸನ್ವೆಂಕಟೇಶಗೆ ನಾಮವೆಂಬುದು ಹಾಗಲ್ಲ ೨

ತ್ರಿಪುಟತಾಳ

ನಾಮವೀಪರಿ ನಾಮ
ನರರಿಗುತ್ತಮರು ನೃಪರು ಮುನಿಸುರರು ತ

ನ್ಮರುತ್ತೆರೆದೆರೆದಿರುವ ನಾಮ
ಎರಡು ಸಾಸಿರ ರಸನರು ಮೃಡಗರುಡರು
ಸ್ವರೂಪಾನುಸಾರ ನಿತ್ಯ ಸ್ಮರಿಪ ಶ್ರೀನಾಮ
ಎರಡೀರೆವದನನೀರೆರಡು ಷ್ರುತಿಯ ನಾಮ
ಸಿರಿಯಳುಚ್ಚರಿಸುವನಂತ ನಾಮ
ಪರಸನ್ನವೆಂಕಟವರದನುದರದಿಡಿ
ಕಿರಿದಿದ್ದಾರರಿಯದ ಗುಹ್ಯನಾಮ ೩

ರೂಪಕತಾಳ

ಒಂದು ಬ್ರಹ್ಮಾಂಡ ತುಂಬೋ ದೇವ ರೂಪ ಮ
ತ್ತೊಂದು ರೂಪದ ರೋಮರಂಧ್ರದೊಳಜಾಂಡ
ಒಂದಲ್ಲ ನೂರಲ್ಲ ಹೊಂದಿದುವನಂತವು
ಒಂದೊಂದಜಾಂಡದೊಳಗ್ಹೊರಗಪರಿಪೂರ್ಣ
ಅಂದು ಏಕಾರ್ಣವದೊಳೊಂದು ವಟಪತ್ರದಿ ಆ
ನಂದನರಸಿಯ ಮೊಲೆಯನೊಂದು ಚಪ್ಪರಿದುಂಡು
ಒಂದರೊಳು ಕರವಿಟ್ಟ ಪ್ರಸನ್ವೆಂಕಟ ರೂಪ ೪

ಝಂಪೆತಾಳ

ಕರಚರಣ ನಖ ಕೇಶ ಶಿರ ಚಕ್ಷು ಶ್ರವಣಾದಿ
ಸರ್ವಾವಯವಗಳಿಂದ ಸರ್ವರೂಪಗಳಿಂದ
ಸಿರಿಯರಸ ಸ್ವಗತ ಭೇದವಿದೂರ ಹೀ
ಗರಿಯದೆ ಐದು ಭೇದವಸತ್ಯವೆಂಬ ಪಾ
ಮರಗೇವೆ ನಿತ್ಯಾಂಧ ನರಕವೆ ಸ್ಥಿರವಯ್ಯ
ಸಿರಿ ಪ್ರಸನ್ವೆಂಕಟ ವರದಾನಂತಾಭಿಧಾ
ವರ ಬಿಂಬೋತ್ತಮನಾಗಿ ಪೊರೆವ ಪ್ರತಿಬಿಂಬವ
ಸಿರಿ ಅರಸ ಭೇದವಿದೂರ ೫

೪೨೩

ಹ್ಯಾಗಾಹದು ಭವರೋಗಿಗಾರೋಗ್ಯ
ಮ್ಯಾಗೆ ಮ್ಯಾಗಪಥ್ಯವಾಗುತಿದೆ ಕೃಷ್ಣ ಪ.

ಗುಜ್ಜುಗಿರಿವ ಆಶಾಲಕ್ಷಣ ಚಳಿ
ಲಜ್ಜೆಗೆಡಿಸುತಿವೆ ಗದಗದಿಸಿ
ವಜ್ಜರಹೊದಪಿಲಿ ನಿಲವು ಕುಶಾಸ್ತ್ರದ
ಗಜ್ಜರಿಕಾಯಿ ದಣಿಯೆ ಮೆಲುವವಗೆ ೧

ಮೊರಮೊರಸು ಮೂರ್ಪರಿ ಜ್ವರ ದಾಹದಿ
ನಿರಸನ ರಸನಾಯಿತಿದರೊಳಗೆ
ಅರಿಕಿಲ್ಲದಹ ಗಾರಿಗೆ ಕಾಮನ
ಹರಿಬದನೆಕಾಯುಂಬುವಗೆ ೨

ಕಾಮಿನಿ ನೋಟದ ಕಾಮಾಲೆಯಾಯಿತು
ನೇಮದಿ ಸೊಬ್ಬೇರಿತು ಮೈಯ
ಪ್ರೇಮದ ಚಕ್ಷುದೋಷ್ಯಾತರಲೈದದು
ಕಾಮತಪ್ತ ವರೇಣ್ಯವಗೆ ೩

ನಮ್ಮದು ನಮ್ಮದು ಕೋ ಕೋ ಎನ್ನುತ
ಕೆಮ್ಮಿಗೆ ಖುಳಖುಳಸಿತು ಕಾಯ
ಹಮ್ಮುಗಳಕ್ಕರೆಯ ಖಣಿಯಾದ ಉಳ್ಳಿಯ
ಹೆಮ್ಮೂಲಂಗಿಯ ತಿನುವವಗೆ ೪

ಜಗಸಟೆಯೆಂಬಗೆ ಸಂಗ್ರಹಣಿಯು ಅವ
ನಿಗೆ ಪಾಂಡಿತ್ಯ ಪಾಂಡುರೋಗ
ವಿಗಡ ಕುತರ್ಕ ಚಿಕಿತ್ಸದಿ ನೂಕು
ನುಗ್ಗೆ ತೊಂಡೆಕಾಯಿ ಸವಿವವಗೆ ೫

ಅಂಜದೆ ಸಲ್ಲದ ನಿಷಿಧಗಳುಂಡರೆ
ನಂಜೇರದೆ ಬಿಡುವುದೆ ಬಳಿಕಾ
ಕಂಜಾಕ್ಷನ ಬಿಟ್ಟಿತರ ಸುರಾಸುರ
ರೆಂಜಲು ಮೈಲಿಗೆ ಬಿಡದವಗೆ ೬

ಹೃದ್ರೋಗವು ಹೋಗುವುದೆ ನಿಂಬ ಹ
ರಿದ್ರದ ಹುಡಿ ತಲೆಗೊತ್ತಿದರೆ
ನಿದ್ರಿಲ್ಲದೆ ಕರ ಪಂಜಲಿ ಕುಣಿದರೆ
ರುದ್ರ ದುರಿತ ಹೊಡೆಯದೆ ಬಿಡುವುದೆ ೭

ಇಂತೆ ದಿನಾಂತರ ಕ್ಷಯ ಮೇಲಿಕ್ಕಿತ್ತು
ಅಂತ್ಯಾಪದ ಯಮಪುರದೊಳಗೆ
ಎಂತಾದರೆ ಮಾಡಿಸಿ ಕೊಂಡಳುತಿಹ
ಭ್ರಾಂತ ಕಳಿಂಗದ ಪ್ರಿಯದವಗೆ ೮

ಮನ್ವಂತರ ಕಲ್ಪಾಂತರ ಈ ಕ್ಲೇ
ಶಾನ್ವಯ ವೆಗ್ಗಳ ಭೋಗಿಸುತ ಪ್ರ
ಸನ್ವೆಂಕಟಪತಿ ಗುರು ಮಧ್ವೇಶ
ಧನ್ವಂತ್ರಿಯ ಪದ ವಿಮುಖನಿಗೆ ೯

೬ (ಅ) ಸಂಪ್ರದಾಯದ ಹಾಡುಗಳು

೪೨೪

ಆದಿನಾಥಗೆ ಜಯಮಂಗಳ
ಶ್ರೀಧರ ಮೂರ್ತಿಗೆ ಶುಭಮಂಗಳ ಪ.

ಧರಿಸಿ ನಾವೆಯ ಸತ್ಯವ್ರತನ ಪಾವನ ಮಾಡಿ
ಚರಿಸದೆ ಮಂದರಗಿರಿಯ ಹೊತ್ತು

ಧರೆಯ ನೆಗಹಿ ಬಂಗಾರಗಣ್ಣಿನವನ
ಹರಿದು ದೈತ್ಯಜಗೊಲಿದು ಬಂದವಗೆ ೧

ಸುರಪನಂತಸ್ತಾಪ ತರಿದು ಧರಿತ್ರಿಯ
ಸುರರಿಗೆ ಸಕಲ ಪದವಿಯನಿತ್ತು
ಶರಧಿಯ ದಾಟಿ ದಶಶಿರನ ತಲೆ ಚಿವುಟಿ
ತುರುಗಾಯ್ದ ಗೋಪೇರ ಅರಸನಿಗೆ ೨

ಅಂತರಾಳ ಪಟ್ಟಣಕಪಾಯವನು ಮಾಡಿ
ಅಂತ್ಯದಿ ಯವನರ ಸವರಿದಗೆ
ಚಿಂತಿಪ ದಾಸರ ಚಿಂತಾಮಣಿಗೆ ಸಿರಿ
ಕಾಂತ ಪ್ರಸನ್ವೆಂಕಟದಾಸನಿಗೆ ೩

೪೨೫

ಇಂದು ಮಂಗಳ ಇಂದು ಮಂಗಳ ಇಂದಿರೆ ಅರಸಗೆ
ಇಂದು ಕುಲಕೆ ಇಂದು ದ್ರುಹಿಣ ಇಂದುಧರೇಶಗೆ ಪ.

ನೀರಹೊಕ್ಕು ನೀರ ಕಡೆದು ನೀರ ಕದಡಿ ಖಳನ ಕೆ
ನ್ನೀರ ತೆಗೆದು ಬಲಿಯ ಪಾತ್ರೆ ನೀರನ್ವೆಚ್ಚಿಸಿ
ನೀರ ಸೆಳೆದು ನೀರಕಟ್ಟಿ ನೀರೇರೊಳಿದ್ದು ಮೂರುಪೊಳಲ
ನೀರೇರ್ಗೊಲಿದು ನೀಲಹಯವನೇರಿ ಮೆರೆವಗೆ ೧

ಧರೆಯನಾವೆ ನೆಗಹಿ ಧರಾಧರರ ಒರೆಸಿ ಧರೆಯನಪ್ಪಿ
ಧರಿಸಿ ಶಿಶುವಾಧರೆಯನಳೆದ ಧರೆಯ ಭಾರವನಿಳುಹಿದ
ಧರೆಯ ಮಗಳನಾಳ್ದು ಕೊಂದು ಧರೆಯಮಗನ ಮತ್ತೆ ಬೋ
ಧರನ್ನ ಮೋಹಿಪ ವರಣೋದ್ಧರಣ ಮಾಳ್ಪಗೆ ೨

ಇನಜಗೊಲಿದು ಇನಗೆ ಪೊರೆದು ಇನಿಯಳೆತ್ತಿ ಇನನ ಕಂಪಿಸಿ
ಇನಗೆ ಮೀರಿ ಬೆಳೆದು ಸೋಮ ಇನಜರನ್ನು ಜರಿದು ತಾ

ಇನಕುಲಜನಾಗಿ ತಾ ಇನಿಯರಾಳಿದ ಇನಿತು ಲಜ್ಜೆಯಿಲ್ಲದ ಕಲಿ
ಯನ್ನು ಸದೆದ ಪ್ರಸನ್ನವೆಂಕಟ ಇನಗತಾತ್ಮಗೆ ೩

೪೨೬

ಉಪ್ಪವಡಿಸಯ್ಯ ಕೃಷ್ಣ ಪ.

ಉಪ್ಪವಡಿಸೈ ಬೊಮ್ಮನಪ್ಪ ಭುವನಾವಳಿಯ
ಸ್ವಪ್ನಾದಿ ತ್ರಯವನಪ್ಪಿ ಪಾಲ್ಗಡಲ ಮಗ
ಳಪ್ಪಿ ಅಹಿವರನ ಸುಪ್ಪತ್ತಿಗೆಲಿ ಒರಗಿಪ್ಪ ತಿಮ್ಮಪ್ಪ ವ್ರಜದಿ ದಯದಿ ಅ.ಪ.

ಅರುಣ ಮೂಡಣವೇರೆ ತ್ವರಿತ ತಮಕುಲ ಜಾರೆ
ಹರಿದವಭ್ರದ ತಾರೆ ತರಣಿಕರ ಬಳಿ ಸಾರೆ
ಸರಸಿಜ ವಿಕಸತೋರೆ ಮರುತ ಪರಿಮಳ ಬೀರೆ ನೆರೆದು
ಅಳಿ ಝೇಂಕರಿಸುತಿರೆ
ಹರುಷ ದಿವಿಗಣ ಬೀರೆ ಮೊರೆಯುತಿವೆ ಸುರಭೇರೆ
ಪರಮಹಂಸರು ಮೇರೆ ಮರೆದು ಸ್ಮರಿಸುತಲೈದಾರೆ
ಸರ್ವವೇದ ಘೋಷ ಹರಿಪರವೆನುತಲೈದಾರೆ ಕರುಣದಲಿ
ನೋಡು ಶೌರೆ ೧

ವಸುಧ್ಯೆರೆದ ಕಾಷ್ಠ ಗಂಧ ಕುಸುಮ ಸರ ತಂದಿಹಳು
ಬಿಸಜಲೋಚನ ನಿಮ್ಮ ಸೊಸೆ ವಾಣಿ ಭಾರತಿಯು
ಲ್ಲಸದಿ ಪೊಂಭಾಂಡದಲಿ ಬಿಸಿನೀರು ತುಂಬಿಹರು ಪಶುಪ
ವೈಜಂತಿ ತಂದ
ಸುಸುಪರ್ಣ ವಸನ ಉರಗೇಶ ರತುನನಾಸನ ಮಾ
ಲ್ಯ ಸುರಪತಿ ಕಲಶ ವಹಿಸಿ ವರುಣ ಸ್ಮರ ತಿಲಕ
ಹಸನ ಮಾಡುವ ಪಾವುಗೆ ಶಶಿ ಧರಿಸಿ ನಿಂದ ಸಂತಸದಿ
ಮಜ್ಜನಕಾಲದಿ ೨

ಸ್ವರ್ಧುನಿಯು ಗೋದೆ ಗೋವರ್ಧಿನಿಯು ಗಾತ್ರೆ ಅಜ
ನರ್ಧಾಂಗಿ ಸರಸ್ವತಿ ಶ್ರೀವರ್ಧಿನಿಯು ಕಾವೇರಿ
ನಿರ್ದೋಷಿ ಸರಯು ತುಂಗಭದ್ರೆ ಕಾಳಿಂದಿ ನರ್ಮದ್ಯೆ
ಮೃದ್ಗಂಗೆ ಸಿಂಧು ಭವಘ್ನೆ
ಮರ್ದಿತಘೌಘೆಯು ಕುಮುದ್ವತಿ ವಂಜರೆ ಭೀಮೆ
ನಿರ್ಧೂತ ಕಲಿಮಲ ಕಪರ್ದಿನಿಯು ತಾಮ್ರಪರ್ಣೆ
ಊರ್ಧ್ವಗತಿಪ್ರದ ನದಿ ಬಂದಿರ್ದವಿದೆ ತೀರ್ಥ ಕ್ರಮ
ನೀನಿರ್ದೆಡೆಗೆ ಪೋಪೆವೆನುತ ೩

ಕಿನ್ನರರು ಸುರನಾಯಕ ಮನ್ನೆಯರು ಸಲೆ ದೇವ
ಗನ್ನೆಯರು ಕಿಂಪುರುಷ ಪನ್ನಗರು ವಿದ್ಯಾಧ
ರನಿಕರ ತುಂಬುರರು ನಿನ್ನ ಗುಣ ಕೀರ್ತನೆಯ ಮಾರ್ಗೋನ್ನತದ
ಜಂತ್ರ ಗಾತ್ರದಿ
ಚೆನ್ನ ಭೂಪಾಳಿ ದೇವ ಧನಶ್ರೀ ದೇಶಾಕ್ಷಿ
ಸನ್ನುತ ವಸಂತ ಮಲಹ ನವೀನ ಮಾಳ್ವ ಶ್ರೀ
ಘನ್ನ ಸ್ವನಾಮಂಗಳನು ಪಾಡುವರಿದಕೋ ಧನ್ಯ ಸಂಗೀತ ಲೋಲ ೪

ಸುರಮುನಿ ಭೃಗು ವಸಿಷ್ಠ ನರಪಋಷಿ ಸನಕಾದ್ಯ
ಮರೀಚ್ಯತ್ರಿ ಪುಲಸ್ತ್ಯ ಆಂಗಿರ ಚ್ಯವನ ಸೌ
ಭರಿಯು ಭಾರಧ್ವಾಜಗಸ್ತ್ಯ ಪರಾಶರ ಕಶ್ಯಪ ಜಮದಗ್ನಿ ಗಾರ್ಗ್ಯ
ಗೌತಮ ದಧೀಚಿ
ಮಾರ್ಕಂಡೇಯ ಬಕದಾಲ್ಭ್ಯ ಕರಂಧಮೋದ್ದಾಲಕನು
ವರದಾಂಕ ಜಹ್ನುಮುನಿ ವರ್ಣಿಕುಲದಗಣಿತರು
ನೆರೆನೆರೆದು ತುತಿಸಿ ಸುಖಭರಿತರಾಗುತ ನಿಮ್ಮ ಚರಣದೂಳಿಗ
ಬೇಡುವರೊ ೫

ಕ್ಷಿತಿಪರೊಳು ಮರುತ ಪ್ರಿಯವ್ರತ ಪ್ರಾಚೀನ ಬರ್ಹಿ
ಪ್ರಥು ಗಯ ಧ್ರುವಿಕ್ಷ್ವಾಕು ದಿತಿಜಸುತ ಮಾಂಧಾತ

ಪ್ರತಿ ಸಗರ ನಹುಷ ಬಲಿ ಶತಧನ್ವಿದೇಹಿ ದಶರಥ
ಹರಿಶ್ಚಂದ್ರ ಹೈಹಯ
ಶ್ರುತಕೀರ್ತಿ ಶಿಬಿ ದೇವವ್ರತ ಅಂಬರೀಷನು ಭ
ರತದ್ವಯ ಪುರೂರವ ಯಯಾತಿ ರಂತಿದೇವ ಪರೀ
ಕ್ಷಿತನು ಮುಚುಕುಂದ ನಳ ಶತಪುಣ್ಯಶ್ಲೋಕ ನೃಪರತಿ
ಸ್ತುತಿಸುವರು ಕೃಪಾಳು ೬

ನಂದಗೋಕುಲದ ಗೋವಿಂದಗಾರ್ತರು ನಿದ್ರೆ
ಹೊಂದೆದ್ದಾನಂದದಿಂ ದೀಪಗಳ ಪ್ರಜ್ವಲಿಸಿ
ಮಿಂದು ಬ್ರಾಹ್ಮಿಯಲುಟ್ಟು ಪೊಂದೊಡಿಗೆ ಮಣಿದೊಡಿಗೆ
ಹೊಂದಿ ತಿಲಕಗಳನಿಟ್ಟು
ವಂದಿಸುತ ಗೃಹದೇವರ ದಧಿಮಥಿಸಿ ಬೆಣ್ಣೆಯ
ಇಂದಿರೆರಮಣ ಮೆಲ್ಲಲೆಂದು ತೆಗೆದಿಡಲರುಹ
ಬಂದಿಹರು ಗೋವಳರು ಮುಂದೆದ್ದು ತಮ್ಮ ಏಳೆಂದು
ಬಲು ಬಿನ್ನೈಪರೊ ೭

ಶ್ರೀಪತಿಯೆ ಬ್ರಹ್ಮಾದಿ ತಾಪಸರ ಪ್ರಭು ಏಳು
ದ್ವೀಪ ದ್ವೀಪಾಂತರದ ಭೂಪರರಸನೆ ಏಳು
ಕಾಮರುಷ ಕಾಳ ಕುಮುದಾಪಹರ ಹರಿ ಏಳು ಕೋಪ
ವೃಷಭಾರಿ ಏಳು
ಹೇ ಪಾರ್ಥಸಖ ಸುಪ್ರತಾಪ ಜಗ ಎರಡೇಳು
ವ್ಯಾಪಕನೆ ವಿಬುಧಕುಲಸ್ಥಾಪಕನೆ ಮೂರೇಳು
ಕೂಪಕುಲನಾಶಕ ಚಮೂಪ ಸಂಹರ ಏಳು ದ್ರೌಪದೀ ಬಂಧು ಏಳು ೮

ಶ್ರುತಿಯ ತರಲೇಳು ಭೂಭೃತವ ಹೊರಲೇಳು ಶುಭ
ಧೃತಿಯನಾಳೇಳು ದುರ್ಮತಿಯ ಸೀಳೇಳಮರ
ತತಿಯ ಸಲಹೇಳು ನಿಜಪಿತನ ಕಾಯೇಳು ಮಹಿಸುತೆಗೆ
ಸುಖವೀಯಲೇಳು

ಸತಿಯರಾಳೇಳು ಪತಿವ್ರತೆರ ಗೆಲಲೇಳು ಕಲಿ
ಖತಿಯ ಕಳಿಯೇಳು ಪಂಡಿತರುಳುಹಲೇಳು ನಮ
ಗತಿಶಯ ಪ್ರಸನ್ನವೆಂಕಟಪತಿ ಕೃಷ್ಣ ಸದ್ಗತಿದಾತ ತಾತಯೇಳ್ಳೈ ೬

೪೨೭

ಉಪ್ಪವಡಿಸೆಲೆಲೆ ತಂದೆ
ಸರ್ಪಗಿರಿವಾಸ ಶ್ರೀನಿವಾಸ ದಯದಿ ಪ.

ಕಮಲಸಖ ಸೂರ್ಯ ಮೂಡದ ಮುನ್ನೆ ಮುನಿಜನರು
ತಮ ತಮಗೆ ನೀನೊಲಿದ ನಿನ್ನ ಪ್ರತಿಮೆಯ ಪದಕೆ
ನಮಿಸುತ್ತೈದಾರೆ ಧ್ಯಾನಮೌನ ಜ್ಞಾನದೊಳವರು
ರಮೆಯರಸ ಯೋಗನಿದ್ರನೆ ೧

ಸುಳಿಗಾಳಿ ಸೌರಭಿಯ ಬಳಿವಿಡಿದು ಮಧುಪಕುಲ
ಸುಲಲಿತ ಸ್ವನದಿ ಪಾಡುತಿರೆ ಸಾರಸ ಮಯೂರ
ಗಿಳಿಕೋಕಿಲ ಮರಾಳ ಚಕ್ರವಾಕ ಶಕುಂತ
ಬಳಗ ಬಲು ತುತಿಸುತಿವೆ ಕೋ ೨

ಪವಿತ್ರೆಯೆನಿಸುವ ದೇವನದಿ ಯಮುನೆ ಗೋ
ದಾವರಿ ಸರಸ್ವತಿ ಶ್ರೀಕೃಷ್ಣ ಕಾಳಿಂದಿ
ಕಾವೇರಿ ತುಂಗಭದ್ರೆ ಭೀಮಾದ್ಯರೈತರಲು
ಪಾವನಿ ಸುತೀರ್ಥಪದನೆ ೩

ಹನುಮ ಸುರಋಷಿ ದೇವ ಗಂಧರ್ವ ಕಿಂಪುರಷ
ರನುನಯದಿ ದಂಡಿಗೆ ಸುವೀಣೆಯಂ ಮುಟ್ಟಿ ನಿಜ
ತನುವ ಮರೆದು ಉಗ್ಗಡಿಸುತಿರೆ ಸರಸಪ್ರಿಯ
ಸನಕಾದಿ ವಂದ್ಯ ಕೃಷ್ಣ ೪

ತಪಚಾರಿ ಕೇಳು ಮಂದರ ಪೊರೆಯಲೇಳ್ಳೈ ವ
ಸುಮತಿಳ್ಳಕ್ತ ಇಂದ್ರಾದಿಗಳ ಮೊರೆ ಕೇಳು

ಕುಮತಿಜನ ರಿಪು ಭವಾಬ್ಧಿತ್ರಾತ ಸುಖಿ ಯೋಗಿ
ಅಮಲಪ್ರಸನ್ನ ವೆಂಕಟೇಶ ೫

೪೨೮

ಏಳು ವಾರಿಜನೇತ್ರ ಏಳು ಚಿನ್ಮಯ ಗಾತ್ರ
ಏಳು ಪಾಂಡವಪಾಲ ಏಳು ಸಿರಿ ಭೂಲೋಲ
ಏಳು ಪಾವನಚರಿತ ಏಳೆರಡು ಜಗಭರಿತ
ಏಳು ಯದುಕುಲಲಲಾಮಾ ಪ.

ಮೂಡುತಿವೆ ಅರುಣ ಕಿರಣೋಡುತಿವೆ ತಮದ ಕುಲ
ಬಾಡುತಿವೆ ತಾರಿನನ ಬೇಡುತಿವೆ ಚಕ್ರವಾ
ಕಾಡುತಿವೆ ಕೀರ ಬಲು ಪಾಡುತಿವೆ ತುಂಬಿ ನಲಿ
ದಾಡುತಿವೆ ಖಗ ಸಮೂಹ
ರೂಢಿಯೊಳು ಮುನಿಜನರು ನೋಡಿ ರವಿಗತ ಹರಿಯ
ಷೋಡಶುಪಚಾರಾರ್ಚನೆ ಮಾಡಿ ಮನದಣಿಯೆ ಕೊಂ
ಡಾಡಿ ಕುಣಿದಾಡಿ ಭವಕಾಡನೀಡಾಡಿ ವರ
ಬೇಡುತ್ಯೆದಾರೆ ಗಡ ಹರಿಯೆ ೧

ವಿಷ್ಣುಪದೆ ವೃದ್ಧನದಿ ಕೃಷ್ಣವೇಣ್ಯಖಿಳ ಸಂ
ಹೃಷ್ಟಿಪ್ರದೆ ಕಾವೇರಿ ಇಷ್ಟದಾ ಯಮುನೆ ಅಘ
ನಷ್ಟಕಾರಣೆ ಭೀಮೆ ಶಿಷ್ಟಾಂಗೆ ತುಂಗೆ ವರ
ತುಷ್ಟಿದಾಯಕ ನದಿಗಳು
ಕೃಷ್ಣ ನಿನ್ನಡಿಯುಗಳ ಸ್ಪೃಷ್ಟರಾಗುತಲಿ ಉ
ತ್ಕೃಷ್ಟ ಪದ ಪಡೆವವೆಂದಷ್ಟ ದಿಗತಟದಿಂದ
ಚೇಷ್ಟಿತ ತರಂಗದಿಂ ಸ್ಪಷ್ಟ ಬಂದಿರೆ ಕರುಣ
ದೃಷ್ಟಿಯಿಂದವರ ನೋಡ್ಯೆ ಹರಿಯೆ ೨

ಕೇಶನಾಕೇಶ ಕಕುಭೇಶಾದಿ ಅಮರರಾ
ಕಾಶದಲಿ ದುಂದುಭಿಯ ಘೋಷ ಮೊಳಗಿಸಿದರನಿ

ಮೇಷ ಮುನಿ ವೀಣೆಯುಲ್ಲಾಸದಿಂ ಮಿಡಿಮಿಡಿದು ಧ
ನಶ್ರೀ ಭೂಪಾಳಿಯಿಂದ
ಶೇಷಶಯನಖಿಳ ನಿರ್ದೋಷ ಗುಣಪೂರ್ಣ ಸ
ರ್ವೇಶ ಮುಕುಂದ ಭಟಕೋಶನೆಂದವರು ನಿನ್ನ
ಬೇಸರದೆ ಪಾಡುತಿಹರು ಶ್ರೀಶ ಪ್ರಸನ್ವೆಂಕ
ಟೇಶನೆ ಒಲಿದುಪ್ಪವಡಿಸೊ ಹರಿಯೆ ೩

೪೨೯

ಜಯ ಜಯ ಜಯ ಮಂಗಳಂ ಶ್ರೀರಂಗಗೆ ಪ.

ಮಂಗಳ ಮಹಿಮ ತ್ರಿವೆಂಗಳ ಮೂರ್ತಿಗೆ
ಮಂಗಳವ್ವೆಯ ವಕ್ಷಾಂಗದೊಳಿಟ್ಟಗೆ ೧

ಮಂಗಳಾನಂತ ಗುಣಂಗಳಿಂ ಪೂರ್ಣಗೆ
ಹಿಂಗದೆ ಭಕ್ತರ ಸಂಗದಲ್ಲಿಹಗೆ ೨

ಮಂಗಳ ನೈದಿಲೆಗಂಗಳ ಚೆಲ್ವಗೆ
ರಂಗ ಪ್ರಸನ್ವೆಂಕಟಂಗಿತಜ್ಞನಿಗೆ ೩

೪೩೦

ಜಯಮಂಗಳಂ ಮಹಾ ಶುಭಮಂಗಳಂ
ಮಂಗಳಂ ಮದನ ಜನಕಂಗೆ ನಿತ್ಯ ಪ.

ಶಂಕಾಸುರನ ಸೀಳಿ ಶ್ರುತಿಯ ತಂದವನಿಗೆ
ಬಿಂಕದಿಂ ಮಂದರಕೆ ಬೆನ್ನಾಂತಗೆ
ಪಂಕಜಾಸನಗೊಲಿದು ಪ್ರತ್ಯಕ್ಷನಾದವಗೆ
ಶಂಕೆಯನು ಬಿಡಿಸಿ ಶಿಶುವನು ಪೊರೆದಗೆ ೧

ವಿತರಣಕೆ ಬಂದು ಬಲಿವಿಭವನಪಹರಿಸಿದಗೆ
ಪತಿತ ಕ್ಷತ್ರಿಯರ ಸಂಹರಿಸಿದವಗೆ
ಸತಿಯ ಕದ್ದವನ ದಶಶಿರಶತಖಂಡಿಸಿದಗೆ
ಪಿತ ಮಾತೆ ಬಂಧನವ ಪರಿಹರಕಗೆ ೨

ಮುಪ್ಪುರದ ನಾರಿಯರ ಮನವ ಗೆದ್ದವಗೆ
ತಪ್ಪದೆ ಕಲಿಬಲವ ತರಿದಾತಗೆ
ಸರ್ಪಗಿರಿಯಲಿ ನಿಂತು ನಿತ್ಯಸುಖದಾತನಿಗೆ
ಶ್ರೀಪ್ರಸನ್ವೆಂಕಟೊಡೆಯನೆನಿಪಗೆ ೩

೪೩೧

ಜಯ ಮಂಗಳಂ ಮಹಾ ಶುಭಮಂಗಳಂ
ಮಂಗಳಂ ಮಧುಹರಗೆ ಮಾವರನಿಗೆ ಪ.

ಶ್ರುತಿಹೃತ ವಿಹೃತನಾದಗೆ
ಕ್ಷಿತಿಭೃತ ವಿಭೃತನಾದಗೆ
ಧೃತಿ ಜಿತ ವಿಜಿತ ಕುಪಿತಗೆ ವಿತರಣಾಂತಗೆ
ಪತಿತತನು ಕ್ಷತಕೃತಗೆ
ಕೃತಪೂತಹಿಸತಿನುತಗೆ
ಪತಿವ್ರತ ಮೋಹಿತ ತುರಗಯುತವ್ಯಾಕೃತಗೆ ೧

ತತ್ವಾಮೃತ ಸತ್ಯವ್ರತಗೆ
ಮಥನಾಮೃತ ದಿತಿಜಾತರ್ಗೆ
ಕಥಾಮೃತ ಸುಮತಿಗೆ ಕೃಪಾಮೃತ ದೈತ್ಯಜಗೆ
ಭ್ರಾತಪಿತ ಸ್ತ್ರೀಸತಿವ್ರಾತಕೆ
ಭೂತಪತಿಗೆ ಜಾತಧರ್ಮಕೆ
ಹಿತಾಮೃತ ತಾಮ್ರತೋಪೇತಗೆ ಮೂರ್ತ್ಯಮಲನಿಗೆ ೨

ಅನಿಮಿಷಾನಿಮಿಷ ಮಾನಿಗೆ
ಕನಕಾಕ್ಷ ಕನಕಕಶ್ಯಪುವಿ
ನ ನಿಘಘ್ನ ಅಕ್ಷಯತನುಗೆ ಜನನಿಜಘ್ನಗೆ

ಆನನದಶದಾನವ ಮಾನಿನಿ
ಹನನ ಶೀಲ ಮೋನಾನ್ವಿತಗೆ
ಜ್ಞಾನಜನೇಶ ಪ್ರಸನ್ವೆಂಕಟ ಅನಾಥನಾಥಗೆ ೩

೪೩೨

ನೀರಾಜನವನೆತ್ತಿರೊ ತಿಮ್ಮಯ್ಯಗೆ
ವಾರಿಜೋದ್ಭವ ಕಾಮರಯ್ಯಗೆ ಪ.

ಆನಕ ದುಂದುಭಿ ಕೂಡೆ ಬಂದ
ಧೇನು ಕಾವರ ಪಳ್ಳಿಲಿ ನಿಂದ
ನಾನಾ ಕೃತ್ರಿಮಗೈದಾಳರಿಗೆ
ಪಾನಕೆ ಗೋರಸ ಅಪಹಾರಿಗೆ ೧

ಆವು ಕಾವ ದಾವಾಗ್ನಿಯ ನುಂಗಿ
ಗೋವಕ್ಕಳ ಸಖರ ಸುಸಂಗಿ
ಪಾವನು ಕಾಲಿನಿಂದ ತುಳಿದಗೆ
ಭಾವಕಿಯರ ಭಾವಕೊಲಿದಗೆ ೨

ಕೋಪವಿಲ್ಲದನ ಕೂಡಿ ಹೋಗಿ
ಪಾಪವೆಲ್ಲಳಿದು ಮಾವನ ನೀಗಿ
ತಾಪವಾರಿಸಿದ ತಂದೆ ತಾಯಿಗೆ
ಭೂಪ ಉಗ್ರಸೇನಾಶ್ರಯಗೆ ೩

ಶ್ರೀರುಕ್ಮಿಣಿ ಸತ್ಯೆಯರಾಳಿ
ನರಕಾಸುರನ ತಲೆಹೋಳಿ
ಭೂರಿ ಕನ್ನೇರ ಕೈವಿಡಿದಗೆ
ದ್ವಾರಕ ನಗರದರಸಗೆ ೪

ಕುಂತಿ ಪುತ್ರರ ಸುಖ ಬೆಳೆಸಿ
ಕಾಂತೆ ಪಾಂಚಾಲಿ ಲಜ್ಜಾ ಉಳಿಸಿ
ಭ್ರಾಂತ ಪಾಪಿ ಕೌರವನಾಶಗೆ
ಕಾಂತ ಪ್ರಸನ್ವೆಂಕಟಾದ್ರೀಶಗೆ ೫

೪೩೩

ಮಂಗಳಂ ಮಕರಕುಂಡಲ ಮಂಡಿತಾದವಗೆ ಪ.

ಮಂಗಳಂ ಮಾರಪಿತ ಮಾರಮಣಗೆ
ಮಂಗಳಂ ಮಿತ್ರಕೋಟಿ ಮಹಾಕಾಶಗೆ
ಮಂಗಳಂ ಪನ್ನಗಾಚಲನಿಲಯಗೆ ಜಯ
ಮಂಗಳಂ ಮತ್ತೆ ಶುಭಮಂಗಳಂ ಅ.ಪ.

ಕಣ್ಣನೋಟದಿ ಚೆಲುವ ಕಮಠರೂಪಾದವಗೆ
ಹೆಣ್ಣ ನೆಗಪಿದ ಹಿರಣ್ಯಕ ಮರ್ದಗೆ
ಚಿನ್ನವಟು ಭಾರ್ಗ್ವಾಂಧಚರಹರ ಗೋವ್ರಜಚರಗೆ
ಕನ್ನೆಯರ ವ್ರತಗೇಡಿ ಕಲಿಮಥನಗೆ ೧

ನೀರಚರ ನಗಧರ ಕನಕನೇತ್ರನೊರಸಿದಗೆ
ಕ್ರೂರವದನಾಂಕಿತ ಕುಬುಜ ವಿಪ್ರಗೆ
ವೀರಕುನೃಪಾರಿ ರಘು ವಿಜಯ ಸಖನಾದವಗೆ
ಚಾರುಮೋಹನ ಚಟುಲ ಹಯರೂಢಗೆ ೨

ಆಗಮೋದ್ಧರ ಕಚ್ಛಪ ಅವನಿಧರ ಹರಿಮೊಗಗೆ
ತ್ಯಾಗ ಬೇಡಿದ ತಾಯಿ ತಲೆಗಡಿದಗೆ
ಯಾಗಪಾಲಹಿಮರ್ದ ಯೋಗೇಶಜೋದ್ಧರಗೆ
ನಾಗಾದ್ರಿ ಪ್ರಸನ್ವೆಂಕಟನಾಥಗೆ ೩

೪೩೪

ಮಂಗಳ ಅಂಜನ ಗಿರಿಪತಿಗೆ ಶುಭ
ಮಂಗಳವೆನ್ನಿ ಸಿರಿಪತಿಗೆ ಪ.

ಮಂಗಳ ಬಾಯೊಳು ಮಾತ ಕಚ್ಚಿದಗೆ
ಮಂಗಳ ಅವಯವ ಮುಚ್ಚಿದಗೆ
ಮಂಗಳ ಕೋರೇಲಿ ಪ್ರಿಯಳ ಹಚ್ಚಿದಗೆ
ಮಂಗಳ ನಖದ್ಯಸು ಬಿಚ್ಚಿದಗೆ ೧

ಮಂಗಳಡಿಯೊತ್ತಿ ಬಿಂಕವ ಸೆಳೆದಗೆ
ಮಂಗಳ ಭೂಗುರು ಕಳೆದಗೆ
ಮಂಗಳೆಗೋಸುಗ ಖಳರನಳಿದಗೆ
ಮಂಗಳಾಂಗಿಯರಂಬರ ಸೆಳೆದಗೆ ೨

ಮಂಗಳಾಂಗಕೆ ಉಡಿಗೆಯನೊಲ್ಲದಗೆ
ಮಂಗಳ ಶೀಲವ ಸೊಲ್ಲಿದಗೆ
ಮಂಗಳ ಪ್ರಸನ್ವೆಂಕಟೇಶ ಬಲ್ಲಿದಗೆ
ಮಂಗಳಮಯ ಕೈವಲ್ಯದಗೆ ೩

೪೩೫

ಮಂಗಳ ತ್ರಿವೆಂಗಳಪ್ಪ ಮಂಗಳಾಂಗ ರಂಗಗೆ ಶ್ರೀ
ಮಂಗಳೆಯ ಸಂಗಗೆ ಜಗಂಗಳಾಂತರಂಗಗೆ ಪ.

ಕಂಗಳಿಕ್ಕದಂಗೆ ನಿಖಿಳಾಂಗ ಕಪಟಂ(ಕಮಠಂ?)ಗೆ ಭೂ
ವೆಂಗಳರಸಂಗೆ ನರಸಿಂಗದೇವನಿಗೆ ೧

ತಿಂಗಳೊಲಿದ್ದಗೆ ಖಳರ ಜಂಗುಳಿ ನಾದ್ದಂಗೆ ಕಲ್ಲ
ವೆಂಗಳ ಮಾಳ್ಪಂಗೆ ಚೆಲ್ವ ಪೊಂಗೊಳಲೂದುವಂಗೆ ೨

ತುಂಗ ಮೋಹನಗೆ ಸತುರಂಗವಾಹನಂಗೆ ವಿ
ಹಂಗಗೆ ಭುಜಂಗಶಯನ ಪ್ರಸನ್ನವೆಂಕಟಂಗೆ ೩

೪೩೬

ಮಂಗಳ ಮಂಗಳಾತ್ಮಕಗೆ ಮಂಗಳ ಮಂಗಳಾನನಗೆ
ಮಂಗಳ ಮಂಗಳದೇವಿಯರಸಗೆ ಪ.

ಮಿಸುನಿಯ ಹರಿವಾಣದಲ್ಲಿ ಹೊಸಮುತ್ತಿನಾರತಿ ನಿಲಿಸಿ
ಬಿಸಜಗಂಧಿಯರು ಶ್ರೀಹರಿಗೆ ಜಯವೆನ್ನಿ ೧

ಕುಂದಕುಟ್ಮಲರದನೆಯರು ಇಂದುಮಂಡಲವದನೆಯರು
ಸಿಂಧುಶಯನ ನಿತ್ಯನಿಗೆ ಜಯವೆನ್ನಿ ೨

ರಂಭಾಸ್ತಂಭೋರು ಅಂಬುಜಕುಚಯುಗಳೆಯರು
ಅಂಬುಜಶರಜನಕಗೆ ಜಯವೆನ್ನಿ ೩

ಪ್ರಾಗ್ಜ್ಯೋತಿಷಧಿಪನರಿಗೆ ಪೂಗಣ್ಣಿಯ ಮನೋಹರಗೆ
ನಾಗ್ಗನ್ನೆಯರ ದೇವಗೆ ಜಯವೆನ್ನಿ ೪

ಸೌಂದರ್ಯಾತಿಶಯ ಪೂರಣಗೆ ಸೈಂಧವ ಹನನ ಕಾರಣಗೆ
ತಂದೆ ಪ್ರಸನ್ನವೆಂಕಟೇಶಗೆ ಜಯವೆನ್ನಿ ೫

೪೩೭

ಮಂಗಳ ಮಂದಿರಗೆ ಮಂಗಳ ಮುರಾರಿಗೆ
ಮಂಗಳ ತಿಮ್ಮಯ್ಯಗೆ ಜಯಮಂಗಳ ಪ.

ನೀಲಘನಕಾಯಗೆ ಶ್ರೀಲಕುಮಿ ಸಹಾಯಗೆ
ವ್ಯಾಳವರಶಾಯಿಗೆ ಭಾಳನೇತ್ರಧ್ಯೇಯಗೆ ೧

ದೀನ ಪರಿಶುದ್ಧಗೆ ದಾನವರನೊದ್ದಗೆ
ಆನಂದನಿರುದ್ಧಗೆ ಮಾನವ ಮೃಗೇಂದ್ರಗೆ ೨

ಶೇಷಗಿರಿವಾಸಗೆ ದಾಸಭಯನಾಶಗೆ
ತೋಷಪೂರ್ಣಹಾಸಗೆ ಪ್ರಸನ್ವೆಂಕಟೇಶಗೆ ೩

೪೩೮

ಮಂಗಳ ಮಹಿಮಗೆ ನೀರಾಜ
ನಂಗಳ ಪೈಸರಿಸಿ ಭೃಂಗಾಳ
ಕಂಗಳೆಯರು ಸ್ಮಿತವದನಂಗಳೆಯರು ಶಿರಿ ತಿರು
ವೆಂಗಳಪತಿಗಾರತಿಯ ಬೆಳಗಿರೆ ಪ.

ಅಕ್ರಮದಲಿ ಶ್ರುತಿ ಕದ್ದೊಯ್ದವ
ನಾಕ್ರಂದಿಸಿ ಸೀಳಿದ ಶುಭ ಮ
ತ್ಸ್ಯಾಕೃತಗೆ ಜಗಗರ್ಭಾಕೃತಗೆ ಹತತಮ
ವ್ಯಾಕೃತಗಾರತಿಯ ಬೆಳಗಿರೆ ೧

ಇಂದಿರನೈಶ್ವರ್ಯವು ಮಕರದ
ಮಂದಿರ ಮಗ್ನಾಗಿರೆ ಗಿರಿಭೃತ
ಕಂಧರಗೆ ಕಚ್ಛಪ ಸುಂದರಗೆ ಕರುಣಾ
ಸಾಂದರಗಾರತಿಯ ಬೆಳಗಿರೆ ೨

ಪೊಂಗಣ್ಣಿನ ದಿತಿಜ ಕ್ಷಿತಿಯ
ಹಿಂಗದೆ ಬೈಚಿಡಲು ಕ್ರೋಡದಿ
ಭಂಗಿತಗೆ ವಸುಮತಿ ಸಂಗತಗೆ ದಿವಿಜರ
ಇಂಗಿತಗಾರತಿಯ ಬೆಳಗಿರೆ ೩

ದಾನವಗಂಜದೆ ಶಿಶು ವರಹರಿ
ನೀನೆ ಗತಿಯೆನೆ ಕಾಯ್ದ ಸು

ಜಾಣನಿಗೆ ನಿಜಜನಪ್ರಾಣನಿಗೆ ನರಪಂ
ಚಾನನಗಾರತಿಯ ಬೆಳಗಿರೆ ೪

ಧರ್ಮದಿ ಕೊಬ್ಬಿದ ಬಲಿಚಕ್ರನ
ಮರ್ಮದಿ ಜಡಿದ ವಿಚಿತ್ರ
ಕರ್ಮನಿಗೆ ಧೃತಮೃಗಚರ್ಮನಿಗೆ ಅಣುವಟು
ಶರ್ಮನಿಗಾರತಿಯ ಬೆಳಗಿರೆ ೫

ವೀರ ಕ್ಷತ್ರಿಯರ ಕುಲ ಸಂ
ಹಾರ ರೇಣುಕೆ ಕಂಠ ವಿ
ದಾರಿಗೆ ವಿತರಣ ಶೂರಗೆ ಘೋರ ಕು
ಠಾರಿಗಾರತಿಯ ಬೆಳಗಿರೆ ೬

ಮುನಿಮಖಪಾಲಕ ತ್ರಯಂಬಕ
ಧನುಹರ ಸೀತಾವರ ದಶಮುಖ
ಹನನಗೆ ಮತ್ತವನನುಜಪಗೆ ಅಂಜನಾ
ತನುಜಪಗಾರತಿಯ ಬೆಳಗಿರೆ ೭

ಪೊಂಗೊಳಲೂದುತ ಗೋಜಂಗುಳಿ
ಹೆಂಗಳೆಯರ ಮೋಹಿಪ ತಾವರೆ
ಗಂಗಳಗೆ ಸುಖದ ತರಂಗನಿಗೆ ಪಾಂಡವ
ಸಂಗನಿಗಾರತಿಯ ಬೆಳಗಿರೆ ೮

ನೀಚರ ಬಲವಳಿಯಲು ಸತ್ವರ
ಖೇಚರನಾರಿಯರ ವ್ರತಹೃತ
ಆಚರಗೆ ಜಿತ ಬೌದ್ಧಾಚರಗೆ ನಿಗಮವಿ
ಗೋಚರಗಾರತಿಯ ಬೆಳಗಿರೆ ೯

ಸಂಕರ ಕಲಿಯಂ ಮಥಿಸಲು ತಾ
ಬಿಂಕದಿ ಹಯವೇರಿದ ಸದ್ಧ

ರ್ಮಾಂಕುರಗೆ ವರ್ಧಿಪ ಕಿಂಕರಗೆ ಪ್ರಸ
ನ್ವೆಂಕಟರೇಯಗಾರತಿಯ ಬೆಳಗಿರೆ ೧೦

೪೩೯

ಮಂಗಳ ಮಹಿಮೆಗೆ ಮಂಗಳ ಶುಭ
ಮಂಗಳದೇವಿಗೆ ಮಂಗಳ ಪ.

ನಾರಾಯಣನರ್ಧಾಂಗಿಗೆ ಮಂಗಳ
ನೂರಸುಖನ ತಾಯಿಗೆ ಮಂಗಳ
ಮೂರು ಅಂಬಕನಜ್ಜಿಗೆ ಮಂಗಳ
ಈರೇಳು ಲೋಕೇಶಳಿಗೆ ಮಂಗಳ ೧

ಅಗಣಿತ ಚಂದ್ರಾರ್ಕಾಭೆಗೆ ಮಂಗಳ
ನಗೆಮೊಗದರಸಿಗೆ ಮಂಗಳ
ಸುಗುಣಗಣಾನಂತಾಬ್ಧಿಗೆ ಮಂಗಳ
ಝುಗಝುಗಿಪಾಭರಣೆಗೆ ಮಂಗಳ ೨

ಬೇಡಿದ ಭಾಗ್ಯಪ್ರದಾತ್ರೆಗೆ ಮಂಗಳ
ನಾಡೊಳರ್ಚಕ ನಾಥೆಗೆ ಮಂಗಳ
ಪ್ರೌಢಜನೇಶ್ವರಿ ಪವಿತ್ರೆಗೆ ಮಂಗಳೆ
ಗೂಡಪ್ರಸನ್ವೆಂಕಟಗೆ ಮಂಗಳ ೩

೪೪೦

ಮಂಗಳಾರತಿಯ ತಂದೆತ್ತಿರೆ ಹೇ
ಮಾಂಗನೆಯರು ವೆಂಕಟಪತಿಗೆ ಪ.

ಪೊಂಗಿಂಡಿಯುದಕ ಕಂಗಳಿಗೊತ್ತಿ ಪೊಸಬಗೆ
ರಂಗು ಮಾಣಿಕದಕ್ಷತೆಯನಿಟ್ಟು

ಪೊಂಗಂಕಣ ಪೊಳೆವಿನ ಪ್ರಭೆಯಲಿ ಮರಿ
ಭೃಂಗಕುಂತಳೆಯರೆಡಬಲದಿ ೧

ಅನುದಿನ ಮಂಗಳ ಮನಸಿಜನಯ್ಯಗೆ
ವನಮಾಲಿ ಕೌಸ್ತುಭಹಾರನಿಗೆ
ಘನ ಮಹಿಮೆಯ ಜಗ(ದ?)ವರಿಗೆ ತೋರುವನಿಗೆ
ಮುನಿ ಸನಕಾದಿ ವಂದಿತ ಪಾದಗೆ ೨

ವಿಕ್ರಮಕೆ ಎದುರಾರಿಲ್ಲವೆಂದು ಬಲಿ
ಚಕ್ರನು ಸುರರ ಬಾಧಿಸುತಿರಲು
ಶಕ್ರನ ಪೊರೆದವನುಕ್ಕ ತಗ್ಗಿಸಿ ತ್ರಿ
ವಿಕ್ರಮನೆನಿಸಿದ ದೇವನಿಗೆ ೩

ವ್ರಜದ ಗೋಪಾಂಗನೆಯರ ಮನೋಹರಗೆ
ಭುಜಗಶಾಯಿ ಭಕ್ತ ಭಯದೂರಗೆ
ನಿಜ ಭಕ್ತ ಪಾರ್ಥರ ಪಥಿಕರಿಸಿದವನಿಗೆ
ಗಜವನುದ್ಧರಿಸಿದ ದನುಜಾರಿಗೆ ೪

ಕಡುಮೂರ್ಖ ಸೀತಾಕೃತಿಯನೊಯ್ದಸುರನ
ಬಿಡದೆ ಮರ್ದಿಸಿದ ಶ್ರೀ ರಘುಪತಿಗೆ
ಸಡಗರದಲಿ ಶೇಷಾದ್ರಿಲಿ ನಿಂತ ಎ
ನ್ನೊಡೆಯ ಪ್ರಸನ್ನವೆಂಕಟಪತಿಗೆ ೫

೪೪೧

ಮಹಾಲಕ್ಷುಮಿಗೆ ನಿತ್ಯ ಮಂಗಳ ಶುಭ ಮಂಗಳ
ಮಹಾವಿಷ್ಣುವಿನ ರಾಣಿಗೆ ಮಹಾ ಮಂಗಳ ಪ.

ಪೂರ್ಣಚಂದ್ರಾರ್ಣವ ಪೂರ್ಣಗುಣಾರ್ಣವ
ಪೂರ್ಣಮನೋರಥದಾಯಕಿಗೆ ಸು

ಪರ್ಣೇಂದ್ರವಾಹನನರ್ಧಾಂಗಿ ದೇವಿಗೆ ವಿ
ಶ್ವ ನಾಯಕಳಾದ ಜಗನ್ಮಾತೆಗೆ ೧

ಕರವೀರಪುರದಲ್ಲಿ ನೆರಹಿದ ಭಕ್ತರ
ಕರಕರದಭೀಷ್ಟೆಯ ಕೊಡುವಂದಿಗೆ
ಕರಕಮಲಗಳಲ್ಲಿ ಅಕ್ಷಯಾಮೃತಕುಂಭ
ಧರಿಸಿದ ಜಾಣೆ ಕಲ್ಯಾಣಿಗೆ ನೀಲವೇಣಿಗೆ ೨

ಶ್ರೀಮದನಂತಾಸನ ವೈಕುಂಠ
ಶ್ರೀ ಮತ್ಶ್ವೇತದ್ವೀಪನಿವಾಸಿನಿ
ಸ್ವಾಮಿ ಪ್ರಸನ್ನವೆಂಕಟನ ಪಟ್ಟದರಾಣಿ
ಕಾಮಿತಾರ್ಥದಾಯಿ ಕಲ್ಯಾಣಿಗೆ ೩

೪೪೨

ಲಾಲಿ ಮುಕುಂದ ಲಾಲಿ ಗೋವಿಂದ ಲಾಲಿ ಮಯ್ಯ ಲಾಲಿ
ಲಾಲಿ ಮೂರ್ರೈದಲಿಪ್ಪೆಲ್ಲಾಲಯರ ಪ್ರಭು ಲಾಲಿ ಮಯ್ಯ ಲಾಲಿ ಪ.

ಜಗ ಜಗುಳಿಸಿ ವಟಪತ್ರದಿ ಮಲಗಿದೆ
ಲಾಲಿಮಯ್ಯ ಲಾಲಿ
ಮಗುವಾಗಿ ವ್ರಜದೊಳು ತೊಟ್ಟಿಲೊಳೊಪ್ಪಿದೆ
ಲಾಲಿ ಮಯ್ಯ ಲಾಲಿ ೧

ಸ್ವಗತ ಭೇದ ವರ್ಜ್ಯ ಪರಮಾತ್ಮ ಪರಬ್ರಹ್ಮ
ಲಾಲಿ ಮಯ್ಯ ಲಾಲಿ
ಜಗದ ಜೀವರ ಬಿಂಬ ಮೂರ್ತಿ ಅನಂತನೆ
ಲಾಲಿ ಮಯ್ಯ ಲಾಲಿ ೨

ಪಯೋನಿಧಿವಾಸ ಪರೇಶ ಪರಿಪೂರ್ಣ
ಲಾಲಿ ಮಯ್ಯ ಲಾಲಿ

ಶ್ರೀಯರಸ ವೈಕುಂಠವಲ್ಲಭ ಕೃಷ್ಣಯ್ಯ
ಲಾಲಿ ಮಯ್ಯ ಲಾಲಿ ೩

ಸುರರ ಪುಣ್ಯದ ವಲ್ಲಿ ಫಲಿಸಲಿಲ್ಲುದಯಾದೆ
ಲಾಲಿ ಮಯ್ಯ ಲಾಲಿ
ಧರೆಯ ಪಾವನ ಮಾಡೆ ಪಾಂಡವರ ಕಾಯ ಬಂದೆ
ಲಾಲಿ ಮಯ್ಯ ಲಾಲಿ ೪

ಅಜಮಿಳ ಗಜರಾಜ ಧ್ರುವ ಅಂಬರೀಷಪಾಲ
ಲಾಲಿ ಮಯ್ಯ ಲಾಲಿ
ಸುಜನ ಪ್ರಹ್ಲಾದನ ಸಲಹಿದ ನರಹರಿ
ಲಾಲಿ ಮಯ್ಯ ಲಾಲಿ ೫

ಅಸಮ ಬಾಲಕನಾದೆ ಅವ್ಯಾಕೃತಾಂಗನೆ
ಲಾಲಿ ಮಯ್ಯ ಲಾಲಿ
ವಿಷಮ ವಿದೂರಾಗಣಿತ ಸುಗುಣಾರ್ಣವ
ಲಾಲಿ ಮಯ್ಯ ಲಾಲಿ ೬

ಸ್ಮೃತಿ ಗಿರಿ ಧರೆ ಶಿಶು ಮೃಗಚೇಲಧರ ಭಾರ್ಗವ
ಲಾಲಿ ಮಯ್ಯ ಲಾಲಿ
ಕ್ರತು ಕೃಷ್ಣೆ ಭವ ಧರ್ಮಪಾಲ ಪ್ರಸನ್ವೆಂಕಟೇಶ
ಲಾಲಿ ಮಯ್ಯ ಲಾಲಿ ೭

೪೪೩

ಶ್ರೀ ಮಂಗಳ ದೇವಿಗೆ ಜಯ ಜಯ
ಶ್ರೀ ಮಂಗಳ ದೇವಿಗೆ ಜಯ ಜಯ
ಸ್ವಾಮಿಗೆ ಜಯ ಸ್ವಾಮಿನಿಗೆ ಜಯ ಜಯವೆಂದು ಪಾಡಿ ಜಾನಕಿ
ರಾಮಗಾರತಿಯ ಬೆಳಗಿರೆ ಪ.

ಪದುಮಿಣಿಯರು ಪತಿವ್ರತಾಮಣಿಯರು
ವಿಧುಬಿಂಬದ ಮುಖಿಯರು ಸಖಿಯರು
ಪದುಮರಾಗದ ಹರಿವಾಣದಿ ಹರಿವಾಣದಿ ಹರಿಮಣಿದೀಪದ
ಕದಡಿನಾರತಿಯ ಬೆಳಗಿರೆ ೧

ಉಲಿವಂದುಗೆಗಾಲಿನ ಮೇಲಿನ
ಕಲಧೌತದ ಇತ್ತರದುತ್ತರಿ
ಥಳಥಳಿಸುವ ಶಶಿರವಿ ಕೋಟಿಗಳ ಕೋಟಿಗಳ
ಗೆಲುವ ರವಿಕುಲ ತಿಲಕಗಾರತಿಯ ಬೆಳಗಿರೆ ೨

ಅಂಗದ ವಲಯಾಂಗುಲಿ ಮುದ್ರಿಕೆ
ರಂಗುಮಾಣಿಕ ಮುತ್ತಿನ ಸರ
ಬಂಗಾರದ ಮೇಲೆ ವೈಜಯಂತಿ ವೈಜಯಂತಿ ಪದಕವು ತುಳಸಿ
ಶೃಂಗಾರಗಾರತಿಯ ಬೆಳಗಿರೆ ೩

ಇಂದಿರೆ ಸೀತಾರ್ಪಿತಮಾಲಾ
ಕಂಧರ ಭುವನಾವಳಿಗಪ್ರತಿ
ಸುಂದರ ಸದ್ಗುಣ ಸಾಂದ್ರ ಉಪೇಂದ್ರ ಭೂಮಿ
ಜೇಂದ್ರ ಲಕ್ಷ್ಮಣಾಗ್ರಜ ರಾಮ ಚಂದ್ರಗಾರತಿಯ ಬೆಳಗಿರೆ ೪

ಕುಂಡಲ ಮುಕುಟಾಂಕಿತ ಸನ್ಮುಖ ಸುಭ್ರೂಹಿತ
ಮಂಡಲ ಗಂಡದ
ಪುಂಡರೀಕಾಭಾನಯನದ ನಯನದ ಘನಶಾಮಲವರಕೋ
ದಂಡಗಾರತಿಯ ಬೆಳಗಿರೆ ೫

ಋಷಿಮುಖವನು ಈಕ್ಷಿಸಿ ರಕ್ಷಿಸಿ
ವಿಷಮಾಚರಿ ರಾಕ್ಷಸಿ ಶಿಕ್ಷಿಸಿ
ವಿಷಕಂಠನ ಧನುವ ಮುರಿಹೊಯಿದು ಮುರಿಹೊಯಿದು
ವೈದೇಹಿ ಯ ಘನ
ತುಷಿಸಿದಗಾರತಿಯ ಬೆಳಗಿರೆ ೬

ಹನುಮನ ಕಂಠದ ಸನ್ಮಣಿಗೆ
ಪಣೆಗಣ್ಣನ ಶ್ರೀ ಜಪಮಣಿಗೆ
ನೆನೆವರ ಚಿಂತಾಮಣಿ ಸೀತಾಶಿರೋಮಣಿಗೆ ಶಿರೋಮಣಿಗೆ
ಪ್ರಸನ್ನವೆಂಕಟ ವನಜೋದ್ಭವಪಿತಗಾರತಿಯ ಬೆಳಗಿರೆ ೭

೪೪೪

ಶ್ರೀ ವೈಕುಂಠಕೆ ಸರಿಯಾದ ದ್ವಾರಕೆಯಲಿ ಶ್ರೀಕೃಷ್ಣ ರುಕ್ಮಿಣಿ
ದೇವಿಯರ ವಿವಾಹ ಶೋಭನದಿ ಉತ್ಸಾಹದಲಿ ಸರಸ್ವತಿ ಭಾರತಿ
ದೇವಿಯರು ಸರ ಋಷಿ ಭಾವೆಯರು ಸಂಗೀತ
ಕೋವಿದೆಯರು ಹಸೆಗಿಬ್ಬರನು ಕರೆದರು ಪ.

ಅಗಣಿತ ಬ್ರಹ್ಮಾಂಡವ ರಚಿಸಿ
ನಗುತಲೆ ನುಂಗೇಕಾಕಿಯಲಿ
ಮಗುವೆನಿಸಿ ವಟಪತ್ರದಲಿ ಮಲಗಿದೆ
ಮಲಗಿದಪ್ರಾಕೃತ ನಂದನ
ಮಗನೆ ಬಾ ಕಸ್ತೂರಿ ಮೃಗನೆ ಬಾ ಶ್ರೀ ತ್ರಿ
ಯುಗನೆ ಬಾರೆಂದು ಹಸೆಗೆ ಕರೆದರು ೧

ಕಡೆಗಣ್ಣಿನ ನೋಟದಿ ಕಮಲಜ
ಮೃಡಮುಖ್ಯರ ಪಾಲಿಸುವೆ ಪಾ
ಲ್ಗಡಲೊಡೆಯನ ಪಟ್ಟದರಂಭೆ ಜಗದಂಬೆ
ಜಗದಂಬೆ ಮೋಹನ ಮಾಯದ
ಬೆಡಗೆ ಬಾ ಭಾಗ್ಯದ ಹಡಗೆ ಬಾ ವ್ರಜದ
ಕಡೆಗೆ ಬಾರೆಂದು ಹಸೆಗೆ ಕರೆದರು ೨

ಪೂತನಿ ಶಕಟಾಂತಕನೆ ಬಾ ಚಕ್ರ
ವಾತನ ಘಾತಿಸಿದವನೆ ಬಾ
ಪಾತಕಿ ಬಕಧೇನುಕಹರ ನವನೀತಚೋರ ನವ

ನೀತಚೋರ ಭುವನಕಪ್ರತಿ
ಪೂತನೆ ಬಾ ದೇವಕಿ ಜಾತನೆ ಬಾ ಬೊಮ್ಮನ
ತಾತನೆ ಬಾರೆಂದು ಹಸೆಗೆ ಕರೆದರು ೩

ಯಮಳಾರ್ಜುನ ಭಂಜನ ಬಾ ಸಂ
ಯಮಿ ಕುಲ ಮನರಂಜನ ಬಾ
ರಮಣಕಪತಿ ಮದಹರ ಶುಭ ಯಮುನಾವಿಹಾರ
ಯಮುನಾವಿಹಾರ ಗೋಪವಧೂಟೀರ
ರಮಣ ಬಾ ಖಳಕುಲದಮನ ಬಾ ಖಗವರ
ಗಮನ ಬಾರೆಂದು ಹಸೆಗೆ ಕರೆದರು ೪

ಹೆಂಗಳ ಪಣೆಮಣಿಯೆ ಬಾ ಮನ
ಮಂಗಳ ಗುಣಮಣಿಯೆ ಬಾ ಭುವ
ನಂಗಳ ಬೆಳಗುವ ಚೆಲ್ವಿಕೆಯ ನಗೆಮೊಗದ
ನಗೆಮೊಗದ ನೈದಿಲೆ
ಗಂಗಳೆ ಬಾ ಸುರಮುನಿಜಂಗುಳಿ ಬಾ ಮಾತಿನ
ಹೊಂಗಿಳಿಬಾರೆಂದು ಹಸೆಗೆ ಕರೆದರು ೫

ಸ್ವರ್ಧುನಿಯಳ ಜನಕನೆ ಬಾ ಭವ
ಕರ್ದಮ ಶೋಷಕನೆ ಬಾ ಸುರ
ಶಾರ್ದೂಲ ಸದ್ಗುಣಜಾಲ ಸಂಗೀತಲೋಲ
ಸಂಗೀತಲೋಲ ಗೋಪಾಲಕ
ವರ್ಧನ ಬಾ ರಿಪುಚಯ ಮರ್ದನ ಬಾ ಧೃತ ಗೋ
ವರ್ಧನ ಬಾರೆಂದು ಹಸೆಗೆ ಕರೆದರು ೬

ಅಂಬುಜಮಾಲಿನಿಯೆ ಬಾ ಮ
ತ್ತಂಬುಜಜ ಜನನಿಯೆ ಬಾ ಹೇ
ಮಾಂಬರೆ ಸಂಪಿಗೆಯ ಕಬರೆ ಬಿಂಬಾಧರೆ
ಬಿಂಬಾಧರೆ ಬಹಳ ಉದಾರಿಗ

ಳಿಂಬೆ ಬಾ ಜಗದ ವಿಡಂಬೆ ಬಾ ಕುಂದಣ
ಬೊಂಬೆ ಬಾರೆಂದು ಹಸೆಗೆ ಕರೆದರು ೭

ರಾಜನಗಜ ಮಡುಹಿದನೆ ಬಾ ಮತ್ತ
ಭೋಜೇಂದ್ರನ ಕೆಡಹಿದನೆ ಬಾ
ಈ ಜನನೀ ಜನಕರ ಬಂಧನ ನಿವಾರಣ
ನಿವಾರಣ ಕಾರಣ ಪೂರಣ
ತೇಜ ಬಾ ರಾಜಾಧಿರಾಜ ಬಾ ದ್ವಿಜಸುರ
ಭೋಜ ಬಾರೆಂದು ಹಸೆಗೆ ಕರೆದರು ೮

ವೈದರ್ಭ ಗರ್ಭಜಾ ತೇಜಾ ಅಲ
ರೈದಂಬನ ಮಾತೆ ಬಾ
ವೈದಿಕ ವಿಖ್ಯಾತೆ ಸ್ವಯಂಜ್ಯೋತೆ ದಾತೆ
ಸ್ವಯಂಜ್ಯೋತೆ ದಾತೆ ನಿತ್ಯಮು
ತ್ತೈದೆ ಬಾ ಮುಕ್ತಿಯ ಬೋಧೆ ಬಾ ಮುದ್ದಿನ
ಮೋದೆ ಬಾರೆಂದು ಹಸೆಗೆ ಕರೆದರು ೯

ಪಾಂಡವ ಸ್ಥಾಪಕನೆ ಬಾ ಮಹಾ
ಖಾಂಡವವನ ದಾಹಕನೆ ಬಾ
ಹೆಂಡರು ಹದಿನಾರು ಸಾವಿರದ ನೂರೆಂಟು
ನೂರೆಂಟರನಾಳುವ ಕದನ ಪ್ರ
ಚಂಡ ಬಾ ಉದ್ದಂಡೋದ್ದಂಡ ಬಾ ಪುಂಡರ
ಗಂಡ ಬಾರೆಂದು ಹಸೆಗೆ ಕರೆದರು ೧೦

ಮುತ್ತಿನ ಸೂಸಕಳೆ ಬಾ ನವ
ರತ್ನದ ಭೂಷಕಳೆ ಬಾ
ಕಸ್ತೂರಿ ತಿಲಕದ ಪುತ್ಥಳಿಯೆ ಅಳಿಕುಂತಳೆಯೆ
ಅಳಿಕುಂತಳೆಯೆ ಮದವಳಿಗನ
ಚಿತ್ತೆ ಬಾ ನಿಜಪತಿವ್ರತ್ತೆ ಬಾ ಸುಪ್ವಾಣಿ
ಮುತ್ತೆ ಬಾರೆಂದು ಹಸೆಗೆ ಕರೆದರು ೧೧

ತುರಗಾಸ್ಯನ ಹೊಳಿದನೆ ಬಾ ಮಂ
ದರ ಬೆನ್ನಲಿ ತಾಳಿದನೆ ಬಾ
ವರಹ ನರಹರಿ ವಾಮನ ಭಾರ್ಗವ ರಾಮ
ರಾಮರ ರಾಮ ಕೃಷ್ಣ ಯೋಗಿ
ವರನೆ ಬಾ ಕಲಿಮಲಹರನೆ ಬಾ ಶಾಮಸುಂ
ದರನೆ ಬಾರೆಂದು ಹಸೆಗೆ ಕರೆದರು ೧೨

ಶಂಕಿಣಿ ಪದ್ಮಿಣಿಯರು ರುಕ್ಮಿಣಿ
ಪಂಕಜನಾಭನ ಪೂಜಿಸಿ ರ
ತ್ನಾಂಕಿತ ಹರಿವಾಣದಲಿ ಆರತಿಯೆತ್ತಿ
ಆರತಿಯೆತ್ತಿ ಪಾಡಿದರು ಅಕ
ಳಂಕನ ಅಹಿಪರಿಯಂಕನ ಪ್ರಸನ್ನ
ವೆಂಕಟರಮಣಗೆ ವಿಜಯವ ಹರಸಿದರು ೧೩

೪೪೫

ಹಿಂದಿನ ಪುಣ್ಯ ಫಲವೆಂತೊ
ಇಂದಿರೇಶಾನಂದದ ಲೀಲೆ ಅರುಹಿದ ಪ.

ಚಿತ್ರವಿಚಿತ್ರ ಮಹಿಮೆಯ ತೋರುತ ಖಳ
ದೈತ್ಯರನೆಲ್ಲ ಮಡುಹಿದ
ದೈತ್ಯರನೆಲ್ಲ ಮಡುಹಿ ಬಳಲ್ದನೆಂದು
ಕಸ್ತೂರಿ ತೈಲವೆರಸಿ ತಂದು ೧

ಶಂಕಿನಿ ಪದ್ಮಿನಿಯರೊಂದಾಗಿ ಕೃಷ್ಣನ
ಪಂಕಜಾಸನದಲಿ ಕುಳ್ಳಿರಿಸಿ
ಪಂಕಜಾಸನದಲಿ ಕುಳ್ಳಿರಿಸಿ ತಮ್ಮ ಒಲ್ವ
ಕಂಕಣಗೈಯ ಮೌಳಿಯೊಳಿಟ್ಟು ೨

ಈರೇಳು ಲೋಕದ ದೊರೆಯಾಗು ಭಕುತರ
ಸಿರಿಯಾಗು ದಿತಿಜರರಿಯಾಗು

ಸಿರಿಯಾಗು ಭಕ್ತರ ದಿತಿಜಾರಿಯಾಗೆನುತ
ಹರಸಿದರರ್ಥಿ ಮಿಗಿಲಾಗಿ ೩

ಕುಂಭಕುಚದ ಕಾಮಿನಿಯರು ಹರುಷದಿ
ಅಂಬುಜಾಕ್ಷನ ಪೂಸಿ ಕಿರುಬೆಮರಿ
ಅಂಬುಜಾಕ್ಷನ ಪೂಸಿ ಕಿರುಬೆಮರಿ ದಣಿಯದೆ ಕ
ದಂಬ ಕಡಿದಟಕಾಳಿಯ ತಂದು ೪

ವಿಕ್ರಮಾನ್ವಿವತವಾದವ್ಯಾಕೃತ ಗಾತ್ರಕೆ
ಅಕ್ಕರಿಂದೆ ತೈಲನಾಶನವ
ಅಕ್ಕರಿಂದಲಿ ತೈಲನಾಶನವ ಪೂಸಿ ಜಗುಳಲು
ಘಕ್ಕನಂಬರವ ಬಿಗಿದುಟ್ಟ ೫

ಹದವಾದ ಬಿಸಿನೀರ ಪೊಂಬಂಡೆಯೊಳು ತುಂಬಿ
ಪದುಮಗಂಧೆಯರು ನೀರೆರೆದರು
ಪದುಮಗಂಧೆಯರು ನೀರೆರೆವ ಸಂಭ್ರಮಕ್ಕೆ
ಮುದದಿ ಸುರರು ಹೂಮಳೆಗರೆದರು ೬

ಮುಂಬರಿಯುತ ಬಾಲೆಯರುತಕದಿಂದ
ಅಂಬುಧಾರೆಯ ನಿಲ್ಲಗುಡದೆರೆದು
ಅಂಬುಧಾರೆಯ ನಿಲ್ಲಗುಡದೆರೆದು ಜಾಂಬೂನ
ದಾಂಬರವುಡಿಸಿ ಕರೆತಂದು ೭

ಚಿತ್ರಮಂಟಪಕೆ ನವರತ್ನ ತೆತ್ತಿಸಿದ ಕಂಭ
ಕಸ್ತೂರಿ ಕಾರಣೆ ರಚನೆಯ
ಕಸ್ತೂರಿ ಕಾರಣೆ ರಚನೆಯ ಮಧ್ಯದಿ
ಮುತ್ತಿನ ಹಸೆಯೊಳು ಕುಳ್ಳಿರಿಸಿ ೮

ನೀಲ ಮಾಣಿಕಮೋಘದಿಂದಲೊಪ್ಪುವ ಪದಕ
ಲೋಲ ನೇತ್ರೆಯರಳವಡಿಸಿದರು

ಲೋಲನೇತ್ರೆಯರು ಅಳವಡಿಸಿ ಅಂಗುಲಿ
ಗೆಲ್ಲ ಮುದ್ರಿಕೆನಿಟ್ಟು ನಲಿದರು ೯

ಮುಕುಟ ಕೌಸ್ತುಭ ಮಣಿಯುಕುತ ಭೂಷಣವಿಟ್ಟು
ರುಕುಮಿಣಿ ಸತ್ಯರೆಡಬಲದಿ
ರುಕುಮಿಣಿ ಸತ್ಯರೆಡಬಲದಿ ಕುಳ್ಳಿರೆ ನಿತ್ಯ
ಮುಕುತಗಾರತಿಯ ಬೆಳಗಲು ೧೦

ಚಿನ್ನದ ಹರಿವಾಣದಿ ರನ್ನದಾರತಿಯಿಟ್ಟು
ಕನ್ನೇರು ಕಿರುನಗೆ ಬೀರಿದರು
ಕನ್ನೇರು ಕಿರುನಗೆ ಬಿರಿಯುತ ಪಣೆಯೊಳು
ಪೊನ್ನಿನಾಕ್ಷತೆಯಿಟ್ಟು ಲಲಿತವ ೧೧

ಜಯ ರಾಮ ತ್ರೈಧಾಮ ಜಯ ಜೀಮೂತಶಾಮ
ಜಯ ಪೂರ್ಣಕಾಮ ಸಾಸಿರನಾಮ
ಜಯ ಪೂರ್ಣಕಾಮ ಸಾಸಿರನಾಮನೆಂದು
ಭಯರಹಿತಗಾರತಿಯ ಬೆಳಗಿದರು ೧೨

ಚಿತ್ತಜನಯ್ಯಗೆ ಚಿನುಮಯ ದೇಹಗೆ
ಉತ್ತಮಗುಣಗಣ ಭರಿತಗೆ
ಉತ್ತಮಗುಣಗಣ ಭರಿತಗೆ ಪರಮಪ
ವಿತ್ರೇರಾರತಿಯ ಬೆಳಗಿದರು ೧೩

ಪನ್ನಗಾದ್ರಿವಾಸ ಪ್ರಸನ್ನವೆಂಕಟೇಶ
ಕನ್ನೆ ಲಕ್ಷ್ಮಿಯ ಕೂಡಿ ಆರೋಗಣೆಯ
ಕನ್ನೆ ಲಕ್ಷ್ಮಿಯ ಕೂಡ ಆರೋಗಣೆಯ ಮಾಡಿ
ತನ್ನ ಭಕ್ತರಿಗೆಲ್ಲ ಸುಖಪ್ರೀತ ೧೪

(ಆ) ಇತರ ಹಾಡುಗಳು

೪೪೬

ಕೃಪಣದಿ ಧನ್ಯರು ಎಂದಿಗೆ ಸುಖಿ
ಕೃಪಣರವರುಪಕಾರಿಗಳೊ ನಿನ್ನ ವಾರಣರು ಕೃಷ್ಣಯ್ಯ ಪ.

ಸಂಚಿತದ ಹೊನ್ನು ಬಂಡವಲ ಹೋಗಾಡಿ
ಕಂಚು ಕಾಂಚನವಾಗೆ ನಿನ್ನವರು
ಕಿಂಚಿತ್ತು ವ್ರಯವಿಲ್ಲ ನಿಕ್ಷೇಪಾಕ್ಷಯ
ಸಂಚಕಾರವ ಕೊಟ್ಟರೆಲ್ಲ ಮಂದಿರಕೆ ೧

ಅಂಗನೆ ತನೂಭವರಂಗದೆ ಮುಂಗೂಡೆ
ಹಿಂಗಿ ನಿರ್ವಾಣದಿ ನಿನ್ನವರು
ಜಂಗುಳಿ ಧನಧಾನ್ಯ ಮಣಿಯಂತೆ ಬಚ್ಚಿಟ್ಟು
ಸಂಗಾತಿಯವರು ಸಂಸಾರ ಕಟ್ಟಿದರು ೨

ಮನ್ನಣೆನೀಗಿ ಪಾತ್ರೆ ಹುಟ್ಟು ಮಾರುತ
ಸಣ್ಣರ ಕುಲ ಬಿಟ್ಟರು ನಿನ್ನವರು
ಬಣ್ಣ ಬಣ್ಣಗೆ ಉಟ್ಟು ಬಳಗ ಸಹಿತ ಭವ
ವುಣ್ಣುತ ನಿನ್ನ ಮಗನ ಉದ್ಯಮದವರು ೩

ಹಿಂದೆ ಮುಂದಿಲ್ಲದೆ ಭಿನ್ನ ಭಿನ್ನಾತ್ಮರು
ನಿಂದ್ಯಾಸ್ತ್ರ ಕಳುಕುವ ನಿನ್ನವರು
ಬಂಧು ಬಲ್ಲಿದರು ಭಾಗ್ಯಾನ್ವಿತ ಚಪಲರು
ಎಂದೆಂದಂಜರು ಮದಮತ್ತ ಮಾನಿಸರು ೪

ಚೆನ್ನಿಗರಲ್ಲ ಚೆಲುವರಲ್ಲ ಜಗವ ಪಾ
ವನ್ನ ಮಾಡುವರು ನಿನ್ನವರು ಪ್ರ
ಸನ್ನ ವೆಂಕಟಪತಿ ನಿನ್ನ ಮದ್ದಾನೆಗಳು
ಕುನ್ನಿಗೂಗೆಗೆ ಕಡೆಗಾಹವೆ ಕೃಷ್ಣ ೫

೪೪೭

ನಾರದ ಕೊರವಂಜಿ

೧

ಜಯ ಜಯ ಜಯ ಜಯ ಜಯ ಜಯ ಪ.

ಶ್ರೀ ರಮಾರಮಣ ಜಯ ಶ್ರೀಕರ ಗುಣಾಬ್ಧಿ ಜಯ
ಶ್ರೀ ರುಕ್ಮಿಣೀಶ ಜಯ ಶ್ರೀ ಶ್ರೀನಿವಾಸ ಜಯ
ನೀರಚರ ಕಮಠ ಕಿಟಿ ನೃಹರಿ ವಟು ಭೃಗುಜ ರಘು
ವೀರ ಯದುಪತೆ ಬುದ್ಧ ಕಲ್ಕಿ ಸ್ವರೂಪಾ ಜಯ ಜಯ ೧

ಶ್ರೀ ಮತ್ಕಪಿಲ ಋಷಭ ಯಜ್ಞದತ್ತ ಕಂಸ್ತುಘ್ನ(?)
ಕೌಮಾರ ವ್ಯಾಸ ಹಯಗ್ರೀವ ಶ್ರೀಮದ್ದಜಿತ ಜಯ
ಸ್ವಾಮಿ ಮಹಿದಾಸ ತಾಪಸ ಉರುಕ್ರಮ ಶೂಲಿ
ವ್ಯಾಮೋಹ ಧನ್ವಂತರೆ ಹಂಸ ಶುಕ್ಲಾ ಜಯ ಜಯ ೨

ಆನಂದ ಜ್ಞಾನ ಬಲಮಯ ಚಿತ್‍ಸ್ವರೂಪ ಜಯ
ಅನಂತ ಮಹಿಮ ವೈರಾಜ ಪುರುಷೋತ್ತಮ ಜಯ
ಅನಂತ ಬ್ರಹ್ಮ ರುದ್ರೇಂದ್ರಾದಿ ಸೇವ್ಯ ಜಯ
ಅನಂತ ಜೀವಗ ಪ್ರಸನ್ವೆಂಕಟ ಕೃಷ್ಣಾ ಜಯ ಜಯ ೩

೨

ಶರಣು ಮಂಗಳ ದೇವತೇ ವರ
ಶರಣು ಚಿತ್ಸುಖ ಸಾಗರ
ಶರಣು ಅಗಣಿತ ಗುಣ ಶುಭಾಕರ
ಶರಣು ವೆಂಕಟ ಮಂದಿರ ೪

ದುರುಳ ದೈತ್ಯರು ಸೊಕ್ಕಿ ವರದಲಿ
ಧರೆಗೆ ಕಂಬನಿ ತರಿಸಲು
ತ್ವರದಿ ಸುರರಿಗೆ ಮೊರೆಯನಿಟ್ಟಳು
ಧರಿಸಲಾರೆನು ಎನುತಲಿ ೫

ಸರಸಿಜೋದ್ಭವ ಭವ ಪುರುಹೂತ
ರರಿದು ಚಿಂತಿಸಿ ಮನದಲಿ
ವರ ಪಯೋನಿಧಿಗೈದಿ ಸ್ತುತಿಸಲು
ಕರುಣದಲಿ ಅವತರಿಸಿದೆ ೬

ಬಂದು ಧರ್ಮದ ವೃಂದ ರಕ್ಷಿಪೆ
ನೆಂದು ದೀಕ್ಷೆಯವಿಡಿದು ನೀ
ಅಂದಗೆಡಿಸುತ ದನುಜನಿಕರವ
ಹೊಂದಿ ದ್ವಾರಕ ನಗರವ ೭

ಇಂದಿರೆಯು ನಿನ್ನಿಚ್ಛೆಯನುಸರ
ದಿಂದ ಕ್ರೀಡಿಪಳನುದಿನ
ಮಂದ ಜನರಿಗೆ ಮೋಹಿಸುತ ನರ
ರಂದದಲಿ ತೋರಿದೆ ಹರೆ ೮

ದೇವಋುಷಿ ನಾರದನು ಶ್ರೀಪದ
ಸೇವೆಗೋಸುಗ ಕೊರವಿಯ
ಭಾವದಲಿ ಜಗದಂಬೆ ರುಕ್ಮಿಣಿ
ದೇವಿಯಳ ಬಳಿಗೈದು ತಾ ೯

ದೇವ ನಿನ್ನಯ ಬರವ ಬೆಸಸಿದ
ಕೋವಿದತೆಯನು ಪೇಳುವೆ
ಶ್ರೀವರ ಪ್ರಸನ್ವೆಂಕಟ ಕೃಷ್ಣ
ಪಾವನ ಮತಿಯ ಕರುಣಿಸೊ ೧೦

೩

ಶ್ರೀ ರಂಭೆ ಭೀಷ್ಮಕನ ಭೂರಿ ಪುಣ್ಯದ ಗರ್ಭ
ವಾರಿಧಿಯಲ್ಲಿ ಜನಿಸಿ
ನಾರಿ ರುಕ್ಮಿಣಿಯೆಂಬ ಚಾರುನಾಮದಿ ಕಳೆ
ಯೇರಿ ಬೆಳೆದಳಂದವ್ವೆ ೧೧

ಜನನಿ ಜನಕರೆಲ್ಲ ತನುಜೆಯ ಪರಿಯಂಘ್ರಿ
ವನಜಕೆ ಕೊಡಬೇಕೆನ್ನೆ
ನೆನೆದು ತಾನೊಂದು ರುಕ್ಮನು ದಮಘೋಷನ
ತನುಜಗೆ ತಂಗಿಯನು ೧೨

ಕೈಗೂಡಿಸುವೆನೆಂಬ ವೈಭವದಲ್ಲಿರೆ
ವೈಮನಸದೊಳು ಕನ್ಯೆಯು
ಸುಯ್ಗರಿಯುತ ಮುರವೈರಿ ಪ್ರಸನ್ವೆಂಕಟಕೃ
ಷ್ಣಯ್ಯನೊಳ್ ಮನವಿಟ್ಟಿರೆ ೧೩

೪

ದನುಜ ಮಥನ ಹರಿಸೇವೆ ಇದೆಂದು
ಅನಿಮಿಷಮುನಿ ಧರೆಗಿಳಿದು ತಾ ಬಂದು
ವನಿತೆ ಕೊರವಂಜಿಯ ವೇಷವ ಧರಿಸಿ
ಜನಪ ಭೀಷ್ಮಕನೋಪವನದಲ್ಲಿ ನೆಲಸಿ ೧೪

ಹಲವು ಕೊರವಿಯರ ಕೂಡಿ ಸಿಂಗರದಿ
ಬೆಲೆ ಇಲ್ಲದುಡಿಗೆ ತೊಡಿಗೆ ಇಟ್ಟು ಮುದದಿ
ಇಳೆಯ ಜನರು ಮೋಹಿಸುವ ಪರಿ ಇಹಳು
ಕೆಳದೇರ ಗಡಣದಲಿ ಚೆಲುವೆ ಒಪ್ಪಿದಳು ೧೫

ಮಂಜುಗಾವಿಯ ಸೀರೆ ನಿರಿತೆಗೆದುಟ್ಟು
ಕೆಂಜೆಡೆ ಬಿಟ್ಟೋರೆದುರುಬಿನ ಕಟ್ಟು

ಪಂಜಿನೋಲೆಯ ಮೂಗುತಿಯ ಬಲಿದಿಟ್ಟು ಗುಲ
ಗಂಜಿ ಹೊಂದಾಳೆ ಸರಗಳಳವಟ್ಟು ೧೬

ಕಂಚುಕಪುಟ ಬಿಗುಪೇರಿದ ಕಟ್ಟು
ಚಂಚಲನೇತ್ರಕಂಜನ ಕಾವಲಿಟ್ಟು
ಮಿಂಚುವಾಭರಣಿಟ್ಟು ಪ್ರಸನ್ವೆಂಕಟ ಕೃಷ್ಣ
ನಂ ಚಿಂತಿಸಿ ಜಯ ಜಯಯೆಂದಳು ಕೊರವಿ ೧೭

೫

ಅಡಿಗಡಿಗೆ ಝಣ ಝಣರೆಂದು ನಡೆತಂದು ನಡೆತಂದು
ಮಡದಿ ರಾಜಬೀದಿಯಲಿ ನಿಂದು ೧೮

ಮೃಡಗಹಿತನ ಪಟ್ಟದಾನೆ ಮಂದಗಮನೆ ಮಂದಗಮನೆ
ಕಡುಮೌನಿ ಜನರ ಮೋಹಿನೆ ೧೯

ಚಪಲ ನೋಟಕೆ ನಾಗರಿಕರು ನೋಟಕರು ನೋಟಕರು
ಲಿಪಿಯ ಚಿತ್ರದೊಲು ನಿಂತಿಹರು ೨೦

ನಿಪುಣೆ ಕೊರವಿ ಶ್ರೀಪ್ರಸನ್ವೆಂಕಟ ಕೃಷ್ಣನ್ನ ಕೃಷ್ಣನ್ನ
ಶ್ರೀಪ್ರಸಾದವ ಬೇಡುತಿದ್ದಳಣ್ಣ ೨೧

೬

ಬೆಡಗಿನ ಗಮನದಿ ಎಡಬಲಕೊಲಿದು
ಕಡಗ ಶಂಖದ ಬಳೆ ನುಡಿಸುತ ನಡೆದು
ಅಡಿಗೊಮ್ಮೆ ತಿರುಮಲ ಒಡೆಯನ ನೆನೆದು ತ
ಕ್ಕಡ ಧಿಗಿಧಿಮಿಕೆಂದು ಜಡಿದು ತಾಳ್ವಿಡಿದು ೨೨

ತಿಗುರಿದ ಗಂಧ ಸೆಳ್ಳುಗುರಿನ ನಾಮ
ಮೃಗಮದದ ಬೊಟ್ಟಿನ ನಗೆಮೊಗದ ಪ್ರೇಮ

ಮಗುವನುಡಿಯಲೆತ್ತಿ ಜಗಜ್ಜರಿಯಮ್ಮ
ಹೆಗಲ ರನ್ನದ ಬುಟ್ಟಿ ಮುಳ್ಳುವಿಡಿದಮ್ಮ ೨೩

ನಗರದ ಜನದ ಕಣ್ಣಿಗೆ ಕೌತುಕೆನಿಸಿ
ಬಗೆ ಬಗೆ ಒಗಟು ಮಾತುಗಳನುಚ್ಚರಿಸಿ
ನಗರಾಧಿಪತಿಯ ಮನೆಯ ಕೇಳಿ ನಡೆದು
ಮಿಗೆ ಪ್ರಸನ್ವೆಂಕಟ ಕೃಷ್ಣಗೆ ಕೈಮುಗಿದು ೨೪

೭

ಬ್ರಾಹ್ಮರ ಕೇರಿಗೆ ಬಂದಳಾ ಕೊರವಿ ಪರ
ಬ್ರಹ್ಮನ ಗುರುತ ಕೇಳುತ್ತ
ನಮ್ಮಮ್ಮ ನಮ್ಮವ್ವೆ ನಮ್ಮಜ್ಜಿ ನೀಡೆಂದು
ಸನ್ಮಾನದಾಲಯವ ಪೊಗುತಾ ೨೫

ಇಂತಪ್ಪ ಸೊಬಗುಳ್ಳ ಕೊರವಿಯನು ಕಂಡು ನೃಪ
ನಂತಃಪುರದ ಸತಿಯರೈದಿ
ಕಂತುವಿನ ಜನನಿಗೆ ಕರವೆರಡು ಮುಗಿದು ಏ
ಕಾಂತ ಪೇಳಿದರು ಚೆನ್ನಾಗಿ ೨೬

ಓರ್ವ ಕಾಲಜ್ಞಾನ ಪೇಳ್ವ ಕೊರವಮ್ಮ ನ
ಮ್ಮೂರ್ವಳಗೆ ತಿರುಗುತಿಹಳಮ್ಮ
ಸರ್ವೇಶ ಪ್ರಸನ್ವೆಂಕಟ ಕೃಷ್ಣನಾಗಮದ
ನಿರ್ವಚನ ಕರೆಸಿ ಕೇಳಮ್ಮ ೨೭

೮

ಬಂದಳು ನೃಪನರಮನೆಗೆ ತಾ
ನಿಂದಲ್ಲಿ ನಿಲ್ಲದೆ ಕಿಲಿಕಿಲಿ ನಗುತಾ ಕುಲು ಕುಲು ನಗುತಾ ಪ.

ಬಂದ್ವೇಳಿದ ನುಡಿಗೇಳ್ದು ಪೂ
ರ್ಣೇಂದುವದನೆ ಮುದತಾಳ್ದು
ಮಂದಿರಕೆ ಕರೆಸಿದಳು ನಲ
ವಿಂದಲಿ ಬಲು ಬೆಡಗಿನ ಕೊರವಂಜಿ ೨೮

ತಳಪಿನ ಮುತ್ತಿನ ಕಟ್ಟು ಶುಭ
ತಿಲಕದ ಹಚ್ಚೆಯ ಬಟ್ಟು
ಅಲುಗುವ ಮೂಗುತಿಯಬಲೆ ಸಲೆ
ಬಳುಕುತ ಬಡನಡುವಿನ ಚಪಲೆ ೨೯

ಬಟುಗಲ್ಲದ ಮಕರಿಕಾಪತ್ರ ಪವಳ
ದುಟಿ ದಾಡಿಮರದ ಗೋತ್ರ
ವಿಟ ಮೃಗ ಸ್ಮರ ಶರ ನೇತ್ರ ಕೊರ
ಳ್ದಟಿಸುವ ಮಣಿ ಮುತ್ತಿನ್ಹಾರಗಳೊಲಪಲಿ ೩೦

ಇಟ್ಟೆಡೆ ಮೊಲೆಯ ಪಟ್ಟಿಕೆಯು ಶ್ರೋಣಿ
ಮುಟ್ಟುವ ಮುಡಿಯ ಮಾಲಿಕೆಯು
ಬಿಟ್ಟ ಮುಂಚೆರಗಮಲಿಕೆಯು ಕ
ಣ್ಣಿಟ್ಟ ಮೃಗಕೆ ಭ್ರೂಸ್ಮರಕಾರ್ಮುಕೆಯು ೩೧

ತೆಳ್ವೊದರದ ತ್ರಿವಳಿಯ ಜಗುಳಿ
ಬೀಳ್ವ ಮಣಿಮುಕ್ತಾವಳಿಯ
ಸಲ್ಲಲಿತ ಸಂಪಿಗೆ ಕಳೆಯ ಗೆಲ್ವ
ಚೆಲ್ವೆ ಕೊರವಿ ಪುರವೀಥಿಯ ಬಳಿಯ ೩೨

ಕಿಣಿ ಕಿಣಿ ರವದ ಕಿಂಕಿಣಿಯು
ಝುಣ ಝುಣತ್ಕಾರಿಪಂದುಗೆ ಮಣಿಯು
ಕಣಿ ಕಣಿ ಒಯ್ಯೆಂಬೊಕ್ಕಣಿಯು ಕುಚ
ಕುಣಿ ಕುಣಿಸಿ ನಟಿಪ ನಡೆವಾಂಗನೆಯು ೩೩

ಸಿಂಗನ ಉಡಿಯಲ್ಲಿ ಕಟ್ಟಿ ಉ
ತ್ಸಂಗದೊಳೊಲಪಿನ ದಿಟ್ಟಿ
ರಂಗ ಶ್ರೀ ಪ್ರಸನ್ವೆಂಕಟ ಕೃ
ಷ್ಣಾಂಗನೆಯನು ಕಾಂಬುವೆನೆಂಬ ತವಕದಿ ೩೪

೯

ವಚನ

ಪದುಮನಾಭನ ರಾಣಿ ರಾಣಿವಾಸದಲಿ
ಯದುಕುಲೇಂದ್ರನ ಚರಣೋಚ್ಚಾರಣೆಯಲ್ಲಿರಲು
ಒದಗಿ ಬಂದಳು ಕೊರವಿ ಕರೆಯುತ್ತ ತಾನು
ಚದುರ ಪ್ರಸನ್ವೆಂಕಟ ಕೃಷ್ಣನರಸಿಯನು ೩೫

೧೦

ಎಲ್ಲಿಹಳೆಲ್ಲಿಹಳಾ ರಾಯನ ಮಗ
ಳೆಲ್ಲಿಹಳೆ ನೀಡೆಯವ್ವ
ನಲ್ಲೆ ಬಾ ನಲ್ಲೆ ಬಾ ನಲ್ಲೆ ಬಾ ರುಕ್ಮಿಣಿ
ನಲ್ಲೆ ಬಾರೆ ಮುಂದಕವ್ವ ೩೬

ಬಲ್ಲೆ ನಾ ಬಲ್ಲೆ ನಿನ್ನಯ ಮನದೆಣಿಕೆಯು
ಸೊಲ್ಲುವೆನೆ ನೀಡೆಯವ್ವ
ನಿಲ್ಲದು ನಿಲ್ಲದಕ್ಕಿಯು ನಿನ್ನದ್ವಸಿತ ಕೈ
ಒಳ್ಳೆ ಕಜ್ಜಾಯ ನೀಡೆಯವ್ವ ೩೭

ಕೆಟ್ಟೋಗರಕೆ ಚಿತ್ತವಿಟ್ಟ ಕೊರವಿಯಲ್ಲ
ಮೃಷ್ಟಾನ್ನವ ನೀಡೆಯವ್ವ
ಶ್ರೇಷ್ಠಾದ ಶಾವಿಗೆ ಬಟ್ಟುವಿ ಪಾಯಸ
ಹೊಟ್ಟೆ ತುಂಬ ನೀಡೆಯವ್ವ ೩೮

ಅಟ್ಟಿಟ್ಟ ಪಂಚವಿಧ ಭಕ್ಷ್ಯ ಎನಗಿಂದು
ಇಷ್ಟ ಕಾಣೆ ನೀಡೆಯವ್ವ
ಇಷ್ಟುಣಲಿಕ್ಕೆನ್ನ ತುಷ್ಟಿ ಬಡಿಸಿ ಸತ್ಯ
ಗೋಷ್ಠಿ ಕೇಳೆ ನೀಡೆಯವ್ವ ೩೯

ಮನ್ನಣೆ ಇಲ್ಲದ ಮನೆಯ ಹೊಗುವಳಲ್ಲ
ಕನ್ನೆ ಬಾರೆ ಮುಂದಕವ್ವ
ಮುನ್ನ ರಕ್ಕಸನೊಯ್ದು ಮಡದಿಗೆ ಒಳಿತ
ವನೆಲ್ಲ ಹೇಳಿದ್ದೆನವ್ವ ೪೦

ನಿನ್ನ ಪ್ರಾಣದ ಪ್ರಿಯನೊಬ್ಬನೆ ಪರದೈವ
ಕನ್ನೆ ಕೇಳಜಕಾಮರವ್ವ
ಕಣ್ಣಾರ ಕಾಂಬೆ ನಿನ್ನಣ್ಣನ ಪಾಟು ಪ್ರ
ಸನ್ನವೆಂಕಟ ಕೃಷ್ಣನಿಂದವ್ವ ೪೧

೧೧

ಚೂರ್ಣಿಕೆ

ಈ ವಾಕ್ಯವಂ ಕೇಳಿ ತೀವಿ ತೋಷವ ತಾಳಿ
ದೇವಿ ರುಕ್ಮಿಣಿಯಕ್ಕ ಪಾವನ ಹಾಸಂಗಿಯಿಕ್ಕಿ
ಆವಲ್ಲಿಂ ಬಂದ್ಯವ್ವ ದೇವಲೋಕದ ಕೊರವೆ
ಈ ಒಳ್ಳೆ ಮೆಚ್ಚು ಮಾತು ಆವಾಗನುಭವೆಂ ಮಾತೆ
ಹೀಗೆಂದಾಸನ ಕೊಟ್ಟು ಬಾಗಿಲೊಳು ಕಾವಲಿಟ್ಟು
ಬೇಗ ಪ್ರಸನ್ವೆಂಕಟ ಕೃಷ್ಣನಾಗಮವ ಮನದಿ ಕೇಳ್ದಳವ್ವೆ ೪೨

೧೨

ಕುಳ್ಳಿರೆ ಕುಳ್ಳಿರೆ ಕುಳ್ಳಿರೆ ಕೊರವಂಜಿ
ಫುಲ್ಲಬಾಣನಾನೆ ಕುಳ್ಳಿರೆ

ಸೊಲ್ಲಮ್ಮ ಸೊಲ್ಲಮ್ಮ ಹಲವು ಮಾತಿನ ಜಾಣೆ
ಎಲ್ಲ ಬಯಕೆಯನೆಲ್ಲ ಸೊಲ್ಲಮ್ಮ ಕೊರವಂಜಿ ೪೩

ಆದರದಾ ಮಾತ ಕೇಳುತ ಕುಳಿತಳು
ಯಾದವರರಸ ಮುಕುಂದನ
ಕೋದಂಡಪಾಣಿ ತಿರುವೆಂಗಳ ಮೂರ್ತಿಯ
ಪಾದಕೆ ಮಾಡಿದಳೊಂದನೆ ಕೊರವಂಜಿ ೪೪

ಮಣಿಮಯ ಬುಟ್ಟಿಯ ಎಡದಲಿಟ್ಟುಕೊಂಡು
ವನಿತೆ ಪದ್ಮಾಸನವಿಟ್ಟಳು
ಮಿನುಗುವ ಎಳೆನಗೆಯಣುಗನ್ನ ಮಲಗಿಸಿ
ವನಿತೆ ರುಕ್ಮಿಣಿಯನ್ನು ಕರೆದಳು ಕೊರವಂಜಿ ೪೫

ಜಾಣೆ ಬಾರೆ ಸುಗುಜಾಣೆ ಬಾರೆ ನಾರಿ
ಮಾಣಿಕಳೆ ಕಟ್ಟಾಣಿ ಬಾರೆ
ವಾಣಿಪತಿಪಿತ ಪ್ರಸನ್ವೆಂಕಟ ಕೃಷ್ಣನ
ರಾಣಿ ಬಾರೆ ಸುಪ್ಪಾಣಿ ಬಾರೆ ಕ
ಲ್ಯಾಣಿ ಬಾರೆ ಫಣಿವೇಣಿ ಬಾರೆ ಶುಭ
ಶ್ರೋಣಿ ಬಾರೆ ಎಂದು ಕರೆದಳು ಕೊರವಂಜಿ ೪೬

೧೩

ವಚನ

ಅಮ್ಮ ರುಕ್ಮಿಣಿಯಮ್ಮ ಉಮ್ಮಯವಟ್ಟು
ಮುಮ್ಮೊರದ ರತುನ ಮುತ್ತಿನ ಕಾಣಿಕಿಟ್ಟು ಪರ
ಬೊಮ್ಮ ಪ್ರಸನ್ವೆಂಕಟಕೃಷ್ಣನ ಅಡಿಗಳ
ನಮ್ಮಿಸುತ ಮನೋರಥವ ಮನದಿ ಬೆಸಗೊಳ್ಳಲು ೪೭

ಉಂಡ ಊಟ ಕಂಡ ಕನಸು ಪುಂಡರೀಕಾಂಬಕಿಯೆ
ತಂಡ ತಂಡದ ವಾರುತೆಗಳ ಪೇಳುವೆನು ಸಖಿಯೆ

ಹಿಂಡು ದೈವದ ಗಂಡ ಪ್ರಸನ್ವೆಂಕಟ ಕೃಷ್ಣನ ಕಣ್ಣಾರ
ಕಂಡು ಸಾರುವ ಕೊರವಿ ಎಳ್ಳನಿತು ಸಟೆಯರಿಯೆ ೪೮

೧೫

ಚೂರ್ಣಿಕೆ

ಕಾಸಿನಾಸೆಯವಳು ನಾನಲ್ಲ
ಭಾಷೆ ಹುಸಿದರೆ ಬಿರುದು ಬಿಸುಡುವೆನೆಲ್ಲ
ಭಾಷೆ ಪಾಲಕರು ನಮ್ಮ ಸಿದ್ಧರೆಲ್ಲ ಲೇಸುಲೇಸೆಂದು
ಕೇಸಕ್ಕಿ ತಿಮ್ಮಯ್ಯನ ಬೆತ್ತವ ಮುಟ್ಟೆಲೆ ದುಂಡೆ

ಎನ್ನ ಮನದ ದೈವ ಎನ್ನಕ್ಕ ಕೇಳೆಯವ್ವ
ತಿರುಮಲೆ ತಿರುವೆಂಗಳಯ್ಯ
ವರ ಅಹೋಬಲ ನರಸಿಂಗಯ್ಯ
ಹರಿ ಕಂಚಿ ವರದರಾಜಯ್ಯ
ಶಿರಿ ರಂಗದ ರಂಗರಾಯಯ್ಯ
ಬದರಿಯ ನರನಾರಾಯಣಯ್ಯ
ಪುಂಡರೀಕವರದ ಪಂಢರಿರಾಯ ಎಮ್ಮ
ಉಡುಪ ಕುಲಜ ಮನ್ನಾರು ಕೃಷ್ಣಮ್ಮ
ಒಡ್ಡಿ ಜಗನ್ನಾಥ ಅಲ್ಲಾಳನಾಥ
ಯದುಗಿರಿನಾಥ ಶಿರಿಮುಷ್ಣನಾಥ
ಕೃತಪುರದ ವೀರ ನಾರಾಯಣ
ಕೊಲ್ಲಾಪುರದ ಕನ್ನೆ ವೇಲಾಪುರದ ಚೆನ್ನ
ಅನಂತಶಯನ ಜನಾರ್ದನ್ನ
ಅನವರತ ಪರಸನ್ನ ವೆಂಕಟ ಕೃಷ್ಣನ ಕನ್ನೆ
ಇಂತಪ್ಪಾನೇಕ ದೈವ ಏಕವೆಂದು ಏಕಾನೇಕವೆಂದು
ನಂಬಿಪ್ಪೆನೆ ಕೇಳೆಯವ್ವ ೪೯

೧೬

ಇಂತಿಪ್ಪ ಎನ್ನ ಮನೆಯ ದೈವ ಅವ
ರಂತವ ಬೊಮ್ಮರರಿಯರವ್ವ ವಿ
ಶ್ರಾಂತಿಲಿ ಕೊಂಡಾಡುವೆನವ್ವ ನಾನು
ಕಂತುವಿನಣ್ಣನ ಮಗಳವ್ವ ೫೦

ಇಪ್ಪಲ್ಲಿಪ್ಪ ಕೊರವಿ ನಾನಲ್ಲ ಹೋಗಿ
ಬಪ್ಪೆ ಹದಿನಾಲ್ಕು ಲೋಕಕೆಲ್ಲ
ಛಪ್ಪನ್ನ ದೇಶಗಳ ಸುದ್ದೀನೆಲ್ಲ ಕೇಳಿ
ಬಪ್ಪುವ ಕಜ್ಜವ ಕೃಷ್ಣ ಬಲ್ಲ ೫೧

ಆವಾವ ದೇಶದ ಸುದ್ದಿ ಕೇಳವ್ವ ನಿನ್ನ
ಭಾವದ ಬಯಕೆಯನೆಲ್ಲ ಕೇಳವ್ವ
ಶ್ರೀವರ ಪ್ರಸನ್ನವೆಂಕಟಾದ್ರಿ ಕೃಷ್ಣ ದ್ವಾರಕಿಂ
ದಾವಾಗ ಬಪ್ಪನೆಂದು ಕೇಳವ್ವ ೫೨

೧೭

ಚೂರ್ಣಿಕೆ

ಓಯಮ್ಮ ನಿನ್ನವರುಗಳು ಆ ಬಲಮಗು ಮದನಕಾಮ
ಬುಡುಕ್ಕಾನೆ ಪರತಾನು ಚಿಂತಿಶೆ ಮಾಣಮ್ಮ
ನಾ ತಿರುಕ್ಕಿ ವಂದ ದೇಶ ಐವತ್ತಾರು ಶೊಲ್ಲರೆ
ಅಂಗ ವಂಗ ಕಳಿಂಗ ಕಾಂಬೋಜ ಭೋಟ
ಕರ್ನಾಟಕ ಘೋಟ ಮಹಾಘೋಟ
ಜಿನ್ನ ಮಹಾಜಿನ್ನ ಜೊನ್ನಗ
ಕಾಶ್ಮೀರ ತುರುಷ್ಕ ಮಾಗಧ
ಬಂಗಾಳ ಗೌಳ ಮಾಳವ ಮಲೆಯಾಳ
ನೇಪಾಳ ಗೌಡ ಗುರ್ಜರ ಕೊಂಕಣ

ದರ್ದುರ ಬರ್ಬರ ಸೌರಾಷ್ಟ್ರ ಮಹಾರಾಷ್ಟ್ರ
ಸಂಬರ ಮುಂಗಿಳ ಘೋಟ ಮುಖ
ಏಕಪಾದ ಸೌಳ ಸಂಸಾಳಕ
ಆನರ್ತ ಹಮ್ಮೀರ ಕೊಮ್ಮೀರ ಮತ್ಸ್ಯ ಪಾಂಚಾಲ
ರಾಜಶೇಖರ ವರಶೇಖರ ಯುಗಂಧರ ಮಧ್ಯದೇಶ
ಲಂಬಕರ್ಣ ಸ್ತ್ರೀರಾಜ್ಯ ಆಂಧ್ರ ದ್ರವಿಡ
ಅರವ ಕನ್ನಡ ತುಳುವ ತುಳಾಂಡ
ಜಾಳೇಂದ್ರ ಕೈಕೇಯ ಕೌಸಲ ಕಂಚಿ
ಕನೋಜ ಸವ್ವೀರ ಸಿಂಧು ಕೇರಳ
ವೈದರ್ಭ ದೇಶದೊಳ್ಕುಂಡಿನಾಪುರದೊಳ್ ನಿನ್ನಂ ಕಂಡು
ಮನದಂಡಲಿಕೆಗೆ ಸಾಗಿತ್ತೆನೆಲೆ ದುಂಡೆ ೫೩

೧೮

ಈ ನಾಡ ಚರಿಸಿ ನಿನ್ನರಸುತ ಬಂದೆನೆ
ಜಾಣೆ ಬಂಗಾರವ್ವ ಕೈ ತೋರೆ ೫೪

ನಿನ್ನ ಕಾಣುತ ಹಸಿವೆ ನೀರಡಿಕೆಲ್ಲ ಹೋಯಿತು
ಜಾಣೆ ಬಂಗಾರವ್ವ ಕೈ ತೋರೆ ೫೫

ಸಂಧಾನಕ್ಕಾರುವನಟ್ಟಿದ್ದೆ ಮೊದಲ
ಹುದೇನೆ ಮಂಗಳದೇವಿ ಕೈ ತೋರೆ ೫೬

ನೀ ಬರೆದೊಕ್ಕಣೆ ಯದುರಾಯನರಿತಾನು
ಸೌಭಾಗ್ಯವಂತೆ ಕೈ ತೋರೆ ೫೭

ರಥವನೇರಿಕೊಂಡು ಬರಹ ನೋಡಿಕೊಳ್ಳ
ಜಾಣೆ ಬಂಗಾರವ್ವ ಕೈ ತೋರೆ ೫೮

ಧ್ಯಾನದ ಕಳವಳ ಮುಸುಡುಗಂಟಿನ ಚಿಂತೆ
ಮಾಣು ಮಂಗಳದೇವಿ ಕೈತೋರೆ ೫೯

ತ್ರಿಭುವನೇಶ ಪ್ರಸನ್ನವೆಂಕಟ ಕೃಷ್ಣ
ತಾ ಬಹನೆಲೆ ದುಂಡಿ ಕೈ ತೋರೆ ೬೦

೧೯

ಚೂರ್ಣಿಕೆ

ಎಲೆಲೆ ಎಳೆವೆಂಗಳೆ ಎಲೆ ಹಲ್ಲೆಗಂಗಳೆ
ಮಹಾಭೂಷಣದ ಮಾರುವೇಣಿ ಮಡದಿಯರ ಸುಪ್ರಾಣಿ
ಕೀರವಾಣಿ ಕಿಸಲಯಪಾಣಿ
ಕಂಧಿಜ ಬಿಂಬವದನೆ ಕುಲಿಶಮಣಿರದನೆ
ಮದನ ಕಾರ್ಮುಕೋಪಮ ಭ್ರೂಲತೆಯಳೆ ಮಹಾಲಕುಮಿಯಳೆ
ಅರುಣ ವಿದ್ರುಮಾಧರೆ ಅಬ್ಜಜಾ ಕಂಧರೆ
ಅರ್ಧಚಂದ್ರನ ಪೋಲ್ವಡಿ ಪಣೆಯಳೆ ಅನರ್ಘ್ಯ ಚೂಡಾಮಣಿಯಳೆ
ಸಿಂಧೂರ ಸೀಮಂತಿನಿಯೆ ಸಿರಿ ತಿಲಕದ ಶೋಭಿನಿಯೆ
ನುಣ್ಗದಪು ನಾಸಿಕ ಮಣಿಯಳೆ ನೂತನೊಜ್ರದೋಲೆಯಳೆ
ನಿಷ್ಕ ಕಂಠಾಭರಣೆಯಳೆ ನಿತ್ಯಮಂಗಳ ಸೂತ್ರಿಯಳೆ
ನಿಡುಜಾಲಕ ಮಾಲೆಯಳೆ
ಬುಗುಡಿ ಚಳತುಂಬು ಕೊಪ್ಪಿನ ಕಿವಿಯಳೆ
ಬಾವಲಿ ನಾಗೋತ್ರ ಪೊಂಬರಳೆಲೆ ಲಲಿತ ಬಾಹುಲತೆಯಳೆ
ಲಸತ್ ವನಜ ಕೋರಕ ಸ್ತನಿಯಳೆ
ಕಡು ತೆಳ್ವೊದರಿ ನಿಮ್ನ ನಾಭಿಯಳೆ
ಕಂಠೀರವ ಕಟಿಯಳೆ ಕರಭೋರು ಯುಗಳೆಯಳೆ
ಅಪರಂಜಿ ಕಂಚುಕಾಂಬರ ಉತ್ತರೀಯಳೆ
ಅಮೂಲ್ಯ ಕಾಂಚಿದಾಮಾಂಕಿತಳೆ
ಬಟುಗನ್ನಡಿ ಜಾನುದ್ವಯಳೆ ಬಾಣ ಪಂಚಕನ ಬತ್ತಳಿಕೆ ಜಂಘೆಯಳೆ
ಕೋಮಲತರಾಂಘ್ರಿ ಸರಸಿಜಯುಗಳೆ
ನೀಲ ಪಚ್ಚ ಪದ್ಮರಾಗ ಹೀರ ಮುತ್ತಿನ ಪೆಂಡೆಯಳೆ
ಕಾಲಂದಿಗೆ ಮೆಂಟಿಕೆ ವೀರಮುದ್ರೆ ಕಿರಿ ಪಿಲ್ಲಿಯಳೆ

ಮಣಿಮಯಾಂಗುಲ್ಯದ ವಲಯಾಭರಣೆ ಮದಗಜಗಮನೆ
ಪ್ರತಿಯಿಲ್ಲದ ರನ್ನದ ಬೊಂಬೆ ಪರಬೊಮ್ಮನ ಪಟ್ಟದ ರಂಭೆ
ಬಾಬಾ ತಾತಾ ಎಂದು ವಾಮಕರವ
ಬೇಡಲಿತ್ತಳಾ ರುಕ್ಮಿಣಿ ತಾಯಿ ೬೧

೨೦

ಜಗದ ನಾರಿಯರ ಕೈಗಳ ಕಂಡೆನವ್ವ
ಮೃಗಮದಗಂಧಿ ನಿನ್ನೋಲ್ವರಿಲ್ಲವ್ವ ೬೨

ಯುಗಯುಗಾಂತರ ದೇಶ ದೇಶದಲ್ಲವ್ವ
ಅಗಲ್ಯಾಟವಿಲ್ಲ ನಿನ್ನರಸ ನಿನಗವ್ವ ೬೩

ಸವತೇರು ಬಹಳುಂಟು ನೆಂಟರ ಜಾಣೆ ಎಲೆ (ಬೀಗರ ಸುಗುಣೆ)
ಯುವತಿ ಪ್ರಸನ್ವೆಂಕಟ ಕೃಷ್ಣ ನಿನ್ನ ಪ್ರಾಣ ೬೪

೨೧

ಕಣಿ ಕೇಳೆ ಕಣಿ ಕೇಳೆ ಕಣಿ ಕೇಳೆ ಚೆಲ್ವೆ
ಕಣಿ ಕೇಳೆ ನಿನ್ನ ಮನದಾ ಮಾತ್ಹೇಳ್ವೆ
ಎಣಿಕೆಗೊಳ್ಳದಿರಮ್ಮ ಇಂದು ನಾಳೆಂದು
ಗುಣನಿಧಿ ಗೋಪಾಲ ಬಹ ದಯಾಸಿಂಧು ೬೫

ತ್ರುಟಿ ಯುಗವಾಗಿದೆ ನಿನಗೀಗ ಮುಗ್ಧೆ
ಕುಟಿಲ ಮಾಗಧ ಸಾಲ್ವ ನೆನೆವ ದುರ್ಬುದ್ಧೆ
ಘಟಿಸದೆಂದಿಗೆ ಖಳರ ಮನೋರಥ ಸಿದ್ಧೆ
ದಿಟವೆನ್ನ ವಾಕು ಸುರಲೋಕ ಪ್ರಸಿದ್ಧೆ ೬೬

ಹಿಂದೊಮ್ಮೆ ಖಳರು ಗೋವಿಂದ ಬಂದಾಗ
ಮಂದಮತಿಯಲಿ ಮನ್ನಿಸದಿರಲಾಗ
ಇಂದ್ರ ಸಿಂಹಾಸನವ ಹರಿಗೆ ಕಳುಹಿಸಿದ
ವೃಂದ ದೈತ್ಯರಿಗೆಲ್ಲ ಭಯವ ಸೂಚಿಸಿದ ೬೭

ಜಂಭಾರಿ ಕುಲಿಶಕಂಜುತ ಪೋಕರೆಲ್ಲ
ಥಂಬಿಸಿದರು ವಾಗಾಡಂಬರವೆಲ್ಲ
ಅಂಬುಜಾಕ್ಷಗೆ ನಿನ್ನ ತಾತ ಪೂಜಿಸಿದ
ಅಂಬುಜನಾಭ ತನ್ನೊಳು ವಿಶ್ವ ತೋರ್ದ ೬೮

ಅದನೆಲ್ಲ ಬಲ್ಲ್ಯವ್ವ ಹರಿಯ ನಿಜನಲ್ಲೆ
ಬೆದರಿದೊಲ್ಲೋರ್ವ ನಿನ್ನ ಮಾಯವ ಬಲ್ಲೆ
ಪದುಮಜ ಭವರ ಹೃದಯಾಬ್ಜ ನಿಯಂತ್ರೆ
ಉದಧೀಶನಾಜ್ಞಧಿ ಸರ್ವಸ್ವತಂತ್ರೆ ೬೯

ಕೇಳಮ್ಮ ನಿನ್ನ ಹೆತ್ತವರಿಗೆ ನಿನ್ನ
ಮೇಲೆ ಹಂಬಲ ಬಹಳ ಪಾಪಿ ನಿಮ್ಮಣ್ಣ
ಆಲೋಚನೆಯಿಲ್ಲದೆ ನಿಶ್ಚೈಸಿದ್ದಾನೆ ಶಿಶು
ಪಾಲಗೆ ನಿನ್ನ ಕೊಡುತೇನಂತೈದಾನೆ ೭೦

ಆಗಲ್ಯಾಕವನಿಂದಲೀಕಜ್ಜ ಬುರ್ರಾ
ಬೇಗ ಭೀಷ್ಮಕನಂತರ ಬಲ್ಲ ಶ್ರೀಧರ್ರಾ
ಸಾಗರಶಯನ ತಾ ಸಮಯಕ್ಕೈತರುವ
ನೇಗಿಲಧರನು ಕೃಷ್ಣನ ಕೂಡ ಬರುವ ೭೧

ಆ ಗೌರಿ ಮೌನಿಯೆಂಬುವಳ ಪೂಜೆಯಲಿ
ಯೋಗವಾಗಿರ್ದ್ಯಾ ಕಾಪುರುಷ ಸಭೆಯಲ್ಲಿ
ಮೇಘ ಮುಸುಕಿರ್ದ ಚಂದಿರನಂತೆ ನಿನ್ನ
ಯೋಗೇಶ ಪ್ರಸನ್ವೆಂಕಟ ಕೃಷ್ಣ ನೊಯ್ವ ಚೆನ್ನ ೭೨

೨೨

ಇನಿತೆಲ್ಲ ಕೊರವಂಜಿ ಕರವ ಪಿಡಿದು ಹೇಳಿ
ಕ್ಷಣ ಕ್ಷಣಕೊಡೆಯನ ಹೊಗಳಿ
ನೆನಪಿಗೆ ಬೆಸಗೊಂಬೆ ಕಾಲಜ್ಞಾನದ ವಾರ್ತೆ
ಎನಗೆ ತಿಮ್ಮಯ್ಯ ಹೇಳೆಂದು ೭೩

ಶ್ರೀ ರುಕ್ಮಿಣಿಯ ಮನದುಲ್ಲಾಸವನೆಲ್ಲ
ಪೂರೈಸುವೆನೆಂಬ ನುಡಿಯ
ತೋರು ಎನ್ನಯ ನಾಲಿಗೆಯಿಂದಲುಸುರುವೆ
ವೀರ ದ್ರಾವಿಡ ವೆಂಕಟಯ್ಯ ೭೪

ಶರಣ್ಯೆಲೆ ಸತ್ಯನೆ ಶರಣ್ಯೆಲೆ ನಿತ್ಯನೆ
ಶರಣು ಶರಣು ನಿತ್ಯಮುಕ್ತ
ಶರಣು ಪರೇಶನೆ ಶರಣು ಅವಿನಾಶನೆ
ಶರಣು ಪ್ರಸನ್ವೆಂಕಟ ಕೃಷ್ಣ ೭೫

೨೩

ವಚನ

ಓ ರುಕ್ಮಿಣಿ ತಾಯಾರೆ
ಉನ್ನ ಮನಸಿಲೆ ನಿನ್ನೈಚ್ಚ ಕಾರ್ಯಂ ಕೈಕ್ಕೂಡಿನಾಲ್
ಎನಕ್ಕೆ ಎನ್ನ ಸಂತೋಷಂ ಪಣ್ಣಿರಾಯ್
ಓಯಮ್ಮ ಉನ್ ಪ್ರಾಣನಾಯಗನ್ ಶ್ರೀಕೃಷ್ಣನ್ ವಂದು
ಪೊಟ್ಟಣೆ ಕೈ ಪಿಡಿಚ್ಚಿ ಕಲ್ಯಾಣಂ ಪಣ್ಣಿಕೊಳ್ಳರಾಂ
ಇಂದ ವಾರ್ತೆ ತಪ್ಪಿನಾಲ್ ನಾಂ ಕೊರ್ತಿಯೇ ಅಲ್ಲೆ
ಉನ್ ತಮಯನ್ ರುಗ್ಮಂ ವೇಕ್ಕತ್ತೆ ಕೊಲ್ಲರಂ ವರಾನು
ಓಯಮ್ಮ ಇಂದ ವಾರ್ತೆಯ್ಯೆ ಪಣ್ಣಿಕೋ ಅಮ್ಮ ೭೬

೨೪

ಮದ್ಯಪಾನಿ ತಾಮಸ ಯವನನ ಕೊಲಿಸಿದನೆ
ನಿದ್ರೆಗೈವ ರಾಯನಿಂದಲಿ
ಸದ್ದಿಲ್ಲದೆ ಮಧುರೆ ಜನರ ಸಾಗರದ
ಮಧ್ಯ ದ್ವಾರಕೆಯಲ್ಲಿಟ್ಟನೆ ೭೭

ಯವನ ಸೈನ್ಯ ಜಲಧಿ ಬತ್ತಿಸಿ ಸಾಲ್ವಾದ್ಯರ
ಹವಣ ಮುರಿದು ನಿಜರ ಹೊರೆವನು ನಿನ್ನ

ವಿವಹ ಮಾಳ್ಪೆನೆಂಬ ಮಾಗಧನು ಚೈದ್ಯ ತನ್ನ
ಕುವರನೆಂದು ಮಾನವಿಡಿದಿಹ ೭೮

ಇನಿತರೊಳು ರಂಗರಾಯನು ಮೋಹರದಿ
ಮಣಿರಥವನೇರಿ ಬಹನು
ವನಿತೆ ನಿನ್ನಂದಣವ ನೋಡುತ ಜಿಗಿ
ವನಲ್ಲಿಂದ ಘನತರ ಮೃಗೇಂದ್ರನಂದದಿ ೭೯

ನರಿಯ ಹಿಂಡಿನೊಳಗಿನಾನೆಯ ಒಯ್ವ ತೆರದಿ
ಹರಿ ನಿನ್ನಪ್ಪಿಕೊಂಡು ಹಾರುವ
ಗರುಡನಮೃತ ಕಲಶವ ಸುರರ ಗೆದ್ದು
ಹರುಷದಿಂದೊಯ್ಯುವಂತೆ ಒಯ್ವನು ೮೦

ಸರಸಿಯಾಬ್ಜ ಹಂಸ ಒಯ್ವವೋಲ್ ಪರಮಪುರುಷ
ತ್ವರಿಯ ತನ್ನ ರಥಕೆ ಒಯ್ವನೆ
ಬರಿಯ ದುಗುಡವ್ಯಾಕೆ ಬಾಲಕಿ
ಪ್ರಸನ್ವೆಂಕಟ ಕೃಷ್ಣ ನಿನ್ನ ಮೆಚ್ಚುಗಾರನೆ ೮೧

ಬಂದನೆಂಬ ನುಡಿಯು ಬರುತಿದೆ ಜವದಿ ಕೃಷ್ಣ
ಬಹನೆಂಬ ನುಡಿಯು ಬರುತಿದೆ ೮೨

೨೫

ಚೂರ್ಣಿಕೆ

ನೀಡೆಯವ್ವ ಎನ್ನ ಮನೆ ಗಂಡನ ಕಾಟ ಘನ್ನವವ್ವ
ಕ್ಷಣಕೈದು ನಡೆಯವನವ್ವ
ಒಮ್ಮಾನ ತಿರಿತಂದರೆ ಇಮ್ಮಾನ ಬೇಡುವನವ್ವ
ಚೆಂಬಣ್ಣ ಕರಿಬಿಳಿಯ ಬಟ್ಟೆ ನಮ್ಮತ್ತೆಗಳವ್ವ
ಆರು ಮಂದಿ ಗಂಡನ ಗೆಳೆಯರವ್ವ
ಏಳು ಪದರು ಮೂರು ತ್ಯಾಪೆ ಗುಡಲುಂಟವ್ವ

ಎಪ್ಪತ್ತೆರಡು ಸಾವಿರ ನುಲಿಯ ಸಿಂಬಿಗಳವ್ವ
ಗುಡಲೊಳು ಮೂರು ಒಲೆಯುಂಟವ್ವ
ಗುಡಲು ಬಿದ್ದರೆ ನುಲಿಗೆ ಮಾರ್ಯೆವ್ವ
ಒಂಬತ್ತು ಗುದ್ದಿನೊಳಗೆ ಹತ್ತು ಹೆಗ್ಗಣದೋಡ್ಯಾಟವವ್ವ
ಕೊರವನ ಕೈಯಿಚ್ಚೆ ಮೂರು ನಾಯಿಗಳವ್ವ
ಎಣಿಕಿಲ್ಲದ ಕುತ್ತಗಳುಂಟವ್ವ
ಕೊಬ್ಬಿನ ಸವತೇರೆಂಟು ಮಂದಿ ಕೊರವಗೆ ಮಚ್ಚೂಡುವರವ್ವ
ಸಂಸಾರದಲೆಳ್ಳನಿತು ಸುಖವಿಲ್ಲವ್ವ
ಅತ್ತೆಗಳಾಟ ಗಂಡನ ಬ್ಯಾಟ ಸವತಿಯರ ಕಾಟ
ನೆರೆಹೊರೆಯವರ ನೋಟ ಮನೆಯ ಮಾಟ
ಗತರಸದೂಟಕಂಜಿ ನಡುನಡುಗಿ
ಮೂರೂರ ಹಾದಿ ಮೆಟ್ಟಿ ಬಂದು
ಆರೂರರಸಿನ ಮೊರೆ ಹೊಕ್ಕೆನೆಯವ್ವ
ವಿದರ್ಭದೇಶದ ಕುಂಡಿನಾಪುರದೊಳು ನಿನ್ನ ಗುರುತ ಕೇಳಿ
ಉಪವನದ ಪ್ರದ್ಯೋತನಾಳ್ವ ಎರಡು ಬಾವಿಯ ಮ್ಯಾಗಣ
ಹೂವಿನ ತೋಟದ ನಡುವೆ ಬುತ್ತಿಯನುಂಡು ನಿನ್ನ ಕಂಡು
ಕುಂತಳಾಪುರದಲ್ಲಿ ಕುಳಿತುಂಬ
ಬ್ರಹ್ಮಾನಂದದವರ ಭಾಗ್ಯವ ಬೇಡ ಬಂದೆನೆ ಅವ್ವ
ಅಸುವಿಗೆ ಹಾಲನೆರೆಯವ್ವ
ಶಿಶುವಿಗೆ ನವನೀತ ನೀಡೆಯವ್ವ
ಬಂಗಾರೆವ್ವ ಸಿಂಗಾರೆವ್ವ ಸೋರ್ಮುಡಿಯವ್ವ
ಮಲ್ಲಿಗೆದುರುಬು ಸಂಪಿಗೆದುರುಬು
ಪಚ್ಚೆ ಮರುಗ ಮುಡಿವಾಳ ಶಾವಂತಿಗೆ ತುರಬಿನವ್ವ
ಪ್ರಸನ್ವೆಂಕಟಕೃಷ್ಣನ ತೋಳ್ತಲೆಗಿಂಬಿನವ್ವ ನೀಡೆಯವ್ವ ೮೩

೨೬

ವಚನ

ಇಂತಾಧ್ಯಾತ್ಮವಂ ಪೇಳಿ
ಕಂತುವಿನಯ್ಯನ ಕಾಂತೆಯಂ ಸಂತಸಪಡಿಸಿ

ಅಂತರಂಗದಿ ಚಿಂತಾಯಕನಂ ನೆನೆನೆನೆದು
ಭ್ರಾಂತಿ ಪರವಶಾದಂತೆ ಕೆಂಜೆಡೆಯಂ ತೂಗಿ ತೂಗಿ
ಅಂತದತ್ಯಂತ ತೂಳಂ ತುಂಬಿ
ಇಂತೆಂದಳಾ ಕೊರವಂಜಿ ೮೪

೨೭

ಬರುತಾನೆ ಜಾಣೆ ಬರುತಾನೆ
ಬರುತಾನೆ ಚೆಲ್ವೆ ಬರುತಾನೆ ೮೫

ಹಿಂಡು ಭಂಡರೆಲ್ಲ ಕೂಡಿ ನಿನ್ನ ಮುಚ್ಚಲು ಎತ್ತಿ
ಕೊಂಡು ಒಯ್ವ ಜಾಣ ಬರುತಾನೆ
ಪುಂಡರೀಕ ಸುರಗಿ ಖಡ್ಗ ಭಿಂಡಿವಾಲ ನುಗ್ಗುಮಾಡಿ
ದಂಡಿಸುವ ಜಾಣ ಬರುತಾನೆ ೮೬

ಕುಂಡಿನಾಪುರದಿ ನೆರೆದ ಕೊಂಡಿ ಕುಹಕರ ತಲೆಯ
ಚಂಡನಾಡ್ವ ಜಾಣ ಬರುತಾನೆ
ಮಂಡೆಯಲ್ಲಿ ಪಚ್ಚಚೂಡವಿಟ್ಟು ರುಕ್ಮನಭಿಮಾನ
ಕೊಂಡೇನೆಂಬ ಜಾಣ ಬರುತಾನೆ ೮೭

ತಂಡ ತಂಡದಲ್ಲಿ ನಿನ್ನಯ್ಯನ ಸದ್ವಾಸನನ್ನ
ಉಂಡೇನೆಂಬ ಜಾಣ ಬರುತಾನೆ
ಲೆಂಡ ದಾನವಾರಿ ಪ್ರಸನ್ನವೆಂಕಟಕೃಷ್ಣ ಬೊ
ಮ್ಮಾಂಡಪತಿ ಜಾಣ ಬರುತಾನೆ ೮೮

೨೮

ಚೆನ್ನೆ ಕೊರವಂಜಿ ಮಾತು ಶ್ರೀ
ಕನ್ಯೆ ಕೇಳಿ ನಲಿವಾಂತು
ಮನ್ನಿಸಿ ಗುಣವ ಕೊಂಡಾಡಿ ಮುಕ್ತಿ
ರನ್ನಗಾಣಿಕೆಯನು ನೀಡಿ ೮೯

ಎಲೆ ಸತ್ಯಲೋಕದ ಕೊರವೆ ನೀ
ಬಲು ಸತ್ಯ ನುಡಿದೆ ನಾನರಿವೆ
ಛಲದಂಕ ದೇವರದೇವ ಈ
ಖಳರೊಳು ಒಯ್ದುದರಿದವ್ವ ೯೦

ಹರಿ ರಥವೇರಿ ಬಾಹೋಣ ಕಾ
ಪುರುಷರ ಮತ ಕೆಡಿಸೋಣ
ಗುರು ಪ್ರಸನ್ವೆಂಕಟ ಕೃಷ್ಣ ಬಂದು
ಹೊರೆವುದುಂಟೇನವ್ವ ರಮಣಿ ೯೧

೨೯

ನಂಬಲೇನೆ ನಿನ್ನ ಮಾತು ಕೆಳದಿ ಕೊರವಮ್ಮ ನ
ಮ್ಮಂಬುಜಾಕ್ಷ ಬಾಹನೇನೆ ದೇವಿ ಕೊರವಮ್ಮ ೯೨

ಉಡಿಯ ಕಂದನಾಣೆ ಇಡುವೆ ನಂಬೆ ರುಕ್ಮಿಣಿ ನಾ
ನುಡಿವ ನಾಮದಾಣೆ ಇಡುವೆ ನಂಬು ರುಕ್ಮಿಣಿ ೯೩

ಎಡದ ತೋಳು ತೊಡೆ ಕಂಗಳು ಹಾರಲೊಳಿತೇನೆ ಚಿಲಿಪಿಲಿ
ನುಡಿವ ಶಕುನ ಎಡದ ಗೌಳಿಯ ನುಡಿಯು ಒಳಿತೇನೆ ೯೪

ಕಡಲಶಯನ ನಿನ್ನ ಪ್ರಾಣದೊಡೆಯ ಬಪ್ಪನೌ ಎನ್ನ
ಪಡೆದನಯ್ಯ ಪ್ರಸನ್ನವೆಂಕಟಕೃಷ್ಣ ತಪ್ಪನೌ ೯೫

೩೦

ನಿನ್ನ ಗಂಡ ಬೆಣ್ಣೆಗಳ್ಳ ಕನ್ನೆಗೊಲ್ಲತಿಯರ ನಲ್ಲ
ಕಣ್ಣೆವೆ ಸನ್ನೆಗಾರ ನಂದಗೋಪ ಕುಮಾರ ೯೬

ಚಿನ್ನತನದಿ ದಶಲಕ್ಷ ಚಿನ್ನರ ಪಡೆದನು ದಕ್ಷ
ಪೊನ್ನ ಕೊಳಲನೂದಿ ಮೂಜಗವ ಮೋಹಿಸುವ ೯೭

ಉನ್ಮತ್ತ ಮಾತುಳನ್ನ ತುಳಿದ ತನ್ನ ಪೆತ್ತವರೆಡರ್ಗಳೆದ
ಮನ್ನಿಸಿ ಪಾಂಡವರ ಪೊರೆದ ಚಿನ್ಮಯ ಸುಖದ ೯೮

ಪೆಣ್ಗಳ್ ಹದಿನಾರುಸಾವಿರದ ನೂರೆಂಟನಾಳ್ವ ಚದುರ
ನಿನ್ನ ಪ್ರಾಣ ಪ್ರಿಯ ಬಂದ ಪ್ರಸನ್ನವೆಂಕಟ ಕೃಷ್ಣ ಮುಕುಂದ ೯೯

೩೧

ನುಡಿ ನುಡಿಯೆಲೆ ಬಡನಡುವಿನ ಮಡದಿ ನಿನ್ನುಡಿಗುಚಿತವ
ಕೊಡುವೆನಡಿವಿಡಿವೆ ಮನವಿಡುವನೆ ಕಡಲೊಡೆಯ ಕೈ
ವಿಡಿವನೆ ಎನ್ನ ಕಡೆಯ ನೋಡಿ ನುಡಿವನೆ ಸವಿನುಡಿಯ
ಕಡು ಬಲಿಭುಜ ಗಡಣಂಗಳ ನಡುವ್ಹಂಸನ ಪಡಿ ಮಿಡುಕುವೆ
ನುಡಿ ಬೇಗೆಂದು ಪಡೆಗೂಡಿ ಹಲಿಯೊಡನಾಗಮ ನುಡಿಯೇ ನಿ
ನ್ನುಡಿಗಮೃತವ ಪಡೆಯೇ ಮತ್ತೀ
ಜಡಜಡಿ ಲೋಕೊಡೆಯೆ ಪ್ರಸನ್ನವೆಂಕಟ ಕೃಷ್ಣರಾಯನ
ನುಡಿಯೆಲೆ ನುಡಿನುಡಿಯೆ ನುಡಿನುಡಿಯೆ ೧೦೦

೩೨

ಹರಿ ಬರುತಾನೆ ಗುರುತು ಗಂಟ ಕಟ್ಟೆ ಪ

ಕೇಳೆ ನರಸಿಂಗನಂಗನೆಯನೊಯಿದು ಕೆಟ್ಟೆ
ನರಿಗಳಾಳಬಲ್ಲವೇನೆ ನಲಿದು ನೀನು
ದುರುಳರಿಗೆ ದಕ್ಕಬಲ್ಲ್ಯೇನಮ್ಮ ನಿನ್ನಾ
ಚರಣೆಯೆಲ್ಲ ಜಗದ್ವಿಡಂಬನಮ್ಮ ೧೦೧

ನನ್ನ ತರಳನಾಣೆ ಸಟೆಯನಾಡೆನಮ್ಮ ನಾ
ನೊರೆದ ವಾಕು ಸಾಕ್ಷಿ ಬರುತಾವಮ್ಮ ಮ್ಯಾ
ಲರಕೆಯುಳ್ಳ ತಾಯಿಯಾದರೆ ನೀ ನನ್ನ
ಕರೆಸಿ ಕೇಳೆ ನಿನ್ನ ಮನೆಗೆ ಜಾಣೆ ೧೦೨

ನಿನ್ನ ಹೆಸರ ತಕ್ಕ ಊಟವ ನೀಡೀಗ ನಾ
ಹಸಿದೆನೆಂದು ಉಂಡು ಕೊರವಿ ಬೇಗ
ಪ್ರಸನ್ನವೆಂಕಟ ಕೃಷ್ಣನ ರಾಣಿಗೆ ಹಾ
ರೈಸಿದಳು ಬಸುರು ಬುಡುಕೆಂದು ೧೦೩

೩೩

ಚಕ್ಕನೆ ನಿಂತಳು ಕೊರವ್ಯಮ್ಮ ಕಂಡು
ಫಕ್ಕನೆ ನಿಂತಳು ರುಕ್ಮಿಣಮ್ಮ ಪ್ರಾಣ
ದಕ್ಕರ ಬಿಡಲಾರೆ ನಿನ್ನ ಗೆಳತಿ ಪ್ರೇಮ
ಉಕ್ಕುತಿದೆ ನೀ ಹೋಗುವುದೊಳಿತೆ ಎನಲು ನಕ್ಕು ೧೦೪

ಶ್ರೀ ಗೋಪಾಲ ಬಾಹನಕ ನಿಲ್ಲೆ ವಿ
ಯೋಗ ತಾಳಲಾರೆ ನೀ ಬಲ್ಲೆ
ಹೀಗೆನ್ನೆ ಬೇಡಿಕೊಂಡಳು ಮರುಳೆ ನೆನೆ
ದಾಗೆ ಬಹೆನೆಂದ್ಹೇಳಿ ತೆರಳೆ ಅನುರಾಗದಿಂದ ೧೦೫

ಆವ ಪರಿಂದಾರೆ ಹರಿಸೇವೆ ಮಾಡಿ
ದೇವಋಷಿ ನಿಜಾನಂದ ತೀವಿ
ಶ್ರೀವರ ಪ್ರಸನ್ವೆಂಕಟ ಕೃಷ್ಣನ ಮಹ
ತೇವಿಡಿದು ಹೊಗಳುತ ಮುನಿರನ್ನ ರಾಮೆಯಾಜ್ಞದಿ ೧೦೬

೩೪

ಸುರಋಷಿ ಪೇಳ್ದ ಒಕ್ಕಣೆಯ
ಹರುಷದಿ ಕೇಳ್ದ ರುಕ್ಮಿಣಿಯ
ಅರಸ ಪ್ರಸನ್ನವೆಂಕಟ ಕೃಷ್ಣ
ನಿರುತದಿ ಜಯ ನಮಗೀವ ೧೦೭

ಜಯ ಜಯ ಚಿನ್ಮಯ ಮೂರ್ತಿ
ಜಯ ಜಗನ್ಮಯ ಸ್ವಚ್ಛಕೀರ್ತಿ
ಜಯ ಜಯ ಪ್ರಸನ್ವೆಂಕಟ ಕೃಷ್ಣ
ಜಯ ಮೂರ್ತಿ ನಿನಗೆ ಶರಣು ೧೦೮

೪೪೮

ಬಂದಕೋ ರಾಮಚಂದ್ರ
ಬಂದನದಕೋ ರಾಮಚಂದ್ರನವನಿಜೆಯ ಕಳು
ಹೆಂದರೆ ವಿಭೀಷಣನ ಕುಂದ ನುಡಿದಣ್ಣ ಪ.

ಲೆಂಕರೊಳೊರ್ವನು ಮಾಭುಂಕರಿಸಿ ವನದಿ
ಶಂಕ ರಕ್ಕಸರಳಿದು ಲಂಕೆ ಉರುಹಿದ
ಸಂಖ್ಯೆರಹಿತ ಪ್ಲವಗರಂಕಪಡೆಯೊಡನೆ ಬಹ
ಪಂಕರುಹಮುಖಿ ಕೊಡೆನಲಹಂಕರಿಸಿದಣ್ಣ ೧

ಜೀವರಂತಲ್ಲ ಹರಿ ಸಾವು ರಚಿತ ನಿಮಗು
ಶಿವನ ಬಿಲ್ಮುರಿದ ಭಾವರಿವಿರಿ
ನೀವು ರಕ್ಕಸರಾಕೆ ದೇವರರಸಿಯ ಬಯಸ
ಲಾವರಿಸದೆನೆ ಕೊಲ್ಲಲಿ ಕಾವರಿಸಿದಣ್ಣ ೨

ಅನುಜವಾಕ್ಯವ ಕೇಳಿ ದನುಜನುಗ್ರದಿ ಹುಲು
ಮನುಜ ಸರಿಯೇ ನನ್ನ ರಣ ಜಯಿಪನೆ
ಇನಜಭವ ಶುಭಕಂಠಾಂಜನಿಜ ಜಾಂಬವ ಮುಖ್ಯರ
ದನುಜ ಗ್ರಹಿಸದರಿವನೆನೆ ಜಡಧಿಯಣ್ಣ ೩

ವಿಧಿಯಲೇಖನ ನೋಡಿ ಕುದಿಯಲಾರ್ದಟ್ಟಿಹರು
ಸುಧೆಯೆ ವಿಷವೈ ಕ್ರೂರ ಹೃದಯಗೆನಲು

ಅಲಸು – ಉದಾಸೀನ ಮಾಡು
ಅವಧಾರಣ – ನಿಶ್ಚಯ
ಅವರಜ – ತಮ್ಮ
ಅವಸರ – ಅವಕಾಶ, ಸಮಯ
ಅಶನ – ಆಹಾರ
ಅಶನಿ – ಸಿಡಿಲು
ಅಹರ್ನಿಶಿ – ಹಗಲಿರುಳು
ಅಹಿವರ – ಆದಿಶೇಷ
ಅಳವು – ಸಾಮರ್ಥ್ಯ
ಅಳಿ –ದುಂಬಿ, ಹಾಳುಮಾಡು
ಅಳುಪು – ಅತಿಯಾಸೆ ಪಡು
ಆಕಷ – ಒರೆಗಲ್ಲು
ಆಖ್ಯಾ>ಆಖ್ಯ – ಹೆಸರು
ಆಢ್ಯ – ಹೊಂದಿದ
ಆಪಾದ ಮೌಳಿ – ಕಾಲಿನಿಂದ ತಲೆಯವರೆಗೆ
ಆಮುಷ್ಮಿಕ – ಪರಲೋಕ, ಪರಲೋಕಕ್ಕೆ ಸಂಬಂಧಿಸಿದ
ಆಯತ – ನೆಲೆ, ವಿಶಾಲವಾದ
ಆಯಸ – ಕಬ್ಬಿಣ
ಆರ್ – ತೃಪ್ತಿಪಡು
ಆರು – ಒಣಗಿಹೋಗು
ಆರೂಢ – ಏರಿದ
ಆರ್ಜಿತ – ಗಳಿಸಿದ
ಆಲಿ – ಕಣ್ಣು
ಆಸುರಿ – ಅಸುರಿ
ಆಸ್ಯ – ಮುಖ
ಆಹೃತ – ತಂದ
ಆಳವಾಡು – ವಂಚಿಸು
ಇಂಬು – ಆಶ್ರಯ
ಇಕ್ಷು – ಕಬ್ಬು
ಇಷೀಕ – ಕೊಳಲು
ಇಷು – ಬಾಣ
ಈಕ್ಷಣ – ಕಣ್ಣು
ಈಡ್ಯ – ಸ್ತುತ್ಯರ್ಹವಾದದ್ದು
ಈಪ್ಸಿತ – ಆಸೆ, ಆಸೆಪಟ್ಟ
ಈಷಣ – ಆಸೆ
ಉಡುಗಣ – ತಾರಾಗಣ
ಉತ್ತಂಸ – ಶಿರೋಮಣಿ
ಉದ್ದಂಡ – ಪ್ರಚಂಡ
ಉಪಾಧಿ – ತೊಂದರೆ, ಬಿರುದು, ಕಾರಣ
ಉಪೇತ – ಕೂಡಿದ
ಉಪ್ಪವಡಿಸು – ನಿದ್ರೆಯಿಂದ ಏಳು
ಉಮ್ಮಯ,
ಉಮ್ಮಹ – ಉತ್ಸಾಹ, ಸಂತೋಷ
ಉರ – ಎದೆ
ಉರಗ – ಹಾವು
ಉರೆ – ಚೆನ್ನಾಗಿ
ಉಲುಹು – ಶಬ್ದ
ಊಡು – ಕುಡಿಸು
ಋಕ್ಷ – ಕರಡಿ
ಎಸೆ – ಶೋಭಿಸು
ಏಳಿಲ – ಅವಮಾನ
ಐಹಿಕ – ಇಹಕ್ಕೆ ಸಂಬಂಧಿಸಿದ
ಒಡಲು – ದೇಹ
ಒಪ್ಪಣೆ – ಮೆಚ್ಚಿಕೆ
ಒರೆ – ಹೇಳು
ಓಕಸ್ – ಮನೆ
ಓಗರ – ಅನ್ನ
ಓಸರಿಸು – ಓರೆಮಾಡು

ಓಳಿ - ಸಮೂಹ
ಕ - ಆತ್ಮ
ಕಂಚುಕ - ಕುಪ್ಪಸ
ಕಂಟಕ - ವಿಪತ್ತು
ಕಂದರ - ಕೊರಳು
ಕಂಬು - ಶಂಖ, ನೀರು
ಕಕುಭೇಶ - ದಿಕ್ಪಾಲಕ
ಕಚಕ - ಕಟ್ಟಿದವನು
ಕಚ್ಛಪ - ಆಮೆ
ಕಜ್ಜಳ - ಕಾಡಿಗೆ
ಕಟಕ - ಸೈನ್ಯ
ಕದಂಬ - ಪರಿಮಳ ವಸ್ತು, ಕಡಹದ ಮರ
ಕದಳಿ - ಬಾಳೆಗಿಡ
ಕನಕಾಕ್ಷ - ಹಿರಣ್ಯಾಕ್ಷ
ಕಪಿತ - ಹರಿ
ಕಮಠ - ಕೂರ್ಮ
ಕಮ್ಮರಿ - ಪ್ರಪಾತ
ಕರಡೆ - ಒಂದು ಬಗೆಯ ಚರ್ಮವಾದ್ಯ
ಕರವಾಳ - ಖಡ್ಗ
ಕರಿ - ಆನೆ
ಕರ್ತ,ಕರ್ತು,ಕರ್ತೃ - ಮಾಡುವವನು, ದೇವರು.
ಕರ್ದಮ - ಪಾಪ
ಕರ್ಪರ - ತಲೆ ಬುರುಡೆ
ಕಲುಷ - ಪಾಪ
ಕವಿ - ಋಷಿ
ಕಶಿಪು - ಹಾಸಿಗೆ
ಕಳತ್ರ - ಹೆಂಡತಿ
ಕಳಧೌತ - ಚಿನ್ನ, ಬೆಳ್ಳಿ ,ಬಿಳಿಬಣ್ಣ

ಕಳೇವರ - ದೇಹ
ಕಾಂಡ - ನೀರು
ಕಾಂಕ್ಷೆ - ಆಸೆ
ಕಾಕುತ್ಸ್ಥ - ರಾಮ
ಕಾಪುರುಷ - ಹೀನ ಮನುಷ್ಯ
ಕಾಮ್ಯ - ಮನೋರಥ
ಕಾರ್ಮುಕ - ಬಿಲ್ಲು
ಕಾವಡಿ - ಅಡ್ಡೆ
ಕಾಶ - ಪ್ರಕಾಶ
ಕಿಟಿ - ವರಾಹ, ಸೂಕರ, ಕಾಡುಹಂದಿ
ಕಿತವ - ಮೋಸಗಾರ
ಕೀರ - ಗಿಳಿ
ಕೀರ್ಣ - ಕಂಡರಿಸಿದ,ಕೊರೆದ
ಕುಂಟಣಿ - ತಲೆಹಿಡುಕಿ
ಕುಂಡಲಿನ್ - ನವಿಲು
ಕುಂದ - ಕೋಲು ಮಲ್ಲಿಗೆ
ಕುಂಭ - ಮಡಿಕೆ
ಕುಂಭಿ - ಆನೆ
ಕುಜ - ವೃಕ್ಷ
ಕುಠಾರ - ಕೊಡಲಿ
ಕುಣಪ - ಹೆಣ
ಕುತ್ಸಿತ - ನಿಂದೆ
ಕುಮುದ - ನೀಲೋತ್ಪಲ
ಕುರುಳು - ಕೂದಲು
ಕುಲಿಶ - ವಜ್ರಾಯುಧ
ಕುಶ - ದರ್ಭೆ
ಕುಶಸ್ಥಳ - ದ್ವಾರಕೆ
ಕುಶಶಾಯಿ - ದರ್ಭಶಯನ - ರಾಮ
ಕೂಪ - ಬಾವಿ

ಕೂಬ - ಸುಂದರ
ಕೂಲ - ದಡ
ಕೃಶಾನು - ಬೆಂಕಿ
ಕೇಣಿಗ - ಲೋಭಿ
ಕೈವಲ್ಯ - ಮೋಕ್ಷ
ಕೊಂಡೆಯ - ಚಾಡಿ
ಕೋಲ - ಹಂದಿ
ಕೋಶ - ಖಜಾನೆ
ಕೋಳು ಹೋಗು- ಸೂರೆಹೋಗು, ನಾಶವಾಗು
ಕೌಶೇಯ - ರೇಶ್ಮೆಯ ಬಟ್ಟೆ
ಕ್ರತು - ಯಾಗ
ಕ್ರೋಡ - ಹಂದಿ
ಕ್ಷತ - ಗಾಯ
ಕ್ಷಾಂತಿ - ಕ್ಷಮೆ
ಕ್ಷಿತಿ ಭೃತ್ - ಬೆಟ್ಟ
ಕ್ಷುಲ್ಲಕ>ಕ್ಷುಲ್ಲ - ಅಲ್ಪ
ಕ್ಷೌಮ - ರೇಷ್ಮೆ ವಸ್ತ್ರ
ಖಗ - ಪಕ್ಷಿ
ಖೂರ್ಚ, ಕೂರ್ಚ - ಹೆಬ್ಬೆರಳು ತೋರ್ಬೆರಳುಗಳ ತುದಿ
ಖೋಡಿ ಮಾತು- ಕೆಟ್ಟ ಮಾತು
ಗ - ಗಣೇಶ
ಗಂಬೂರ - ಕರ್ಪೂರ
ಗಡಾನೆ - ಬೇಗ
ಗಣೆ - ಬಾಣ
ಗರಜರ - ಗರ್ಜನೆ
ಗರಳ - ವಿಷ
ಗರಳದಂತ - ಹಾವು
ಗಸಣೆ,ಘಸಣೆ - ತೊಂದರೆ
ಗಳ - ಕಂಠ
ಗಾತ್ರ - ಶರೀರ
ಗುಂಜಿ - ಗುಲಗಂಜಿ
ಗುಜ್ಜ - ಕುಳ್ಳ
ಗುಡಾಳಕರು - ಋಷಿಮುನಿಗಳು
ಗುಲ್ಫ - ಪಾದದ ಹರಡು
ಗೇಹ - ಮನೆ
ಗೊಂದಣ, ಗೊಂದಳ - ಗುಂಪು,ಮೇಳನೃತ್ಯ
ಗೋಪ್ತ - ರಕ್ಷಕ
ಗೋರಸ - ಹಾಲು
ಗೋಷ್ಪದ - ಆಕಳಪಾದ
ಗ್ರಾಸ - ಆಹಾರ
ಘಟ - ಕುಂಭ (ವಿಷ್ಣುವಿನ ಸಹಸ್ರನಾಮ ಗಳಲ್ಲೊಂದು)
ಘಾಸಿ - ತೊಂದರೆ
ಘೂಕ - ಗೂಬೆ
ಘೋಣಿ - ವರಾಹ
ಚಕ್ರವಾಕ - ರಥಾಂಗ ಪಕ್ಷಿ
ಚರ್ಚಿತ - ಲೇಪಿಸಿದ
ಚಾರಿ - ಗತ್ರಿ, ಗುರಿ
ಚೀರ - ವಸ್ತ್ರ
ಚೂಡಾಮಣಿ - ತಲೆಯಲ್ಲಿ ಧರಿಸುವ ರತ್ನದ ಆಭರಣ
ಚೆಲ್ಲೆಗಣ್ - ವಿಲಾಸವನ್ನು ಸೂಸುವ ನೋಟ
ಚೇಲ - ಬಟ್ಟೆ
ಚೊಲ್ಲೆಯ - ತುರುಬಿನ ಕೊನೆ
ಛಿದ್ - ಕತ್ತರಿಸು,ನಾಶಮಾಡು
ಛೇತ - ನಾಶಮಾಡಿದವನು

ಜಂತ್ರ - ಯಂತ್ರ
ಜಂಬುಕ - ನರಿ
ಜಡಿತ - ಜೋಡಿಸಿದ
ಜಘ್ನು - ಕೊಲ್ಲುವುದು
ಜಟ್ಟಿಗ - ಒಂದು ಕ್ಷುದ್ರ ದೇವತೆ
ಜಠರ - ಕಠಿಣ, ಗಟ್ಟಿಯಾದ
ಜವ - ಯಮ
ಜಾಂಬೂನ
ದಾಂಬರ - ಪೀತಾಂಬರ
ಜಾಣ್ಣಕ್ಕಿ - ಗಿಳಿ
ಜಾಮಾತ(ತೃ) - ಅಳಿಯ
ಜಾಲಗಾರರು - ಬಂಗಾರ ಸೋಸುವವರು
ಜಾಳಿಸು - ನೀಗು
ಜಿತಕಾಮ - ಕಾಮನನ್ನು ಗೆದ್ದವನು
ಜಿಹ್ವೆ - ನಾಲಿಗೆ
ಜೀಮೂತ - ಮೋಡ
ಜ್ಞೇಯ - ಪರಬ್ರಹ್ಮ
ಝುಂಝು
ಮರುತ್ - ಮಳೆಯಿಂದ ಕೂಡಿದ ಬಿರುಗಾಳಿ
ಝುಲ್ಲಿಕ,
ಝಿಲ್ಲಿಕೆ - ಜೀರುಂಡೆ, ಸೂರ್ಯನ ಬೆಳಕು
ಝುಷ - ಮೀನು
ಟಂಕ - ಕೊಡ
ಟಾಳಿ,ಠಾಳಿ - ವಂಚನೆ
ಡಿಂಬ - ಶರೀರ
ಡೌಲು - ಬಡಾಯಿ
ತಕ್ರ - ಮಜ್ಜಿಗೆ
ತಟಿತ್ತು - ಮಿಂಚು
ತಥ್ಯ - ಸತ್ಯ
ತಮ - ಕತ್ತಲೆ, ಒಬ್ಬ ರಾಕ್ಷಸ
ತರಣಿಕರ - ಸೂರ್ಯಕಿರಣ
ತಲ್ಪ - ಹಾಸಿಗೆ
ತಲ್ಲಿಕಾರರು - ನಿಂದೆಯವರು?
ತವ - ನಿನ್ನ
ತಸ್ಕರ - ಕಳ್ಳ
ತಾಡನ - ಏಟು
ತಾತ - ತಂದೆ
ತಾಪತ್ರಯ - ಆಧಿದೈವಿಕ, ಆಧಿ ಭೌತಿಕ, ಆಧ್ಯಾತ್ಮಿಕ ಎಂಬ ಮೂರು ಬಗೆಯ ಕಷ್ಟಗಳು
ತಾರಕ - ರಕ್ಷಕ
ತಾರಿಸು - ದಾಟಿಸು
ತಿರಿ - ತಿರುಗು, ಭಿಕ್ಷೆಬೇಡು
ತಿರ್ಯಗ್ಜಾತಿ - ಪಶು ಪಕ್ಷಿ ಮುಂತಾದ ಪ್ರಾಣಿವರ್ಗ
ತುಡುಗ - ಕಳ್ಳ
ತುರು - ಹಸು
ತುಲಸಿ ಬರ್ಹ - ತುಳಸಿ ದಳ
ತುಷ್ಟಿ - ಆನಂದ
ತುಹಿನ - ಮಂಜು
ತೂರ್ಣ - ವೇಗ
ತೃಣ - ಹುಲ್ಲು
ತೇಳ - ಚೇಳು
ತೊಂಡ - ತುಂಟ
ತೋಕ - ಮಗು
ತೋಯ - ನೀರು
ತೋಷ - ಆನಂದ
ತ್ರಾ - ರಕ್ಷಿಸು

ತ್ರಿದಶರು - ದೇವತೆಗಳು
ತ್ರಿಪದ - ವಾಮನ
ದ - ಕೊಡುವುದು
ದಂದುಗ - ಕಷ್ಟ
ದರ - ಶಂಖ
ದಹರ - ಮಗು
ದಾಂತ - ಕೊಡುವವನು
ದಾಮ - ಡಾಬು
ದಾರಾ - ಪತ್ನಿ
ದಾವಾನಳ - ಕಾಡ್ಗಿಚ್ಚು
ದಿಂಡು - ಗರ್ವ
ದಿತಿಜ - ದೇವತೆ
ದೀಧಿತಿ - ಕಾಂತಿ
ದುರಿತ - ಕೇಡು
ದೃಗು - ಕಣ್ಣು
ದೇದೀಪ್ಯ - ಪ್ರಕಾಶಮಾನ
ದೇವಹೂತಿಜಜ - ದತ್ತಾತ್ರೇಯ
ದ್ರವಿಣ - ಶಕ್ತಿ
ದ್ವಿರೇಫ - ಭ್ರಮರ
ದ್ಯು - ಸ್ವರ್ಗ
ಧವ - ಪತಿ
ಧವಳಾರ,
ಧವಳಾಗಾರ - ಬಿಳಿಯ ಬಣ್ಣದ ಮನೆ
ಧಾತ್ರಿ - ಭೂಮಿ, ನೆಲ್ಲಿಕಾಯಿ
ಧಾಮ - ಮನೆ
ಧಿಷಣ - ಜಗತ್ತು
ಧುನಿ - ನದಿ
ಧುರಂಧರ - ನಾಯಕ
ಧೃಷ್ಟ - ಧಾರ್ಷ್ಟ್ಯದ
ನಕ್ತಂಚರ - ಕಳ್ಳ, ಪಿಶಾಚಿ ಮೊದಲಾದವರು
ನಾಡೆ - ಹೆಚ್ಚಾಗಿ,ವಿಶೇಷವಾಗಿ
ನಿಕಾರ - ಕೊಲ್ಲುವುದು
ನಿಕ್ಕರ ನುಡಿ - ಕೀಳಾಗಿ ಮಾತನಾಡು
ನಿಘ: - ಪಾಪ
ನಿಜ್ಜಣಿಕೆ - ಏಣಿ
ನಿಟಿಲ - ಹಣೆ
ನಿಯಂತ್ರ - ನಿಯಂತ್ರಿಸುವವನು
ನಿಯತ - ನಿಶ್ಚಿತವಾದ
ನಿರಯ - ನರಕ
ನಿರ್ಮಾಲ್ಯ - ಪೂಜೆಮಾಡಿದ ನಂತರ ತೆಗೆದ ಹೂ
ನಿರ್ವ್ಯಳೀಕ - ಸುಳ್ಳಿಲ್ಲದವನು
ನಿಶಾಟ - ರಾತ್ರಿಯಲ್ಲಿ ಸಂಚರಿಸುವ ಪಿಶಾಚ, ರಾಕ್ಷಸ
ನಿಸ್ವಜನ - ಬಡಜನ
ನೀರೊಳ್ಳಿ - ನೀರುಹಾವು
ನೆಗಹು - ಮೇಲಕ್ಕೆತ್ತು
ನೆಲ್ಲು - ಬತ್ತ
ನೇಣು - ಹಗ್ಗ
ನೋಯಿ,
ನೋಂಪಿ - ವ್ರತ
ಪ - ಪಾಲಿಸುವವನು, ಕುಡಿ
ಪಂಟು - ಹರಟೆ
ಪಕ್ವ - ಮಾಗಿದ, ಪಳಗಿದ
ಪಡಗ - ಮಣ್ಣಿನ ಗಡಿಗೆ
ಪರಮಹಂಸ - ಶ್ರೇಷ್ಠವರ್ಗದ ಸನ್ಯಾಸಿ
ಪರಿತೋಷ - ಅತ್ಯಂತ ಆನಂದ
ಪರ್ಯಂಕ - ಹಾಸಿಗೆ
ಪಳ - ಒಂದು ಕಾಲಮಾನ

ಪಳಿ - ನಿಂದೆ
ಪಾಂಸು - ಧೂಳು
ಪಾಟಲ - ಪಾದರಿ
ಪಾಟವ - ಶಕ್ತಿ
ಪಾಥೇಯ - ಬುತ್ತಿ
ಪಾಮರ - ತಿಳುವಳಿಕೆ ಇಲ್ಲದವನು
ಪಾವಕ - ಬೆಂಕಿ
ಪಾವುಗೆ - ಪಾದುಕೆ
ಪಿಶಿತ - ಮಾಂಸ
ಪೀಯೂಷ - ಅಮೃತ
ಪುಂಡಿ - ಒಂದು ಜಾತಿಯ ಸಸ್ಯ
ಪುನ್ನಾಗ - ಸುರಹೊನ್ನೆ
ಪುಷ್ಕರ - ಕೊಳ
ಪೂತ - ಪವಿತ್ರ
ಪೂರ್ಣವೇತ್ತೃ - ಪೂರ್ಣಜ್ಞಾನಿ
ಪೃಥಗ್ಗತಿ - ಬೇರೆ ಬೇರೆ ಗತಿ
ಪೆಡಕು - ಹೆಕ್ಕತ್ತು
ಪೇಶಲ - ಮೃದುವಾದ, ಹರಿಯ ಸಹಸ್ರನಾಮಗಳಲ್ಲಿ ಒಂದು
ಪೈಲ - ಒಬ್ಬ ಋಷಿ
ಪೋಕ - ದುಷ್ಟ
ಪೋತ್ರಿ - ಹಂದಿ
ಪೌತ್ರ - ಮೊಮ್ಮಗ
ಪ್ರಣತ - ನಮಸ್ಕರಿಸಿದ, ಬಗ್ಗಿದ
ಪ್ರತಿಪದೆ - ಪಾಡ್ಯಮಿ
ಪ್ರಭಂಜನ - ಮುರಿಯುವುದು
ಪ್ರಮಥಜನ - ಶಿವನ ಪರಿವಾರ
ಪ್ರೇಕ್ಷೆ - ಬುದ್ಧಿ
ಪ್ಲವ - ಹರಿಗೋಲು

ಪ್ಲವಂಗ, ಪ್ಲವಗ - ಕೋತಿ
ಫಣ - ಹಾವಿನ ಹೆಡೆ
ಫಣಿ - ಹಾವು
ಬಧಿರ - ಕಿವುಡ
ಬರ್ಹಿ>ಬರುಹಿ - ದರ್ಭೆ,ನವಿಲು,ಅಗ್ನಿ
ಬಲದೇವ - ವಾಯುದೇವ
ಬಾವನ್ನ - ಶ್ರೀಗಂಧ
ಬಿಂಬ - ತೊಂಡೆ ಹಣ್ಣು
ಬಿಡಾಲ - ಬೆಕ್ಕು
ಬಿಸಳಿಗೆ - ಗಡಿಗೆ? ಅಥವಾ ಒಂದು ಅಳತೆ?
ಬುಧ - ವಿದ್ವಾಂಸ
ಬ್ರೂ - ತಿಳಿಸು
ಭ - ಪ್ರಕಾಶ
ಭಂಜನ - ಮುರಿಯುವುದು
ಭಟಕೋಶ - ಸೈನ್ಯವನ್ನುಳ್ಳವ
ಭರ - ಭಾರ
ಭವ - ಶಿವ, ಸಂಸಾರ
ಭವಘ್ನೆ - ಭವನಾಶಿನಿ
ಭವಜ - ಗಣೇಶ
ಭಾ - ಪ್ರಕಾಶಿಸು
ಭಾಂಡ - ಪಾತ್ರೆ
ಭಾರತಿ - ವಾಯುದೇವರ ಪತ್ನಿ
ಭಾವೆ - ಹೆಂಗಸು
ಭಿಂಡಿವಾಳ(ಲ) - ಒಂದು ಬಗೆಯ ಆಯುಧ, ಸಣ್ಣ ಭರ್ಜಿ
ಭಿಕ್ಷುಕ - ಸನ್ಯಾಸಿ
ಭಿತ್ - ಭೇದಿಸುವಂತಹ
ಭುಲ್ಲೈಸು - ಉಬ್ಬು
ಭೂತ - ಪ್ರಾಣಿ
ಭೂತಿ - ಐಶ್ವರ್ಯ

ಭೂರಿ – ಹೆಚ್ಚಾದ
ಭೃತ್ಯ – ಸೇವಕ
ಭೇಷಜ – ಔಷಧ
ಭೋಕ್ತೃ – ಪತಿ, ಅರಸ
ಭ್ರಾತ – ಸಹೋದರ
ಭ್ರೂ – ಹುಬ್ಬು
ಮಂಡನ – ಅಲಂಕಾರ
ಮಂದಾರ – ಪಾರಿಜಾತ
ಮಕುಟ – ಕಿರೀಟ
ಮಡುಹು – ಕೊಲ್ಲು
ಮತ್ತ – ಮದಿಸಿದ
ಮಥನ – ಕಡೆಯುವುದು
ಮದ್ದುಗುಣಿಕೆ – ದತ್ತೂರ (ಒಂದು ಜಾತಿಯ ಗಿಡ)
ಮನೋಳಿ – ದುಃಖ
ಮಯೂಖ – ಕಿರಣ
ಮರುತ – ಗಾಳಿ
ಮರ್ದನ – ನಾಶ ಮಾಡುವುದು
ಮಲ – ಕೊಳೆ, ಪಾಪ
ಮಲ್ಲ – ವೀರ
ಮಳ್ಳಿದರು – ಏನೂ ತಿಳಿಯದವರು
ಮಾಜು – ಮುಚ್ಚಿಡು
ಮಾಣ್ – ನಿಲ್ಲಿಸು
ಮಾತುಳ – ಸೋದರ ಮಾವ
ಮಾರ್ಜಾಲ – ಬೆಕ್ಕು
ಮಿಟ್ಟೆ – ದಿಣ್ಣೆ
ಮಿೂಟು – ಶ್ರೇಷ್ಠ
ಮುಸಲ – ಒನಕೆ
ಮೂಷಕ – ಇಲಿ
ಮೃಗ – ಜಿಂಕೆ
ಮೃಗಮದ – ಕಸ್ತೂರಿ
ಮೇಘ – ಮೋಡ
ಮೇಲುದ – ಉತ್ತರೀಯ
ಮೋಚನ – ಬಿಡುಗಡೆ
ಮೌಂಜಾಶ್ರಮಿ – ಬ್ರಹ್ಮಚಾರಿ
ಮೌಂಜಿ – ಮುಂಜ ಹುಲ್ಲಿನಿಂದ ಮಾಡಿದ ದಾರ
ಮೌಳಿ – ಕಿರೀಟ, ಸಿಂಗರಿಸಿದ ಮುಡಿ
ಯಂತ್ರವಾಹಕ – ವಿಷ್ಣು
ಯಂತ್ರಾರೂಢ – ವಿಷ್ಣು
ಯಾಜಕ – ಯಜ್ಞ ಮಾಡುವವನು
ರಂಬಿಸು – ಸಂತೈಸು
ರಂಹಸ – ವೇಗ
ರಥ – ಶರೀರ
ರಥಾಂಗ – ಚಕ್ರ
ರಾಕೇಂದು – ಹುಣ್ಣಿಮೆಯ ಚಂದ್ರ
ರಾಹುತ – ಕುದುರೆಸವಾರ
ರಿಪು – ಶತ್ರು
ರುಧ್ – ರಕ್ಷಿಸು
ರೇಣು – ಧೂಳಿನ ಕಣ
ರೇತ – ವೀರ್ಯ
ರೋಚಿ – ಕಾಂತಿ
ರೌಪ್ಯಪೀಠ – ರಜತ ಪೀಠ
ಲಂಡ – ದುಷ್ಟ
ಲಗಳೆ – ಎತ್ತಿನ ಮೇಲೆ ನೀರು ಸಾಗಿಸಲು ಬಳಸುವ ಚರ್ಮದ ಚೀಲ
ಲಘಿಮ – ಪ್ರಕಾಶ
ಲಬ್ಧಿ – ಪ್ರಾಪ್ತಿ

ಲವ – ಕಾಲದ ಒಂದು ಅವಧಿ
ಲಲಾಟ – ಹಣೆ
ಲಾಜ – ಬತ್ತದ ಅರಳು
ಲುಬ್ಧಿ – ಹೆಬ್ಬಯಕೆ
ಲುಳಿ – ಸೊಗಸು
ಲೋಗರು – ಬೇರೆಯವರು
ವಕ್ಷ – ಎದೆ
ವಟಪರ್ಣ – ಆಲದೆಲೆ
ವಡವಾನಲ – ಸಮುದ್ರದೊಳಗಿನ ಬೆಂಕಿ
ವನ – ಪ್ರವಾಹ,ನೀರು
ವಪು – ಶರೀರ
ವರ್ತ – ಚಲಿಸುವವನು
ವರ್ಮ – ಮೋಸ
ವರ್ಯ – ಶ್ರೇಷ್ಠ
ವಲ್ಕಲ – ನಾರುಮಡಿ
ವಸನ – ಬಟ್ಟೆ
ವಾಂಛಿತ – ಇಚ್ಛಿಸಿದ
ವಾಜರು – ರೀತಿ
ವಾರಕ – ನಿವಾರಿಸುವವನು
ವಾರಿ – ನೀರು
ವಾರುಣಿ – ಆದಿಶೇಷನ ಹೆಂಡತಿ
ವಾರ್ಷ್ಣಿ – ಕೃಷ್ಣ
ವಿಗಡ – ಹಿರಿಯ,ಕೆಟ್ಟ,ಸಾಹಸ
ವಿಟಪ – ಕೊಂಬೆ
ವಿತರಣ – ದಾನ
ವಿತ್ತ – ಐಶ್ವರ್ಯ
ವಿನುತ – ಹೊಗಳಲ್ಪಟ್ಟ
ವಿಪ – ಗರುಡ

ವಿಪದಧ್ವಜ – ವಿಪತ್ತಿನ ದಾರಿಯಲ್ಲಿ ಹುಟ್ಟಿದ
ವಿಪನ್ನ – ಕಷ್ಟಕ್ಕೆ ಗುರಿಯಾದ
ವಿಭ್ರಾಜ – ಹೊಳೆಯುವ
ವಿಲುಂಠನಮ್ – ಅಪಹರಿಸು
ವಿವಿಕ್ತ – ಶುದ್ಧ
ವಿಹಗ – ಮೋಡ, ಪಕ್ಷಿ
ವೃಕ – ತೋಳ
ವೃಥಾ – ವ್ಯರ್ಥವಾಗಿ
ವೃಷ್ಟಿ – ಮಳೆ
ವೆಗ್ಗಳಿಸು – ಹೆಚ್ಚಾಗು
ವೇದ್ಯ – ಜ್ಞಾನಿ
ವೈಶ್ವಾನರ – ಅಗ್ನಿ
ವ್ಯಸ್ತ – ಬೇರ್ಪಡಿಸಿದ
ಶಠ – ದುಷ್ಟ
ಶತಪತ್ರ – ತಾವರೆ
ಶಫರಿ – ಮತ್ಸ್ಯ
ಶಮ – ಶಾಂತಿ, ಮೋಕ್ಷ
ಶಯ್ಯೆ – ಹಾಸಿಗೆ
ಶರ್ಕರ – ಸಣ್ಣಕಲ್ಲು, ಸಕ್ಕರೆ
ಶರ್ಕರ ಸೂಕ್ತರು – ಸಿಹಿಮಾತಿನವರು
ಶರ್ವಾಣಿ – ಪಾರ್ವತಿ
ಶಶ್ವತ್ – ಶಾಶ್ವತ
ಶಸ್ತ – ಒಳ್ಳೆಯವನು
ಶಾಕ್ತ – ಶಕ್ತಿದೇವತೆಯ ಉಪಾಸಕ
ಶಾರ್ಙ್ಗ – ಬಿಲ್ಲು
ಶಾಡ್ವಲ – ಹಸಿರು ಹುಲ್ಲುಗಾವಲು
ಶಾಸ್ತೃ – ದಂಡಿಸುವವನು
ಶುಕತಾತ – ವ್ಯಾಸ

ಶ್ರುತ - ಪ್ರಸಿದ್ಧವಾದ
ಶ್ರುತಿ - ಕಿವಿ, ಕೇಳುವಿಕೆ, ವೇದ
ಸಂಚಿತ - ಕೂಡಿಟ್ಟ
ಸಂಜೀವ,
ಸಂಜೀವಿನಿ - ಸತ್ತವರನ್ನು ಬದುಕಿಸಬಲ್ಲ ವಸ್ತು
ಸಚೇಲ - ವಸ್ತ್ರಸಹಿತ
ಸಟ - ಕೇಸರ
ಸತ್ತಿಗೆ - ಛತ್ರಿ
ಸತ್ಯವತಿಜ - ವ್ಯಾಸ
ಸವ್ಯ - ಎಡಗಡೆ
ಸಹ - ವಿಷ್ಣು
ಸಾಯುಜ್ಯ - ಮೋಕ್ಷದ ನಾಲ್ಕು ಪ್ರಕಾರಗಳಲ್ಲಿ ಒಂದು
ಸಾರೂಪ್ಯ - ಮೋಕ್ಷದ ನಾಲ್ಕು ಪ್ರಕಾರಗಳಲ್ಲಿ ಒಂದು
ಸೀಗುರಿ - ಚಾಮರ
ಸುಧೆ - ಅಮೃತ
ಸುಪರ್ಣ - ಗರುಡ
ಸುರತರು - ಕಲ್ಪವೃಕ್ಷ
ಸೂದನ - ಧ್ವಂಸಕ
ಸೂರ್ಯಸುತ - ಸುಗ್ರೀವ
ಸೇಸೆ - ಮಂತ್ರಾಕ್ಷತೆ
ಸ್ಯಂದನ - ರಥ
ಸ್ರಕ್ - ಮಾಲೆ
ಸ್ಫುರಿಸು - ಪ್ರಕಾಶಿಸು
ಸ್ಥೂಲಕೃತ್ - ವಿಷ್ಣು
ಹ,ಹನ್,ಹನನ - ಕೊಲ್ಲುವುದು
ಹರ - ನಾಶಮಾಡುವವನು ಶಿವ
ಹರವಿ - ಮಣ್ಣಿನ ಬಾನಿ
ಹರಿಣ - ಜಿಂಕೆ
ಹರಿಮಧ್ಯ - ಸಿಂಹಕಟಿ
ಹರ್ಮ್ಯ - ಭವನ, ಪಾತಾಳಲೋಕ
ಹಲ - ನೇಗಿಲು
ಹಲಾಯುಧ - ಬಲರಾಮ
ಹವಣು - ಹಂಚಿಕೆ
ಹೀಲಿ - ನವಿಲು ಗರಿ
ಹುತಭುಕ್ - ಹವಿಸ್ಸನ್ನು ಸ್ವೀಕರಿಸುವವನು
ಹೇವ - ಹಗೆ
ಹೊಂಬುಳ - ಮಿಣುಕುಹುಳು
ಹೊಲಬಿ - ಮಾರ್ಗದರ್ಶಿ
ಹೋತ್ರ - ಯಜ್ಞ

ಪರ್ಯಾಯ ಪದಗಳು

ಅಂಗಜ, ಅರವಿಂದಶರ, ಕಂತು, ಕಂದರ್ಪ, ಕಾಮ, ಕಾವ,
ಖಗಾಂಕಜ, ಪಂಚಬಾಣ, ಪಂಚಸರ, ಪಂಚಸಾಯಕ,
ಮಕರಕೇತನ, ಮಕರಧ್ವಜ, ಮದನ, ಮಾರ, ರತಿಪತಿ, ಸ್ಮರ – ಮನ್ಮಥ

ಅಂತಕ, ಕಾಲ, ಜವ, ವೈವಸ್ವತ – ಯಮ

ಅಂಬರಕೇಶ, ಅಂಬರಾಳಕ, ಈಶ, ಉಮಾಧವ, ಕಂತುಹರ,
ಕಪರ್ದಿ, ಕಪಾಲಧರ, ಕಪಾಲಿ, ಗಂಗಾಧರ, ತ್ರ್ಯಂಬಕ, ತ್ರಿಪುರಾಂತಕ,
ದೃಗಮೂರ, ಧೂರ್ಜಟಿ, ನಿಟಿಲನಯನ, ನೀಲಕಂಧರ, ಪಂಚಮುಖ,
ಪಂಚವದನ, ಪಶುಪ, ಪಶುಪತಿ, ಭರ್ಗ, ಭವ, ಭೂತಪ,
ಭೂತನಾಥ, ಭೂತೇಶ, ಮಕರಧ್ವಜಾರಿ, ಮೃಡ, ಮೃತ್ಯುಂಜಯ,
ವಾಮದೇವ, ವಿಷಪ, ವೃಷಭಗ, ವ್ಯೋಮಕೇಶ, ಶಂಕರ, ಶಂಭು,
ಶರ್ವ, ಶೂಲಿ, ಸದಾಶಿವ, ಸದ್ಯೋಜಾತ, ಹರ, ಹಿಮಕರಧರ – ಶಿವ

ಅಂಬು, ಅಪ್, ಕ, ಜಡ, ಜಲ, ವನ, ವಾರಿ, ಶರ, ಸಲಿಲ, ಸಾರ – ನೀರು

ಅಂಬುಜ, ಅಂಬುರುಹ, ಅಂಬೋಜ, ಅಬ್ಜ, ಅರವಿಂದ, ಕಂಜ,
ತಾಮರಸ, ನಳಿನ. ಬಿಸಜ, ರಾಜೀವ, ವನಜ,ವನರುಹ,
ವಾರಿಜ, ಶತಪತ್ರ, ಸರಸಿಜ, ಸರೋರುಹ, ಸಾರಸ, ಸಲಿಲಜ – ತಾವರೆ

ಅಂಬುಧಿ, ಅಬ್ಧಿ, ಆರ್ಣವ, ಕಡಲು, ಜಡಧಿ, ಜಲಧಿ, ವನಧಿ,
ವಾರಿಧಿ, ವಾರಿನಿಧಿ, ಶರಧಿ, ಸಿಂಧು, ಸಾಗರ – ಸಮುದ್ರ

ಅಂಬುರುಹ ಸಂಭವ, ಅಜ, ಎರಡೀರೆವದನ, ಕ, ಕಂಜಜ,
ಕಂಜಭವ, ಚತುರ್ಮುಖ, ದ್ರುಹಿಣ, ನಳಿನಭವ, ಬೊಮ್ಮ,
ವನಜಭವ, ವನಜಾಸನ, ವನರುಹಾಸನ, ವಾಣೀಧವ, ವಾರಿಜಾಸನ,
ವಿಧಾತ, ವಿರಿಂಚಿ, ಸರಸಿಜಭವ,ಹಿರಣ್ಯಗರ್ಭ, ಹೇಮಗರ್ಭ – ಬ್ರಹ್ಮ

ಅಡವಿ, ಕಾಂತಾರ, ಕಾನನ, ವನ, ಹಳುವ, – ಅರಣ್ಯ

ಅನಂತ, ಅಹಿನಾಥ, ಅಹಿವರ, ಉರಗೇಶ,
ಫಣಿಪ, ಫಣಿವರ, ಸಾಸಿರಫಣ – ಆದಿಶೇಷ

ಅನಲ, ಕೃಶಾನು, ಪಾವಕ, ಬರ್ಹಿ, ಮೇಷಾರೂಢ, ಯಜ್ಞಿ, ವೈಶ್ವಾನರ – ಅಗ್ನಿ

ಅನಿಮಿಷರು, ಅಮರರು, ತ್ರಿದಶರು,
ದಿವಿಜರು, ವೃಂದಾರಕರು, ಸುರರು – ದೇವತೆಗಳು

ಅನಿಲ, ಪವನ, ಮರುತ, ವಾತ, ವಾಯು, ಸಮೀರ – ಗಾಳಿ

ಅನೀಕ, ಆವಳಿ, ಓಳಿ, ಔಘ, ಕದಂಬ, ಗಡಣ, ಝುಂಟಾ, ಟೋಳಿ,
ನಿಕರ, ನಿಚಯ, ನಿವಹ, ಪ್ರತತಿ, ವಿಸರ, ವ್ರಜ, ಷಂಡ ಸಮೂಹ –ಗುಂಪು

ಅಬ್ಧಿಸತಿ, ಕಪರ್ದಿನಿ, ಘರಘರ, ತ್ರಿಪಥಗ, ದ್ಯುಗಮನೆ,
ಸುರನದಿ, ಸ್ವರ್ಧುನಿ, ದ್ವಿಪಥಗಾ – ಗಂಗೆ

ಅವನಿ, ಇಳೆ, ಉರ್ವಿ, ಕು, ಕುಂಭಿನಿ, ಕ್ಷಿತಿ, ಕ್ಷೋಣಿ, ಧರಿತ್ರಿ, ಧರೆ,
ಪೃಥ್ವಿ, ಪೊಡವಿ, ಭುವಿ, ಭೂತಳ, ಮಹಿ, ಮಹೀತಳ,
ಮೇದಿನಿ, ವಸುಧೆ, ವಸುಮತಿ – ಭೂಮಿ

ಅಹಿ, ಉರಗ, ಗರದ, ಪನ್ನಗ, ಫಣಿ, ಭುಜಗ, ಭುಜಂಗ,
ಭೋಗಿ, ವಿಷದ್ವಿಜ, ವಿಷರದನ, ವ್ಯಾಳ – ಹಾವು

ಅಂಬರಗ, ಅಹಃಪತಿ, ಅರ್ಕ, ಇನ,
ಖದ್ಯೋತ, ಚಂಡಕರ, ತರಣಿ, ದಿನಕರ,
ದ್ಯುಗ, ದ್ಯುಮಣಿ, ಭಾನು, ಭಾಸ್ಕರ, ರವಿ, ಸವಿತೃ – ಸೂರ್ಯ

ಇಂದಿರೆ, ಮಾ, ರಮಾ, ರೈ, ಶ್ರೀ, ಸಿರಿ – ಲಕ್ಷ್ಮಿ

ಇಂದು, ಉಡುಪ, ಏಣಾಂಕ, ತಾರಕಪತಿ,
ತಿಂಗಳು, ದ್ವಿಜ, ನಕ್ಷತ್ರಶತಪತಿ, ಪೆರೆ,
ಶಶಾಂಕ, ಶಶಿ, ಸೀತಕರ, ಸೋಮ, ಹಿಮಕರ, ಹಿಮಾಂಶು – ಚಂದ್ರ

ಉಮಾ, ಗಿರಿಜೆ, ಗೌರಿ, ದಾಕ್ಷಾಯಿಣಿ, ಶರ್ವಾಣಿ – **ಪಾರ್ವತಿ**

ಕಂಠೀರವ, ಕೇಸರಿ, ಪಂಚಮುಖ, ಪಂಚಾನನ, ಮೃಗಪ,
ಮೃಗೇಂದ್ರ, ಶಾರ್ದೂಲ, ಸಿಂಗ, ಹರಿ – **ಸಿಂಹ**

ಕನಕ, ಕಾಂಚನ, ಜಾಂಬೂನದ, ಮಿಸುನಿ,
ವಸು, ಸ್ವರ್ಣ, ಹಾಟಕ, ಹಿರಣ್ಯ, ಹೇಮ – **ಚಿನ್ನ**

ಕರಿ, ಕುಂಜರ, ಕುಂಭಿ, ಗಜ, ದಂತಿ, ದ್ವಿಪ,
ನಾಗ, ವಾರಣ, ಶುಂಡಾಲ, ಸಾಮಜ – **ಆನೆ**

ತುರಗ, ವಾಜಿ, ಹಯ, ಹರಿ – **ಕುದುರೆ**

ದಂಭೋಳಿ, ನಾಕಪ, ನಾಕಪತಿ, ಪಾಕಹ,
ಪುರುಹೂತ, ಬಿಡೌಜ, ವಾಸವ, ಶತಮಖ,
ಸುರಪ, ಸುರಪತಿ, ಸುರವರ, ಸುರೇಶ – **ಇಂದ್ರ**

ನರ, ಪಾರ್ಥ, ಸವ್ಯಸಾಚಿ, ಸಿತವಾಹನ – **ಅರ್ಜುನ**

ಅನುಬಂಧ–೨

ಪೂರ್ವ ಕಥೆಗಳು ಮತ್ತು ಲಘು ಟಿಪ್ಪಣಿಗಳು

ಕೀರ್ತನೆ ೧

(ನು. ೨) ಧಾಮತ್ರಯ: ವೈಕುಂಠ, ಅನಂತಾಸನ, ಶ್ವೇತದ್ವೀಪ – ಇವು ಮೂರು ಹರಿಯ ಆವಾಸ ಸ್ಥಾನಗಳು. (ವಿವರಗಳಿಗೆ ನೋಡಿ: ದಾಸ ಸಾಹಿತ್ಯದಲ್ಲಿ ಸೃಷ್ಟಿಪ್ರಕರಣ, ಪು. ೩೧, ೩೨) (ಕೀ. ೩೫೧, ನು. ೧೧) (ಕೀ. ೩೭೮, ನು.೨) (ಕೀ. ೩೯೮, ನು.೧) (ಕೀ. ೪೦೭, ನು.೪) (ಕೀ.೪೧೪, ನು.೩) (ಕೀ.೪೪೧, ನು.೩)

(ನು.೫) ಹೋದ ಶ್ರುತಿ ತಂದು : ಹರಿಯ ದಶಾವತಾರಗಳಲ್ಲಿ ಮೊದಲ ಅವತಾರವಾದ ಮತ್ಸ್ಯಾವತಾರಕ್ಕೆ ಸಂಬಂಧಿಸಿ ಈ ಮಾತು ಬಂದಿದೆ. ಬ್ರಹ್ಮನು ನಿದ್ದೆಯಲ್ಲಿದ್ದಾಗ ಆತನ ನಾಲ್ಕು ಬಾಯಿಗಳಿಂದ ಹೊರಬರುತ್ತಿದ್ದ ವೇದರಾಶಿಯನ್ನು ಹಯಗ್ರೀವನೆಂಬ ರಾಕ್ಷಸನು ಅಪಹರಿಸಿ ಪ್ರಳಯಜಲದಲ್ಲಿ ಅಡಗಿದ್ದಾಗ ಹರಿಯು ಮತ್ಸ್ಯರೂಪದಿಂದ ಬಂದು ಅವನನ್ನು ಕೊಂದು ವೇದಗಳನ್ನು ಮರಳಿ ತಂದನು. (ಕೆಲವು ಕೀರ್ತನೆಗಳಲ್ಲಿ ರಾಕ್ಷಸನ ಹೆಸರು ಸೋಮಕನೆಂದೂ ಬರುತ್ತದೆ) (ಭಾ. ಸ್ಕಂ. ೮, ಅ. ೨೪) (ಕೀ. ೯೭, ನು.೪) (ಕೀ. ೧೩೮, ನು.೫೮,೫೯,೬೭) (ಕೀ. ೪೦೭, ನು.೫) (ಕೀ. ೪೨೫, ನು.೨,೩)

(ನು. ೫) ಅಮೃತ ಉಣಿಸಿ ಸುರರಿಗೆ : ಹರಿಯ ಎರಡನೆಯ ಅವತಾರಕ್ಕೆ (ಕೂರ್ಮ) ಸಂಬಂಧಿಸಿ ಈ ಮಾತು ಬಂದಿದೆ. ಅಮೃತಕ್ಕಾಗಿ ದೇವಾಸುರರು ಕ್ಷೀರಸಮುದ್ರವನ್ನು ಕಡೆಯುತ್ತಿದ್ದಾಗ, ಕಡೆಗೋಲಾಗಿದ್ದ ಮಂದರಪರ್ವತ ಭಾರದಿಂದ ಮುಳುಗಲಾರಂಭಿಸಿತು. ಆಗ ಹರಿ ಕೂರ್ಮಾವತಾರಿಯಾಗಿ ಬಂದು ಮಂದರಪರ್ವತವನ್ನು ತನ್ನ ಬೆನ್ನ ಮೇಲೆತ್ತಿ ಕೊಂಡು ನಿಂತು ಸಮುದ್ರಮಥನಕ್ಕೆ ಸಹಾಯಕನಾದನು. (ಭಾ. ಸ್ಕಂ. ೮, ಅ.೭)

ಅಲ್ಲದೆ ಅಮೃತ ಉದ್ಭವಿಸಿದನಂತರ ಅದರ ಹಂಚಿಕೆಯ ವಿಷಯದಲ್ಲಿ ಮತ್ತೆ ದೇವಾಸುರರ ಮಧ್ಯೆ ಜಗಳ ಆರಂಭವಾದಾಗ ಮೋಹಿನಿಯ ವೇಷದಲ್ಲಿ ಬಂದು ದೇವತೆಗಳಿಗೇ ಅಮೃತ ಸಿಗುವಂತೆ ಮಾಡುತ್ತಾನೆ.

(ಕೀ.೧೫, ನು.೧) (ಕೀ. ೧೯, ನು.೧), (ಕೀ. ೨೭, ನು. ೧೦, ೩೧) (ಕೀ. ೫೮, ನು. ೧) (ಕೀ. ೯೦, ನು.೧) (ಕೀ.೯೨, ನು. ೧) (ಕೀ. ೯೩, ನು.೧) (ಕೀ. ೯೬, ನು.೨) (ಕೀ.೯೭, ನು. ೨೩) (ಕೀ. ೧೦೨, ನು.೧) (ಕೀ. ೧೦೬, ನು.೧, ೨, ೩) (ಕೀ. ೧೦೭,

ನು.೩) (ಕೀ. ೧೧೫, ನು.೧) (ಕೀ. ೧೧೭, ನು.೧) (ಕೀ. ೧೩೮, ನು.೬, ೧೫, ೩೪, ೫೮, ೫೯, ೬೮,) (ಕೀ. ೧೪೨, ನು.೧) (ಕೀ. ೧೪೬, ನು. ೧,೨,೩) (ಕೀ. ೧೭೭, ನು.೧) (ಕೀ. ೨೦೦, ನು.೧) (ಕೀ. ೨೬೫, ನು.೧) (ಕೀ. ೨೭೪, ನು.೩) (ಕೀ. ೩೦೬, ನು.೩) (ಕೀ. ೩೧೩, ನು.೪) (ಕೀ. ೩೧೪,. ನು. ೫) (ಕೀ. ೩೯೧, ನು. ೨೫) (ಕೀ. ೩೯೩, ನು. ೩) (ಕೀ. ೩೯೮, ನು. ೭) (ಕೀ. ೪೦೭, ನು. ೫) (ಕೀ. ೪೨೫, ನು. ೧,೨,೩) (ಕೀ. ೪೨೬, ನು. ೯) (ಕೀ. ೪೨೭, ನು. ೫) (ಕೀ. ೪೩೦, ನು. ೧) (ಕೀ. ೪೩೧, ನು. ೧,೨,೩) (ಕೀ. ೪೩೩, ನು, ೧,೨,೩) (ಕೀ. ೪೩೪, ನು. ೧) (ಕೀ. ೪೩೫, ನು.೧) (ಕೀ. ೪೩೮. ನು.೨) (ಕೀ. ೪೪೨, ನು.೭) (ಕೀ. ೪೪೪, ನು. ೧೨) (ಕೀ. ೪೪೭, ನು. ೧)

(ನು. ೫) ಖಳನ ತೀಡಿ ಶಿಶುವನು ಪೊರೆದೆ: ಸಾಮಾನ್ಯವಾಗಿ ದಶಾವತಾರಗಳ ಸ್ಮರಣೆ ಒಟ್ಟಾಗಿಯೇ ದಾಸರ ಕೃತಿಗಳಲ್ಲಿ ಕಾಣಸಿಗುತ್ತದೆ. ಕೆಲವೆಡೆ ಮಾತ್ರ ಕ್ರಮತಪ್ಪಿ ಕೆಲವು ಅವತಾರಗಳು ಬಿಟ್ಟು ಹೋಗಿರುತ್ತವೆ. ಈ ನುಡಿಯಲ್ಲಿ ಮೂರನೆಯ ಅವತಾರ ಬಿಟ್ಟುಹೋಗಿದೆ.

ಈ ಮಾತು ಹರಿಯ ನಾಲ್ಕನೆಯ ಅವತಾರಕ್ಕೆ ಸಂಬಂಧಿಸಿದೆ. ಹರಿದ್ವೇಷಿಯಾಗಿದ್ದ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದ ಹರಿಭಕ್ತನಾಗಿದ್ದ. ಹಿರಣ್ಯಕಶಿಪು ಹೇಗಾದರೂ ಮಗನನ್ನು ತನ್ನ ದಾರಿಗೆ ತರಬೇಕೆಂದು ಹಠದಿಂದ ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಕೊನೆಗೆ ಅವನನ್ನು ಕೊಲ್ಲದೆ ತನಗೆ ಸುಖವಿಲ್ಲವೆಂದು ಭಾವಿಸಿ ಖಡ್ಗವನ್ನೆತ್ತಿದಾಗ, ಮುಂದಿದ್ದ ಸಭಾಸ್ತಂಭದಿಂದ ಹರಿಯು ನರಸಿಂಹಾವತಾರಿಯಾಗಿ ಹೊರಬಂದು ಹಿರಣ್ಯಕಶಿಪುವನ್ನು ಕೊಲ್ಲುತ್ತಾನೆ.

(ಭಾ. ಸ್ಕಂ.೭, ಅ.೮).

(ಕೀ. ೧, ನು.೫) (ಕೀ, ೧೫. ನು, ೧) (ಕೀ. ೧೯, ನು.೨) (ಕೀ. ೨೦, ನು.೫) (ಕೀ. ೨೭,ನು. ೧೦, ೩೧) (ಕೀ. ೫೪, ನು.೧) (ಕೀ. ೫೮, ನು.೨) (ಕೀ. ೭೦, ನು. ೬) (ಕೀ. ೮೬) (ಕೀ. ೮೮, ನು.೨) (ಕೀ. ೯೦, ನು.೧) (ಕೀ. ೯೨, ನು.೪) (ಕೀ. ೯೩, ನು. ೧) (ಕೀ. ೯೪) (ಕೀ. ೯೬, ನು. ೪) (ಕೀ. ೯೭, ನು. ೧, ೨೩,೩೭) (ಕೀ. ೧೦೧, ನು.೨) (ಕೀ. ೧೦೨, ನು.೧) (ಕೀ. ೧೦೩, ನು.೫) (ಕೀ. ೧೦೬, ನು.೧,೨,೩) (ಕೀ. ೧೦೮, ನು. ೨) (ಕೀ. ೧೧೦, ನು. ೨) (ಕೀ. ೧೧೫, ನು.೨) (ಕೀ. ೧೧೭, ನು. ೨) (೧೨೩. ನು. ೧) (ಕೀ. ೧೩೪, ನು. ೧) (ಕೀ. ೧೩೭, ನು.೪) (ಕೀ. ೧೩೮, ಪ. ನು. ೨೫, ೫೧, ೫೯) (ಕೀ. ೧೪೨, ನು. ೨) (ಕೀ. ೧೪೬, ನು. ೧,೨,೩) (ಕೀ. ೧೪೭, ನು. ೨) (ಕೀ. ೨೧೨, ಪ.) (ಕೀ.೨೨೪, ನು. ೧) (ಕೀ. ೨೩೪, ನು. ೧) (ಕೀ. ೨೪೬, ನು. ೧) (ಕೀ. ೨೫೬, ಪ) (ಕೀ. ೨೬೨, ನು. ೧) (ಕೀ. ೨೭೪, ನು. ೩) (ಕೀ. ೩೨೨. ನು. ೧)

(ಕೀ. ೩೬೪, ನು. ೧) (ಕೀ. ೩೬೫, ನು. ೧) (ಕೀ. ೩೭೮, ನು. ೨) (ಕೀ. ೩೯೧, ನು. ೨೫) (ಕೀ. ೩೯೨, ನು. ೧) (೩೯೩, ನು. ೩) (ಕೀ. ೩೯೮, ನು. ೭) (ಕೀ. ೪೦೭, ನು. ೫) (ಕೀ. ೪೧೪, ನು. ೧) (ಕೀ. ೪೨೪, ನು. ೧) (ಕೀ. ೪೨೫, ನು. ೧,೨,೩) (ಕೀ. ೪೨೬, ನು.೯) (ಕೀ. ೪೨೭, ನು. ೫) (ಕೀ. ೪೩೦, ನು. ೧) (ಕೀ. ೪೩೧, ನು. ೧,೨,೩) (ಕೀ. ೪೩೩, ನು. ೧,೨,೩) (ಕೀ. ೪೩೪, ನು, ೧) (ಕೀ. ೪೩೫, ನು.೧) (೪೩೭, ನು. ೨) (ಕೀ. ೪೩೮, ನು.೪) (ಕೀ. ೪೪೨, ನು. ೫, ೭) (ಕೀ. ೪೪೪, ನು. ೧೨) (ಕೀ. ೪೪೭, ನು. ೧)

(ನು. ೫) ಗರ್ವದಿಂದ ಭೂದೇವಿಯನ್ನಳೆದೆ : ಈ ಮಾತು ಹರಿಯ ವಾಮನಾವತಾರಕ್ಕೆ ಸಂಬಂಧಿಸಿ ಬಂದಿದೆ. ಬಲಿಚಕ್ರವರ್ತಿಯ ಸೊಕ್ಕನ್ನು ಮುರಿಯುವುದಕ್ಕಾಗಿ ಹರಿಯು ಅದಿತಿ ಕಶ್ಯಪರ ಮಗನಾಗಿ ವಾಮನಮೂರ್ತಿಯಾಗಿ ಅವತರಿಸುತ್ತಾನೆ. ನರ್ಮದಾ ತೀರದಲ್ಲಿ ಬಲಿಚಕ್ರವರ್ತಿ ಅಶ್ವಮೇಧಯಾಗ ಮಾಡತೊಡಗಿದಾಗ, ವಟುವೇಷದಿಂದ ಅವನಲ್ಲಿಗೆ ಬಂದ ವಾಮನ ಮೂರು ಹೆಜ್ಜೆ ಭೂಮಿಯೆನ್ನು ದಾನವಾಗಿ ಬೇಡಿ, ಮೊದಲ ಹೆಜ್ಜೆಗೆ ಇಡೀ ಭೂಮಿಯನ್ನು ಆಕ್ರಮಿಸುತ್ತಾನೆ. ಎರಡನೆ ಹೆಜ್ಜೆ ಆಕಾಶವನ್ನು ಆವರಿಸುತ್ತದೆ. ಮೂರನೆ ಹೆಜ್ಜೆಗೆ ಸ್ಥಳವಿಲ್ಲದಾಗ ಬಲಿ ತನ್ನ ತಲೆಯೊಡ್ಡುತ್ತಾನೆ. ವಾಮನ ಅವನನ್ನು ಆ ನೆವದಲ್ಲಿ ಸುತಳಕ್ಕೆ ಮೆಟ್ಟುತ್ತಾನೆ.

(ಭಾ. ಸ್ಕಂ. ೮, ಅ. ೧೮-೨೨)

(ಕೀ. ೪, ನು. ೧), (ಕೀ. ೭, ನು.೩) (ಕೀ. ೮, ನು. ೩) (ಕೀ. ೧೫, ನು. ೨) (ಕೀ. ೧೯, ನು. ೩) (ಕೀ. ೨೦, ನು. ೬) (ಕೀ. ೨೧, ನು. ೧) (ಕೀ. ೨೭, ನು. ೧೦, ೩೨) (ಕೀ. ೫೮, ನು. ೨) (ಕೀ. ೮೫, ನು. ೧) (ಕೀ. ೯೦, ನು. ೨) (ಕೀ. ೯೨, ನು. ೫) (ಕೀ. ೯೩, ನು. ೧) (ಕೀ. ೯೬, ನು. ೫) (ಕೀ. ೯೭, ನು. ೧೫, ೨೩, ೩೭) (ಕೀ. ೯೮, ನು. ೨) (ಕೀ. ೧೦೨, ನು. ೧,೨) (ಕೀ. ೧೦೬, ನು. ೧,೨,೩,) (ಕೀ. ೧೧೨, ನು. ೩) (ಕೀ. ೧೧೫, ನು. ೨) (ಕೀ. ೧೧೭, ನು. ೩) (ಕೀ. ೧೩೮, ನು. ೫, ೧೫, ೩೭, ೪೯, ೫೮, ೫೯, ೬೨) (ಕೀ. ೧೪೨, ನು, ೨) (ಕೀ. ೧೪೬, ನು. ೧,೨,೩) (ಕೀ. ೧೪೭, ನು.೧) (ಕೀ. ೨೦೯, ನು. ೧,೨) (ಕೀ. ೨೩೭, ನು. ೩,೪) (ಕೀ. ೨೭೪, ನು.೩) (ಕೀ. ೩೫೩) (ಕೀ. ೩೬೫, ನು. ೩) (ಕೀ. ೩೯೧, ನು. ೨೬) (ಕೀ. ೩೯೮, ನು. ೭) (ಕೀ. ೪೦೭, ನು. ೫) (ಕೀ. ೪೨೪, ನು. ೨) (ಕೀ. ೪೨೫, ನು. ೧,೨,೩) (ಕೀ. ೪೨೬, ನು. ೯) (ಕೀ. ೪೨೭, ನು. ೫) (ಕೀ, ೪೩೦, ನು. ೨), (ಕೀ. ೪೩೧, ನು. ೧,೨,೩) (ಕೀ. ೪೩೩, ನು, ೧,೨,೩) (ಕೀ. ೪೩೪, ನು. ೨) (ಕೀ. ೪೩೫, ನು. ೨) (ಕೀ. ೪೩೮, ನು. ೫) (ಕೀ. ೪೪೦, ನು. ೩) (ಕೀ. ೪೪೨, ನು. ೭) (ಕೀ. ೪೪೪, ನು. ೧೨) (ಕೀ. ೪೪೭, ನು. ೧).

(ನು. ೫) ಖಳರೊದ್ದೆ : ಉನ್ಮತ್ತರಾದ ಕ್ಷತ್ರಿಯರ ಕುಲವನ್ನೇ ನಾಶಗೊಳಿಸುವ ಉದ್ದೇಶದಿಂದ ವಿಷ್ಣುವು ಜಮದಗ್ನಿ ರೇಣುಕೆಯರ ಮಗ ಪರಶುರಾಮನಾಗಿ ಹುಟ್ಟಿ ಇಪ್ಪತ್ತೊಂದು ಸಾರಿ ಭೂಮಂಡಲವನ್ನೆಲ್ಲ ಸುತ್ತಿ ಕ್ಷತ್ರಿಯರನ್ನು ಕೊಂದು ಅವರ ರಕ್ತದಿಂದ ಪಿತೃಗಳಿಗೆ ತರ್ಪಣವನ್ನು ಕೊಟ್ಟನು. ಇದು ಹರಿಯ ಆರನೆಯ ಅವತಾರ.

(ಪು.ನಾ.ಚೂ.ಪು, ೩೯೩, ೩೯೪)

(ಕೀ. ೧೫, ನು, ೨) (ಕೀ. ೧೯, ನು. ೩) (ಕೀ. ೨೦, ನು. ೭) (ಕೀ. ೨೭, ನು. ೧೦, ೩೨) (ಕೀ. ೫೮, ನು. ೨) (ಕೀ. ೯೦, ನು. ೨) (ಕೀ. ೯೨, ನು. ೬) (ಕೀ. ೯೩, ನು. ೧) (ಕೀ. ೯೬, ನು. ೬) (ಕೀ. ೯೭, ನು. ೨೩) (ಕೀ. ೧೦೨, ನು. ೧) (ಕೀ. ೧೦೬, ನು. ೨,೩) (ಕೀ. ೧೧೫, ನು. ೨) (ಕೀ. ೧೧೭, ನು. ೩) (ಕೀ . ೧೩೮, ನು. ೨೫,೫೮, ೫೯, ೬೨) (ಕೀ. ೧೪೨, ನು.೨) (ಕೀ. ೧೪೬, ನು. ೧,೨, ೩) (ಕೀ. ೨೭೪, ನು.೩) (ಕೀ. ೩೯೧, ನು. ೨೬) (ಕೀ. ೩೯೮, ನು. ೭) (ಕೀ. ೪೦೭, ನು. ೫) (ಕೀ. ೪೨೫, ನು. ೧,೨,೩) (ಕೀ. ೪೨೬, ನು. ೮,೯) (ಕೀ. ೪೨೭, ನು. ೫) (ಕೀ. ೪೨೮, ಪ) (ಕೀ. ೪೩೦, ನು.೨) (ಕೀ. ೪೩೧, ನು, ೧,೨, ೩) (ಕೀ. ೪೩೩, ನು. ೧,೨,೩) (ಕೀ. ೪೩೪, ನು. ೨) (ಕೀ. ೪೩೫, ನು. ೨) (ಕೀ. ೪೩೮, ನು. ೬) (ಕೀ. ೪೪೨, ನು. ೭) (ಕೀ. ೪೪೪, ನು. ೧೨) (ಕೀ. ೪೪೭, ನು. ೧).

(ನು. ೫) ಅರಸಾದೆ : ಈ ಮಾತನ್ನು ಹರಿಯ ಏಳನೆಯ ಅವತಾರವಾದ ರಾಮಾವತಾರಕ್ಕೆ ಸಂಬಂಧಿಸಿ ಗ್ರಹಿಸಬಹುದು. 'ಖಳರೊದ್ದೆ ಅರಸಾದೆ' ಎಂದೂ, ಒಟ್ಟಾಗಿ ಗ್ರಹಿಸಬಹುದು. ರಾವಣನೇ ಮೊದಲಾದ ರಾಕ್ಷಸರನ್ನು ಸಂಹರಿಸಲು ಹರಿಯು ಏಳನೆಯ ಬಾರಿ ಇಕ್ಷ್ವಾಕು ವಂಶದ ದಶರಥನ ಮಗ ರಾಮನಾಗಿ ಜನಿಸುತ್ತಾನೆ. ಸೀತೆಯನ್ನು ಕದ್ದೊಯ್ದ ರಾವಣನನ್ನು ಸಂಹರಿಸಿದ ನಂತರ ಅಯೋಧ್ಯೆಯ ಅರಸನಾಗುತ್ತಾನೆ.

(ಭಾ. ಸ್ಕಂ., ೨, ಅ. ೭)

(ನು. ೫) ನೀ ದೇವಿಯ ಧರಿಸಿ : ಸಮುದ್ರ ಮಂಥನದಿಂದ ಉದ್ಭವೆಯಾದ ಲಕ್ಷ್ಮಿಯನ್ನು ಶ್ರೀಹರಿ ವರಿಸಿ ತನ್ನ ಎದೆಯಲ್ಲಿ ಧರಿಸುತ್ತಾನೆ.

ಕೀರ್ತನೆ ೩

(ನು. ೩) ಸುಂದೋಪಸಂದ : ಸುಂದ. ಉಪಸುಂದರು, ಸೋದರರು ನಿಕುಂಭನೆಂಬ ರಾಕ್ಷಸನ ಮಕ್ಕಳು. ಇವರಿಬ್ಬರೂ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ, ತಾವೇ ಒಬ್ಬರನ್ನೊಬ್ಬರು ಕೊಲ್ಲಬೇಕೇ ಹೊರತು ಮತ್ತಾರಿಂದಲೂ ತಮಗೆ ಸಾವು ಬರದಂತೆ ವರವನ್ನು ಪಡೆದರು.

ಲೋಕಕಂಟಕರಾದ ಇವರ ಹಾವಳಿ ಅತಿಯಾದಾಗ ಇಂದ್ರನು ವಿಶ್ವಕರ್ಮನಿಂದ ತಿಲೋತ್ತಮೆಯನ್ನು ಸೃಷ್ಟಿಸಿ ಇವರಲ್ಲಿಗೆ ಕಳುಹಿಸುತ್ತಾನೆ. ಇಬ್ಬರೂ ಆಕೆಯನ್ನು ಕಂಡು ಮೋಹಿತರಾದಾಗ ತಿಲೋತ್ತಮೆ ನಿಮ್ಮಲ್ಲಿ ಶೂರನಾದವನನ್ನು ವರಿಸುವೆನೆಂದಾಗ, ಇಬ್ಬರೂ ಕಾದಾಡಿ ಒಬ್ಬರನ್ನೊಬ್ಬರು ಕೊಂದು ಮಡಿಯುತ್ತಾರೆ.

(ಪು. ನಾ. ಚೂ. ಪು. ೬೦)

(ಸು. ೩) **ಜಲಂಧರ** : ಈತ ಶಿವನ ಕ್ರೋಧಾಗ್ನಿಯಿಂದ ಜನಿಸಿದ ಒಬ್ಬ ಘೋರ ರಾಕ್ಷಸ. ಅತ್ಯಂತ ಬಲಶಾಲಿ. ಒಮ್ಮೆ ನಾರದ ಈತನಿಗೆ "ಪಾರ್ವತಿಯಂತಹ ಮಡದಿಯಿಲ್ಲದ ಮೇಲೆ ನಿನ್ನ ಐಶ್ವರ್ಯ ಎಷ್ಟಿದ್ದರೇನು?" ಎಂದು ಮೂದಲಿಕೆಯ ಮಾತುಗಳನ್ನಾಡಿದಾಗ, ಅದರಿಂದ ಪ್ರೋತ್ಸಾಹಿತನಾದ ಜಲಂಧರ ಶಿವನಿಗೆ 'ಪಾರ್ವತಿಯನ್ನು ಕೂಡಲೇ ತನಗೆ ಸಮರ್ಪಿಸಬೇಕೆಂದು' ಹೇಳಿಕಳುಹಿಸುತ್ತಾನೆ. ಇದರಿಂದ ಕೋಪಗೊಂಡ ಶಿವ ಅವನನ್ನು ಕೊಲ್ಲುತ್ತಾನೆ. (ಪು. ನಾ. ಚೂ. ಪು. ೨೪೬)

(ಸು. ೩) **ಕೀಚಕ**: ಕೀಚಕ ವಿರಾಟರಾಜನ ರಾಣಿಯಾದ ಸುದೇಷ್ಣೆಯ ಸಹೋದರ. ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸದಲ್ಲಿದ್ದಾಗ ದ್ರೌಪದಿ ಸೈರಂಧ್ರಿಯಾಗಿ ಸುದೇಷ್ಣೆಯ ಬಳಿ ಇದ್ದಳು. ಕೀಚಕ ಅಕ್ಕನ ಬಳಿಯಿದ್ದ ಸೈರಂಧ್ರಿಯನ್ನು ಕಂಡು ಮೋಹಗೊಂಡು ಆಕೆಯನ್ನು ವಶಪಡಿಸಿಕೊಳ್ಳಲು ಬಹಳವಾಗಿ ಪ್ರಯತ್ನಿಸುತ್ತಾನೆ. ದ್ರೌಪದಿ ತನಗೆ ಯಾರಿಂದಲೂ ಸಹಾಯ ದೊರೆಯದಾದಾಗ ಕೊನೆಗೆ ಅಡಿಗೆ ಭಟ್ಟನಾಗಿದ್ದ ಭೀಮ(ವಲಲ)ನಿಗೆ ಮೊರೆ ಹೋಗುತ್ತಾಳೆ. ಆಗ ಭೀಮ ಉಪಾಯ ಹೂಡಿ ದ್ರೌಪದಿಯ ಮೂಲಕವೇ ಕೀಚಕನನ್ನು ನಡುರಾತ್ರಿಯಲ್ಲಿ ನಾಟ್ಯಶಾಲೆಗೆ ಕರೆಸಿ ಮುಷ್ಟಿಯುದ್ಧಲ್ಲಿ ಕೊಲ್ಲುತ್ತಾನೆ.

(ಮಹಾಭಾರತ, ವಿರಾಟಪರ್ವ)

(ಸು. ೩) **ಕಂದರದಶಕ**: ಲಂಕಾಧಿಪತಿಯೂ, ಹತ್ತು ತಲೆಗಳುಳ್ಳವನೂ ಆದ ರಾವಣ, ರಾಮನ ಪತ್ನಿಯಾದ ಸುಂದರಿ ಸೀತೆಯನ್ನು ಕಂಡು ಮೋಹವಶನಾಗಿ ಬಲಾತ್ಕಾರದಿಂದ ಅವಳನ್ನು ಲಂಕೆಗೆ ಕದ್ದೊಯ್ಯುತ್ತಾನೆ. ಪರಿಣಾಮವಾಗಿ ರಾಮನಿಂದ ಹತನಾಗುತ್ತಾನೆ.

(ರಾಮಾಯಣ)

(ಸು. ೩) **ಸೈಂಧವ (ಜಯದ್ರಥ)**: ಈತ ಸಿಂಧುದೇಶದ ಅರಸ ವೃದ್ಧಕ್ಷತ್ರನ ಮಗ. ಧೃತರಾಷ್ಟ್ರನ ಮಗಳಾದ ದುಶ್ಶಲೆಯನ್ನು ಮದುವೆಯಾಗಿದ್ದ. ಪಾಂಡವರು ಕಾಮ್ಯಕವನದಲ್ಲಿದ್ದಾಗ, ಒಮ್ಮೆ ಧೌಮ್ಯಮುನಿಯನ್ನು ದ್ರೌಪದಿಯ ಕಾವಲಿಗಿಟ್ಟು ಎಲ್ಲರೂ ಬೇಟೆಗೆ ಹೋಗಿದ್ದಾಗ ಈತ ದ್ರೌಪದಿಯನ್ನು ಕಂಡು ಮರುಳಾಗಿ ಆಕೆ ಎಷ್ಟು ಹೇಳಿದರೂ

ಕೇಳದೆ ಬಲಾತ್ಕಾರದಿಂದ ತನ್ನ ರಥದಲ್ಲಿ ಎತ್ತಿಕೊಂಡು ಹೋಗುತ್ತಿದ್ದಾಗ, ವಿಷಯ ತಿಳಿದ ಭೀಮ ಆತನನ್ನು ಬೆನ್ನಟ್ಟಿ ಕೊಲ್ಲುವುದರಲ್ಲಿರುತ್ತಾನೆ. ಆದರೆ ಅಷ್ಟರಲ್ಲಿ ಧರ್ಮರಾಯ ಭೀಮನನ್ನು ತಡೆದು ಜಯದ್ರಥನನ್ನು ಉಳಿಸುತ್ತಾನೆ. ಮುಂದೆ ನಡೆಯುವ ಭಾರತ ಯುದ್ಧದಲ್ಲಿ ಅರ್ಜುನ ಅವನನ್ನು ಕೊಲ್ಲುತ್ತಾನೆ. (ಮಹಾಭಾರತ)

(ನು. ೩) ಜಟಾಸುರ: ಒಬ್ಬ ರಾಕ್ಷಸ. ಪಾಂಡವರು, ಅರಣ್ಯವಾಸದಲ್ಲಿದ್ದಾಗ ಕೆಲಕಾಲ ಬದರಿಕಾಶ್ರಮದಲ್ಲಿರುತ್ತಾರೆ. ಆಗ ಭೀಮನಿಲ್ಲದ ಒಂದು ವೇಳೆಯಲ್ಲಿ ಈತ ದ್ರೌಪದಿ, ಯುಧಿಷ್ಠಿರ, ನಕುಲ, ಸಹದೇವರನ್ನು ಹೊತ್ತುಕೊಂಡು, ಹೋಗುತ್ತಿರುತ್ತಾನೆ. ಆ ವೇಳೆಗೆ ಹಿಂದಿರುಗಿದ ಭೀಮ ಇವನನ್ನು ಕಂಡುಹಿಡಿದು ಇವನೊಡನೆ ಯುದ್ಧ ಮಾಡಿ ಕೊಲ್ಲುತ್ತಾನೆ.
(ಪುನಾಚೂ, ಪು. ೨೨೭)

ಕೀರ್ತನೆ ೭

(ನು.೩) ಪ್ರಸನ್ನವೆಂಕಟಾಚಲ ವಿಭು: ಪ್ರಸನ್ನವೆಂಕಟರ ಮೆಚ್ಚಿನ ದೈವವಾದ ತಿರುಪತಿ ವೆಂಕಟೇಶನ ದೇವಾಲಯು ಇರುವುದು ವೆಂಕಟಾಚಲದಲ್ಲಿ. ಹೀಗಾಗಿ ಆತನನ್ನು ವೆಂಕಟಾಚಲವಾಸ, ಶೇಷಾದ್ರಿವಾಸ ಇತ್ಯಾದಿಯಾಗಿ ಕರೆಯುತ್ತಾರೆ.

(ನು.೪) ಬೆಟ್ಟಲಿ ನಗವನೆತ್ತಿದ ಕೃಷ್ಣ : ಸಂಸ್ಕೃತದ ಭಾಗವತ ದಶಮಸ್ಕಂಧದ ಪೂರ್ವಾರ್ಧದಲ್ಲಿ ಈ ಸಂದರ್ಭ ಬರುತ್ತದೆ. ಕೃಷ್ಣ, ಇಂದ್ರಪೂಜೆಗೆ ಸಿದ್ಧರಾಗುತ್ತಿದ್ದ ಗೋಕುಲದವರನ್ನು ತಡೆದು, ಗೋವರ್ಧನ ಗಿರಿಯನ್ನು ಪೂಜಿಸುವಂತೆ ಹೇಳುತ್ತಾನೆ. ಅವರು ಅವನು ಹೇಳಿದಂತೆಯೇ ನಡೆಯುತ್ತಾರೆ. ಇದನ್ನು ತಿಳಿದು ಕೋಪಗೊಂಡ ಇಂದ್ರ ಸತತವಾಗಿ ಮಳೆ ಬೀಳುವಂತೆ ಮಾಡುತ್ತಾನೆ. ಆ ಪ್ರಳಯಧಾರೆಗೆ ಸಿಕ್ಕಿ ನೊಂದ ಗೋಪ ಗೋಪಿಕೆಯರು, ಗೋವುಗಳೆಲ್ಲ ಕೃಷ್ಣನನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿದಾಗ, ಕೃಷ್ಣ ತನ್ನ ಎಡಗೈಯ ಕಿರುಬೆರಳಿನಿಂದ ಗೋವರ್ಧನ ಗಿರಿಯನ್ನೆತ್ತಿ ಹಿಡಿದು, ಅದರ ಕೆಳಗೆ ಒಂದು ವಾರದ ಕಾಲ ಬಿರುಗಾಳಿ ಮಳೆಗಳಿಂದ ಅವರಿಗೆ ರಕ್ಷಣೆಯನ್ನೊದಗಿಸುತ್ತಾನೆ. ಇಂದ್ರ ಕೃಷ್ಣನ ಅದ್ಭುತವಾದ ಯೋಗಮಹಿಮೆಗೆ ಸೋತು ಮಳೆಯನ್ನು ನಿಲ್ಲಿಸುತ್ತಾನೆ. (ಭಾ. ಸ್ಕಂ ೧೦, ಅ. ೨೪, ೨೫) (ಕೀ. ೫೭, ನು. ೨) (ಕೀ. ೯೭, ನು. ೫)

(ನು. ೫) ಧ್ರುವನಿಗೆ ನೇವರಿಸಿದವನೆ: ಧ್ರುವ ಉತ್ತಾನಪಾದರಾಜನ ಹಿರಿಯ ಹೆಂಡತಿಯ ಮಗ. ಅವನ ಮಲತಾಯಿ ಸುರುಚಿಯ ಮಾತಿಗೆ ನೊಂದ ಧ್ರುವ ಕಾಡಿಗೆ ಹೋಗಿ ತಪಸ್ಸು ಮಾಡಿ ಹರಿಯನ್ನು ಒಲಿಸಿಕೊಂಡು ಭೂಲೋಕದಲ್ಲಿ ಏಕಚ್ಛತ್ರಾಧಿಪತ್ಯವನ್ನೂ, ಪರಲೋಕದಲ್ಲಿ ತನ್ನ ಹೆಸರಿನಿಂದಲೇ ಪ್ರಸಿದ್ಧವಾದ ಧ್ರುವಮಂಡಲವೆಂಬ ಶಾಶ್ವತ ಸ್ಥಾನವನ್ನೂ ಸಂಪಾದಿಸಿದ.
(ಭಾ. ಸ್ಕಂ. ೪, ಅ. ೮–೧೪)

(ಕೀ. ೮೫, ನು.೨)

ಕೀರ್ತನೆ ೮

(ನು. ೨) ಕೌಸ್ತುಭ : ಸಮುದ್ರ ಮಥನ ಕಾಲದಲ್ಲಿ ಜನಿಸಿದ ಈ ರತ್ನವನ್ನು ವಿಷ್ಣು ಎದೆಯಲ್ಲಿ ಧರಿಸಿದನು. (ಪು. ಭಾ. ಕೋ. ಪು. ೧೬೦)

(ನು. ೨) ಶ್ರೀವತ್ಸ: ಒಮ್ಮೆ ಋಷಿಗಳೆಲ್ಲರೂ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಯಾರು ಶ್ರೇಷ್ಠರೆನ್ನುವುದನ್ನು ತಿಳಿಯಲಪೇಕ್ಷಿಸಿ ಭೃಗು ಋಷಿಗಳನ್ನು ಆ ಕಾರ್ಯಕ್ಕಾಗಿ ಕಳುಹಿಸುತ್ತಾರೆ. ಅವರು ಮೊದಲು ಬ್ರಹ್ಮನಲ್ಲಿಗೆ ಹೋಗಿ, ಬೇಕೆಂದೇ ಅವನಿಗೆ ನಮಸ್ಕರಿಸದೆ ನಿಲ್ಲುತ್ತಾರೆ. ಇದರಿಂದ ಬ್ರಹ್ಮ ಕೋಪಗೊಳ್ಳುತ್ತಾನೆ. ಅಲ್ಲಿಂದ ಹೊರಟ ಋಷಿಗಳು ಕೈಲಾಸಕ್ಕೆ ಹೋದಾಗ ಶಿವ ಆಲಂಗಿಸಲು ಬರುತ್ತಾನೆ. ಇವರು ನಿರಾಕರಿಸಿದಾಗ ಶಿವನೂ ಸಿಟ್ಟಾಗುತ್ತಾನೆ. ಅನಂತರ ಅವರು ವೈಕುಂಠಕ್ಕೆ ಹೋಗಿ ಮಲಗಿದ್ದ ವಿಷ್ಣುವಿನ ಎದೆಗೆ ಒದೆಯುತ್ತಾರೆ. ಆದರೂ ವಿಷ್ಣು ಸಿಟ್ಟುಗೊಳ್ಳದೆ ವಿನಯದಿಂದ ಅವರಿಗೆ ನಮಸ್ಕರಿಸಿ ಸತ್ಕರಿಸಿದಾಗ, ಆತನ ಹಿರಿಯಗುಣಕ್ಕೆ ಮೆಚ್ಚಿ ಆತನೇ ಶ್ರೇಷ್ಠನೆಂಬ ತೀರ್ಮಾನಕ್ಕೆ ಬರುತ್ತಾರೆ. (ಭಾ. ಸ್ಕಂ . ೧೦, ಅ. ೮೧) (ಕೀ. ೮೬,) (ಕೀ.೯೭, ನು.೭)

(ನು. ೨) ತ್ರಿಭುವನ ಗರ್ಭ: ಒಮ್ಮೆ ಬಲರಾಮ ಹಾಗೂ ಗೋಪಬಾಲಕರೆಲ್ಲ ಯಶೋದೆಗೆ ಕೃಷ್ಣನು ಮಣ್ಣನ್ನು ತಿಂದನೆಂದು ದೂರುತ್ತಾರೆ. ಯಶೋದೆ ಆ ಬಗ್ಗೆ ಕೃಷ್ಣನನ್ನು ಕೇಳಿದಾಗ, ಕೃಷ್ಣ ಅವರೆಲ್ಲ ಸುಳ್ಳು ಹೇಳುತ್ತಿದ್ದಾರೆ, ಬೇಕಿದ್ದರೆ ನೀನೇ ನೋಡು ಎಂದು ತನ್ನ ಬಾಯಿ ತೆರೆದು ತೋರಿಸುತ್ತಾನೆ. ಆಗ ಯಶೋದೆಗೆ ಆತನ ಬಾಯಲ್ಲಿ ಚರಾಚರಾತ್ಮಕವಾದ ಸಮಸ್ತ ಬ್ರಹ್ಮಾಂಡವೇ ಕಾಣಿಸುತ್ತದೆ. (ಭಾ. ಸ್ಕಂ.೧೦, ಅ. ೮)

ಕೀರ್ತನೆ ೧೨

(ನು. ೨) ಅಕ್ರೂರ : ಈತ ಯದುವಂಶದ ಶ್ವಫಲ್ಕನ ಮಗ, ತಾಯಿ ಗಾಂದಿನಿ. ಕಂಸನ ಅಷ್ಟಮಂತ್ರಿಗಳಲ್ಲಿ ಈತನೂ ಒಬ್ಬ. ಗೋಕುಲದಲ್ಲಿದ್ದ ಬಲರಾಮಕೃಷ್ಣರನ್ನು ಕಂಸನ ಅಪ್ಪಣೆಯಂತೆ ಮಧುರೆಗೆ ಕರೆದುಕೊಂಡು ಹೋಗುತ್ತಾನೆ. ಹೀಗೆ ಕರೆದುಕೊಂಡು ಹೋಗುವಾಗ ಯಮುನಾ ನದಿಯಲ್ಲಿ ಸ್ನಾನ ಮಾಡುತ್ತಿದ್ದ ಅಕ್ರೂರನಿಗೆ ಕೃಷ್ಣ ತನ್ನ ದಿವ್ಯರೂಪವನ್ನು ತೋರಿಸುತ್ತಾನೆ. (ಪು. ನಾ. ಚೂ. ಪು. ೧)

(ಕೀ.೫೭, ನು.೨)

ಕೀರ್ತನೆ ೧೪

(ನು. ೩) ಖಗಾಂಕ : ಖಗ ಎಂದರೆ ಇಲ್ಲಿ ಗರುಡನಾಗುತ್ತಾನೆ. ಈತ ಕಶ್ಯಪ ವಿನತೆಯರ ಮಗ, ಮಲತಾಯಿಗೆ ದಾಸಿಯಾಗಿದ್ದ ತನ್ನ ತಾಯಿಯನ್ನು, ಅವಳ ವಚನದಂತೆ

ಸ್ವರ್ಗದಿಂದ ಅಮೃತ ತಂದು ಬಿಡಿಸುತ್ತಾನೆ. ಇವನ ಲೋಕೋತ್ತರ ಸಾಮರ್ಥ್ಯವನ್ನು ಕಂಡ ವಿಷ್ಣು ಗರುಡನಿಗೆ ಸುಪರ್ಣ ಎಂಬ ಹೆಸರನ್ನು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡನು. ಅಲ್ಲದೆ ತನ್ನ ಧ್ವಜಚಿಹ್ನೆಯಾಗಿಯೂ ಸೇರಿಸಿಕೊಂಡನು. (ಮಹಾಭಾರತ, ಆದಿಪರ್ವ)

(ನು. ೪) ಪಯನಿಧಿ ಒಡೆಯ : ಭೂಲೋಕದ ಪುಷ್ಕರ ದ್ವೀಪ ಶಾಲ್ಮಲ ದ್ವೀಪಗಳ ನಡುವೆ ಇರುವ ಕ್ಷೀರ ಸಮುದ್ರದಲ್ಲಿ ಒಂದೂವರೆ ಲಕ್ಷ ಯೋಜನದ ಎತ್ತರಕ್ಕೆ ಹೆಪ್ಪುಗಟ್ಟಿ ನಿಂತಿರುವ ಹಾಲಿನ ಮೇಲೆ ಶ್ವೇತದ್ವೀಪವೆಂಬ ಶ್ರೀಹರಿಯ ಮಂದಿರವಿದೆ.

(ದಾಸಸಾಹಿತ್ಯದಲ್ಲಿ ಸೃಷ್ಟಿಪ್ರಕರಣ, ಪು. ೩೨)

ಕೀರ್ತನೆ ೧೫

(ನುಡಿ. ೧ ಕನಕಾಂಬಕನ ಗೆದ್ದ : ಹರಿಯ ಮೂರನೆಯ ಅವತಾರ(ವರಾಹ)ಕ್ಕೆ ಸಂಬಂಧಿಸಿದ ಮಾತಿದು. ಹಿರಣ್ಯಾಕ್ಷನೆಂಬ ರಾಕ್ಷಸ ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ಸಮುದ್ರದ ತಳಕ್ಕೆ ಒಯ್ದಾಗ ಹರಿ ವರಾಹರೂಪದಿಂದ ಬಂದು, ಅವನನ್ನು ಕೊಂದು ಭೂಮಿಯನ್ನು ತನ್ನ ಕೋರೆ ದಾಡೆಗಳಿಂದ ಎತ್ತಿ ತಂದನು. (ಭಾ.ಸ್ಕಂ.೩, ಅ.೧೩)

(ನು. ೨) ಕನಕಮೃಗ ಸಂಹಾರ : ಮಾರೀಚ ಒಬ್ಬ ರಾಕ್ಷಸ. ವನವಾಸದಲ್ಲಿ ರಾಮನ ಜೊತೆಗಿದ್ದ ಸೀತೆಯನ್ನು ಕಂಡು ಮೋಹಗೊಂಡ ರಾವಣ, ಆಕೆಯನ್ನು ಪಡೆಯಲು ಮಾರೀಚನ ಸಹಾಯವನ್ನು ಕೋರುತ್ತಾನೆ. ಮೊದಲಿಗೆ ನಿರಾಕರಿಸಿದರೂ ರಾವಣನ ಒತ್ತಾಯಕ್ಕೆ ಮಣಿದ ಮಾರೀಚ, ಚಿನ್ನದ ಜಿಂಕೆಯ ವೇಷ ಧರಿಸಿ ಸೀತೆಯಿಂದ ರಾಮ ದೂರ ಹೋಗಲು ಕಾರಣನಾಗುತ್ತಾನೆ. ಒಂಟಿಯಾದ ಸೀತೆಯನ್ನು ರಾವಣ ಕದ್ದೊಯ್ಯುತ್ತಾನೆ. ಇತ್ತ ಜಿಂಕೆಯನ್ನು ಬೆನ್ನಟ್ಟಿದ ರಾಮ ಅದನ್ನು ಕೊಲ್ಲುತ್ತಾನೆ. ರಾಮಾವತಾರ ಹರಿಯ ಏಳನೆಯ ಅವತಾರ.

(ಅರಣ್ಯಕಾಂಡ, ರಾಮಾಯಣ)

(ನು. ೩) ಕನಕಾಂಬರವ ಬಿಟ್ಟ : ತಾರಕಾಸುರನ ಮಕ್ಕಳಾದ ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬ ಮೂವರು ಬ್ರಹ್ಮನಿಂದ ವರವನ್ನು ಪಡೆದು, ಮಯನಿಂದ ನಿರ್ಮಿತವಾದ ತ್ರಿಪುರ (ಸುವರ್ಣಪುರ, ರಜತಪುರ, ಆಯಸಪುರ) ಗಳಲ್ಲಿ ಸ್ವರ್ಗಕ್ಕೂ ಮಿಗಿಲಾದ ಸುಖೋಪಭೋಗಗಳಿಂದಿರುತ್ತಾರೆ. ವೈದಿಕ ಮಾರ್ಗದಲ್ಲಿ ಬಹಳ ಶ್ರದ್ಧೆಯಿಂದ ಇದ್ದ ತ್ರಿಪುರಾಸುರನನ್ನು ವಂಚಿಸಲು ಹರಿ ಪಾಷಂಡವೇಷಿಯಾಗಿ ಬಂದು ಅವರಿಗೆ ಪಾಷಂಡ ಧರ್ಮವನ್ನು ಉಪದೇಶಿಸುತ್ತಾನೆ. (ಭಾ. ಸ್ಕಂ. ೨, ಅ. ೭) ತ್ರಿಪುರಾಸುರರ ಪತ್ನಿಯರ ಪಾತಿವ್ರತ್ಯ ಭಂಗಮಾಡಲು ಹರಿ ಅವರೆದುರಿಗೆ ಬೆತ್ತಲೆಯಾಗಿ ನಿಂತನೆಂಬ ವಿಚಾರ ದಾಸರ ಹಾಡುಗಳಲ್ಲಿ ಸಾಮಾನ್ಯವಾಗಿ ಬರುತ್ತದೆ.

(ನು. ೩) ಕನಕವರ್ಮವ ತೊಟ್ಟ : ಹರಿಯ ಹತ್ತನೆಯ ಅವತಾರಕ್ಕೆ (ಕಲ್ಕಿಗೆ) ಸಂಬಂಧಿಸಿದ ಮಾತು. ಕಲಿ ಒಬ್ಬ ರಾಕ್ಷಸ. ಇವನ ತಾಯಿ ಹಿಂಸೆ, ತಂದೆ ಕ್ರೋಧ. ಇವನ

ಹಾವಳಿ ತಡೆಯಲಾರದೆ ಭೂದೇವಿ ಹರಿಯಲ್ಲಿ ಮೊರೆಯಿಟ್ಟಾಗ, ಹರಿ ಕಲ್ಕಿಯ ರೂಪದಲ್ಲಿ ಬಂದು ಕಲಿಯನ್ನು ಸಂಹರಿಸುತ್ತಾನೆ. ಕಲ್ಕಿ ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಅದ್ಭುತವಾದ ಖಡ್ಗವನ್ನೂ, ಒಂದು ಉತ್ತಮಾಶ್ವವನ್ನೂ, ಅಪ್ರತಿಹತ ಮಹಿಮೆಯನ್ನೂ ಪಡೆದಿರುತ್ತಾನೆ. ಕನಕವರ್ಮ = ಚಿನ್ನದ ಕವಚ. (ಪುನಾಚೂ., ಪು. ೯೨, ೯೩)

ಕೀರ್ತನೆ ೧೭

(ನು. ೨) ಎಂಟೆರೆಡು ಕಳೆದೋರಿ : ಕಾಮಕಲೆಗಳು? ಪೂಷಾ, ಯಶಾ, ಸುಮನಸಾ, ರತಿ, ಪ್ರಾಪ್ತಿ, ಧೃತಿ, ಋದ್ಧಿ, ಸೌಮ್ಯ, ಮರೀಚಿ, ಅಂಶುಮಾಲಿನೀ, ಅಂಗಿರಾ, ಶಶಿನೀ, ಛಾಯಾ, ಸಂಪೂರ್ಣಮಂಡಲಾ, ತುಷ್ಟಿ. ಅಮೃತಾ. (ಶ್ರೀವತ್ಸನಿಘಂಟು, ಪು.೯೩)

(ನು. ೨) ಎಂಟೆರಡವಸ್ಥೆ : ಕಾಮದ ಹತ್ತು ಅವಸ್ಥೆಗಳು : ದೃಕ್‌ಸಂಗ, ಮನಸ್ಸಂಗ, ಸಂಕಲ್ಪ, ಜಾಗರ, ಕೃಶತೆ, ಅರತಿ, ಹ್ರೀತ್ಯಾಗ, ಉನ್ಮಾದ, ಮೂರ್ಛೆ, ಅಂತ.

(ಶ್ರೀನಿ. ಪು. ೪೩)

ಕೀರ್ತನೆ ೨೦

ಬಂದೆನೇಳೆ ಗೋವಿಂದ ನಾ: ಕೃಷ್ಣ ಸತ್ಯಭಾಮೆಯರ ಸಂಭಾಷಣಾರೂಪದಲ್ಲಿರುವ ಒಂದು ವಿಶಿಷ್ಟ ಕೀರ್ತನೆ. ದಶಾವತಾರದ ಸ್ಮರಣೆ ಸುಂದರವಾಗಿ ಬಂದಿದೆ.

ಕೀರ್ತನೆ ೨೧

ಬಾರನ್ಯಾತಕೆ ವಾರಿಜಾನನೆ : ಸಂಬಂಧಗಳನ್ನು ಹಾಗೂ ಅನೇಕ ಸಂದರ್ಭಗಳನ್ನು ಸ್ಮರಿಸುತ್ತ ಹರಿಯನ್ನು ಸ್ತುತಿಸುವ ಈ ಕೀರ್ತನೆ ಬೆಡಗಿನ ಸ್ವರೂಪದ್ದಾಗಿದೆ. ಅನೇಕ ಸಂದರ್ಭಗಳು ಸ್ಪಷ್ಟವಾಗುವುದಿಲ್ಲ. ಕೆಲವೆಡೆ ಪಾಠವೂ ಕೆಟ್ಟಿರುವಂತೆ ತೋರುತ್ತದೆ.

(ನು. ೧) ಬಲಹ : ಬಲ ಎಂಬ ರಾಕ್ಷಸನನ್ನು ಕೊಂದ ಇಂದ್ರ.

ಜನನಿಸುತರ ಜೀವಕೆಡರು ಬರಲಿ ಕಳಿದನೇ : (ಕೀ. ೨೧, ನು. ೧) ಕೃಷ್ಣ ತನ್ನ ಜನನಿ ದೇವಕಿಯ ಗರ್ಭದಲ್ಲಿ ಜನಿಸಿದ ಮಕ್ಕಳೆಲ್ಲರನ್ನೂ ಕೊಲ್ಲುತ್ತಿದ್ದ ಕಂಸನನ್ನು ಕೊಂದು, ದೇವಕಿ ವಸುದೇವರನ್ನು ಸೆರೆಯಿಂದ ಬಿಡಿಸುತ್ತಾನೆ. (ಭಾ. ಸ್ಕಂ. ೧೦, ಅ. ೫೨)

(ನು. ೨) ಹರಗೊಲಿಸಿ .... ಜವದಿಕಾಯ್ದನೆ : ಶಿವನನ್ನು ಮೆಚ್ಚಿಸಿ ಶೈವ ತೇಜಸ್ಸನ್ನು ಪಡೆದ ಅಶ್ವತ್ಥಾಮ, ಪಾಂಡವರ ಶಿಬಿರದಲ್ಲಿ ಮಲಗಿದ್ದ ಉಪಪಾಂಡವರನ್ನೂ, ದೃಷ್ಟದ್ಯುಮ್ನ,

ಶಿಖಂಡಿಯನ್ನೂ ಕೊಲ್ಲುತ್ತಾನೆ. ಅನಂತರ ಪಾಂಡವರನ್ನು ಕಂಡ ಕೂಡಲೆ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದಾಗ ಅರ್ಜುನ ಪ್ರತ್ಯಸ್ತ್ರವನ್ನು ಪ್ರಯೋಗಿಸುತ್ತಾನೆ. ವ್ಯಾಸ ನಾರದರ ಅಭಿಪ್ರಾಯಾನುಸಾರವಾಗಿ ಅರ್ಜುನ ತಾನು ಬಿಟ್ಟ ಪ್ರತ್ಯಸ್ತ್ರವನ್ನು ಹಿಂತೆಗೆದು ಕೊಂಡರೂ ಅಶ್ವತ್ಥಾಮ ತನ್ನ ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊಳ್ಳಲಾರದೆ, ಆ ಅಸ್ತ್ರವನ್ನು ಅಭಿಮನ್ಯುವಿನ ಪತ್ನಿ ಉತ್ತರೆಯ ಗರ್ಭದ ಮೇಲೆ ಬೀಳಲು ಕೇಳುತ್ತಾನೆ. ಆಗ ಕೃಷ್ಣ ಉತ್ತರೆಯ ಗರ್ಭವನ್ನು ಆ ಅಸ್ತ್ರದಿಂದ ರಕ್ಷಿಸುತ್ತಾನೆ. (ಪುನಾಚೂ, ಪು. ೧೫೧)

(ನು. ೩) ಭಾರಮಣನ ಅಗ್ರಜನ ಕಿಶೋರ ಬಾಣಪ್ರಿಯಜನವತಾರ: ಚಂದ್ರನ ಸಹೋದರಿಯಾದ ಲಕ್ಷ್ಮಿಯ ಮಗ ಮನ್ಮಥ, ಬಾಣಪ್ರಿಯ ಶಿವನ ಮಗನಾದ ಸುಬ್ರಹ್ಮಣ್ಯನ ಅವತಾರ.

(ನುಡಿ. ೩) ವಿಷದ್ವಿಜನ್ನ ಧ್ವಜ ಕರೆದರೆ ....ಮುರಿವನೆ : ಕೃಷ್ಣ ಸಂಧಾನದ ಮಾತುಕತೆಗಾಗಿ ಹಸ್ತಿನಾವತಿಗೆ ಹೋದಾಗ, ದುರ್ಯೋಧನ ಊಟಕ್ಕೆ ಆಮಂತ್ರಿಸಿದರೆ ಆತನ ಅರಮನೆಯಲ್ಲಿ ಊಟ ಮಾಡಲು ಇಚ್ಛಿಸದೆ ವಿದುರನ ಮನೆಯಲ್ಲಿ ಊಟ ಮಾಡುತ್ತಾನೆ.

(ಮಹಾಭಾರತ, ಉದ್ಯೋಗಪರ್ವ)

ಕೀರ್ತನೆ ೨೫

(ನು. ೧) ಮಾವನ ಅಣುಗನನುಜೆಯಳಿಗೆ ಮಾವನೆನಿಸಿದ : ಈ ಸಂಬಂಧ ತಿಳಿಯುವುದಿಲ್ಲ. ಇದನ್ನು 'ಮಾವನಣುಗನ (ತ) ನುಜೆಯಳಿಗೆ ಮಾವನೆನಿಸಿದ' ಎಂದು ತಿದ್ದಿಕೊಂಡರೆ ಹೀಗೆ ಅರ್ಥವಿಸಬಹುದು : ಕೃಷ್ಣನ ಮಾವ ಭೀಷ್ಮಕ. ಅವನ ಮಗ ರುಕ್ಮಿ. ರುಕ್ಮಿಯ ಮಗಳು ರುಕ್ಮವತಿಯನ್ನು, ಕೃಷ್ಣ–ರುಕ್ಮಿಣಿಯರ ಮಗನಾದ ಪ್ರದ್ಯುಮ್ನ ವಿವಾಹವಾಗಿದ್ದ. ಇದರಿಂದ ಕೃಷ್ಣ ರುಕ್ಮವತಿಯ ಮಾವನಾದ. (ಪುನಾಚೂ, ಪು. ೫೩೬)

(ನು. ೧) ತನ್ನ ಮಗಳ ಮಾವನ ಸೊಸೆಯ...........ಸುತರಿಗಜ್ಜನೆನಿಸಿದ: ವಿಷ್ಣುವಿನ ಮಗಳು ಗಂಗೆ. ಗಂಗೆಯ ಮಾವ ಪ್ರತೀಪರಾಯ. ಅವನ ಸೊಸೆ ಸತ್ಯವತಿ. ಅವಳಲ್ಲಿ ಜನಿಸಿದವನು ವ್ಯಾಸ; (ವ್ಯಾಸ ಹರಿಯ ಅವತಾರ) ಅರಣ್ಯದಲ್ಲಿ ತಪಸ್ಸು ಮಾಡುವವನು. ವ್ಯಾಸನಿಂದ ಜನಿಸಿದವನು ಪಾಂಡು. ಪಾಂಡುವಿನ ಮಕ್ಕಳು ವ್ಯಾಸನಿಗೆ ಮೊಮ್ಮಕ್ಕಳು. ಕುಂತಿ ಕೃಷ್ಣನಿಗೆ ಸೋದರತ್ತೆ. ಕುಂತಿ, ಪಾಂಡು – ಇವರ ಮಕ್ಕಳಾದ ಪಾಂಡವರು ಕೃಷ್ಣನಿಗೆ ಮಾವನ ಮಕ್ಕಳೂ ಹೌದು. (ಕೃಷ್ಣನೂ ಹರಿಯ ಅವತಾರ)

(ನು. ೧) ಮಾವನ ಮಾವನ ಮಗಳಿಗಣ್ಣನೆನಿಸಿದ : ಕೃಷ್ಣನ ಮಾವ ಕಂಸ. ಕಂಸನ ಮಾವ ಜರಾಸಂಧ. ಜರಾಸಂಧನ ಒಬ್ಬಳು ಮಗಳು ಸಹದೇವನನ್ನು ಮದುವೆಯಾಗುತ್ತಾಳೆ. ಸಹದೇವ ಕೃಷ್ಣನಿಗೆ ಮಾವನ ಮಗ. ಆದ್ದರಿಂದ ಸಹದೇವನ ಹೆಂಡತಿ ಕೃಷ್ಣನಿಗೆ ತಂಗಿ ಆಗುತ್ತಾಳೆ.

(ನು. ೧) ಬಾವನ ಭವನವೆಣ್ಗಳ ಬಿಡಿಸಿ ರಮಿಸಿದ : ಭೂದೇವಿ ಹರಿಯ ಪತ್ನಿ. ಅವಳ ಮಗ ನರಕಾಸುರ, ಮಗಳು ಸೀತೆ. ಸೀತೆಯನ್ನು ಹರಿಯ ಅವತಾರಿಯಾದ ರಾಮನೇ ವರಿಸುತ್ತಾನೆ. ಹರಿಯೇ ತನ್ನ ಇನ್ನೊಂದು ಅವತಾರವಾದ ಕೃಷ್ಣರೂಪಿನಲ್ಲಿ ನರಕಾಸುರನನ್ನು ಕೊಂದು ಅವನ ಸೆರೆಯಲ್ಲಿದ್ದ ೧೬ ಸಾವಿರ ಸುಂದರಿಯರನ್ನು ವಿವಾಹವಾಗುತ್ತಾನೆ.

(ನು. ೨) ಸತಿಯ ಸುತೆಗೆ ಅರಸನಾದ : ಭೂದೇವಿ ವಿಷ್ಣುವಿನ ಪತ್ನಿ. ಅವಳ ಮಗಳು ಸೀತೆ. ವಿಷ್ಣುವೇ ರಾಮನಾಗಿ ಸೀತೆಯನ್ನು ವರಿಸಿದ.

(ನು. ೨) ಸತಿಯಳಿಗೆ ಸಹೋದರನಾದ : ಲಕ್ಷ್ಮಿ ವಿಷ್ಣುವಿನ ಪತ್ನಿ. ಅವಳ ವಿವಿಧ ರೂಪಗಳಲ್ಲಿ ದುರ್ಗಾವತಾರವೂ ಒಂದು. ಈ ದುರ್ಗೆ ಕೃಷ್ಣಾವತಾರದಲ್ಲಿ ಕೃಷ್ಣನ ಸಹೋದರಿಯಾಗಿ ಜನಿಸಿದಳು.

(ನು. ೨) ಸತಿಯಳನುಜ ಕುಲದಿ ಜನಿಸಿ ಸತಿ ಹಲವರ ಕೂಡಿ ಸುಖಿಸಿ ಸತಿ ಸಖಿಯರ ಬಂಧುವೆನಿಸಿದ : ಹರಿಯ ಪತ್ನಿ ಲಕ್ಷ್ಮಿ. ಅವಳ ಅನುಜ ಚಂದ್ರ, ಚಂದ್ರವಂಶದಲ್ಲಿ ಹುಟ್ಟಿ ಹಲವು ಹೆಂಡಿರನ್ನು , ಹೊಂದಿ ಎಲ್ಲ ಹೆಂಗೆಳೆಯರ ಮನಸ್ಸನ್ನು ಕದ್ದವನು ಕೃಷ್ಣ. (ವಿಷ್ಣು)

(ನು. ೨) ಸುತನ ಸತಿಯ ಮಗನ ಮೊಮ್ಮನೆನಿಸಿದ : ವಿಷ್ಣುವಿನ ಮಗ ಬ್ರಹ್ಮ , ಬ್ರಹ್ಮನ ಸತಿ ವಾಣಿ. ಇವರ ಮಗ ಸ್ವಾಯಂಭುವ ಮನು. ಇವನ ಮಗಳು ಆಕೂತಿ. ಆಕೂತಿ ಮತ್ತು ರುಚಿಯೆಂಬ ಪ್ರಜಾಧಿಪತಿಗೆ ಹುಟ್ಟಿದ ಯಜ್ಞ (ಸುಯಜ್ಞ) ಹರಿಯ ಅವತಾರಿ.

(ನು. ೨) ಓರ್ವ ಮೊಮ್ಮನ ಸತಿಗೆ ನೋಡಿದಳಿಯನೆನಿಸಿದ: ಹರಿಯ ಮಗನಾದ ಬ್ರಹ್ಮನ ಪುತ್ರರಲ್ಲೊಬ್ಬ ಭೃಗು ಮಹರ್ಷಿ. ಈತನ ಸತಿ ಖ್ಯಾತಿ. ಈಕೆಯಲ್ಲಿ ಲಕ್ಷ್ಮಿಯ ಅವತಾರಿಯಾದ ಶ್ರೀ ಮಗಳಾಗಿ ಹುಟ್ಟುತ್ತಾಳೆ. ಲಕ್ಷ್ಮಿಯ ಗಂಡ ಶ್ರೀಹರಿ. ಹೀಗೆ ವಿಷ್ಣು ಮೊಮ್ಮಗನ ಹೆಂಡತಿಗೆ ಅಳಿಯನಾದ. ಪುನಾಚೂ, ಪು. ೧೬೯)

(ನು. ೩.) ಅಣ್ಣಗೆ ಜನಕನಾಗಿ ಮಗನ ಅಣ್ಣನೆನಿಸಿದ : ಅನಿರುದ್ಧರೂಪಿಯಾದ ನಾರಾಯಣ ಮತ್ತು ಶಾಂತಾರೂಪಿಯಾದ ರಮಾ ಇವರ ಮಗ ಇಂದ್ರ. (ಮಹಾಭಾರತ ತಾತ್ಪರ್ಯ ನಿರ್ಣಯ ೩–೧೬) ಇಂದ್ರನು ಉಪೇಂದ್ರನ (ನಾರಾಯಣನ) ಅಣ್ಣನೆಂಬುದು ತಿಳಿದ ವಿಚಾರ. ಆದ್ದರಿಂದ ಅಣ್ಣನಿಗೆ ಜನಕನಾದ. ಪ್ರದ್ಯುಮ್ನನು ಕೃಷ್ಣನ ಮಗ; ಪ್ರದ್ಯುಮ್ನನೇ ಭರತ. (ಮಹಾಭಾರತ ತಾತ್ಪರ್ಯ ನಿರ್ಣಯ, ೩– ೭೮) ಭರತನ ಅಣ್ಣ ರಾಮ ; ಆದ್ದರಿಂದ ಮಗನ ಅಣ್ಣನೆನಿಸಿದ.

(ನು. ೩.) ಜಗವರಿಯಲು ಅಣ್ಣನೆ ತಮ್ಮಗೆ ತಮ್ಮನಾದ: ಅಣ್ಣ ಶ್ರೀರಾಮ ; ತಮ್ಮ ಲಕ್ಷ್ಮಣ. ಶೇಷಾವತಾರಿಯಾದ ಲಕ್ಷ್ಮಣ. ಕೃಷ್ಣಾವತಾರದ ಕಾಲದಲ್ಲಿ ಬಲರಾಮನಾಗಿ ಹುಟ್ಟುತ್ತಾನೆ. ಆಗ ಕೃಷ್ಣರೂಪಿ ರಾಮನು ಅವನಿಗೆ ತಮ್ಮನಾಗುತ್ತಾನೆ.

(ನು. ೩) ಹುಟ್ಟಿದ ತಾಣವ ಜರಿದು ಬೆಳೆದು ಅಣ್ಣನಿಗೆ ಬಾವನಾಗಿರುವ ಚೆಲುವ: ಕೃಷ್ಣ ಹುಟ್ಟಿದ ತಾಣವನ್ನು ಜರಿದು ಬೆಳೆದು ಅರ್ಜುನನಿಗೆ ಭಾವನಾಗುತ್ತಾನೆ. ನರನಾರಾಯಣಾವತಾರದಲ್ಲಿ ನರನೇ ಅಣ್ಣ, ನಾರಾಯಣನು ತಮ್ಮ. ಕೃಷ್ಣಾವತಾರದಲ್ಲಿ ನರನೇ ಅರ್ಜುನ, ನಾರಾಯಣನೇ ಕೃಷ್ಣ ; ಅಣ್ಣನಿಗೆ ಬಾವನಾಗುತ್ತಾನೆ.

(ನು. ೩) ತನ್ನ ಬಾವನ ಅಣ್ಣನಯ್ಯಂಗೆ ಪುತ್ರನಾದವನೆ : ಕೃಷ್ಣನ ಬಾವ ಅರ್ಜುನ, ಅವನ ಅಣ್ಣ ಧರ್ಮರಾಯ, ಅವನ ತಂದೆ ಯಮಧರ್ಮರಾಯ. ಅವನ ಮಗ ನಾರಾಯಣ. (ನರ ನಾರಾಯಣನ ಅವತಾರದಲ್ಲಿ)

ಕೀರ್ತನೆ ೨೬

(ನು. ೨) ಫುಲ್ಲನಾಭ : ಸೃಷ್ಟಿಕಾಲದಲ್ಲಿ ಬ್ರಹ್ಮಾಂಡದ ಗರ್ಭೋದಕದಲ್ಲಿ ಮಲಗಿದ್ದ ಹರಿ, ತನ್ನ ನಾಭಿಯಿಂದ ಹೊರಟ ಹದಿನಾಲ್ಕು ದಳಗಳುಳ್ಳ ಕಮಲದಲ್ಲಿ ಬ್ರಹ್ಮನನ್ನು ಸೃಷ್ಟಿಸಿದನು.

ಕೀರ್ತನೆ ೨೭

(ನು. ೧೦) ಮಾತೃ ಮೃಗಾರ್ದ : ಇಲ್ಲಿ ತಾಯಿಯನ್ನು ಕೊಂದ ಪರಶುರಾಮ ಹಾಗೂ ಮಾಯಾಜಿಂಕೆಯನ್ನು ಕೊಂದ ರಾಮ – ಇಬ್ಬರ ಪ್ರಸ್ತಾಪವಿದೆ. ಹರಿಯ ಹತ್ತು ಅವತಾರಗಳಲ್ಲಿ ಆರನೆಯ ಅವತಾರವಾದ ಪರಶುರಾಮ ಜಮದಗ್ನಿಮಹರ್ಷಿ ಮತ್ತು ರೇಣುಕೆಯರ ಮಗ. ಮಹಾ ಪರಾಕ್ರಮಿ. ರೇಣುಕೆ ಒಮ್ಮೆ ಗಂಗಾನದಿಗೆ ನೀರನ್ನು ತರಲು ಹೋದವಳು, ಅಲ್ಲಿ ತನ್ನ ಮಡದಿಯರ ಸಂಗಡ ಜಲಕ್ರೀಡೆಯಾಡುತ್ತಿದ್ದ ಚಿತ್ರರಥನೆಂಬ ಗಂಧರ್ವನನ್ನು ಕಂಡು, ಮೋಹಪರವಶೆಯಾಗಿ, ಪತಿಯ ಹೋಮಕಾಲವನ್ನು ಮರೆತು ತಡವಾಗಿ ಆಶ್ರಮಕ್ಕೆ ಹೋದಳು. ಕ್ರುದ್ಧನಾದ ಜಮದಗ್ನಿ ಅವಳ ಪಾತಿವ್ರತ್ಯವನ್ನು ಶಂಕಿಸಿ ಅವಳ ತಲೆಕಡಿಯುವಂತೆ ತನ್ನ ಪುತ್ರರಿಗೆ ಹೇಳುತ್ತಾನೆ. ಹಿರಿಯ ನಾಲ್ವರು ಸಮ್ಮತಿಸದಿದ್ದಾಗ, ಪರಶುರಾಮ ನಾಲ್ವರು ಅಣ್ಣಂದಿರನ್ನೂ, ತಾಯಿಯನ್ನೂ ಕೊಂದು, ಮರಳಿ ಸಂತುಷ್ಟನಾದ ಜಮದಗ್ನಿಯ ವರದಿಂದ ಎಲ್ಲರನ್ನೂ ಬದುಕಿಸಿಕೊಳ್ಳುತ್ತಾನೆ. (ಭಾ. ಸ್ಕಂ. ೯, ಅ. ೧೬)

(ನು. ೩೮) ನರಕಾಸುರ, ಅದಿತಿಕುಂಡಲ : ಭೂದೇವಿಯ ಮಗನಾದ ನರಕಾಸುರ, ವೈಷ್ಣವಾಸ್ತ್ರ ದೊರೆತ ಮೇಲೆ ಲೋಕಕಂಟಕನಾಗಿ ಇಂದ್ರನ ಶ್ವೇತಛತ್ರವನ್ನೂ, ಇಂದ್ರನ ತಾಯಿಯಾದ ಅದಿತಿಯ ಕರ್ಣಕುಂಡಲಗಳನ್ನೂ, ಇಂದ್ರನ ವಿಹಾರಕ್ಕಾಗಿ ಏರ್ಪಟ್ಟಿದ್ದ ಮೇರುಪರ್ವತದ ಮಣಿ ಶಿಖರವನ್ನೂ ಅಪಹರಿಸಿದ. ಇದರಿಂದ ನೊಂದ ಇಂದ್ರ, ಕೃಷ್ಣನಿಗೆ ದೂರಿತ್ತಾಗ ಕೃಷ್ಣ ನರಕಾಸುರನನ್ನು ಕೊಂದು ಇಂದ್ರನ ಶ್ವೇತಛತ್ರ ಇತ್ಯಾದಿಗಳನ್ನೂ, ಅದಿತಿಯ ಕರ್ಣಕುಂಡಲಗಳನ್ನೂ ಅವರಿಗೆ ಹಿಂದಿರುಗಿಸುತ್ತಾನೆ. (ಭಾ.ಸ್ಕಂ.೧೦ , ಅ.೫೯)

ಕೀರ್ತನೆ ೩೧

(ನು. ೧) ಸತ್ರಾಜಿತನ ಮಗಳು: ಯದುವಂಶದ ನಿಮ್ನನ ಮಗ ಸತ್ರಾಜಿತ, ಸತ್ರಾಜಿತನ ಮಗಳು ಸತ್ಯಭಾಮೆ. ಕೃಷ್ಣನ ಅಷ್ಟಮಹಿಷಿಯರಲ್ಲಿ ಒಬ್ಬಳು. (ಭಾ.ಸ್ಕಂ.೧೦. ಅ.೫೬)

(ನು.೩) ಪ್ರಾಗ್ಜ್ಯೋತಿಷಪುರವ ಭಗದತ್ತಗೆ ಕೊಟ್ಟ : ಕೃಷ್ಣ ನರಕಾಸುರನನ್ನು ಕೊಂದ ನಂತರ, ಅವನ ಮಗನಾದ ಭಗದತ್ತನಿಗೆ ಪ್ರಾಗ್ಜ್ಯೋತಿಷಪುರವನ್ನು ವಹಿಸಿಕೊಡುತ್ತಾನೆ.

(ಭಾ. ಸ್ಕಂ. ೧೦ – ೫೯)

ಕೀರ್ತನೆ ೩೯

(ನು. ೨) ಕಾಲನಾಗಿ ಜಗವ ತತ್ಕಾಲದಲ್ಲಿ ನುಂಗುವಂಗೆ : ಮಹಾಪ್ರಳಯದ ಪ್ರಾರಂಭದಲ್ಲಿ ಮನುಷ್ಯಮಾನದ ೪೦೦ ವರ್ಷಗಳ ಕಾಲ ಕ್ರಮವಾಗಿ ದುರ್ಭಿಕ್ಷೆ, ಪ್ರಚಂಡಮಾರುತ, ಅಖಂಡವೃಷ್ಟಿ, ಸಂಕರ್ಷಣನಿಂದ ಹೊರಟ ಮಹಾಜ್ವಾಲೆಗಳಿಂದ ಲೋಕಗಳ ನಾಶವಾಗುವುದು. ನಂತರ ೨೪ ತತ್ವಗಳು ಒಂದರಲ್ಲೊಂದು ಲಯವಾಗುತ್ತವೆ. ಎಲ್ಲವನ್ನೂ ಹರಿ ತನ್ನುದರದಲ್ಲಿಟ್ಟುಕೊಂಡು ಏಳುಕೋಟಿ ಗಾವುದ ಪರಿಮಿತ ಶಿಶುವಾಗಿ ಮಲಗುವನು. ಆಗ ಶ್ರೀದೇವಿಯು ನೀರಾಗಿಯೂ, ಭೂದೇವಿಯು ವಟಪತ್ರವಾಗಿಯೂ ದುರ್ಗೆಯು ಕತ್ತಲಾಗಿಯೂ ಪರಿಣಮಿಸುವರು. (ದಾಸಸಾಹಿತ್ಯದಲ್ಲಿ ಸೃಷ್ಟಿ ಪ್ರಕರಣ, ಪು. ೬೧–೮೬)

(ಕೀ. ೩೯, ನು. ೧೨) (ಕೀ. ೪೩. ನು. ೩) (ಕೀ. ೭೦, ನು. ೫)

(ನು. ೪) ಆನೆಗೊಲಿದು : ವಿಷ್ಣುಭಕ್ತನಾಗಿದ್ದ ಪಾಂಡ್ಯದೇಶದ ಅರಸ ಇಂದ್ರದ್ಯುಮ್ನ. ಒಮ್ಮೆ ಈತ ಅಗಸ್ತ್ಯಮಹರ್ಷಿಯನ್ನು ಗೌರವಿಸದ ಕಾರಣ, ಗಜ ಜನ್ಮ ಪಡೆಯುವಂತೆ ಶಪಿತನಾಗುತ್ತಾನೆ. ಗಜವಾಗಿ ಒಂದು ಕೊಳದಲ್ಲಿ ನೀರು ಕುಡಿಯುತ್ತಿದ್ದಾಗ, ಮೊಸಳೆಯೊಂದು ಬಂದು ಆನೆಯ ಕಾಲನ್ನು ಹಿಡಿದುಕೊಳ್ಳುತ್ತದೆ. ಆಗ ಆನೆ ಪೂರ್ವಜನ್ಮದ ಸಂಸ್ಕಾರದಿಂದಾಗಿ ವಿಷ್ಣುವನ್ನು ಮೊರೆ ಹೋದಾಗ, ವಿಷ್ಣು ಪ್ರತ್ಯಕ್ಷನಾಗಿ ಮೊಸಳೆಯನ್ನು ಕೊಂದಾಗ ಈತನ ಶಾಪ ವಿಮೋಚನೆ ಯಾಗುತ್ತದೆ.

(ಭಾ.೮,೪)

(ಕೀ. ೫೪, ನು.೧) (ಕೀ. ೭೦, ನು.೫) (ಕೀ.೮೨, ನು.೧) (ಕೀ.೧೦೮, ನು.೨)

(ನು. ೬) ತಾರಕಕೋಪದೇಶಕ : ಶಿವ. ಶಿವನು ವಿಷ್ಣುವಿನ ಸಹಸ್ರನಾಮವನ್ನು ತನ್ನ ಪತ್ನಿಯಾದ ಪಾರ್ವತಿಗೆ ಬಣ್ಣಿಸುತ್ತ ಅವುಗಳಲ್ಲೆಲ್ಲ ರಾಮನಾಮವೇ ಮಹತ್ವದ್ದೆಂದೂ, ತನಗೆ ಹರಿಯು ರಾಮರೂಪದಲ್ಲಿ ದರ್ಶನಕೊಟ್ಟು ಕೃತಾರ್ಥನನ್ನಾಗಿ ಮಾಡಿದನೆಂದೂ ರಾಮಾಯಣದ ಕಥೆಯನ್ನು ಗಿರಿಜೆಗೆ ತಿಳಿಸಿದಂತೆ ಆಖ್ಯಾಯಿಕೆಯಿದೆ. (ಹರಿಭಕ್ತಿಸುಧೆ, ಪು.೨೫೦) ಶಿವನನ್ನು ಭಸ್ಮಾಸುರನಿಂದ ರಕ್ಷಿಸಿದವನು ವಿಷ್ಣು. ಆದ್ದರಿಂದ ವಿಷ್ಣು ತಾರಕೋಪದೇಶಕಗೆ ತಾರಕನಾಗುತ್ತಾನೆ.

(ಸು.೧೦) ಅನ್ನಮಯನು : ಅನ್ನಮಯ, ಪ್ರಾಣಮಯ (ಮನೋಮಯ, ವಿಜ್ಞಾನಮಯ) ಆನಂದಮಯ ಇವೇ ಪಂಚಕೋಶಗಳು. ಇವುಗಳಲ್ಲಿ ಹರಿ ಇರುತ್ತಾನೆ.

ಕೀರ್ತನೆ ೪೩

(ಸು.೨) ವಿದುರನ ಕುಡಿಕೆ ಪಾಲೌತಣ : ಪಾಂಡವರ ದೂತನಾಗಿ ಕೃಷ್ಣ, ಕೌರವರಲ್ಲಿಗೆ ಹೋದಾಗ, ದುರ್ಯೋಧನನು ಅವನಿಗೆಂದೇ ಸಿದ್ಧಪಡಿಸಿದ್ದ ಭೋಜನವನ್ನು ನಿರಾಕರಿಸಿ ವಿದುರನ ಮನೆಗೆ ಊಟಕ್ಕೆ ಹೋಗುತ್ತಾನೆ. (ಮಹಾಭಾರತ, ಉದ್ಯೋಗಪರ್ವ)

(ಕೀ. ೧೧೧, ಸು. ೪)

ಕೀರ್ತನೆ ೫೦

(ಸು. ೩) ಕಣ್ಣಿಲೊಲಿದು ಕಟ್ಟಿಸಿಕೊಂಡನು : ಭಾಗವತ ದಶಮಸ್ಕಂಧ ಪೂರ್ವಾರ್ಧದ ಒಂದು ಪ್ರಸಂಗ. ಒಮ್ಮೆ ಯಶೋದೆ ಮೊಸರು ಕಡೆಯುತ್ತ ಕುಳಿತಿದ್ದವಳು ಹಸಿದು ಬಂದ ಕೃಷ್ಣನಿಗೆ ಮೊಲೆಯೂಡಿಸುತ್ತಿರುತ್ತಾಳೆ. ಅಷ್ಟರಲ್ಲೇ ಒಲೆಯ ಮೇಲಿಟ್ಟ ಹಾಲು ಉಕ್ಕಿತೆಂದು ಕೃಷ್ಣನನ್ನು ಕೆಳಗಿಳಿಸಿ ಒಳಗೆ ಹೋಗುತ್ತಾಳೆ. ಇದರಿಂದ ಸಿಟ್ಟುಗೊಂಡ ಕೃಷ್ಣ ಮೊಸರಿನ ಗಡಿಗೆಯನ್ನು ಒಡೆದು ಅದರಲ್ಲಿದ್ದ ಬೆಣ್ಣೆಯನ್ನು ತಾನು ತಿಂದು ಮಿಕ್ಕಿದ್ದನ್ನು ಕೋತಿಗೆ ತಿನ್ನಿಸುತ್ತ ಕುಳಿತಿರುತ್ತಾನೆ. ಇದನ್ನು ಕಂಡ ಯಶೋದೆ ಅವನನ್ನು ಹಿಡಿದು ಹಗ್ಗದಿಂದ ಒರಳಿಗೆ ಕಟ್ಟಬೇಕೆಂದು ಹಗ್ಗ ತಂದು ಎಷ್ಟೇ ಪ್ರಯತ್ನಿಸಿದರೂ ಹಗ್ಗ ಎರಡಂಗುಲ ಸಾಲದೆ ಬರುತ್ತಿತ್ತು. ಕೊನೆಗೆ ತಾಯಿಯ ಶ್ರಮವನ್ನು ಕಂಡು ಕರಗಿದ ಕೃಷ್ಣ ತಾನೇ ಕರುವಿನ ಹಗ್ಗದಿಂದ ಕಟ್ಟಿಸಿಕೊಳ್ಳುತ್ತಾನೆ. (ಭಾ.ಸ್ಕಂ.೧೦, ಅ.೯)

ಕೀರ್ತನೆ ೫೪

(ಸು.೨) ಮರೆಯದೆ ಕರೆದರರಿದಂಬರವ ವರಧಿಸ್ಯುಡಿಸಿದ: ದುರ್ಯೋಧನನ ಸಭೆಯಲ್ಲಿ ದುಶ್ಯಾಸನನಿಂದ ದ್ರೌಪದಿಯ ವಸ್ತ್ರಾಪಹರಣ ನಡೆದಾಗ, ದ್ರೌಪದಿ ಕೃಷ್ಣನನ್ನು ಸ್ಮರಿಸಿದಾಗ, ಆತ ಆಕೆಗೆ ಅಕ್ಷಯವಸ್ತ್ರದಾನ ಮಾಡಿದ ಸಂದರ್ಭ.

ಕೀರ್ತನೆ ೫೭

(ಸು. ೨) ಶೇಷಶೀರ್ಷ ನೃತ್ಯ : ಕಾಳಿಂದಿ ಮಡುವಿನಲ್ಲಿ ಬಂದು ಸೇರಿದ್ದ ಕಾಳಿಯನೆಂಬ ಸರ್ಪದ ವಿಷ ಜ್ವಾಲೆಯಿಂದ ಆ ಮಡುವಿನ ನೀರೆಲ್ಲ ವಿಷಮಯವಾಗಿ ಆ ನೀರನ್ನು ಕುಡಿದ ಪ್ರಾಣಿಗಳೆಲ್ಲ ಸಾಯತೊಡಗಿದವು. ಈ ವಿಷಯ ತಿಳಿದ ಕೃಷ್ಣ ಆ ಮಡುವಿಗೆ ಧುಮುಕಿ ಕಾಳಿಯನ ಹೆಡೆ ತುಳಿದು ಅದರ ಮದವಿಳಿಸುತ್ತಾನೆ. ಆ ಹೊತ್ತಿಗೆ ಕಾಳಿಯನ ಪತ್ನಿಯರೆಲ್ಲ

ಬಂದು ಕೃಷ್ಣನಲ್ಲಿ ಪತಿಭಿಕ್ಷವನ್ನು ಬೇಡಿದ್ದರಿಂದ ಅವರಿಗೆ ಅಭಯವಿತ್ತು ಕಾಳಿಯನನ್ನು ಸಮುದ್ರಕ್ಕೆ ಕಳುಹಿಸಿ ಮಡುವನ್ನು ಸ್ವಚ್ಛಗೊಳಿಸುತ್ತಾನೆ. (ಭಾ.ಸ್ಕಂ.೧೦, ಅ.೧೬)

(ನು. ೨) ಕಂಸವಿನಾಶ : ಯದುವಂಶದ ಉಗ್ರಸೇನನ ರಾಣಿಯನ್ನು ಒಮ್ಮೆ ದ್ರುಮಿಲನೆಂಬ ರಾಕ್ಷಸ, ಉಗ್ರಸೇನನ ರೂಪದಿಂದ ಹೋಗಿ ಸೇರುತ್ತಾನೆ. ಅನಂತರ ನಿಜಸ್ಥಿತಿಯನ್ನು ತಿಳಿದ ರಾಣಿ ರೋಷದಿಂದ 'ನಿನ್ನ ದುರ್ಬೀಜದಿಂದ ಜನಿಸಿದವನು ಯದುವಂಶದವನಿಂದಲೇ ಸಾಯಲಿ, ಎಂದು ಶಾಪವೀಯುತ್ತಾಳೆ. ಅದರಂತೆ ಅವಳಿಗೆ ಜನಿಸಿದ ಕಂಸನನ್ನು, ಕಂಸನ ಚಿಕ್ಕಪ್ಪನ ಮಗಳು ದೇವಕಿಯ ಮಗ ಕೃಷ್ಣ ಕೊಲ್ಲುತ್ತಾನೆ.
(ಪು. ನಾ. ಚೂ. ಪು. ೭೪, ೭೫) (ಕೀ.೭೯, ನು.೪) (ಕೀ.೨೯೪, ನು.೨)

ಕೀರ್ತನೆ ೬೬

(ನು. ೩) ಸನ್ನುನಿಜನ್ನ ಭಾರ್ಯಾನ್ನವನುಣ್ಣುವ : ಕೃಷ್ಣ ಗೋಕುಲದಲ್ಲಿದ್ದಾಗ ಒಂದು ದಿನ ಗೊಲ್ಲ ಬಾಲಕರೊಡನೆ ದನ ಕಾಯಲು ಹೋಗಿದ್ದಾಗ ಕಾಡಿನಲ್ಲಿ ಹಸಿವು ಹೆಚ್ಚಾಗಿ, ಅನ್ನ ಬೇಡಲು ಗೊಲ್ಲ ಬಾಲಕರನ್ನು ಅಲ್ಲಿಗೆ ಸಮೀಪದಲ್ಲಿ ಯಜ್ಞ ಮಾಡುತ್ತಿದ್ದ ಬ್ರಾಹ್ಮಣರಲ್ಲಿಗೆ ಕಳಿಸುತ್ತಾನೆ. ಆ ಬ್ರಾಹ್ಮಣರು ಅವರಿಗೆ ಅನ್ನ ನೀಡದೆ ಅಟ್ಟುತ್ತಾರಾದರೂ, ಕೃಷ್ಣ ಭಕ್ತೆಯರಾದ ಅವರ ಪತ್ನಿಯರು ತಾವೇ ಅನೇಕ ವಿಧವಾದ ಭಕ್ಷ್ಯ ಭೋಜ್ಯಗಳನ್ನು ತಂದು ಅವರಿಗೆಲ್ಲ ಕೊಡುತ್ತಾರೆ. ಕೃಷ್ಣ ಅದರಿಂದ ಸಂತುಷ್ಟನಾಗಿ ಅವರನ್ನು ಅನುಗ್ರಹಿಸುತ್ತಾನೆ. ಅನಂತರ ಬ್ರಾಹ್ಮಣರು ಕೃಷ್ಣನನ್ನರಿಯದ ತಮ್ಮ ಮಂದಬುದ್ಧಿಗೆ ಪಶ್ಚಾತ್ತಾಪ ಪಡುತ್ತಾರೆ.
(ಕೀ. ೯೭, ನು. ೧೩) (ಭಾ.ಸ್ಕಂ.೧೦, ಅ.೨೩)

ಕೀರ್ತನೆ ೭೦

(ನು. ೧) ಶೂಲಿಯ ಮುತ್ತಿದ .... : ವಿಷ್ಣುವು ಮೋಹಿನೀರೂಪದಿಂದ ದೈತ್ಯರನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನು ಕುಡಿಸಿದನೆಂಬ ವೃತ್ತಾಂತವನ್ನು ಕೇಳಿದ ರುದ್ರ, ವಿಷ್ಣುಲೋಕಕ್ಕೆ ಬಂದು ತನಗೂ ಆ ಮೋಹಿನೀ ರೂಪವನ್ನು ತೋರಿಸೆಂದು ವಿಷ್ಣುವನ್ನು ಪ್ರಾರ್ಥಿಸುತ್ತಾನೆ. ಅದಕ್ಕೆ ಒಪ್ಪಿದ ವಿಷ್ಣು ಮೋಹಿನಿಯ ರೂಪದಲ್ಲಿ ಪ್ರಕಟವಾದಾಗ ಆಕೆ ನಿಜವಾದ ಹೆಣ್ಣೆಂದೇ ಭ್ರಮಿಸಿದ ಶಿವ ಮೋಹಗೊಳ್ಳುತ್ತಾನೆ. (ಭಾ.ಸ್ಕಂ.೮, ಅ.೧೨)
(ಕೀ. ೧೩೮, ನು. ೩೩) (ಕೀ. ೪೪೭, ನು. ೨)

ಕೀರ್ತನೆ ೭೨

(ನು. ೨) ಗಂಧರ್ವ: ದೇವಗಾಯಕರು (ಪುನಾಚೂ. ಪು.೨೯೪)

(ನು. ೨) ತುಂಬುರ : ದೇವಗಂಧರ್ವರಲ್ಲಿ ಒಬ್ಬ. ಕಶ್ಯಪಮುನಿಯಿಂದ ಅರಿಷ್ಟೆಯೆಂಬ ಪತ್ನಿಯಲ್ಲಿ ಜನಿಸಿದ. (ಪುನಾಚೂ, ಪು.೨೬೪)

(ನು. ೫) ಪಾಕಹ: ಪಾಕ ಒಬ್ಬ ರಾಕ್ಷಸ. ಇವನನ್ನು ಕೊಂದ ಇಂದ್ರನಿಗೆ ಪಾಕಹ ಎಂಬ ಹೆಸರು ಬಂದಿದೆ.

ಕೀರ್ತನೆ ೭೭

(ನು. ೪) ಶಕಟ: ಕಂಸ ಕೃಷ್ಣನನ್ನು ಕೊಲ್ಲಲೆಂದು ಕಳುಹಿಸಿದ ಶಕಟಾಸುರ ಬಂಡಿಯ ರೂಪದಲ್ಲಿ ಬಂದಾಗ, ಮಗುವಾಗಿದ್ದ ಕೃಷ್ಣ ಅವನನ್ನು ಒದೆಯುತ್ತಾನೆ. ಬಂಡಿ ಪುಡಿ ಪುಡಿಯಾಗಿ ಶಕಟಾಸುರ ಸಾಯುತ್ತಾನೆ. (ಭಾ.ಸ್ಕಂ.೧೦, ಅ.೭)

(ಕೀ. ೪೫, ನು. ೪) (ಕೀ. ೯೬, ನು.೮) (ಕೀ. ೧೩೮, ನು. ೪.)

(ನು. ೪) ಪೂತನಿ: ಪೂತನಿ ಕಂಸದ ಪರಿವಾರದ ಒಬ್ಬ ರಾಕ್ಷಸಿ. ಕಂಸದ ಅಪ್ಪಣೆಯಂತೆ ಸುಂದರ ಸ್ತ್ರೀಯೊಬ್ಬಳ ವೇಷದಲ್ಲಿ ಬಂದು ಮಗು ಕೃಷ್ಣನಿಗೆ ಮೊಲೆಯುಣಿಸುವ ನೆವದಲ್ಲಿ ಕೊಲ್ಲಲೆತ್ನಿಸಿದಾಗ, ಕೃಷ್ಣನೇ ಈಕೆಯ ಪ್ರಾಣವನ್ನು ಹೀರಿ ಕೊಲ್ಲುತ್ತಾನೆ.
(ಭಾ.ಸ್ಕಂ. ೧೦, ಅ.೬)

(ಕೀ.೪೫, ನು.೩) (ಕೀ.೧೩೮ ನು.೪, ನು.೬೪)

(ನು. ೪) ತೃಣಾವರ್ತ: ತೃಣಾವರ್ತ ಒಬ್ಬ ರಾಕ್ಷಸ. ಕಂಸನ ಆಜ್ಞೆಯಂತೆ ಬಲರಾಮ ಕೃಷ್ಣರನ್ನು ಕೊಲ್ಲುವುದಕ್ಕಾಗಿ ಬಿರುಗಾಳಿಯ ರೂಪದಿಂದ ಬಂದು ಅವರಿಬ್ಬರನ್ನೂ ಎತ್ತಿಕೊಂಡು ಹೋಗುತ್ತಿದ್ದಾಗ ಕೃಷ್ಣ ಗರಿಮಾಸಿದ್ಧಿಯಿಂದ ದೇಹವನ್ನು ಭಾರವಾಗಿ ಮಾಡಿ ತೃಣಾವರ್ತನ ಕುತ್ತಿಗೆಯ ಮೇಲೆ ಗುದ್ದಿ ಅವನನ್ನು ಕೊಂದ. (ಭಾ. ಸ್ಕಂ. ೧೦, ಅ. ೭೦)
(ಕೀ. ೪೫, ನು. ೩) (ಕೀ. ೧೩೮, ನು. ೪)

ಕೀರ್ತನೆ ೮೦

(ನು. ೩) ಸನಕಾದ್ಯರು : ಸನಕ, ಸನತ್ಕುಮಾರ, ಸನತ್ಸುಜಾತ, ಸನಂದನರು ಸೃಷ್ಟಿಯ ಆದಿಯಲ್ಲಿ ಬ್ರಹ್ಮನ ಮಾನಸ ಪುತ್ರರು. ಇವರು ಮಹಾತಪಸ್ವಿಗಳು, ಜ್ಞಾನಸಂಪನ್ನರು.

ಕೀರ್ತನೆ ೮೧

(ಪ.) ನರನ ಬಂಡಿಯ ಬೋವ : ಕುರುಕ್ಷೇತ್ರದ ಯುದ್ಧದಲ್ಲಿ ಕೃಷ್ಣ ಅರ್ಜುನನಿಗೆ ಸಾರಥಿಯಾಗಿದ್ದನು.

(ನು. ೩) ರಥವಿಳೆಗೊತ್ತಿ ಭಕ್ತನ .... ತಲೆಯನುಳುಹಿದ : ಕರ್ಣಾರ್ಜುನರಿಗೆ ಘೋರ ಯುದ್ಧ ನಡೆಯುತ್ತಿದ್ದಾಗ, ಕರ್ಣ ಅರ್ಜುನನ ಕೊರಳಿಗೆ ಗುರಿಯಿಟ್ಟು ಪ್ರಯೋಗಿಸಿದ ನಾಗಾಸ್ತ್ರದ ಗುರಿಯನ್ನು ತಪ್ಪಿಸುವುದಕ್ಕಾಗಿ ಕೃಷ್ಣ ಅರ್ಜುನನ ರಥವನ್ನು ನೆಲಕ್ಕೆ ಕುಸಿಯುವಂತೆ ಮಾಡಿದ. ಇದರಿಂದ ನಾಗಾಸ್ತ್ರವು ಅರ್ಜುನನ ಕಿರೀಟವನ್ನು ಮಾತ್ರ ಉರುಳಿಸಿತು

(ಪುನಾಚೂ, ಪು. ೧೫೦)

(ನು. ೪) ಕಲಶಜಭವ ....: ಅಶ್ವತ್ಥಾಮ ಪಾಂಡವರ ವಧೆಗಾಗಿ ಐಷೀಕಾಸ್ತ್ರವನ್ನು ಪ್ರಯೋಗಿಸಿದಾಗ ಕೃಷ್ಣ ಅರ್ಜುನನಿಂದ ಪ್ರತ್ಯಸ್ತ್ರವನ್ನು ಪ್ರಯೋಗ ಮಾಡಿಸುತ್ತಾನೆ. ವ್ಯಾಸ, ನಾರದರ ಮಾತಿನಂತೆ ಅರ್ಜುನ ತನ್ನ ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊಂಡರೂ, ಅಶ್ವತ್ಥಾಮ ಒಪ್ಪದೆ ಅಸ್ತ್ರವನ್ನು ಅಭಿಮನ್ಯುವಿನ ಪತ್ನಿ ಉತ್ತರೆಯ ಗರ್ಭದ ಮೇಲೆ ಬೀಳ ಹೇಳಿದಾಗ ಕೃಷ್ಣ ಉತ್ತರೆಯ ಗರ್ಭವನ್ನು ರಕ್ಷಿಸಿ, ಅಶ್ವತ್ಥಾಮನಿಗೆ ಶಾಪ ಕೊಡುತ್ತಾನೆ. (ಮಹಾಭಾರತ, ಸೌಪ್ತಿಕ ಪರ್ವ)

(ಕೀ. ೯೭, ನು. ೨೦) (ಕೀ. ೩೬೪, ನು. ೨) (ಕೀ. ೪೧೪, ನು. ೨)

ಕೀರ್ತನೆ ೮೨

(ನು. ೨) ಶೂಲಿಯ ಮತಿಕದ್ದು ....: ಭಸ್ಮಾಸುರನೆಂಬ ರಾಕ್ಷಸ ತಾನು ಯಾರ ತಲೆಯ ಮೇಲೆ ಕೈ ಇಟ್ಟರೂ ಅವರು ಸುಟ್ಟು ಭಸ್ಮವಾಗುವಂತೆ ಈಶ್ವರನಿಂದ ವರವನ್ನು ಪಡೆದ. ಹೀಗೆ ವರ ಪಡೆದ ಆ ರಾಕ್ಷಸ ಈಶ್ವರನಿಗೇ ಮೃತ್ಯುಪ್ರಾಯನಾದ. ಆಗ ಈಶ್ವರ ವಿಷ್ಣುವನ್ನು ಪ್ರಾರ್ಥಿಸಲು, ವಿಷ್ಣು ಮೋಹಿನಿಯ ರೂಪ ತಾಳಿ, ಭಸ್ಮಾಸುರನ ಮನಸ್ಸನ್ನಾಕರ್ಷಿಸಿ ಆಚಮನ ಸಂಕಲ್ಪದ ನೆವದಿಂದ ಭಸ್ಮಾಸುರನು ಹಿಂದೆ ಮುಂದೆ ಆಲೋಚಿಸದೆ ತನ್ನ ಕೈಯನ್ನು ತಲೆಯ ಮೇಲಿಟ್ಟುಕೊಂಡು ಸುಟ್ಟು ಬೂದಿಯಾಗುವಂತೆ ಮಾಡಿದನು. ('ಶ್ವೇತಾದ್ರಿ ಸಂದೇಶ' – ಶ್ವೇತಾಚಲ ಮಹಾತ್ಮೆ, ೪–೫ ನೆಯ ಅಧ್ಯಾಯಗಳು)

(ಕೀ. ೯೭, ನು.೩) (ಕೀ.೧೦೦, ನು.೨) (ಕೀ.೧೨೭, ನು.೧) (ಕೀ. ೧೩೮, ನು. ೩೧, ೩೮, ೪೩, ೪೯) (ಕೀ. ೧೩೯, ನು. ೧) (ಕೀ. ೧೪೭, ನು. ೧) (ಕೀ. ೨೭೮)

ಕೀರ್ತನೆ ೮೩

(ನು. ೩) ಪೂರ್ಣಪ್ರಜ್ಞರಿಗೊಲಿದು ದ್ವಾರಕೆಯ ಮಣ್ಣಿನೊಳು ಪ್ರಕಟಿಸಿದನ: ದ್ವಾರಕೆಯಿಂದ ಹೊರಟ ಒಂದು ಹಡಗು ಉಡುಪಿಯ ಸಮೀಪದ ಮಲ್ಪೆಯ ಹತ್ತಿರ ಬಿರುಗಾಳಿಗೆ ಸಿಕ್ಕಿ ತತ್ತರಿಸುತ್ತಿದ್ದಾಗ, ಅದನ್ನು ಬಿರುಗಾಳಿಯಿಂದ ರಕ್ಷಿಸಿದ ಶ್ರೀ ಮಧ್ವಾಚಾರ್ಯರು ಹಡಗಿನ ಒಡೆಯನಿಂದ, ಆತನ ಒತ್ತಾಯಕ್ಕೆ ಕಟ್ಟುಬಿದ್ದು ಕೃಷ್ಣನ ಮೂರ್ತಿಯೊಂದನ್ನು ಪಡೆದರು. ಅದನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರೆಂದು ಪ್ರತೀತಿ ಇದೆ. (ಕೀ. ೯೩)

ಕೀರ್ತನೆ ೮೫

(ನು. ೨) ಹಲವು ಕಾಲವು .... ಅಹಲ್ಯೆ : ರಾಮಾಯಣದ ಬಾಲಕಾಂಡದಲ್ಲಿ ಬರುವ ಅಹಲ್ಯೋದ್ಧರಣದ ಪ್ರಸಂಗ.

ಕೀರ್ತನೆ ೮೬

(ನು. ೧) ಪೌಲಸ್ತ್ಯ ಅನುಜಗೊಲಿದು : ಪೌಲಸ್ತ್ಯ=ರಾವಣ. ಅವನ ತಮ್ಮ ವಿಭೀಷಣ. ಅವನ ಧರ್ಮಬುದ್ಧಿಗೆ ಒಲಿದ ರಾಮ, ರಾವಣ ವಧೆಯಾದ ಮೇಲೆ ಲಂಕೆಗೆ ಅವನನ್ನೇ ಅರಸನನ್ನಾಗಿ ಮಾಡಿದ.

ಕೀರ್ತನೆ ೮೭

(ನು. ೧) ಅಜಾಮಿಳ : ಅಜಾಮಿಳ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವನಾಗಿದ್ದರೂ ಕೈಹಿಡಿದ ಪತ್ನಿಯನ್ನೂ, ತಂದೆ-ತಾಯಿಗಳನ್ನೂ ತ್ಯಜಿಸಿ, ಶೂದ್ರ ಸ್ತ್ರೀಯೊಬ್ಬಳಲ್ಲಿ ಮೋಹಗೊಂಡು ದುರಾಚಾರಿಯಾಗಿದ್ದನು. ಇಂಥವನು ತನ್ನ ಅಂತ್ಯಕಾಲದಲ್ಲಿ ತನ್ನ ಮಗ ನಾರಾಯಣನನ್ನು 'ನಾರಗ' ಎಂದು ಕರೆಯಲು ಆ ಕೂಗಿಗೆ ಒಲಿದ ಹರಿ ಆತನಿಗೆ ಸದ್ಗತಿಯನ್ನಿತ್ತನು. (ಭಾ.ಸ್ಕಂ.೬, ಅ.೧-೨)

ಕೀರ್ತನೆ ೮೯

(ನು. ೧) ದನುಸುತಹರ : ಧರಣಿ ದಕ್ಷಬ್ರಹ್ಮರ ಮಗಳು ದನು. ಈಕೆ ಕಶ್ಯಪನಿಂದ ಹಿರಣ್ಯಕಶಿಪು ನರಕ ಮುಂತಾದ ನಲವತ್ತು ಮಂದಿ ಪುತ್ರರನ್ನು ಪಡೆದಳು. ಈಕೆಯ ಮಗ ಹಿರಣ್ಯಕಶಿಪುವನ್ನು ವಿಷ್ಣು ನರಸಿಂಹಾವತಾರಿಯಾಗಿ ಕೊಲ್ಲುತ್ತಾನೆ. ಈ ಕಾರಣದಿಂದ ವಿಷ್ಣು ದನುಸುತಹರನೆನಿಸಿದ. (ಪುನಾಚೂ. ಪು.೨೮೫)

(ನು. ೧) ಧನುಸಂಹರ : ಹರಿ ಶಿವಧನುಸ್ಸನ್ನು ಮುರಿದ ಎರಡು ಸಂದರ್ಭಗಳಿವೆ. ರಾಮಾವತಾರದಲ್ಲಿ ಶಿವಧನುವನ್ನೆತ್ತಿ (ಎತ್ತಿದ ಸಂದರ್ಭದಲ್ಲಿ ಧನುಸ್ಸು ಮುರಿಯುತ್ತದೆ) ಸೀತೆಯನ್ನು ವರಿಸುತ್ತಾನೆ. (ರಾಮಾಯಣ, ಬಾಲಕಾಂಡ). ಕೃಷ್ಣಾವತಾರದಲ್ಲಿ ಬಿಲ್ಲಹಬ್ಬಕ್ಕೆಂದು ಕಂಸನ ಆಹ್ವಾನದ ಮೇರೆಗೆ ಮಥುರೆಗೆ ಬಂದ ಕೃಷ್ಣ ಅಲ್ಲಿದ್ದ ಶಿವಧನುಸ್ಸನ್ನು ಮುರಿಯುತ್ತಾನೆ. (ಭಾ.ಸ್ಕಂ.೧೦, ಅ.೪೩)

(ನು. ೨) ಅವನಿಜಾಂತಕ: ವಿಷ್ಣು ವರಾಹಾವತಾರಿಯಾಗಿದ್ದಾಗ ಆತನ ದೇಹದಿಂದ ಒಂದು ತೊಟ್ಟು ಬೆವರು ನೆಲದ ಮೇಲೆ ಬೀಳಲಾಗಿ ಭೂದೇವಿಯಲ್ಲಿ ಜನಿಸಿದವನು ನರಕಾಸುರ (ಭೌಮಾಸುರ). ಭೂದೇವಿ ವಿಷ್ಣುವನ್ನು ಪ್ರಾರ್ಥಿಸಿ ಇವನಿಗೆ ವೈಷ್ಣವಾಸ್ತ್ರವನ್ನು ಕೊಡಿಸಿದ್ದರಿಂದ

ಬಲಗೊಂಡ ನರಕಾಸುರ ಲೋಕಕಂಟಕನಾದಾಗ ಕೃಷ್ಣ ಅವನನ್ನು ಕೊಂದು ಅವನ ಅಂತಃಪುರದಲ್ಲಿದ್ದ ಹದಿನಾರು ಸಾವಿರ ಮಂದಿ ಸ್ತ್ರೀಯರನ್ನೂ ವಿವಾಹವಾದನು. (ಪುನಾಚೂ, ಪು. ೩೬೭)

(ನು. ೨) **ವನಭ್ರಮಣ** : ರಾಮಾವತಾರದಲ್ಲಿ ಪಿತೃವಾಕ್ಯ ಪರಿಪಾಲನೆಗಾಗಿ ಹದಿನಾಲ್ಕು ವರ್ಷ ವನವಾಸ ಮಾಡಿದ.

(ನು. ೨) **ಅನಿಮಿತ್ತಜ**: ವಿಷ್ಣು ಸ್ವಯಂಭೂ.

(ನು. ೨) **ಅನಸೂಯಜ** : ಅತ್ರಿಮುನಿ ಸಂತಾನಾರ್ಥವಾಗಿ ತಪಸ್ಸು ಮಾಡಿದಾಗ, ಪ್ರಸನ್ನರಾದ ತ್ರಿಮೂರ್ತಿಗಳು ತಮ್ಮ ಒಬ್ಬೊಬ್ಬರ ಅಂಶದಿಂದಲೂ ಒಬ್ಬೊಬ್ಬ ಮಗ ಹುಟ್ಟುವನೆಂದು ಅನುಗ್ರಹಿಸಿದರು. ಅಂತೆಯೇ ಬ್ರಹ್ಮನ ಅಂಶದಿಂದ ಚಂದ್ರನೂ, ವಿಷ್ಣುವಿನ ಅಂಶದಿಂದ ದತ್ತಾತ್ರೇಯನೂ, ಶಿವನ ಅಂಶದಿಂದ ದೂರ್ವಾಸ ಮುನಿಯೂ ಅತ್ರಿ ಅನಸೂಯೆಯರ ಮಕ್ಕಳಾಗಿ ಜನಿಸಿದರು. ಈ ಕಾರಣದಿಂದ ಹತ್ತವತಾರಿಯಾದ ವಿಷ್ಣುವನ್ನು ಅನಸೂಯಜ ಎನ್ನಲಾಗಿದೆ. (ಪುನಾಚೂ, ಪು. ೨೮೨)

(ನು. ೨) **ಅನಿಮಿಷೇಂದ್ರಾನುಜ** : ವಿಷ್ಣುವು ಬಲಿಚಕ್ರವರ್ತಿಯ ಸೊಕ್ಕನ್ನು ಮುರಿಯುವುದಕ್ಕಾಗಿ ಅದಿತಿದೇವಿಯಲ್ಲಿ ಕಶ್ಯಪಮುನಿಯಿಂದ ಇಂದ್ರನ ತಮ್ಮನಾಗಿ (ವಾಮನಾವತಾರಿಯಾಗಿ) ಜನಿಸಿದ್ದರಿಂದ ಉಪೇಂದ್ರ, ಅನಿಮಿಷೇಂದ್ರಾನುಜ ಎಂಬ ಹೆಸರು ರೂಢಿಯಲ್ಲಿದೆ. (ಪುನಾಚೂ, ಪು. ೫೫೭)

ಕೀರ್ತನೆ ೯೦

(ನು. ೨) **ಅಂಗುಟದಿ ಬೊಮ್ಮಾಂಡವ ಸೀಳಿದ**: ವಿಷ್ಣು ವಾಮನಾವತಾರದಲ್ಲಿ ತ್ರಿವಿಕ್ರಮನಾಗಿ ಬೆಳೆದು ಒಂದು ಹೆಜ್ಜೆಯಿಂದ ಭೂಮಿಯನ್ನಾವರಿಸಿ, ಎರಡನೆಯ ಹೆಜ್ಜೆಯಿಂದ ಆಕಾಶವನ್ನು ಅಳೆದಾಗ, ಅವನ ಪಾದ ಬ್ರಹ್ಮಾಂಡ ಕಟಹವನ್ನು ಸೀಳಿ ಸತ್ಯಲೋಕದಲ್ಲಿ ಅದರ ಉಗುರಿನ ಕಾಂತಿ ಕಾಣಿಸುತ್ತದೆ. ಆಗ ಬ್ರಹ್ಮ ತನ್ನ ಕಮಂಡಲದ ನೀರಿನಿಂದ ಅದಕ್ಕೆ ಅಭಿಷೇಕ ಮಾಡುತ್ತಾನೆ. ಆ ನೀರೇ ಗಂಗೆಯಾಗಿ ಹರಿಯುತ್ತದೆ. (ಭಾ.ಸ್ಕಂ.೮, ಅ.೧೮-೨೩)

ಕೀರ್ತನೆ ೯೬

(ನು. ೬) **ಸಾವಿರಕೈಯುವನಳಿದು** : ಚಂದ್ರವಂಶದ ಕೃತವೀರ್ಯನ ಮಗ ಕಾರ್ತವೀರ್ಯ. ಇವರಿಗೆ ದತ್ತಾತ್ರೇಯನಿಂದ ಯುದ್ಧಕಾಲದಲ್ಲಿ ಮಾತ್ರ ಸಹಸ್ರ ಬಾಹುಗಳು ಉತ್ಪತ್ತಿಯಾಗುವ ವರ ಪ್ರಾಪ್ತಿಯಾಯ್ತು. ಒಮ್ಮೆ ಜಮದಗ್ನಿ ಮುನಿಯ ಐವರು ಕುಮಾರರೂ ಆಶ್ರಮದಿಂದ ಹೊರಗೆ ಹೋಗಿರಲು ಕಾರ್ತವೀರ್ಯಾರ್ಜುನನು ಜಮದಗ್ನಿಯ ಆಶ್ರಮಕ್ಕೆ

ಬಂದು ಆಶ್ರಮದ ಹೋಮಧೇನುವಿನ ಕರುವನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋದನು. ಆಶ್ರಮಕ್ಕೆ ಹಿಂದಿರುಗಿದ ಪರಶುರಾಮ ಇದನ್ನು ತಿಳಿದು ಕ್ರೋಧಗೊಂಡು ಅವನನ್ನು ಅಟ್ಟಿಕೊಂಡು ಹೋಗಿ ಅವನ ಸಾವಿರ ತೋಳುಗಳನ್ನು ಕಡಿದು ಅವನ ರಾಜ್ಯವನ್ನು ಹಾಳುಮಾಡಿದನು. (ಪುಭಾಕೋ. ಪು.೧೨೦)

(ನು. ೮) ಗೂಳಿ ಹಕ್ಕಿ ಸೀಳಿ : ಅರಿಷ್ಟನೆಂಬ ಅಸುರ ಕಂಸನ ಅಪ್ಪಣೆಯಂತೆ, ನಂದಗೋಕುಲದಲ್ಲಿ ಗೋವುಗಳನ್ನು ಕಾಯುತ್ತಿದ್ದ ಕೃಷ್ಣನನ್ನು ಕೊಲ್ಲಲೆಂದು ವೃಷಭರೂಪದಿಂದ ಬಂದಾಗ, ಕೃಷ್ಣನಿಂದ ಹತನಾಗುತ್ತಾನೆ. (ಭಾ.ಸ್ಕಂ.೧೦, ಅ.೩೬)

ಬಕ ಕಂಸನ ಪರಿವಾರದ ಒಬ್ಬ ರಾಕ್ಷಸ. ಇವನು ಬಕ ಪಕ್ಷಿಯ ರೂಪದಿಂದ ಕೃಷ್ಣನನ್ನು ಕೊಲ್ಲಲು ಬಂದಾಗ ಕೃಷ್ಣ ಆ ಪಕ್ಷಿಯ ಎರಡು ಕೊಕ್ಕುಗಳನ್ನು ಎರಡು ಕೈಗಳಿಂದ ಹಿಡಿದು ಸೀಳಿ ಕೊಂದ. (ಭಾ.ಸ್ಕಂ.೧೦, ಅ.೧೧)

ಕೀರ್ತನೆ ೯೭

(ಪ.) ನಾರದರ ಮುಖದಿಂದ ನರಕಸ್ಥರೆಬ್ಬಿಸಿದೆ : ಒಂದು ಬಾರಿ ನಾರದ ವೈಕುಂಠಕ್ಕೆ ಹೋಗಿ ಶ್ರೀಹರಿಯ ದರ್ಶನ ಮಾಡಿ, ಅವನನ್ನು ಸ್ತುತಿಸಿ, ತಿರುಗಿ ಬರುವಾಗ ಯಮಲೋಕಕ್ಕೆ ಹೋದನು. ಅಲ್ಲಿಯ ಜೀವಿಗಳ ನರಕಯಾತನೆಯನ್ನು ಕಂಡು ಮನಮರುಗಿ ಹರಿನಾಮವಿರಲಿಕ್ಕೆ ಈ ಪರಿಯ ಯಾತನೆಪಡುವುದೇಕೆಂದು ಹೇಳಿ ಒಂದು ಬಂಡೆಯ ಮೇಲೆ ಕುಳಿತು ವೀಣೆ ನುಡಿಸುತ್ತ ಹರಿನಾಮಸ್ಮರಣೆಗೆ ತೊಡಗಿದಾಗ ಅದನ್ನು ಕೇಳಿದ ನರಕದಲ್ಲಿದ್ದವರೆಲ್ಲ ತಮ್ಮ ಬಂಧನಗಳಿಂದ ಮುಕ್ತರಾಗಿ ಸ್ವರ್ಗಕ್ಕೆ ಹೋದರು.

(ಶ್ರೀ ಪುರಂದರದಾಸರ ಸಾಹಿತ್ಯ – ೨, ಪು. ೨೪೪) (ಕೀ.೩೬೪, ನು. ೧)

(ನು. ೨) ಪೃಥುಚಕ್ರವರ್ತಿಗೆ ಪ್ರತ್ಯಕ್ಷನಾಗ್ಯೊಲಿದೆ: ಪೃಥು ವೇನರಾಜನ ಮಗ. ಆತ ಬ್ರಹ್ಮಾವರ್ತವೆಂಬ ಪ್ರದೇಶದಲ್ಲಿ ನೂರು ಅಶ್ವಮೇಧಯಾಗಗಳನ್ನು ಮಾಡಬೇಕೆಂದು ಸಂಕಲ್ಪಿಸಿ ೯೯ ಯಾಗಗಳನ್ನು ಮುಗಿಸಿ ನೂರನೆಯ ಯಾಗವನ್ನು ನಡೆಸುತ್ತಿರುವಾಗ ಅಸೂಯೆಗೊಂಡ ಇಂದ್ರ ಯಾಗಾಶ್ವವನ್ನು ಅಪಹರಿಸುತ್ತಾನೆ. ಕೋಪಗೊಂಡ ಪೃಥುವನ್ನು ಅತ್ರಿ ಮೊದಲಾದ ಮಹರ್ಷಿಗಳು ಸಮಾಧಾನಪಡಿಸಿ, ತಮ್ಮ ಮಂತ್ರಬಲದಿಂದಲೇ ಇಂದ್ರನನ್ನು ಕರೆಸಿ ಅವನನ್ನೂ ಹೋಮಮಾಡುತ್ತೇವೆ ಎಂದು ಉದ್ಯುಕ್ತರಾದಾಗ ಬ್ರಹ್ಮ ಬಂದು ಅವನನ್ನು ತಡೆಯುತ್ತಾನೆ. ಅನಂತರ ವಿಷ್ಣುವೂ ಇಂದ್ರನೊಡನೆ ಬಂದು ಇಂದ್ರನನ್ನು ಕ್ಷಮಿಸುವಂತೆ ಪೃಥುವಿಗೆ ಹೇಳಿದ್ದಲ್ಲದೆ, ಆತನ ಶ್ರೇಷ್ಠಗುಣಗಳಿಗೆ ಮೆಚ್ಚಿ ಆತ ಕೇಳಿದ ವರಗಳನ್ನು ಕೊಡುತ್ತಾನೆ.

(ಕೀ. ೧೯೭) (ಭಾ. ಸ್ಕಂ. ೪, ಅ. ೧೮–೧೯)

(ನು. ೩) ಶೀಲವಿಡಿದಂಬರೀಷನ ಮತವ ಗೆಲಿಸಿದೆಯೊ: ನಭಗನ ಮಗನೂ, ನಾಭಾಗನ ಮೊಮ್ಮಗನೂ ಆದ ಒಬ್ಬ ವಿಷ್ಣುಭಕ್ತ ಅಂಬರೀಷ. ಏಕಾದಶೀ ವ್ರತಪರಾಯಣನಾಗಿದ್ದ ಇವನ ನಿಯಮಕ್ಕೆ ಭಂಗವನ್ನುಂಟುಮಾಡುವ ಉದ್ದೇಶದಿಂದ ಇವನಲ್ಲಿಗೆ ಬಂದ ದೂರ್ವಾಸಮುನಿ ಇವನನ್ನು ಶಪಿಸುತ್ತಾನೆ. ಆದರೆ ವಿಷ್ಣುಭಕ್ತನಾದ ಅಂಬರೀಷನ ರಕ್ಷಣೆಗೆ ಚಕ್ರಾಯುಧವೇ ಧಾವಿಸಿ ಬಂದಾಗ, ಕೊನೆಗೆ ಮುನಿ ಅಂಬರೀಷನನ್ನೇ ಮರೆಹೊಕ್ಕು ಪಾರಾಗುತ್ತಾನೆ. (ಭಾ.ಸ್ಕಂ.೯, ಅ.೪)

(ನು. ೪) ಮಕರರೂಪದಿ ಸತ್ಯವ್ರತಗೆ ತತ್ವವನೊರೆದೆ: ಹರಿಯ ಮತ್ಸ್ಯಾವತಾರವನ್ನು ಕುರಿತು ಈ ಮಾತು ಬಂದಿದೆ. ಪೂರ್ವಕಲ್ಪದ ಅಂತ್ಯದಲ್ಲಿ ಪ್ರಳಯವಾಗಿ ಲೋಕಗಳೆಲ್ಲ ಸಮುದ್ರದಲ್ಲಿ ಮುಳುಗಿದವು. ಆ ಕಾಲದಲ್ಲಿ ಭಗವದ್ಭಕ್ತಾಗ್ರೇಸರನಾಗಿದ್ದ ಸತ್ಯವ್ರತನೆಂಬ ರಾಜರ್ಷಿ ಕೃತಮಾಲಾ ನದಿಯ ಜಲಮಧ್ಯದಲ್ಲಿ ನಿಂತು ಜಲತರ್ಪಣ ಮಾಡುತ್ತಿದ್ದಾಗ ವಿಷ್ಣು ಒಂದು ಸಣ್ಣ ಮೀನಾಗಿ ಆತನ ಕೈಯೊಳಗಿನ ನೀರಿನಲ್ಲಿ ಬಂದು ತನ್ನನ್ನು ರಕ್ಷಿಸುವಂತೆ ಕೇಳಿಕೊಳ್ಳುತ್ತಾನೆ. ದಯಾರ್ದ್ರನಾದ ಸತ್ಯವ್ರತ ಅದನ್ನು ತನ್ನ ಆಶ್ರಮಕ್ಕೆ ತಂದು ಕಾಪಾಡುತ್ತಾನೆ. ಕ್ರಮೇಣ ಬೃಹದಾಕಾರವಾಗಿ ಬೆಳೆದ ಆ ಮತ್ಸ್ಯ ಸಮುದ್ರವನ್ನು ಸೇರುತ್ತದೆ. ಕಡೆಗೆ ಸತ್ಯವ್ರತ ಆ ಮತ್ಸ್ಯರೂಪಿ ಪರಮಾತ್ಮನ ಅನುಗ್ರಹದಿಂದ ಅಂದಿಗೆ ಏಳನೆಯ ದಿನದಲ್ಲಿ ನಡೆದ ಪ್ರಳಯದಲ್ಲಿ ದಿವ್ಯನಾವೆಯ ಮೂಲಕ ಜಗತ್ತನ್ನು ಕಾಪಾಡಿ ವೈವಸ್ವತ ಮನುವಾಗುತ್ತಾನೆ.

(ಪುನಾಚೂ, ಪು. ೪೭೪)

(ನು. ೬) ಮಹಿದಾಸ: ವಿಶಾಲ, ಇತರಾದೇವಿಯರ ಮಗ ; ಬ್ರಹ್ಮನ ಮೊಮ್ಮಗ. (ಶ್ರೀ ಜಗನ್ನಾಥರ ಕೃತಿಗಳು,ಪು.೪೧೭) ಇತರಾದೇವಿಯಿಂದ ವ್ಯಕ್ತನಾದ ಶ್ರೀಹರಿಯು ಮಹಿದಾಸನೆನಿಸಿ ಪಂಚರಾತ್ರವೆಂಬ ಶಾಸ್ತ್ರವನ್ನು ಉಪದೇಶಿಸಿದನು.

(ಶ್ರೀ ಹರಿಭಜನಾಮೃತ ಸಾರ, ೯೩, ಪು. ೨೧೨)

(ನು. ೮) ಮಖವ ರಕ್ಷಿಸಿ ರಾಜಋಷಿಗಭೀಷ್ಟೆಯನಿತ್ತೆ:: ರಾಜರ್ಷಿ ವಿಶ್ವಾಮಿತ್ರನ ಕೋರಿಕೆಯಂತೆ ರಾಮಲಕ್ಷ್ಮಣರು ಆತನೊಡನೆ ಹೋಗಿ ಆತನ ಯಾಗ ರಕ್ಷಣೆ ಮಾಡಿದ ಪ್ರಸಂಗ. (ರಾಮಾಯಣ, ಬಾಲಕಾಂಡ)

(ನು. ೯) ಶುಭ ಕಂಠನಂಜಿಕೆಯ ಹನುಮ ಹೇಳಲು ಕಳೆದೆ: ಸೀತಾನ್ವೇಷಣೆಗಾಗಿ ಋಷ್ಯಮೂಕ ಪರ್ವತದತ್ತ ಬಂದ ರಾಮಲಕ್ಷ್ಮಣರನ್ನು ಸುಗ್ರೀವನು ಅವರು ವಾಲಿಯ ಗೂಢಚಾರರಿರಬಹುದೆಂದು ಹೆದರಿದಾಗ, ಹನುಮಂತ ವೇಷ ಮರೆಸಿ ಕೊಂಡು ಹೋಗಿ ರಾಮ ಲಕ್ಷ್ಮಣರೊಡನೆ ಮಾತನಾಡಿ ನಿಜವನ್ನು ತಿಳಿದು ಅವರನ್ನು ಸುಗ್ರೀವನ ಬಳಿಗೆ ಕರೆತರುತ್ತಾನೆ. ಸುಗ್ರೀವ ರಾಮನೊಡನೆ ಅಗ್ನಿಸಾಕ್ಷಿಯಾಗಿ ಸ್ನೇಹ ಬೆಳೆಸಿದ ನಂತರ ಪರಸ್ಪರ ಸಹಾಯ ಮಾಡುವುದಾಗಿ ಮಾತು ಕೊಡುತ್ತಾರೆ. ರಾಮ ವಾಲಿಯನ್ನು ಕೊಂದು ಸುಗ್ರೀವನನ್ನು

ವಾನರ ರಾಜ್ಯಾಧಿಪತಿಯನ್ನಾಗಿ ಮಾಡುತ್ತಾನೆ. ಸುಗ್ರೀವ ಸೀತಾನ್ವೇಷಣೆಗೆ ಸಹಕರಿಸುತ್ತಾನೆ. (ರಾಮಾಯಣ, ಕಿಷ್ಕಿಂಧಾಕಾಂಡ)

(ನು. ೧೧) ಅನುಜನಗ್ನಿಗೆ ಧುಮುಕಲವಧಿ ಮೀರದೆ ಪೊರೆದೆ: ರಾವಣ ವಧೆಯ ನಂತರ ರಾಮ ಸೀತೆಯೊಡನೆ ಅಯೋಧ್ಯೆಗೆ ಹಿಂದಿರುಗುವ ದಾರಿಯಲ್ಲಿ ಭರದ್ವಾಜಾ ಶ್ರಮದಲ್ಲಿದ್ದ ದಿನ, ಅಂದಿಗೆ ತನ್ನ ವನವಾಸದ ಅವಧಿ ಮುಗಿದುದು ನೆನಪಿಗೆ ಬರುತ್ತದೆ. ಅವಧಿ ಮುಗಿದೊಡನೆ ತಾನು ಹಿಂದಿರುಗದಿದ್ದಲ್ಲಿ ಭರತ ಅಗ್ನಿ ಪ್ರವೇಶ ಮಾಡುವನೆಂಬ ಭಯದಿಂದ ಹನುಮಂತನಿಗೆ ಮುಂದಾಗಿ ನಂದಿಗ್ರಾಮಕ್ಕೆ ಹೋಗಿ ಭರತನಿಗೆ ತಾನು ಬರುತ್ತಿರುವ ಸುದ್ದಿ ತಿಳಿಸು ಎಂದು ಹೇಳಿಕಳಿಸುತ್ತಾನೆ. ಅಂತೆಯೇ ಹನುಮಂತ ಹೋಗಿ ಭರತನಿಗೆ ರಾಮನ ಆಗಮನದ ವಿಷಯ ತಿಳಿಸಿ ಆತನ ಅಗ್ನಿಪ್ರವೇಶವನ್ನು ತಡೆಯುತ್ತಾನೆ. (ರಾಮಾಯಣ, ಯುದ್ಧಕಾಂಡ)

(ನು. ೧೨) ಉರಿನುಂಗಿ ......ವ್ರಜವ ಪಾಲನೆ ಮಾಡ್ದೆ: ಒಂದು ಬಾರಿ ಗೋಪಾಲಕರು ತಮ್ಮ ಗೋವುಗಳನ್ನು ಕಾಡಿನಲ್ಲಿ ಮೇಯಿಸುತ್ತಿದ್ದಾಗ ಕಾಡ್ಗಿಚ್ಚು ಎಲ್ಲ ದಿಕ್ಕಿನಿಂದಲೂ ಆವರಿಸುತ್ತದೆ. ಆಗ ಗೋಪರೆಲ್ಲ ಶರಣು ಹೋಗುತ್ತಾರೆ. ಕೃಷ್ಣ ಯೋಗಶಕ್ತಿಯಿಂದ ಆ ಭಯಂಕರವಾದ ಕಾಡ್ಗಿಚ್ಚನ್ನು ನುಂಗಿ ಅವರೆಲ್ಲರನ್ನು ರಕ್ಷಿಸುತ್ತಾನೆ. (ಭಾ.ಸ್ಕಂ.೧೦, ಅ.೨೦)

(ನು. ೧೬) ಕುಬ್ಜಾರಮಣ: ಬಲರಾಮ ಕೃಷ್ಣರು ಕಂಸನ ಅಪ್ಪಣೆಯ ಮೇರೆಗೆ ಮಧುರೆಗೆ ಬಂದು ಚಾಣೂರ ಮುಷ್ಟಿಕರೆಂಬ ಜಟ್ಟಿಗಳೊಂದಿಗೆ ಕಾಳಗಕ್ಕೆ ಹೊರಟಾಗ ನಡುದಾರಿಯಲ್ಲಿ ಕಂಸನಿಗೆ ಚಂದನವನ್ನು ಒಯ್ಯುತ್ತಿದ್ದ ಕುಬ್ಜೆ ಸಿಕ್ಕುತ್ತಾಳೆ. ಆಗ ಕೃಷ್ಣ ಬಲಾತ್ಕಾರದಿಂದ ಚಂದನವನ್ನು ತೆಗೆದುಕೊಂಡು ತನ್ನ ಮೈಗೆ ಪೂಸಿಕೊಂಡು ಅವಳ ಗೂನು ಬೆನ್ನನ್ನು ಹೋಗಲಾಡಿಸಿ, ಸುಂದರ ಯುವತಿಯನ್ನಾಗಿ ಮಡುತ್ತಾನೆ. (ಭಾ.ಸ್ಕಂ.೧೦. ಅ.೪೨)

(ನು. ೧೮) ಸಾಂದೀಪನಿ: ಬಲರಾಮ, ಕೃಷ್ಣ, ಸುಧಾಮರ ವಿದ್ಯಾಗುರು. ಕೃಷ್ಣ ಗುರುದಕ್ಷಿಣೆಯಾಗಿ ಈತನ ಮೃತನಾದ ಮಗನನ್ನು ಮರಳಿ ತಂದು ಒಪ್ಪಿಸುತ್ತಾನೆ. (ಭಾ.ಸ್ಕಂ.೧೦, ಅ.೪೫)

(ನು. ೧೮) ಉದ್ಧವ : ಕೃಷ್ಣನ ಸ್ನೇಹಿತ, ಮಂತ್ರಿ. ವಸುದೇವನ ತಮ್ಮನಾದ ದೇವಭಾಗನ ಮಗ.

(ನು. ೧೮) ಶಂಬರ: ದಕ್ಷನಿಂದ ದನುವಿನಲ್ಲಿ ಜನಿಸಿದ ೪ ಮಂದಿ ಪುತ್ರರಲ್ಲಿ ಒಬ್ಬ. ಪಾತಾಳ ವಾಸಿಯಾಗಿದ್ದ. ಮಹಾಮಾಯಾವಿ. ಕೃಷ್ಣನ ಮಗನಾದ ಪ್ರದ್ಯುಮ್ನನಿಂದ ತಾನು ಸಾಯುವೆನೆಂಬುದನ್ನು ತಿಳಿದು ಆತನನ್ನು ಕೊಲ್ಲುವುದಕ್ಕಾಗಿ ಪ್ರಯತ್ನಿಸಿ, ತಾನೇ ಆತನಿಂದ ಹತನಾದ. (ಭಾ. ಸ್ಕಂ.೧೦, ಅ. ೫೫) (ಕೀ. ೧೨೭. ಪ)

(ನು. ೧೮) ಯಜ್ಞಪೂಜಾಗ್ರಣಿ : ಪಾಂಡವರು ಮಾಡಿದ ರಾಜಸೂಯ ಯಾಗದಲ್ಲಿ ಅಗ್ರಪೂಜೆಯನ್ನು ಪಡೆದವನು ಕೃಷ್ಣ.

(ನು. ೧೯) ಪೌಂಡ್ರಕ : ಈತ ಪುಂಡ್ರವಂಶದ ವಸುದೇವನೆಂಬ ರಾಜನ ಮಗ. ವಸುದೇವ. ಪುತ್ರನಾದ ಕೃಷ್ಣನಂತೆಯೇ ತಾನೂ ಕೀರ್ತಿವಂತನಾಗಬೇಕೆಂಬ ದುರಾಸೆಯಿಂದ ಕೃಷ್ಣನಂತೆಯೇ ಶಂಖಚಕ್ರಗಳನ್ನು ಧರಿಸಿ, ಕೃಷ್ಣನ ಮೇಲೆ ಯುದ್ಧಕ್ಕೆ ಹೋಗಿ ಸೋತು, ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಪಡೆದ ಶಸ್ತ್ರಾಸ್ತ್ರಗಳೂ ವ್ಯರ್ಥವಾಗಿ ಕೊನೆಗೆ ಕೃಷ್ಣನಿಂದಲೇ ಹತನಾಗುತ್ತಾನೆ. (ಭಾ.ಸ್ಕಂ.೧೦. ಅ.೬೬)

(ಕೀ.೧೫೦, ನು.೩) (ಕೀ.೨೯೪, ನು.೫) (ಕೀ.೩೯೮, ನು.೮)

(ನು. ೨೩) ಕಪಿಲ: ಕರ್ದಮ ಮುನಿಯಿಂದ ಸ್ವಾಯಂಭುವ ಮನುಪುತ್ರಿಯಾದ ದೇವಹೂತಿಯಲ್ಲಿ ಜನಿಸಿದ ಕಪಿಲಮಹರ್ಷಿ ವಿಷ್ಣುವಿನ ಅವತಾರ ಎಂಬ ನಂಬಿಕೆ ಇದೆ. ಈತ ತನ್ನ ತಾಯಿಗೆ ಸಾಂಖ್ಯತತ್ವವನ್ನು ಬೋಧಿಸಿದ. (ಪುನಾಚೂ., ಪು.೮೨)

(ನು. ೨೫) ಷಟ್ಕಮಲನಿಲಯ: ಹೊಕ್ಕುಳಿನ ಆರುದಳದ ಪದ್ಮದಲ್ಲಿ ಪಿಂಗಳವರ್ಣನಾದ ಸಂಕರ್ಷಣನಿರುವನು. (ಶ್ರೀ ವಾದಿರಾಜರ ತತ್ವಸುವಾಲಿ. ನು, ೧೭)

ಕೀರ್ತನೆ ೯೮

(ನು. ೧) ನಿಜರಾಣಿಗಂಘ್ರಿನಖನಿಜವು ತಿಳಿಯದ ಮಹಿಮೆ: ಸತಿಯಾದ ಲಕ್ಷ್ಮೀದೇವಿ ಕೂಡ ಶ್ರೀಹರಿಯ ಅನಂತವಾದ ಗುಣಗಳನ್ನು ತಿಳಿಯಲು ಅಶಕ್ತಳು. ಅವಳು ಕೇವಲ ಹರಿಯ ಕಿರುಬೆರಳ ನಖಾಗ್ರದಿಂದ ಜಗತ್ತಿನ ಸೃಷ್ಟಿ ಮುಂತಾದುವುಗಳಾಗುವುದನ್ನು ಮಾತ್ರ ಬಲ್ಲಳು.

ಕೀರ್ತನೆ ೯೯

(ನು. ೩) ಅನಿರುದ್ಧ: ಶ್ರೀಹರಿ ಅನಿರುದ್ಧನೆಂಬ ಹೆಸರಿನಲ್ಲಿ ಜಗತ್ಸೃಷ್ಟಿಕಾರ್ಯವನ್ನೂ ಪ್ರದ್ಯುಮ್ನನಾಮಕನಾಗಿ ಜಗತ್ ಪಾಲನೆಯನ್ನೂ, ಸಂಕರ್ಷಣನಾಮಕನಾಗಿ ಜಗತ್ಸಂಹಾರಕಾರ್ಯವನ್ನೂ ಮಾಡುತ್ತಾನೆ. (ಮ.ತಾ.ನಿ.ಅ.೧.ಶ್ಲೋ.೬–೮)

ಕೀರ್ತನೆ ೧೦೨

(ಪ.) ದರ್ಭಶಾಯಿ: ಹನುಮಂತ ಸೀತೆಯನ್ನು ಕಂಡು ಬಂದ ನಂತರ, ರಾಮ ಕಪಿಸೇನಾಸಹಿತನಾಗಿ ಹೊರಟು ಸಮುದ್ರದ ದಡವನ್ನು ಸೇರುತ್ತಾನೆ. ಲಂಕೆಗೆ ಹೋಗಲು ಸೇತುವೆ ನಿರ್ಮಾಣ ಮಾರ್ಗಕ್ಕಾಗಿ ಸಮುದ್ರ ರಾಜನನ್ನು ಮನವೊಲಿಸಲು, ಸಮುದ್ರದ ದಡದಲ್ಲಿ ದರ್ಭೆಗಳನ್ನು ಹಾಸಿ ಸಮುದ್ರಕ್ಕೆ ಕೈ ಜೋಡಿಸಿ ಮೂರು ದಿನಗಳವರೆಗೆ ಪವಡಿಸುತ್ತಾನೆ. (ರಾಮಾಯಣ, ಯುದ್ಧಕಾಂಡ, ಸರ್ಗ ೨೧)

(ನು. ೨) ಪಂಚಜನನ ವೈರಿ: ಪ್ರಹ್ಲಾದನ ತಮ್ಮನಾದ ಸಂಹ್ಲಾದ ದೈತ್ಯನ ಮಗ ಪಂಚಜನ. ಇವನು ಕೃಷ್ಣನ ಗುರುವಾದ ಸಾಂದೀಪಿನಿಯ ಮಗನನ್ನು ಕದ್ದೊಯ್ದು ಸಮುದ್ರದಲ್ಲಿ ಅಡಗಿಕೊಂಡಿದ್ದ, ಬಲರಾಮ ಕೃಷ್ಣರು ಗುರುದಕ್ಷಿಣೆಯಾಗಿ, ಪಂಚಜನನನ್ನು ಕೊಂದು ಗುರುಪುತ್ರನನ್ನು ತಂದು ಸಾಂದೀಪಿನಿಗೆ ಅರ್ಪಿಸಿದರು.

(ಕೀ.೧೦೩, ನು.೭) (ಕೀ.೧೦೮, ನು.೩) (ಭಾ.ಸ್ಕಂ.೧೦-೪೫)

(ನು. ೩) ಅಹೋಬಲ: ಹಿರಣ್ಯಕಶಿಪುವಿನ ರಾಜದಾನಿ ಇಲ್ಲಿಯೇ ಇದ್ದಿತೆಂದ, ನಾರಾಯಣನು ನರಸಿಂಹ ರೂಪದಿಂದ ಪ್ರಕಟವಾಗಿ ಇಲ್ಲಿಯೇ ಪ್ರಹ್ಲಾದನನ್ನು ರಕ್ಷಿಸಿದನೆಂದೂ ಕಥೆಯಿದೆ. (ತೀ.ಪ್ರ.ಪು.೨೧೯)

(ನು. ೩) ಶಂಬಲ: ಮುರಾದಾಬಾದ್ ಜಿಲ್ಲೆಯ 'ಸಂಭಲ್' ಎಂಬ ಸ್ಥಳಕ್ಕೇ ಇಲ್ಲಿ 'ಶಂಬಲ' ಎನ್ನಲಾಗಿದೆ. ಇಲ್ಲಿ ೬೮ ತೀರ್ಥಗಳೂ ೧೯ ಕೂಪಗಳೂ ಇದ್ದು, ಕಲಿಯುಗದ ಕೊನೆಯಲ್ಲಿ ಇಲ್ಲಿಯೇ 'ಕಲ್ಕಿ'ಯ ಅವತಾರವಾಗುವುದು ಎಂಬ ನಂಬಿಕೆ ಇದೆ.

(ತೀ. ಪ್ರ. ಪು. ೧೮೭)

ಕೀರ್ತನೆ ೧೦೩

(ನು. ೨) ಅಷ್ಟಕೃತ್ಯ: ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷ ಈ ಅಷ್ಟಕರ್ತೃತ್ವ ಶಕ್ತಿಯಿಂದಾಗಿ ಹರಿ ಸ್ವತಂತ್ರಕರ್ತನು.

(ನು. ೨) ಅಷ್ಟವಿಭವ: ದಾಸೀಜನ, ಭೃತ್ಯವರ್ಗ, ಪುತ್ರರು, ಬಂಧುವರ್ಗ, ವಸ್ತ್ರ, ವಾಹನ, ಧನ, ಧಾನ್ಯಸಂಗ್ರಹ.

(ನು. ೨) ಅಷ್ಟಭೋಗ: ಅನ್ನ, ಉದಕ, ತಾಂಬೂಲ, ಪುಷ್ಪ, ಚಂದನ, ವಸನ, ಶಯ್ಯಾ, ಅಲಂಕಾರ (ಶ್ರೀನಿ. ಪು. ३೧೨)

(ನು. ३) ಜಘನಕಟಿ ಪಾಣಿ: ತಂದೆ ತಾಯಿಗಳ ಸೇವೆಯಲ್ಲಿ ತೊಡಗಿದ್ದ ಹರಿಭಕ್ತ ಪುಂಡರೀಕನು, ತನ್ನನ್ನು ಪರೀಕ್ಷಿಸಲೆಂದು ಬಂದ ಹರಿಗೆ, ತಾನು ಅವರ ಸೇವೆ ಮುಗಿಸಿ ಬರುವವರೆಗೂ ನಿಂತಿರಬೇಕೆಂದು ಒಂದು ಇಟ್ಟಿಗೆಯನ್ನು ಹರಿಯತ್ತ ಸರಿಸಿದನಂತೆ. ಶ್ರೀಹರಿ ಆವನ ಭಕ್ತಿಗೆ ಮೆಚ್ಚಿ, ಅವನ ಅನುಜ್ಞೆಯಂತೆ ಇಟ್ಟಿಗೆಯ ಮೇಲೆ ಕಟಿಪಾಣಿಯಾಗಿ ನಿಂತು ಅವನನ್ನು ಅನುಗ್ರಹಿಸಿದನೆಂಬ ಕಥೆಯಿದೆ. (ತೀ.ಪ್ರ. ೧३೧-೧३೨)

(ಕೀ. ೨೭೪)

(ನು. ೭) ಮಧು ಕೈಟಭ : ಕಲ್ಪಾದಿಯಲ್ಲಿ ವಿಷ್ಣು ವಟಪತ್ರಶಾಯಿಯಾಗಿ ಮಲಗಿದ್ದಾಗ ಆತನ ಕಿವಿಯ ಮಲದಿಂದ ಮಧು ಮತ್ತು ಕೈಟಭರೆಂಬ ರಾಕ್ಷಸರು ಹುಟ್ಟಿ, ನಾಭಿಕಮಲದಲ್ಲಿದ್ದ ಬ್ರಹ್ಮನನ್ನು ಪೀಡಿಸತೊಡಗುತ್ತಾರೆ. ಆಗ ಬ್ರಹ್ಮ ವಿಷ್ಣುವಿಗೆ ಹೇಳಿದಾಗ, ವಿಷ್ಣು ಉಪಾಯದಿಂದ ಅವರನ್ನು ಕೊಲ್ಲುತ್ತಾನೆ. ಈ ಕಾರಣದಿಂದ ವಿಷ್ಣುವಿಗೆ 'ಮಧುಕೈಟಭಾರಿ' ಎಂದು ಹೆಸರಾಗಿದೆ (ಪುನಾಚೂ, ಪು. ೧೬೨)

(ನು. ೭) ಮದನೇಮಿ: ನೂರು ತಲೆಗಳುಳ್ಳ ಈ ರಾಕ್ಷಸ ಇಂದ್ರಪದವಿಯನ್ನೇರಿ ಮೆರೆಯುತ್ತಿದ್ದ. ಅವನನ್ನು ವಿಷ್ಣು ತನ್ನ ಚಕ್ರಾಯುಧದಿಂದ ಸಂಹರಿಸುತ್ತಾನೆ. (ಪು.ನಾಚೂ ಪು. ೧೦೭) ಇವನೇ ಮತ್ತೆ ಕಂಸನಾಗಿ ಜನಿಸಿದನೆಂಬ ಅಭಿಪ್ರಾಯವಿದೆ.

(ನು. ೭) ಜಲಂಧರ : ಶಿವನ ಕ್ರೋಧಾಗ್ನಿಯಿಂದ ಜನಿಸಿದ ಒಬ್ಬ ಘೋರ ರಾಕ್ಷಸ. ಅತ್ಯಂತ ಬಲಶಾಲಿ. ಒಮ್ಮೆ 'ಪಾರ್ವತಿಯಂತಹ ಮಡದಿಯಿಲ್ಲದ ಮೇಲೆ ನಿನ್ನ ಐಶ್ವರ್ಯ ಎಷ್ಟಿದ್ದರೇನು' ಎಂಬ ನಾರದನ ಮಾತಿನಿಂದ ಪ್ರೋತ್ಸಾಹಿತನಾಗಿ, ಪಾರ್ವತಿಯನ್ನು ಕೂಡಲೆ ತನಗೆ ಸಮರ್ಪಿಸಬೇಕು ಎಂದು ಶಿವನಿಗೆ ಹೇಳಿಕಳುಹಿದಾಗ, ಶಿವ ಕೋಪಗೊಂಡು ಅವನನ್ನು ಕೊಂದ. (ಪು.ನಾಚೂ. ಪು.೨೪೬)

(ಕೀ. ३, ನು. ३)

ಕೀರ್ತನೆ ೧೦೫

(ನು. ೨)ಪಶುಪತಿವಂದ್ಯ: ಶಿವನು ನಂದಿಯನ್ನೇರಿ ಸತೀದೇವಿಯೊಡನೆ ಭೂಮಿಯಲ್ಲಿ ಸಂಚರಿಸುತ್ತಿದ್ದನು. ಆಗ ಸೀತೆಯನ್ನು ಹುಡುಕುತ್ತಾ ಅರಣ್ಯದಲ್ಲಿ ಲಕ್ಷ್ಮಣನೊಡನೆ ಸಂಚರಿಸುತ್ತಿದ್ದ ರಾಮನಿಗೆ ನಮಸ್ಕಾರ ಮಾಡಿದನು ಎಂದು ಶಿವಪುರಾಣದಲ್ಲಿ ಹೇಳಿದೆ.

ಅಶ್ವಮೇಧಯಜ್ಞವನ್ನು ಮಾಡಿ ಮುಗಿಸಿದ ರಾಮನನ್ನು ದೇವತೆಗಳೆಲ್ಲ ಪೂಜಿಸಿದಾಗ ಶಿವನೂ ಸಹಸ್ರನಾಮಗಳಿಂದ ಭಕ್ತಿಪೂರ್ವಕವಾಗಿ ಸ್ತುತಿಸುತ್ತಾನೆ.

(ಆನಂದ ರಾಮಾಯಣ, ೪ನೆಯ ವಿಲಾಸ ಕಾಂಡ, ೨ನೆಯ ಸರ್ಗ)

(ನು. ೨) ದೂಷಣ ಖರಾರಿ : ದೂಷಣ ಒಬ್ಬ ರಾಕ್ಷಸ. ರಾವಣನ ಬಲತಾಯಿಯ ಮಗ. ಖರ ಮತ್ತು ಶೂರ್ಪನಖಿ ಇವನ ಒಡಹುಟ್ಟಿದವರು. ರಾಮ, ಲಕ್ಷ್ಮಣ, ಸೀತೆಯರು ಪಂಚವಟಿಯಲ್ಲಿದ್ದಾಗ ಶೂರ್ಪನಖಿ ರಾಮನನ್ನು ಮೋಹಿಸಿ, ಲಕ್ಷ್ಮಣನಿಂದ ಕಿವಿ ಮೂಗನ್ನು ಕೊಯ್ಸಿಕೊಂಡು ಹೋಗಿ ಖರನಲ್ಲಿ ದೂರಿದಾಗ, ಖರನು ದೂಷಣ ಮತ್ತು ತನ್ನ ೧೪ ಸಾವಿರ ಸೇನೆಯೊಂದಿಗೆ ರಾಮನನ್ನು ಎದುರಿಸಿ ಸೇನಾಸಮೇತ ಹತನಾದನು.

(ಕೀ. ೧३೦, ನು. ೨) (ಕೀ. ೧३೮, ನು. ೧३)(ಪುನಾಚೂ, ಪು. ೧೭३, ३೨೧)

ಕೀರ್ತನೆ ೧೦೬

(ಪ.) ಅಹಿವರ ಶಯನ: ವಾಸುಕಿಗೆ ಶೇಷ, ಆದಿಶೇಷನೆಂಬ ಹೆಸರುಗಳೂ ಇವೆ. ಈತ ಸರ್ಪರಾಜ. ಕದ್ರು ಕಶ್ಯಪರ ಮಗನಾದ ಈತ ಒಂದು ಅಂಶದಿಂದ ಪಾತಾಳದಲ್ಲಿದ್ದು ಇನ್ನೊಂದು ಅಂಶದಿಂದ ವಿಷ್ಣುವಿನ ಹಾಸಿಗೆಯಾದನು. (ಪುನಾಚೂ, ಪು. ೬೧೩)

ಕವಿ ಮದವಿರೇಕ್ಷ: (ಕೀ.೧೦೬, ನು.೨) : ಬಲಿಯುದಾನ ಕೊಡಲು ಸಂಕಲ್ಪ ಮಾಡುವಾಗ ಅರ್ಘ್ಯ ಕಲಶದಲ್ಲಿ ಅಡ್ಡಿಯಾಗಿ ಶುಕ್ರಾಚಾರ್ಯರು ಕುಳಿತರು. ವಾಮನಾವತಾರಿಯಾದ ಶ್ರೀಹರಿಯು ದರ್ಭೆಯನ್ನು ಹಾಕಿ ಧಾರೆಯನ್ನು ಸರಿಪಡಿಸುವಾಗ, ಆ ದರ್ಭೆಯ ಏಟಿನಿಂದ ಶುಕ್ರಾಚಾರ್ಯರ ಒಂದು ಕಣ್ಣು ಹೋಯಿತು. (ಕವಿ=ಶುಕ್ರಾಚಾರ್ಯ)

ಕೀರ್ತನೆ ೧೦೮

(ಪ.) ಹಯಸೂದನ: ಹಯಗ್ರೀವನೆಂಬ ರಕ್ಕಸ ಆದಿಶಕ್ತಿಯನ್ನು ತಪಸ್ಸಿನಿಂದ ಮೆಚ್ಚಿಸಿ ತನಗೆ ಸಾವಿಲ್ಲದಂತೆ ವರ ಬೇಡಿದ. ದೇವಿ ಅದು ಸಾಧ್ಯವಿಲ್ಲ ಎಂದಾಗ, ತನಗೆ ತನ್ನ ಹೆಸರಿನವನಿಂದಲೇ ಸಾವು ಬರಲಿ ಎಂದು ಕೇಳಿಕೊಂಡ. ದೇವಿ ಒಪ್ಪಿದಳು. ಬಳಿಕ ಹಯಗ್ರೀವ ಕೊಬ್ಬಿ ಲೋಕ ಕಂಟಕನಾದಾಗ, ವಿಷ್ಣು ಹಯಗ್ರೀವನಾಗಿ ಇವನನ್ನು ಕೊಂದ. (ದೇವಿ ಭಾಗವತ. ೧-೫). ವೇದಗಳನ್ನು ಕದ್ದೊಯ್ದ ಹಯನೆಂಬ ರಾಕ್ಷಸನನ್ನು ವಿಷ್ಣು ಹಯಗ್ರೀವನಾಗಿ ಸಂಹರಿಸಿದನು. (ಭಾ.ಸ್ಕಂ.೮, ಅ.೨೪)

(ಪ.) ಹಯವದನ: ಒಮ್ಮೆ ವಿಷ್ಣು ಲಕ್ಷ್ಮಿಯನ್ನು ನೋಡಿ ನಕ್ಕದ್ದನ್ನು ಅಪಾರ್ಥ ಮಾಡಿಕೊಂಡ ಆಕೆ, ವಿಷ್ಣುವಿನ ತಲೆ ಉರುಳಿಬೀಳುವಂತೆ ಶಪಿಸುತ್ತಾಳೆ. ವಿಷ್ಣು ಶೇಷಶಾಯಿಯಾಗಿ ತನ್ನ ಬಿಲ್ಲನ್ನೆ ತಲೆದಿಂಬಾಗಿಸಿಕೊಂಡು ಮಲಗಿದ್ದಾಗ , ಮಧುಕೈಟಭರೆಂಬ ರಾಕ್ಷಸರು ಗೆದ್ದಲನ್ನು ಸೃಷ್ಟಿಸಿ , ವಿಷ್ಣುವಿನ ಧನುಸ್ಸಿನ ಬುಡ ಕತ್ತರಿಸುವಂತೆ ಹೇಳಿದರು, ಅವು ಹಾಗೇ ಮಾಡಿದಾಗ ಬಿಲ್ಲಿನ ತುದಿ ಹಾರಿ ವಿಷ್ಣುವಿನ ಕೊರಳು ಕತ್ತರಿಸುತ್ತದೆ. ಬಳಿಕ ದೇವತೆಗಳೆಲ್ಲ ಒಂದು ಕುದುರೆಯ ರುಂಡವನ್ನು ತಂದು ವಿಷ್ಣುವಿನ ಮುಂಡಕ್ಕೆ ಸೇರಿಸಿದರು. ಹೀಗೆ ವಿಷ್ಣು ಹಯವದನನಾದ.(ದೇವೀಭಾಗವತ, ೧-೫) ಮಧುಕೈಟಭರೆಂಬ ದಾನವರನ್ನು ವಿಷ್ಣು ಹಯವದನಾವತಾರಿಯಾಗಿ ಸಂಹರಿಸುತ್ತಾನೆ. (ಭಾ. ಸ್ಕಂ. ೧೦, ಅ. ೪೦)

(ಕೀ. ೧೩೮, ನು. ೬೫)

(ನು. ೩) ಗುರುವಾದಿರಾಜರು: ವಾದಿರಾಜರು (ಕ್ರಿ.ಶ. ೧೪೮೦ – ೧೬೦೦) ಸೋದೆ ಸಂಸ್ಥಾನದ ಪೀಠಾದಿಪತಿಗಳಾಗಿದ್ದು ಪ್ರಸಿದ್ಧ ಕೀರ್ತನಕಾರರೂ ಆಗಿದ್ದರು. ಪ್ರಸಂಗಾಭರಣ ತೀರ್ಥರೆಂಬ ಬಿರುದನ್ನು ಗಳಿಸಿದ್ದ ಇವರು ವಾದ ಪ್ರವೀಣರೂ ಆಗಿದ್ದರು. ಸಂಸ್ಕೃತದಲ್ಲಿ

'ಯುಕ್ತಿಮಲ್ಲಿಕಾ', 'ಸರಸಭಾರತೀವಿಲಾಸ', 'ರುಕ್ಮಿಣೀಶ ವಿಜಯ', 'ತೀರ್ಥಪ್ರಬಂಧ', ಮುಂತಾದ ಶ್ರೇಷ್ಠ ಕೃತಿಗಳನ್ನೂ, ಕನ್ನಡದಲ್ಲಿ ಅನೇಕ ಕೀರ್ತನೆಗಳ ಜೊತೆಗೆ 'ವೈಕುಂಠವರ್ಣನೆ', 'ಲಕ್ಷ್ಮೀಶೋಭಾನೆ', 'ಹರಿಸರ್ವೋತ್ತಮಸಾರ' ಇತ್ಯಾದಿ ಗ್ರಂಥಗಳನ್ನೂ ಬರೆದಿದ್ದಾರೆ. ಇವರು ಸೋದೆಯ ಪೀಠಕ್ಕೆ ಬಂದ ಮೇಲೆ ಅನೇಕ ಧಾರ್ಮಿಕ ಸುಧಾರಣೆಗಳನ್ನು ಕೈಕೊಂಡರು. ಇವರ ಶಾಸ್ತ್ರಗ್ರಂಥಗಳು ಬುದ್ಧಿ ಪ್ರಧಾನವೆನ್ನಿಸಿದರೆ, ಕನ್ನಡ ರಚನೆಗಳು ಸರಳರೀತಿಯ ನಿರೂಪಣೆ, ತಿಳಿಗನ್ನಡದಿಂದ ಕೂಡಿ ಹೃದಯಸ್ಪರ್ಶಿಯಾಗಿವೆ.

(ಕೀ. ೧೮೩, ಪ.)

ಕೀರ್ತನೆ ೧೦೯

(ನು. ೧) ಸ್ವಾಮಿ ಪುಷ್ಕರ ತೀರದಲಿ ನಿಂತು: ಸ್ವಾಮಿ ಪುಷ್ಕರಿಣಿ ಎನ್ನುವುದು ಒಂದು ಕೊಳದ ಹೆಸರು. ಇದು ವೆಂಕಟಾಚಲದಲ್ಲಿದ್ದು ಇದರ ಪಕ್ಕದಲ್ಲಿಯೇ ವೆಂಕಟೇಶನ ದೇವಾಲಯವಿದೆ. (ತಿರುಪತಿ ತಿಮ್ಮಪ್ಪ, ಪು. ೨೪೦, ४೧)

(ನು. ೭) ಪೂವಿನಂಗಿಯ ಚೆನ್ನ : ತಿರುಪತಿಯ ವೆಂಕಟೇಶಮೂರ್ತಿಗೆ ಪ್ರತಿ ಗುರುವಾರ ಅಪರಾಹ್ನ ಪೂಜೆಯಾದ ನಂತರ, ಆಭರಣಗಳನ್ನೆಲ್ಲ ತೆಗೆದಿಟ್ಟು ಬಗೆಬಗೆಯಾದ ಹೂದಂಡೆಗಳಿಂದ ಅಲಂಕರಿಸುತ್ತಾರೆ. ಮರುದಿನದ ತಿರುಮಂಜನಕ್ಕೆ ಪೂರ್ವಭಾವಿ ಸಿದ್ಧತೆಯಾಗಿ ಈ 'ಪೂಲಂಗಿಸೇವೆ' ನಡೆಯುತ್ತದೆ. ಹೀಗೆ ಹೂವಿನಿಂದ ಸಿಂಗರಿಸಿದ ಮೂರ್ತಿಯನ್ನು ದಾಸರು 'ಪೂವಿನಂಗಿಯ ಚೆನ್ನ' ಎಂದು ಕರೆದಿದ್ದಾರೆ.

(ತಿರುಪತಿ ತಿಮ್ಮಪ್ಪ, ಪು. ೨೯೦)

(ಕೀ. ೧೨೬, ನು. ೧೦)

(ನು. ೭) ಪುಳಕಾಪು ಮಜ್ಜನ : ವೆಂಕಟೇಶ್ವರ ದೇವರಿಗೆ ಪ್ರತಿ ಶುಕ್ರವಾರ ನಡೆಯುವ ಅಭಿಷೇಕವನ್ನು ತಿರುಮಂಜನವೆಂದು ಕರೆಯುತ್ತಾರೆ. ಈ ಅಭಿಷೇಕದ ನಂತರ ಮೂರ್ತಿಯನ್ನು ಚೆನ್ನಾಗಿ ಒರೆಸಿ ಪುನುಗಿನ ಎಣ್ಣೆಯನ್ನು ಮೈಗೆಲ್ಲ ತಿಕ್ಕುತ್ತಾರೆ. ಇದನ್ನು ಪುಳುಗುಕಾಪ್ಪು, ಪುಳುಕಾಪು =(ಪುನಗಿನ ಎಣ್ಣೆಯ ಲೇಪನ) ಎಂದು ಕರೆಯುತ್ತಾರೆ.

(ತಿರುಪತಿ ತಿಮ್ಮಪ್ಪ, ಪು. ೨೯೧–೨೯४)

(ಕೀ. ೧೨೬, ನು. ೮)

ಕೀರ್ತನೆ ೧೧೧

(ನು. ೩) ನೀನೇರಿದೆ ನರನ ಬಂಡಿಯನು: ಕೌರವರಿಗೂ ಪಾಂಡವರಿಗೂ ನಡೆದ ಯುದ್ಧದಲ್ಲಿ ಕೃಷ್ಣ ಅರ್ಜುನನಿಗೆ ಸಾರಥಿಯಾದನು.

(ನು. ೪) ನೀ ಧರ್ಮನ ಮಖದೊಳೆಂಜಲ ಪತ್ರ ತೆಗೆದೆ: ರಾಜಸೂಯಯಾಗದ ಕಾಲದಲ್ಲಿ ಕೃಷ್ಣನು ಯಜ್ಞಕ್ಕೆ ಬಂದ ಬ್ರಾಹ್ಮಣರ ಪಾದ ಪ್ರಕ್ಷಾಲನವನ್ನು ಮಾಡಿದನು. ಅದೇ ಕಾಲದಲ್ಲಿ ಆತ ಎಂಜಲೆಲೆಯನ್ನು ಬಳಿದನೆಂಬ ವಿಷಯವೂ ಬರುತ್ತದೆ.

(ಮಹಾಭಾರತ, ಸಭಾಪರ್ವ)

ಕೀರ್ತನೆ ೧೧೪

(ನು. ೨) ಸುಪರ್ಣಗಮನ : ಕಶ್ಯಪ ವಿನತೆಯರ ಮಗ ಗರುಡ, ಮಲತಾಯಿಗೆ ದಾಸಿಯಾಗಿದ್ದ ತನ್ನ ತಾಯಿಯನ್ನು, ಅವಳ ವಚನದಂತೆ ಸ್ವರ್ಗದಿಂದ ಅಮೃತ ತಂದು ಬಿಡಿಸಿದನು. ಇವನ ಲೋಕೋತ್ತರ ಸಾಮರ್ಥ್ಯವನ್ನು ಕಂಡ ವಿಷ್ಣು ಗರುಡನಿಗೆ ಸುಪರ್ಣ ಎಂಬ ಹೆಸರನ್ನು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡನು. ಅಲ್ಲದೆ ತನ್ನ ಧ್ವಜಚಿಹ್ನೆಯಾಗಿಯೂ ಸೇರಿಸಿಕೊಂಡನು. (ಮಹಾಭಾರತ, ಆದಿಪರ್ವ)

(ನು. ೪) ಅಹಿಫಣತಟನಟಣ: ಕಾಳಿಂದಿ ಮಡುವಿನಲ್ಲಿ ಬಂದು ಸೇರಿದ್ದ ಕಾಳಿಯನೆಂಬ ಸರ್ಪದ ವಿಷಜ್ವಾಲೆಯಿಂದ ಆ ಮಡುವಿನ ನೀರೆಲ್ಲ ವಿಷಮಯವಾಗಿ ಆ ನೀರನ್ನು ಕುಡಿದ ಪ್ರಾಣಿಗಳೆಲ್ಲ ಸಾಯತೊಡಗಿದವು. ಈ ವಿಷಯ ತಿಳಿದ ಕೃಷ್ಣ ಆ ಮಡುವಿಗೆ ಧುಮುಕಿ ಕಾಳಿಯನ ಹೆಡೆತುಳಿದು ಅದರ ಮದವಿಳಿಸುತ್ತಾನೆ. ಆ ಹೊತ್ತಿಗೆ ಕಾಳಿಯನ ಪತ್ನಿಯರೆಲ್ಲ ಬಂದು ಕೃಷ್ಣನಲ್ಲಿ ಪತಿ ಭಿಕ್ಷೆಯನ್ನು ಬೇಡಿದ್ದರಿಂದ ಅವರಿಗೆ ಅಭಯವಿತ್ತು ಕಾಳಿಯನನ್ನು ಸಮುದ್ರಕ್ಕೆ ಕಳುಹಿಸಿ ಮಡುವನ್ನು ಸ್ವಚ್ಛಗೊಳಿಸುತ್ತಾನೆ. (ಭಾ.ಸ್ಕಂ.೧೦, ಅ.೧೬)

ಕೀರ್ತನೆ ೧೧೭

(ನು. ೨) ರಂಭೆಗೆ ತತ್ವ ಹೇಳಿದನೆ: ವಿಷ್ಣು ವರಾಹಾವತಾರಿಯಾಗಿ ಭೂದೇವಿಯನ್ನು ಪ್ರಳಯಜಲಧಿಯಿಂದ ಉದ್ಧರಿಸಿದಾಗ, ಆಕೆ ವರಾಹನನ್ನು ಸೃಷ್ಟಿ , ಭಗವಂತ ಇತ್ಯಾದಿ ತತ್ವಗಳ ಬಗ್ಗೆ ಕೇಳಿದಾಗ ವರಾಹ ಅವುಗಳೆಲ್ಲವನ್ನು ವಿವರಿಸಿ ಹೇಳುತ್ತಾನೆ.(ವರಾಹ ಮಹಾಪುರಾಣಂ)

(ನು. ೩) ಪದ್ಮಜಾಂಡವನೊಡೆದವನೆ : ವಿಷ್ಣು ವಾಮನಾವತಾರಿಯಾಗಿ ಬಲಿಯಿಂದ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿ, ಮೊದಲನೆ ಹೆಜ್ಜೆಗೆ ಭೂಲೋಕವನ್ನು ಆಕ್ರಮಿಸುತ್ತಾನೆ. ಎರಡನೆಯ ಹೆಜ್ಜೆಯನ್ನು ಮೇಲೆತ್ತಿದಾಗ ಅದು ದ್ಯುಲೋಕವನ್ನು ಮೀರಿ,

ಮಹರ್ಲೋಕ, ಜನೋಲೋಕ, ತಪೋಲೋಕಗಳನ್ನು ದಾಟಿ ಬ್ರಹ್ಮಾಂಡ ಕಟಹವನ್ನು ಸೀಳಿ ಸತ್ಯಲೋಕದಲ್ಲಿ ಅದರ ಉಗುರಿನ ಕಾಂತಿ ಪಸರಿಸಿತು. (ಭಾ.ಸ್ಕಂ.೮, ಅ.೨೦, ೨೧)

(ನು. ೩) ಬಲಿಯ ಸದ್ಮವ ಬಿಡದೆ ಕಾಯ್ದವನೆ : ಬಲಿಯ ಧರ್ಮನಿಷ್ಠೆಗೆ ಮೆಚ್ಚಿದ ವಾಮನಮೂರ್ತಿ ಬಲಿಯನ್ನು ಸುತಲ ಲೋಕಕ್ಕೆ ಅಧಿಪತಿಯಾಗಿಸಿ, ಎಲ್ಲ ಸುಖಭೋಗಗಳನ್ನು ಕೊಟ್ಟು ಆತನ ಮನೆಯ ಬಾಗಿಲನ್ನು ಯಾವಾಗಲೂ ಕಾಯುತ್ತಿರುವುದಾಗಿ ಹೇಳಿ ಅಂತೆಯೇ ನಡೆದುಕೊಳ್ಳುತ್ತಾನೆ. (ಭಾ.ಸ್ಕಂ.೮, ಅ.೨೨)

(ಕೀ.೧೦೨, ನು.೩) (ಕೀ.೨೯೨, ನು.೧)

(ನು. ೪) ಮಡದಿಗೆ ಗಿಡವನಿತ್ತವನೆ: ಕೃಷ್ಣ ಸತ್ಯಭಾಮೆಗೆ ಮಾತುಕೊಟ್ಟಂತೆ ದೇವಲೋಕದಿಂದ ಪಾರಿಜಾತದ ಮರವನ್ನು ತಂದು ಆಕೆಯ ಮನೆಯ ಎದುರಿಗೆ ನೆಡುತ್ತಾನೆ. (ಭಾ.ಸ್ಕಂ.೧೦, ಅ.೬೯)

ಕೀರ್ತನೆ ೧೧೯

(ನು. ೫) ಸುಖತೀರ್ಥರು : ದ್ವೈತಸಿದ್ಧಾಂತದ ಪ್ರತಿಪಾದಕರಾದ ಮಧ್ವಾಚಾರ್ಯರಿಗೆ ಆನಂದತೀರ್ಥ, ಪೂರ್ಣಪ್ರಜ್ಞ ಮೊದಲಾದ ಹೆಸರುಗಳಿವೆ. ಇವರ ಪೂರ್ವಾಶ್ರಮದ ಹೆಸರು ವಾಸುದೇವ. ಉಡುಪಿಯ ಬಳಿಯ ಪಾಜಕ(ಬೆಳ್ಳಿ) ಎಂಬಲ್ಲಿ ಇವರು ಹುಟ್ಟಿದರು. ಹಲವಾರು ಧಾರ್ಮಿಕ ಪರಂಪರೆಗಳ ಸಂಗಮಕ್ಷೇತ್ರವಾಗಿದ್ದ ತುಳುನಾಡಿನಲ್ಲಿ ಆಚಾರ್ಯರು ವೈದಿಕಧರ್ಮವನ್ನು ಎತ್ತಿಹಿಡಿದು ನಿಲ್ಲಿಸಿದರು. ಆಚಾರ್ಯರು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸುವ ಮೂವತ್ತೇಳು ಗ್ರಂಥಗಳನ್ನು ರಚಿಸಿದರು. ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠಾಪಿಸಿದ್ದಲ್ಲದೆ, ಪರ್ಯಾಯ ಕ್ರಮದಲ್ಲಿ ಅಷ್ಟಮಠಗಳ ಪೀಠಾಧಿಪತಿಗಳಿಂದ ಪೂಜಾಪದ್ಧತಿಯನ್ನು ಏರ್ಪಡಿಸಿದರು. ಇದು ಈಗಲೂ ನಡೆಯುತ್ತಿದೆ. ಉಡುಪಿಯ ಅಷ್ಟಮಠಗಳಲ್ಲದೆ ಉತ್ತರಾದಿಮಠ, ವ್ಯಾಸರಾಯಮಠ, ರಾಘವೇಂದ್ರಸ್ವಾಮಿ ಮಠ, ಮುಳಬಾಗಲು ಮಠ, ಬಾಳಗಾರು ಮಠ ಮೊದಲಾದ ಮಠಗಳೂ ಮಧ್ವಾಚಾರ್ಯರ ಪರಂಪರೆಗೇ ಸೇರಿವೆ. ಕರ್ನಾಟಕವಲ್ಲದೆ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲೂ ಮಧ್ವಾಚಾರ್ಯರ ಅನುಯಾಯಿಗಳಿದ್ದಾರೆ. ಬಂಗಾಳದ ಕಡೆಯ ಗೌಡೀಯ ಪಂಥದವರಿಗೂ ಮಧ್ವಾಚಾರ್ಯರು ಗುರುಗಳು.

(ಜತೆ) ನರಹರಿತೀರ್ಥರು: ನರಹರಿತೀರ್ಥರು ಮಧ್ವಾಚಾರ್ಯರ ಶಿಷ್ಯರಲ್ಲಿ ಪ್ರಮುಖರು. ಇವರ ಪೂರ್ವಾ ಶ್ರಮದ ಹೆಸರು ಶ್ಯಾಮಶಾಸ್ತ್ರೀ. ಮೊದಲಿಗೆ ಇವರು ಒರಿಸ್ಸಾದ ಗಜಪತಿರಾಜನಲ್ಲಿ ಅಧಿಕಾರಿಯಾಗಿದ್ದುದಾಗಿ ತಿಳಿದುಬರುತ್ತದೆ. ಮಧ್ವಾಚಾರ್ಯರು ಬದರಿಯ ಯಾತ್ರೆ ಮುಗಿಸಿ ಒರಿಸ್ಸಾದೇಶಕ್ಕೆ ಬಂದಾಗ ಇವರು ಅವರ ಪಾಂಡಿತ್ಯ, ಉಪದೇಶಗಳಿಗೆ ಮನಸೋತು ಶಿಷ್ಯರಾಗಿ ಸನ್ಯಾಸ ಸ್ವೀಕರಿಸಿ ನರಹರಿತೀರ್ಥರಾದರು. ಮಧ್ವಾಚಾರ್ಯರ ತರುವಾಯ

ಮಠಾಧಿಪತಿಗಳಾಗಿ ಬಂದ ಪದ್ಮನಾಭತೀರ್ಥರು ವೃಂದಾವನಸ್ಥರಾದ ಮೇಲೆ ಇವರು ಸು. ೧೩೨೪ರಿಂದ ೧೩೩೩ರವರೆಗೆ ಪೀಠಾಧಿಪತಿಗಳಾಗಿದ್ದರು. ಸಂಸ್ಕೃತದಲ್ಲಿ ಉದ್ದಾಮ ಪಂಡಿತರಾಗಿದ್ದು, ಹದಿನೈದು ಕೃತಿಗಳನ್ನು ರಚಿಸಿದ್ದಾಗಿ ತಿಳಿದುಬರುತ್ತದೆ.

(ಕರ್ನಾಟಕ ವಿಷಯ ವಿಶ್ವಕೋಶ, ಪು. ೮೨೫)

(ಜತೆ) ಸತ್ಯಾಭಿನವತೀರ್ಥಗುರು: ಉತ್ತರಾದಿಮಠದ ಪೀಠಿಗೆಯಲ್ಲಿ, ಕ್ರಿ.ಶ.೧೭೦೬ರಿಂದ ೧೭೨೬ರವರೆಗೆ ಪೀಠಾಧಿಪತಿಗಳಾಗಿದ್ದುದಾಗಿ ತಿಳಿದುಬರುತ್ತದೆ. ಇವರು ಗುರು ಸತ್ಯನಾಥರ ಶಿಷ್ಯರಾಗಿದ್ದರು. ಇವರನ್ನು ಬಹಳ ಗೌರವಾದರಗಳಿಂದ ಪ್ರಸನ್ನವೆಂಕಟರು ಅನೇಕ ಕೀರ್ತನೆಗಳಲ್ಲಿ ಸ್ಮರಿಸಿದಾರೆ.

ಕೀರ್ತನೆ ೧೨೦

(ನು. ೩) ವಿಭೀಷಣವರದ: ಪೌಲಸ್ತ್ಯ ಮುನಿಯಿಂದ ಕೈಕಸೆಯಲ್ಲಿ ಜನಿಸಿದ ನಾಲ್ಕನೆಯ ಮಗ ವಿಭೀಷಣ. ರಾವಣ, ಕುಂಭಕರ್ಣರು ಇವನ ಅಣ್ಣಂದಿರು. ಈತ ಧರ್ಮಾತ್ಮನೂ, ಬ್ರಹ್ಮಜ್ಞಾನಿಯೂ ಆಗಿದ್ದು ಸೀತೆಯನ್ನು ಅಪಹರಿಸಿ ತಂದ ರಾವಣನಿಗೆ ನೀತಿ ಹೇಳಲು ಹೋಗಿ ಅವನಿಂದ ತಿರಸ್ಕೃತನಾಗುತ್ತಾನೆ. ಅನಂತರ ಸಮುದ್ರದ ಆಚೆ ದಡದಲ್ಲಿ ಬೀಡು ಬಿಟ್ಟಿದ್ದ ರಾಮನನ್ನು ಮರೆಹೊಕ್ಕು ಆತನಿಂದ ಅಭಯವನ್ನು ಪಡೆಯುತ್ತಾನೆ. ರಾಮ ರಾವಣರ ನಡುವೆ ನಡೆದ ಯುದ್ಧದಲ್ಲಿ ರಾಮನಿಗೆ ಸಹಾಯಕನಾಗಿದ್ದು, ರಾವಣವಧೆಯಾದನಂತರ ಲಂಕಾಧಿಪತಿಯಾಗುತ್ತಾನೆ. (ಪುನಾಚೂ, ಪು. ೫೭೨)

(ಕೀ.೧೨೧, ನು.೬)

ಕೀರ್ತನೆ ೧೨೧

(ನು. ೭) ಋಕ್ಷವರಪ್ರದ : ಶಮಂತಕಮಣಿಗಾಗಿ ಕೃಷ್ಣ ಜಾಂಬವಂತನೊಡನೆ ಯುದ್ಧ ಮಾಡಿದಾಗ, ದಣಿದ ಜಾಂಬವಂತ ಕೃಷ್ಣನಿಗೆ, ನೀನು ಶ್ರೀರಾಮನೇ ಇರಬೇಕು. ಬೇರಾರೂ ನನ್ನನ್ನು ಜಯಿಸಲಾರರು– ಎಂದು ಹೇಳಿ, ಆ ರತ್ನದೊಡನೆ ತನ್ನ ಮಗಳು ಜಾಂಬವತಿಯನ್ನೂ ಕೃಷ್ಣನಿಗೆ ಕೊಟ್ಟು ವಿವಾಹ ಮಾಡಿದನು. ಆಗ ಕೃಷ್ಣನೂ ಜಾಂಬವಂತನ ಸತ್ಕಾರಕ್ಕೆ ಸಂತುಷ್ಟನಾಗಿ ಪುನರಾವರ್ತಿಯಿಲ್ಲದ ಮುಕ್ತಿಯನ್ನು ಅವನಿಗೆ ಕರುಣಿಸಿದನು.

(ಭಾ. ಸ್ಕಂ. ೧೦, ಅ. ೫೬)

ಕೀರ್ತನೆ ೧೨೩

(ನು. ೨) ಖಗಮುಕ್ತಿದಾಯಕ : ರಾವಣ ಸೀತೆಯನ್ನು ಕದ್ದೊಯ್ಯುತ್ತಿದ್ದಾಗ, ದಂಡಕಾರಣ್ಯದಲ್ಲಿದ್ದ ಜಟಾಯು ರಾವಣನನ್ನು ಎದುರಿಸಿ ಹೋರಾಡುತ್ತಾನೆ. ರಾವಣ

ಜಟಾಯುವಿನ ರೆಕ್ಕೆ ಕತ್ತರಿಸಿದಾಗ ಜಟಾಯು ಕೆಳಕ್ಕೆ ಬೀಳುತ್ತಾನೆ. ಸೀತೆಯನ್ನು ಹುಡುಕುತ್ತ ಬಂದ ರಾಮನಿಗೆ ಜಟಾಯು ನಡೆದದ್ದನ್ನು ತಿಳಿಸಿ ಸತ್ತಾಗ, ರಾಮ ಆತನಿಗೆ ಅಗ್ನಿಸಂಸ್ಕಾರ ಮಾಡಿ, ತಿಲಾಂಜಲಿಯನ್ನು ಕೊಟ್ಟು ಮುಂದಕ್ಕೆ ತೆರಳುತ್ತಾನೆ.

(ಪುನಾಚೂ, ಪು.೨೨೬)

ಕೀರ್ತನೆ ೧೨೫

(ನು. ೩) ಹಂಸಡಿಬಿಕ ವೈರಿ: ಹಂಸ ಡಿಬಿಕರು ಸಹೋದರರು. ಡಿಬಿಕ ಜರಾಸಂಧನ ಪ್ರಧಾನ ಮಂತ್ರಿ. ಹಂಸ ಕರೂಷದೇಶದ ರಾಜ. ಒಮ್ಮೆ ಬಲರಾಮಕೃಷ್ಣರೊಂದಿಗೆ, ಜರಾಸಂಧ ಯುದ್ಧಕ್ಕೆ ಹೋದ ಸಂದರ್ಭದಲ್ಲಿ ಇವರೂ ಆತನ ಸಂಗಡ ಹೋಗುತ್ತಾರೆ. ಕೃಷ್ಣನೊಡನೆ ಹಂಸನು ಯುದ್ಧ ಮಾಡಿ ಮೂರ್ಛಿತನಾದಾಗ ಡಿಬಿಕನು ಹಂಸನು ಸತ್ತನೆಂದೇ ಭಾವಿಸಿ ತಾನೂ ಯಮುನಾ ನದಿಗೆ ಹಾರಿ ಸಾಯುತ್ತಾನೆ. ಎಚ್ಚತ್ತ ಹಂಸನೂ ಡಿಬಿಕನ ಮರಣವಾರ್ತೆಯನ್ನು ಕೇಳಿ ಯಮುನಾನದಿಗೆ ಹಾರಿ ಪ್ರಾಣತ್ಯಾಗ ಮಾಡುತ್ತಾನೆ.

(ಪು. ಭಾ. ಕೋ. ಪು. ೨೩೯)

(ನು. ४) ದಮಘೋಷಜಹರ : ಕೃಷ್ಣನ ಸೋದರತ್ತೆಯಾದ ಶ್ರುತಶ್ರವೆ ಹಾಗೂ ದಮಘೋಷರ ಮಗ ಶಿಶುಪಾಲ. ಇವನು ಹಿರಣ್ಯಕಶಿಪುವಿನ ಅಂಶದವನು. ರಾಜಸೂಯಯಾಗದ ಸಂದರ್ಭದಲ್ಲಿ ಅಗ್ರಪೂಜೆಯ ಕಾಲದಲ್ಲಿ ಪಾಂಡವರು ಕೃಷ್ಣನನ್ನು ಗೌರವಿಸಿದಾಗ ಇವನು ಕೃಷ್ಣನನ್ನು ನಿಂದಿಸಿ ಆತನಿಂದ ಹತನಾದನು.

(ಪುನಾಚೂ, ಪು. ೫೯४)

(ಕೀ. ೧೩೮ ನು. ೨೧)

ಕೀರ್ತನೆ ೧೨೬

(ನು. ೮) ಉದಯ ತೋಮಾಲೆಸೇವೆ: ತಿರುಪತಿಯ ತಿಮ್ಮಪ್ಪನಿಗೆ ನಡೆಯುವ ದಿನದ ಮೊದಲ ಪೂಜೆಗೆ 'ವಿಶ್ವರೂಪ ಸೇವೆ'ಯೆಂಬ ಹೆಸರಿದೆ. ನಂತರ ಧರ್ಮದರ್ಶನವಾದ ಮೇಲೆ ನಿರ್ಮಾಲ್ಯಶೋಧನದ ಕಾರ್ಯ ನಡೆಯುತ್ತದೆ. ನಿರ್ಮಾಲ್ಯಶೋಧನವಾದ ಮೇಲೆ ನಡೆಯುವುದೇ ದಿನದಲ್ಲಿ ಮುಖ್ಯವಾದ ಪೂಜೆ. ಈ ಮಧ್ಯಾಹ್ನದ ಪೂಜೆಗೆ 'ತೋಮಾಲೆ ಸೇವೆ'ಯೆಂಬ ಹೆಸರಿದೆ. 'ತೋಡಿತ್ತಮಾಲೆ'ಯ (=ಕಟ್ಟಿದ ಹೂದಂಡೆಗಳು) ಸಂಕ್ಷಿಪ್ತರೂಪವೇ 'ತೋಮಾಲೆ' ಇರಬೇಕೆಂಬ ಊಹೆಯಿದೆ. ಬಗೆಬಗೆಯ ಹೂಮಾಲೆಗಳನ್ನುಹಾಕಿ ಸಿಂಗರಿಸುವ ಪದ್ಧತಿ ತುಂಬ ಹಳೆಯದು. ಆದರೆ ಹೂವಿನಿಂದ ಅಲಂಕರಿಸುವುದಷ್ಟೇ ಈ ಪೂಜೆಯಲ್ಲಿ ನಡೆಯುವುದಿಲ್ಲ. ವೈಖಾನಸ ಪದ್ಧತಿಯ 'ಆಸನ' ಪೂಜೆಗಳನ್ನು ನಡೆಸುವುದು ರೂಢಿಯಲ್ಲಿದೆ.

(ತಿರುಪತಿ ತಿಮ್ಮಪ್ಪ. ಪು. ೨೮೫ – ೨೮೯)

ಕೀರ್ತನೆ ೧೨೮

(ನು. ೨) **ನಿಜ ರಾಣಿಯ ಯಜ್ಞೆಯ ಮುಖದಲಿ ಕೈಕೊಂಡು:** ರಾವಣನ ವಧೆಯ ನಂತರ, ತನ್ನ ಬಳಿಗೆ ಬಂದ ಸೀತೆಯ ಶೀಲವನ್ನು ಶಂಕಿಸಿ ರಾಮ ಮಾತನಾಡಿದಾಗ ಸೀತೆ ಅಗ್ನಿಪ್ರವೇಶ ಮಾಡುತ್ತಾಳೆ. ದೇವತೆಗಳು ಸೀತೆಯ ಪಾತಿವ್ರತ್ಯವನ್ನು ಕೊಂಡಾಡಿ, ರಾಮನಿಗೆ ಆಕೆಯನ್ನು ಪರಿಗ್ರಹಿಸುವಂತೆ ಹೇಳಿದಾಗ ರಾಮ ಒಪ್ಪಿ ಆಕೆಯನ್ನು ಪರಿಗ್ರಹಿಸುತ್ತಾನೆ.

(ರಾಮಾಯಣ, ಯುದ್ಧಕಾಂಡ)

ಕೀರ್ತನೆ ೧೩೭

(ನು. ೩) **ಕಪಿಲ** : ಕರ್ದಮಮುನಿಯಿಂದ ಸ್ವಾಯಂಭುವ ಮನುಪುತ್ರಿಯಾದ ದೇವಹೂತಿಯಲ್ಲಿ ಜನಿಸಿದ ಕಪಿಲಮಹರ್ಷಿಯು ವಿಷ್ಣುವಿನ ಅವತಾರ ಎಂಬ ನಂಬಿಕೆ ಇದೆ. ಈತ ತನ್ನ ತಾಯಿಗೆ ಸಾಂಖ್ಯತತ್ವವನ್ನು ಬೋಧಿಸಿದ. (ಪುನಾಚೂ. ಪು.೮೨)

ಕೀರ್ತನೆ ೧೩೮

(ಪ.) **ಮುರಹರ** : ಮುರ ನರಕಾಸುರನ ಪರಿವಾರಕ್ಕೆ ಸೇರಿದ ಒಬ್ಬ ರಾಕ್ಷಸ. ಕೃಷ್ಣ ಇವನನ್ನು ಕೊಲ್ಲುತ್ತಾನೆ. ಆದ್ದರಿಂದ ಕೃಷ್ಣನಿಗೆ ಮುರಹರ, ಮುರಾರಿ ಎಂಬ ಹೆಸರುಗಳು ಬಂದಿವೆ. (ಪು.ನಾಚೂ. ಪು.೫೦೦)

(ನು. ૩) **ತಾಟಕಾಂತಕ:** ತಾಟಕಾ ಒಬ್ಬ ರಾಕ್ಷಸಿ, ವಿಶ್ವಾಮಿತ್ರ ಮಹರ್ಷಿಯ ಆಶ್ರಮದ ಸಮೀಪದಲ್ಲೇ ವಾಸಿಸುತ್ತಿದ್ದ ಇವಳು ಹಾಗೂ ಇವಳ ಇಬ್ಬರು ಮಕ್ಕಳು, ಮಹರ್ಷಿಯ ಯಜ್ಞಕ್ಕೆ ವಿಘ್ನವನ್ನುಂಟು ಮಾಡುತ್ತಿದ್ದರು. ವಿಶ್ವಾಮಿತ್ರ ರಾಮಲಕ್ಷ್ಮಣರನ್ನು ಸಿದ್ಧಾಶ್ರಮಕ್ಕೆ ಕರೆತರುವಾಗ ದಾರಿಯಲ್ಲಿ ಈಕೆಯ ವೃತ್ತಾಂತವನ್ನು ತಿಳುಹಿ, ರಾಮನ ಮೂಲಕ ತಾಟಕೆಯನ್ನು ಕೊಲ್ಲಿಸಿದ.

(ರಾಮಾಯಣ, ಬಾಲಕಾಂಡ)

(ನು. ೩) **ಸೂರ್ಯಸುತಪಾಲ:** ರಾಮ ವಾಲಿಯನ್ನು ಕೊಂದು ಸೂರ್ಯಸುತನಾದ ಸುಗ್ರೀವನನನ್ನು ಕಿಷ್ಕಿಂಧೆಯ ಅಧಿಪತಿಯನ್ನಾಗಿ ಮಾಡುತ್ತಾನೆ.

(ರಾಮಾಯಣ, ಕಿಷ್ಕಿಂಧಾಕಾಂಡ)

(ನು. ೪) **ಕರಿ:** ಕುವಲಯಾಪೀಡ ಕಂಸನಲ್ಲಿದ್ದ ಒಂದು ಆನೆ. ಸಾವಿರ ಆನೆಗಳ ಬಲವುಳ್ಳದ್ದು. ಕಂಸ, ಬಲರಾಮ ಕೃಷ್ಣರನ್ನು ಹೇಗಾದರೂ ಕೊಲ್ಲಬೇಕೆಂಬ ದುರುದ್ದೇಶದಿಂದ ಅವರನ್ನು ಮಧುರೆಗೆ ಕರೆಸಿಕೊಂಡಾಗ ಈ ಆನೆಯನ್ನು ಹೆಬ್ಬಾಗಿಲಲ್ಲಿ ಅಡ್ಡಲಾಗಿ ನಿಲ್ಲಿಸಿದ್ದ.

ಬಲರಾಮ ಕೃಷ್ಣರು ಹತ್ತಿರಕ್ಕೆ ಬಂದಕೂಡಲೆ ಆನೆಯನ್ನು ಅವರ ಮೇಲೆ ಓಡಿಸುವಂತೆ ಮಾವುತನಿಗೆ ಹೇಳಿದ್ದ.. ಆದರೆ ಕೃಷ್ಣನ ಮುಂದೆ ಆನೆಯ ಸಾಹಸ ನಡೆಯಲಿಲ್ಲ. ಕೃಷ್ಣನೇ ಆನೆಯನ್ನು ಕೊಂದು ಕೆಡಹಿದ. (ಭಾ. ಸ್ಕಂ. ೧೦, ಅ. ೪೩)

(ಕೀ.೧೫೦, ನು.೨) (ಕೀ.೪೪೪, ನು.೮)

(ನು. ೪) **ಚಾಣೂರ:** ಕಂಸನ ಆಸ್ಥಾನದಲ್ಲಿದ್ದ ಒಬ್ಬ ಜಟ್ಟಿ. ಬಲರಾಮ ಕೃಷ್ಣರು ಬಿಲ್ಲಹಬ್ಬಕ್ಕಾಗಿ ಕಂಸನ ಅಪ್ಪಣೆಯ ಮೇರೆಗೆ ಮಥುರೆಗೆ ಹೋಗಿದ್ದಾಗ ಇವನೂ, ಇವನ ಜತೆಗಾರನಾದ ಮುಷ್ಟಿಕನೂ ಕಂಸನ ಪ್ರೇರಣೆಯಿಂದ, ರಾಮಕೃಷ್ಣರನ್ನು ಕೊಲ್ಲಹೋಗಿ, ಮುಷ್ಟಿಯುದ್ಧದಲ್ಲಿ ತಾವೇ ಹತರಾದರು.

(ಕೀ.೧೪೬, ಪ.) (ಕೀ.೧೫೦, ನು.೨) (ಭಾ.ಸ್ಕಂ.೧೦, ಅ.೪೪)

(ನು. ೪) **ಮಾತುಳಾಂತಕ:** ಸೋದರಮಾವನಾದ ಕಂಸನನ್ನು ಕೊಂದವನು-ಕೃಷ್ಣ.

(ನು. ೫) **ತ್ರಿವಿಕ್ರಮ:** ವಿಷ್ಣುವು ಬಲಿಯನ್ನು ನಿಗ್ರಹಿಸುವುದಕ್ಕಾಗಿ ಅದಿತಿ ಕಶ್ಯಪರ ಮಗನಾಗಿ ವಾಮನ ರೂಪದಿಂದ ಜನಿಸಿ, ಬಲಿಯನ್ನು ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿ, ಭೂಮ್ಯಾಕಾಶಗಳಲ್ಲಿ ಎರಡು ಪಾದಗಳನ್ನಿಟ್ಟು ಮತ್ತೊಂದು ಪಾದವನ್ನು ಬಲಿಂಯ ತಲೆಂಯ ಮೇಲಿರಿಸಿ, ಮೂರು ಹೆಜ್ಜೆಗಳಲ್ಲೇ ಜಗತ್ತೆಲ್ಲವನ್ನೂ ಆವರಿಸಿಕೊಂಡವನಾದುದರಿಂದ ತ್ರಿವಿಕ್ರಮನೆಂಬ ಹೆಸರು ಬಂದಿದೆ.

(ಕೀ.೧೩೮, ನು.೪೯) (ಪು.ನಾ.ಚೂ, ಪು.೨೭೪)

(ನು. ೬) **ಅನಂತವರ್ಣಾಭಿಧ:** ಅನಂತರೂಪ ಹಾಗೂ ಹೆಸರುಗಳುಳ್ಳವನು - ವಿಷ್ಣು.

(ನು. ೬) **ತ್ರಿವಿಧ ಜನಾಶ್ರಯ:** ಮಧ್ವ ಸಿದ್ಧಾಂತದ ಪ್ರಕಾರ ಜೀವಿಗಳಲ್ಲಿ ಮೂರು ವಿಧ. ಮುಕ್ತಿಯೋಗ್ಯರು. (ಉತ್ತಮರು), ನಿತ್ಯ ಸಂಸಾರಿಗಳು(ಅಧಮರು)ಮತ್ತು ತಮೋಯೋಗ್ಯರು (ಅಧಮಾಧಮರು) -ಇವರೆಲ್ಲರಿಗೂ ಆಶ್ರಯನಾದವನು.

(ನು. ೭) **ವಾಸವೇಯ** : ಉಪರಿಚರವಸುವಿನ ಮಗಳು ಸತ್ಯವತಿ, ದಾಶರಾಜನಿಂದ ಪೋಷಿತಳು.

ಇವಳಿಗೆ ವಾಸವೀ ಎಂಬ ಹೆಸರೂ ಇದೆ. ಈಕೆ ಪರಾಶರಮುನಿಯಿಂದ ವ್ಯಾಸನನ್ನು ಪಡೆದಳು. ವ್ಯಾಸವಾಸವಿಯರ ಮಗನಾಗಿ ವಾಸವೇಯ ಎನಿಸಿದ. ವ್ಯಾಸ ವಿಷ್ಣುವಿನ ಅಂಶಾವತಾರಿಯೆಂಬ ಉಲ್ಲೇಖವಿದೆ. (ಮತ್ಸ್ಯಪುರಾಣ ೫೨/ ೩-೧೧). ಈ ಕಾರಣದಿಂದ ವಿಷ್ಣುವನ್ನು ಇಲ್ಲಿ ವಾಸವೇಯ ಎಂದು ಕರೆಯಲಾಗಿದೆ. (ಕೀ. ೪೪೭, ನು. ೨)

(ಸು.೭) ಋಷಭ: ವಿಷ್ಣುವು ನಾಭಿರಾಜ ಸುದೇವಿಯರ ಮಗ – ಋಷಭನಾಗಿ ಹುಟ್ಟಿದನು. ಈ ಋಷಭದೇವನು ವಿಷ್ಣುವಿನ ಅವತಾರವೆಂದು ಭಾಗವತ ಹೇಳುತ್ತದೆ.

(ಭಾ.ಸ್ಕಂ.೨, ಅ.೭)

(ಸು.೭) ಮಹಿದಾಸ : ಐತರೇಯ ಉಪನಿಷತ್ತಿನ ದ್ರಷ್ಟಾರ. ಇವನೂ ವಿಷ್ಣುವಿನ ಅವತಾರವೆಂಬ ನಂಬಿಕೆ ಇದೆ.

(ಸು.೭) ಯಜ್ಞ : ವಿಷ್ಣುವು ರುಚಿಯೆಂಬ ಪ್ರಜಾಧಿಪತಿಗೆ ಆಕೂತಿಯೆಂಬ ಭಾರ್ಯೆಯಲ್ಲಿ ಸುಯಜ್ಞನೆಂಬ ಹೆಸರಿನಿಂದ ಹುಟ್ಟಿದನು. ಈತ ದಕ್ಷಿಣಾದೇವಿಯಲ್ಲಿ ಯಾಮರೆಂಬ ೧೨ ಮಂದಿ ದೇವತೆ ಗಳನ್ನು ಪಡೆದದ್ದಲ್ಲದೆ, ಇಂದ್ರನೆನಿಸಿಕೊಂಡು ಸಮಸ್ತಲೋಕಗಳ ಬಾಧೆಗಳನ್ನೂ ಹರಿಸಿ, ಮಾತಾಮಹನಾದ ಸ್ವಾಯಂಭುವ ಮನುವಿನಿಂದ ಹರಿ ಎಂಬ ಹೆಸರನ್ನು ಪಡೆದನು.

(ಕೀ.೪೪೭, ಸು.೨) (ಭಾ.ಸ್ಕಂ.೨, ಅ.೭)

(ಸು. ೭) ದತ್ತ: ಅತ್ರಿಮುನಿ ಸಂತಾನಾರ್ಥವಾಗಿ ತಪಸ್ಸು ಮಾಡಿದಾಗ, ವಿಷ್ಣು ಆತನ ತಪಸ್ಸಿಗೆ ಮೆಚ್ಚಿ ಆತನ ಮಗನಾಗಿ ಜನಿಸಿ ದತ್ತಾತ್ರೇಯನೆಂದು ಪ್ರಸಿದ್ಧನಾಗುತ್ತಾನೆ.

(ಸು. ೭) ಸಂಕರ್ಷಣ : ಶ್ರೀಹರಿ ಅನಿರುದ್ಧನೆಂಬ ಹೆಸರಿನಲ್ಲಿ ಜಗತ್ ಸೃಷ್ಟಿಕಾರ್ಯವನ್ನೂ, ಪ್ರದ್ಯುಮ್ನ ನಾಮಕನಾಗಿ ಜಗತ್ಪಾಲನೆಯನ್ನೂ, ಸಂಕರ್ಷಣನಾಮಕನಾಗಿ ಜಗತ್ಸಂಹಾರ ಕಾರ್ಯವನ್ನೂ ಮಾಡುತ್ತಾನೆ. (ಮತಾನಿ.ಅ.೧, ಶ್ಲೋ ೬–೮)

(ಸು. ೯) ಗುಣತ್ರಯರಹಿತ: ಸತ್ತ್ವಗುಣ, ರಜೋಗುಣ, ತಮೋಗುಣಗಳಿಗೆ ಅತೀತನಾದವನು ವಿಷ್ಣು.

(ಸು. ೯) ವಿಶ್ವಾವಸ್ಥತ್ರಯದಾತ : ಲೋಕಗಳ ಸೃಷ್ಟಿ ಸ್ಥಿತಿ ಲಯಕಾರ್ಯಗಳನ್ನು ನಡೆಸುವವನು ವಿಷ್ಣು.

(ಸು. ೧೧) ದಕ್ಷಾಧ್ವರಹರ : ದಕ್ಷ ತನ್ನ ಮಗಳಾದ ಸತೀದೇವಿಯನ್ನು ಶಿವನಿಗೆ ಮದುವೆ ಮಾಡಿ ಕೊಟ್ಟಿದ್ದ. ದೇವಸಭೆಯಲ್ಲಿ ಅಳಿಯ ತನಗೆ ಮರ್ಯಾದೆ ಮಾಡಲಿಲ್ಲವೆಂಬ ಆಗ್ರಹದಿಂದ ದಕ್ಷ ಶಿವನನ್ನು ಅಲಕ್ಷ್ಯಮಾಡಿ ನಿರೀಶ್ವರ ಯಾಗ ಮಾಡತೊಡಗಿದ. ಸತಿ ತನಗೆ ಆಮಂತ್ರಣವಿಲ್ಲದಿದ್ದರೂ ತಂದೆಯ ಯಾಗಶಾಲೆಗೆ ಹೋಗಿ ಅಲ್ಲಿ ಅಪಮಾನ ತಿರಸ್ಕಾರಗಳಿಗೆ ಗುರಿಯಾಗಿ ಯೋಗಾಗ್ನಿಯಲ್ಲಿ ದೇಹತ್ಯಾಗ ಮಾಡಿದಳು. ಶಿವ ಈ ಸಮಾಚಾರವನ್ನು ಕೇಳಿ ವೀರಭದ್ರನ ಮೂಲಕ ದಕ್ಷನ ಯಜ್ಞವನ್ನು ಧ್ವಂಸ ಮಾಡಿಸಿದ.

(ಪುನಾಚೂ, ಪು. ೨೭೮)

(ಸು. ೧೮) ಖಾದಿಪಂಚಕ : ಆಕಾಶ, ಪೃಥ್ವಿ, ಅಪ್ಪು, ತೇಜಸ್ಸು, ವಾಯು – ಈ ಐದು ಭೂತಗಳು.

(ನು. ೨೦) ಶ್ರವಣ ಘಾತಕ : ಕರ್ಣನ ಸಾವಿಗೆ ಕಾರಣನಾದವನು ಕೃಷ್ಣ.

(ನು. ೨೫) ನಿಟಿಲ ದೃಕ್ ಟೀಕಾರ್ಥ ಸುಪ್ರಿಯ: ಶಿವನು ಪಾರ್ವತಿಗೆ ಉಪದೇಶಿಸಿದ ರಾಮತಾರಕ ಮಂತ್ರದಲ್ಲಿ ಪ್ರೀತಿ ಉಳ್ಳವನು.

(ನು. ೨೫) ಟಂಕಾನ್ವಿತ ಕರಾಬ್ಜ: ಸಮುದ್ರಮಥನದಿಂದ ಅಮೃತ ಹೊರಬಂದ ಸಂದರ್ಭದಲ್ಲಿ, ಹರಿ ಮೋಹಿನಿಯಾಗಿ ಕೈಯಲ್ಲಿ ಅಮೃತ ಕುಂಭವನ್ನು ಹಿಡಿದು ದೇವತೆಗಳಿಗೇ ಅಮೃತವನ್ನೆಲ್ಲ ಹಂಚುತ್ತಾನೆ. ಹೀಗೆ ಕೊಡವನ್ನು ಹಿಡಿದ ಕರಕಮಲ ಹರಿಯದು.

(ನು. ೨೯) ಶಂಡಾಮರಕ : ಶಂಡ ಮತ್ತು ಅಮರ್ಕರು ರಾಕ್ಷಸ ಗುರುವಾದ ಶುಕ್ರಾಚಾರ್ಯನ ಮಕ್ಕಳು. ಹಿರಣ್ಯಕಶಿಪುವಿನ ಬಳಿ ಪುರೋಹಿತರಾಗಿದ್ದರು. ಪ್ರಹ್ಲಾದನ ವಿದ್ಯಾಗುರುಗಳು. ಇವರ ಪ್ರಭುವಾದ ಹಿರಣ್ಯಕಶಿಪುವನ್ನು ಹರಿ ನರಸಿಂಹಾವತಾರಿಯಾಗಿ ಕೊಲ್ಲುತ್ತಾನೆ. (ಭಾ.ಸ್ಕಂ. ೫, ಅ–೭)

(ನು. ೨೮) ತೀರ್ಥಶ್ರವ : ಪಂಡಿತರಿಂದ ಕೇಳಲ್ಪಡುವವನು, ಹರಿ.

(ನು. ೨೮) ಧೃತೌಷಧ : ಪ್ರಳಯಕಾಲದಲ್ಲಿ ಹರಿ ಮತ್ಸ್ಯಾವತಾರಿಯಾಗಿ ಔಷಧಗಳನ್ನು ರಕ್ಷಿಸಿದನು. (ಭಾ.ಸ್ಕಂ.೮, ಅ.೨೪)

(ನು. ೩೦) ದೌತ್ಯಕರ್ಮಗ : ಪಾಂಡವರ ವನವಾಸ ಅಜ್ಞಾತ ವಾಸಗಳು ಮುಗಿದ ಮೇಲೆ ಕೃಷ್ಣ ಯುಧಿಷ್ಠಿರನ ಪ್ರಾರ್ಥನೆಯಂತೆ ಪಾಂಡವರಿಗೆ ಸಲ್ಲತಕ್ಕ ಅರ್ಧರಾಜ್ಯವನ್ನು ಕೊಡಿಸಿ ಕೊಡುವುದಕ್ಕಾಗಿ ದುರ್ಯೋಧನನಲ್ಲಿಗೆ ರಾಯಭಾರಿಯಾಗಿ ಹೋಗಿದ್ದ.

(ಮಹಾಭಾರತ, ಉದ್ಯೋಗಪರ್ವ)

(ನು. ೧೩೮) ಧೌಮ್ಯ: ಒಬ್ಬ ಮಹರ್ಷಿ. ಪಾಂಡವರ ಪುರೋಹಿತ.

(ಪುನಾಚೂ, ಪು. ೩೫೮)

(ನು. ೩೧) ಗರ್ಗ: ಒಬ್ಬ ಮಹರ್ಷಿ. ಯಾದವರ ಪುರೋಹಿತ.

(ಪುನಾಚೂ, ಪು.೧೮೪)

(ನು. ೩೩) ಪಿನಾಕಿ ಮೋಹನ: ವಿಷ್ಣು ಮೋಹಿನೀ ರೂಪದಿಂದ ದೈತ್ಯರನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನು ಕುಡಿಸಿದನೆಂಬ ವೃತ್ತಾಂತವನ್ನು ಕೇಳಿದ ರುದ್ರ, ವಿಷ್ಣು ಲೋಕಕ್ಕೆ ಹೋಗಿ ತನಗೂ ಆ ಮೋಹಿನಿಯ ರೂಪವನ್ನು ತೋರಿಸೆಂದು ವಿಷ್ಣುವನ್ನು ಪ್ರಾರ್ಥಿಸುತ್ತಾನೆ.

ಆದಕ್ಕೆ ಒಪ್ಪಿದ ವಿಷ್ಣು ಮೋಹಿನಿಯ ರೂಪದಲ್ಲಿ ಪ್ರಕಟವಾದಾಗ ಆಕೆ ನಿಜವಾದ ಹೆಣ್ಣೆಂದೇ ಭ್ರಮಿಸಿದ ಶಿವ ಮೋಹಗೊಳ್ಳುತ್ತಾನೆ. (ಭಾ.ಸ್ಕಂ.೮, ಅ.೧೨)

(ನು. ೩೩) ಪೈಲ: ಪಿಲಿ ಎಂಬ ಮುನಿಯ ವಂಶದಲ್ಲಿ ಜನಿಸಿದ ಒಬ್ಬ ಮಹರ್ಷಿ. ವೇದವ್ಯಾಸನ ಶಿಷ್ಯ. ವ್ಯಾಸನು ವೇದವನ್ನು ನಾಲ್ಕಾಗಿ ವಿಭಾಗ ಮಾಡಿದ ಮೇಲೆ ಋಗ್ವೇದವನ್ನು ಈ ಮುನಿಗೆ ಹೇಳಿಕೊಟ್ಟನು. (ಪುನಾಚೂ, ಪು. ೪೨೦)

(ನು. ೩೩) ಶುಕ : ಕೃಷ್ಣ ದ್ವೈಪಾಯನನ ಮಗ. ತಂದೆಯಿಂದ ಧರ್ಮ ರಹಸ್ಯಗಳನ್ನು ತಿಳಿದ ಈತ ನಾರದನಿಂದ ಉಪದೇಶ ಹೊಂದಿ ವೈರಾಗ್ಯಭರಿತನಾದ. ತಂದೆಯಿಂದ ಕೇಳಿ ತಿಳಿದ ಭಾಗವತ ಕಥೆಗಳನ್ನು ಪರೀಕ್ಷಿತ್ ರಾಜನಿಗೆ ಹೇಳಿದನು. ಮಹಾಭಾರತವನ್ನು ಗಂಧರ್ವರಿಗೆ ಹೇಳಿದನು. (ಪುನಾಚೂ, ಪು.೬೦೮, ೬೦೯)

(ನು.೩೩) ಪೌರಾಣವಿರಚಕ: ವಿಷ್ಣುವಿನ ಅವತಾರಿಯಾದ ವ್ಯಾಸ ಮಹರ್ಷಿ ಮಹಾಭಾರತದ ಜೊತೆಗೆ ೧೮ ಪುರಾಣಗಳನ್ನು ರಚಿಸಿ, ತನ್ನ ಮಗನಾದ ಶುಕಮುನಿಗೆ ಬೋಧಿಸಿದನೆಂದು ಪರಂಪರೆ ಹೇಳುತ್ತದೆ. (ಪುನಾಚೂ, ಪು.೪೧೨)

(ನು. ೩೪) ಬಾಣಘ್ನ : ಬಲಿರಾಜನ ಹಿರಿಯಮಗ ಬಾಣ. ಶಿವಭಕ್ತ. ಕೃಷ್ಣನ ಮೊಮ್ಮಗ ಅನಿರುದ್ಧ ತನ್ನ ಮಗಳ ಅಂತಃಪುರದಲ್ಲಿದ್ದುದನ್ನು ಕಂಡ ಬಾಣಾಸುರ, ಅನಿರುದ್ಧನನ್ನು ನಾಗಪಾಶದಿಂದ ಬಂಧಿಸಿಡುತ್ತಾನೆ. ಇದನ್ನು ತಿಳಿದ ಕೃಷ್ಣ ಅವನೊಡನೆ ಯುದ್ಧಮಾಡಿ ಆತನನ್ನು ಸೋಲಿಸಿ ಉಷಾ ಅನಿರುದ್ಧರನ್ನು ದ್ವಾರಕೆಗೆ ಕರೆದೊಯ್ಯುತ್ತಾನೆ.

(ಭಾ.ಸ್ಕಂ.೧೦, ಅ.೬೨, ೬೩)

(ನು. ೩೫) ಭೌಮವರಪ್ರದ : ಭೂದೇವಿಯ ಮಗ ನರಕಾಸುರನಿಗೆ ಭೌಮಾಸುರನೆಂದೂ ಹೆಸರಿದೆ. ಭೂದೇವಿಯ ಬೇಡಿಕೆಯಂತೆ ವಿಷ್ಣು ನರಕಾಸುರನಿಗೆ ವೈಷ್ಣವಾಸ್ತ್ರವನ್ನು ದಯಪಾಲಿಸುತ್ತಾನೆ. (ಪುನಾಚೂ, ಪು.೩೬೭)

(ನು. ೪೧) ಶೂರ್ಪನಖಿ ಮದಹರ್ತ : ರಾಮಲಕ್ಷ್ಮಣ ಸೀತೆಯರು ಪಂಚವಟಿಯಲ್ಲಿದ್ದಾಗ ರಾಮನನ್ನು ಕಂಡ ಶೂರ್ಪನಖಿ ಆತನ ಮೇಲೆ ಮೋಹಗೊಂಡು ತನ್ನನ್ನು ವರಿಸೆಂದು ಕೇಳಿಕೊಳ್ಳುತ್ತಾಳೆ. ರಾಮ, ಲಕ್ಷ್ಮಣನನ್ನು ವರಿಸೆಂದು ಹೇಳುತ್ತಾನೆ. ಆಕೆ ಲಕ್ಷ್ಮಣನನ್ನು ಕೇಳಿದಾಗ, ಆತ ತಾನು ರಾಮನಿಗೆ ದಾಸನಾದುದರಿಂದ ನೀನು ರಾಮನನ್ನೇ ವರಿಸುವುದು ಉತ್ತಮ ಎನ್ನುತ್ತಾನೆ. ಆಗ ಶೂರ್ಪನಖಿ ಸೀತೆಯನ್ನು ಭಕ್ಷಿಸಿ ಬಿಡುತ್ತೇನೆಂದು ಹೊರಟಾಗ ಲಕ್ಷ್ಮಣ ರಾಮಾಜ್ಞೆಯಿಂದ ಆಕೆಯ ಕಿವಿ ಮೂಗುಗಳನ್ನು ಕುಯ್ದು ಕಳುಹಿಸುತ್ತಾನೆ.

(ರಾಮಾಯಣ, ಅರಣ್ಯಕಾಂಡ, ಸರ್ಗ. ೧೮)

(ನು. ೪೨) **ಷಡ್ವಿಭೂತಿ** : ಸಮಗ್ರ ಐಶ್ವರ್ಯ (ಸಂಪೂರ್ಣವಾದ ಒಡೆತನ), ಧರ್ಮ, ಯಶಸ್ಸು, ಶ್ರೀ , ವೈರಾಗ್ಯ, ಮೋಕ್ಷ – ಇವುಗಳನ್ನು ಒಳಗೊಂಡವನು.

(ಶ್ರೀನಿ, ಪು.೮೦)

(ನು. ೪೨) **ನಿಷಾದಭಯಹರ** : ಪಾಂಡವರನ್ನು ಕರೆತರಲು ದಾರುಕನನ್ನು ಕಳುಹಿಸಿದ ಕೃಷ್ಣನು ಯೋಗಾಭ್ಯಾಸದಿಂದ ದೇಹತ್ಯಾಗ ಮಾಡುವುದಕ್ಕಾಗಿ ಒಂದು ಮರದ ಅಡಿಯಲ್ಲಿ ಮಲಗಿರುವಾಗ ಜರನೆಂಬ ಬೇಡನೊಬ್ಬನು ಜಿಂಕೆಯೆಂಬ ಭ್ರಾಂತಿಯಿಂದ ಕೃಷ್ಣನ ಅಂಗಾಲಿಗೆ ಬಾಣ ಹೊಡೆದು, ಬಳಿಕ ಹತ್ತಿರ ಬಂದು ನೋಡಿ ತುಂಬ ಪಶ್ಚಾತ್ತಾಪಪಡುತ್ತಿದ್ದಾಗ, ಕೃಷ್ಣ ಆತನಿಗೆ ಸ್ವರ್ಗ ಪ್ರಾಪ್ತಿಯಾಗುವಂತೆ ಅನುಗ್ರಹಿಸುತ್ತಾನೆ. (ಪುನಾಚೂ, ಪು.೧೫೩)

(ನು. ೪೨) **ಷಡ್ವಧೂಧವ** : ಜಾಂಬವತಿ, ನೀಲಾ, ಭದ್ರಾ, ಮಿತ್ರವಿಂದಾ , ಕಾಳಿಂದಿ, ಲಕ್ಷಣಾ – ಈ ಷಣ್ಮಹಿಷಿಯರ ವಲ್ಲಭ ಕೃಷ್ಣ.

(ನು. ೪೨) **ಷಡ್ವಿಕಾರಾತೀತ:** ೧ ಜಾಯತೇ (ಹುಟ್ಟುತ್ತದೆ), ೨ ಅಸ್ತಿ (ಇರುತ್ತದೆ), ೩ ವರ್ಧತೇ (ಬೆಳೆಯುತ್ತದೆ), ೪ ಪರಿಣಮತೇ (ಮಾರ್ಪಡುತ್ತದೆ), ೫ ಅಪಕ್ಷೀಯತೇ (ಸವೆಯುತ್ತದೆ), ೬ ವಿನಶ್ಯತಿ (ಹಾಳಾಗುತ್ತದೆ)– ಈ ಆರು ಭಾವವಿಕಾರಗಳಿಗೆ ಅತೀತನಾದವನು ಹರಿ (ಶ್ರೀನಿ, ಪು. ೪೦೪)

(ನು. ೪೨) **ವೃಷೌಘಘ್ನ** : ಕೋಸಲ ದೇಶದ ದೊರೆ ನಗ್ನಜಿತನಲ್ಲಿದ್ದ ಏಳು ವೃಷಭಗಳನ್ನು ನಿಗ್ರಹಿಸಲು ಯಾವ ಕ್ಷತ್ರಿಯ ರಾಜಕುಮಾರರಿಗೂ ಸಾಧ್ಯವಾಗದಿದ್ದಾಗ ಕೃಷ್ಣ ತಾನು ಅವುಗಳನ್ನು ನಿಗ್ರಹಿಸಿ, ನಗ್ನಜಿತನ ಮಗಳು ಸತ್ಯೆಯನ್ನು ವಿವಾಹವಾಗುತ್ತಾನೆ.

(ಭಾ.ಸ್ಕಂ.೧೦, ಅ.೫೮)

(ನು. ೪೩) **ಸೈಂಧವಕಾಸ್ತ** : ಅಭಿಮನ್ಯುವಿನ ಸಾವಿಗೆ ಜಯದ್ರಥನೇ ಮುಖ್ಯ ಕಾರಣನೆಂದು ತಿಳಿದ ಅರ್ಜುನ ಮರುದಿನ ಸಂಜೆಯೊಳಗಾಗಿ ಸೈಂಧವನನ್ನು ಕೊಲ್ಲದಿದ್ದರೆ ಅಗ್ನಿಪ್ರವೇಶ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಇದನ್ನು ತಿಳಿದ ದುರ್ಯೋಧನ ಮರುದಿನದ ಯುದ್ಧದಲ್ಲಿ ಸೈಂಧವ ಅರ್ಜುನನ ಕಣ್ಣಿಗೆ ಬೀಳದಂತೆ ಬಚ್ಚಿಡುತ್ತಾನೆ. ಹೊತ್ತು ಮೀರುತ್ತ ಬಂದಾಗ ಕೃಷ್ಣ ಮಾಯಾಂಧಕಾರವನ್ನು ಕಲ್ಪಿಸಿ ಸೂರ್ಯಾಸ್ತವಾದಂತೆ ಭ್ರಾಂತಿ ಹುಟ್ಟಿಸುತ್ತಾನೆ. ಆಗ ಜಯದ್ರಥ ಕಾಣಿಸಿಕೊಂಡ ಕೂಡಲೇ ಅರ್ಜುನ ಅವನ ಶಿರವನ್ನು ತರಿದು, ಆ ರುಂಡ ವೃದ್ಧ ಕ್ಷತ್ರನ ತೊಡೆಯ ಮೇಲೆ ಬೀಳುವಂತೆ ಮಾಡುತ್ತಾನೆ.

(ಕೀ.೪೩೬, ನು.೫) (ಪುನಾಚೂ, ಪು.೨೩೮, ೨೩೯)

(ನು. ೪೬) **ಕ್ಷಾರಾಬ್ಧಿ ಬಂಧಕ** : ಲವಣ ಸಮುದ್ರಕ್ಕೆ ಸೇತುವೆ ಕಟ್ಟಿದವನು – ರಾಮ.

(ನು. ೪೬) ನೃಗೋದ್ಧರ: ನೃಗ ಸೂರ್ಯವಂಶದ ಅರಸು. ಒಂದು ಬಾರಿ ಒಬ್ಬ ಬ್ರಾಹ್ಮಣನಿಗೆ ದಾನ ಮಾಡಿದ್ದ ಹಸು ಹೇಗೋ ತಪ್ಪಿಸಿಕೊಂಡು ಮತ್ತೆ ಇವನ ಆಕಳುಗಳ ಮಂದೆಯನ್ನೇ ಸೇರಿತು. ನೃಗ ಅರಿಯದೆ ಅದನ್ನು ಬೇರೊಬ್ಬ ಬ್ರಾಹ್ಮಣನಿಗೆ ದಾನ ಕೊಡುತ್ತಾನೆ. ಮೊದಲ ಬಾರಿ ದಾನ ಪಡೆದವನು ಅದನ್ನು ಗುರುತಿಸಿ, ಆ ಇಬ್ಬರು ಬ್ರಾಹ್ಮಣರೂ ಅರಸನ ಬಳಿಗೆ ಹೋಗಿ ಬಹಳ ಕಾಲ ಕಾದಿದ್ದರೂ ಅರಸನ ದರ್ಶನ ದೊರೆಯದಿದ್ದಾಗ, ಅರಸನಿಗೆ ಓತಿಯ ಜನ್ಮ ಬರಲೆಂದು ಶಪಿಸುತ್ತಾರೆ. ನೃಗ, ಬ್ರಾಹ್ಮಣರ ಶಾಪ ಕೇಳಿ, ಅವರ ಮರೆಹೊಕ್ಕಾಗ ಕೃಷ್ಣನಿಂದ ಶಾಪವಿಮೋಚನೆಯಾಗುವುದೆಂದು ಹೇಳುತ್ತಾರೆ. ಓತಿಯಾಗಿ ತನ್ನ ಉದ್ಯಾನದ ಬಿಲವೊಂದರಲ್ಲಿದ್ದ ಈ ಅರಸ, ಕೃಷ್ಣ ಅಲ್ಲಿಗೆ ಬಂದಾಗ ತನ್ನ ಪೂರ್ವಜನ್ಮದ ಕಥೆಯನ್ನು ಹೇಳಿ ಶಾಪ ವಿಮುಕ್ತನಾಗುತ್ತಾನೆ. (ಪುನಾಚೂ,. ಪು. ೩೮೬)

(ನು. ೪೯) ತ್ರಯಸುವಿಗ್ರಹ : ಹರಿಯ ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ರೂಪಗಳು.

(ನು. ೪೯) ಕಾಲತ್ರಯಗ : ಭೂತ, ಭವ್ಯ (ಭವತ್, ವರ್ತಮಾನ) ಭವಿಷ್ಯ–ಈ ಕಾಲತ್ರಯಗಳಲ್ಲಿ ಚಲಿಸುವವನು.

(ನು. ೪೯) ಸಾಗರತ್ರಯಪ : ಲವಣ ಸಮುದ್ರ, ಕ್ಷೀರ ಸಮುದ್ರ, ಜಲಸಮುದ್ರಗಳನ್ನು ಪಾಲಿಸುವವನು.

(ನು. ೫೦) ಚತುರ್ವಿಧಾರ್ಥದ : ಧರ್ಮ, ಅರ್ಥ, ಕಾಮ, ಮೋಕ್ಷ–ಈ ಚತುರ್ವಿಧ ಪುರುಷಾರ್ಥಗಳನ್ನು ಕೊಡುವವನು.

(ನು.೫೦) ಚತುರ್ವರ್ಣ : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ.

(ನು.೫೦) ಚತುರ್ಮುಕ್ತಿ : ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ.

(ನು.೫೦) ಚತುರ್ಬಲ : ಹಸ್ತಿ, ಅಶ್ವ, ರಥ, ಪದಾತಿಗಳಿಂದ ಕೂಡಿದ ಸೈನ್ಯ.

(ನು.೫೦) ಚತುರ್ವೇದ : ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ.

(ನು.೫೦) ಚತುಶ್ಶಾಸ್ತ್ರ : ಶಬ್ದ, ತರ್ಕ, ಮೀಮಾಂಸಾ, ಧರ್ಮಶಾಸ್ತ್ರ.

(ನು.೫೧) ಪಂಚಮೋಕ್ಷ : ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ, ಸಾರ್ಷ್ಟಿ.

(ನು. ೫೧) ಪಂಚಪರ್ವಹ:ಅಜ್ಞಾನ, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರಗಳನ್ನು ಮೀರಿದವನು.

(ನು. ೫೧) **ಪಂಚಕಾಲಜ್ಞ** : ಐದು ಕಾಲಗಳನ್ನು ತಿಳಿದವನು.

(ನು. ೫೨) **ಷಡೂರ್ಮಿಹರ** : ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು, ಸಾವು – ಇವುಗಳನ್ನು ನಿವಾರಿಸುವವನು.

(ನು. ೫೨) **ಷಟ್ಸಪತ್ನಹನ್** : ಸಪತ್ನ – ಶತ್ರು, ಅರಿಷಡ್ವರ್ಗಗಳನ್ನು ಕೊಂದವನು.

(ನು. ೫೨) **ಷಟ್ಶಕ್ತ್ಯಾತ್ಮಕ** : ಆಹ್ಲಾದಿನಿ, ಸಂಧಿನಿ, ಜ್ಞಾನ, ಇಚ್ಛಾ, ಕ್ರಿಯಾ, ಲೀಲಾ– ಈ ಆರು ಶಕ್ತಿಗಳುಳ್ಳವನು. (ಶ್ರೀನಿ, ಪು. ೪೩೪)

(ನು. ೫೨) **ಷಡ್ಗುಣ**: ಸಮಗ್ರೈಶ್ವರ್ಯ, ಧರ್ಮ, ಯಶಸ್ಸು, ಶ್ರೀ. ಜ್ಞಾನ, ವೈರಾಗ್ಯ– ಇವು ಭಗವಂತನ ಆರು ಗುಣಗಳು. (ಶ್ರೀನಿ. ಪು.೧೪೬)

ಸರ್ವಜ್ಞತೆ, ತೃಪ್ತಿ, ಅನಾದಿಜ್ಞಾನ, ಸ್ವಾತಂತ್ರ್ಯ, ಶಕ್ತಿ ಪ್ರಕಾಶನ, ಅನಂತ ಶಕ್ತಿತ್ವ .

(ಹರಿವಂಶ ಪುರಾಣ)

(ನು. ೫೨) **ಷಡೃತು** : ವಸಂತ, ಗ್ರೀಷ್ಮ, ವರ್ಷ, ಶರತ್ತು, ಹೇಮಂತ, ಶಿಶಿರಗಳೆಂಬ ಆರು ಋತುಗಳು.

(ನು. ೫೨) **ಷಟ್ಕರಾಭಿದ** : ಷಟ್ಕರ ಎಂಬ ಹೆಸರುಳ್ಳವನು.

(ನು. ೫೨) **ಷಟ್ ಶಾಸ್ತ್ರ** : ತರ್ಕ, ವೇದಾಂತ, ಮೀಮಾಂಸ, ವ್ಯಾಕರಣ, ಜ್ಯೋತಿಷ, ಧರ್ಮಶಾಸ್ತ್ರ,

(ನು. ೫೨) **ಷಟ್ಕ**: ಆವಸಥ್ಯ, ಸಭ್ಯ, ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ, ಔಪಾಸನ ಅಗ್ನಿಗಳು

(ನು. ೫೪) **ಅಷ್ಟಮಹಿಷಿಯರು** : ರುಕ್ಮಿಣಿ, ಜಾಂಬವತಿ, ಸತ್ಯಭಾಮೆ, ಭದ್ರೆ, ಮಿತ್ರವಿಂದೆ, ಸತ್ಯೆ, ಕಾಳಿಂದಿ, ಲಕ್ಷ್ಮಣೆ – ಇವರು ಕೃಷ್ಣನ ಅಷ್ಟ ಮಹಿಷಿಯರು.

(ನು. ೫೪) **ಅಷ್ಟಮದ** : ಅನ್ನ, ಅರ್ಥ, ಸ್ತ್ರೀ, ವಿದ್ಯಾ, ಕುಲ, ರೂಪ, ಉದ್ಯೋಗ, ಯೌವನಗಳ ಮದ.

(ನು. ೫೪) **ಅಷ್ಟಭೂತಿ** : ದಾಸಿಯರು, ಭೃತ್ಯರು, ಪುತ್ರರು, ಬಾಂಧವರು, ವಾಸ್ತು, ವಾಹನ, ಧನ, ಧಾನ್ಯ – ಇವು ಅಷ್ಟ ಐಶ್ವರ್ಯಗಳು (ಶ್ರೀನಿ, ಪು. ೮೦)

(ನು. ೫೪) ಅಷ್ಟನಾಗಪ : ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ _ ಈ ಎಂಟು ದಿಗ್ಗಜಗಳನ್ನು ಪಾಲಿಸುವವನು – ವಿಷ್ಣು.

(ನು. ೫೪) ಅಷ್ಟ ಆಯುಧ : ಶಂಖ, ಚಕ್ರ, ಗದಾ, ಖಡ್ಗ, ಚರ್ಮಖೇಟಕ , ಧನುಸ್ಸು, ಬಾಣ, ಪಾಶ – ಇವು ವಿಷ್ಣುವಿನ ಎಂಟು ಆಯುಧಗಳು. (ಶ್ರೀನಿ. ಪು.೫೫)

(ನು. ೫೫) ನವಪ್ರಜೇಶರು : ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ, ಮರೀಚಿ, ದಕ್ಷ, ಅತ್ರಿ, ವಸಿಷ್ಠ

(ನು. ೫೫) ನವನಿಧಿ : ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ನಂದ, ನೀಲ ಮತ್ತು ಖರ್ವಗಳೆಂಬ ಕುಬೇರನ ಒಂಬತ್ತು ಐಶ್ವರ್ಯಗಳು.

(ನು. ೫೭) ಶತಾಪರಾಧಿಪ: ಕೃಷ್ಣ, ರಾಜಸೂಯಯಾಗದ ಸಂದರ್ಭದಲ್ಲಿ ಶಿಶುಪಾಲನ ತಾಯಿಗೆ ಮಾತು ಕೊಟ್ಟಿದ್ದಂತೆ, ಆತನ ನೂರು ತಪ್ಪುಗಳನ್ನು ಕ್ಷಮಿಸುತ್ತಾನೆ.

(ಮಹಾಭಾರತ, ಉದ್ಯೋಗ ಪರ್ವ)

(ನು. ೫೯) ಅಂಬುಧಿಮದಘ್ನ: ಹನುಮಂತ ಬಂದು ಸೀತಾ ವೃತ್ತಾಂತವನ್ನು ತಿಳಿಸಿದ ಮೇಲೆ ರಾಮನು ಸೇನಾ ಸಮೇತನಾಗಿ ಸಮುದ್ರತೀರಕ್ಕೆ ಬಂದು ದರ್ಭಶಯನದಲ್ಲಿದ್ದು ಮೂರುರಾತ್ರಿಗಳವರೆಗೆ ಸಮುದ್ರ ವನ್ನಾರಾಧಿಸಿದರೂ ಸಮುದ್ರನು ಪ್ರಸನ್ನನಾಗದಿರಲು ಕೋಪದಿಂದ ಬ್ರಹ್ಮಾಸ್ತ್ರವನ್ನು ಬಿಡಲು ಸಿದ್ಧನಾಗುತ್ತಾನೆ. ಆಗ ಸಮುದ್ರ ಪ್ರತ್ಯಕ್ಷನಾಗಿ ಸೇತುಬಂಧನ ಕಾರ್ಯದಲ್ಲಿ ಸಹಕರಿಸುವುದಾಗಿ ಭರವಸೆ ಕೊಡುತ್ತಾನೆ.

(ರಾಮಾಯಣ, ಯುದ್ಧಕಾಂಡ, ಸರ್ಗ–೨೨)

(ನು. ೬೧) ವಾತಪಾಗ್ರಜನಾಸಿಕಜ : ಗಾಳಿಯನ್ನು ಪಾಲಿಸುವವನು ವಾಯುದೇವ. ವಾಯುವಿನ ಅಣ್ಣ ಬ್ರಹ್ಮ. ಬ್ರಹ್ಮನ ಮೂಗಿನಿಂದ ವರಾಹಾವತಾರಿ ಹರಿ ಹುಟ್ಟುತ್ತಾನೆ.

(ನು. ೬೧) ಕ್ವಾಶಾಂಕವಾತಭ್ರಾತೃ ಹಿತಕರಣ : ಶಂಕಿತನಾದ ಅರ್ಜುನನಿಗೆ ಹಿತವನ್ನು ಮಾಡಿದವನು – ಕೃಷ್ಣ. (ಗೀತೋಪದೇಶದ ಸಂದರ್ಭ)

ಕೀರ್ತನೆ ೧೪೦

(ನು.೩) ಕಂತುವೈರಿಯ ಭಕ್ತ .... : ಈ ಮಾತು ಜರಾಸಂಧನನ್ನು ಕುರಿತದ್ದು, ಈತ ಮಗಧರಾಜ್ಯದ ದೊರೆ ಬೃಹದ್ರಥನ ಮಗ. ಇವನು ಭೈರವೋಪಾಸಕನಾದ್ದರಿಂದ ಭೈರವನ ಪ್ರೀತಿಗಾಗಿ ಪುರುಷ ಮೇಧವನ್ನು ಮಾಡಬೇಕೆಂಬ

ಉದ್ದೇಶದಿಂದ ಎಂಬತ್ತಾರು ಸಾವಿರ ಮಂದಿ ರಾಜಪುತ್ರರನ್ನು ಒಟ್ಟುಗೂಡಿಸಿ ಸೆರೆಯಲ್ಲಿಟ್ಟಿದ್ದ. ಆ ರಾಜಪುತ್ರರೆಲ್ಲರೂ ಕೃಷ್ಣನಿಗೆ ಹೇಳಿ ಕಳುಹಿಸಿ ತಮ್ಮ ಪ್ರಾಣವನ್ನುಳಿಸಬೇಕೆಂದು ಬೇಡಿಕೊಳ್ಳಲಾಗಿ ಕೃಷ್ಣ, ಭೀಮಸೇನನಿಂದ ಇವನನ್ನು ಕೊಲ್ಲಿಸಿದ. (ಮನಾಚೂ, ಪು. ೨೪೩–೨೪೪)

ಕೀರ್ತನೆ ೧೪೫

(ನು.೧) ತಾಳಸಪ್ತಾಘಹನ : ವಾಲಿಯ ಸಂಹಾರಕ್ಕೆ ಮೊದಲು, ಶ್ರೀರಾಮನ ಸತ್ವಪರೀಕ್ಷೆಗಾಗಿ ಆತನು ಒಂದೇ ಒಂದು ಬಾಣದಿಂದ ಏಳು ತಾಳವೃಕ್ಷಗಳನ್ನು ಏಕಕಾಲದಲ್ಲಿ ಭೇದಿಸಿದ ಸಂಗತಿಯನ್ನು ಇದು ಸೂಚಿಸುತ್ತದೆ. (ಮಹಾಭಾರತ ತಾತ್ಪರ್ಯನಿರ್ಣಯ, ಅ.೬, ಶ್ಲೋ.೮) ರಾಮಾಯಣದಲ್ಲಿ ಸಾಲವೃಕ್ಷಗಳು ಎಂದು ಹೇಳಿದೆ.

(ರಾಮಾಯಣ, ಕಿಷ್ಕಿಂಧಾಕಾಂಡ, ಸರ್ಗ ೧೨)

(ನು. ೧) ಕುಶಸುಪ್ತಜಯ : ರಾಮಸೀತೆಯರು ಚಿತ್ರಕೂಟದಲ್ಲಿದ್ದಾಗ ಒಂದು ದಿನ ಇಂದ್ರಪುತ್ರನಾದ ಜಯಂತನು ತನ್ನಲ್ಲಿ ಆವಿಷ್ಟನಾದ ಕುರಂಗನೆಂಬ ದೈತ್ಯನಿಂದ ಪ್ರೇರಿತನಾಗಿ ಕಾಕರೂಪದಿಂದ ಬಂದು ಸೀತೆಯ ವಕ್ಷಸ್ಥಳವನ್ನು ಕುಕ್ಕತೊಡಗಿದನು. ಸೀತೆಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ ರಾಮ ಕೂಡಲೆ ಎಚ್ಚತ್ತು ಕಾಗೆಯ ಮೇಲೆ ತೃಣಾಸ್ತ್ರವನ್ನು ಪ್ರಯೋಗಿಸಿದಾಗ ಕಾಗೆ ಭಯಗೊಂಡು ಎಲ್ಲೆಲ್ಲಿ ಓಡಿದರೂ ಅಸ್ತ್ರ ಹಿಂಬಾಲಿಸಿದಾಗ ಕೊನೆಗೆ ರಾಮನನ್ನೇ ಮರೆಹೊಕ್ಕಿತು. ರಾಮ ಕೊನೆಗೆ ತನ್ನ ಅಸ್ತ್ರ ವ್ಯರ್ಥವಾಗಬಾರದೆಂದು ಕಾಗೆಯ ಒಂದು ಕಣ್ಣನ್ನು ಬಲಿತೆಗೆದುಕೊಂಡು ಕಾಗೆಯ ಪ್ರಾಣ ಉಳಿಸಿ ಕಳಿಸಿದ.

(ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ, ಪು. ೪೭೯–೪೮೪)

ಕೀರ್ತನೆ ೧೪೬

(ನು.೨) ಅಲರಗೆದ್ದ : ಕೃಷ್ಣನು ಸತ್ಯಭಾಮೆಗಾಗಿ ದೇವಲೋಕದಿಂದ ಪಾರಿಜಾತವೃಕ್ಷವನ್ನು ತಂದ ಸಂದರ್ಭ.

ಕೀರ್ತನೆ ೧೫೦

(ನು. ೨) ಖಾಂಡವವನ ದಹನಕಾರಿ: ಖಾಂಡವವನ ಇಂದ್ರನ ಉದ್ಯಾನವನಗಳಲ್ಲಿ ಒಂದು. ಒಮ್ಮೆ ವರುಣಲೋಕದಲ್ಲಿ ೧೨ ವರ್ಷಗಳವರೆಗೆ ಒಂದು ಯಜ್ಞ ನಡೆದುದರಿಂದ ಅಗ್ನಿದೇವನ ಜೀರ್ಣಶಕ್ತಿಯು ಕುಗ್ಗಿತು. ದೇವವೈದ್ಯರಾದ ಅಶ್ವಿನಿ ದೇವತೆಗಳು ಇಂದ್ರನ ಖಾಂಡವವನದಲ್ಲಿ ಅಜೀರ್ಣವನ್ನು ಹೋಗಲಾಡಿಸುವ ಉತ್ತಮವಾದ

ಮೂಲಿಕೆಗಳಿರುವುವೆಂದೂ, ಅವುಗಳನ್ನು ಸೇವಿಸಿದರೆ ಅಗ್ನಿಮಾಂದ್ಯ ಮಾಯವಾಗುವುದೆಂದೂ ತಿಳಿಸಿದರು. ಆಗ ಅಗ್ನಿದೇವ ಕೃಷ್ಣಾರ್ಜುನರಲ್ಲಿಗೆ ಬ್ರಾಹ್ಮಣವೇಷದಿಂದ ಹೋಗಿ ಅವರಿಂದ ಅಭಯ ಪಡೆದು, ಅವರ ರಕ್ಷಣೆಯಲ್ಲಿ ಖಾಂಡವವನವನ್ನು ದಹಿಸಿದನು.

(ಕೀ. ೪೪೪, ನು. ೧೦) (ಮನಾಚೂ, ಪು. ೧೭೩)

ಕೀರ್ತನೆ ೧೫೨

(ನು. ೪) ಕದನ ಕರ್ಕಶ ರಿಪುಗಳೆದೆಯೊಡೆದು : ರಾಮ ರಾವಣರಿಗೆ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ, ಯುದ್ಧರಂಗದಲ್ಲಿ ವಿಭೀಷಣನನ್ನು ಕಂಡ ರಾವಣ ಅವನ ಮೇಲೆ ಶಕ್ತ್ಯಾಯುಧವನ್ನು ಬಿಡುತ್ತಾನೆ. ಇದನ್ನು ನೋಡಿದ ಲಕ್ಷ್ಮಣ ವಿಭೀಷಣನ ಮುಂದೆ ನಿಂತಾಗ ಆಯುಧ ಲಕ್ಷ್ಮಣನ ಎದೆಗೆ ಬಡಿದು ಆತ ಕೆಳಗೆ ಬೀಳುತ್ತಾನೆ. ಹೀಗೆ ಕೆಳಗೆ ಬಿದ್ದ ಲಕ್ಷ್ಮಣನನ್ನು ಲಂಕೆಗೆ ಒಯ್ಯಲೆಂದು ರಾವಣ ಹವಣಿಸುತ್ತಿದ್ದಾಗ ಹನುಮಂತ ಬಂದು ರಾವಣನ ಎದೆಯ ಮೇಲೆ ಮುಷ್ಟಿಯಿಂದ ಹೊಡೆಯುತ್ತಾನೆ. ರಾವಣ ರಕ್ತಕಾರುತ್ತ ಬೀಳುತ್ತಾನೆ.

(ಆನಂದರಾಮಾಯಣ, ಸಾರಕಾಂಡ, ಸರ್ಗ–೧೧)

ಕೀರ್ತನೆ ೧೫೩

(ನು. ૩) ಪೆಡಕಿಲಾಸನವಿತ್ತು ದಾತಗೆ : ರಾಮ ಲಂಕೆಗೆ ಹೋಗುವಾಗ ಹನುಮನ ಹೆಗಲ ಮೇಲೆ ಕುಳಿತು ಹೋಗುತ್ತಾನೆ. ಹೀಗೆಯೆ ಇನ್ನೊಂದೆಡೆ, ರಾಮರಾವಣರಿಗೆ ಯುದ್ಧ ನಡೆದ ಸಂದರ್ಭದಲ್ಲಿ ರಾಮನಿಗೆ ಇಂದ್ರ ಕಳುಹಿಸಿ ಕೊಟ್ಟಿದ್ದ ದಿವ್ಯರಥವನ್ನು ರಾವಣ ನಾಶಪಡಿಸುತ್ತಾನೆ. ಆಗ ರಾಮು ಹನುಮಂತನ ಹೆಗಲನ್ನೇರಿ ಯುದ್ಧವನ್ನು ಮುಂದುವರೆಸುತ್ತಾನೆ.

(ಆನಂದರಾಮಾಯಣ, ಸಾರಕಾಂಡ, ಸರ್ಗ ೧೧)

(ನು. ૩) ಕಡುವೇಗ ಸಂಜೀವ ಸಲಿಸಿದೆ : ರಾಮ ರಾವಣರ ಯುದ್ಧದಲ್ಲಿ ರಾವಣನ ಮಗನಾದ ಇಂದ್ರಜಿತು ಯುದ್ಧದಲ್ಲಿ ಒಂದು ಕಡೆಯಿಂದ ವಾನರರನ್ನೆಲ್ಲ ಸದೆಬಡಿದು ರಾಮಲಕ್ಷ್ಮಣರಿಬ್ಬರನ್ನು ಮೂರ್ಛೆಗೆಡಹುತ್ತಾನೆ. ಆಗ ಜಾಂಬವನ ಮಾತಿನಂತೆ ಗಿಡಮೂಲಿಕೆಗಳಿಗಾಗಿ ಹಿಮವತ್ಪರ್ವತಕ್ಕೆ ಹೋದ ಹನುಮಂತ ಆ ಓಷಧೀ ಪರ್ವತವನ್ನೇ ಕಿತ್ತು ತರುತ್ತಾನೆ. ಅದರಲ್ಲಿದ್ದ ಸಂಜೀವಿನಿಯ ಪ್ರಭಾವದಿಂದ ಸತ್ತ ವಾನರರು ಮತ್ತೆ ಬದುಕುತ್ತಾರೆ.

(ಕೀ. ೧೫೨. ನು. ೪) (ರಾಮಾಯಣ – ಯುದ್ಧಕಾಂಡ)

ಕೀರ್ತನೆ ೧೫೪

(ಪ.) ಋಜುನಿಕರ ಮಕುಟಮಣಿ : ವಾಯುದೇವರು ಋಜುಯೋಗಿಗಳ ಮುಖ್ಯಸ್ಥರು. ಋಜುಗಳೆಂದರೆ ಬ್ರಹ್ಮಪದವಿಯನ್ನು ಹೊಂದಲಿಕ್ಕೆ ಯೋಗ್ಯರಾದ ಜೀವರು. ಇವರಿಗೆ ಪರಮಾತ್ಮನನ್ನು ಬಿಟ್ಟು ಉಳಿದ ವಿಷಯದಲ್ಲಿ ಆಲೋಚನೆ ಮಾಡಿದ ಮೇಲೆ ಸಂಪೂರ್ತಿಯಾದ ಜ್ಞಾನವಾಗುತ್ತದೆ. ಪರಮಾತ್ಮನ ವಿಷಯದಲ್ಲಿ ಮಾತ್ರ ಅಪೂರ್ತಿಯಾದ ಜ್ಞಾನವೇ ಇರುತ್ತದೆ.

(ಕೀ. ೪೦೪, ಪ.)

(ನು. ೧) ಅಶೋಕವನಹಾರಿ : ಸೀತೆಯನ್ನು ಹುಡುಕುತ್ತ ಹೋದ ಹನುಮತ ಲಂಕೆಯ ಅಶೋಕವನದಲ್ಲಿ ಅವಳನ್ನು ಕಂಡು ಮಾತನಾಡಿ, ರಾಮನ ಮುದ್ರೆಯುಂಗುರವನ್ನು ಕೊಟ್ಟು ಭರವಸೆಯಿತ್ತು ಅಲ್ಲಿಂದ ಹೊರಡುತ್ತಾನೆ. ಹೀಗೆ ಹೊರಟವನು ಅಲ್ಲಿಯ ರಾಕ್ಷಸರ ಬಲಪರೀಕ್ಷೆಗಾಗಿ ಅಶೋಕವನವನ್ನು ಹಾಳುಮಾಡಲಾರಂಭಿಸಿ ಯುದ್ಧಕ್ಕೆ ಬಂದ ಅನೇಕ ರಾಕ್ಷಸರನ್ನು ಕೊಲ್ಲುತ್ತಾನೆ. (ರಾಮಾಯಣ, ಸುಂದರಕಾಂಡ)

(ನು. ೫) ಮೂರವತಾರಿ : ಪ್ರಾಣದೇವರ ಅಂಶ ತ್ರೇತಾಯುಗದಲ್ಲಿ ಹನುಮಂತನಾಗಿಯೂ , ದ್ವಾಪರದಲ್ಲಿ ಭೀಮಸೇನನಾಗಿಯೂ, ಕಲಿಯುಗದಲ್ಲಿ ಮಧ್ವಾಚಾರ್ಯರಾಗಿಯೂ ಜನಿಸಿದ್ದೆಂಬ ನಂಬಿಕೆ ಮಧ್ವಮತೀಯರಲ್ಲಿದೆ.

ಕೀರ್ತನೆ ೧೫೫

(ನು. ೨) ಅಕ್ಷಕುಮಾರ : ರಾವಣ ಮಂಡೋದರಿಯರ ಕಿರಿಯ ಮಗ, ಹನುಮಂತ ಸೀತೆಯನ್ನು ಹುಡುಕಲು ಲಂಕೆಗೆ ಹೋಗಿದ್ದಾಗ, ಇವನನ್ನು ಕೊಂದ.

(ರಾಮಾಯಣ, ಸುಂದರಕಾಂಡ)

ಕೀರ್ತನೆ ೧೫೬

(ಪ.) ಅಂಜನೆಯ ಪುತ್ರ: ಪುಂಜಿಕಸ್ಥಲಿಯೆಂಬ ಅಪ್ಸರಸಿ ವಾನರಜನ್ಮವನ್ನು ಪಡೆದು, ಕೇಸರಿಯೆಂಬ ಕಪಿನಾಯಕನನ್ನು ಮದುವೆಯಾಗಿ, ಒಮ್ಮೆ ವನದಲ್ಲಿ ವಿಹರಿಸುತ್ತಿದ್ದಾಗ ವಾಯುದೇವ ಈಕೆಯ ಸೌಂದರ್ಯಕ್ಕೆ ಮರುಳಾಗುತ್ತಾನೆ. ವಾಯುವಿನಿಂದ ಅಂಜನೆಯಲ್ಲಿ ಹುಟ್ಟಿದವನೇ ಆಂಜನೇಯ. ಇವನನ್ನು ಅಂಜನೆ ಸುತ, ವಾಯುಪುತ್ರ ಎಂದೂ ಕರೆಯುತ್ತಾರೆ.

(ಪುನಾಚೂ. ಪು.೯)

ಕೀರ್ತನೆ ೧೫೭

(ನು. ೩) **ಗಜಮಥನ** : ಗಜಾಸುರ ಮಹಿಷಾಸುರನ ಮಗ. ಈತ ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಅನೇಕ ವರಗಳನ್ನು ಪಡೆದು ದೇವತೆಗಳನ್ನು ಪೀಡಿಸಲಾರಂಭಿಸಿದಾಗ, ಶಿವನೇ ಬಂದು ಈತನನ್ನು ಕೊಂದು ಇವನ ಅಪೇಕ್ಷೆಯಂತೆ ಇವನ ಚರ್ಮವನ್ನು ಧರಿಸಿದನು. (ಗಜಚರ್ಮಾಂಬರ) (ಪುನಾಚೂ, ಪು. ೧೭೬)

(ನು. ೫) **ತ್ರಿಪುರಾಂತಕ** : ತಾರಕಾಸುರನ ಮಕ್ಕಳಾದ ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿಗಳು ಬ್ರಹ್ಮನ ವರದಿಂದ ಯಾರಿಂದಲೂ ಭೇದಿಸಲು ಅಸಾಧ್ಯವಾದ ಮೂರು ಪಟ್ಟಣಗಳನ್ನು ನಿರ್ಮಿಸಿಕೊಂಡು, ತಂತಮ್ಮ ನಗರಗಳಲ್ಲಿ ಸುಖವಾಗಿದ್ದರೂ, ಲೋಕಕಂಟಕರಾಗಿ ವರ್ತಿಸಿದಾಗ ದೇವತೆಗಳು ಶಿವನ ಮರೆಹೋಗುತ್ತಾರೆ. ಶಿವ, ಬ್ರಹ್ಮನ ವರದಂತೆ ಆ ಮೂರೂ ಪಟ್ಟಣಗಳು ಒಟ್ಟಿಗೆ ಕೂಡುವ ಮುಹೂರ್ತವನ್ನು ನಿರೀಕ್ಷಿಸುತ್ತಿದ್ದು(ಪುಷ್ಯನಕ್ಷತ್ರ ಯೋಗದಲ್ಲಿ) ವಿಷ್ಣುವನ್ನು ಬಾಣವನ್ನಾಗಿಸಿಕೊಂಡು, ಒಂದೇ ಬಾಣದಿಂದ ಒಂದೇ ಇರಿತದಿಂದಲೇ ಮೂರೂ ಪಟ್ಟಣಗಳನ್ನು ಸುಟ್ಟು ನಾಶಮಾಡಿದ.

(ಕೀ. ೧೬೧. ಪ.) (ಪುನಾಚೂ, ಪು., ೨೭೩)

(ನು. ೮) **ಕಪಾಲಧರ** : ತಾನೇ ಪರಬ್ರಹ್ಮವೆಂದು ಗರ್ವಿಸಿದ ಬ್ರಹ್ಮನ ತಲೆಯನ್ನು ಪರಶಿವನು ಚಿವುಟಿ, ಆ ತಲೆಯನ್ನು–ಬ್ರಹ್ಮಕಪಾಲವನ್ನು–ಹಿಡಿದು ಭಿಕ್ಷಾಟನೆ ಮಾಡಿದನು.

(ಶಿವಶರಣಕಥಾರತ್ನಕೋಶ, ಪು. ೫೮೦)

(ನು.೧) **ಮೂಕಹರ** : ಮೂಕ ಒಬ್ಬ ರಾಕ್ಷಸ, ವರಾಹ ರೂಪದ ಈ ರಾಕ್ಷಸ ಇಂದ್ರಕೀಲ ಪರ್ವತದಲ್ಲಿ ತಪೋನಿರತನಾಗಿದ್ದ ಅರ್ಜುನನಿಗೆ ತೊಂದರೆ ಕೊಡಲಾರಂಭಿಸಿದಾಗ, ಶಿವ ಹಾಗೂ ಅರ್ಜುನರು ಬಿಟ್ಟ ಬಾಣಗಳು ಒಟ್ಟಿಗೇ ತಗುಲಿ ಸತ್ತುಬೀಳುತ್ತಾನೆ. (ಮಹಾಭಾರತ, ವನಪರ್ವ) ಇಲ್ಲಿ ಶಿವನನ್ನು ಕುರಿತಂತೆ ಮಾತ್ರ 'ಮೂಕಹರ' ಎಂದು ಕರೆಯಲಾಗಿದೆ.

(ನು.೩) **ದುರ್ಧರ್ಷಾಂಧಕ ಮರ್ದಕ**: ಅಂಧಕ ಒಬ್ಬ ರಾಕ್ಷಸ, ಕಶ್ಯಪನಿಂದ ದಿತಿಯಲ್ಲಿ ಜನಿಸಿದವ, ಶಿವನಿಂದ ಹತನಾದ.

(ಕೀ.೧೫೯, ನು. ೭) (ಪುನಾಚೂ, ಪು. ೧೫)

(ನು. ೩) **ಉರ್ಧ್ವಪಟಾರ್ಚಕ ವದನ** : ಪಟ್ = ಭೇದಿಸು. ವಿಷ್ಣು ವಾಮನಾವತಾರದಲ್ಲಿ ತ್ರಿವಿಕ್ರಮನಾಗಿ ಎರಡನೆ ಹೆಜ್ಜೆಯನ್ನು ಆಕಾಶಕ್ಕೆ ಎತ್ತಿದಾಗ, ಅದು ಬ್ರಹ್ಮಾಂಡ ಕಟಹವನ್ನು ಸೀಳಿ ಸತ್ಯಲೋಕವನ್ನು ತಲುಪಿದಾಗ ಬ್ರಹ್ಮ ಅದನ್ನು ಪೂಜಿಸುತ್ತಾನೆ. ಇಂಥ ಹರಿಯನ್ನು ಶಿವನೂ ಬೇರೆ ಬೇರೆ ಸಂದರ್ಭಗಳಲ್ಲಿ ಪೂಜಿಸಿದ್ದಾನೆ, ಅರ್ಚಿಸಿದ್ದಾನೆ.

(ನು. ೪) ಗರಕಂಧರ : ದೇವಾಸುರರು ಸಮುದ್ರಮಥನ ಮಾಡಿದ ಸಂದರ್ಭದಲ್ಲಿ ಹುಟ್ಟಿ ಬಂದ ಕಾಲಕೂಟವಿಷವನ್ನು ಶಿವ ನುಂಗುತ್ತಾನೆ. ಆ ಘೋರವಾದ ವಿಷ ಅವನಿಗೆ ಯಾವ ಬಾಧೆಯನ್ನೂ ಮಾಡಲಾರದೆ, ಕೊನೆಗೆ ಅವನ ಕಂಠದಲ್ಲಿ ಕಪ್ಪುರೇಖೆಯಾಗಿ ನಿಂತು ಆತನ ಕಂಠಕ್ಕೆ ಒಂದು ಅಪೂರ್ವ ಆಭರಣದಂತಾಯಿತು. ಅಂದಿನಿಂದ ಶಿವ ನೀಲಕಂಠ, ಗರಕಂಧರ ಎನಿಸಿದ. (ಭಾ. ಸ್ಕಂ. ೮, ಅ. ೭)

(ಕೀ.೧೫೯, ನು.೬)

ಕೀರ್ತನೆ ೧೫೯

(ನು. ૩) ಕಂದರ್ಪಹರ : ಕಂದರ್ಪ=ಕಾಮ. ಸತೀವಿಯೋಗಾನಂತರ ಶಿವ ಸಮಾಧಿನಿಷ್ಠನಾಗಿದ್ದಾಗ, ದೇವತೆ ಗಳೆಲ್ಲ ಪಾರ್ವತಿಯನ್ನು ಶಿವ ಮದುವೆಯಾಗುವಂತೆ ಮಾಡಬೇಕೆಂಬ ಉದ್ದೇಶದಿಂದ, ಮನ್ಮಥನನ್ನು ಕರೆದು ಶಿವನ ನಿಷ್ಠೆಯನ್ನು ಭಂಗಗೊಳಿಸುವುದಕ್ಕಾಗಿ ಶಿವನಲ್ಲಿಗೆ ಕಳುಹಿಸುತ್ತಾರೆ. ಮನ್ಮಥ ಶಿವನನ್ನು ಗೆಲ್ಲುವುದಾಗಿ ಪ್ರತಿಜ್ಞೆಮಾಡಿ ಆತನನ್ನು ಎದುರಿಸಲು ಹೋಗಿ ಆತನ ಹಣೆಗಣ್ಣಿನಿಂದ ಬೂದಿಯಾಗುತ್ತಾನೆ.

(ಕೀ.೧೬೧, ನು.೧) (ಪುನಾಚೂ, ಪು.೪೮೩)

(ನು. ೪) ಬೇಡನ ಭಕುತಿಗೆ ಕೂಡಿದ : ಕಣ್ಣಪ್ಪ ಒಬ್ಬ ಬೇಡ. ಮಹಾಶಿವಭಕ್ತ. ಈತನ ಭಕ್ತಿಯ ಹಿರಿಮೆಯನ್ನು ಸಾರಲು ಶಿವ, ಲಿಂಗದ ಕಣ್ಣಲ್ಲಿ ರಕ್ತ ಸುರಿಯುವಂತೆ ಮಾಡಿದಾಗ ಬೇಡರ ಕಣ್ಣಪ್ಪ ತನ್ನ ಎರಡೂ ಕಣ್ಣುಗಳನ್ನು ತೆಗೆದು ಲಿಂಗಕ್ಕೆ ಕೂಡಿಸಿದ. ಸಂತುಷ್ಟನಾದ ಶಿವ ಆತನಿಗೆ ಪರಮಗಣ ಪದವಿಯನ್ನು ಕೊಟ್ಟ. (ಶಿವಶರಣ ಕಥಾರತ್ನಕೋಶ, ಪು. ೬೨)

ಕೀರ್ತನೆ ೧೬೦

(ನು. ૩) ಪ್ರಸನ್ವೆಂಕಟಪತಿ ಪೌತ್ರ : ಮಧ್ವಮತದ ಸಂಪ್ರದಾಯದ ಪ್ರಕಾರ ಶಿವ, ವಿಷ್ಣುವಿನ ಮೊಮ್ಮಗ. ಸಂಕರ್ಷಣ ನಾಮಕನಾದ ಹರಿ, ಶಿವನಲ್ಲಿ ನಿಂತು ಲಯಕಾರ್ಯವನ್ನು ಮಾಡಿಸುವನು.

ಕೀರ್ತನೆ ೧೬೧

(ನು. ೨) ತಾರಕಹರಪಿತ : ವರಾಂಗ ವಜ್ರಾಂಗಿಯರ ಮಗ ತಾರಕಾಸುರ. ಇವನು ಬ್ರಹ್ಮನಿಂದ ಅದುವರೆಗೆ ಅವತರಿಸಿದ್ದ ದೇವತೆಗಳಲ್ಲಿ ಯಾರಿಂದಲೂ ತನಗೆ ಸಾವು ಬಾರದಂತೆ ವರವನ್ನು ಪಡೆದು, ಮೂಲೋಕವನ್ನೂ ಪೀಡಿಸತೊಡಗಿದಾಗ, ಶಿವನಿಗೆ ಮಗನಾಗಿ ಅವತರಿಸಿದ ಷಣ್ಮುಖ, ತಾನು ಹುಟ್ಟಿದ ಏಳನೆಯದಿನ ಇವನೊಡನೆ ಯುದ್ಧ ಮಾಡಿ, ಇವನನ್ನು ಕೊಂದ. (ಪುನಾಚೂ, ಪು. ೨೬೦)

ಕೀರ್ತನೆ ೧೬೨

ಶ್ರೀತುಳಸಿ : ದೇವ ದಾನವರು ಕೂಡಿ ಹಾಲ್ಗಡಲನ್ನು ಕಡೆದಾಗ, ಐರಾವತ ಮೊದಲಾದ ೧೪ ರತ್ನಗಳು ಹೊರಹೊಮ್ಮಿದ ಬಳಿಕ ಅಮೃತ ಕಲಶ ಹೊರಬಂದಿತು. ವಿಷ್ಣು ಅದನ್ನು ಕೈಗೆತ್ತಿಕೊಂಡಾಗ ಆತನ ಕಣ್ಣುಗಳಿಂದ ಹೊಮ್ಮಿದ ಆನಂದಭಾಷ್ಪಗಳು ಅದರೊಳಗೆ ಬಿದ್ದು ಒಂದು ಸಣ್ಣ ಗಿಡ ಹುಟ್ಟಿತು. ಇದೇ ತುಳಸಿ ಗಿಡ. ದಾಸರು ಇದರ ಮಹಿಮಾತಿಶಯವನ್ನು ಈ ಕೀರ್ತನೆಯಲ್ಲಿ ವರ್ಣಿಸಿದಾರೆ.

'ದೇವೀ ಭಾಗವತದ' ಪ್ರಕಾರ ಈಕೆ ಧರ್ಮಧ್ವಜ ಮತ್ತು ಮಾಧವಿ–ಇವರ ಮಗಳು. ವಿಷ್ಣುವಿಗಾಗಿ ತಪಸ್ಸು ಮಾಡಿ ಅವನನ್ನು ಮದುವೆಯಾದಳು. (೯, ೧೭– ೨೫)

ಕೀರ್ತನೆ ೧೬೩

ಶ್ರೀಸುಬ್ರಹ್ಮಣ್ಯ : ಇವನಿಗೆ ಷಣ್ಮುಖನೆಂದೂ, ಕಾರ್ತಿಕೇಯನೆಂದೂ ಹೆಸರಿದೆ. ಶಿವ ಪಾರ್ವತಿಯರ ಮಗ. ತಾನು ಹುಟ್ಟಿದ ಏಳನೆಯ ದಿನ ತಾರಕಾಸುರನನ್ನು ಸಂಹರಿಸುತ್ತಾನೆ. ಕುಮಾರಧಾರಾ ನದಿಯ ತೀರದಲ್ಲಿ ಈತನ ದೇವಾಲಯವಿದೆ.

ಕೀರ್ತನೆ ೧೬೪

ಕೃಷ್ಣವೇಣಿ : ಹೆಳವನಕಟ್ಟೆಗಿರಿಯಮ್ಮ , ಜಗನ್ನಾಥದಾಸರು (ಕೀ.೪೦), ಮೊದಲಾದವರೆಲ್ಲ ಕೃಷ್ಣಾ ನದಿಯನ್ನು ಸ್ತುತಿಸಿರುವುದು ಕಂಡುಬರುತ್ತದೆ. ಮಹಾಬಲೇಶ್ವರದ ಬಳಿ ಒಂದು ಪರ್ವತದಲ್ಲಿ ಹುಟ್ಟಿ, ಭೀಮಾ, ತುಂಗಭದ್ರಾ ಮೊದಲಾದ ನದಿಗಳನ್ನು ಒಳಗೊಂಡು ೭೫೦ ಮೈಲಿ ಪೂರ್ವಕ್ಕೆ ಹರಿದು ಬೆಜವಾಡಾದ ಹತ್ತಿರ ಸಮುದ್ರವನ್ನು ಸೇರುತ್ತಾಳೆ ಕೃಷ್ಣೆ.

ಕನ್ಯಾರಾಶಿಯಲ್ಲಿರುವ ಬೃಹಸ್ಪತ್ಯಾಚಾರ್ಯರನ್ನು ಮುಂದಿಟ್ಟುಕೊಂಡು , ಅವರಿಗೆ ಮೊದಲು ಅರ್ಘ್ಯಕೊಟ್ಟು ಪೂಜಿಸಿ ಅನಂತರ ಕೃಷ್ಣವೇಣಿ ನದಿಯಲ್ಲಿ ಸ್ನಾನ ಮಾಡಬೇಕೆಂದು ಶಾಸ್ತ್ರ ವಿಧಿಯಿದೆ. ಗುರುವು ಕನ್ಯಾರಾಶಿಯಲ್ಲಿದ್ದಾಗ ಮೂರೂವರೆ ಕೋಟಿ ತೀರ್ಥಾಭಿಮಾನಿ ದೇವತೆಗಳಿಂದ ಸಹಿತಳಾದ ಗಂಗೆಯ ವಿಶೇಷ ಸನ್ನಿಧಾನವು ಕೃಷ್ಣಾನದಿಯಲ್ಲಿರುತ್ತದೆ.

(ತೀರ್ಥಪ್ರಬಂಧ, ಪು. ೧೨೮)

ಕೀರ್ತನೆ ೧೬೫

ಜನಾರ್ದನವರ್ಯ : ಇವರು ಬಾಗಲಕೋಟೆ ಪ್ರಾಂತದ ಪ್ರಖ್ಯಾತ ಪಂಡಿತರು. ಪ್ರಸನ್ನ ವೆಂಕಟದಾಸರ ಶಿಕ್ಷಾ ಗುರುಗಳು. ದಾಸರು ಐದಾರು ವರ್ಷಗಳ ಕಾಲ ಇವರ ಬಳಿ ಇದ್ದು ವಿದ್ಯಾಭ್ಯಾಸ ಮಾಡಿದರು. ಇವರ ಬಗ್ಗೆ ದಾಸರಿಗಿದ್ದ ಅಮಿತವಾದ ಗೌರವಾದರಗಳು

ಈ ಕೀರ್ತನೆಯಲ್ಲಿ ವ್ಯಕ್ತವಾಗಿವೆ. ಈ ಗುರುಗಳ ಬಗ್ಗೆ ಇನ್ನೂ ಕೆಲವು ಕೀರ್ತನೆಗಳನ್ನು ಬರೆದಿರುವರೆಂಬುದಕ್ಕೆ ದಾಖಲೆಗಳಿವೆಯಾದರೂ ನಮಗೆ ಎರಡು ಕೀರ್ತನೆಗಳು ಮಾತ್ರ ಸಿಕ್ಕಿವೆ. (ಕೀ. ೧೮೬)

(ನು. ೨) ಆರುಕರ್ಮ : ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ – ಇವು ಬ್ರಾಹ್ಮಣನಿಗೆ ಹೇಳಿರುವ ಆರು ಕರ್ಮಗಳು. (ಶ್ರೀನಿ, ಪು.೮೭)

(ಕೀ. ೧೬೮, ನು. ೩)

ಕೀರ್ತನೆ ೧೬೬

ಸತ್ಯಾಭಿನವ ತೀರ್ಥರು: ಇವರು ಉತ್ತರಾದಿಮಠದ ಪೀಠಾಧೀಶರು. ಇವರ ಕಾಲ ೧೭೦೬. ಇವರು ಗುರು ಸತ್ಯನಾಥರ ಶಿಷ್ಯರು. ಇವರು ಭಾಗವತಕ್ಕೆ ಟೀಕನ್ನು ಬರೆದುದಾಗಿ ದಾಸರು ಉಲ್ಲೇಖಿಸಿದ್ದಾರೆ.

(ಕೀ.೧೭೩, ಪ.) (ಕೀ. ೧೭೮) (ಕೀ.೧೮೪,ನು.೩)

(ನು. ೧೦) ನವಭಕುತಿ: ಭಾಗವತದ ಪ್ರಕಾರ ಭಕ್ತಿಯಲ್ಲಿ ಒಂಬತ್ತು ವಿಧಗಳಿವೆ. ಶ್ರವಣಭಕ್ತಿ, ಕೀರ್ತನಭಕ್ತಿ, ಸ್ಮರಣಭಕ್ತಿ, ಪಾದಸೇವನಭಕ್ತಿ, ಅರ್ಚನಭಕ್ತಿ, ವಂದನಭಕ್ತಿ, ದಾಸ್ಯಭಕ್ತಿ, ಸಖ್ಯಭಕ್ತಿ, ಮತ್ತು ಆತ್ಮನಿವೇದನ ಭಕ್ತಿ.

(ಕೀ.೧೭೩, ನು.೪) (ಕೀ.೧೭೫, ನು.೨)(ಕೀ.೧೮೦, ನು.೨) (ಕೀ.೪೦೦, ನು.೨) (ಕೀ.೪೦೨, ನು.೩) (ಕೀ.೪೧೦, ನು.೨)

ಕೀರ್ತನೆ ೧೬೮

ಗುರುಸತ್ಯಪೂರ್ಣರು : ಇವರೂ ಉತ್ತರಾದಿ ಮಠದ ಪೀಠಾಧಿಪತಿಗಳು. ಸತ್ಯಾಭಿನವತೀರ್ಥರ ಶಿಷ್ಯರು. ಕಾಲ ೧೭೨೬.

(ಶ್ರೀ ಪ್ರಸನ್ನ ವೆಂಕಟದಾಸರು ಮತ್ತು ಕೃತಿಗಳು, ಪು.೪೧) (ಕೀ. ೧೮೪, ನು.೩)

ಕೀರ್ತನೆ ೧೬೯

ಗುರು ರಾಘವೇಂದ್ರರು : ಇವರು ೧೭ನೆಯ ಶತಮಾನದಲ್ಲಿದ್ದ (ಕ್ರಿ. ಶ. ೧೬೭೧) ಮಾಧ್ವ ಪರಂಪರೆಯ ಯತಿಗಳು. ಮಂಚಾಲೆ ರಾಯರೆಂದು ಇಂದಿಗೂ ಪ್ರಸಿದ್ಧರು. ಇವರು ಪುರಂದರದಾಸರು ಕನಕದಾಸರ ಗುಂಪಿಗೂ, ೧೮ನೆಯ ಶತಮಾನದ ವಿಜಯದಾಸರ

ಪರಂಪರೆಗೂ ನಡುವಿನ ಕಾಲದಲ್ಲಿದ್ದವರು. ಮಧ್ವಾಚಾರ್ಯರ ಗ್ರಂಥಗಳಿಗೂ, ಉಪನಿಷತ್ತು, ಬ್ರಹ್ಮಸೂತ್ರ, ಗೀತಾದಿ ಗ್ರಂಥಗಳಿಗೂ ಟೀಕೆ ಟಿಪ್ಪಣಿಗಳನ್ನು ರಚಿಸಿದ ಪಂಡಿತರು. ಮಂತ್ರಾಲಯವನ್ನು ಹರಿಭಕ್ತಿಯ ಕೇಂದ್ರವನ್ನಾಗಿಸಿ ಹರಿಭಕ್ತಿಯನ್ನೂ ಹರಿದಾಸರನ್ನೂ ಉಜ್ಜೀವನಗೊಳಿಸಿದವರು. ಮಂತ್ರಾಲಯದಲ್ಲಿರುವ ಇವರ ಬೃಂದಾವನ ಎಲ್ಲ ಕೋಮಿನ ಭಕ್ತರನ್ನೂ ಆಕರ್ಷಿಸಿದ ಯಾತ್ರಾಸ್ಥಳವಾಗಿದೆ.

ಕೀರ್ತನೆ ೧೭೦

ಗುರುಸತ್ಯನಾಥರು : ಇವರು ಉತ್ತರಾದಿ ಮಠದ ಪೀಠಾಧಿಪತಿಗಳು. ಇವರ ಕಾಲ ೧೬೭೪. ಇವರು ಸತ್ಯನಿಧಿತೀರ್ಥರ ಶಿಷ್ಯರು.

(ಕೀ. ೧೭೪) (ಕೀ. ೧೭೬) (ಕೀ. ೧೭೮, ನು. ೩) (ಕೀ. ೧೮೪, ನು. ೩)

ಕೀ. ೧೭೧: ಇದು ಮಾಧ್ವ ಗುರುಪರಂಪರೆಯ ಸ್ತುತಿಯಾಗಿದೆ.

ಕೀರ್ತನೆ ೧೭೧

(ನು. ೨) ಅಕ್ಷೋಭ್ಯತೀರ್ಥರು : ಶ್ರೀ ಮಧ್ವಾಚಾರ್ಯರ ನೇರ ಶಿಷ್ಯರಲ್ಲೊಬ್ಬರು. ಇವರ ಕಾಲ ಕ್ರಿ.ಶ.೧೩೬೫.

(ಕೀ.೧೮೧, ನು.೫) (ಕೀ.೧೮೪, ನು.೧)

(ನು. ೩) ಜಯತೀರ್ಥರು : ಇವರು ಅಕ್ಷೋಭ್ಯತೀರ್ಥರ ಶಿಷ್ಯರು, ಕಾಲ ೧೩೬೮. ಇವರು ಶ್ರೀ ಮಧ್ವಾಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದು ಟೀಕಾಚಾರ್ಯರೆಂದೇ ಪ್ರಸಿದ್ಧರಾಗಿದ್ದಾರೆ. ಇವರ ವೃಂದಾವನ ಗುಲ್ಬರ್ಗಾಜಿಲ್ಲೆಯ ಮಳಖೇಡದ ಬಳಿ ಕಾಗಿನೀ ನದಿಯ ತೀರದಲ್ಲಿದೆಯೆಂದು ಹೇಳಲಾಗಿದೆ).

(ಕೀ.೧೮೧) (ಕೀ.೧೮೪, ನು.೧) (ತೀ.ಪ್ರ.ಮು.೨೨೬)

ಕೀರ್ತನೆ ೧೭೨

ಸತ್ಯಾಧಿರಾಜರು: ಇವರು ಉತ್ತರಾದಿಮಠದ ಗುರು ಸತ್ಯಾಭಿನವತೀರ್ಥರ (ಕಾಲ– ೧೭೦೬) ಶಿಷ್ಯರೆಂದು ದಾಸರು ಹೇಳಿದ್ದಾರೆ. ಇವರು ಪೀಠಾಧಿಪತಿಗಳಾಗಿದ್ದುದಕ್ಕೆ ಅಗತ್ಯ ಮಾಹಿತಿ ಸಿಕ್ಕುವುದಿಲ್ಲ.

(ಕೀ.೧೮೮)

ಕೀರ್ತನೆ ೧೭೪

(ನು. ೩) ಕಳ್ಳಹನ್ನೊಂದರ ಕೂಡಿ: ಹನ್ನೊಂದು ಇಂದ್ರಿಯಗಳು: ೫ ಬುದ್ಧೀಂದ್ರಿಯಗಳು + ೫ ಕರ್ಮೇಂದ್ರಿಯಗಳು + ಮನಸ್ಸು

(ಕೀ. ೧೮೦, ನು. ೩)

ಕೀರ್ತನೆ ೧೭೫

(ನು. ೧) ಹಿಡಿಂಬ : ಒಬ್ಬ ರಾಕ್ಷಸ. ಪಾಂಡವರು ಅರಗಿನ ಮನೆಯಿಂದ ಹೊರಬಿದ್ದು ಅರಣ್ಯವನ್ನು ಸೇರಿದಾಗ ಭೀಮನನ್ನು ಕೆಣಕಿ ಆತನಿಂದಲೇ ಮಡಿದ. (ಪುನಾಚೂ. ಪು.೬೮೨)

(ನು. ೧) ಬಕ : ಒಬ್ಬ ರಾಕ್ಷಸ. ಏಕಚಕ್ರನಗರದ ಸಮೀಪದಲ್ಲಿ ವಾಸವಾಗಿದ್ದ. ಪಾಂಡವರು ಏಕಚಕ್ರನಗರದಲ್ಲಿದ್ದ ಸಂದರ್ಭದಲ್ಲಿ, ಭೀಮನು ಬಕನಿಗಾಗಿ ಸಿದ್ಧಪಡಿಸಿದ ಒಂದು ಬಂಡಿ ಅನ್ನವನ್ನು ತಿಂದದ್ದಲ್ಲದೆ ಬಕನನ್ನು ಕೊಲ್ಲುತ್ತಾನೆ. (ಮಹಾಭಾರತ, ಆದಿಪರ್ವ)

(ನು. ೩) ದುರ್ಧರ್ಷ ಗುರುರಥವನೂರ್ಧ್ವಕ್ಕೊಗೆದುಲಿದು ಚೀರ್ದೆ : ಹದಿನಾಲ್ಕನೆಯ ದಿನದ ಯುದ್ಧದಲ್ಲಿ ದ್ರೋಣನನ್ನು ಎದುರಿಸಿದ ಭೀಮ ದ್ರೋಣರ ರಥವನ್ನು ಎತ್ತಿ ಆಕಾಶಕ್ಕೆ ಎಸೆಯುತ್ತಾನೆ. ಭೂಮಿಗೆ ಬಿದ್ದ ರಥ ಪುಡಿ ಪುಡಿಯಾದರೂ ದ್ರೋಣ ತಪ್ಪಿಸಿಕೊಂಡು ಉಳಿಯುತ್ತಾನೆ. (ಮಹಾಭಾರತ, ದ್ರೋಣಪರ್ವ)

(ನು. ೪) ಕರ್ಮಡು ಪೊಕ್ಕು ಕಡುಗಲಿಯ ತೊಡೆಮುರಿಯೆ: ಶಲ್ಯನ ವಧೆಯಾದ ಮೇಲೆ ದುರ್ಯೋಧನನು ಭಯದಿಂದ ಮಡುವಿನಲ್ಲಿ ಅಡಗಿರಲು ಭೀಮ ಆತನನ್ನು ಮಡುವಿನಿಂದ ಹೊರ ಹೊರಡಿಸಿ ಆತನೊಡನೆ ಯುದ್ಧ ಮಾಡಿ ಅವನ ಎರಡೂ ತೊಡೆಗಳನ್ನು ಮುರಿದು ಕೊಂದನು. (ಮಹಾಭಾರತ, ಗದಾಪರ್ವ)

ಕೀರ್ತನೆ ೧೭೬

(ನು. ೧) ಒಂದು ನಾಲ್ಕರ ಭೇದ: ಪಂಚಭೇದಗಳು:ಜೀವ ಜೀವಕ್ಕೆ ಭೇದ, ಜೀವ–ಜಡಕ್ಕೆ ಭೇದ, ಜಡಜಡಕ್ಕೆ ಭೇದ, ಜಡ–ಈಶರಿಗೆ ಭೇದ ಹಾಗೂ ಈಶ–ಜೀವರಿಗೆ ಇರುವ ಭೇದಗಳು.

(ನು.೨) : ಒಂದೈದು ರಿಪುವರ್ಗ:

ಅರಿಷಡ್ವರ್ಗ : ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ.

(ನು.೨) ಒಂದಾರು ತ್ರಿಗುಣಿಸಿದ ಮತ : ಇಪ್ಪತ್ತೊಂದು ಮಾಯಿ ಮತಗಳು. ಮಧ್ವಾಚಾರ್ಯರು ಇಪ್ಪತ್ತೊಂದು ಕುಮತಗಳನ್ನು ಜರಿದು ದ್ವೈತ ಮತವನ್ನು ಸ್ಥಾಪಿಸಿದರು.

(ನು.೩) ಒಂದು ಹತ್ತೇಂದ್ರಿಯ :

ಪಂಚ ಬುದ್ಧೀಂದ್ರಿಯ – ಶ್ರೋತ್ರ, ತ್ವಕ್ಕು , ಚಕ್ಷುಸ್ಸು, ಜಿಹ್ವೆ, ನಾಸಿಕ.

ಪಂಚ ಕರ್ಮೇಂದ್ರಿಯ – ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ.

ಈ ಹತ್ತರ ಜೊತೆ ಮನಸ್ಸು ಸೇರಿದರೆ ಹನ್ನೊಂದು ಇಂದ್ರಿಯಗಳಾಗುತ್ತವೆ.

(ಪುನಾಚೂ. ಪು. ೬೩)

(ನು. ೩) ಒಂದು ಹನ್ನೊಂದು ಸ್ತೋತ್ರ : ದ್ವಾದಶ ಸ್ತೋತ್ರಗಳು.

(ನು. ೩) ಒಂದು ಹನ್ನೆರಡು ತತ್ವದಾಗ : ವಾಕ್ಕು, ಮನಸ್ಸು, ಸಂಕಲ್ಪ, ಚಿತ್ತ, ಧ್ಯಾನ, ವಿಜ್ಞಾನ, ಅನ್ನ, ಅಪ್ಪು, ತೇಜಸ್ಸು, ಆಕಾಶ, ಸ್ಮರ, ಆಶೆ, ಪ್ರಾಣ?

(ಶ್ರೀನಿ. ಪು. ೧೭೬)

(ನು.೪) ಒಂದು ಹದಿನೈದು ಗುಣದ ಲಕ್ಷಣಾಂಗ: ಪಂಚ ಭೂತಗಳು, ಪಂಚತನ್ಮಾತ್ರೆಗಳು, ಪಂಚ ಜ್ಞಾನೇಂದ್ರಿಯಗಳು ಮತ್ತು ಮನಸ್ಸು – ಈ ೧೬ ಕಳೆಗಳುಳ್ಳದ್ದು ಲಿಂಗ ಶರೀರ.

(ನು.೫) ಒಂದು ಹದಿನೇಳು ಪರ್ವ ಮೋಹಕ ಬಿಡಿಸಿದೆ

ಮಧ್ವಾಚಾರ್ಯರು ಹದಿನೆಂಟು ಪರ್ವಗಳಿರುವ ಮಹಾಭಾರತವನ್ನು ಕುರಿತು 'ಮಹಾಭಾರತ ತಾತ್ಪರ್ಯ ನಿರ್ಣಯ'ವನ್ನು ಬರೆದರು.

ಕೀರ್ತನೆ ೧೮೦

(ಪ.) ಸುಮತೀಂದ್ರರು : ರಾಘವೇಂದ್ರಸ್ವಾಮಿಗಳ ಮಠದ ಪೀಳಿಗೆಯಲ್ಲಿ ಕ್ರಿ. ಶ. ೧೭೨೫ರಲ್ಲಿ ಪೀಠಾಧಿಪತಿಗಳಾಗಿದ್ದವರು ಸುಮತೀಂದ್ರರು. ಇವರು ಯೋಗೀಂದ್ರರ (ಕಾಲ ಕ್ರಿ.ಶ.೧೬೭೯) ಶಿಷ್ಯರು.

ಕೀರ್ತನೆ ೧೮೧

(ನು. ೨) **ತ್ರಿಪ್ರಮಾಣ** : ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಮೂರು ಪ್ರಮಾಣಗಳು. (ಕೀ.೪೦೦, ನು.೩) (ಶ್ರೀನಿ. ಪು.೨೮೦)

ಕೀರ್ತನೆ ೧೮೭

(ನು. ೩) **ಯೋಗೀಂದ್ರರು** : ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ರಾಘವೇಂದ್ರರ ನಂತರದಲ್ಲಿ ಪೀಠಾಧಿಪತಿಗಳಾಗಿದ್ದರು. (ಕ್ರಿ.ಶ. ೧೬೭೯) ಇವರ ಶಿಷ್ಯರು ಸುಮುನೀಂದ್ರರು. (ಸುಮತೀಂದ್ರರು?)

ಕೀರ್ತನೆ ೧೮೯

ಪುರಂದರದಾಸರು : ಶ್ರೇಷ್ಠ ಹರಿದಾಸರು. ಗುರುಗಳಾದ ವ್ಯಾಸರಾಯರಿಂದ 'ದಾಸರೆಂದರೆ ಪುರಂದರ ದಾಸರಯ್ಯ' ಎಂಬ ಹೊಗಳಿಕೆಗೆ ಪಾತ್ರರಾದವರು. ಇವರ ಕಾಲ ಕ್ರಿ. ಶ. ೧೪೮೪ – ೧೫೬೪, ಇವರ ಕೀರ್ತನೆಗಳು ಸಾಹಿತ್ಯ, ಧರ್ಮ, ಸಂಗೀತಗಳ ತ್ರಿವೇಣಿ ಸಂಗಮವಾಗಿದ್ದು, 'ಪುರಂದರೋಪನಿಷತ್ತು' ಎಂಬ ಕೀರ್ತಿಗೆ ಪಾತ್ರವಾಗಿದೆ. ಅನೇಕ ಹರಿದಾಸರು, ತ್ಯಾಗರಾಜರು ಇವರನ್ನು ಸ್ತುತಿಸಿದ್ದಾರೆ, ಅನುಸರಿಸಿದ್ದಾರೆ.

ಕೀರ್ತನೆ ೧೯೨

(ನು. ೩) **ಬಿಸಜಜನಯ್ಯ**: ಸೃಷ್ಟಿಕಾಲದಲ್ಲಿ ಬ್ರಹ್ಮಾಂಡದ ಗರ್ಭೋದಕದಲ್ಲಿ ಮಲಗಿದ್ದ ಪದ್ಮನಾಭನು ತನ್ನ ನಾಭಿಯಿಂದ ಹೊರಟ ಹದಿನಾಲ್ಕು ದಳಗಳುಳ್ಳ ಕಮಲದಲ್ಲಿ ಬ್ರಹ್ಮನನ್ನು ಸೃಷ್ಟಿಸಿದನು.

ಕೀರ್ತನೆ ೧೯೩

(ನು. ೧) **ಪಾಳ**: ನಿಶ್ಚಿತವಾದ ಸಾಕ್ಷಿ ಪುರಾವೆಗಳಿಲ್ಲದಾಗ ಅಪರಾಧವನ್ನು ನಿರ್ಣಯಿಸಲು ಮಾಡುವ ಉಗ್ರವಾದ ಪರೀಕ್ಷೆಗಳನ್ನು ದಿವ್ಯ ಎನ್ನುತ್ತಾರೆ. ಇವುಗಳಲ್ಲಿ ಏಳು ವಿಧಗಳಿವೆ. ಇವುಗಳಲ್ಲಿ ಒಂದು ಪಾಳದಿವ್ಯ, ಪಾಳದಿವ್ಯವೆಂದರೆ ಕಾದ ಕಬ್ಬಿಣದ ಕಂಬಿಯನ್ನು ಹಿಡಿಯುವ ಪರೀಕ್ಷೆ.

ಕೀರ್ತನೆ ೧೯೫

(ನು. ೧) **ಮೂರು ದಳ್ಳುರಿ: ತಾಪತ್ರಯಗಳು** : ೧ ಆಧ್ಯಾತ್ಮಿಕ (ದೇಹದಲ್ಲಾಗುವ ದು:ಖ, ಜ್ವರಾದಿ), ಆಧಿಭೌತಿಕ (ಹೊರಗಿನ ಪ್ರಾಣಿಗಳಿಂದಾಗುವ ದುಃಖ–ದುರ್ಜನಾದಿ).

ಆಧಿದೈವಿಕ (ಆಕಸ್ಮಿಕವಾದ ಸಿಡಿಲು ಮುಂತಾದುವುಗಳಿಂದಾಗುವ ದು:ಖ)

(ಕೀ.೧೯೬, ನು.೨) (ಕೀ.೨೦೬, ನು.೨) (ಕೀ.೨೧೯, ನು.೩) (ಕೀ.೨೪೦, ನು.೩) (ಕೀ.೨೪೮, ನು.೨) (ಕೀ.೨೭೯, ನು.೧) (ಕೀ.೨೮೬, ನು.೫)

ಕೀರ್ತನೆ ೧೯೮

(ನು.೫) ಕುಚೇಲಮಿತ್ರ: ಕುಚೇಲ ಒಬ್ಬ ಬ್ರಾಹ್ಮಣ. ಬಲರಾಮ ಕೃಷ್ಣರು ಸಾಂದೀಪಿನಿಯೆಂಬ ಗುರುಗಳ ಬಳಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಈತ ಇವರ ಸಹಪಾಠಿಯಾಗಿದ್ದ. ವಿದ್ಯಾಭ್ಯಾಸ ಮುಗಿದಮೇಲೆ ಕುಚೇಲ ಗೃಹಸ್ಥಾಶ್ರಮ ಸ್ವೀಕರಿಸಿ ಬಡತನದಲ್ಲೇ ಸಂತೃಪ್ತಿಯಿಂದ ಜೀವಿಸುತ್ತಿದ್ದ. ಸಂಸಾರ ಬೆಳೆದು ಬದುಕು ಕಷ್ಟವಾದಾಗ ಮಡದಿಯ ಒತ್ತಾಯಕ್ಕೆ ಮಣಿದು ಕೃಷ್ಣನನ್ನು ಕಾಣಲು ಹೋದಾಗ ಕೃಷ್ಣ ಅವನನ್ನು ಅತ್ಯಂತ ಪ್ರೀತಿಯಿಂದ ಸತ್ಕರಿಸಿ, ಕುಚೇಲ ತಂದ ಅವಲಕ್ಕಿಯನ್ನು ತಿಂದು, ಕುಚೇಲ ಬಾಯಿಬಿಟ್ಟು ತನ್ನ ಮನೆಯ ಕಾರ್ಪಣ್ಯವನ್ನು ಹೇಳದಿದ್ದರೂ ಅವನಿಗೆ ಅಷ್ಟೈಶ್ವರ್ಯವನ್ನು ಕರುಣಿಸುತ್ತಾನೆ.

(ಕೀ.೨೪೯, ನು.೨) (ಕೀ.೨೬೦, ನು.೨) (ಭಾ. ೧೦-೮೦)

ಕೀರ್ತನೆ ೨೦೯

(ನು.೩) ನೀಚಹಿಕೇತುವ ನಾಚಿಸಲೆಸೆದ: ಸಂಧಾನಕ್ಕಾಗಿ ಕೃಷ್ಣ ಹೋದಾಗ ಸಭೆಯಲ್ಲಿದ್ದವರೆಲ್ಲ ಗೌರವ ಸೂಚಿಸಲು ಎದ್ದು ನಿಂತರೂ ದುರ್ಯೋಧನ ಮಾತ್ರ ಕುಳಿತಲ್ಲಿಂದ ಕದಲಲಿಲ್ಲ. ಆಗ ಕೃಷ್ಣ ಉಂಗುಟದಿಂದ ನೆಲವನ್ನು ಒತ್ತಲು ದುರ್ಯೋಧನ ಸಿಂಹಾಸನದಿಂದ ಉರುಳಿ ಕೃಷ್ಣನ ಕಾಲ ಮೇಲೆ ಬೀಳುತ್ತಾನೆ.

(ಕುಮಾರವ್ಯಾಸ ಭಾರತ, ಉದ್ಯೋಗ ಪರ್ವ, ಸಂಧಿ ೮)

ಕೀರ್ತನೆ ೨೧೮

(ನು. ೨) ಷಡ್ರಸ : ಮಧುರ, ಕಟು, ಆಮ್ಲ, ತುವರ, ತಿಕ್ತ, ಲವಣಗಳೆಂಬ ಆರು ರುಚಿಭೇದಗಳು.

ಕೀರ್ತನೆ ೨೨೧

(ನು. ೨) ಬಿಂಬ: ಮಾಧ್ವ ತಿಳುವಳಿಕೆಯ ಪ್ರಕಾರ ಹರಿ ಬಿಂಬ. ಜೀವ ಪ್ರತಿಬಿಂಬ. ಜಗದ ಜೀವಿಗಳೆಲ್ಲರಿಗೂ ಹರಿ ಬಿಂಬಮೂರ್ತಿ

(ಕೀ.೨೭೬, ನು.೫) (ಕೀ.೪೪೨, ನು.೨)

ಕೀರ್ತನೆ ೨೩೨

(ನು. ೫) ವ್ಯಾಧ: ಯಾದವರೆಲ್ಲ ತಮ್ಮತಮ್ಮಲ್ಲೇ ಹೊಡೆದಾಡಿ ಹತರಾದ ಮೇಲೆ ಕೃಷ್ಣ ಪಾಂಡವರನ್ನು ಕರೆತರಲು ದಾರುಕನನ್ನು ಕಳುಹಿ, ಯೋಗಾಭ್ಯಾಸದಿಂದ ದೇಹತ್ಯಾಗ ಮಾಡುವುದಕ್ಕಾಗಿ ಒಂದು ಮರದಡಿಯಲ್ಲಿ ಮಲಗಿರುತ್ತಾನೆ. ಆಗ ಜರನೆಂಬ ಬೇಡ ಜಿಂಕೆಯೆಂದು ಭಾವಿಸಿ ಕೃಷ್ಣನ ಅಂಗಾಲಿಗೆ ಬಾಣ ಬಿಟ್ಟು, ನಂತರ ಹತ್ತಿರಕ್ಕೆ ಬಂದು ನೋಡಿ ಪಶ್ಚಾತ್ತಾಪದಿಂದ ಬಹಳವಾಗಿ ಮರುಗುತ್ತಾನೆ. ಆಗ ಕೃಷ್ಣ ಆತನಿಗೆ ಸ್ವರ್ಗಪ್ರಾಪ್ತಿಯಾಗುವಂತೆ ಅನುಗ್ರಹಿಸುತ್ತಾನೆ. (ಪುನಾಚೂ.. ಪು. ೧೫೩)

ಕೀರ್ತನೆ ೨೪೦

(ನು. ೩) ಹದಿನಾಲು ಭುವನ: ಸಪ್ತ ಲೋಕಗಳು ಹಾಗೂ ಸಪ್ತ ಪಾತಾಲಗಳು ಸೇರಿ ಹದಿನಾಲ್ಕು ಭುವನಗಳೆನಿಸುತ್ತವೆ. ಸಪ್ತಲೋಕಗಳು: ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನಲೋಕ, ತಪೋಲೋಕ, ಸತ್ಯಲೋಕ. (ಶ್ರೀನಿ,ಪು.೩೮೮)

ಸಪ್ತ ಪಾತಾಲಗಳು : ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಲ. (ಶ್ರೀನಿ, ಪು. ೨೫೬)

ಕೀರ್ತನೆ ೨೬೨

(ನು. ೧) ಶುಕ: ವೇದವ್ಯಾಸರ ಮಗ, ತನ್ನ ತಂದೆ ಹಾಗೂ ನಾರದರಲ್ಲಿ ಬ್ರಹ್ಮವಿದ್ಯೆಯನ್ನು ಹೊಂದಿ ವೈರಾಗ್ಯಭರಿತನಾದನು. ಪರೀಕ್ಷಿತ ರಾಜನಿಗೆ ಭಾಗವತವನ್ನೂ ಗಂಧರ್ವರಿಗೆ ಭಾರತವನ್ನೂ ಹೇಳಿದನು. ಸಂಕೀರ್ತನ ಭಕ್ತರಲ್ಲಿ ಈತ ಮೊದಲಿಗ.

ಕೀರ್ತನೆ ೨೬೯

(ಅ.ಪ.) ಸಂಚಿತಾರಬ್ಧಾಗಾಮಿ: ಫಲ ಭೋಗದ ದೃಷ್ಟಿಯಿಂದ ಹೇಳುವ ಸಂಚಿತ, ಆರಬ್ಧ, ಆಗಾಮಿ ಎಂಬ ಮೂರು ಕರ್ಮಗಳು. (ಶ್ರೀನಿ, ಪು. ೮೬)
(ಕೀ.೨೭೦, ನು.೧) (ಕೀ.೨೮೭, ನು.೪)

(ನು. ೧) ನರ : ಈತ ನಾರಾಯಣನ ಸಹೋದರ. ಈತನ ತಂದೆ-ತಾಯಿಗಳು ಧರ್ಮ ಮತ್ತು ಮೂರ್ತಿ, ಹಿರಣ್ಯಕಶಿಪುವಿನ ವಧೆಯಾದ ಮೇಲೆ ಹರಿಯ ಸಿಂಹಾಕಾರವು ನಾರಾಯಣನಾಗಿಯೂ, ನರರೂಪವು ನರಮುನಿಯಾಗಿಯೂ ಹುಟ್ಟಿದರು. ಹರಿಯ ೨೪ ಅವತಾರಗಳಲ್ಲಿ ಇದೂ ಒಂದು ಅವತಾರ. (ಪು.ಭಾ.ಕೋ.ಪು, ೩.೨೨, ೩.೨೪)

ಕೀರ್ತನೆ ೨೮೪

(ನು.೫) ಪಶುಪತಿ ವಿಷಹರ: ಇಲ್ಲಿ ಸಮುದ್ರ ಮಥನದಿಂದ ಹುಟ್ಟಿದ ಕಾಲಕೂಟವಿಷವನ್ನು ರುದ್ರನು ಕುಡಿದಾಗ ಆ ವಿಷ ವಿಪತ್ಕಾರಿಯಾಗದಂತೆ ತಡೆದವನು ಹರಿ ಎಂಬ ಭಾವನೆ ಇದೆ.

ಕೀರ್ತನೆ ೨೯೪

(ನು. ೨) ಶರ್ವ ಸರ್ವೋತ್ತಮನೆಂಬವ : ಶಿವನೇ ಸರ್ವೋತ್ತಮನೆಂದು ಭಾವಿಸುವ ಶೈವ ಪಂಥೀಯ.

(ನು. ೩) ವಾಸುದೇವನ ಪಾಶದಿ ಬಿಗಿಸುವೆನೆಂದು ಆಶಿಸಿ ಕೆಟ್ಟ ಕೌರವ: ಸಂಧಾನಕ್ಕೆಂದು ಬಂದ ಕೃಷ್ಣನ ಸಂಧಿಯ ಮಾತುಗಳಿಗೆ ಒಪ್ಪದ ದುರ್ಯೋಧನ ಕೃಷ್ಣನನ್ನು ಸೆರೆ ಹಿಡಿಯಲೆತ್ನಿಸಿದಾಗ ಕೃಷ್ಣ ತನ್ನ ವಿಶ್ವರೂಪವನ್ನು ತೋರಿ ಆತನ ಪ್ರಯತ್ನವನ್ನು ವಿಫಲಗೊಳಿಸುತ್ತಾನೆ. ದುರ್ಯೋಧನ ತನ್ನ ಹೀನಪ್ರಯತ್ನಕ್ಕೆ ಎಲ್ಲರಿಂದ ದೂಷಣೆ-ಗೊಳಗಾಗುತ್ತಾನೆ. (ಮಹಾಭಾರತ, ಉದ್ಯೋಗ ಪರ್ವ)

(ನು. ೩) ಶಾಕ್ತ : ಶಕ್ತಿಯೆಂದರೆ ಸ್ತ್ರೀದೇವತೆ. ಶಕ್ತಿಯನ್ನೇ ಸರ್ವೋನ್ನತ ದೈವವೆಂದು ಪ್ರತಿಪಾದಿಸುವ ಧರ್ಮಕ್ಕೆ ಶಾಕ್ತ ಧರ್ಮವೆಂದೂ, ಶಕ್ತಿಯ ಆರಾಧಕರಿಗೆ ಶಾಕ್ತರೆಂದೂ ಹೆಸರು. ಸೃಷ್ಟಿಗೆ ಮುನ್ನ ಪ್ರಕೃತಿಯು ತಾನೊಬ್ಬಳೇ ಅವ್ಯಕ್ತ ಸ್ವರೂಪದಲ್ಲಿದ್ದು, ಆಕೆಗೆ ಜಗತ್ತನ್ನು ಸೃಷ್ಟಿಸಬೇಕೆಂಬ ಇಚ್ಛೆಯಾಯಿತು. ಆಗ ತಾನು ಜಗನ್ಮಾತೆಯ ಆಕಾರವನ್ನು ತಾಳಿ, ತನ್ನ ಶರೀರದಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳು ಎಂದು ಶಾಕ್ತರು ನಂಬುತ್ತಾರೆ.

(ಕವಿ ಬ್ರಹ್ಮಶಿವ ಒಂದು ಅಧ್ಯಯನ, ಪು. ೧೯೭)

(ನು. ೪) ರುಕ್ಮ(ಕ್ಮಿ) : ರುಕ್ಮಿ, ಭೀಷ್ಮಕರಾಜನ ಹಿರಿಯ ಮಗ. ಈತನ ತಂಗಿಯೇ ರುಕ್ಮಿಣಿ. ರುಕ್ಮಿಯ ಹೊರತು ಮಿಕ್ಕವರೆಲ್ಲರೂ ರುಕ್ಮಿಣಿಯನ್ನು ಕೃಷ್ಣನಿಗೆ ಕೊಟ್ಟು ವಿವಾಹ ಮಾಡಬೇಕೆಂದಿದ್ದಾಗ, ರುಕ್ಮಿ ಮಾತ್ರ ಇವಳನ್ನು ಶಿಶುಪಾಲನಿಗೇ ಕೊಡಬೇಕೆಂದು ಹಠ ಹಿಡಿಯುತ್ತಾನೆ. ಆದರೆ ಕೃಷ್ಣ ರುಕ್ಮಿಣಿಯನ್ನು ಅಪಹರಿಸಿ ಮದುವೆಯಾಗುತ್ತಾನೆ. ಅನಂತರ ಬಲರಾಮನೊಂದಿಗೆ ಪಗಡೆಯಾಡಿ ಎರಡು ಬಾರಿ ಸೋತರೂ, ತಾನೇ ಗೆದ್ದೆನೆಂದು ಜಂಬ ಕೊಚ್ಚಿದಾಗ, ಬಲರಾಮ ಕ್ರುದ್ಧನಾಗಿ ಅವನನ್ನು ಕೊಲ್ಲುತ್ತಾನೆ.

(ಭಾ. ಸ್ಕಂ. ೧೦, ಅ. ೫೨, ೫೩, ೬೧)

(ನು. ೪) ಜೀವೇಶರು ಸಮರೆಂದು ಲೆಕ್ಕಿಸುವವ: 'ಅಹಂ ಬ್ರಹ್ಮಾಸ್ಮಿ' ಎನ್ನುವ ಶಂಕರಾಚಾರ್ಯರ ಅದ್ವೈತ ತತ್ವವನ್ನು ನಂಬಿದವನು.

ಕೀರ್ತನೆ ೩೦೨

(ನು. ೧) ಷೋಡಶ ಉಪಚಾರ : ಧೂಪ, ದೀಪ, ನೈವೇದ್ಯ, ತಾಂಬೂಲ, ಜಲ, ಗಂಧ, ಪುಷ್ಪ, ಕರ್ಪೂರ, ತೈಲ ವಿಶೇಷ, ಛತ್ರ, ಚಾಮರ, ಧ್ವಜ, ದರ್ಪಣ, ವ್ಯಜನ, ವಸನ , ತಾಲವೃಂತ. (ನಾನಾರ್ಥಶಬ್ದಾವಳಿ ಮತ್ತು ಸಂಜ್ಞಾರ್ಥಗಳು, ಮಂಗಳೂರು ಬಾಸೆಲ್ ಮಿಷನ್ ಪ್ರೆಸ್. ೧೮೯೫)

ಕೀರ್ತನೆ ೩೦೯

(ನು. ೧) ನಿರಯ (ನರಕ): ಪಾಪಿಗಳನ್ನು ದಂಡಿಸುವುದಕ್ಕಾಗಿ ಯಮಲೋಕದಲ್ಲಿ ಏರ್ಪಟ್ಟಿರುವ ಪ್ರದೇಶ. ಇದರಲ್ಲಿ ಅಂಧತಾಮಿಸ್ರ, ರೌರವ, ಮಹಾರೌರವ ಇತ್ಯಾದಿ ಅನೇಕ ಪ್ರಭೇದಗಳಿವೆ. ಇಂತಿಂಥ ಪಾಪ ಮಾಡಿದವರಿಗೆ ಇಂತಿಂಥ ನರಕ ಎಂಬುದಾಗಿ ನಿರ್ಣಯಿತವಾಗಿದೆ. (ಪುನಾಚೂ, ಪು. ೩೬೬, ೩೬೭)

(ನು. ೨) ವೈತರಿಣಿ : ಯಮಲೋಕಕ್ಕೆ ಹೋಗುವ ಹಾದಿಯಲ್ಲಿರುವ ಭೀಕರವಾದ ಒಂದು ನದಿ. (ಪುನಾಚೂ, ಪು. ೫೮೭)

(ನು. ೩) ತಪ್ತಾದ ಶರ್ಕರಾಯಸ ಸ್ತಂಭ : ಈ ಲೋಕದಲ್ಲಿ ಪುರುಷನು ತನಗೆ ಯೋಗ್ಯಳಲ್ಲದ ಸ್ತ್ರೀಯನ್ನಾಗಲಿ, ಹೆಂಗಸು ತನಗೆ ಯೋಗ್ಯನಲ್ಲದ ಪುರುಷನನ್ನಾಗಲಿ ಭೋಗಿಸಿದರೆ, ಅವರನ್ನು ಯಮಭಟರು ತಪ್ತಸೂರ್ಮಿಯೆಂಬ ನರಕದಲ್ಲಿ ನೂಕಿ ಉರಿಯುತ್ತಿರುವ ಲೋಹದ ಕಂಬವನ್ನು ಆಲಿಂಗನ ಮಾಡಿಸಿ, ಕೊರಡೆಗಳಿಂದ ಹೊಡೆಯುತ್ತಾರೆ.

(ಕೀ. ೩೪೦, ನು. ೬) (ಭಾ. ಸ್ಕಂ. ೫, ಅ. ೨೬)

(ನು. ೫) ಕುಂಭಿ ಪಾಕಿನಿ: ೨೮ ವಿಧದ ನರಕಗಳಲ್ಲಿ 'ಕುಂಭೀಪಾಕ'ವೂ ಒಂದು. ಪಶುಹಿಂಸೆ ಮಾಡಿದವರು ಈ ನರಕವನ್ನು ಅನುಭವಿಸುತ್ತಾರೆ. ಪಾಪಿಗಳಾದವರನ್ನು ಯಮಭಟರು ಕಾದೆಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿ ಪಚನಮಾಡುವುದರಿಂದ ಇದಕ್ಕೆ ಕುಂಭೀಪಾಕವೆಂಬ ಹೆಸರು ಬಂದಿದೆ ಎನ್ನಲಾಗಿದೆ. (ಭಾ.ಸ್ಕಂ.೫, ಅ.೨೬)

ಕೀರ್ತನೆ ೩೧೩

(ನು. ೨) ತನ್ನ ಜನಕನ ವರಕುಪಕಾರಿಯ: ತನ್ನ ತಂದೆಯಾದ ದಶರಥ ಕೈಕೇಯಿಗೆ ಕೊಟ್ಟ ವರ ಫಲಿಸಲೆಂದು ರಾಮ ವನವಾಸಕ್ಕೆ ಹೋದದ್ದನ್ನು ಇಲ್ಲಿ ಸ್ಮರಿಸಲಾಗಿದೆ.

ಕೀರ್ತನೆ ೩೧೮

(**ನು. ೬) ಈಷಣತ್ರಯ:** ದಾರೇಷಣಾ, ಪುತ್ರೇಷಣಾ, ಅರ್ಥೇಷಣಾ(ವಿತ್ತೇಷಣಾ).

(ಶ್ರೀನಿ. ಪು.೭೯)

ಕೀರ್ತನೆ ೩೩೦

(ನು. ೧) ಹತ್ತು ಕಟ್ಟಿದವಗೆ:

ದಶೇಂದ್ರಿಯಗಳು : ಪಂಚ ಬುದ್ಧೀಂದ್ರಿಯ + ಪಂಚ ಕರ್ಮೇಂದ್ರಿಯಗಳು

(ಶ್ರೀನಿ. ಪು. ೬೨, ೬೩)

ಕೀರ್ತನೆ ೩೩೫

(ನು. ೨) ಕುಂಭಕ: ಯೋಗಾಭ್ಯಾಸದಲ್ಲಿಯ ಒಂದು ಕ್ರಿಯೆ : ಮೂಗಿನ ಎರಡೂ ಹೊಳ್ಳೆಗಳನ್ನು ಬಲಗೈ ಬೆರಳುಗಳಿಂದ ಮುಚ್ಚಿ, ಬಾಯಿಯನ್ನು ಮುಚ್ಚಿ ಉಸಿರನ್ನು ಕಟ್ಟುವುದು.

ಕೀರ್ತನೆ ೩೩೭

(ಪ.) ವ್ಯೋಮಕೇಶಗೆ ದಿವ್ಯ ನಾಮಾಮೃತವಿತ್ತ : ಅಶ್ವಮೇಧ ಯಜ್ಞವನ್ನು ಮಾಡಿ ಮುಗಿಸಿದ ರಾಮನನ್ನು ದೇವತೆಗಳೆಲ್ಲ ಪೂಜಿಸಿದಾಗ ಶಿವನೂ ಸಹಸ್ರನಾಮಗಳಿಂದ ಭಕ್ತಿ ಪೂರ್ವಕವಾಗಿ ಸ್ತುತಿಸುತ್ತಾನೆ. ಶಿವನ ಸ್ತೋತ್ರದಿಂದ ಪ್ರಸನ್ನನಾದ ರಾಮ ನಿನ್ನ ಅಭೀಷ್ಟ ಏನೆಂದು ಕೇಳಿದಾಗ ಶಿವ ನಿನ್ನ ಪಾದಗಳಲ್ಲಿ ಸ್ಥಿರ ಭಕ್ತಿಯನ್ನೂ, ನಿರಂತರ ನಿನ್ನ ನಾಮಸ್ಮರಣೆಯನ್ನೂ ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾನೆ. ಇದರಿಂದ ಸಂತೋಷಗೊಂಡ ರಾಮ 'ತಥಾಸ್ತು' ಎಂದು ಅನುಗ್ರಹಿಸುತ್ತಾನೆ. (ಆನಂದರಾಮಾಯಣ, ೪ನೆಯ ವಿಲಾಸಕಾಂಡ, ೨ನೆಯ ಸರ್ಗ)

ಕೀರ್ತನೆ ೩೪೬

(ನು. ೧) ಶೀತಲವಾಯ್ತು ಹಾಲಾಹಲ ಹರಗೆ: ಸಮುದ್ರ ಮಥನದಿಂದ ಹುಟ್ಟಿದ ಕಾಲಕೂಟ ವಿಷವನ್ನು ರುದ್ರನು ಕುಡಿದಾಗ ಆ ವಿಷ ವಿಪತ್ಕಾರಿಯಾಗದಂತೆ ಹರಿ ತಡೆದನೆಂಬ ವಿಚಾರವಿದೆ.

(ಕೀ.೨೮೪, ನು.೫) (ಕೀ.೩೬೪, ನು.೧)

ಕೀರ್ತನೆ ३೫೬

(ನು. ೪) ಪುಷ್ಕರತ್ರಯ: ಪುಷ್ಕರಕ್ಷೇತ್ರ, ಪ್ರಯಾಗ ಕ್ಷೇತ್ರದಂತೆಯೇ ತೀರ್ಥರಾಜನೆಂದು ಹೆಸರು ಪಡೆದಿದೆ. ಇದು ಅಜ್ಮೀರ್‌ನಿಂದ ೭ ಮೈಲು ದೂರದಲ್ಲಿದೆ. ಪದ್ಮಪುರಾಣ ಮತ್ತು ಮಹಾಭಾರತದ ವನಪರ್ವದಲ್ಲಿ ಪುಷ್ಕರ ಮಹಾತ್ಮೆಯನ್ನು ಹೇಳಲಾಗಿದೆ. ಪುಷ್ಕರ-ಸರೋವರಗಳು ಮೂರು ಇವೆ. ಜೇಷ್ಠ ಪುಷ್ಕರ, ಮಧ್ಯ ಪುಷ್ಕರ, ಕನಿಷ್ಠ ಪುಷ್ಕರ ಎಂಬ ಮೂರು ಸರೋವರಗಳಿಗೆ ಕ್ರಮವಾಗಿ ಬ್ರಹ್ಮ ವಿಷ್ಣು, ಮಹೇಶ್ವರರು ದೇವತೆಗಳು. ಮೂರು ದೇವತೆಗಳ ದೇವಸ್ಥಾನಗಳೂ ಇಲ್ಲಿದೆ.

(ಹೆಚ್ಚಿನ ವಿವರಗಳಿಗೆ ನೋಡಿ : ತೀರ್ಥಪ್ರಬಂಧ, ಪು. ೧೨೫, ೧೨೬)

ಕೀರ್ತನೆ ३೬೪

(ನು. ೨) ಮರಳೊಮ್ಮೆ ದುರ್ವಾಸ ದ್ರೌಪದಿಗುಣಬೇಡೆ ಹರಿನಾಮ ಇರುಳೆ ಕಾಯ್ತು: ಪಾಂಡವರು ವನವಾಸದಲ್ಲಿದ್ದಾಗ ಒಮ್ಮೆ ದುರ್ವಾಸಮುನಿ ತನ್ನ ಶಿಷ್ಯರೊಂದಿಗೆ ದ್ರೌಪದಿಯ ಭೋಜನ ಮುಗಿದ ತರುವಾಯ ಪಾಂಡವರಲ್ಲಿಗೆ ಹೋಗಿ ಅನ್ನವನ್ನು ಬೇಡುತ್ತಾನೆ. ದ್ರೌಪದಿ ಬೇರೆ ದಾರಿ ಕಾಣದೆ ಕೃಷ್ಣನನ್ನು ಸ್ಮರಿಸಿದಾಗ, ಕೃಷ್ಣನ ಮಹಿಮೆಯಿಂದ ಅವರೆಲ್ಲರ ಹೊಟ್ಟೆ ತುಂಬಿ ತೇಗುತ್ತ ಅಲ್ಲಿಂದ ಓಡಿಹೋಗುತ್ತಾರೆ.

(ಮಹಾಭಾರತ, ವನಪರ್ವ)

ಕೀರ್ತನೆ ३೬೪

(ನು. ३) ಅಪಮರಣದಿ ಹರಿನಾಮ ನನ್ನ ಕಾಯ್ತು : ದಾಸರ ಬದುಕಿನಲ್ಲಿ ನಡೆದ ಈ ಘಟನೆಯ ವಿವರಗಳು ತಿಳಿದು ಬರುವುದಿಲ್ಲ.

ಕೀರ್ತನೆ ३೬೮

(ನು. ೧) ಐದು ಪಾವಕ : ಪವನ (ಆವಸಥ್ಯ), ಪಾವನ (ಸಭ್ಯ), ತ್ರೇತಾ (ದಕ್ಷಿಣಾಗ್ನಿ), ಗಾರ್ಹಪತ್ಯ, ಆಹವನೀಯ.

ಕೀರ್ತನೆ ३೭३

(ನು. ೨) ಕಿರ್ಮೀರ : ಒಬ್ಬ ರಾಕ್ಷಸ. ಬಕಾಸುರನ ತಮ್ಮ. ಪಾಂಡವರು ಏಕಚಕ್ರನಗರದಲ್ಲಿ ವಾಸಿಸುತ್ತಿದ್ದಾಗ, ಭೀಮನಿಂದ ಬಕ ಹತನಾದನೆಂಬ ಸುದ್ದಿಯನ್ನು ಕೇಳಿ, ಇವನು ತನ್ನ ಅಣ್ಣನನ್ನು

ಕೊಂದ ಸೇಡನ್ನು ತೀರಿಸಿಕೊಳ್ಳಬೇಕೆಂದು ಹೊಂಚು ಹಾಕುತ್ತಿದ್ದ. ಪಾಂಡವರು ಅರಣ್ಯವಾಸ ಮಾಡುತ್ತಿದ್ದಾಗ, ಕಾಮ್ಯಕವನದಲ್ಲಿ ಪಾಂಡವರ ಆಶ್ರಮದಲ್ಲಿ ವಾಸವಾಗಿದ್ದ ಋಷಿಗಳನ್ನು ಪೀಡಿಸುತ್ತಿದ್ದ.. ಒಮ್ಮೆ ಪಾಂಡವರು ಬೇಟೆಗೆ ಹೋದಾಗ ಅವರನ್ನು ಅಡ್ಡಗಿಸಿ ಯುದ್ಧ ಮಾಡಿ ಭೀಮನಿಂದ ಹತನಾದ. (ಪುನಾಚೂ. ಪು. ೧೧೨)

(ಕೀ.೩೮೦, ನು.೨) (ಕೀ.೩೯೬, ನು.೨)

ಕೀರ್ತನೆ ೩೭೫

(ನು. ೪) ಅವಸ್ಥಾತ್ರಯ : ಜಾಗರ, ಸ್ವಪ್ನ, ಸುಷುಪ್ತಿ – ಇವು ಆತ್ಮನ ಅವಸ್ಥಾತ್ರಯಗಳು.

(ಕೀ.೪೨೬, ಅ.ಪ.)

ಕೀರ್ತನೆ ೩೭೬

(ನು.೧) ಹೇವಿನ ರಕ್ಕಸರ ಮಾರಿ : ಹನುಮಂತ ಸೀತೆಯನ್ನು ಹುಡುಕಲು ಹೊರಟು ಸಮುದ್ರವನ್ನು ದಾಟುವ ಸಂದರ್ಭದಲ್ಲಿ ಸಿಂಹಿಕೆಯೆಂಬ ರಾಕ್ಷಸಿಯನ್ನು ಕೊಲ್ಲುತ್ತಾನೆ. ಲಂಕೆಯನ್ನು ಹೊಕ್ಕು ಲಂಕಾಭಿಮಾನಿ ದೇವತೆಯನ್ನು ನಿಗ್ರಹಿಸುತ್ತಾನೆ. ಅಶೋಕವನದಲ್ಲಿ ಸೀತೆಯನ್ನು ಕಂಡನಂತರ ಅಶೋಕವನವನ್ನು ಹಾಳು ಮಾಡಿ ಅನೇಕ ರಕ್ಕಸರನ್ನು ಕೊಲ್ಲುತ್ತಾನೆ. ರಾಮರಾವಣರಿಗೆ ನಡೆದ ಯುದ್ಧದಲ್ಲಿ ಧೂಮ್ರಾಕ್ಷ, ನಿಕುಂಭ, ಮೊದಲಾದ ರಾಕ್ಷಸರನ್ನು ಕೊಲ್ಲುತ್ತಾನೆ. ಹೀಗೆ ವೈರಿ ಬಣದ ಅನೇಕ ರಾಕ್ಷಸರನ್ನು ಕೊಂದದ್ದರಿಂದ ಆತನನ್ನು ಇಲ್ಲಿ 'ಹೇವಿನ ರಕ್ಕಸರ ಮಾರಿ' ಎಂದು ಕರೆಯಲಾಗಿದೆ. (ಪುನಾಚೂ. ೬೭೭, ೬೭೮)

(ನು. ೨) ರಾಜಸೂಯಕೆ ಮುಖ್ಯ ಕರ್ತಾ: ಯುಧಿಷ್ಠಿರನು ರಾಜಸೂಯ ಯಾಗವನ್ನು ಮಾಡಲು ಬಯಸಿ ಕೃಷ್ಣನ ಅಭಿಪ್ರಾಯವನ್ನು ಕೇಳಿದಾಗ, ಕೃಷ್ಣ ರಾಜಸೂಯಯಾಗಕ್ಕೆ ಮುಖ್ಯ ಕಂಟಕವಾಗುವ ಜರಾಸಂಧನನ್ನು ಮೊದಲು ಸಂಹರಿಸಬೇಕೆಂದು ಹೇಳಿ, ಭೀಮಾರ್ಜುನರನ್ನು ಮಗಧದ ರಾಜಧಾನಿಯಾದ ಗಿರಿವ್ರಜಕ್ಕೆ ಕರೆದುಕೊಂಡು ಹೋಗುತ್ತಾನೆ. ಜರಾಸಂಧನಿಗೂ ಭೀಮನಿಗೂ ಮಲ್ಲಯುದ್ಧವಾಗಿ, ಭೀಮ ಜರಾಸಂಧನನ್ನು ಕೊಲ್ಲುತ್ತಾನೆ. ಅಲ್ಲದೆ ಯಾಗಕ್ಕೆ ಅಗತ್ಯವಾಗಿದ್ದ ಧನಕನಕಗಳ ಸಂಗ್ರಹಕ್ಕಾಗಿ ದಿಗ್ವಿಜಯಕ್ಕೆ ಉಳಿದ ಮೂವರು ತಮ್ಮಂದಿರೊಡನೆ ಹೊರಡುತ್ತಾನೆ. ಈ ಕಾರಣಗಳಿಂದ ಮೇಲಿನ ಮಾತು ಬಂದಿದೆ.

(ವಚನಭಾರತ , ಸಭಾಪರ್ವ, ಪು. ೭೫– ೮೦)

(ನು. ೩) ರೌಪ್ಯಪೀಠದಿ ಕೃಷ್ಣಾರ್ಚಕನೆ : ರೌಪ್ಯ ಪೀಠ–ರಜತಪೀಠ ಎನ್ನುವುದು ಉಡುಪಿ ಕ್ಷೇತ್ರಕ್ಕೆ ಹಿಂದೆ ಇದ್ದ ಹೆಸರು. ಇಲ್ಲಿರುವ ಕಡೆಗೋಲು ಕೃಷ್ಣನ ಪ್ರತಿಮೆಯನ್ನು ಮಧ್ವಾಚಾರ್ಯರು ಪ್ರತಿಷ್ಠಾಪಿಸಿದರು.

ಕೀರ್ತನೆ ೩೭೯

(ನು. ೧) ಪಂಜು ಬೆಳಗಿದೆ ನಿಶಾಚರನ ಪಟ್ಟಣವಳಿದೆ: ಸೀತೆಯನ್ನು ಹುಡುಕುತ್ತ ಲಂಕೆಗೆ ಹೋದ ಹನುಮಂತ ಸೀತೆಯನ್ನು ಕಂಡು ಮಾತನಾಡಿಸಿದ ನಂತರ ಅಲ್ಲಿಯ ಅಶೋಕವನವನ್ನು ಹಾಳುಮಾಡಿದ್ದಲ್ಲದೆ ಅನೇಕ ರಾಕ್ಷಸರನ್ನು ಕೊಲ್ಲುತ್ತಾನೆ. ಇಂದ್ರಜಿತು ಅವನೊಡನೆ ಹೋರಾಡಿ ಬ್ರಹ್ಮಾಸ್ತ್ರದಿಂದ ಬಂಧಿಸಿ ರಾವಣನೆದುರು ಕರೆದೊಯ್ದಾಗ ರಾವಣ ಆತನ ಕೃತ್ಯಕ್ಕೆ ಶಿಕ್ಷೆಯಾಗಿ ಬಾಲಕ್ಕೆ ಬೆಂಕಿ ಹಾಕಿಸಿ ಪಟ್ಟಣದಲ್ಲಿ ಮೆರವಣಿಗೆ ಮಾಡಿಸುತ್ತಾನೆ. ಪಟ್ಟಣವನ್ನೆಲ್ಲ ನೋಡಿದ ನಂತರ ಹನುಮಂತ ಮೇಲಕ್ಕೆ ಹಾರಿ ತನ್ನ ಬಾಲದ ಬೆಂಕಿಯಿಂದ ಲಂಕಾನಗರದ ಮನೆಗಳೆಲ್ಲಕ್ಕೂ ಬೆಂಕಿಯಿಟ್ಟು ಸುಟ್ಟು ಹಾಕುತ್ತಾನೆ.

(ರಾಮಾಯಣ, ಸುಂದರಕಾಂಡ, ಸರ್ಗ. ೯೪೧-೫೪)

ಕೀರ್ತನೆ ೩೮೦

(ನು. ೨) ಲಾಕ್ಷಾಗೃಹದಿ ಧರ್ಮಜರ ಹೊರೆದು: ದುರ್ಯೋಧನನು ಪಾಂಡವರನ್ನು ನಾಶಮಾಡುವ ಉದ್ದೇಶದಿಂದ ಪುರೋಚನನೆಂಬವನ ಸಹಾಯದಿಂದ ವಾರಣಾವತದಲ್ಲಿ ಅರಗಿನ ಮನೆಯನ್ನು ಕಟ್ಟಿಸಿ, ಪಾಂಡವರು ಆ ಮನೆಯಲ್ಲಿರುವಂತೆ ಏರ್ಪಡಿಸುತ್ತಾನೆ. ವಿದುರನಿಂದ ಈ ವಿಷಯವನ್ನು ತಿಳಿದ ಪಾಂಡವರು ಗುಟ್ಟಾಗಿ ಒಂದು ಬಿಲವನ್ನು ಮಾಡಿಸಿಕೊಂಡು, ಅಲ್ಲಿಂದ ತಪ್ಪಿಸಿಕೊಳ್ಳಲು ಸಿದ್ಧರಾಗಿಯೇ ಇರುತ್ತಾರೆ. ಅದರಂತೆ ಪುರೋಚನ ಆ ಮನೆಗೆ ಬೆಂಕಿ ಇಡುವ ಮೊದಲು, ಪಾಂಡವರೇ ಒಂದು ರಾತ್ರಿ ಎಲ್ಲರೂ ಮಲಗಿದ್ದಾಗ ಪುರೋಚನ ಮಲಗಿದ್ದೆಡೆ ಬೆಂಕಿಯಿಟ್ಟು ಯಾರಿಗೂ ಕಾಣದಂತೆ ಆ ಬಿಲದಿಂದ ಹೊರ ಹೋಗುತ್ತಾರೆ. ನಿದ್ರೆ, ಹೆದರಿಕೆಗಳಿಂದ ಅವರು ಬೇಗ ಬೇಗ ಹೋಗುವುದು ಅಸಾಧ್ಯವಾದಾಗ, ಭೀಮ ತಾಯಿಯನ್ನು ಹೆಗಲಮೇಲೆ ಹತ್ತಿಸಿಕೊಂಡು, ನಕುಲ ಸಹದೇವರನ್ನು ಸೊಂಟದಲ್ಲಿ ಕೂರಿಸಿಕೊಂಡು, ಕೈಗಳಲ್ಲಿ ಯುಧಿಷ್ಠಿರ ಅರ್ಜುನರನ್ನು ಹಿಡಿದುಕೊಂಡು ವಾಯುವೇಗದಿಂದ ಓಡುತ್ತಾನೆ. (ಮಹಾಭಾರತ, ಆದಿಪರ್ವ)

(ಕೀ.೩೯೦, ನು.೨), (ಕೀ.೩೯೬, ನು.೨)

ಕೀರ್ತನೆ ೩೮೨

(ನು..೨) ಮಾನುನೆರಾರ್ವರ ಬಲಗೊಂಬೆ : ತಾರತಮ್ಯದ ಪ್ರಕಾರ ೬ನೆಯ ಕಕ್ಷೆಯಲ್ಲಿ ಬರುವ ಜಾಂಬುವತಿ, ನೀಲಾ, ಭದ್ರಾ, ಮಿತ್ರಮಿಂದಾ, ಕಾಳಿಂದಿ, ಲಕ್ಷ್ಮಣಾ-ಇವರನ್ನು

ಷಣ್ಮಹಿಷಿಯರೆನ್ನಲಾಗಿದೆ. ಈ ಆರ್‍ವರಲ್ಲಿ ರಮಾವೇಶವಿದೆ. ಇವರು ಅರ್ಥಾಭಿಮಾನಿ ತಾತ್ವಿಕರು. ಇವರ ವಾಸ ನಾಭಿಯ ಷಟ್ಕಮಲದಲ್ಲಿ. (ದೇವತಾನಮನ, ಪು.೬೪)

(ನು. ೩) ಗರುಡನ ರಂಭೆ, ವಾರುಣಿ : ಗರುಡನ ಪತ್ನಿ ಸೌಪರ್ಣೆ. ಶೇಷನ ಪತ್ನಿ ವಾರುಣಿ.

(ನು. ೬) ಇಪ್ಪತ್ತೈದು ತತ್ವ : ಪಂಚವಿಂಶಾಖ್ಯ – ಶ್ರೀಹರಿ. (ಚತುರ್ವಿಂಶತಿ ತತ್ವಗಳ ಒಡೆಯ) (ಶ್ರೀಪಾದರಾಯರ ಕೃತಿಗಳು, ಪು. ೧೮೮)

(ನು.೯೪) ಸುರನದಿ ಮುಟ್ಟಿ ಸಗರರುದ್ಧಾರಾದಂತೆ : ಕಪಿಲ ಮಹರ್ಷಿಯ ಕೋಪದಿಂದ ದಗ್ಧರಾದ ಸಗರನ ೬೦ ಸಾವಿರ ಮಂದಿ ಮಕ್ಕಳಿಗೆ ಸದ್ಗತಿಯನ್ನುಂಟು ಮಾಡುವುದಕ್ಕಾಗಿ ಭಗೀರಥ ತಪಸ್ಸಿನಿಂದ ಬ್ರಹ್ಮ ಮತ್ತು ಶಿವರನ್ನು ಮೆಚ್ಚಿಸಿ ದೇವಲೋಕದಿಂದ ಗಂಗೆಯನ್ನು ತಂದ. ಶಿವನ ಮೂಲಕ ಧರೆಗಿಳಿದ ಗಂಗೆ ಸಗರಪುತ್ರರ ಭಸ್ಮರಾಶಿಯ ಮೇಲೆ ಹರಿದಾಗ ಅವರೆಲ್ಲ ಪಾಪ ವಿಮುಕ್ತರಾಗಿ ಸ್ವರ್ಗವನ್ನು ಸೇರಿದರು.

(ರಾಮಾಯಣ, ಬಾಲಕಾಂಡ, ಸರ್ಗ ೩೮–೪೩)

ಕೀರ್ತನೆ ೩೮೩

(ನು. ೨) ಅಂಧಕಾತ್ಮಜ ತೃಣಸುರಧೇನು : ಧೃತರಾಷ್ಟ್ರನ ಮಗ ದುರ್ಯೋಧನನನ್ನು ಭೀಮ ಕೊಂದದ್ದನ್ನು ಈ ಮಾತು ಸೂಚಿಸುತ್ತದೆ.

ಕೀರ್ತನೆ ೨೮೫

(ನು. ೪) ಒರಳನೆಳೆದು ಯಮಳಾರ್ಜುನರುದ್ಧೃತ: ಕುಬೇರನ ಮಕ್ಕಳಾದ ಮಣಿಗ್ರೀವ ಮತ್ತು ನಳಕೂಬರರು ನಾರದನಿಂದ ಶಪಿತರಾಗಿ ನಂದನ ಮನೆಯ ಅಂಗಳದಲ್ಲಿ ವಿಶಾಲವಾದ ಮತ್ತಿಯ ಮರಗಳಾಗಿರುತ್ತಾರೆ. ಒಂದು ದಿನ ಬೆಣ್ಣೆಯನ್ನು ಕದ್ದು ತಿನ್ನುತ್ತಿದ್ದ ಕೃಷ್ಣನನ್ನು ಯಶೋದೆ ಅಂಗಳದಲ್ಲಿದ್ದ ಒರಳುಕಲ್ಲಿಗೆ ಕಟ್ಟಿಹಾಕುತಾಳೆ. ಕೃಷ್ಣ ಆ ಒರಳನ್ನು ಎಳೆದುಕೊಂಡು ಆ ಮತ್ತಿಮರಗಳ ಮಧ್ಯೆ ನುಗ್ಗಿದಾಗ, ಅವು ಬುಡಸಹಿತ ಉರುಳಿ ಬಿದ್ದು ಅವುಗಳಿಂದ ಶಾಪವಿಮೋಚಿತರಾದ ಆ ದಿವ್ಯಪುರುಷರಿಬ್ಬರೂ ಹೊರಬಂದು ಕೃಷ್ಣನನ್ನು ಸ್ತುತಿಸಿ ತಮ್ಮ ಪಟ್ಟಣಕ್ಕೆ ಹೋಗುತ್ತಾರೆ. (ಭಾ. ಸ್ಕಂ. ೧೦, ಅ. ೧೦–೧೧)

ಕೀರ್ತನೆ ೩೮೮

(ನು.೨) ಪಾಪಿ ಕೌರವಾನುಜನೊಡಲ ಬಗೆದೆ : ದುರ್ಯೋಧನನ ಸಭೆಯಲ್ಲಿ ದ್ರೌಪದಿಯನ್ನು ಅವಮಾನಿಸಿದ ದುಶ್ಶಾಸನನನ್ನು ಕೊಲ್ಲುವುದಾಗಿ ಪ್ರತಿಜ್ಞೆಗೈದ ಭೀಮ, ಕುರುಕ್ಷೇತ್ರದ ಯುದ್ಧದಲ್ಲಿ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳುತ್ತಾನೆ.

(ಮಹಾಭಾರತ, ಸಭಾಪರ್ವ ಮತ್ತು ಕರ್ಣಪರ್ವ)

ಕೀರ್ತನೆ ೩೯೩

(ನು. ೩) ನಾಗಹರಸಖ : ಭಾರತ ಯುದ್ಧದಲ್ಲಿ ಭಗದತ್ತನ ಆನೆ ಸುಪ್ರತೀಕವನ್ನು ಅರ್ಜುನ ಕೊಲ್ಲುತ್ತಾನೆ. ಇಂಥ ಅರ್ಜುನನ ಸಖಿ ಕೃಷ್ಣ.

(ಕುಮಾರವ್ಯಾಸ ಭಾರತ, ದ್ರೋಣಪರ್ವ, ಸಂಧಿ ೩)

ಕೀರ್ತನೆ ೩೯೬

(ನು. ೨) ಘನಗರಳನುಂಗಿ: ಪಾಂಡವರೂ ಕೌರವರೂ ಬಾಲ್ಯದಲ್ಲಿ ಒಟ್ಟಿಗೆ ಆಡುತ್ತಿದ್ದ ಸಂದರ್ಭಗಳಲ್ಲಿ ಅತ್ಯಂತ ಬಲಶಾಲಿಯಾಗಿದ್ದ ಭೀಮ ಎಲ್ಲ ಆಟಗಳಲ್ಲೂ ಎಲ್ಲರನ್ನೂ ಸೋಲಿಸಿ ಬಿಡುತ್ತಿದ್ದ. ಭೀಮ ಬಲಿಷ್ಠನೆಂದು ಪ್ರಖ್ಯಾತಿ ಪಡೆದ ಹಾಗೆಲ್ಲ ಅವನ ಬಗ್ಗೆ ದುರ್ಯೋಧನನ ದ್ವೇಷ ಹೆಚ್ಚಾಯಿತು. ಭೀಮನನ್ನು ಕೊಲ್ಲಲು ಯೋಚಿಸಿದ ದುರ್ಯೋಧನ ಅದಕ್ಕಾಗಿ ಹಲವಾರು ಬಾರಿ ಪ್ರಯತ್ನಿಸಿದ. ಒಮ್ಮೆ ಅವನ ಊಟದಲ್ಲಿ ತೀಕ್ಷ್ಣವಾದ ವಿಷವನ್ನು ಹಾಕಿಸಿದರೂ ಅದನ್ನು ತಿಂದ ಭೀಮ ವಿಷವನ್ನು ಜೀರ್ಣಿಸಿಕೊಂಡು ಬಿಟ್ಟ. (ಮಹಾಭಾರತ, ಆದಿಪರ್ವ)

ಕೀರ್ತನೆ ೩೯೮

(ನು.೫) ನಾರದನಿದರ ವಿಚಾರ ಮಾಡಲು ಬರೆ: ಕೃಷ್ಣನು ನರಕಾಸುರನನ್ನು ಕೊಂದ ಮೇಲೆ ಅವನ ಮನೆಯಲ್ಲಿದ್ದ ೧೬ ಸಾವಿರ ರಾಜಕನ್ಯೆಯರನ್ನು ವಿವಾಹವಾಗಿ ಅವರೊಡನೆ ಗೃಹಸ್ಥನಾಗಿ ಬಾಳುತ್ತಿರುವುದನ್ನು ಕೇಳಿದ ನಾರದ, ಕೃಷ್ಣನ ಕುಟುಂಬಲೀಲೆಯನ್ನು ನೋಡಲಪೇಕ್ಷಿಸಿ ದ್ವಾರಕಾವತಿಗೆ ಬರುತ್ತಾನೆ. ಕೃಷ್ಣನು ಬೇರೆ ಬೇರೆ ರೂಪಗಳಿಂದ ಆ ಎಲ್ಲ ಹೆಂಡತಿಯರೊಂದಿಗೂ ಇದ್ದುದನ್ನು ನೋಡಿ ಸಂತೋಷಗೊಂಡು ಹಿಂದಿರುಗುತ್ತಾನೆ.

(ಭಾ.ಸ್ಕಂ.೧೦, ಅ.೬೯)

(ನು.೮) ಸಾಲ್ವ : ಶಿಶುಪಾಲನ ಮಿತ್ರ, ಕೃಷ್ಣ ಶಿಶುಪಾಲನನ್ನು ಕೊಂದ ಸೇಡನ್ನು ತೀರಿಸಿ ಕೊಳ್ಳುವುದಕ್ಕಾಗಿ, ಕೃಷ್ಣ ಹಸ್ತಿನಾವತಿಯಲ್ಲಿರುವಾಗಲೇ ಇವನು ದ್ವಾರಕೆಯನ್ನು ಮುತ್ತಿ ಅನಿರುದ್ಧನ ಸಂಗಡ ಯುದ್ಧ ಮಾಡುತ್ತಿದ್ದಾಗ ಕೃಷ್ಣ ಹಸ್ತಿನಾವತಿಯಿಂದ ಬಂದು ಇವನನ್ನು ಕೊಂದ. (ಪುನಾಚೂ, ಪು., ೪೪೬)

ಕೀರ್ತನೆ ೪೦೪

(ನು.೨) ಶಲ್ಯರಾಜನ ಭಟಹಾರಿ : ಹದಿನೆಂಟನೆಯ ದಿನದ ಕುರುಕ್ಷೇತ್ರದ ಯುದ್ಧದಲ್ಲಿ ಭೀಮ ಶಲ್ಯನೊಂದಿಗೆ ಗದಾಯುದ್ಧ ಮಾಡಿ ಅವನನ್ನು ಸೋಲಿಸುತ್ತಾನೆ.

(ಮಹಾಭಾರತ, ಶಲ್ಯಪರ್ವ)

ಕೀರ್ತನೆ ೪೦೫

(ನು.೧) ತುತ್ತಿಸಿನನ ಬಿಸುಟು : ವಾಯುಪುತ್ರನಾದ ಹನುಮಂತ ಜನಿಸಿದ ಕೂಡಲೆ ಆಗ ತಾನೇ ಉದಯಿಸುತ್ತಿದ್ದ ಸೂರ್ಯಬಿಂಬವನ್ನು ಕಂಡು ಫಲವೆಂಬ ಭ್ರಾಂತಿಯಿಂದ ಅಂತರಿಕ್ಷಕ್ಕೆ ನೆಗೆದು ೩೦೦ ಯೋಜನಗಳ ದೂರಕ್ಕೆ ಹಾರಿದಾಗ ಇಂದ್ರ ಕೋಪಗೊಂಡು ಅವನನ್ನು ತಡೆಯಲು ವಜ್ರಾಯುಧವನ್ನು ಬೀಸುತ್ತಾನೆ. ಆ ಪ್ರಹಾರದಿಂದ ಕೆಳಕ್ಕೆ ಪರ್ವತಶಿಖರದಲ್ಲಿ ಬಿದ್ದ ಹನುಮನ ಎಡಗೆನ್ನೆ ಊದಿಕೊಂಡಿತು. ಈ ಕಾರಣದಿಂದಲೇ ಹನುಮಂತನೆಂಬ ಹೆಸರು ಬಂದಿತು.

ಕೀರ್ತನೆ ೪೦೭

(ನು.೧) ದಾಶಾರ್ಹಹಿತಕರಣ : ಯದುವಂಶದ ವಿದೂರಥರಾಜನ ಮಗ ದಶಾರ್ಹ. ಕೃಷ್ಣನ ವಂಶದ ಮೂಲ ಪುರುಷ. ಈತನ ಅನಂತರದ ಯಾದವರಿಗೆಲ್ಲ ದಾಶಾರ್ಹರೆಂಬ ಹೆಸರು ರೂಢಿಯಲ್ಲಿದೆ. ಕಂಸನ ಭೀತಿಯಿಂದ ದಿಕ್ಕಾಪಾಲಾಗಿ ಓಡಿ ಹೋಗಿದ್ದ ಯಾದವರನ್ನೆಲ್ಲ ಕೃಷ್ಣ ಕಂಸವಧೆಯ ನಂತರ ಮರಳಿ ತಂದು ಮಧುರೆಯಲ್ಲಿ ನಿಲ್ಲಿಸಿದನು.

(ಪುನಾಚೂ. ಪು. ೧೪೩, ೨೯೨)

ಕೀರ್ತನೆ ೪೦೮

(ನು. ೩) ಪಂಚಸಂಸ್ಕಾರ : ತಪ್ತ ಮುದ್ರಾಂಕನ, ಊರ್ಧ್ವಪುಂಡ್ರಧಾರಣೆ, ಕೃಷ್ಣನಾಮ, ಅಷ್ಟಾಕ್ಷರೀ ಮಂತ್ರಧ್ಯಾನ, ಭಗವತ್ಪೂಜೆ. (ಪ್ರಸನ್ನ ವೆಂಕಟದಾಸರ ಹಾಡುಗಳು ಪು. ೧೩೧)

ಕೀರ್ತನೆ ೪೧೪

(ನು. ೨) ಇಬ್ಬರ ಮೂರು ಸಾರೆಲಳಿದ : ಜಯವಿಜಯರು ವಿಷ್ಣುವಿನ ದ್ವಾರಪಾಲಕರು. ಒಮ್ಮೆ ವಿಷ್ಣುವನ್ನು ನೋಡಲು ಬಂದ ಸನಕಾದಿ ಮುನಿಗಳನ್ನು ಅಡ್ಡಗಿಸಿ ಭೂಲೋಕದಲ್ಲಿ ರಾಕ್ಷಸರಾಗಿ ಜನಿಸುವಂತೆ ಶಾಪವನ್ನು ಪಡೆದು ಮೊದಲನೆಯ ಜನ್ಮದಲ್ಲಿ ಹಿರಣ್ಯಾಕ್ಷ ಹಿರಣ್ಯಕಶಿಪುಗಳೆಂಬ ಹೆಸರಿನಿಂದ ಹುಟ್ಟಿ ವರಾಹ, ನೃಸಿಂಹರಿಂದ ಹತರಾಗಿ, ಎರಡನೆಯ ಬಾರಿ ರಾವಣ, ಕುಂಭಕರ್ಣರಾಗಿ ಜನಿಸಿ, ಶ್ರೀರಾಮನಿಂದ ಮಡಿದು, ಮೂರನೆಯ ಸಲ ಶಿಶುಪಾಲ, ದಂತವಕ್ತ್ರರಾಗಿ ಜನ್ಮವೆತ್ತಿ ಕೃಷ್ಣನಿಂದ ಹತರಾದರು. (ಭಾ.ಸ್ಕಂ.೩, ಅ.೧೬)

(ನು.೨) ಇಬ್ಬರೊಗ್ಗೂಡಿ ಬೆಳೆದು ಹನ್ನಿಬ್ಬರ ಬಡಿದ: ಬಲರಾಮ ಕೃಷ್ಣರು ಒಟ್ಟಾಗಿ ಗೋಕುಲದಲ್ಲಿ ಬೆಳೆಯುತ್ತ ವತ್ಸಾಸುರ, ವೃಕಾಸುರ, ಅಘಾಸುರ, ಮೊದಲಾದ ೧೨ ಮಂದಿ ರಾಕ್ಷಸರನ್ನು ಕೊಂದರು.

(ನು.೨) **ಇಬ್ಬರ ಕಾರಾಗಾರ ತಗಿದ** : ಕೃಷ್ಣ, ಕಂಸನನ್ನು ಕೊಂದು ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸಿದ.

(ನು.೩) : ಮೂರು ಮನೆಯೊಳಗಿಹನ – ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿರುವವನು. ಮೂರು ಮಾತಿಗೆ ಹೊಂದದವನ – ತ್ರಿಗುಣಾತೀತ. ಮೂರುಮೈಯನ ಕೃತ ಸೇವೆಗೆ ಮೂರು ರೂಪಾದನ – ಹನುಮ ಭೀಮ ಮಧ್ವರಿಂದ ರಾಮ, ಕೃಷ್ಣ, ಬಾಲಕೃಷ್ಣರ ರೂಪದಲ್ಲಿ ಸೇವಿತನಾದವನು. ಮೂರು ಪೊಳಲ ಹಗೆಕಾರನ – ತ್ರಿಪುರಾರಿ. ಮೂರುವೆಂಬನುರುಹಿದನ – ಕರ್ಮತ್ರಯಗಳನ್ನುರುಹಿದವನು.

ಕೀರ್ತನೆ ೪೧೫

(ನು.೩) **ಮಣಿಮಂತನ ಮುರಿದನು** : ದುರ್ಗಾ ಬೆಟ್ಟಕ್ಕೆ ಹೋಗುವಾಗ ತನ್ನನ್ನು ಕಚ್ಚಲು ಬಂದ ಸರ್ಪಾಕೃತಿಯ ಮಣಿಮಂತನನ್ನು ಮೆಟ್ಟಿ ಕೊಂದ ವಿಚಾರ. (ಸುಮಧ್ವವಿಜಯ, ಪು. ೬೪–೬೫) ಇಲ್ಲಿ ಮಧ್ವಾಚಾರ್ಯರಿಗೆ ಅನ್ವಯಿಸಿ ಈ ಮಾತು ಬಂದಿದೆ.

ಕೀರ್ತನೆ ೪೧೭

(ನು.೩) **ಪ್ರಿಯವ್ರತ** : ಸ್ವಾಯಂಭುವ ಮನುವಿನಿಂದ ಶತರೂಪಾಯೆಂಬುವಳಲ್ಲಿ ಜನಿಸಿದ ಹಿರಿಯ ಮಗ. ಈತ ತನ್ನ ರಥದ ಚಕ್ರದ ರೇಖೆಯಿಂದ ಸಪ್ತ ಸಮುದ್ರಗಳನ್ನು ಸಪ್ತ ದ್ವೀಪಗಳನ್ನಾಗಿಸಿ ತನ್ನ ಹಿರಿಯ ಹೆಂಡತಿಯ ಏಳು ಮಕ್ಕಳಿಗೂ ರಾಜ್ಯವನ್ನು ಹಂಚಿಕೊಟ್ಟು, ತಾನು ನಾರದ ಮುನಿಯಿಂದ ತತ್ತ್ವೋಪದೇಶವನ್ನು ಪಡೆದು ಮುಕ್ತನಾದ.

(ಪುನಾಚೂ, ಪು. ೪೨೯)

ಕೀರ್ತನೆ ೪೧೮

(ನು.೪) **ಅಷ್ಟಾಂಗ ಯೋಗ** : ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ (ಶ್ರೀ.ನಿ, ಪು.೧೨)

ಕೀರ್ತನೆ ೪೧೯

(ನು. ೨) **ಸಪ್ತಧಾತುಗಳು** : ಚರ್ಮ, ರುಧಿರ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ, ಶುಕ್ಲ.

(ನು.೭) **ಪಂಚಮಹಾಪಾಪ** : ಬ್ರಹ್ಮಹತ್ಯೆ, ಸುರಾಪಾನ, (ಸ್ವರ್ಣ) ಸ್ತೇಯ, ಗುರುಭಾರ್ಯಾಗಮನ, ಇವುಗಳನ್ನು ಮಾಡುವವರ ಸಂಸರ್ಗ – ಇವು ಪಂಚಮಹಾಪಾಪಗಳು.

(ಶ್ರೀ.ನಿ. ಪು.೩೨೮)

ಕೀರ್ತನೆ ೪೨೦

(ನು. ೨) ಮಣಿಮಂತ : ದ್ರೌಪದಿಯ ಇಚ್ಛೆಯಂತೆ ಭೀಮ ಸೌಗಂಧಿಕಾಪುಷ್ಪವನ್ನು ತರಲು ಹೋದಾಗ ತನ್ನನ್ನು ಅಡ್ಡಗಿಸಿದ ಮಣಿಮಂತನೆಂಬ ರಕ್ಕಸನನ್ನು ಕೊಲ್ಲುತ್ತಾನೆ.

(ವನಪರ್ವ, ಮಹಾಭಾರತ)

ಕೀರ್ತನೆ ೪೨೫

(ನು.೧)ನೀರಸೆಳೆದು : ಭರತಖಂಡವನ್ನೆಲ್ಲ ಇಪ್ಪತ್ತೊಂದು ಬಾರಿ ಸುತ್ತಿ ಪರಶುರಾಮನು ಕ್ಷತ್ರಿಯ ರಾಜರನ್ನೆಲ್ಲ ಸಂಹರಿಸಿದನು. ಆಮೇಲೆ ರಾಜರಿಲ್ಲದ ಭೂಮಿಯನ್ನೆಲ್ಲ ಕಾಶ್ಯಪರಿಗೆ ದಾನವಾಗಿ ಕೊಟ್ಟುಬಿಟ್ಟನು. ಕೊನೆಗೆ ತನಗೇ ಜಾಗವಿಲ್ಲದಂತಾಯಿತು. ಆಗ ಪಶ್ಚಿಮ ತೀರಕ್ಕೆ ಬಂದು ತನ್ನ ಕೊಡಲಿಯನ್ನು ತುಯ್ದು ಸಮುದ್ರದಲ್ಲಿ ಎಸೆದನು. ಆ ಕೊಡಲಿ ಬಿದ್ದ ಸ್ಥಳದವರೆಗೆ ಸಮುದ್ರ ಹಿಂದೆ ಸರಿಯಿತು. ಆ ಭೂಭಾಗವನ್ನು ಪರಶುರಾಮನೇ ಕೇರಳ, ತೌಳವ, ಹೈವ, ಸುರಾಷ್ಟ್ರ, ಕೊಂಕಣ, ಕರಹಾಟ, ಕರ್ನಾಟಕ, ಎಂದು ಸಪ್ತ ಕೊಂಕಣಗಳಾಗಿ ವಿಭಾಗಿಸಿದನು. ಸಹ್ಯಾದ್ರಿಯ ಮೂಲೆಗೂ ಸಾಗರಕ್ಕೂ ನಡುವೆ ನಾಸಿಕದಿಂದ ಕೆಳಗೆ ಕನ್ಯಾಕುಮಾರಿಯವರೆಗಿನ ಭೂಭಾಗಕ್ಕೆ ಶೂರ್ಪಾರಕ ಅಥವಾ ಪರಶುರಾಮಕ್ಷೇತ್ರವೆಂಬ ಹೆಸರಿದೆ. (ಸ್ಕಾಂದ ಪುರಾಣಕ್ಕೆ ಸೇರಿದ ಸಹ್ಯಾದ್ರಿಖಂಡದಲ್ಲಿ ಈ ವೃತ್ತಾಂತ ಬಂದಿದೆ. ಪು. ೨೯)

ಕೀರ್ತನೆ ೪೨೬

(ಅ.ಪ.) ಪಾಲ್ಗಡಲ ಮಗಳು : ದೇವದಾನವರು ಅಮೃತಕ್ಕಾಗಿ ಸಮುದ್ರ ಮಥನ ಮಾಡಿದಾಗ, ಕ್ಷೀರ ಸಮುದ್ರದಿಂದ ಜನಿಸಿದ ಲಕ್ಷ್ಮಿಯನ್ನು ವಿಷ್ಣು ಮದುವೆಯಾಗುತ್ತಾನೆ. ತನ್ನ ಎದೆಯಲ್ಲಿ ಧರಿಸುತ್ತಾನೆ. (ಪುನಾಚೂ. ಪು. ೫೪೫)

(ಕೀ.೪೨೯, ನು.೧)

ಕೀರ್ತನೆ ೪೪೩

(ನು. ೪) ಉಪೇಂದ್ರ : ವಿಷ್ಣು ಬಲಿಚಕ್ರವರ್ತಿಯ ಸೊಕ್ಕನ್ನು ಮುರಿಯುವುದಕ್ಕಾಗಿ ಅದಿತಿದೇವಿಯಲ್ಲಿ ಕಶ್ಯಪಮುನಿಯಿಂದ ಇಂದ್ರನಿಗೆ ತಮ್ಮನಾಗಿ ಜನಿಸಿದ ಕಾರಣ ಅವನಿಗೆ ಉಪೇಂದ್ರನೆಂಬ ಹೆಸರೂ ರೂಢಿಯಲ್ಲಿದೆ.

(ಪುನಾಚೂ. ಪು. ೫೫೭) (ಕೀ. ೧೦೭, ನು. ೨)

ಕೀರ್ತನೆ ೪೪೪

(ನು. ೩) ಧೇನುಕಹರ : ಧೇನುಕ ಒಬ್ಬ ರಾಕ್ಷಸ. ಬೃಂದಾವನದ ಸಮೀಪದಲ್ಲಿದ್ದ ತಾಳವನದಲ್ಲಿ ಕತ್ತೆಯ ರೂಪದಲ್ಲಿದ್ದು ಅಲ್ಲಿಗೆ ಬಂದವರನ್ನೆಲ್ಲ ಕೊಂದು ತಿನ್ನುತ್ತಿದ್ದ. ಒಮ್ಮೆ ಗೊಲ್ಲಹುಡುಗರು ತಾಳೆ ಹಣ್ಣುಗಳಿಗಾಗಿ ಆಸೆಪಟ್ಟು ಅಲ್ಲಿಗೆ ಹೋದಾಗ ಈತನನ್ನೆದುರಿಸಿದ ಬಲರಾಮ ಇವನನ್ನು ಕೊಲ್ಲುತ್ತಾನೆ. (ಭಾ.ಸ್ಕಂ.೧೦, ಅ.೧೫)

ಕೀರ್ತನೆ ೪೪೭

(ನು.೨) ಕೌಮಾರ (ಮುನಿಕುಮಾರಾವತಾರ) : ಬ್ರಹ್ಮನು ಪೂರ್ವದಲ್ಲಿ ಲೋಕಸೃಷ್ಟಿಯನ್ನು ಮಾಡಬೇಕೆಂದುದ್ದೇಶಿಸಿ ಘೋರವಾದ ತಪಸ್ಸನ್ನು ಮಾಡಿದಾಗ ಮೆಚ್ಚಿದ ಭಗವಂತನು ಮೊದಲು ಸನತ್ತೆಂಬ ಹೆಸರುಳ್ಳ ಕುಮಾರನಾಗಿಯೂ ಅನಂತರ ಸನಾತನ. ಸನಂದನ, ಸನಕರೆಂಬ ಕುಮಾರರಾಗಿಯೂ ಹುಟ್ಟಿದನು. ಕಲ್ಪಾಂತದಲ್ಲಿ ಜೀವಿಗಳೆಲ್ಲ ನಾಶವಾದಾಗ ಮುಂದಿನ ಕಲ್ಪಾದಿಯಲ್ಲಿ ಆತ್ಮತತ್ವವನ್ನು ತಿಳಿಸಲೋಸುಗ ಭಗವಂತ ಈ ನಾಲ್ಕು ರೂಪಗಳಿಂದ ಅವತರಿಸಿ ಅದನ್ನು ಉಪದೇಶಿಸಿದನು. ಈ ನಾಲ್ವರೂ ವಿಷ್ಣುವಿನ ಅವತಾರಿಗಳಾದ್ದರಿಂದ ಒಟ್ಟಾಗಿ ಇದನ್ನು ಕುಮಾರಾವತಾರ ಎನ್ನಲಾಗಿದೆ. (ಭಾ.ಸ್ಕಂ.೨, ಅ.೭)

(ನು.೨) ಧನ್ವಂತರಿ : ದೇವ ವೈದ್ಯನಾದ ಧನ್ವಂತರಿ ಕೂಡ ವಿಷ್ಣುವಿನ ಅವತಾರ. ಈತ ಲೋಕೋಪಕಾ ರಾರ್ಥವಾಗಿ ಆಯುರ್ವೇದವನ್ನು ಲೋಕದಲ್ಲಿ ಹರಡಿದ.

(ಭಾ.ಸ್ಕಂ.೨, ಅ.೭)

(ನು.೨) ಹಂಸ : ನಾರದನು ಒಮ್ಮೆ ಭಗವಂತ(ವಿಷ್ಣು)ನನ್ನು ಕುರಿತು ಯೋಗಾದಿ ವಿಷಯುಗಳನ್ನು ಸಂಪೂರ್ಣವಾಗಿ ವಿವರಿಸಬೇಕೆಂದು ಪ್ರಾರ್ಥಿಸಲು ಆತನು ಹಂಸಾವತಾರವನ್ನೆತ್ತಿ ಅವೆಲ್ಲವನ್ನೂ ನಾರದನಿಗೆ ವಿವರಿಸಿದನು. (ಭಾ.ಸ್ಕಂ.೨, ಅ.೭)

(ನು.೨) ಶುಕ್ಲ : ಶುಕ್ಲಕೇಶನೆನಿಸಿದ ಬಲರಾಮನು ಪರಮಾತ್ಮನ ಅಂಶಾವತಾರಿ ಹಾಗೂ ಆದಿಶೇಷನ ಪೂರ್ಣಾವತಾರಿ ಎನ್ನಿಸಿದ್ದಾನೆ. ಆದಿಶೇಷನು ಶ್ರೀಕೃಷ್ಣನನ್ನು ಸೇವಿಸಲು ಬಲರಾಮನಾಗಿ ಅವತರಿಸಿದನು. ಅವನಿಂದ ಹೆಚ್ಚಿನ ಕಾರ್ಯವನ್ನು ಮಾಡಿಸುವುದಕ್ಕಾಗಿ ಪರಮಾತ್ಮನು ತನ್ನ ಶ್ವೇತಕೇಶರೂಪದಿಂದ ಆ ಬಲರಾಮನಲ್ಲಿ ಆವಿಷ್ಟನಾದನು.

(ನು.೫೧) ಛಪ್ಪನ್ನದೇಶ: ಅಂಗ, ವಂಗ, ಕಳಿಂಗ, ಕರ್ಣಾಟ, ಕೇರಳ, ಕಾಮರೂಪ, ಗೌಡ, ವನವಾಸ, ಕುಂತಲ, ಕೊಂಕಣ, ಮಗಧ, ಸುರಾಷ್ಟ್ರ, ಮಾಳವ, ಲಾಟ, ಭೋಟ, ವರಾಟ, ಶಬರ, ಕುಕುರ, ಕುರು, ಆವಂತಿ, ಪಾಂಡ್ಯ, ಮದ್ರ, ಸಿಂಹಲ, ಗೂರ್ಜರ, ಪಾರಸಿಕ,

ಮಿಥಿಲ, ಪಾಂಚಾಲ, ಶೂರಸೇನಿ, ಗಾಂಧಾರ, ಬಾಹ್ಲಿಕ, ಹೈಹಯ, ತೌಳವ, ಸಾಲ್ವ, ಪುಂಡ್ರಕ, ಪ್ರಾಗ್ಜ್ಯೋತಿಷ, ಮತ್ಸ್ಯ, ಚೇದಿ, ಬರ್ಬರ, ನೇಪಾಳ, ಗೌಳ, ಕಾಶ್ಮೀರ, ಕನ್ಯಾಕುಬ್ಜ, ವಿದರ್ಭ, ಖುರಸಾಣ, ಮಹಾರಾಷ್ಟ್ರ, ಕೋಸಲ, ಕೇಕಯ, ಅಹಿಚ್ಛತ್ರ, ತ್ರಿಲಿಂಗ, ಪ್ರಯಾಗ, ಕರಹಾಟಕ, ಕಾಂಭೋಜ, ಭೋಜ, ಚೋಳ, ಹೂಣ, ಕಾಶಿ.

(ರತ್ನಕೋಶ, ಕನ್ನಡ–ಕನ್ನಡ ನಿಘಂಟು)

(ನು.೭೭) ಮದ್ಯಪಾನಿ ತಾಮಸ ಯವನನ ಕೊಲಿಸಿದನೆ : ಕಾಲಯವನ ಗರ್ಗಮಹರ್ಷಿಯ ಮಗ. ಯಾದವರನ್ನು ಧ್ವಂಸ ಮಾಡಲೆಂದೇ ಶಿವನಿಂದ ವರ ಪಡೆದು ಹುಟ್ಟಿದವನು. ಮಹಾಬಲಸಂಪನ್ನನಾದ ಈತ ಯಾದವರನ್ನು ಪೀಡಿಸತೊಡಗಿದಾಗ ಶಿವನ ವರದಿಂದಾಗಿ, ಕೃಷ್ಣನಿಗೂ ಈತನನ್ನು ಸೋಲಿಸಲಾಗಲಿಲ್ಲ. ಒಮ್ಮೆ ಕೃಷ್ಣ ಇವನನ್ನು ಎದುರಿಸಿ ಕಾದಲಾರದೆ ಓಡಿಹೋಗಿ ಮುಚುಕುಂದನು ಮಲಗಿದ್ದ ಗವಿಯಲ್ಲಿ ಅಡಗಿಕೊಂಡ. ಕಾಲಯವನ ಮಲಗಿದ್ದ ಮುಚುಕುಂದನನ್ನೇ ಕೃಷ್ಣನೆಂದು ತಿಳಿದು ಎಡಗಾಲಿನಿಂದ ಒದ್ದಾಗ ಎಚ್ಚತ್ತು ಕೋಪಗೊಂಡ ಮುಚುಕುಂದನ ದೃಷ್ಟಿಪಾತದಿಂದ ಬೂದಿಯಾದ. (ಪುನಾಚೂ, ಪು.೧೦೮)

(ನು. ೭೭) ಸದ್ದಿಲ್ಲದೆ ಮಧುರೆ ಜನರ ....ದ್ವಾರಕೆಯಲಿಟ್ಟನೆ : ಕಂಸನ ಮಾವನಾದ ಜರಾಸಂಧ ತನ್ನ ಅಳಿಯನನ್ನು ಕೊಂದ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಮಧುರೆಯ ಮೇಲೆ ಪದೇ ಪದೇ ದಂಡೆತ್ತಿ ಬಂದು ಸೋತು ಹೋಗುತ್ತಿದ್ದ. ಹೀಗೆಯೇ ೧೭ ಬಾರಿ ನಡೆಯಿತು. ೧೮ನೆಯ ಬಾರಿ ಆತ ದಂಡೆತ್ತಿ ಬರುವ ಹವಣಿಕೆಯಲ್ಲಿರುವಾಗಲೇ ಕಾಲಯವನನೂ ಮೂರು ಕೋಟಿ ಸೈನ್ಯದೊಡನೆ ಮಧುರೆಯನ್ನು ಮುತ್ತಿದಾಗ ಕೃಷ್ಣ ಇಬ್ಬರನ್ನು ಎದುರಿಸಿ ಗೆಲ್ಲುವುದು ಕಷ್ಟವೆಂದರಿತು ಸಮುದ್ರ ಮಧ್ಯದಲ್ಲಿ ೧೨ ಯೋಜನಗಳ ವಿಸ್ತಾರಕ್ಕೆ ಒಂದು ಪುರವನ್ನು ಕಟ್ಟಿಸಿ ತನ್ನ ಯೋಗ ಪ್ರಭಾವದಿಂದ ಮಧುರೆಯ ಜನರೆಲ್ಲರನ್ನೂ ಈ ಪಟ್ಟಣದಲ್ಲಿಟ್ಟನು. (ಭಾಸ್ಕಂ.೧೦, ಅ.೬೦)

(ನು.೮೦) ಗರುಡನಮೃತ ಕಲಶವ ಸುರರ ಗೆದ್ದು ಹರುಷದಿಂದೊಯ್ಯುವಂತೆ: ಗರುಡ ತನ್ನ ತಾಯಿಯ ದಾಸ್ಯವನ್ನು ತಪ್ಪಿಸಲಿಕ್ಕಾಗಿ ದೇವಲೋಕಕ್ಕೆ ಹೋಗಿ ಎಲ್ಲ ಅಡೆತಡೆಗಳನ್ನು ನಿವಾರಿಸಿಕೊಂಡು ಅಡ್ಡಗಿಸಿದ ಇಂದ್ರನನ್ನು ಎದುರಿಸಿ, ಅವನು ಬೀಸಿದ ವಜ್ರಾಯುಧಕ್ಕೆ ತನ್ನ ಒಂದು ಗರಿಯನ್ನು ಮಾತ್ರ ಬಲಿ ಕೊಟ್ಟು ಅಮೃತವನ್ನು ತರುತ್ತಾನೆ.

(ಪುನಾಚೂ, ಪು. ೧೮೨)

ಅನುಬಂಧ – ೩

ಅಂಕಿತನಾಮಸೂಚಿ

ಅಂಗಜ
ಅಂಗದೇಶ
ಅಂಜನಾ
ಅಂಜನಾಗಿರಿ
ಅಂಜನಾತ್ಮಜ
ಅಂಜನಾದ್ರಿ
ಅಂತಕ
ಅಂತರ್ಗಂಗೆ
ಅಂಬರಕೇಶ
ಅಂಬರಾಳಕ
ಅಂಬರೀಷ
ಅಂಬಿಕೆ
ಅಂಬುಜನಾಭ
ಅಂಬುಜಭವ
ಅಂಬುಜಾಂಬಕ
ಅಂಬುಜಾಸನ
ಅಕ್ರೂರ
ಅಕ್ಷೋಭ್ಯ
ಅಗಸ್ತ್ಯ
ಅಗ್ನಿ
ಅಗ್ನಿವರ್ಣ
ಅಘೌಘ
ಅಚ್ಯುತ
ಅಜ
ಅಜನಯ್ಯ
ಅಜಾಂಡ
ಅಜಾಮಿಳ
ಅಜಿತ
ಅತ್ರಿ
ಅತ್ರೇಯ
ಅದಿತಿ
ಅಧೋಕ್ಷಜ
ಅನಂತ
ಅನಂತವರ್ಣ
ಅನಂತಶಯನ
ಅನಂತಾಸನ
ಅನಲ
ಅನಸೂಯ
ಅನಿಮಿಷ
ಅನಿರುದ್ಧ

ಅನಿಲ
ಅನುಪಮ
ಅಪ್ರಮೇಯ
ಅಬ್ಜ
ಅಭಿಮನ್ಯು
ಅಮರ
ಅಮರಾವತಿ
ಅಮರೇಶ
ಅಮೋಘ
ಅಯೋಧ್ಯೆ
ಅರವಿಂದ
ಅರುಣ
ಅರ್ಕ
ಅರ್ಜುನ
ಅಲಮೇಲುಮಂಗ
ಅಲವಬೋಧ
ಅಲ್ಲಾಳನಾಥ
ಅವನಿ
ಅವ್ಯಯ
ಅವ್ಯಾಕೃತ
ಅಹಲ್ಯೆ
ಅಹಿನಾಥ
ಅಹಿಪ
ಅಹಃಪತಿ
ಅಹೋಬಲ
ಆಂಗೀರಸ
ಆಂಜನೇಯ
ಆಂಧ್ರ
ಆದಿನಾಥ
ಆದಿಪುರುಷ
ಆದಿಪೋತ್ರ
ಆದಿವರಾಹ
ಆದಿಶೇಷ
ಆನರ್ತ
ಆನಂದತೀರ್ಥ
ಆನಂದಮುನಿ
ಆವಪಳ್ಳಿ
ಇಂದಿರೆ
ಇಂದಿರೇಶ
ಇಂದು
ಇಂದುಕುಲೇಂದ್ರ
ಇಂದುಧರ
ಇಂದುಮೌಳಿ
ಇಂದುಶೇಖರ
ಇಂದ್ರ
ಇಂದ್ರದ್ಯುಮ್ನ
ಇಕ್ಷ್ವಾಕು
ಇನ
ಇಳೆ
ಈಶ
ಈಶ್ವರ
ಉಗ್ರಸೇನ

ಉಡುಪ
ಉಡುಪಿ
ಉದ್ಧವ
ಉದ್ಧಾಲಕ
ಉಪಸುಂದ
ಉಪೇಂದ್ರ
ಉಮಾ
ಉಮಾಧವ
ಉರಗಾದ್ರಿ
ಉರಗೇಶ
ಉರ್ವಿ
ಊರ್ಧ್ವಪಟ
ಋಕ್ಷ
ಋಷಭ
ಏಕಪಾದದೇಶ
ಏಣಾಂಕ
ಒಡ್ಡಿ ಜಗನ್ನಾಥ
ಕ
ಕಂಚಿ
ಕಂಜಜ
ಕಂಠೀರವ
ಕಂತು
ಕಂತುಪಿತ
ಕಂದರ್ಪ
ಕಂಸ
ಕಚ್ಛಪ
ಕನಕನೇತ್ರ
ಕನಕಪುರ
ಕನಕಾಕ್ಷ
ಕನೋಜ
ಕನ್ನಡ(ದೇಶ)
ಕಪರ್ದಿ
ಕಪರ್ದಿನಿ
ಕಪಾಲಿ
ಕಪಿಲ
ಕಮಠ
ಕಮಲ
ಕಮಲಜ
ಕಮಲವ್ವೆ
ಕಮಲಾಕ್ಷ
ಕಮಲೇಶ
ಕಮಲೋದ್ಭವ
ಕರಂಧಮ
ಕರ್ನಾಟಕ
ಕಲಿ
ಕಲ್ಪವೃಕ್ಷ
ಕಲ್ಕಿ
ಕವಿ
ಕವೀಂದ್ರ
ಕಶ್ಯಪ
ಕಳಿಂಗ
ಕಾಂಚ(ದೇಶ)
ಕಾಂಭೋಜ

ಕಾಮ
ಕಾಮಧೇನು
ಕಾವ
ಕಾವೇರಿ
ಕಾಶಿ
ಕಾಶ್ಮೀರ
ಕಾಳಿ
ಕಾಳಿಂದಿ
ಕಿಂಪುರುಷ
ಕಿನ್ನರ
ಕಿಮ್ಮೀರ
ಕೀಚಕ
ಕುಂಡಿನಾಪುರ
ಕುಂತಳ
ಕುಂತಿ
ಕುಂಭಿಣಿ
ಕುಬ್ಜೆ
ಕುಮಾರಧಾರಾ
ಕುಮುದ್ವತಿ
ಕುರುಕುಲ
ಕುವಲೇಶ
ಕುಶಶಯನ
ಕೂರ್ಮ
ಕೃತಪುರ
ಕೃಶಾನು
ಕೃಷ್ಣ

ಕೃಷ್ಣಮ್ಮ
ಕೃಷ್ಣಯ್ಯ
ಕೃಷ್ಣವೇಣಿ
ಕೃಷ್ಣೆ
ಕೇಕಯ
ಕೇರಳ
ಕೇಶವ
ಕೈಟಭ
ಕೈಟಭಾಂತಕ
ಕೊಂಕಣ
ಕೊಮ್ಮೀರ
ಕೊಲ್ಲಾಪುರ
ಕೋದಂಡಧರ
ಕೋಸಲ
ಕೌಮಾರ
ಕೌರವ
ಕೌಶಿಕ
ಕೌಸಲ್ಯೆ
ಕೌಸ್ತುಭ
ಕ್ರೀಡಾದ್ರಿ
ಕ್ಷಿತಿ
ಕ್ಷಿತಿಜೆ
ಕ್ಷೀರಸಾಗರ
ಕ್ಷೇಮೇಶ
ಕ್ಷೋಣಿ
ಖಂಡಪರಶು

ಖದ್ಯೋತ
ಖರ
ಖಾಂಡವವನ
ಗಂಗಾಜನಕ
ಗಂಗಾಧರ
ಗಂಗೆ
ಗಂಧರ್ವ
ಗಜವರದ
ಗಜಾಸುರ
ಗಣಪ
ಗಣೇಶ
ಗದಾಧರ
ಗಯ
ಗರುಡ
ಗರುಡಗಿರಿ
ಗರ್ಗ
ಗಾಂಗೇಯ
ಗಾಂಡೀವಿ
ಗಾರ್ಗ್ಯ
ಗಿರಿಜೆ
ಗಿರಿಧರ
ಗಿರೀಶ
ಗುರ್ಜರ (ದೇಶ)
ಗೊಲ್ಲ
ಗೋಕುಲ
ಗೋದಾವರಿ
ಗೋಪ
ಗೋಪಮ್ಮ
ಗೋಪಾಲ
ಗೋಪಾಲಕೃಷ್ಣ
ಗೋಪಾಲರೇಯ
ಗೋಪಿ
ಗೋವರ್ಧನ
ಗೋವರ್ಧನಧರ
ಗೋವಿಂದ
ಗೌಡದೇಶ(ಗೌಳ)
ಗೌತಮ
ಗೌರಿ
ಗೌರೀಶ
ಘನಶಾಮ
ಘರ್ಘರ
ಘೋಟಮುಖ(ದೇಶ?)
ಚಂಡ
ಚಂಡಕರ
ಚಂದಮಾಮ
ಚಂದ್ರ
ಚಂದ್ರಮೌಳಿ
ಚಕ್ರಧರ
ಚತುರ್ಬಾಹು
ಚತುರ್ಮುಖ
ಚಾಣೂರ
ಚಿಂತಾಮಣಿ

ಚಿನ್ಮಯ
ಚ್ಯವನ
ಜಂಭ
ಜಂಭಾರಿ
ಜಗದೀಶ
ಜಗನ್ನಾಥ
ಜಗಪಾಲ
ಜಟಾಸುರ
ಜಟ್ಟಿಗ
ಜನಕ
ಜನಾರ್ದನ
ಜನಾರ್ದನವರ್ಯ
ಜಮದಗ್ನಿ
ಜಯಮುನಿರಾಯ
ಜಯರಾಯ
ಜಲಂದರ
ಜವ
ಜಹ್ನು
ಜಾಳೇಂದ್ರ (ದೇಶ)
ಜಿನ್ನ(ದೇಶ)
ಜೃಂಭ
ಜೊನ್ನಗ
ಜ್ಞಾನಾನಂದ
ಜ್ಞೇಯ
ಝಷ
ಡಿಬಿಕ

ತಮ
ತರಣಿ
ತಾಟಕಿ
ತಾಮ್ರಪರ್ಣಿ
ತಾಮ್ರಾಕ್ಷ
ತಾರಕಾಸುರ
ತಾವರೆಗಣ್ಣ
ತಿಮ್ಮಪ್ಪ
ತಿರುಪತಿ
ತಿರುಮಲೆ
ತಿರುವೆಂಗಳಯ್ಯ
ತುಂಗಭದ್ರೆ
ತುಂಬುರ
ತುಂಬುರುಜಲ
ತುರಗಾಸ್ಯ
ತುರುಷ್ಕದೇಶ
ತುಳಸಿ
ತುಳಾಂಡ
ತುಳುವ
ತೃಣಾವರ್ತ
ತೊರವೆಪುರ
ತ್ರ್ಯಕ್ಷ
ತ್ರಿಕೂಟಾದ್ರೀಶ
ತ್ರಿನಯನ
ತ್ರಿಪಥಗಾ
ತ್ರಿಪದ

ತ್ರಿಪುರ
ತ್ರಿಪುರಾಂತಕ
ತ್ರಿಯಂಬಕ
ತ್ರಿವಕ್ರೆ
ತ್ರಿವಿಕ್ರಮ
ದಂಭೋಳಿ
ದಕ್ಷ
ದತ್ತ
ದತ್ತಾತ್ರೇಯ
ದಧೀಚಿ
ದನು
ದನುಜ
ದನುಜಾಂತಕ
ದಮಘೋಷ
ದಯಾನಿಧಿ
ದರ್ದುರ(ದೇಶ)
ದರ್ಭಶಯನ
ದಶಮುಖ
ದಶರಥ
ದಶಶಿರ
ದಶಾನನ
ದಶಾಸ್ಯ
ದಾಕ್ಷಾಯಿಣಿ
ದಾಮೋದರ
ದಾಶರಥಿ
ದಿಗಂಬರ

ದಿತಿ
ದಿನಕರ
ದಿನಪ
ದಿನಮಣಿ
ದಿವಾಕರ
ದಿವಿ
ದಿವಿಪ
ದುರ್ಗಾ
ದುರ್ವಾಸ
ದೂಷಣ
ದೇವಕಿ
ದೇವವ್ರತ
ದೇವಹೂತಿ
ದ್ಯುಗ
ದ್ಯುಗಮನೆ
ದ್ಯುಮಣಿ
ದ್ರಾವಿಡ
ದ್ರುಪದ
ದ್ರುಹಿಣ
ದ್ರೌಪದಿ
ದ್ವಾಪರ
ದ್ವಾರಕೆ
ಧನಪ
ಧನ್ವಂತರಿ
ಧರಣಿ
ಧರಿತ್ರಿ

ಧರೆ
ಧರ್ಮರಾಯ
ಧೂರ್ಜಟಿ
ಧೃತಿ
ಧೇನುಕ
ಧೇನುಗಿರಿ
ಧೌಮ್ಯ
ಧ್ರುವ
ನಂದ
ನಂದಗೋಕುಲ
ನಂದಗೋಪ
ನಂದನಂದನ
ನಂದನರಾಣಿ
ನಂದವ್ರಜ
ನರ
ನರಕ
ನರನಾರಾಯಣ
ನರಸಿಂಹ
ನರಹರಿ
ನರಹರಿಯತಿ
ನರ್ಮದಾ
ನಹುಷ
ನಳ
ನಳಿನಭವ
ನಳಿನಾಕ್ಷ
ನಾಕ

ನಾಕಪ
ನಾಗಶಯನ
ನಾಗೇಶ
ನಾರದ
ನಾರದೀಯ ತೋಯ
ನಾರಸಿಂಹ
ನಾರಾಯಣ
ನಿಟಿಲನಯನ
ನಿತ್ಯಾನಂದ
ನಿರಂಜನ
ನೀರಜಸಖ
ನೀರದಶಾಮ
ನೀಲಕಂಧರ
ನೀಲಮೇಘಾಂಗ
ನೀಲಾಂಗ
ನೃಗ
ನೃಹರಿ
ನೇಪಾಳ
ನೇಮಿ
ಪಂಕಜನಾಭ
ಪಂಚಜನ
ಪಂಚಮುಖ
ಪಂಚಬಾಣ
ಪಂಚಶರ
ಪಂಚಾನನ
ಪಂಢರಾಪುರ

ಪಂಢರಿರಾಯ
ಪಕ್ಷೀಂದ್ರ
ಪಣೆಗಣ್ಣ
ಪದ್ಮಜ
ಪದ್ಮಜಾಂಡ
ಪದ್ಮನಾಭ
ಪದ್ಮಭವ
ಪದ್ಮಿನಿ
ಪನ್ನಗ
ಪನ್ನಗನಗಪ
ಪನ್ನಗಾಚಲ
ಪನ್ನಗಾದ್ರಿ
ಪರಮಹಂಸ
ಪರಾಶರ
ಪರೀಕ್ಷಿತ
ಪರೇಶ
ಪವನ
ಪಶುಪತಿ
ಪಾಂಚಾಲ
ಪಾಂಚಾಲಿ
ಪಾಂಡವ
ಪಾಂಡುತೀರ್ಥ
ಪಾಂಡುರಂಗ
ಪಾಕ
ಪಾಕಹ
ಪಾರಿಜಾತ
ಪಾರ್ಥ
ಪಾಲ್ಗಡಲು
ಪಾವಕ
ಪಿನಾಕಿ
ಪುಂಡರೀಕ
ಪುಂಡರೀಕಾಕ್ಷ
ಪುರಂದರದಾಸರು
ಪುರಹರ
ಪುರುಷೋತ್ತಮ
ಪುರುಹೂತ
ಪುರೂರವ
ಪುಲಸ್ತ್ಯ
ಪೂತನಿ
ಪೂರ್ಣಕಾಮ
ಪೂರ್ಣಪ್ರಜ್ಞ
ಪೂರ್ಣಾತ್ಮ
ಪೂರ್ಣಾನಂದ
ಪೂರ್ಣೇಂದು
ಪೃಥ್ವಿ
ಪೃಥು
ಪೆರೆ
ಪೈಲ
ಪೋತ್ರಿ
ಪೌಂಡ್ರಕ
ಪೌಲಸ್ತ್ಯ
ಪ್ರಥು
ಪ್ರದೀಪ

ಮನ್ಮಥ
ಮನ್ನಾರಿಕೃಷ್ಣ
ಮರೀಚಿ
ಮರುತ
ಮಲಯಗಿರಿ
ಮಲೆಯಾಳ
ಮಹಜಿನ್ನ
ಮಹಾಘೋಟದೇಶ
ಮಹಾರಾಷ್ಟ್ರ
ಮಹಿ
ಮಹಿದಾಸ
ಮಹೀತಳ
ಮಾ
ಮಾಂಧಾತ
ಮಾಗಧ
ಮಾಧವ
ಮಾರ
ಮಾರಪಿತ
ಮಾರುತಿ
ಮಾರ್ಕಂಡೇಯ
ಮಾಳವ
ಮಿತ್ರ
ಮೀನ
ಮುಂಗಿಳ(ದೇಶ)
ಮುಕುಂದ
ಮುಖ್ಯಪ್ರಾಣ
ಮುಚುಕುಂದ
ಮುದ್ದುಕೃಷ್ಣ
ಮುರಹರ
ಮುರಳೀಧರ
ಮುರಾರಿ
ಮುಷ್ಟಿಕ
ಮೂಲರಾಮ
ಮೃಡ
ಮೃತ್ಯುಂಜಯ
ಮೇದಿನಿ
ಮೇರು
ಯಜ್ಞ
ಯಜ್ಞಿ
ಯಜ್ಞಾಂಗ
ಯಜ್ಞಾತ್ಮ
ಯಜ್ಞೇಶ
ಯದುಕುಲ
ಯದುಗಿರಿ
ಯದುಪತಿ
ಯದುವೀರ
ಯಮ
ಯಮಧರ್ಮ
ಯಮಳಾರ್ಜುನ
ಯಮುನೆ
ಯಯಾತಿ
ಯವನ
ಯಶೋದೆ

ಯಾದವ
ಯುಗಾಂಧಾರ
ಯುದಿಷ್ಠಿರ
ಯೋಗೇಂದ್ರ
ಯೋಗೀಶ
ರಂಗ
ರಂಗಮ್ಮ
ರಂಗಯ್ಯ
ರಂಗರಾಯ
ರಂತಿದೇವ
ರಘುಕುಲ
ರಘುನಂದನ
ರಘುರಾಜ
ರಘುರಾಮ
ರಘುನಾಥ
ರಘುವರ್ಯ
ರಘೂತ್ತಮ
ರತಿ
ರಮಾ
ರಮೇಶ
ರವಿ
ರಾಘವ
ರಾಘವೇಂದ್ರ
ರಾಜಶೇಖರ
ರಾಜೀವಲೋಚನ
ರಾಜೇಶ್ವರ
ರಾಧೆ

ರಾಮ
ರಾಮಚಂದ್ರ
ರಾವಣ
ರುಕ್ಮ
ರುಕ್ಮಿ
ರುಕ್ಮಿಣಿ
ರುದ್ರ
ರೇವತಿ
ಲಂಕೆ
ಲಂಬಕರ್ಣ
ಲಕುಮವ್ವ
ಲಕ್ಷ್ಮಣ
ಲಕ್ಷ್ಮಿ
ಲಕ್ಷ್ಮೀಕಾಂತ
ಲಕ್ಷ್ಮೀಧರ
ಲಕ್ಷ್ಮೀಪತಿ
ಲಕ್ಷ್ಮೀವರ
ಲಕ್ಷ್ಮೀಶ
ಲವ
ಲೋಕೇಶ
ವಂಗ
ವಂಜಿರೆ
ವಜ್ರಿ
ವನಜನಯನ
ವನಜನಾಭ
ವನಜಭವ

ವನಜಾಕ್ಷ
ವನಜಾಸನ
ವನಮಾಲಿ
ವರದರಾಜ
ವರಲಕ್ಷ್ಮಿ
ವರಶೇಖರ
ವರಾಹ
ವರುಣ
ವಸಿಷ್ಠ
ವಸುಧೆ
ವಸುಮತಿ
ವಾಗೀಶ
ವಾಣಿ
ವಾಣೀಧವ
ವಾತ
ವಾತಜ
ವಾದಿರಾಜ
ವಾಮನ
ವಾಮದೇವ
ವಾಯು
ವಾರಿಜಾಕ್ಷ
ವಾರಿಜಾಸನ
ವಾಲ್ಮೀಕಿ
ವಾಸವ
ವಾಸವೇಯ
ವಾಸುದೇವ

ವಿಕ್ರಮ
ವಿತಲ
ವಿದರ್ಭ
ವಿದುರ
ವಿದೇಹಿ
ವಿದ್ಯಾಧರ
ವಿದ್ಯಾಧಿರಾಜ
ವಿದ್ಯಾಧೀಶ
ವಿದ್ಯಾನಿಧಿ
ವಿಧಾತ
ವಿಧಿ
ವಿಧಿಪತಿ
ವಿಧು
ವಿನತೆ
ವಿಪ
ವಿಭೀಷಣ
ವಿರಾಟ
ವಿರಿಂಚಿ
ವಿಶಾಲ
ವಿಶ್ವಗರ್ಭ
ವಿಶ್ವೇಶ
ವಿಶ್ವೇಶ್ವರ
ವಿಷಕಂಠ
ವಿಷಧ್ವಜ
ವಿಷ್ವಕ್ಸೇನ
ವಿಷ್ಣು

ವಿಷ್ಣುಪದೆ
ವೀರನಾರಾಯಣ
ವೃಂದಾವನ
ವೃಕಾಸುರ
ವೃಷ್ಣಿಕುಲ
ವೆಂಕಟನಾಯಕ
ವೆಂಕಟಪತಿ
ವೆಂಕಟರಮಣ
ವೆಂಕಟಾದ್ರಿ
ವೆಂಕಟಾಧಿಪ
ವೆಂಕಟೇಶ
ವೇಣುಧರ
ವೇದವೇದ್ಯ
ವೇಲಾಪುರ
ವೇದವ್ಯಾಸ
ವೈಕುಂಠ
ವೈದೇಹಿ
ವೈನತೇಯ
ವೈರಾಟೆ
ವೈವಸ್ವತ
ವೈಶ್ವಾನರ
ವ್ಯಾಸ
ವ್ಯೋಮಕೇಶ
ವ್ರಜ
ಶಂಕರ
ಶಂಕಿಣಿ
ಶಂಖ
ಶಂಖಾರಿ
ಶಂಖಾಸುರ
ಶಂಡಮರಕ
ಶಂಬಲ
ಶಂಭು
ಶಕಟ
ಶಕ್ರ
ಶಚಿ
ಶತಧನ್ವ
ಶತ್ರುಘ್ನ
ಶಫರಿ
ಶರ್ವ
ಶರ್ವಾಣಿ
ಶಲ್ಯರಾಜ
ಶಶಾಂಕ
ಶಶಿ
ಶಶ್ವತ
ಶಸ್ತ
ಶಾಂತ
ಶಾಕ್ತ
ಶಾಮಲಾಂಗ
ಶಾರ್ಙ್ಗಪಾಣಿ
ಶಿಬಿ
ಶಿರಿಮುಷ್ಣ
ಶಿವ

ಶಿಶುಪಾಲ
ಶುಕ
ಶುಕ್ಲ
ಶುಕ್ಲಕೇಶ
ಶುಭಕಂಠ
ಶೂರ್ಪನಖಿ
ಶೂಲಿ
ಶೇಷಗಿರಿ
ಶೇಷಶಯನ
ಶೇಷಾದ್ರಿ
ಶೌನಕ
ಶೌರಿ
ಶ್ರೀಕಾಂತ
ಶ್ರೀಕೃಷ್ಣ
ಶ್ರೀಗಿರಿ
ಶ್ರೀನಾಥ
ಶ್ರೀನಿಧಿ
ಶ್ರೀನಿವಾಸ
ಶ್ರೀಧರ
ಶ್ರೀಪತಿ
ಶ್ರೀಪಾದ
ಶ್ರೀಮೂರ್ತಿ
ಶ್ರೀರಂಗ
ಶ್ರೀರಾಜ್ಯ
ಶ್ರೀರಾಮ
ಶ್ರೀಲೋಲ
ಶ್ರೀವತ್ಸ
ಶ್ರೀಶ
ಶ್ರುತಕೀರ್ತಿ
ಶ್ವೇತದ್ವೀಪ
ಶ್ವೇತಾದ್ರಿ
ಸಂಕರ್ಷಣ
ಸಂಜಯ
ಸಂಬರ
ಸಂಬಳ
ಸಂಸಾಳಕ(ದೇಶ)
ಸಗರ
ಸಚ್ಚಿದಾನಂದ
ಸತ್ಯನಾಥ
ಸತ್ಯನಿಧಿ
ಸತ್ಯಪೂರ್ಣ
ಸತ್ಯಭಾಮೆ
ಸತ್ಯವತಿ
ಸತ್ಯವ್ರತ
ಸತ್ಯಾಂಗನೆ
ಸತ್ಯಾಧಿರಾಜ
ಸತ್ಯಾಭಿನವ
ಸತ್ರಾಜಿತ
ಸದಾಶಿವ
ಸದ್ಯೋಜಾತ
ಸನಕ
ಸನಂದನ

ಸಮೀರ
ಸರಯೂ
ಸರಸಿಜ
ಸರಸಿಜಾಸನ
ಸರಸ್ವತಿ
ಸರಸ್ವತೀಯ ತೋಯ
ಸರ್ಪಭೂಷಣ
ಸರ್ವಜ್ಞ
ಸರ್ವೇಶ
ಸರ್ವೋತ್ತಮ
ಸವಿತೃ
ಸವ್ಯಸಾಚಿ
ಸವ್ವೀರ
ಸಾಂದೀಪಿನಿ
ಸಾಗರ
ಸಾಮಜ
ಸಾಲ್ವ
ಸಾಳ(ದೇಶ)
ಸಿಂಧು(ದೇಶ, ನದಿ)
ಸೀತಾ
ಸೀತಾಪತಿ
ಸೀತಾರಾಮ
ಸುಂದ
ಸುಖತೀರ್ಥ.
ಸುಗ್ರೀವ
ಸುದಾಮ
ಸುಪರ್ಣ
ಸುಬ್ರಹ್ಮಣ್ಯ
ಸುಮತೀಂದ್ರ
ಸುಯೋಧನ
ಸುರ
ಸುರಭಿ
ಸುರೇಶ
ಸುವರ್ಣ
ಸೂರ್ಯ
ಸೈಂಧವ
ಸೋದೆಮಠ
ಸೋಮ
ಸೋಮಕ
ಸೌಭರಿ
ಸೌಮಿತ್ರಿ
ಸೌರಾಷ್ಟ
ಸೌಳ
ಸ್ತ್ರೀರಾಜ್ಯ
ಸ್ಮರ
ಸ್ವರ್ಣಗಿರಿ
ಸ್ವರ್ಣಮುಖರಿ
ಸ್ವರ್ಧುನಿ
ಸ್ವಾಮಿ ಪುಷ್ಕರಿಣಿ
ಹಂಸ
ಹನುಮ
ಹನುಮಂತ

ಹಮ್ಮೀರ(ದೇಶ)
ಹಯಗ್ರೀವ
ಹಯಮುಖ
ಹಯವದನ
ಹಯಸೂದನ
ಹರ
ಹರಿ
ಹರಿಶ್ಚಂದ್ರ
ಹಲಿ
ಹಾಟಕಗಿರಿ
ಹಿಮಕರ
ಹಿಮಾಂಶು
ಹಿರಣ್ಯಕಶಿಪು
ಹಿರಣ್ಯಾಂಬಕ
ಹಿರಣ್ಯಾಕ್ಷ
ಹೂಣ
ಹೇಮಗಿರಿ
ಹೇಮಾಂಬಕ
ಹೇಮಾಕ್ಷ
ಹೈಹಯ

ಅನುಬಂಧ–೪

ಕೀರ್ತನೆಗಳ ಅಕಾರಾದಿ ಸೂಚಿ

ಕ್ರಮ. ಸಂಖ್ಯೆ.	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೧.	ಅಂಜನೆಸುತ ನಮೊ ಸ್ವಾಮಿ	೩೭೧
೨.	ಅಂಜರು ಹರಿಭಟರು	೩೭೨
೩.	ಅಂಜಿಕ್ಯಾಕೆನಗಂಜಿಕೆ	೧೯೦
೪.	ಅಂಜುವೆನದಕೆ ಕೃಷ್ಣ	೧೯೧
೫.	ಅಂದೇನಿಂದೇನಯ್ಯ	೨೯೪
೬.	ಅಂಬುಜಾಕ್ಷನ ಬಂಟ ನೆನೆವರಿಗೆ ನಂಟ	೩೭೩
೭.	ಅಂಬೆ ಶ್ರೀ ಅಂಬೆ ಜಗದಂಬೆ	೧೫೧
೮.	ಅಗಲಿ ಜೀವಿಸಬಹುದೆ ಕರುಣಿಯ	೧೬೫
೯.	ಅನಿಮಿತ್ತ ಬಂಧು ಅತಿದಯಾಸಿಂಧು	೧೯೨
೧೦.	ಅನುದಿನ ಭವಾಬ್ಧಿಯಲ್ಲಿ	೧೯೩
೧೧.	ಅಮ್ಮ ಕೇಳೆ ಯಶೋದಮ್ಮ	೩೩
೧೨.	ಅಮ್ಮ ಬಾರೊ ರಂಗಮ್ಮ ಬಾರೊ	೩೪
೧೩.	ಅರ್ಚನೆ ಮಾಡಿರಯ್ಯ	೩೭೪
೧೪.	ಅವನೆ ಜೀವಾಂಕಿತ ಪ್ರೇತ ನೋಡಿ	೨೯೫
೧೫.	ಅಳದಿರೊ ಸುಮ್ಮನಿರಮ್ಮ ನೀ	೩೫
೧೬.	ಆಗಬಲ್ಲದೆ ಹೀಗಾಗಬಲ್ಲದೆ	೨೯೬
೧೭.	ಆಗಲಿ ಹರಿಕೃಪೆ ಭಾಗವತರ ಸಂಗ	೧೯೪
೧೮.	ಆಟ ಪಾಟವ ನೋಡಿ ಧನ್ಯರು	೩೬
೧೯.	ಆತ್ಮ ನಿವೇದನ ಭಕುತಿ ತನ್ನಾತ್ಮವನೀವ	೩೭೫

ಅನುಬಂಧ-೫

ಸಹಾಯಕ ಸಾಹಿತ್ಯ

೧ ಆನಂದರಾಮಾಯಣ : ಆದಿಕವಿ ವಾಲ್ಮೀಕಿ,
ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ, ೧೯೫೦, ಮೈಸೂರು.

೨. ಕರ್ನಾಟಕದ ಹರಿದಾಸ ಸಾಹಿತ್ಯ : ಆರ್. ಎಸ್. ಪಂಚಮುಖಿ.

೩ ಕರ್ನಾಟಕ ಭಕ್ತವಿಜಯ : ಬೇಲೂರು ಕೇಶವದಾಸರು, ೧೯೩೭

೪ ಕರ್ನಾಟಕ ಭಾರತ ಕಥಾಮಂಜರಿ : ಕವಿ ಕುಮಾರವ್ಯಾಸ;
ಸಂ. ಕುವೆಂಪು ಮತ್ತು ಮಾಸ್ತಿ, ೧೯೫೮, ಬೆಂಗಳೂರು.

೫ ಕರ್ನಾಟಕ, ವಿಷಯ ವಿಶ್ವಕೋಶ:
ಮೈಸೂರು ವಿಶ್ವವಿದ್ಯಾನಿಲಯ,
೧೯೭೯ ಮೈಸೂರು.

೬ ಕವಿ ಬ್ರಹ್ಮಶಿವ, ಒಂದು ಅಧ್ಯಯನ : ಕೆ. ಅನಂತರಾಮು.

೭ ತಿರುಪತಿ ತಿಮ್ಮಪ್ಪ : ಎಸ್.ಕೆ.ರಾಮಚಂದ್ರರಾವ್.

೮ ತೀರ್ಥಪ್ರಬಂಧ : ಎಸ್. ವಿ. ಭೀಮಭಟ್ಟ, ೧೯೭೭, ಬೆಂಗಳೂರು.

೯ ದಾಸಸಾಹಿತ್ಯದಲ್ಲಿ ಸೃಷ್ಟಿಪ್ರಕರಣ: ವಿ.ಬಾದರಾಯಣ, ೧೯೮೪.

೧೦ ಪುರಾಣ ನಾಮ ಚೂಡಾಮಣಿ :(ಪುನಾಚೂ) ಬೆನಗಲ್ ರಾಮರಾವ್, ಪಾನ್ಯಂ
ಸುಂದರ ಶಾಸ್ತ್ರೀ, ೧೯೫೯, ಮೈಸೂರು.

೧೧ ಪುರಾಣ ಭಾರತ ಕೋಶ (ಪು.ಭಾ.ಕೋ.):
ಯಜ್ಞನಾರಾಯಣ ಉಡುಪ,
೧೯೭೫,ಮೈಸೂರು.

೧೨ ಪ್ರಸನ್ನವೆಂಕಟದಾಸರ ಹಾಡುಗಳು :
ಕಾವ್ಯಪ್ರೇಮಿ,
ಸಮಾಜಪುಸ್ತಕಾಲಯ, ಧಾರವಾಡ, ೧೯೭೬.

೧೩ ಭಾಗವತ (೧–೧೦ ಸ್ಕಂಧಗಳು, ಗದ್ಯಾನುವಾದ) :
ದೇವಶಿಖಾಮಣಿ ಅಳಸಿಂಗರಾಚಾರ್ಯ.

೧೪ ಮತ್ಸ್ಯಪುರಾಣ.

೧೫ ಮಹಾಭಾರತ ತಾತ್ಪರ್ಯ ನಿರ್ಣಯ: ಆನಂದತೀರ್ಥರು.

೧೬ ರಾಮಾಯಣ : ವಾಲ್ಮೀಕಿ.

೧೭ ವಚನ ಭಾರತ : ಎ.ಆರ್. ಕೃಷ್ಣಶಾಸ್ತ್ರೀ, ೧೯೫೦ , ಬೆಂಗಳೂರು.

೧೮ ವರಾಹ ಮಹಾಪುರಾಣ.

೧೯ ವಾದಿರಾಜರ ತತ್ವ ಸುವಾಲಿ.

೨೦ ಶಿವದಾಸಗೀತಾಂಜಲಿ : ಸಂ.ಡಾ.ಎಲ್. ಬಸವರಾಜು.

೨೧ ಶಿವಶರಣಕಥಾರತ್ನಕೋಶ :
ಸಂ. ಶ್ರೀ. ತ.ಸು.ಶಾಮರಾಯ, ೧೯೬೭, ಮೈಸೂರು.

೨೨ ಶ್ರೀ ಜಗನ್ನಾಥದಾಸರ ಕೃತಿಗಳು :
ಸಂ.ಡಾ.ಟಿ.ಎನ್. ನಾಗರತ್ನ,
ಮೈಸೂರು ವಿಶ್ವವಿದ್ಯಾನಿಲಯ, ೧೯೮೭, ಮೈಸೂರು.

೨೩ ಶ್ರೀಪಾದರಾಜರ ಕೃತಿಗಳು :
ಸಂ. ಡಾ.ಜಿ. ವರದರಾಜರಾವ್,
೧೯೭೩, ಮೈಸೂರು.

೨೪ ಶ್ರೀ ಪುರಂದರ ಸಾಹಿತ್ಯ ದರ್ಶನ, ೧-೪ :
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೨೫ ಶ್ರೀ ಪ್ರಸನ್ನ ವೆಂಕಟದಾಸರ ಭಾಗವತ :
ಸಂ. ಟಿ.ಕೆ. ಇಂದುಬಾಯಿ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೭.

೨೬ ಶ್ರೀ ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು :
ಡಾ.ಎ.ಟಿ. ಪಾಟೀಲ, ೧೯೫೬.

೨೭ ಶ್ರೀ ವತ್ಸನಿಘಂಟು (ಶ್ರೀ.ನಿ.) :
ಸಂ.ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ, ೧೯೭೧.

೨೮ ಶ್ರೀ ವಾದಿರಾಜರ ಕೃತಿಗಳು :
ಸಂ. ಡಾ.ಟಿ.ಎನ್, ನಾಗರತ್ನ,
ಮೈಸೂರು ವಿಶ್ವವಿದ್ಯಾನಿಲಯ, ೧೯೮೦.

೨೯ ಶ್ರೀ ಹರಿಭಜನಾಮೃತಸಾರ: ಶ್ರೀನಿವಾಸದಾಸ, ಲಿಂಗಸೂಗೂರು.

೩೦ ಶ್ವೇತಾದ್ರಿ ಸಂದೇಶ; ಶ್ವೇತಾಚಲ ಮಹಾತ್ಮೆ (೪-೫ಅಧ್ಯಾಯ) ೧೯೭೧.

೩೧ ಸಹ್ಯಾದ್ರಿಖಂಡ :
ಸಂ. : ವೈ.ಸಿ. ಭಾನುಮತಿ,
ಮೈಸೂರು ವಿಶ್ವವಿದ್ಯಾನಿಲಯ.

೩೨ ಸುಮಧ್ವವಿಜಯ

೩೩ ಹರಿದಾಸ ಸಾಹಿತ್ಯಸಾರ :
ಡಾ. ಜಿ. ವರದರಾಜರಾವ್,
ಮೈಸೂರು ವಿಶ್ವವಿದ್ಯಾನಿಲಯ, ೧೯೮೭.

೩೪ ಹರಿಭಕ್ತಿ ಸುಧೆ : ರಂಗನಾಥ ರಾಮಚಂದ್ರ ದಿವಾಕರ.

೩೫ ಹರಿವಂಶಪುರಾಣ.

೩೬ ಎ ಹಿಸ್ಟರಿ ಆಫ್ ದ್ವೈತ ಸ್ಕೂಲ್ ಆಫ್ ವೇದಾಂತ ಅಂಡ್ ಇಟ್ಸ್ ಲಿಟರೇಚರ್
ಸಂಪುಟ ೧ ಮತ್ತು ೨ (೧೯೬೦–೬೧) ಡಾ. ಬಿ.ಎನ್.ಕೆ. ಶರ್ಮ.

ಪ್ರನ ಮುನಿ ರಾಯರ ಶಿಷ್ಯ [illegible].
[illegible]

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
· **ಸಮಗ್ರ ದಾಸ ಸಾಹಿತ್ಯ ಯೋಜನೆ**

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು